UNIVERSAL
LIBRARY
OU_200972
UNIVERSAL
LIBRARY

OUP—881—5-8-74—15,000

**OSMANIA UNIVERSITY LIBRARY**

Call No. K 294.9 Accession No. Pen. K 1432

Author ABB
ఆబ్బరాజు వి.

Title శ్రీ యు ద్ధ నిచక్ర .1954

This book should be returned on or before the date last marked below.

ಆನಂದ ಕರ್ಣಾಟಕ ಗ್ರಂಥರತ್ನಮಾಲೆ. ನಂ. ೨.

ಶ್ರೀಃ

ಶ್ರೀ ವ್ಯಾಸ ಮಹರ್ಷಿ ಪ್ರಣೀತ

# ಶ್ರೀಮದ್ಭಾಗವತವು

(ಪಂಚಮೆ ಷಷ್ಠ ಸ್ಕಂಧಗಳು)

ಕರ್ಣಾಟಕ ವಚನವು.

---

ಶ್ರೀಮದ್ಭದುಶೈಲನಿವಾಸರಸಿಕ

ಪಂಡಿತ. ದೇವಶಿಖಾಮಣಿ ಅಳಸಿಂಗರಾಚಾರ್ಯ ವಿರಚಿತವು.

---

Post Graduate Library
Vol. 1.
College of Arts & Commerce, O. U.

ಮುದ್ರಾಸು.

ಆನಂದ ಮುದ್ರಾಕ್ಷರಶಾಲೆಯಲ್ಲಿ ಮುದ್ರಿತವಾಗಿ,

ಆರ್. ವೆಂಕಟೇಶ್ವರ ಕಂಪೆನಿಯವರಿಂದ

ಪ್ರಕಟಿಸಲ್ಪಟ್ಟಿದೆ

1954.

[All Rights Reserved]

All Rights Reserved.

ಕಾಪೀರೈಟ್, ೧೯೧೭—ಈ ಪುಸ್ತಕದ ಸರ್ವಸ್ವಾತಂತ್ರ್ಯವೂ ಮದ್ರಾಸ್, ಆರ್. ವೆಂಕಟೇಶ್ವರ ಕಂಪೆನಿಯವರಿಗೆ ಸೇರಿದೆ. ಇದಕ್ಕೆ ಇಂಡಿಯಾದೇಶದ ಮತ್ತು ಹೊರದೇಶದ ಕಾಪೀರೈಟ್ ತೆಗೆಯಲ್ಪಟ್ಟಿದೆ. ಈ ಪುಸ್ತಕವನ್ನು ಸಂಪೂರ್ಣವಾಗಿ ಯಾಗಲೀ, ಅಥವಾ ಇದರ ಯಾವುದಾದರೂ ಭಾಗವನ್ನಾಗಲೀ, ಪ್ರತ್ಯೇಕವಾಗಿ ಪ್ರಕಟಿಸುವುದಕ್ಕೂ, ಭಾಷಾಂತರೀಕರಿಸಿ ವಿಕ್ರಯಿಸುವುದಕ್ಕೂ ಬೇರೊಬ್ಬರಿಗೂ ಬಾಧ್ಯತೆಯಿರದು. ಈ ಪುಸ್ತಕದೊಳಗಿನ ಭಾವಗಳನ್ನಾಗಲೀ, ಪದಗಳನ್ನಾಗಲೀ, ಚಿತ್ರಪಟಗಳನ್ನಾಗಲೀ ಇತರರು ಕಾಪೀಮಾಡಿದಪಕ್ಷದಲ್ಲಿ, ಅಂತವರು ಕಾಪೀರೈಟನ್ನು ಉಲ್ಲಂಘಿಸಿದಂತಾಗುವುದು. ಆದುದರಿಂದ ಯಾವ ಭಾಗದಲ್ಲಿಯಾದರೂ ಈ ಕಾಪೀರೈಟನ್ನು ಉಲ್ಲಂಘಿಸಿದವರು ನಷ್ಟದ ದಾವೆಗೆ ಗುರಿಯಾಗುವರೆಂದು ಇದರಿಂದ ತಿಳಿಯಪಡಿಸಿದೆ.

# ಪಂಚಮಸ್ಕಂಧದ ವಿಷಯಾನುಕ್ರಮಣಿಕೆ


| ಅಧ್ಯಾಯಸಂಖ್ಯೆ. | ವಿಷಯಗಳು. | ಪುಟಸಂಖ್ಯೆ. |
|---|---|---|
| ೧. | ಪ್ರಿಯವ್ರತನ ವೃತ್ತಾಂತವು. | ೧ |
| ೨. | ಪ್ರಿಯವ್ರತಪುತ್ರನಾದ ಅಗ್ನೀಧ್ರನಚರಿತ್ರವು. ಅಗ್ನೀಧ್ರನು ಪೂರ್ವಚಿತ್ತಿಯನ್ನು ನೋಡಿ ಮೋಹಿಸಿ ವರಿಸಿದುದು. | ೧೦ |
| ೩. | ಅಗ್ನೀಧ್ರನ ಮಗನಾದ ನಾಭಿರಾಜನ ವೃತ್ತಾಂತವು. ನಾಭಿರಾಜನಿಗೆ ಭಗವಂತನು ಪ್ರತ್ಯಕ್ಷನಾದುದು. | ೧೪ |
| ೪. | ಋಷಭಾವತಾರ ಚರಿತ್ರವು. | ೧೮ |
| ೫. | ಋಷಭನು ತನ್ನ ಮಕ್ಕಳಿಗೆ ಮೋಕ್ಷಧರ್ಮವನ್ನುಪದೇಶಿಸಿ, ತಾನು ಪರಮಹಂಸರ ಮಾರ್ಗವನ್ನನುಷ್ಠಿಸಿದುದು. | ೨೨ |
| ೬. | ಋಷಭದೇವನು ಶರೀರತ್ಯಾಗಮಾಡಿದುದು. | ೩೦ |
| ೭. | ಭರತನ ಚರಿತ್ರವು. | ೪೪ |
| ೮. | ಭರತನು ನದೀತೀರದಲ್ಲಿರುವಾಗ, ಅಪಾಯಕ್ಕೆ ಸಿಕ್ಕಿಬಿದ್ದ ಒಂದು ಹುಲ್ಲೆಯನ್ನು ತಂದು ಪೋಷಿಸಿ, ಕೊನೆಗೆ ತಾನೂ ಹುಲ್ಲೆಯ ಜನ್ಮವನ್ನು ಹೊಂದಿದುದು. | ೪೫ |
| ೯. | ಭರತನು ಮೃಗಶರೀರವನ್ನು ತೊರೆದಮೇಲೆ ತಿರುಗಿ ಬ್ರಾಹ್ಮಣಕುಮಾರನಾಗಿ ಹುಟ್ಟಿದುದು. | ೪೩ |
| ೧೦. | ಜಡಭರತನಮೇಲೆ ರಹೂಗಣನೆಂಬ ರಾಜನು ಪಲ್ಲಕ್ಕಿಯನ್ನು ಹೊರಿಸಿದುದು. | ೪೯ |
| ೧೧. | ಭರತನು ರಹೂಗಣನಿಗೆ ತತ್ತ್ವೋಪದೇಶವನ್ನು ಮಾಡಿದುದು. | ೫೬ |
| ೧೨. | ಭರತನು ರಹೂಗಣನಿಗೆ ಆತ್ಮಸ್ವರೂಪವನ್ನು ತಿಳಿಸಿದುದು. | ೬೦ |
| ೧೩. | ಜಡಭರತನು ರಹೂಗಣನಿಗೆ ಸಂಸಾರದಲ್ಲಿರುವ ಕ್ಲೇಶಗಳನ್ನು ವಿವರಿಸಿದುದು | ೬೪ |

೧೦. ಇಂದ್ರನು ದಧೀಚಮುನಿಯ ಅಸ್ಥಿಯಿಂದ ವಜ್ರಾಯುಧವನ್ನು ಮಾಡಿಸಿ ವೃತ್ರನೊಡನೆ ಯುದ್ಧಕ್ಕೆ ಹೊರಟುದು. ೨೧೩

೧೧. ವೃತ್ರನು ಇಂದ್ರನಿಗೆ ತತ್ವವನ್ನು ತಿಳಿಸಿದುದು. ೨೨೪

೧೨ ವೃತ್ರವಧವು. ೨೨೨

೧೩. ಬ್ರಹ್ಮಹತ್ಯೆಗೆ ಭಯಪಟ್ಟು ಇಂದ್ರನು ಮಾನಸಸರೋವರದಲ್ಲಿ ಅವಿತುಕೊಂಡುದು. ೨೨೬

೧೪. ಚಿತ್ರಕೇತೂಪಾಖ್ಯಾನವು. ೨೨೯

೧೫. ನಾರದಾಂಗಿರಸರಿಬ್ಬರೂ ಚಿತ್ರಕೇತುವಿಗೆ ಹಿತವನ್ನು ಹೇಳಿ ಸಮಾಧಾನಪಡಿಸಿದುದು. ೨೩೬

೧೬. ನಾರದನು ಚಿತ್ರಕೇತುವಿಗೆ ಮಂತ್ರರೂಪವಾದ ಉಪನಿಷತ್ತನ್ನು ಉಪದೇಶಿಸಿದುದು. ಚಿತ್ರಕೇತುವು ಸಂಕರ್ಷಣನನ್ನು ಸ್ತುತಿಸಿದುದು. ೨೪೦

೧೭. ಚಿತ್ರಕೇತುವಿಗೆ ಪಾರ್ವತೀದೇವಿಯ ಶಾಪವು. ೨೫೨

೧೮. ಸವಿತೃ ಮೊದಲಾದ ದಿತಿಪುತ್ರರ ವಂಶಾನುಕ್ರಮವು. ಇಂದ್ರನು ದಿತಿಯ ಗರ್ಭವನ್ನು ಖಂಡಿಸಿದುದು. ೨೫೩

೧೯. ಸ್ತ್ರೀಯರು ತಮ್ಮ ಶ್ರೇಯಸ್ಸಿಗಾಗಿ ನಡೆಸತಕ್ಕ ಪುಂಸವನವೆಂಬ ವ್ರತವು. ೨೬೭

## ಪಂಚಮ ಷಷ್ಠಸ್ಕಂಧಗಳೊಳಗಣ ಚಿತ್ರಪಟಗಳು.

---


ಅಗ್ನೀಧ್ರನು ಪೂರ್ವಚಿತ್ತಿಯನ್ನು ನೋಡಿ ಮೋಹಿಸಿದುದು. ೧೧

ನದಿಯಲ್ಲಿ ನೀರು ಕುಡಿಯುತ್ತಿದ್ದ ಒಂದಾನೊಂದು ಹೆಣ್ಣು ಜಿಂಕೆಗೆ, ಸಿಂಹಗರ್ಜನದಿಂದ ಗರ್ಭಸ್ರಾವವಾಗಲು, ಭರತನು ಆ ಮರಿಯನ್ನು ಕರೆತಂದುದು. ೩೮

ಯಮದೂತರು ಆಜಾಮಿಳನನ್ನು ಪಾಶಗಳಿಂದ ಬಿಗಿದು ಎಳೆಯುತ್ತಿರುವಾಗ, ವಿಷ್ಣುದೂತರು ಬಂದು ತಡೆದುದು. ೧೫೫

ದಕ್ಷನ ಮಕ್ಕಳಾದ ಶಬಲಾಶ್ವರು ತಪಸ್ಸು ಮಾಡುತ್ತಿದ್ದಾಗ, ನಾರದನು ಅವರಿಗೆ ನಿವೃತ್ತಿಮಾರ್ಗವನ್ನು ಬೋಧಿಸಿದುದು. ದಕ್ಷನು ಅದಕ್ಕಾಗಿ ಕೋಪಗೊಂಡು ನಾರದನನ್ನು ಶಪಿಸಿದುದು. ೧೮೭

ಇಂದ್ರನು ವೃತ್ರಾಸುರನನ್ನು ವಧಿಸಿದುದು. ೨೨೫



ಶ್ರೀ ಕೃಷ್ಣಾಯ ಪರಬ್ರಹ್ಮಣೇನಮಃ

# ಶ್ರೀಮದ್ಭಾಗವತವು

## ಪಂಚಮಸ್ಕಂಧವು

### ಪ್ರಿಯವ್ರತನ ವೃತ್ತಾಂತವು.

ಪರೀಕ್ಷಿದ್ರಾಜನು ಶುಕಮುನಿಯನ್ನು ಪ್ರಶ್ನೆಮಾಡುವನು. "ಓ ಮಹರ್ಷೀ! ಪ್ರಿಯವ್ರತನಾದರೋ ಪರಮಭಾಗವತೋತ್ತಮನು! ಯಾವಾಗಲೂ ಆತ್ಮಾನುಭವವೆಂಬ ಆನಂದವನ್ನನುಭವಿಸುತ್ತಿದ್ದವನು. ಇಂತವನು ನಾರದನಿಂದ ಆತ್ಮತತ್ವವನ್ನು ಕೇಳಿದಮೇಲೆಯೂ ತಿರುಗಿ ರಾಜ್ಯಭಾರವನ್ನು ನಡೆಸುತ್ತಿದ್ದನೆಂದು ಹೇಳಿದೆಯಲ್ಲವೇ? ಆತ್ಮಜ್ಞಾನವನ್ನು ಪಡೆದು, ತನ್ನ ಹೃದಯದಲ್ಲಿಯೇ ಪರಮಾತ್ಮನನ್ನು ಸಾಕ್ಷಾತ್ಕರಿಸಿ, ಆ ಆನಂದಾನುಭವದಲ್ಲಿದ್ದ ರಾಜನಿಗೆ, ದುಃಖಪ್ರಚುರವಾದ ಗೃಹಧರ್ಮದಲ್ಲಿ ಹೇಗೆ ಪ್ರವೇಶವುಂಟಾಯಿತು? ಇದರಿಂದ ಅವನಿಗೆ, ತಿರುಗಿ ಕರ್ಮಬಂಧವೂ, ಜ್ಞಾನಸಂಕೋಚವೂ ಉಂಟಾಗದೆ ಬಿಡುವುದೇ? ಮೊದಲು ಸಂಸಾರಚಿಂತೆಯನ್ನು ಬಿಟ್ಟು ಪರಮಾತ್ಮಚಿಂತೆಯಲ್ಲಿರುವ ಮಹಾತ್ಮರಿಗೆ, ಹೀಗೆ ಗೃಹಸ್ಥಧರ್ಮದಲ್ಲಿ ಆಸೆಹುಟ್ಟುವುದೇ ಯುಕ್ತವಲ್ಲ. ಭಗವಂತನ ಪಾದಚ್ಛಾಯೆಯನ್ನು ಹಿಡಿದು ಆದರಿಂದುಂಟಾದ ಮಹಾನಂದವನ್ನನುಭವಿಸತಕ್ಕವರಿಗೆ, ಅಲ್ಪಸುಖಕಾರಣವಾದ ಕುಟುಂಬಧರ್ಮದಲ್ಲಿ ಪ್ರವೃತ್ತಿಯುಂಟಾಯಿತೆಂಬುದು ಅಸಂಭವವಲ್ಲವೇ?

ಒಂದುವೇಳೆ ''ಪ್ರಾರಬ್ಧಕರ್ಮಶೇಷದಿಂದ ಅಂತಹ ಮಹಾತ್ಮರಿಗೂ ಸಂಸಾರವು ತಗುಲುಕಟ್ಟಬಾರದೇ?'' ಎಂದರೆ, ಹಾಗೆ ಪ್ರಿಯವ್ರತನು ಸಂಸಾರಬಂಧವನ್ನು ಕಟ್ಟಿಕೊಂಡಮೇಲೆ, ಅವನಿಗೆ ಮೋಕ್ಷವುಂಟಾದುದು ಹೇಗೆ? ಹೆಂಡಿರು ಮಕ್ಕಳು, ಮುಂತಾದ ಸಂಸಾರಬಂಧದಲ್ಲಿ ಸಿಕ್ಕಿ ಬಿದ್ದವರಿಗೆ, ತಿರುಗಿ ಪರಮಾತ್ಮನಲ್ಲಿ ಭಕ್ತಿಯೂ, ಅದರಿಂದ ಮುಕ್ತಿಯೂ ಉಂಟಾಗುವುದೆಂದರೇನು? ಈ ಸಂದೇಹವು ನನ್ನನ್ನು ಬಹಳವಾಗಿ ಬಾಧಿಸುತ್ತಿರುವುದರಿಂದ ಅದನ್ನು ಪರಿಹರಿಸಬೇಕು.'' ಎಂದನು. ಅದಕ್ಕಾ ಶುಕಮುನಿಯು ''ರಾಜೇಂದ್ರಾ! ನೀನು ಕೇಳಿದ ಪ್ರಶ್ನೆಯು ಯುಕ್ತವಾಗಿಯೇ ಇರುವುದು. ಆದರೆ ಇದರಲ್ಲಿ ತಿಳಿಯಬೇಕಾದ ಒಂದು ಸೂಕ್ಷ್ಮಾಂಶವುಂಟು. ಜ್ಞಾನಿಗಳೂಕೂಡ ಕೆಲಕೆಲವು ಸಂದರ್ಭಗಳಲ್ಲಿ ಕುಟುಂಬಧರ್ಮದಲ್ಲಿ ಪ್ರವರ್ತಿಸಬೇಕಾಗಿ ಬರುವುದು. ಆದರೆ ಇತರನಿರ್ಬಂಧಗಳಿಗಾಗಿ ಅವರು ಅದನ್ನಂಗೀಕರಿಸಬೇಕಾಗುವುದೇ ಹೊರತು, ತಾವಾಗಿ ಆಸೆಪಟ್ಟು ಬರುವವರಲ್ಲ. ಆದುದರಿಂದ ಭಕ್ತಿಯೋಗವನ್ನು ಸಾಧಿಸಿದವರು ಕುಟುಂಬಧರ್ಮದಲ್ಲಿದ್ದರೂ, ಅವರಿಗೆ ಅದರ ಸಂಬಂಧವಿಲ್ಲದಂತೆಯೇ ಎಣಿಸಬೇಕು. ಗೃಹಸ್ಥಧರ್ಮದಲ್ಲಿದ್ದುಮಾತ್ರಕ್ಕೆ ಅವರಿಗೆ ಭಗವದ್ಭಕ್ತಿಯು ನಷ್ಟವಾಗುವುದೆಂದು ತಿಳಿಯಬಾರದು! ಪುಣ್ಯಕೀರ್ತಿಯಾದ ಭಗವಂತನ ಪಾದಾರವಿಂದಗಳ ಮಕರಂದರಸವನ್ನು ಒಂದಾವರ್ತಿಸವಿನೋಡಿ, ಆದರಲ್ಲಿಯೇ ನಟ್ಟ ಮನಸ್ಸುಳ್ಳವರಿಗೆ, ಆ ರುಚಿಯು ಎಂದಿಗೂ ತಪ್ಪಿಹೋಗದು. ಅವರಿಗೆ ಯಾವಾಗಲೂ ಭಗವಂತನ ಕಥಾಶ್ರವಣಾದಿಗಳಲ್ಲಿಯೇ ಮನಸ್ಸು ಪ್ರವರ್ತಿಸುತ್ತಿರುವುದು. ಒಂದುವೇಳೆ ಆಕಸ್ಮಿಕವಾದ ವಿಘ್ನಗಳಿಂದ ಸ್ವಲ್ಪಕಾಲದವರೆಗೆ ತಪ್ಪಿದರೂ, ಅವರಿಗಿರುವ ಪೂರ್ವವಾಸನೆಯಿಂದ, ಮೋಕ್ಷಕಾರಣವಾದ ಆ ಭಕ್ತಿಯು ಅನುವರ್ತಿಸಿ ಬರುವುದೇಹೊರತು ಬಿಟ್ಟು ಹೋಗಲಾರದು. ಆದುದರಿಂದ ಕುಟುಂಬಧರ್ಮದಲ್ಲಿದ್ದಮಾತ್ರಕ್ಕೆ, ಭಕ್ತಿಯು ತಪ್ಪಿಹೋಗುವುದೆಂಬ ಮಾತು ಯುಕ್ತವಲ್ಲ. ಹಾಗೆಯೇ ಮನುಪುತ್ರನಾದ ಪ್ರಿಯವ್ರತನೂಕೂಡ, ಮೊದಲು ಭಾಗವತಧರ್ಮದಲ್ಲಿಯೇ ಆಸೆಯುಳ್ಳವನಾಗಿ, ನಾರದ ಮಹರ್ಷಿಯಲ್ಲಿ ಮರೆಹೊಕ್ಕು, ಅವನಿಂದ ಪರಮಪುರುಷಾರ್ಥಸ್ವರೂಪವನ್ನು ಅನಾಯಾಸವಾಗಿಯೇ ತಿಳಿದುಕೊಂಡನು. ಅದರಂತೆಯೇ ತಾನು ಜ್ಞಾನಯೋಗವನ್ನು ಸಾಧಿಸಬೇಕೆಂಬ ಸಂಕಲ್ಪದಿಂದ, ಎಡೆಬಿಡದೆ ಭಗವದ್ಧ್ಯಾನಪರನಾಗಿಯೇ ಇದ್ದನು. ತನ್ನ ಸಮಸ್ತಕರಣಗಳನ್ನೂ, ಕ್ರಿಯೆಗಳನ್ನೂ ಭಗವಂತನಾದ ಆ ವಾಸುದೇವನಲ್ಲಿಯೇ ಅರ್ಪಿಸುತ್ತಬಂದನು. ಈ ಸಂದರ್ಭದಲ್ಲಿ ಇವನ ತಂದೆಯಾದ ಸ್ವಾಯಂಭುವಮನುವು, ತನ್ನ ಪುತ್ರನಾದ ಈ ಪ್ರಿಯವ್ರತನು ರಾಜಗುಣಗಳಲ್ಲಿ

ತನಗೆ ಸಮಾನನಾಗಿರುವುದನ್ನು ನೋಡಿ, ಅವನನ್ನು ರಾಜ್ಯಪಾಲನಮಾಡುವಂತೆ ನಿಯಮಿಸಿದನು. ತಂದೆಯ ಮಾತನ್ನು ತಿರಸ್ಕರಿಸಬಾರದಾಗಿದ್ದರೂ, ಪ್ರಿಯವ್ರತನು, ತಾನು ರಾಜ್ಯವನ್ನು ಕೈಕೊಂಡಪಕ್ಷದಲ್ಲಿ, ಆದರಿಂದ ಆತ್ಮಸ್ವರೂಪವು ಮರೆತು, ದೇಹಾಭಿಮಾನವೂ, ಆದರಿಂದ ರಾಗದ್ವೇಷಾದಿಗಳೂ ಹೆಚ್ಚಿ ಬರುವುವೆಂಬ ಮುಂದಾಲೋಚನೆಯಿಂದ, ಬಗಲೂ ಅದನ್ನೊಲ್ಲದೆ ಹೋದನು. ಇದರಮೇಲೆ ಆದಿದೇವನಾಗಿಯೂ, ತನ್ನ ಜ್ಞಾನಶಕ್ತಿಯಿಂದ ತ್ರಿಗುಣಾತ್ಮಕವಾದ ಸಮಸ್ತಪ್ರಪಂಚವನ್ನೂ ವ್ಯಾಪಿಸಿ ಲೋಕದ ಅಭಿಪ್ರಾಯವನ್ನು ತಿಳಿಯಬಲ್ಲವನಾಗಿಯೂ ಇರುವ ಚತುರ್ಮುಖನು, ರಾಜ್ಯವನ್ನು ಕೈಕೊಳ್ಳುವವಿಷಯದಲ್ಲಿ ಈ ಪ್ರಿಯವ್ರತನನ್ನೊಪ್ಪಿಸುವುದಕ್ಕಾಗಿ, ವೇದಪುರುಷರೊಡನೆಯೂ, ಮರೀಚಿ ಮೊದಲಾದ ತನ್ನ ಪರಿವಾರದೊಡನೆಯೂ ಸತ್ಯಲೋಕದಿಂದ ಹೊರಟು ಭೂಲೋಕಕ್ಕೆ ಬಂದನು. ಈ ಚತುರ್ಮುಖನು ಆಕಾಶಮಧ್ಯಗತನಾದ ಚಂದ್ರನಂತೆ, ಕಾಂತಿವಿಶೇಷದಿಂದ ಪ್ರಕಾಶಿಸುತ್ತ ಕೆಳಕ್ಕಿಳಿದು ಬರುವಾಗ, ಅಲ್ಲಲ್ಲಿ ದೇವಶ್ರೇಷ್ಠರು ವಿಮಾನಾರೂಢರಾಗಿ ಬಂದು ಪೂಜೆಗಳನ್ನರ್ಪಿಸುತ್ತಿದ್ದರು. ದಾರಿಯುದ್ದಕ್ಕೂ, ಸಿದ್ಧರೂ, ಗಂಧರ್ವರೂ, ಚಾರಣರೂ, ಸಾಧ್ಯರೂ, ಮಹರ್ಷಿಗಳೂ, ಕಿನ್ನರರೂ, ಗುಂಪುಗುಂಪಾಗಿ ಬಂದು ಅವನ ಗುಣಗಳನ್ನು ಸ್ತುತಿಸುತ್ತಿದ್ದರು. ಬ್ರಹ್ಮನು ಇವರ ಸತ್ಕಾರಗಳೆಲ್ಲವನ್ನೂ ಪ್ರೀತಿಯಿಂದ ಕೈಕೊಳ್ಳುತ್ತ, ತನ್ನ ದೇಹಕಾಂತಿಯಿಂದ ಗಂಧಮಾದನಪರ್ವತದ ತಪ್ಪಲುಗಳೆಲ್ಲವನ್ನೂ ಪ್ರಕಾಶಗೊಳಿಸುವಂತೆ, ಪ್ರಿಯವ್ರತನಿದ್ದಸ್ಥಳಕ್ಕೆ ಬಂದನು. ಇಷ್ಟರಲ್ಲಿ ಪ್ರಿಯವ್ರತನಿಗೆ ತತ್ತ್ವೋಪದೇಶವನ್ನು ಮಾಡುವುದಕ್ಕಾಗಿ ಮೊದಲೇ ಆ ಸ್ಥಳಕ್ಕೆ ಬಂದಿದ್ದ ನಾರದಮುನಿಯು, ಹಂಸಾರೂಢನಾಗಿ ಬರುತ್ತಿದ್ದ ತನ್ನ ತಂದೆಯಾದ ಬ್ರಹ್ಮನನ್ನು ಕಂಡು, ತಟ್ಟನೆ ಮೇಲೆದ್ದು ಕೈಮುಗಿದು, ವಿಧ್ಯುಕ್ತವಾದ ಪೂಜೆಯಿಂದ ಅವನನ್ನು ಸತ್ಕರಿಸಿದನು. ಆದರಂತೆಯೇ ತಂದೆಮಕ್ಕಳಾದ ಸ್ವಾಯಂಭುವ ಪ್ರಿಯವ್ರತರಿಬ್ಬರೂ ಪ್ರತ್ಯುತ್ಥಾನಾದಿಗಳಿಂದ ಗೌರವಿಸಿ ಬ್ರಹ್ಮನನ್ನು ಬರಮಾಡಿಕೊಂಡರು. ಇವರ ಸತ್ಕಾರಗಳಿಗೂ, ಸ್ತೋತ್ರಗಳಿಗೂ ಕುಶಲಪ್ರಶ್ನೆಗಳಿಗೂ ಸಂತುಷ್ಟನಾದ ಬ್ರಹ್ಮನು ದಯಾದೃಷ್ಟಿಯಿಂದ ಪ್ರಿಯವ್ರತನನ್ನು ನೋಡಿ ಹೀಗೆಂದು ಹೇಳುವನು. "ವತ್ಸ ಪ್ರಿಯವ್ರತಾ! ನಾನೊಂದು ಸತ್ಯವಾದ ಮಾತನ್ನು ಹೇಳುವೆನು ಕೇಳು! ನಾನಾಗಲೀ, ನೀನಾಗಲೀ, ಈ ನಾರದನಾಗಲೀ, ಈ ಮರೀಚಿ ಮೊದಲಾದವರಾಗಲೀ, ಭಗವಂತನ ಆಜ್ಞಾಧೀನರಾಗಿ ನಡೆಯಬೇಕಾದವರೇಹೊರತು, ಯಾರೂ ಅದನ್ನು ವಿರೋಧಿಸಿ ನಡೆಯಲಾರೆವು. ಹಾಗೆ ವಿರೋಧಿಸಿ ಹೋದಪಕ್ಷದಲ್ಲಿ, ಅವನ ಅಗ್ರಹಕ್ಕೆ ಪಾತ್ರವಾಗಬೇಕಾಗುವುದು. ಆದುದರಿಂದ

ನೀನೂ ಈಗ ಆ ಭಗವಂತನ ಆಜ್ಞೆಯನ್ನು ಮೀರಿನಡೆಯುವುದು ಯುಕ್ತವಲ್ಲ. ಪ್ರಾಣಿಗಳೆಲ್ಲವೂ ಆ ಭಗವಂತನ ಸಂಕಲ್ಪಾನುಸಾರವಾಗಿಯೇ ಕರಣಕಳೇಬರಗಳನ್ನು ಹೊಂದಿ ಬಂದಿರುವುವು. ಆದುದರಿಂದ ಲೋಕದಲ್ಲಿ ಉಪವಾಸಾದಿವ್ರತದಿಂದಾಗಲೀ, ತಪಸ್ಸಿನಿಂದಾಗಲೀ, ಶಾಸ್ತ್ರಜ್ಞಾನದಿಂದಾಗಲೀ, ಯೋಗಬಲದಿಂದಾಗಲೀ, ಬುದ್ಧಿಬಲದಿಂದಾಗಲೀ, ಧನಬಲದಿಂದಾಗಲೀ, ಧರ್ಮಕಾರ್ಯಗಳಿಂದಾಗಲೀ, ಮತ್ತೊಬ್ಬರ ಸಹಾಯದಿಂದಾಗಲೀ, ಆದಕ್ಕಿಂತಲೂ ಉತ್ತಮವಾದ ಬೇರೆ ಉಪಾಯದಿಂದಲೇ ಆಗಲೀ, ಯಾವನೂ ಆ ಭಗವಂತನ ನಿಯಮವನ್ನು ಮೀರಿ ನಡೆಯಲಾರನು. ಲೋಕದಲ್ಲಿ ಸಮಸ್ತ ಜೀವರಾಶಿಗಳೂ, ಮುಂದೆಮುಂದೆ ಜನನಮರಣಗಳಿಗೆ ಕಾರಣಗಳಾದ ಕರ್ಮಗಳನ್ನು ನಡೆಸುವುದಕ್ಕಾಗಿಯೂ, ಸುಖ, ದುಃಖ, ಭಯ, ಶೋಕ, ಮೋಹ, ಮುಂತಾದುವುಗಳನ್ನನುಭವಿಸುವುದಕ್ಕಾಗಿಯೂ, ಆ ಭಗವಂತನ ಸಂಕಲ್ಪಾನುಸಾರವಾಗಿಯೇ ಈ ಶರೀರಗಳನ್ನು ಪಡೆದು ಬರುವುವು. ಆ ಭಗವಂತನ ಉದ್ದೇಶವನ್ನಾಗಲೀ, ಅವನ ಸ್ವರೂಪಪನ್ನಾಗಲೀ, ನಾವ್ಯೊಬ್ಬರೂ ಕಾಣಲಾರೆವು. ಮತ್ತು ಮನುಷ್ಯನು ಪಶುಗಳಿಗೆ ಮೂಗುದಾರವನ್ನು ಬೀರಿ ಎಳೆಯುವಂತೆ, ಭಗವಂತನು ಸಾತ್ವಿಕಾದಿಭೇದಗಳುಳ್ಳ ಆಯಾ ವರ್ಣಾಶ್ರಮಕರ್ಮಗಳೆಂಬ ಹಗ್ಗಗಳಿಂದ ನಮ್ಮನ್ನು ಕಟ್ಟಿ, ವೇದವಾಕ್ಯವೆಂಬ ತಂತಿಯಿಂದ ಬೀರಿ ಎಳೆಯುತ್ತಿರುವನು. ಅವನು ಎಳೆದ ದಾರಿಯಲ್ಲಿ ನಾವು ಅವನ ಸೇವೆಯನ್ನು ನಡೆಸಬೇಕಾಗಿರುವುದು. ಇದಲ್ಲದೆ ಎಲೈ ವತ್ಸಾ! ಕರ್ಮಾನುಸಾರವಾಗಿ ಆ ಸರ್ವೇಶ್ವರನು ನಮ್ಮ ನಮಗೆ ನಿಯಮಿಸಿಕೊಟ್ಟಂತೆ, ನಾವು ಸುಖವನ್ನಾಗಲೀ, ದುಃಖವನ್ನಾಗಲೀ, ದೇವ ಮನುಷ್ಯಾದಿಶರೀರಗಳನ್ನಾಗಲೀ ಅನುಭವಿಸದೆ ತೀರದು! ಕುರುಡನು ಮತ್ತೊಬ್ಬನ ಸಹಾಯದಿಂದ ನಡೆಯುವಾಗ, ಅವನ ಇಷ್ಟಾನುಸಾರವಾಗಿ ಬಿಸಿಲಿನಲ್ಲಿಯೂ, ನೆಳಲಲ್ಲಿಯೂ ನಡೆಯಬೇಕಾಗುವುದಲ್ಲವೇ? ಅದರಂತೆಯೇ ಭಗವಂತನು ಬಿಟ್ಟ ದಾರಿಯಲ್ಲಿ ನಾವು ನಡೆಯಬೇಕೇ ಹೊರತು, ನಮ್ಮ ಇಷ್ಟದಂತೆ ಹೋಗುವುದಕ್ಕೆ ನಾವು ಸಮರ್ಥರಲ್ಲ! ಆದರೆ "ಸಂಸಾರಿಯಾದವನು ಕರ್ಮಕ್ಕೆ ಕಟ್ಟುಬೀಳಬೇಕಾದುದೇನೋ ಸಹಜವಾಗಿದ್ದರೂ, ನಾನು ಆತ್ಮವಿದ್ಯೆಯನ್ನು ತಿಳಿದು ಮೋಕ್ಷಾಪೇಕ್ಷೆಯುಳ್ಳವನಾಗಿರುವಾಗ, ನನಗೆ ಈ ಸಂಸಾರಬಂಧವೇಕೆ?" ಎಂದು ನೀನು ಕೇಳಬಹುದು. ಯಾರಾದರೇನು? ಮುಮುಕ್ಷುವಾಗಿದ್ದರೂ, ಅಜ್ಞಾನದಶೆಯಲ್ಲಿ ಹೇಗೋಹಾಗೆ ಜ್ಞಾನೋದಯವಾದ ಮೇಲೆಯೂ ಕೂಡ, ತನ್ನ ಪ್ರಾರಬ್ಧಕರ್ಮಗಳಿಗೆ ಫಲವನ್ನು ಅನುಭವಿಸಿಯೇ ತೀರಿಸಬೇಕು. ಆದಕ್ಕಾಗಿ ಮುಕ್ತನಾಗುವವರೆಗೆ ಆ ದೇಹವನ್ನೂ ಧರಿಸಿಯೇ ತೀರಬೇಕು. ಈ ದೇಹಧಾರಣವೂ, ಕರ್ಮಾನು

ಭವವೂ ಅಜ್ಞಾನಿಗಳಿಗೆ ಹೇಗೋಹಾಗೆ ಜ್ಞಾನಿಗಳಿಗೂ ಸಮಾನವಾಗಿದ್ದರೂ, ಇವರಿಬ್ಬರ ಸ್ವಭಾವಗಳಲ್ಲಿ ಬಹಳ ತಾರತಮ್ಯವುಂಟು. ಜ್ಞಾನಿಯಾದವನು ದೇಹಾಭಿಮಾನವಿಲ್ಲದೆ, ತನ್ನ ಕರ್ಮಶೇಷವನ್ನು ಕಳೆಯುವುದಕ್ಕಾಗಿಮಾತ್ರವೇ ಆ ದೇಹವನ್ನು ಹೊತ್ತಿದ್ದು, ಕರ್ಮಫಲಗಳನ್ನೂ ಅನುಭವಿಸುತ್ತಿರುವನು. ಅಜ್ಞಾನಿಯಾದರೋ, ತಾನು ಮತ್ತೊಂದು ಜನ್ಮವನ್ನು ಪಡೆಯುವುದಕ್ಕೆ ಬೇಕಾದ್ದಕರ್ಮಗಳನ್ನೇ ನಡೆಸುತ್ತಬರುವನು. ಆದುದರಿಂದ ವತ್ಸಾ! ನೀನು ಜ್ಞಾನೋದಯವನ್ನು ಹೊಂದಿ ಮುಮುಕ್ಷುವಾಗಿದ್ದರೂ, ನಿನ್ನ ಪ್ರಾರಬ್ಧಕರ್ಮವನ್ನು ಕಳೆಯುವುದಕ್ಕಾಗಿ, ಈ ದೇಹವನ್ನು ಹೊತ್ತಿರದೆ ತೀರದು. "ಹಾಗಿದ್ದರೆ ಆ ಜೀವಿತಕಾಲವನ್ನು ಕಾಡಿನಲ್ಲಿದ್ದೇ ಕಳೆಯಬಾರದೇ? ಆರಮನೆಯಲ್ಲಿ ಸಂಸಾರಭಯಾಸ್ಪದವಾದ ಗೃಹಸ್ಥಧರ್ಮದಲ್ಲಿದ್ದೇ ಕಳೆಯಬೇಕಾದುದೇನು?" ಎಂದು ಕೇಳುವೆಯಾ? ಆಡವಿಯಲ್ಲಿದ್ದರೇನು? ಆರಮನೆಯಲ್ಲಿದ್ದರೇನು?" ಎಚ್ಚರತಪ್ಪಿದವನಿಗೆ ಆಡವಿಯಲ್ಲಿದ್ದರೂ ಭಯವು ತಪ್ಪದು. ಎಚ್ಚರವುಳ್ಳವನು ಕುಟುಂಬಸಮೇತನಾಗಿ ಮನೆಯಲ್ಲಿದ್ದರೂ ಅವನಿಗೆ ಭಯವಿಲ್ಲ. ಮನುಷ್ಯನು ನಿರ್ಜನವಾದ ಕಾಡಿಗೆ ಹೋದರೂ, ಮನಸ್ಸು ಮತ್ತು ಪಂಚೇಂದ್ರಿಯಗಳೆಂಬ ಆರುಮಂದಿ ಶತ್ರುಗಳು ಅವನ ಸಂಗಡಲೇ ಇರುವರು. ಆಇಂದ್ರಿಯಗಳನ್ನಡಗಿಸಿ, ಆತ್ಮಾನುಭವವನ್ನೇ ಮುಖ್ಯವಾಗಿಟ್ಟು ಕೊಂಡಿರತಕ್ಕವನಿಗೆ, ಆ ಗೃಹಸ್ಥಾಶ್ರಮವು ಯಾವ ಕೇಡನ್ನೂ ಮಾಡಲಾರದು. "ಆತ್ಮಜ್ಞಾನಕ್ಕೆ ವಿರೋಧಿಗಳಾದ ಷಡಿಂದ್ರಿಯಗಳನ್ನೂ ಕಾಡಿನಲ್ಲಿದ್ದೇ ಜಯಿಸಬಾರದೇ" ಎಂದು ಕೇಳುವೆಯಾ? ಅದು ಹಾಗಲ್ಲ. ರಾಜನು ದುರ್ಗಗಳನ್ನಾಶ್ರಯಿಸಿಯೇ ಶತ್ರುಗಳನ್ನು ಜಯಿಸುವಂತೆ, ಇಂದ್ರಿಯಜಯವನ್ನಪೇಕ್ಷಿಸುವನು, ಮೊದಲು ಗೃಹಸ್ಥಧರ್ಮದಲ್ಲಿದ್ದೇ ಅವುಗಳನ್ನು ಜಯಿಸಿ, ಅವುಗಳ ಪ್ರಾಬಲ್ಯವುಮುರಿದಮೇಲೆ, ಯಥೇಚ್ಛವಾಗಿ ಎಲ್ಲಿಯಾದರೂ ನಿಶ್ಚಿಂತನಾಗಿರಬಹುದು. ರಾಜೇಂದ್ರಾ! ಭ್ರಮರವು ಕಮಲಕೋಶದಲ್ಲಿ ಸೇರಿ, ಮಳೆ, ಗಾಳಿ, ಬಿಸಿಲುಗಳ ಬಾಧೆಯನ್ನು ತಪ್ಪಿಸಿಕೊಳ್ಳುವಂತೆ, ನೀನೂ ಈಗ ಭಗವಂತನ ಪಾದಾರವಿಂದವೆಂಬ ದುರ್ಗವನ್ನಾಶ್ರಯಿಸಿದರೆ ಜ್ಞಾನವಿರೋಧಿಗಳಾದ ಇಂದ್ರಿಯಗಳು ನಿನ್ನನ್ನು ಬಾಧಿಸಲಾರವು. ಹಾಗಿದ್ದರೂ ಭಗವತ್ಸಂಕಲ್ಪದಿಂದ ನಿನಗೆ ಏರ್ಪಟ್ಟಿರುವ ಈ ಲೋಕದ ಭೋಗಗಳನ್ನು ಕ್ಷೀಣಪ್ರಾರಬ್ಧಕಾಲದವರೆಗೆ ನೀನು ಅನುಭವಿಸಿಯೇ ತೀರಬೇಕು. ಆಮೇಲೆ ನೀನು ಸರ್ವಸಂಗಪರಿತ್ಯಾಗಮಾಡಿ, ಭಗವದ್ಭಕ್ತಿಯ ಬಲದಿಂದ ಪಾಪನಿವೃತ್ತಿ ಮೊದಲಾದ ಅಷ್ಟಗುಣಗಳುಳ್ಳ ನಿನ್ನ ಶುದ್ಧಾತ್ಮಸ್ವರೂಪವನ್ನು ಕಾಣಬಹುದು." ಎಂದನು. ಭಾಗವತೋತ್ತಮನಾದ ಪ್ರಿಯವ್ರತನು, ಲೋಕಗುರುವಾದ ಬ್ರಹ್ಮನ ಈ

ಮಾತನ್ನು ಕೇಳಿ, ಆ ಬ್ರಹ್ಮಾಜ್ಞೆಯು ತನಗೆ ಸುಕರವಾಗಿದ್ದುದರಿಂದಲೂ, ಅದನ್ನು ಮೀರಿ ಹೋಗುವುದು ತನಗೆ ಯುಕ್ತವಲ್ಲದುದರಿಂದಲೂ, ಅದನ್ನು ಬಹುಮಾನ ಪೂರ್ವಕವಾಗಿ ಒಪ್ಪಿಕೊಂಡನು. ಆಮೇಲೆ ಬ್ರಹ್ಮನು ಅಲ್ಲಿ ಸ್ವಾಯಂಭುವಮನುವು ತನಗೆ ಮಾಡಿದ ಸತ್ಕಾರಗಳನ್ನು ಸ್ವೀಕರಿಸಿ, ಪ್ರಿಯವ್ರತನಾರದರಿಬ್ಬರೂ ತನ್ನನ್ನು ಪ್ರೇಮಪೂರ್ವಕವಾಗಿ ನೋಡುತ್ತಿರುವಹಾಗೆಯೇ ಅಂತರ್ಧಾನವನ್ನು ಹೊಂದಿ, ಮನಸ್ಸಿಗೂ ವಾಕ್ಕಿಗೂ ಗೋಚರವಲ್ಲದ, ಮತ್ತು ಚಿರಸ್ಥಾಯಿಯಾದ ತನ್ನ ಲೋಕವನ್ನು ಸೇರಿದನು. ಇತ್ತಲಾಗಿ ಸ್ವಾಯಂಭುವಮನುವೂ ಕೂಡ ಬ್ರಹ್ಮ ಕೃಪೆಯಿಂದ ತನ್ನ ಉದ್ದೇಶವು ಕೈಗೂಡಿದುದಕ್ಕಾಗಿ ಸಂತೋಷಗೊಂಡು ನಾರದನ ಅನುಜ್ಞೆಯನ್ನು ಪಡೆದು, ತನ್ನ ಮಗನಾದ ಪ್ರಿಯವ್ರತನನ್ನು ರಾಜ್ಯಭಾರಕ್ಕಾಗಿ ನಿಯಮಿಸಿ, ವಿಷಜಲದಿಂದ ತುಂಬಿದ ಸಮುದ್ರದಂತೆ ದುರ್ವಿಷಯಗಳಿಂದ ತುಂಬಿ ದುಸ್ತರವಾಗಿರುವ ತನ್ನ ಮನೆಯನ್ನೂ, ಭೋಗಸಾಮಗ್ರಿಗಳನ್ನೂ ತೊರೆದು ವನಕ್ಕೆ ಹೊರಟನು. ಆಮೇಲೆ ಇತ್ತಲಾಗಿ ಪ್ರಿಯವ್ರತನೂ ಕೂಡ, ತನ್ನ ಕರ್ಮಗಳೆಲ್ಲವನ್ನೂ ಭಗವದರ್ಪಣರೂಪವಾಗಿಯೇ ನಡೆಸುತ್ತ, ಸಮಸ್ತಲೋಕದ ಬಂಧನವನ್ನೂ ಬಿಡಿಸತಕ್ಕ ಮಹಾಮಹಿಮೆಯುಳ್ಳ ಆ ಪರಮಪುರುಷನ ಪಾದಾರವಿಂದದಲ್ಲಿಯೇ ನಟ್ಟ ಮನಸ್ಸುಳ್ಳವನಾಗಿ, ಆದರಿಂದ ರಾಗದ್ವೇಷಾದಿದೋಷಗಳನ್ನೂ ನೀಗಿ, ಶುದ್ಧಾತ್ಮನಾಗಿ, ಗೌರವದಿಂದ ರಾಜ್ಯವನ್ನು ನಡೆಸುತ್ತಿದ್ದನು. ಆಮೇಲೆ ಈತನು ವಿಶ್ವಕರ್ಮನ ಮಗಳಾದ ಬರ್ಹಿಷ್ಮತಿಯೆಂಬವಳನ್ನು ಮದುವೆಯಾಗಿ ಅವಳಲ್ಲಿ ಗುಣದಲ್ಲಿಯೂ, ಶೀಲದಲ್ಲಿಯೂ, ಕರ್ಮಗಳಲ್ಲಿಯೂ, ವೀರ್ಯದಲ್ಲಿಯೂ ತನಗೆ ಸಮಾನರಾದ ಹತ್ತುಮಂದಿ ಕುಮಾರರನ್ನೂ, ಕೊನೆಯಲ್ಲಿ ಊರ್ಜಸ್ವತಿಯೆಂಬ ಒಬ್ಬ ಕುಮಾರಿಯನ್ನೂ ಪಡೆದನು. ಮೇಲೆ ಹೇಳಿದ ಹತ್ತುಮಂದಿ ಮಕ್ಕಳೂ ಕ್ರಮವಾಗಿ, ಅಗ್ನೀಧ್ರ, ಇಧ್ಮಜಿಹ್ವ, ಯಜ್ಞಬಾಹು, ಮಹಾವೀರ, ಹಿರಣ್ಯರೇತಸ್ಸು, ಘೃತಪೃಷ್ಠ, ಸವನ, ಮೇಧಾತಿಥಿ, ವೀತಿಹೋತ್ರ, ಕವಿ, ಎಂಬ ಅಗ್ನಿಪರ್ಯಾಯವಾದ ಹೆಸರಿನಿಂದಲೇ ಕರೆಯಲ್ಪಡುತಿದ್ದರು. ಇವರಲ್ಲಿ ಕವಿ, ಮಹಾವೀರ, ಸವನರೆಂಬ ಮೂರುಮಂದಿ ಮಕ್ಕಳು, ಬಾಲ್ಯದಿಂದಲೂ ಆತ್ಮವಿದ್ಯೆಯಲ್ಲಿಯೇ ಪರಿಚಯಹೊಂದಿದವರಾಗಿ, ಇಂದ್ರಿಯಗಳನ್ನು ಜಯಿಸಿ, ಸನ್ಯಾಸಿಗಳಿಗೆ ಯೋಗ್ಯವಾದ ಪರಮಹಂಸಧರ್ಮದಲ್ಲಿಯೇ ಇದ್ದುಬಿಟ್ಟರು. ಇವರು ಈ ಪರಮಹಂಸಾಶ್ರಮದಲ್ಲಿ ಜಿತೇಂದ್ರಿಯರಾಗಿಯೂ, ಜ್ಞಾನಸಂಪನ್ನರಾಗಿಯೂ ಇದ್ದು, ಸಕಲಜೀವಶರೀರಕನಾಗಿಯೂ, ಸಂಸಾರಭಯನಿವಾರಕನಾಗಿಯೂ ಇರುವ ಭಗವಂತನ ಪಾದದಲ್ಲಿಯೇ ನಟ್ಟ ಮನಸ್ಸುಳ್ಳವರಾಗಿ, ಅವಿಚ್ಛಿನ್ನವಾದ ಆ ಭಗವದ್ಭಕ್ತಿಯ ಬಲದಿಂದ


ಹೃದಯಶುದ್ಧಿಯನ್ನು ಹೊಂದಿ, ಸಮಸ್ತಜೀವಿಗಳಿಗೂ ಆಂತರಾತ್ಮನಾದ ಆ ಪರಮ ಪುರುಷನಲ್ಲಿಯೇ ಸಾಕ್ಷಾತ್ಕರಿಸಿಕೊಂಡು, ಸರ್ವವಿಧದಲ್ಲಿಯೂ ಆ ಭಗವಂತನ್ನೊಡನೆ ಸಮಾನಧರ್ಮವುಳ್ಳವರಾಗಿ ಮುಕ್ತಿಯನ್ನೂ ಹೊಂದಿದರು. ಉಳಿದ ಏಳುಮಂದಿ ಪುತ್ರರೂ ತಂದೆಗೆ ಅಧೀನರಾಗಿಯೇ ಇರುತ್ತಿದ್ದರು. ಈ ಪ್ರಿಯವ್ರತನ ಮತ್ತೊಬ್ಬ ಭಾರ್ಯೆಯಲ್ಲಿ ಉತ್ತಮ, ತಾಮಸ, ರೈವತರೆಂಬ ಬೇರೆ ಮೂರುಮಂದಿ ಕುಮಾರರು ಹುಟ್ಟಿ ಆ ಮೂವರೂ ಮನ್ವಂತರಾಧಿಪತಿಗಳೆನಿಸಿಕೊಂಡರು. ಆ ಪ್ರಿಯವ್ರತನು ತನಗೆ ಸಮಾನಗುಣವುಳ್ಳ ಆ ಪುತ್ರರೊಡಗೂಡಿ, ಎಣೆಯಿಲ್ಲದ ಬಾಹುಬಲವುಳ್ಳವನಾಗಿ, ತನ್ನ ಧನುಷ್ಟಂಕಾರದಿಂದಲೇ ಧರ್ಮವಿರೋಧಿಗಳಾದ ಶತ್ರುಗಳೆಲ್ಲರನ್ನೂ ಅಡಗಿಸಿ, ಯುದ್ಧಪ್ರಸಕ್ತಿಯೆ ಇಲ್ಲದೆ ರಾಜ್ಯಭೋಗವನ್ನನುಭವಿಸುತ್ತಿದ್ದನು. ಮತ್ತು ತನ್ನ ಭಾರ್ಯೆಯಾದ ಬರ್ಹಿಷ್ಮತಿಯು ತನ್ನ ವಿಷಯದಲ್ಲಿ ತೋರಿಸತಕ್ಕ ಹರ್ಷದಿಂದಲೂ, ಅನುವರ್ತನದಿಂದಲೂ, ಸ್ತ್ರೀಯರಿಗೆ ಸಹಜವಾದ ಶೃಂಗಾರ ವಿಲಾಸದಿಂದಲೂ, ಲಜ್ಜಾಸೂಚಕವಾದ ಮಂದಹಾಸದಿಂದಲೂ, ಕೆವಿಗಿಂಪಾದ ಪರಿಹಾಸವಾಕ್ಯಗಳಿಂದಲೂ, ನಿರಂತರವೂ ತನ್ನನ್ನು ಸಂತೋಷಪಡಿಸುತ್ತಿರಲು, ತನ್ನ ದೇಹವನ್ನು ಮರೆತವನಂತೆ, ಕಾಮಸುಖಗಳನ್ನನುಭವಿಸುತ್ತ, ಹನ್ನೊಂದು ಕೋಟಿಸಂವತ್ಸರಗಳವರೆಗೆ ರಾಜ್ಯವನ್ನು ಪರಿಪಾಲಿಸುತ್ತಿದ್ದನು. ಎಲೈ ಪರೀಕ್ಷಿದ್ರಾಜನೇ! ಈ ಪ್ರಿಯವ್ರತನ ಮತ್ತೊಂದು ಅದ್ಭುತಶಕ್ತಿಯನ್ನು ತಿಳಿಸುವೆನು ಕೇಳು. ಸೂರ್ಯನು ಪ್ರತಿದಿನವೂ ಮೇರುವನ್ನು ಸುತ್ತುವಾಗ, ತನ್ನ ಕಾಂತಿಯಿಂದ ಪ್ರಪಂಚದ ಅರ್ಧಭಾಗವನ್ನು ಮಾತ್ರವೇ ಬೆಳಗುತ್ತಿರುವನಷ್ಟೇ? ಉಳಿದ ಭಾಗವು ಆ ಮೇರುವಿನ ಛಾಯೆಯಿಂದ ಮರೆಸಿ ಹೋಗುವುದು. ಇದರಿಂದ ಒಂದುಕಡೆಯಲ್ಲಿ ಬೆಳಕಿದ್ದಾಗ ಮತ್ತೊಂದು ಕಡೆಯಲ್ಲಿ ಕತ್ತಲಿಕವಿದಿರುವುದು. ಇದರಿಂದಲೇ ಹಗಲಿರುಳೆಂಬ ವಿಭಾಗವೂ ಉಂಟಾಗಿರುವುದು. ಇದನ್ನು ನೋಡಿ ಪ್ರಿಯವ್ರತನು, ಅಸಮಾಧಾನಗೊಂಡವನಾಗಿ, ಸೂರ್ಯಪ್ರಕಾಶವಿಲ್ಲದ ಭಾಗಕ್ಕೂ ಪ್ರಕಾಶವುಂಟಾಗುವಂತೆ, ಪ್ರಪಂಚಕ್ಕೆಲ್ಲಕ್ಕೂ ಯಾವಾಗಲೂ ಬೆಳಕುಂಟುಮಾಡಬೇಕೆಂದು ಸಂಕಲ್ಪಿಸಿಕೊಂಡನು. ಇದಕ್ಕಾಗಿ ಆ ಪ್ರಿಯವ್ರತನು ಭಗವದುಪಾಸನವನ್ನು ಮಾಡಿ ಅತಿಮಾನುಷಪ್ರಭಾವವನ್ನು ಪಡೆದು, ಸೂರ್ಯರಥಕ್ಕೆ ಸಮಾನವಾದ ತೇಜೋಮಯವಾದ ಒಂದುರಥವನ್ನೇರಿ, ಎರಡನೆಯಸೂರ್ಯನಂತೆ ಸುತ್ತುವುದಕ್ಕೆ ತೊಡಗಿದನು. ಸೂರ್ಯನು ಮೇರುವಿನ ಉತ್ತರಕ್ಕಿರುವಾಗ ತಾನು ದಕ್ಷಿಣಕ್ಕೂ, ಸೂರ್ಯನು ದಕ್ಷಿಣಕ್ಕೆ ಹೋದಾಗ ತಾನು ಉತ್ತರಕ್ಕೂ ಬರುತ್ತ, ಆಯಾಸ್ಥಳಗಳನ್ನು ತನ್ನ ಕಾಂತಿಯಿಂದ ಬೆಳಗುತ್ತಿದ್ದನು. ಹೀಗೆ ಏಳಾವರ್ತಿ ಸೂರ್ಯಗತಿ

ಯನ್ನನುಸರಿಸಿ ಮೇರುವನ್ನು ಪ್ರದಕ್ಷಿಣೆಮಾಡಿದನು. ಓ ರಾಜಾ! ಆ ಪ್ರಿಯವ್ರತನ ರಥವುಸುತ್ತಿಬಂದಾಗ, ಆ ಚಕ್ರದ ಪಟ್ಟಿಯಿಂದುಂಟಾದ ಹಳ್ಳಗಳೇ ಸಪ್ತ ಸಮುದ್ರಗಳಾದುವು. ಆ ಸಮುದ್ರಗಳಿಂದಲೇ ಈ ಭೂಮಂಡಲವು ಏಳುಭಾಗಗಳಾಗಿ ಬೇರ್ಪಟ್ಟು, ಕ್ರಮವಾಗಿ ಜಂಬೂ, ಪ್ಲಕ್ಷ, ಶಾಲ್ಮಲಿ, ಕುಶ, ಕ್ರೌಂಚ, ಶಾಕ, ಪುಷ್ಕರಗಳೆಂಬ ಹೆಸರಿನಿಂದ ಏಳುದ್ವೀಪಗಳಾದುವು. ಈ ದ್ವೀಪಗಳಲ್ಲಿ ಕ್ರಮವಾಗಿ ಮೊದಲನೆಯದುದಕ್ಕಿಂತ ಅದರಮುಂದಿನದು ಎರಡರಷ್ಟು ಹೆಚ್ಚುಪರಿಮಾಣವುಳ್ಳವುಗಳಾಗಿರುವುವು ಹಾಗೆಯೇ ಆ ಏಳುಸಮುದ್ರಗಳೂ ಒಂದಕ್ಕಿಂತಲೂ ಮತ್ತೊಂದು ದ್ವಿಗುಣ ಪರಿಮಾಣವುಳ್ಳದಾಗಿ, ಲವಣ, ಇಕ್ಷು, ಸುರೆ, ಸರ್ಪಿ, ಕ್ಷೀರ, ದಧಿ, ಶುದ್ಧೋದಕ ಸಮುದ್ರಗಳೆಂಬ ಹೆಸರಿನಿಂದ ಪ್ರಸಿದ್ಧವಾಗಿರುವುವು. ಆ ಏಳು ದ್ವೀಪಗಳಿಗೂ ಈ ಏಳು ಸಮುದ್ರಗಳು ಅಗುಳುಗಳಂತೆ ಸುತ್ತಿಕೊಂಡಿರುವುವು. ಆದರಲ್ಲಿ ಜಂಬೂದ್ವೀಪವೆಂಬುದುಲಕ್ಷ ಯೋಜನದಆಳತೆಯುಳ್ಳದಾಗಿರುವುದು.ಆದರಂತೆಯೇ ಲವಣಸಮುದ್ರವೂ ಲಕ್ಷಯೋಜನದ ಆಗಲವುಳ್ಳದಾಗಿರುವುದು. ಹೀಗೆ ದ್ವೀಪದ ಆಳತೆಯನ್ನನುಸರಿಸಿ, ಆಯಾ ದ್ವೀಪದ ಸುತ್ತಲೂ ಇರುವ ಸಮುದ್ರಗಳು ಆದೇ ಆಳತೆಯಿಂದಿರುವುವ. ಪ್ರಿಯವ್ರತನು ತನ್ನ ಏಳುಮಂದಿ ಕುಮಾರರಿಗೂ ಕ್ರಮವಾಗಿ ಈ ಸಪ್ತದ್ವೀಪಗಳ ಅಧಿಕಾರವನ್ನು ಹಂಚಿಕೊಟ್ಟನು. ತನ್ನ ಮಗಳಾದ ಊರ್ಜಸ್ವತಿಯನ್ನು ಶುಕ್ರನಿಗೆ ಕೊಟ್ಟು ವಿವಾಹಮಾಡಿದನು. ಶುಕ್ರನಿಗೆ ಆವಳಲ್ಲಿ ದೇವಯಾನಿಯೆಂಬ ಕನ್ಯಕೆಯು ಹುಟ್ಟಿದಳು. ಓ ಪರೀಕ್ಷಿದ್ರಾಜಾ! ಪ್ರಿಯವ್ರತನಿಗೆ ಇಷ್ಟೊಂದು ಮಹಾಮಹಿಮೆಯುಂಟಾಗುವುದೇನೂ ಅಸಂಭವವಲ್ಲ. ತನ್ನ ಪಾದದಿಂದಲೇ ಮೂರು ಲೋಕವನ್ನೂ ಆಳಿದ ಮಹಾಮಹಿಮೆಯುಳ್ಳ ಆ ಭಗವಂತನ ಪಾದಾರವಿಂದಗಳನ್ನು ನಂಬಿ, ಆ ಪಾದಧೂಳಿಯಿಂದ ಹಸಿವು, ಬಾಯಾರಿಕೆ, ಶೋಕ ಮೋಹ, ಜರಾ, ಮರಣಗಳೆಂಬ ಷಡೂರ್ಮಿಗಳನ್ನೂ ಜಯಿಸಿದ ಮಹಾತ್ಮರಿಗೆ, ಯಾವುದೂ ಅಸಾಧ್ಯವಲ್ಲ. ಅಂತ್ಯಕಾಲದಲ್ಲಿ ಒಂದಾವರ್ತಿ ಶ್ರೀನಾರಾಯಣಸ್ಮರಣವನ್ನು ಮಾಡಿದ ಮಾತ್ರದಲ್ಲಿಯೂ ಕೂಡ, ಆ ಕ್ಷಣದಲ್ಲಿಯೇ ಮನುಷ್ಯನು ದುಸ್ತರವಾದ ಸಂಸಾರಬಂಧವನ್ನು ನೀಗಿ, ಮೋಕ್ಷವನ್ನೇ ಹೊಂದಬಲ್ಲನು. ಹೀಗಿರುವಾಗ ಅಂತವನಿಗೆ ಬೇರೆವಿಧವಾದ ಸಾಮರ್ಥ್ಯವುಂಟಾಗುವುದೇನಸಾಧ್ಯವೇ? ಹೀಗೆ ಅಪರಿಮಿತವಾದ ಬಲಪರಾಕ್ರಮಗಳಿಂದ ರಾಜ್ಯವನ್ನು ನಡೆಸುತ್ತಿದ್ದಪ್ರಿಯವ್ರತನು ಒಮ್ಮೆ ನಾರದಮಹರ್ಷಿಯನ್ನು ಕಂಡು, ಅವನ ಪಾದಸೇವೆಯನ್ನು ಮಾಡುತ್ತಿದ್ದನು. ಆಗ ಅವನಿಗೆ ತಾನು ನಡೆಸುತ್ತಿದ್ದ ಕರ್ಮಮಾರ್ಗವು ಫಲಕಾರಿಯಲ್ಲವೆಂದು ತೋರಿ ಅದರಲ್ಲಿ ಜಿಹಾಸೆ ಹುಟ್ಟಿತು. ಇದರಿಂದ ಅವನು ಮನಸ್ಸಿನಲ್ಲಿ ನೆಮ್ಮದಿಯಿಲ್ಲದೆ

ತನ್ನಲ್ಲಿ ತಾನು ಹೀಗೆಂದು ಚಿಂತಿಸುವನು. "ಅಹಾ! ಇದುವರೆಗೆ ನಾನುಮಾಡಿದು ದೇನು? ಬಹಳ ಅನುಚಿತಕಾರ್ಯವನ್ನು ಮಾಡಿಬಿಟ್ಟೆನು! ಮೊದಲೇ ನಾನು ಮೋಕ್ಷ ಧರ್ಮವನ್ನು ಹಿಡಿದಿದ್ದರೂ, ಈಗ ಇಂದ್ರಿಯಗಳಿಗೆ ವಶನಾಗಿ, ಹುಲ್ಲು ಮುಚ್ಚಿದ ಹಳೆಬಾವಿಯಂತೆ ಸುಖಭ್ರಾಂತಿಯನ್ನು ಹುಟ್ಟಿಸಿ ಮನಸ್ಸನ್ನು ಮರುಳುಮಾಡತಕ್ಕ ಈ ಸಂಸಾರಕ್ಕೆ ಆಸೆಪಟ್ಟೆನಲ್ಲಾ! ಛೀ! ಈ ನನ್ನ ಪತ್ನಿಗೆ ನಾನು ಕೈಯಾಟದ ಬೊಂಬೆಯಂತಾದೆನು! ಅಯ್ಯೋ! ನನ್ನ ಜನ್ಮವನ್ನು ಸುಡಬೇಕು! ಛೀ! ಛೀ! ಇನ್ನೀ ಸಂಸಾರವೂ ಸಾಕು!" ಎಂದು ತನ್ನನ್ನು ತಾನೇ ನಿಂದಿಸಿಕೊಳ್ಳುತ್ತಿದ್ದನು. ಕೊನೆಗೆ ಈ ತಾಪತ್ರಯಗಳಿಲ್ಲವನ್ನೂ ಬಿಟ್ಟು, ನಿವೃತ್ತಿಧರ್ಮವನ್ನು ಹಿಡಿದು, ಭಗವಂತನನ್ನಾರಾಧಿಸುತ್ತ ಬಂದನು. ಅದರಿಂದ ಭಗವದನುಗ್ರಹವನ್ನು ಸಂಪಾದಿಸಿ, ಆತ್ಮಸ್ವರೂಪವನ್ನು ಧ್ಯಾನಿಸುತ್ತ ಬಂದಾಗ, ಅವನ ಮನಸ್ಸಿಗೆ ನೆಮ್ಮದಿಯುಂಟಾಯಿತು. ಸಪ್ತದ್ವೀಪಪರಿಮಾಣವುಳ್ಳ ಭೂಮಿಯನ್ನು ಕ್ರಮವಾಗಿ ತನ್ನ ಮಕ್ಕಳಿಗೆ ಹಂಚಿಕೊಟ್ಟಮೇಲೆ, ತನ್ನ ಸಮಸ್ತಭೋಗಗಳಿಗೂ ಮುಖ್ಯಾಶ್ರಯಗಳಾಗಿದ್ದ ತನ್ನ ಪತ್ನಿಯನ್ನೂ ಶವದಂತೆ ಭಾವಿಸಿ, ರಾಜ್ಯಸಂಪತ್ತುಗಳೆಲ್ಲವನ್ನೂ ತೃಣಪ್ರಾಯವಾಗಿ ಎಣಿಸಿ, ತಾನಾಗಿಯೇ ವಿರಕ್ತಿಮಾರ್ಗವನ್ನವಲಂಬಿಸಿ, ನಾರದೋಪದೇಶದಂತೆ ಯಾವಾಗಲೂ ಹೃದಯದಲ್ಲಿ ಆ ಶ್ರೀಹರಿಯ ಪಾದಾರವಿಂದಗಳನ್ನೇ ಧ್ಯಾನಿಸುತ್ತ, ತಪಸ್ಸಿದ್ಧಿಯನ್ನು ಪಡೆಯುವುದಕ್ಕಾಗಿ ಗಂಧಮಾದನಪರ್ವತಕ್ಕೆ ಹೋದನು ಓ ರಾಜೇಂದ್ರಾ! ನೋಡಿದೆಯಲ್ಲವೇ? ಭಕ್ತಿಮಾರ್ಗಕ್ಕೆ ಕಾರಣಾಂತರದಿಂದ ನಡುವೆ ವಿಚ್ಛಿತ್ತಿಯುಂಟಾದರೂ, ಅದರ ಸಂಸ್ಕಾರಬಿಟ್ಟು ಹೋಗದೆ, ತಿರುಗಿ ಅದೇದಾರಿಗೆ ತಂದು ಸೇರಿಸುವುದು. ಆ ಪ್ರಿಯವ್ರತನ ಮಹಿಮೆಯನ್ನು ಸಂಗ್ರಹವಾಗಿ ತಿಳಿಸತಕ್ಕ ಕೆಲವು ಶ್ಲೋಕಾರ್ಥಗಳನ್ನು ವಿವರಿಸುವೆನು ಕೇಳು! "ಆ ರಾಜನು ತನ್ನ ಅಸಾಧಾರಣಸಾಮರ್ಥ್ಯದಿಂದ ರಾತ್ರಿಯನ್ನೂ ಹಗಲಾಗಿ ಮಾಡಿದನು! ತನ್ನ ರಥ ಚಕ್ರದಿಂದ ಸಪ್ತಸಮುದ್ರಗಳನ್ನೇರ್ಪಡಿಸಿದನು. ನದ ನದೀ ಪರ್ವತಗಳಿಂದ ಸಾಂಕರ್ಯವಿಲ್ಲದಂತೆ, ಭೂಮಿಯನ್ನು ಬೇರೆಬೇರೆ ದ್ವೀಪಗಳಾಗಿ ವಿಭಾಗಿಸಿ, ಪ್ರಾಣಿಗಳ ಸೌಕರ್ಯಕ್ಕಾಗಿ ಎಲ್ಲೆಯನ್ನೂ ಕಲ್ಪಿಸಿದನು. ಮತ್ತು ವಿಷ್ಣುಭಕ್ತರಲ್ಲಿ ಅತ್ಯಾದರವುಳ್ಳ ಆ ಮಹಾತ್ಮನು, ಯೋಗಬಲದಿಂದಲೂ, ಕರ್ಮಬಲದಿಂದಲೂ ಸಾಧಿಸಲ್ಪಡತಕ್ಕ ಮೂರುಲೋಕದ ಸುಖಗಳನ್ನೂ ನರಕಪ್ರಾಯವಾಗಿಯೇ ಭಾವಿಸಿ ಅವೊಂದಕ್ಕೂ ಆಸೆಪಡದೆ, ಉತ್ತಮಪುರುಷಾರ್ಥವಾದ ಮೋಕ್ಷವನ್ನೇ ಸಾಧಿಸಿದನು. ಸಾಕ್ಷಾತ್ಪರಮಪುರುಷನಿಗಲ್ಲದೆ ಇಂತಹ ಮಹಾಕಾರ್ಯಗಳು ಬೇರೆ ಯಾರಿಗೆ ತಾನೇ ಸಾಧ್ಯವು?" ಇದು ಮೊದಲನೆಯ ಅಧ್ಯಾಯವು.

ಪ್ರಿಯವ್ರತಪುತ್ರನಾದ ಅಗ್ನೀಧ್ರನ ಚರಿತ್ರವು
ಅಗ್ನೀಧ್ರನು ಪೂರ್ವಚಿತ್ತಿಯನ್ನು ನೋಡಿ ಮೋಹಿಸಿ
ಅವಳನ್ನು ವರಿಸಿದುದು.

ತಂದೆಯಾದ ಪ್ರಿಯವ್ರತನು ತಪಸ್ಸಿಗೆ ಹೋದಮೇಲೆ, ಅಗ್ನೀಧ್ರನು ಆವನ ಆಜ್ಞಾನುಸಾರವಾಗಿ ಜಂಬೂದ್ವೀಪವನ್ನಾಳುತ್ತ, ಅಲ್ಲಿನ ಪ್ರಜೆಗಳನ್ನು ಮಕ್ಕಳಂತೆ ಪ್ರೇಮದಿಂದ, ಪೋಷಿಸುತ್ತಿದ್ದನು. ಕೆಲವು ಕಾಲದಮೇಲೆ ಅವನು ಸಂತಾನಾರ್ಥಿಯಾಗಿ, ದೇವಸ್ತ್ರೀಯರಿಗೆ ಕ್ರೀಡಾಸ್ಥಾನವಾದ ಮಂದರಪರ್ವತದ ತಪ್ಪಲಿಗೆ ಹೋಗಿ, ಅಲ್ಲಿ ಪೂಜಾಸಾಮಗ್ರಿಗಳಿಂದಲೂ, ಧ್ಯಾನರೂಪವಾದ ತಪಸ್ಸಿನಿಂದಲೂ ಪ್ರಜಾಪತಿಶ್ರೇಷ್ಠನಾದ ಬ್ರಹ್ಮನನ್ನಾರಾಧಿಸುತ್ತಿದ್ದನು. ಇವನ ಉದ್ದೇಶವನ್ನು ತಿಳಿದು ಬ್ರಹ್ಮನು ತನ್ನ ಸಭೆಯಲ್ಲಿ ಗಾನಮಾಡುತ್ತಿದ್ದ ಪೂರ್ವಚಿತ್ತಿಯೆಂಬ ಅಪ್ಸರಸಿಯನ್ನು ಇವನ ತಪೋವನಕ್ಕೆ ಕಳುಹಿಸಿದನು. ಪೂರ್ವಚಿತ್ತಿಯು ಬ್ರಹ್ಮಾಜ್ಞೆಯಿಂದ ಈ ತಪೋವನಕ್ಕೆ ಬಂದು, ಅಲ್ಲಿನ ಸರೋವರದ ತೀರದಲ್ಲಿ ಸಂಚರಿಸುತ್ತಿದ್ದಳು. ಆ ವನದಲ್ಲಿಯೋ ಎಲ್ಲಿ ನೋಡಿದರೂ ದಟ್ಟವಾಗಿ ತುಂಬಿದ ನಾನಾಬಗೆಯ ಸಸ್ಯ ವೃಕ್ಷಗಳು! ಆ ವೃಕ್ಷಗಳ ಒಂದೊಂದು ಕೊಂಬೆಗೂ ಹಬ್ಬಿ, ಬೆಳೆದ ಸುವರ್ಣಚ್ಛಾಯೆಯುಳ್ಳ ಹೂಬಳ್ಳಿಗಳು! ಆ ಬಳ್ಳಿಗಳಮೇಲೆ ಕುಳಿತು ಕಿವಿಗಿಂಪಾಗಿ ಕೂಗುತ್ತಿರುವ ಪಕ್ಷಿಮಿಥುನಗಳು! ಈ ಪಕ್ಷಿಗಳ ಮಧುರಗಾನವನ್ನು ಕೇಳಿ ಪಕ್ಕದ ಸರೋವರದಲ್ಲಿ ಮನೋಹರವಾದ ಕಂಠಧ್ವನಿಯಿಂದ ಕೂಗುತ್ತಿರುವ ಹಂಸ ಕಾರಂಡವಾದಿ ಜಲಪಕ್ಷಿಗಳು! ಅಲ್ಲಲ್ಲಿ ಈ ಧ್ವನಿಗೆ ಪ್ರತಿಧ್ವನಿಯನ್ನು ಕೊಡುವಂತೆ ಮೊಳಗುತ್ತಿರುವ ನಿರ್ಮಲಸರೋವರಗಳು! ಹೀಗೆ ಸರ್ವವಿಧದಿಂದಲೂ, ಕಣ್ಣಿಗೂ, ಮನಸ್ಸಿಗೂ ಆನಂದಕರವಾದ ಆ ವನದಲ್ಲಿ, ಪೂರ್ವಚಿತ್ತಿಯು, ಒಂದಾನೊಂದು ಸರೋವರದ ಸಮೀಪದಲ್ಲಿ ಸಂಚಾರಮಾಡುತ್ತಿದ್ದಳು ಆ ಸರೋವರದ ಸಮೀಪದಲ್ಲಿಯೇ ಮತ್ತೊಂದು ಕಡೆಯಲ್ಲಿ ತಪಸ್ಸುಮಾಡುತ್ತಿದ್ದ ಅಗ್ನೀಧ್ರನಿಗೆ, ಇವಳ ಸಂಚಾರದಿಂದುಂಟಾದ ಕಾಲಂದುಗೆಗಳ ಘಲ್ಘಲಧ್ವನಿಯು ಆಗಾಗ ಕಿವಿಗೆ ಬೀಳುತ್ತಿತ್ತು. ಇದನ್ನು ಕೇಳಿ ಅವನು ತಪಸ್ಸಮಾಧಿಗಾಗಿ ಮುಚ್ಚಿದ್ದ ಕಣ್ಣುಗಳನ್ನು ಸ್ವಲ್ಪವಾಗಿ ತೆರೆದು ನೋಡುವಾಗ, ಈ ಸುಂದರೀಮಣಿಯು, ಮಕರಂದಪಾನಕ್ಕಾಗಿ ಪ್ರತಿಯೊಂದು ಪುಷ್ಪವನ್ನೂ ಸುತ್ತಿಬರುವ ಹೆಣ್ಣುಂಬಿಯಂತೆ, ಆ ಉದ್ಯಾನದಲ್ಲಿರುವ ಒಂದೊಂದು ಜಾತಿಯ ಪುಷ್ಪವನ್ನೂ ಆಘ್ರಾಣಿಸುತ್ತ ಅಲ್ಲಲ್ಲಿ ಸುತ್ತುತ್ತಿದ್ದಳು. ಅವಳ ಅಂದವಾದ ನಡೆ! ಸುಂದರವಾದ ವಿಲಾಸಗಳು! ಇಂಪಾದ ಮಾತು! ಮನೋಹರವಾದ ನೋಟ! ಕೋಮಲವಾದ ಅವಯವಗಳು! ಇವೆಲ್ಲವೂ ದೇವತೆ



11. ಆಗ್ನೀಧ್ರನು ಪೂರ್ವಚಿತ್ತಿಯನ್ನು ನೋಡಿ ಮೋಹಿಸಿದುದು.

ಗಳು ಮತ್ತು ಮನುಷ್ಯರ ಮನಸ್ಸನ್ನು ಮೋಹಗೊಳಿಸುವಂತಿದ್ದವು. ಅವಳನ್ನು ನೋಡಿದಮಾತ್ರದಲ್ಲಿ ಎಂತವರಿಗೂ ಕಾಮವಿಕಾರವುಂಟಾಗುತ್ತಿತ್ತು. ಸುಧಾರಸವು ತೊಟ್ಟಿಕ್ಕುವಂತೆ ಅವಳ ಮುಖದಿಂದ ಹೊರಟ ಮಂದಹಾಸಪೂರ್ವಕವಾದ ಮಧುರ ಭಾಷಣವು ಎಂತವರನ್ನೂ ಮರಳುಮಾಡುತ್ತಿತ್ತು! ಅವಳು ಮಾತಾಡುವಾಗ, ಆಕೆಯ ಉಸಿರಿನ ಗಾಳಿಯ ಸುಗಂಧಕ್ಕಾಗಿ, ನಾನಾಕಡೆಗಳಿಂದ ಭ್ರಮರಗಳು ಬಂದು ಅವಳ ಮುಖದ ಸುತ್ತಲೂ ಮುತ್ತುತ್ತಿದ್ದುವು. ಈ ಭ್ರಮರಗಳು ಬಂದು ಮುತ್ತುವುದರಿಂದ ಆ ಸುಂದರೀಮಣಿಯು ಭಯಪಟ್ಟು, ಸಂಭ್ರಮದಿಂದ ಅತ್ತಿತ್ತ ಓಡಾಡುವಾಗ, ಅವಳ ಉಬ್ಬಿದ ಸ್ತನಗಳೂ, ನೀಡಿದ ಕೇಶಪಾಶಗಳೂ, ಕಿರುಗೆಜ್ಜೆಗಳನ್ನು ಕಟ್ಟಿದ ಆಕೆಯ ಕಾಂಚೀದಾಮವೂ ಭಾರದಿಂದ ಬಳುಕುತ್ತ, ನೋಡುವವರಿಗೆ ಮತ್ತಷ್ಟು ಮೋಹಜನಕವಾಗಿದ್ದಿತು. ಹೀಗೆ ವಿಲಾಸದಿಂದ ನಡೆಯಾಡುತ್ತಿರುವ ಆ ನಾರೀಮಣಿಯನ್ನು ನೋಡಿದೊಡನೆ, ಆ ರಾಜಕುಮಾರನ ಮನಸ್ಸು ಕಲಗಿತು. ಆಕೆಯರೂಪಕ್ಕೆ ಮರುಳಾಗಿ, ಕಾಮಪೀಡಿತನಾದ ಅಗ್ನೀಧ್ರನು ಹಿಂದೆ ಯಾವಾಗಲೂ ಸ್ತ್ರೀರೂಪವನ್ನು ನೋಡಿಲ್ಲದವನಂತೆಯೂ, ಹುಚ್ಚನಂತೆಯೂ, ಬುದ್ಧಿಗೆಟ್ಟು, ಕಾಡಿನಲ್ಲಿರುವ ಋಷಿಯನ್ನು ಮಾತಾಡಿಸುವಂತೆ ಮಾತಾಡಿಸುವನು. "ಎಲೈ ನೀನು ಯಾರು? ಈ ಪರ್ವತಪ್ರಾಂತದಲ್ಲಿ ನೀನು ನಡೆಸಬೇಕಾದ ಕಾರ್ಯವೇನು? ಮುನಿವರ್ಯಾ! ಒಂದುವೇಳೆ ನೀನೇ ಆ ಭಗವಂತನ ಮಾಯಾಶಕ್ತಿಯಾಗಿರಬಹುದೇ? * ನಿನ್ನ ಕಣ್ಣಿನಮೇಲೆ ನಾಣಿಲ್ಲದ ಎರಡುಧನಸ್ಸುಗಳು ಕಾಣುತ್ತಿರುವುದೇಕೆ? ಈ ಬಿಲ್ಲುಗಳನ್ನು ನೀನು ಧರಿಸಿರುವುದು ನಿನ್ನ ಮಿತ್ರನಾದ ನನ್ನ ಕಾರ್ಯವನ್ನು ನೆರವೇರಿಸುವುದಕ್ಕಾಗಿಯೇ! ಅಥವಾ ನಿನ್ನ ಕಾರ್ಯಕ್ಕಾಗಿಯೇ? ಅವುಗಳಿಂದ ನಿನಗೆ ಪ್ರಯೋಜನವೇನು? ಒಂದುವೇಳೆ ಇಂದ್ರಿಯವಶರಾಗಿ ಕಾಡಿನಲ್ಲಿ ಮೃಗಪ್ರಾಯರಾಗಿ ಸಂಚರಿಸುತ್ತಿರುವ ನಮ್ಮಂತವರನ್ನು ಜಯಿಸುವುದಕ್ಕಾಗಿಯೇ ಈ ಬಿಲ್ಲುಗಳನ್ನು ನೀನು ಧರಿಸಿರಬಹುದೇ? ಇದೇನಿದು? ಆ ಬಿಲ್ಲುಗಳ ಕೆಳಗೆ ಕಮಲದಳಗಳಿಗೆ ಸಮಾನ ಈ ಎರಡು ಬಾಣಗಳು, ಹಿಡಿಯಿಲ್ಲದಿದ್ದರೂ ಅಂದವಾದ ಗರಿಗಳಿಂದ ಸುಂದರವಾಗಿ ಕಾಣುತ್ತಿರುವುವು. ಅವುಗಳ ಮೊನೆಗಳು ಅತೀಕ್ಷ್ಣವಾಗಿರುವುವು. ಈ ಕಾಡಿನಲ್ಲಿ ಯಾರಮೇಲೆ ಪ್ರಯೋಗಿಸುವುದಕ್ಕಾಗಿ ಈ ಬಾಣಗಳನ್ನಿಟ್ಟಿರುವೆಯೋ ಕಾಣೆನು! ಹೇಗಾದರೂ ಆಗಲಿ! ನಿನ್ನ ಈ ಪರಾಕ್ರಮವು ಮಂದಬುದ್ಧಿಯುಳ್ಳ ನಮ್ಮಂತವರಿಗೆ ಅಪಾಯವಿಲ್ಲದೆ

---

* ಇಲ್ಲಿ ನಾಣಿಲ್ಲದ ಎರಡು ಧನುಸ್ಸುಗಳೆಂದರೆ ಹುಬ್ಬುಗಳೆಂದೂ, ಬಾಣಗಳೆಂದರೆ ಕಣ್ಣುಗಳೆಂದೂ ಭಾವವು.

ಕ್ಷೇಮವನ್ನುಂಟು ಮಾಡಲಿ! ಓ ಮಹರ್ಷಿಚಂದ್ರಮಾ! ಭ್ರಮರಗಳೆಂಬ ನೆವದಿಂದ ನಿನ್ನ ಶಿಷ್ಯರು ನಿನ್ನ ಸುತ್ತಲೂ ಸಾಮಗಾನವನ್ನು ಹೃಸಿಸುವಂತಿದೆ! ನಿನ್ನ ತಲೆಯಿಂದ ಚದರಿದ ಪುಷ್ಪಗಳು ಕೆಳಗೆ ಬಿದ್ದರೂ, ವೇದಶಾಖೆಗಳನ್ನು ಬಿಡದೆ ಹಿಡಿದಿರುವ ಋಷಿಗಳಂತೆ, ಆ ನಿನ್ನ ಶಿಷ್ಯವರ್ಗಗಳು ಅವುಗಳನ್ನು ಬಿಡದೆ ಭಜಿಸುತ್ತಿರುವುವು. ಓ ಮುನೀಶ್ವರಾ! ನಿನ್ನ ಕಾಲಂದುಗೆಗಳೆಂಬ ತಿತ್ತಿರಿಪಕ್ಷಿಗಳ ಮಧುರ ಗಾನವನ್ನು ಸ್ವಲ್ಪಹೊತ್ತಿನವರೆಗೆ ನಮ್ಮ ಕಿವಿಗೆ ಬೀಳಿಸುತ್ತಿರು! ಈ ನಿನ್ನ ನಿತಂಬಗಳ, ಮತ್ತು ತೊಡೆಗಳಮೇಲೆ ಸುತ್ತಿ ಬಳಿದಂತಿರುವ * ಈ ಕದಂಬಪುಷ್ಪಸಮಾನವಾದ ಕಾಂತಿಯು ನಿನಗೆ ಹೇಗೆ ಲಭಿಸಿತು? ಆ ಕಾಂತಿಯಮೇಲೆ ಅಗ್ನಿಚಕ್ರದಂತೆ ವಲಯಾಕಾರವಾಗಿ ಕಾಣುವ ಈ ರೇಖೆಯೆಲ್ಲಿಯದು? ಓ ಮುನೀಂದ್ರಾ! ನಿನ್ನ ನಾರುಮಡಿಯೆಲ್ಲಿ? ಈ ನಿನ್ನ ಎದೆಯಮೇಲೆ ಕಾಣುತ್ತಿರುವ † ಕೊಂಬುಗಳೆರಡೂ ಬಹಳ ಮನೋಹರವಾಗಿರುವುವು! ಬಹಳ ಕೃಶವಾದ ಈ ನಿನ್ನ ಮಧ್ಯಭಾಗವು ಈ ದೊಡ್ಡ ಕೊಂಬುಗಳ ಭಾರವನ್ನು ಹೇಗೆ ತಾನೇ ಹೊರಬಲ್ಲುದು? ಆ ನಿನ್ನ ಕೊಂಬುಗಳಮೇಲೆಬಿದ್ದನನ್ನ ಕಣ್ಣುಗಳು, ಆದರಮೊನೆಯಲ್ಲಿಯೇ ಬಲವಾಗಿ ನಾಟಿಕೊಂಡಿರುವುವು. ಅವುಗಳಿಗೆ ಆ ಸಿಕ್ಕನ್ನು ಬಿಡಿಸಿಕೊಂಡು ಬರುವುದೇ ಅಸಾಧ್ಯವೆಂದು ತೋರುವುದು. ಆಕೊಂಬುಗಳಮೇಲೆ ಬಳಿದಿರುವ ‡ಕೆಂಪು ಬಣ್ಣದ ಕೆಸರು, ಈನನ್ನ ಆಶ್ರಮಪ್ರದೇಶವೆಲ್ಲವನ್ನೂ ಪರಿಮಳಿಸುತ್ತಿರುವುದಲ್ಲಾ! ಎಲೈ ಮಿತ್ರನೇ! ಒಮ್ಮೆ ನನಗೆ ನಿನ್ನ ವಾಸಸ್ಥಳವನ್ನು ತೋರಿಸಬಾರದೇ? ನಿನ್ನ ಲೋಕದವರೆಲ್ಲರಿಗೂ ನಿನ್ನಂತೆಯೇ ಎದೆಯಮೇಲೆ ನಮ್ಮಂತವರ ಮನಸ್ಸನ್ನು ಕಲಗಿಸತಕ್ಕ ಕೊಂಬುಗಳಿರಬಹುದಲ್ಲವೇ? ಮತ್ತು ಇವರೆಲ್ಲರಿಗೂ ನಿನ್ನಂತೆಯೇ ಮುಖದಲ್ಲಿ ಈ ಮಧುರಾಲಾಪವೂ, ಈ ವಿಲಾಸವೂ, ಈ ಅಧರಾಮೃತವೂ ಇರಬಹುದಲ್ಲವೇ? ಓ ಮುನೀಂದ್ರಾ! ನಿನ್ನ ಲೋಕದವರು ದೇಹಪೋಷಣಕ್ಕಾಗಿ ತಿನ್ನುವ ಆಹಾರವಾವುದು! ನೋಡಿದರೆ ನೀವು ಆಹಾರವಿಲ್ಲದೆಯೇ ಜೀವಿಸುವಂತೆಯೂ ತೋರುವುದು! ನಿನ್ನ ಮುಖದಿಂದ ಹೊರಡುವ ಸುಗಂಧವು ಅಪೂರ್ವವಾಗಿರುವುದು. ವಿಷ್ಣುವಿಗಿರುವಂತೆ ನಿನ್ನ ಕಿವಿಯಲ್ಲಿರುವ ಮಕರಕುಂಡಲಗಳನ್ನು ನೋಡಿದರೆ, ನೀನೇ ವಿಷ್ಣುಕಲೆಯಂತೆ

---

* ಇಲ್ಲಿ ಆಕೆಯು ಉಟ್ಟಿದ್ದ ದುಕೂಲವನ್ನು ಕದಂಬಕಾಂತಿಯೆಂದು ಭ್ರಮಿಸುವುದಾಗಿ ತಿಳಿಯಬೇಕು.

† ಕೊಂಬುಗಳೆಂದರೆ ಸ್ತನಗಳೆಂದು ಭಾವವು.

‡ ಇಲ್ಲಿ ಕೆಂಪುಬಣ್ಣದ ಕೆಸರಿಂದರೆ ಸ್ತನದಮೇಲಿನ ಕುಂಕುಮಲೇಪನವೆಂದು ತಿಳಿಯಬೇಕು.

ತೋರುವೆ! ಮೊನಿನಂತಿರುವ ನೇತ್ರಗಳಿಂದಲೂ, ಹಂಸಪಙ್ಕ್ತಿಯಂತಿರುವ ದಂತ ಪಙ್ಕ್ತಿಯಿಂದಲೂ,ಭ್ರಮರದಂತಿರುವ ಕುರುಳುಗಳಿಂದಲೂ ಕೂಡಿದ ನಿನ್ನ ಮುಖವು, ತಾವರೆಗೊಳವನ್ನು ಹೋಲುತ್ತಿರುವುದು. ನೀನು ನಿನ್ನ ಕೈಯಿಂದ ಹೊಡೆಯುವ ಈ ಚೆಂಡು, ತಾನು ಅತ್ತಿತ್ತ ಪುಟಹಾರುವಹಾಗೆಲ್ಲಾ, ನಿನ್ನ ರೂಪಕ್ಕೆ ಮರುಳು ಗೊಂಡ ನನ್ನ ಕಣ್ಣುಗಳನ್ನೂ ಪುಟಹಾರಿಸುತ್ತಿರುವುದು. ಈ ಸಂಭ್ರಮದಲ್ಲಿ ಬಿಚ್ಚಿಹೋದ ನಿನ್ನ ತಲೆಕೂದಲನ್ನೂ ನೀನು ಕಾಣೆಯಾ? ಧೂರ್ತನಾದ ಈ ವಾಯುವು ನಿನ್ನ ನಡುಗಂಟನ್ನು ಸಡಿಲಿಸುತ್ತಿರುವುದೂ ನಿನಗೆ ತಿಳಿಯದೆ ಹೋಯಿತೇ? ಓ ತಾಪಸೋತ್ತಮಾ! ತಪಸ್ವಿಗಳಿಗೆ ತಪೋವಿಘ್ನವನ್ನುಂಟುಮಾಡ ತಕ್ಕ ಈ ನಿನ್ನರೂಪವನ್ನು, ನೀನುಯಾವ ತಪೋಬಲದಿಂದಸಂಪಾದಿಸಿದೆ? ಮಿತ್ರಾ! ನನ್ನೊಡನೆ ನೀನೂ ಇಲ್ಲಿ ತಪಸ್ಸುಮಾಡುತ್ತಿರಬಾರದೇ? ಬ್ರಹ್ಮನು ನನ್ನ ತಪಸ್ಸಿಗೆ ಮೆಚ್ಚಿ, ನನ್ನ ಸಹಾಯಕ್ಕಾಗಿಯೇ ನಿನ್ನನ್ನು ಕಳುಹಿಸಿರಬಹುದಲ್ಲವೇ? ಓ ಬ್ರಾಹ್ಮಣೋತ್ತಮಾ! ನಿನ್ನಲ್ಲಿ ನಾಟಿದ ನನ್ನ ಮನಸ್ಸೂ, ಕಣ್ಣುಗಳೂ ಹಿಂತಿರುಗಿ ಬಾರದಿರುವುವು. ಆದುದರಿಂದ ದೈವಿಕವಾಗಿ ಕೈಗೆ ಸಿಕ್ಕಿದ ನಿನ್ನನ್ನು ನಾನು ಬಿಡಲಾರೆನು. ಓ ಚಾರುಶೃಂಗಿ! ನಿನ್ನ ಮನಸ್ಸನ್ನು ನನಗೆ ವಶಮಾಡು! ನಿನ್ನ ಸಖಿಯರೂ ನನಗೆ ಅನುಕೂಲರಾಗಿಯೇ ವರ್ತಿಸಲಿ!" ಎಂದನು. ಎಲೈ ಪರೀಕ್ಷಿದ್ರಾಜನೇ! ಹೀಗೆ ಅಗ್ನೀಧ್ರನು ಆಕೆಯ ರೂಪಕ್ಕೆ ಮರುಳಾಗಿ, ಅನುನಯವಾಕ್ಯಗಳಿಂದ ಆವಳನ್ನು ವಶಮಾಡಿಕೊಂಡನು. ಆಕೆಯೂ ಈ ರಾಜಕುಮಾರನ ರೂಪ, ಶೀಲ, ವಯಸ್ಸು, ವಿದ್ಯೆ, ಔದಾರ್ಯ ಮುಂತಾದ ಗುಣಗಳಿಗೆ ಮೆಚ್ಚಿ, ಅವನೊಡನೆ ಸೇರಿ, ಭೂಸ್ವರ್ಗದಂತೆ ಸಕಲಸುಖಾಸ್ಪದವಾದ ಜಂಬೂದ್ವೀಪದಲ್ಲಿ, ಲಕ್ಷೋಪ ಲಕ್ಷ ಸಂವತ್ಸರಗಳವರೆಗೆ ಸಮಸ್ತ ಭೋಗಗಳನ್ನೂ ಅನುಭವಿಸುತ್ತಿದ್ದಳು. ಇವಳಲ್ಲಿ ಅಗ್ನೀಧ್ರನಿಗೆ ನಾಭಿ, ಕಿಂಪುರುಷ, ಹರಿವರ್ಷ, ಇಲಾವೃತ, ರಮ್ಯಕ, ಹಿರಣ್ಮಯ, ಕುರು, ಭದ್ರಾಶ್ವ, ಕೇತುಮಾಲರೆಂಬ ಒಂಭತ್ತುಮಂದಿ ಮಕ್ಕಳು ಹುಟ್ಟಿದರು. ಪೂರ್ವಚಿತ್ತಿಯು ವರ್ಷವೊಂದಕ್ಕೆ ಒಬ್ಬ ಮಗನಂತೆ ಈ ಒಂಭತ್ತು ಮಕ್ಕಳನ್ನೂ ಹಡೆದು, ಆ ಮಕ್ಕಳನ್ನು ಅರಮನೆಯಲ್ಲಿಯೇ ಬಿಟ್ಟು ತಾನು ಮಾತ್ರ ತಿರುಗಿ ಬ್ರಹ್ಮನ ಸೇವೆಗಾಗಿ ಸತ್ಯಲೋಕಕ್ಕೆ ಹೊರಟುಹೋದಳು. ಆ ಕುಮಾರರೆಲ್ಲರೂ ತಾಯಿಯ ಅನುಗ್ರಹದಿಂದ ಬಾಲ್ಯದಿಂದಲೇ ಬಲಶಾಲಿಗಳಾಗಿದ್ದು, ತಮ್ಮ ತಂದೆಯಿಂದ ತಮಗೆ ಕ್ರಮವಾಗಿ ಹಂಚಿಕೊಡಲ್ಪಟ್ಟ ಜಂಬೂದ್ವೀಪದ ಬೇರೆಬೇರೆ ಭಾಗಗಳನ್ನು ಪಾಲಿಸುತ್ತಬಂದರು. ಹೀಗೆ ಇವರಿಗೆ ವಿಭಾಗಿಸಿಕೊಡಲ್ಪಟ್ಟ ದೇಶಭಾಗಗಳೆಲ್ಲವೂ ಅವರವರ ಹೆಸರಿನಿಂದಲೇ ಪ್ರಖ್ಯಾತಗಳಾಗಿ ವರ್ಷಗಳೆಂದು

ಕರೆಯಲ್ಪಡುವವು. ಪೂರ್ವಚಿತ್ತಿಯು ಬಿಟ್ಟು ಹೋದಮೇಲೆಯೂ, ಅಗ್ನೀಧ್ರನಿಗೆ ಕಾಮಾಸಕ್ತಿಯು ತಪ್ಪದಿದ್ದುದರಿಂದ, ಅವನು ಅವಳನ್ನೇ ಧ್ಯಾನಿಸುತ್ತ, ತಿರುಗಿ ಅವಳೊಡನೆ ಸುಖಿಸಬೇಕೆಂಬ ಆಸೆಯಿಂದ, ಅದಕ್ಕಾಗಿ ಅನೇಕಕರ್ಮಗಳನ್ನು ನಡೆಸುತ್ತಿದ್ದನು. ಪಿತೃದೇವತೆಗಳ ಪ್ರೀತಿಗಾಗಿ ಮಾಡಿದ ಆ ಕರ್ಮಗಳಿಂದ ಅವನಿಗೆ ಪಿತೃಲೋಕವೇ ಪ್ರಾಪ್ತವಾಯಿತು. ಅಗ್ನೀಧ್ರನು ಲೋಕಾಂತರನನ್ನು ಹೊಂದಿದ ಮೇಲೆ, ಅವನ ಒಂಭತ್ತುಮಂದಿಮಕ್ಕಳೂ. ಕ್ರಮವಾಗಿ ಮೇರುವಿನ ಕುಮಾರಿಯರಾದ, ಮೇರುದೇವಿ, ಪ್ರತಿರೂಪೆ, ಉದಗ್ರದಂಷ್ಟ್ರೆ, ಲತೆ, ರಮ್ಯೆ, ಶ್ಯಾಮೆ, ನಾರಿ, ಭದ್ರೆ, ದೇವವೀತಿಯೆಂಬ ಒಂಭತ್ತು ಕನ್ಯೆಯರನ್ನು ವಿವಾಹಮಾಡಿಕೊಂಡು ಸುಖದಿಂದಿದ್ದರು. ಇಲ್ಲಿಗೆ ಎರಡನೆಯ ಅಧ್ಯಾಯವು.

---

## ಅಗ್ನೀಧ್ರನ ಮಗನಾದ ನಾಭಿರಾಜನ ವೃತ್ತಾಂತವು. ನಾಭಿರಾಜನಿಗೆ ಭಗವಂತನು ಪ್ರತ್ಯಕ್ಷನಾದುದು.

ಆಮೇಲೆ ನಾಭಿಯು ತನಗೆ ಸಂತಾನವಿಲ್ಲದುದರಿಂದ, ಪುತ್ರಾರ್ಥಿಯಾಗಿ, ತನ್ನ ಭಾರ್ಯೆಯಾದ ಮೇರುದೇವಿಯೊಡಗೂಡಿ, ಯಜ್ಞಗಳ ಮೂಲಕವಾಗಿ ಯಾಗಾರಾಧ್ಯನಾದ ಪರಮಪುರುಷನನ್ನು ಶ್ರದ್ಧೆಯಿಂದಾರಾಧಿಸುತ್ತಿದ್ದನು. ಹೀಗೆ ನಾಭಿರಾಜನು ಶುದ್ಧಮನಸ್ಸಿನಿಂದಲೂ, ಶ್ರದ್ಧೆಯಿಂದಲೂ, ವಿಷ್ಣುಪ್ರೀತ್ಯರ್ಥವಾಗಿ ಅಗ್ನಿಷ್ಟೋಮವೆಂಬ ಯಾಗವನ್ನಾರಂಭಿಸಿ, ಅದಕ್ಕೆ ಅಂಗಭೂತಗಳಾದ ಪ್ರವರ್ಗ್ಯಗಳೆಂಬ ಕರ್ಮಗಳನ್ನು ನಡೆಸುತ್ತಿದ್ದನು. ಹೋಮದ್ರವ್ಯಗಳು, ವಿಧ್ಯುಕ್ತವಾದ ಯಜ್ಞಭೂಮಿ, ನಿರ್ದುಷ್ಟವಾದ ಕಾಲ, ಶುದ್ಧವಾದ ಯಜ್ಞಮಂತ್ರಗಳು, ಸಮರ್ಥರಾದ ಋತ್ವಿಕ್ಕುಗಳು, ಭೂರಿದಕ್ಷಿಣೆ, ಶಾಸ್ತ್ರೋಕ್ತವಾದ ಅನುಷ್ಠಾನಗಳು, ಈ ಏಳುಬಗೆಯ ಸಾಧನಗಳಲ್ಲಿ, ಯಾವಭಾಗದಲ್ಲಿಯೂ ಲೋಪವಿಲ್ಲದೆ ಎಲ್ಲವೂ ಸಮರ್ಪಕವಾಗಿದ್ದರೂ, ಇಂತಹ ಯಜ್ಞಗಳಿಗೆ ದುರ್ಲಭನಾದ ಭಗವಂತನು, ತನ್ನ ಭಕ್ತನಾದ ಈ ನಾಭಿರಾಜನಲ್ಲಿ ಪೂರ್ಣವಾತ್ಸಲ್ಯವುಳ್ಳವನಾಗಿ, ಅವನ ಕೋರಿಕೆಯನ್ನು ಕೈಗೂಡಿಸಬೇಕೆಂಬ ಸಂಕಲ್ಪದಿಂದ, ಸುಂದರಾವಯವಗಳುಳ್ಳವನಾಗಿಯೂ, ಮನಸ್ಸಿಗೂ ಕಣ್ಣಿಗೂ ಅತ್ಯಾನಂದಕರವಾಗಿಯೂ, ಅಪ್ರಾಕೃತವಾಗಿಯೂ ಇರುವ ತನ್ನ ದಿವ್ಯಮಂಗಳವಿಗ್ರಹದೊಡನೆ ಅವನ ಕಣ್ಣಿಗೆ ಕಾಣಿಸಿಕೊಂಡನು. ಆ ಭಗವಂತನ ದಿವ್ಯಾದ್ಭುತಸ್ವರೂಪವನ್ನು ಕೇಳಬೇಕೇ? ಅತ್ಯಂತಪ್ರಕಾಶವಿಶಿಷ್ಟವಾದ

ದೇಹಕಾಂತಿ! ಅದರಮೇಲೆ ಸುವರ್ಣಮಯವಾದ ಪೀತಾಂಬರವೆಂಬ ಪಟ್ಟಿಮಡಿ! ನೀಡಿದ ನಾಲ್ಕುಭುಜಗಳು! ಆ ನಾಲ್ಕುಭುಜಗಳಲ್ಲಿಯೂ ಕ್ರಮವಾಗಿ ಶಂಖಚಕ್ರ ಗದಾಪದ್ಮಗಳೆಂಬ ನಾಲ್ಕು ದಿವ್ಯಾಯುಧಗಳು! ಎದೆಯಲ್ಲಿ ಶ್ರೀವತ್ಸವೆಂಬ ಮಚ್ಚೆ! ಅದರಪಕ್ಕದಲ್ಲಿ ಕೌಸ್ತುಭಮಣಿ! ತಲೆಯಿಂದ ಪಾದಾಗ್ರದವರೆಗೆ ಸರ್ವಾವಯವ ಗಳಲ್ಲಿಯೂ ಕ್ರಮವಾಗಿ ಕಿರೀಟ, ಕುಂಡಲ, ಹಾರ, ಕೇಯೂರ, ನೂಪುರಗಳೇ ಮೊದಲಾದ ರತ್ನಾಭರಣಗಳು! ಇಂತಹ ದಿವ್ಯಸೌಂದರ್ಯದಿಂದೊಪ್ಪುತ್ತಿರುವ ಭಗವಂತನನ್ನು ಕಂಡೊಡನೆ, ಯಜ್ಞದೀಕ್ಷಿತನಾದ ನಾಭಿರಾಜನೂ, ಆ ಸಭೆಯಲ್ಲಿದ್ದ ಋತ್ವಿಕ್ಕುಗಳೂ, ಸುರೋಹಿತರೂ, ಸಭಾಸದರೂ, ಗೃಹಸ್ಥರೇಮುಂತಾಗಿ ಸಮಸ್ತ ಜನರೂ ಧಿಗ್ಗನೆ ಮೇಲೆದ್ದು, ನಿಧಿಯನ್ನು ಕಂಡ ಬಡವರಂತೆ ಅತ್ಯಾನಂದಭರಿತರಾಗಿ, ಆ ಭಗವಂತನಿಗೆ ನಮಸ್ಕರಿಸಿ ಯಥಾವಿಧಿಯಾಗಿ ಪೂಜಿಸಿದರು. ಮತ್ತು ಅಲ್ಲಿದ್ದವರೆ ಲ್ಲರೂ ಭಗವಂತನನ್ನು ಹೀಗೆಂದು ಸ್ತೋತ್ರಮಾಡುವರು. "ದೇವಾ! ನೀನು ಪೂರ್ಣಕಾಮನಾಗಿದ್ದರೂ ಭಕ್ತರಾದ ನಮ್ಮ ಈ ಅಲ್ಪಸತ್ಕಾರವನ್ನು ಪ್ರೀತಿಯಿಂದ ಸ್ವೀಕರಿಸಬೇಕು. ನಾವು ಮಾಡತಕ್ಕ ಈ ಅಲ್ಪಪೂಜೆಯನ್ನು ಗ್ರಹಿಸಿದಮಾತ್ರಕ್ಕೆ ಅದರಿಂದ ನಿನಗೇನೂ ಕೊರತೆಯುಂಟಾಗಲಾರದು. ಹೇ ಪ್ರಭೂ! ನಿನ್ನ ಗುಣ ಸ್ವಭಾವಗಳು ಅಪಾರವಾಗಿರುವುದರಿಂದ ಅವೆಲ್ಲವನ್ನೂ ಸಂಪೂರ್ಣವಾಗಿ ಸ್ತುತಿಸು ವುದಕ್ಕೆ ಅಲ್ಪಜ್ಞರಾದ ನಮ್ಮಿಂದ ಸಾಧ್ಯವೇ? ಎಂದಿಗೂ ಇಲ್ಲ. ಆದುದರಿಂದ ಈಗ ನಾವು ನಿನ್ನ ಮುಂದೆ ನಿಂತು "ನಮೋ ನಮಃ" ಎಂಬೀ ಎರಡುಪದಗಳನ್ನು ಮಾತ್ರ ಹೇಳಬಲ್ಲೆವೇ ಹೊರತು, ಇದಕ್ಕೆ ಮೇಲೆ ನಮಗೆ ಮಾತಾಡುವುದಕ್ಕೂ ಶಕ್ತಿ ಸಾಲದು! ನಾವು ಹಿರಿಯರಿಂದ ನಿನ್ನ ವಿಷಯವಾಗಿ ಕೇಳಿ ತಿಳಿದಿರುವುದೂ ಇಷ್ಟೇ! ಓ ದೇವಾ! ಪ್ರಕೃತಿಗುಣಗಳಾದ ಶಬ್ದಾದಿವಿಷಯಗಳಲ್ಲಿ ಆಸೆಯುಳ್ಳವ ರಾಗಿ, ಅದರಿಂದ ಕರ್ಮಕ್ಕೆ ಕಟ್ಟುಬಿದ್ದಿರುವ ಯಾವ ಮನುಷ್ಯನು ತಾನೇ, ಪ್ರಕೃತಿ ವಿಲಕ್ಷಣವಾದ ನಿನ್ನ ಸ್ವರೂಪ ಸ್ವಭಾವಗಳನ್ನು ಚೆನ್ನಾಗಿ ತಿಳಿಯಬಲ್ಲನು? ಆದು ದರಿಂದ ಲೋಕದಲ್ಲಿ ಎಷ್ಟೇ ಮಹನೀಯನಾಗಿದ್ದರೂ, ಪಾಪನಿವಾರಕವಾಗಿಯೂ, ಶುಭಕರವಾಗಿಯೂ ಇರುವ ನಿನ್ನ ಗುಣಗಣಗಳಲ್ಲಿ ಲೇಶಮಾತ್ರವನ್ನಲ್ಲದೆ ಸಂಪೂರ್ಣವಾಗಿ ತಿಳಿಯಲಾರನು. ನೀನು. ಹೀಗೆ ಅಪಾರಮಹಿಮೆಯುಳ್ಳವನಾ ಗಿದ್ದರೂ, ಪೂರ್ಣನಾಗಿದ್ದರೂ, ನಿನ್ನ ಭಕ್ತರು ಒಮ್ಮೆ ನಿನ್ನನ್ನು ಗದ್ಗದಸ್ವರದಿಂದ ಸ್ತುತಿಸಿ, ನಿರ್ಮಲತೀರ್ಥವನ್ನಾಗಲೀ, ಒಂದು ಸಣ್ಣಧಾನ್ಯದ ತೆನೆಯನ್ನಾಗಲೀ, ಎಳೇ ಚಿಗುರನ್ನಾಗಲೀ, ಒಂದು ತುಳಸೀದಳವನ್ನಾಗಲೀ, ಕೊನೆಗೆ ಒಂದು ಎಳಗರಿಕೆ ಯನ್ನಾಗಲೀ, ನಿನ್ನ ಮುಂದೆ ತಂದಿಟ್ಟರೆ, ಅದನ್ನೇ ನೀನು ಅತ್ಯಾದರದಿಂದ

ಕೈಕೊಂಡು ಬಹಳವಾಗಿ ಸಂತೋಷಿಸತಕ್ಕವನು. ನಾವು ಇಷ್ಟು ಯಜ್ಞ ಸಂಭಾರ ಗಳನ್ನೊದಗಿಸಿ, ಇಷ್ಟು ಶ್ರಮಪಟ್ಟು ಯಾಗವನ್ನು ನಡೆಸುವುದೂ ನಿನ್ನ ಸಂತೋಷಕ್ಕಾಗಿಯೇ ಹೊರತು, ಅವುಗಳಿಂದ ನಿನಗಾಗಬೇಕಾದ ಹೆಚ್ಚು ಪ್ರಯೋ ಜನವೇನೂ ಇಲ್ಲ. ಓ ನಾಥಾ! ನೀನು ಸ್ವಯಮಾಗಿಯೇ ಸಕಲಪುರುಷಾರ್ಥ ಸ್ವರೂಪನು. ನಿತ್ಯಾನಂದಮಯನು! ನಮ್ಮ ಈ ಆರಾಧನದಿಂದ, ನಿನಗೆ ಯಾವ ಪ್ರಯೋಜನವೂ ಇಲ್ಲದಿದ್ದರೂ, ನಿನಗೆ ಸಂತುಷ್ಟಿಯನ್ನು ಮಾಡುವುದರಮೂಲಕ ವಾಗಿ, ಅದು ನಮಗೇ ಫಲಕಾರಿಯಾಗಬೇಕು. ಓ ಪರಮಪುರುಷಾ! ನಮ್ಮ ಶ್ರೇಯಸ್ಸಿಗೆ ಸಾಧನವಾದ ಉತ್ತಮಪುರುಷಾರ್ಥವಾವುದೆಂಬುದನ್ನೇ ನಾವು ಕಾಣೆವು. ಇಂತಹ ಮೂಢರಾದ ನಮ್ಮಲ್ಲಿಯೂ ನೀನು ಎಣೆಯಿಲ್ಲದ ವಾತ್ಸಲ್ಯವುಳ್ಳ ವನಾದುದರಿಂದ, ನಾವು ನಿನ್ನ ಆರಾಧನವನ್ನು ಪೂರ್ಣವಾಗಿ ಮುಗಿಸುವುದಕ್ಕೆ ಮುಂಚೆಯೇ, ನಮಗೆ ಬೇಕಾದ ಕೋರಿಕೆಗಳನ್ನೂ, ಶುದ್ಧಾತ್ಮಸ್ವರೂಪವೆಂಬ ಮೋಕ್ಷವನ್ನೂ ಕೈಗೂಡಿಸುವುದಕ್ಕಾಗಿ, ನಮ್ಮ ಕಣ್ಣಿಗೆ ಗೋಚರಿಸಿದೆಯಲ್ಲವೇ? ಆಹಾ! ಇದಲ್ಲವೇ ನಿನ್ನ ಭಕ್ತವಾತ್ಸಲ್ಯವು! ಪರಿಪೂರ್ಣನಾಗಿದ್ದರೂ ಅಪೂರ್ಣ ನಾದ ಇತರ ಮನುಷ್ಯನಂತೆ, ನಮ್ಮ ಮುಂದೆ ಬಂದುನಿಂತ ನಿನ್ನ ಸೌಲಭ್ಯವನ್ನು ನಾವೇನೆಂದು ಹೇಳಲಿ! ಓ ಮಹಾತ್ಮಾ! ನೀನು ನಮ್ಮ ರಾಜನಿಗಿಷ್ಟವಾದ ಅಲ್ಪವರ ಗಳನ್ನು ಕೊಡವುದಕ್ಕಾಗಿ ಬಂದವನಾಗಿದ್ದರೂ, ಈ ಯಜ್ಞದಲ್ಲಿ ನೀನು ನಮ್ಮ ಕಣ್ಣೆದಿರಿಗೆ ಗೋಚರಿಸಿದಾಗಲೇ, ಎಲ್ಲಕ್ಕಿಂತಲೂ ಉತ್ತಮವಾದ ವರವನ್ನು ಕೊಟ್ಟಂತಾಯಿತು! ನಮಗೆ ಈ ಅನುಗ್ರಹವೊಂದೇ ಸಾಕು! ವೈರಾಗ್ಯದಿಂದ ಬಲಿತ ತೀವ್ರಧ್ಯಾನವೆಂಬ ಬೆಂಕಿಯಿಂದ, ತಮ್ಮ ಸಮಸ್ತ ಪಾಪಗಳನ್ನೂ ದಹಿಸಿದ ವರಾಗಿಯೂ, ತಮ್ಮ ಆತ್ಮದಲ್ಲಿಯೇ ಬ್ರಹ್ಮಸಾಕ್ಷಾತ್ಕಾರವನ್ನು ಮಾಡಿ ಆ ಆನಂದ ದಲ್ಲಿರತಕ್ಕವರಾಗಿಯೂ, ನಿನ್ನ ಆರಾಧನದಲ್ಲಿ ನಿರತರಾಗಿಯೂ ಇರುವ ಮಹರ್ಷಿ ಗಳೆಲ್ಲರೂ, ಯಾವಾಗಲೂ ನಿನ್ನ ಗುಣಾನುಭವದಲ್ಲಿಯೇ ಇರತಕ್ಕವರು! ನಿನ್ನ ಗುಣಕೀರ್ತನವೇ ಉತ್ತಮಶ್ರೇಯಸ್ಸನ್ನು ಕೈಗೂಡಿಸುವಾಗ, ಇನ್ನು ನಿನ್ನ ಸಾಕ್ಷಾದ್ದರ್ಶನದಿಂದುಂಟಾಗುವ ಫಲವನ್ನು ಕೇಳಬೇಕೇ? ದೇವಾ! ಎಡವಿಬೀಳುವುದು, ಸೀನುವುದು, ಆಕಳಿಸುವುದು, ಮುಂತಾಗಿ ಇನ್ನೂ ಅನೇಕ ದುರವಸ್ಥೆಗಳನ್ನನುಭವಿ ಸುವಾಗಲೂ, ಜ್ವರದಲ್ಲಿಯೂ, ಮರಣಾವಸ್ಥೆಯಲ್ಲಿಯೂ ಪ್ರಜ್ಞೆತಪ್ಪಿದಾಗಲೂ, ನಮಗೆ, ಸಕಲಪಾಪನಿವಾರಕಗಳಾಗಿಯೂ, ಸಕಲಕಲ್ಯಾಣಗುಣದ್ಯೋತಕಗಳಾ ಗಿಯೂ ಇರುವ ನಿನ್ನ ನಾಮಗಳು ಉಚ್ಚಾರಣವಿಷಯಗಳಾಗುತ್ತಿರಲಿ! ಓ ವರದಾ! ದರಿದ್ರನು ಧನಾಧಿಪತಿಯಾದ ಕುಬೇರನಲ್ಲಿಗೆ ಹೋಗಿ ಧಾನ್ಯದ ಹೊಟ್ಟನ್ನು

ಯಾಚಿಸುವಂತೆ, ಈ ನಮ್ಮ ರಾಜನು ಸ್ವರ್ಗವನ್ನಾಗಲೀ, ಕೊನೆಗೆ ಮೋಕ್ಷವನ್ನೇ ಆಗಲೀ ಕೊಡುವುದಕ್ಕೆ ಸಮರ್ಥನಾದ ನಿನ್ನಲ್ಲಿ ಅತ್ಯಲ್ಪವಾದ ಸಂತಾನಪ್ರಾಪ್ತಿಯನ್ನಪೇಕ್ಷಿಸಿ, ನಿನ್ನಂತಹ ಪುತ್ರನೊಬ್ಬನನ್ನು ಪ್ರಾರ್ಥಿಸುತ್ತಿರುವನು. ಪುತ್ರ ಸಂತಾನವೇ ತನಗೆ ಪರಮಪುರುಷಾರ್ಥವೆಂದೆಣಿಸುತ್ತಿರುವನು. ಆಹಾ! ಇದೂ ನಿನ್ನ ಮಾಯಾಪ್ರಭಾವವಲ್ಲವೇ? ಮಹಾತ್ಮರ ಪಾದಸೇವೆಯನ್ನು ಮಾಡಿದ ಪುರುಷನೊಬ್ಬನು ಹೊರತು, ಕರ್ತವ್ಯರಾದ ಬೇರೆ ಯಾರೂ ಸನ್ಮಾರ್ಗವನ್ನು ಮರೆಸತಕ್ಕ ಆ ನಿನ್ನ ಮಾಯೆಯನ್ನು ತಿಳಿಯಲಾರರು! ಆ ಮಾಯಾಶಕ್ತಿಯನ್ನು ದಾಟಲಾರರು. ಅಂತಹ ಮಾಯೆಯಿಂದ ಮರೆಸಲ್ಪಟ್ಟು ವಿಷವೇಗಕ್ಕೆ ಸಮಾನವಾದ ಶಬ್ದಾದಿವಿಷಯಗಳಲ್ಲಿ ಬಿದ್ದು ಬುದ್ಧಿಗೆಟ್ಟವರ, ನಿನ್ನಲ್ಲಿ ಇಂತಹ ಅಲ್ಪವರಗಳನ್ನು ಕೋರುವುದರಲ್ಲಿ ಆಶ್ಚರ್ಯವೇನಿದೆ? ಓ ದೇವದೇವಾ! ನಾವಾದರೋ ಈಗ ಅಲ್ಪಫಲವನ್ನೇ ಪುರುಷಾರ್ಥವೆಂದು ಭಾವಿಸಿ, ಅದಕ್ಕಾಗಿ ಉದಾರಚರಿತ್ರನಾದ ನಿನ್ನನ್ನು ಇಲ್ಲಿಗೆ ಬರಮಾಡಿಕೊಂಡೆವು. ಉತ್ಕೃಷ್ಟವರಗಳನ್ನು ಕೊಡಬಲ್ಲವನಾದ ನಿನ್ನನ್ನು, ನಾವು ಈ ಅಲ್ಪಕಾರ್ಯಕ್ಕಾಗಿ ಕರೆಸಿದರೂ, ರಾಜನು ನಿನಗೆ ಸಮಾನನಾದ ಪುತ್ರನನ್ನೇ ಪ್ರಾರ್ಥಿಸುವನಾದುದರಿಂದ, ಇದು ನಿನಗೆ ಮೇಲ್ಮೆಯೇ ಹೊರತು ಅವಮಾನಕರವಲ್ಲ" ಎಂದರು. ಹೀಗೆ ಆ ಸಭಾಸದರೆಲ್ಲರೂ ನಾಭಿರಾಜನೊಡನೆ ಭಗವಂತನ ಪಾದಗಳನ್ನು ಹಿಡಿದು ನಮಸ್ಕರಿಸಲು, ಭಗವಂತನು ದಯಾದೃಷ್ಟಿಯಿಂದ ಅವರನ್ನು ನೋಡಿ "ಎಲೈ ಮಹರ್ಷಿಗಳಿರಾ! ನೀವು ಈ ರಾಜನ ನಿಮಿತ್ತವಾಗಿ ದುರ್ಲಭವಾದ ವರವನ್ನು ಕೇಳುತ್ತಿರುವಿರಿ! ಇವನಲ್ಲಿ ನನಗೆ ಸಮಾನನಾದ ಪುತ್ರನು ಹುಟ್ಟಬೇಕೆಂದು ಕೇಳಿದಿರಲ್ಲವೇ? ಲೋಕದಲ್ಲಿ ನನಗೆ ನಾನೇ ಸಮಾನನೇ ಹೊರತು ನನಗೆ ಸಾಟಿಯಾದವನು ಬೇರೊಬ್ಬನಿಲ್ಲ! ಜ್ಞಾನಿಗಳಾದ ನೀವು ಈ ವಿಷಯವನ್ನು ತಿಳಿಯದವರಲ್ಲ! ಸತ್ಯವಾಕ್ಯಗಳಾದ ನೀವೇ ನಿಮ್ಮ ಬಾಯಿಂದ ಸಾಗದ ಕಾರ್ಯವನ್ನು ಕುರಿತು ವರವನ್ನು ಕೇಳಿದುದು ನನಗೆ ಆಶ್ಚರ್ಯವನ್ನುಂಟುಮಾಡುತ್ತಿರುವುದು. ಆದರೂ ಚಿಂತೆಯಿಲ್ಲ. ನಿಮ್ಮಂತಹ ಬ್ರಾಹ್ಮಣರು ನನಗೆ ಮುಖದಂತಿರುವುದರಿಂದ, ನಿಮ್ಮ ಬಾಯಿಂದ ಹೊರಟ ಮಾತು ಸುಳ್ಳಾಗಬಾರದು. ಈ ಕಾರಣಕ್ಕಾಗಿ ನಾಭಿರಾಜನ ಪತ್ನಿಯಾದ ಈ ಮೇರುದೇವಿಯಲ್ಲಿ ನನ್ನ ಅಂಶದಿಂದ ನಾನೇ ಅವತರಿಸುವೆನು" ಎಂದನು. ಮೇರುದೇವಿಯೂ ಕೇಳುತ್ತಿದ್ದ ಹಾಗೆಯೇ ಭಗವಂತನು ರಾಜನಮುಂದೆ ಈ ಮಾತನ್ನು ಹೇಳಿ, ಅಂತರ್ಧಾನವನ್ನು ಹೊಂದಿದನು. ತಾನು ನಾಭಿರಾಜನಿಗೆ ಅನುಗ್ರಹಿಸಿ ಕೊಟ್ಟವರವನ್ನು ನೆರವೇರಿಸುವುದಕ್ಕಾಗಿ ಸ್ವಲ್ಪಕಾಲದೊಳಗಾಗಿಯೇ ಮೇರುದೇವಿಯ

ಗರ್ಭದಲ್ಲಿ ಬೆಳೆದನು. ಲೋಕದಲ್ಲಿ ಜ್ಞಾನಿಗಳಾಗಿಯೂ, ದಿಗಂಬರರಾಗಿಯೂ, ಬ್ರಹ್ಮಚಾರಿಗಳಾಗಿಯೂ ಇರುವ ಋಷಿಗಳಿಗೆ, ಧರ್ಮಬೋಧೆಯನ್ನು ಮಾಡ ಬೇಕೆಂಬ ಉದ್ದೇಶದಿಂದ ಕೇವಲ ಸತ್ವಪ್ರಧಾನವಾದ ಶರೀರವನ್ನವಲಂಬಿಸಿ, ನಾಭಿ ರಾಜನ ಪುತ್ರನಾಗಿ ಹುಟ್ಟಿದನು. ಓ ಪರೀಕ್ಷಿದ್ರಾಜಾ! ಇದೇ ಆ ಭಗವಂತನ ಋಷಭಾವತಾರವು. ಇಲ್ಲಿಗೆ ಮೂರನೆಯ ಅಧ್ಯಾಯವು.

---

## ಋಷಭಾವತಾರಚರಿತ್ರವು.

ಪರೀಕ್ಷಿದ್ರಾಜನೇ ಕೇಳು! ಹುಟ್ಟಿದಾಗಲೇ ಈ ಶಿಶುವಿನಲ್ಲಿ ಭಗವಂತನ ಲಕ್ಷಣಗಳೆಲ್ಲವೂ ಕಾಣುತ್ತಿದ್ದುವು. ಮತ್ತು ಆ ಶಿಶುವು ದಿನದಿನಕ್ಕೆ ಬೆಳೆಯುತ್ತ ಬಂದಹಾಗೆಲ್ಲಾ ಸಮಸ್ತ ಪ್ರಾಣಿಗಳಲ್ಲಿಯೂ ಸಮಬುದ್ಧಿ, ಇಂದ್ರಿಯನಿಗ್ರಹ, ವಿರಕ್ತಿ, ಎಲ್ಲರನ್ನೂ ಅಡಗಿಸಿ ಆಳತಕ್ಕ ಪ್ರಭುಶಕ್ತಿ, ಯಾವವಿಷಯದಲ್ಲಿಯೂ ಕೊರತೆಯಿಲ್ಲದ ಮಹಾವಿಭೂತಿ, ಇವೇ ಮೊದಲಾದ ಗುಣಗಳಿಂದ ಅವನ ಮಹಿಮೆಯು ಕ್ರಮಕ್ರಮವಾಗಿ ಬೆಳಗುತ್ತಬಂದಿತು. ಈಕುಮಾರನನ್ನು ಕಂಡು, ಮಂತ್ರಿ ಮೊದಲಾದ ರಾಜಾಂಗದವರೂ, ಪ್ರಜೆಗಳೂ, ಬ್ರಾಹ್ಮಣರೂ, ಭೂಮಂಡಲವನ್ನಾಳುವುದಕ್ಕೆ ಅವನೇ ಇರಬೇಕೆಂದು ಹಾರೈಸುತ್ತಿದ್ದರು. ಹೀಗೆ ಆ ರಾಜಕುಮಾರನು ಸತ್ವಗುಣಪ್ರಧಾನವಾದ ದೇಹದಿಂದಲೂ, ಉತ್ತಮಗುಣದಿಂದಲೂ, ಪ್ರಶಸ್ತವಾದ ಕೀರ್ತಿಯಿಂದಲೂ, ಇಂದ್ರಿಯಬಲದಿಂದಲೂ, ದೇಹಶಕ್ತಿಯಿಂದಲೂ, ಭಾಗ್ಯದಿಂದಲೂ, ಶೌರ್ಯೌದಾರ್ಯವೀರ್ಯಗಳಿಂದಲೂ, ಎಲ್ಲರನ್ನೂ ಮೀರಿದ ಮಹಾಮಹಿಮೆಯುಳ್ಳವನಾಗಿದ್ದುದನ್ನು ನೋಡಿ, ಅವನ ತಂದೆಯಾದ ನಾಭಿರಾಜನು ಅವನಿಗೆ ಋಷಭನೆಂದು ಹೆಸರಿಟ್ಟನು. ಇಂದ್ರನು ಈ ಋಷಭನ ಗುಣಾತಿಶಯವನ್ನು ನೋಡಿ ಸಹಿಸಲಾರದೆ, ಅವನೊಡನೆ ವಿರೋಧಿಸಿ, ಕೆಲವು ಕಾಲದವರೆಗೆ ಅವನ ದೇಶದಲ್ಲಿ ಮಳೆಯನ್ನೇ ಸುರಿಸದಿದ್ದನು. ಯೋಗೀಶ್ವರನಾದ ಋಷಭನು, ಇದನ್ನು ತಿಳಿದು, ಇಂದ್ರನ ಅಸೂಯೆಗಾಗಿ ತನ್ನಲ್ಲಿ ತಾನೇ ನಗುತ್ತ, ಅಜನಾಭವೆಂಬ ತನ್ನ ರಾಜ್ಯದಲ್ಲಿ ಸ್ವಶಕ್ತಿಯಿಂದಲೇ ಬೇಕಾದಷ್ಟು ಸುವೃಷ್ಟಿಯನ್ನು ಕರೆದನು. ಇತ್ತಲಾಗಿ ನಾಭಿರಾಜನು, ತನ್ನ ಆಸೆಗೆ ತಕ್ಕಂತೆ ಈ ಸುಪುತ್ರನನ್ನು ಪಡೆದಮೇಲೆ, ಸಾಕ್ಷಾದ್ಭಗವಂತನೇ ತನ್ನಲ್ಲಿ ಅವತರಿಸುವುದನ್ನು ಕಾಣದೆ, ಅವನನ್ನು ತನ್ನ ಮಗನೆಂದೇ

ಭಾವಿಸಿ, ಮಹಾನಂದದಲ್ಲಿ ಮುಳುಗಿದ್ದನು. ಹೀಗೆ ಭಗವನ್ಮಾಯೆಯಿಂದ ಮೋಹಿತವಾದ ಮನಸ್ಸುಳ್ಳ ನಾಭಿರಾಜನು, ಮನುಷ್ಯರೂಪದಿಂದ ತನ್ನಲ್ಲಿ ಪುತ್ರನಾಗಿ ಹುಟ್ಟಿದ ಆ ಪರಮಪುರುಷನನ್ನು ಪುತ್ರಭಾವದಿಂದ ನೋಡಿನೋಡಿ ಹಿಗ್ಗುತ್ತ, ಸಂತೋಷದಿಂದ ಕುಗ್ಗಿದಕಂಠವುಳ್ಳವನಾಗಿ "ಅಪ್ಪ, ಮಗು!" ಎಂದು ಆಗಾಗ ಕೂಗಿ ಕರೆಯುತ್ತಿದ್ದನು. ಪಟ್ಟಣದ ಜನಗಳೂ, ಪ್ರಜೆಗಳೂ ದೇಶವಾಸಿಗಳೂ ತನ್ನ ಮಗನಲ್ಲಿ ಬಹಳ ಅನುರಕ್ತರಾಗಿರುವುದನ್ನು ತಿಳಿದು, ನಾಭಿರಾಜನು ತನ್ನ ರಾಜ್ಯವನ್ನು ಪುತ್ರನಿಗೊಪ್ಪಿಸಿ, ಲೋಕದಲ್ಲಿ ವರ್ಣಾಶ್ರಮಧರ್ಮಗಳನ್ನು ಚೆನ್ನಾಗಿ ಕಾಪಾಡುತ್ತ ಬರುವಂತೆ ನಿಯಮಿಸಿ, ಅವನಿಗೆ ಪಟ್ಟಾಭಿಷೇಕವನ್ನೂ ನಡೆಸಿದನು. ಆ ಮೇಲೆ ತನ್ನ ದೇಶದಲ್ಲಿರುವ ಬ್ರಾಹ್ಮಣರ ವಶಕ್ಕೆ ಆ ಪುತ್ರನನ್ನೊಪ್ಪಿಸಿ, ತನ್ನ ಪತ್ನಿಯಾದ ಮೇರುದೇವಿಯೊಡನೆ ಬದರಿಕಾಶ್ರಮಕ್ಕೆ ಹೊರಟನು. ವಿಶಾಲವಾದ ಆ ಆಶ್ರಮಪ್ರದೇಶದಲ್ಲಿ ನರನಾರಾಯಣ ರೂಪದಿಂದಿರುವ ಷಡ್ಗುಣಪರಿಪೂರ್ಣನಾದ ವಾಸುದೇವನನ್ನು ತಪಸ್ಸಿನಿಂದಲೂ, ಸಾಂಗವಾದ ಭಕ್ತಿಯೋಗದಿಂದಲೂ ಆರಾಧಿಸಿ, ತನ್ನ ಪ್ರಾರಬ್ಧಕರ್ಮವು ತೀರಿದಮೇಲೆ ಮುಕ್ತಿಯನ್ನೂ ಹೊಂದಿದನು. ಎಲೈ ಪರೀಕ್ಷಿದ್ರಾಜನೇ! ಈ ಕೆಳಗಿನ ಗಾಥೆಗಳಿಂದ ನಾಭಿರಾಜನ ಚರಿತ್ರವು ಎಲ್ಲೆಲ್ಲಿಯೂ ಕೊಂಡಾಡಲ್ಪಡುತ್ತಿರುವುದು. 'ರಾಜರ್ಷಿಯಾದ ನಾಭಿಯ ಚರಿತ್ರವು ಎಣೆಯಿಲ್ಲದುದು. ಅವನಂತೆ ಲೋಕಪ್ರಸಿದ್ಧವಾದ ಕಾರ್ಯವನ್ನು ಯಾವನೂ ನಡೆಸಲಾರನು! ಅತನ ಪರಿಶುದ್ಧವಾದ ಕರ್ಮಗಳಿಂದ ಸಂತುಷ್ಟನಾದ ಭಗವಂತನು, ಅವನಲ್ಲಿ ತಾನೇ ಪುತ್ರರೂಪದಿಂದವತರಿಸಿದನು.! ಈ ನಾಭಿಯಂತೆ ಬ್ರಾಹ್ಮಣಪ್ರಿಯನಾಗಿ, ಅವರನ್ನು ವಿಶ್ವಾಸದಿಂದ ಕಾಪಾಡತಕ್ಕವನು ಬೇರೆ ಯಾವನೂ ಇರಲಾರನು. ಈತನ ಯಾಗದಲ್ಲಿ ಬ್ರಾಹ್ಮಣರೆಲ್ಲರೂ ಅನೇಕಮಂಗಳವಸ್ತುಗಳಿಂದ ಪೂಜಿತರಾಗಿ, ತಮ್ಮ ಮಂತ್ರಬಲದಿಂದ ಯಜ್ಞಪತಿಯಾದ ಪರಮಪುರುಷನನ್ನು ಸಾಕ್ಷಾತ್ತಾಗಿ ಯಜ್ಞಶಾಲೆಗೆ ಕರೆತರಿಸಿ ಅತನ ಕಣ್ಣಿಗೆ ಕಾಣಿಸಿದರು" ರಾಜೇಂದ್ರಾ! ಇದೇ ಆ ಶ್ಲೋಕಾರ್ಥವು. ಇನ್ನು ಆ ಋಷಭದೇವನ ಚರಿತ್ರವನ್ನು ವಿವರಿಸುವೆನು ಕೇಳು! ನಾಭಿರಾಜನು ಮುಕ್ತಿಯನ್ನು ಹೊಂದಿದ ಮೇಲೆ, ಋಷಭನು ತನ್ನ ಆಳ್ವಿಕೆಗೊಳಪಟ್ಟ ಭೂಭಾಗವೇ ಸ್ವರ್ಗಮೋಕ್ಷಗಳನ್ನು ಸಾಧಿಸತಕ್ಕಸತ್ಕರ್ಮಗಳಿಗೆಲ್ಲಾ ಉತ್ತಮಸ್ಥಾನವೆಂಬುದನ್ನು ತಿಳಿದು, ತನ್ನ ಪ್ರಜೆಗಳೂ ಹಾಗೆಯೇ ನಡೆಯಬೇಕೆಂಬುದಕ್ಕಾಗಿ, ತಾನು ಸರ್ವಜ್ಞನಾಗಿದ್ದರೂ ಕೆಲವು ಕಾಲದನಂತರ ಗುರುಕುಲವಾಸವನ್ನು ಮಾಡುತ್ತಿದ್ದನು. ಆಮೇಲೆ ಆ ಆಚಾರ್ಯರ ಅನುಮತಿಯಿಂದ ಗೃಹಸ್ಥಾಶ್ರಮಧರ್ಮಗಳನ್ನೂ ನಡೆಸುತ್ತ ಬಂದನು. ಶಾಸ್ತ್ರ

ಗಳಲ್ಲಿ ವಿಧಿಸಲ್ಪಟ್ಟ ಶ್ರೌತಸ್ಮಾರ್ತ ರೂಪಗಳಾದ ಪ್ರವೃತ್ತಿನಿವೃತ್ತಿ ಕರ್ಮಗಳೆರಡನ್ನೂ ಕ್ರಮವಾಗಿ ನಡೆಸುತ್ತಿದ್ದನು. ಹೀಗೆ ಋಷಭರೂಪದಿಂದವತರಿಸಿದ ಆ ಭಗವಂತನು, ತಾನು ಸರ್ವಜ್ಞನಾಗಿದ್ದರೂ, ಗುರುಕುಲವಾಸವನ್ನು ಮಾಡಿ, ಪೂರ್ಣಕಾಮನಾಗಿದ್ದರೂ ಶ್ರದ್ಧೆಯಿಂದ ಕರ್ಮಗಳನ್ನು ನಡೆಸುತ್ತ, ಆ ನೆವದಿಂದ ತನ್ನ ದೇಶದ ಪ್ರಜೆಗಳೆಲ್ಲರಿಗೂ ಸನ್ಮಾರ್ಗವನ್ನು ತೋರಿಸುತ್ತಿದ್ದನು. ಆ ಮೇಲೆ ದೇವೇಂದ್ರನು ತನಗೆ ಪ್ರೀತಿಯಿಂದ ಕೊಟ್ಟ ಜಯಂತಿಯೆಂಬ ಕನ್ಯೆಯನ್ನು ವಿವಾಹ ಮಾಡಿಕೊಂಡು, ಅವಳಲ್ಲಿ ನೂರುಮಂದಿ ಪುತ್ರರನ್ನು ಪಡೆದನು. ಆ ಮಕ್ಕಳಲ್ಲಿ ಹಿರಿಯನಾದ ಭರತನೆಂಬವನು, ಎಣೆಯಿಲ್ಲದ ಗುಣಗಳಿಂದ ಲೋಕಪ್ರಸಿದ್ಧನಾದನು. ಓ ಪರೀಕ್ಷಿದ್ರಾಜಾ! ಈ ಭರತನ ಆಳ್ವಿಕೆಯಿಂದಲೇ ಅಜನಾಭನೆಂಬ ಈ ಭೂಖಂಡಕ್ಕೆ, ಅದುವೊದಲುಗೊಂಡು ಭರತವರ್ಷವೆಂಬ ಹೆಸರುಂಟಾಯಿತು ಮತ್ತು ಆ ನೂರು ಮಕ್ಕಳಲ್ಲಿ ಹತ್ತುಮಂದಿಗೊಬ್ಬನಂತೆ, ಗುಣಗಳಿಂದ ಪ್ರಸಿದ್ಧನಾಗಿ ಪ್ರಧಾನನೆನಿಸಿಕೊಂಡನು. ಮೊದಲನೆಯ ಹತ್ತುಮಂದಿ ಕುಮಾರರಲ್ಲಿ ಭರತನೇ ಪ್ರಧಾನನು. ಅದರಿಂದಾಚೆಗೆ ಹನ್ನೊಂದನೆಯವನು ಕುಶಾವರ್ತನು. ಹೀಗೆಯೇ ಕ್ರಮವಾಗಿ, ಇಲಾವರ್ತ, ಬ್ರಹ್ಮಾವರ್ತ, ಆರ್ಯಾವರ್ತ, ಮಲಯಕೇತು, ಭದ್ರಸೇನ, ಇಂದ್ರಸ್ಪೃಕ್ಕು, ವಿದರ್ಭ, ಕೀಟಕವೆಂಬ ಕುಮಾರರು, ತಮ್ಮ ತಮ್ಮಂದಿರಾದ ಒಂಭತ್ತುಮಂದಿ ಕುಮಾರರಲ್ಲಿ ಪ್ರಮುಖರೆನಿಸಿಕೊಂಡು, ವಿಶೇಷಪ್ರಸಿದ್ಧಿಯನ್ನೂ ಹೊಂದಿದರು. ಬೇರೆ ತೊಂಭತ್ತುಮಂದಿಮಕ್ಕಳಲ್ಲಿ, ಕವಿ, ಹರಿ, ಅಂತರಿಕ್ಷ, ಪ್ರಬುದ್ಧ, ಪಿಪ್ಪಲಾಯನ, ಆವಿರ್ಹೋತ್ರ, ದ್ರಮಿಡ, ಚಮಸ, ಕರಭಾಜನರೆಂಬ ಒಂಭತ್ತುಮಂದಿ ಮಕ್ಕಳು, ಲೋಕದಲ್ಲಿ ಭಗವದ್ಧರ್ಮಗಳನ್ನೇ ಪ್ರಕಾಶಗೊಳಿಸುತ್ತ ತಾವೂ ಅದರಲ್ಲಿ ಅಕ್ಕರೆಯುಳ್ಳವರಾಗಿ, ಮಹಾಭಾಗವತರೆಂದು ಪ್ರಸಿದ್ಧಿಯನ್ನು ಹೊಂದಿದರು. ರಾಜಾ! ಭಗವನ್ನಿಮಿಯನ್ನು ಪ್ರಕಟಿಸತಕ್ಕವಾಗಿಯೂ, ಮನಶ್ಯಾಂತಿಗೆ ಹೇತುವಾಗಿಯೂ ಇರುವ ಅವರ ಚರಿತ್ರವು ಮುಂದೆ ಹನ್ನೊಂದನೆಯ ಸ್ಕಂಧದಲ್ಲಿ, ವಸುದೇವನಾರದಸಂವಾದದಲ್ಲಿ ವಿವರಿಸಲ್ಪಡುವುದು. ಇವರು ಹೊರತು ಉಳಿದ ಎಂಭತ್ತೊಂದುಮಂದಿ ಮಕ್ಕಳೂ ತಂದೆಯಾಜ್ಞೆಯನ್ನು ಮನ್ನಿಸಿ, ಗೃಹಸ್ಥಾಶ್ರಮವನ್ನು ಹಿಡಿದು, ಆ ಆಶ್ರಮಕ್ಕೆ ಬೇಕಾದ ಸಕಲ ಸಂಪತ್ತುಗಳಿಂದಲೂ ಕೂಡಿದವರಾಗಿ, ಸಾಂಗವಾದ ವೇದಾಧ್ಯಯನವನ್ನು ಮಾಡಿ, ಅನೇಕಯಾಗಗಳನ್ನು ನಡೆಸುತ್ತ, ತಮ್ಮ ಸದಾಚಾರದಿಂದ ಬ್ರಾಹ್ಮಣರೆನಿಸಿಕೊಂಡರು. ಆತ್ಮಲಾಭ ಋಷಭರೂಪದಿಂದವತರಿಸಿದ ಭಗವಂತನು, ಕರ್ಮಗಳಿಗೆ ವಶನಾಗದೆ, ಆ ಕರ್ಮಗಳಿಂದ ಸಂಭವಿಸಬಹುದಾದ ಸುಖದುಃಖಗಳಿಗೂ ಈಡಾಗದೆ, ಸರ್ವಸ್ವತಂತ್ರನಾಗಿ

ಕೇವಲಾನಂದಮಯವಾದ ತನ್ನ ಸ್ವರೂಪವನ್ನೇ ಅನುಭವಿಸತಕ್ಕ ಸರ್ವೇಶ್ವರನಾಗಿದ್ದರೂ, ಲೋಕದಲ್ಲಿ ಕಾಲವಶದಿಂದ ಕೆಟ್ಟು ಹೋಗಿರುವ ಧರ್ಮಗಳನ್ನು ತನ್ನ ಆಚರಣೆಯಿಂದ ತಿರುಗಿ ಸ್ಥಾಪಿಸಬೇಕೆಂದೆಣಿಸಿ, ಪ್ರಾಕೃತಮನುಷ್ಯನಂತೆ ಕರ್ಮಗಳನ್ನು ನಡೆಸುತ್ತಬಂದನು. ಸಮಸ್ತಭೂತಗಳಲ್ಲಿಯೂ ಸಮಬುದ್ಧಿಯುಳ್ಳವನಾಗಿ, ರಾಗದ್ವೇಷಾದಿಗಳಿಂದ ಮನಸ್ಸು ಕದಲದೆ, ಸಮಸ್ತ ಪ್ರಾಣಿಗಳಲ್ಲಿಯೂ ಮೈತ್ರಿಯನ್ನೇ ತೋರಿಸುತ್ತಿದ್ದನು ಎಲ್ಲರಲ್ಲಿಯೂ ಕರುಣೆಯುಳ್ಳವನಾಗಿದ್ದನು. ಜನಗಳನ್ನು ಗೃಹಸ್ಥಾಶ್ರಮದಲ್ಲಿ ನಿಯಮಿಸುತ್ತ, ಧರ್ಮಾರ್ಥಕಾಮಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ಸಾಧಿಸುವುದಕ್ಕೆ ಬೇಕಾದ ದಾರಿಗಳಿಲ್ಲವನ್ನೂ ತೋರಿಸಿಕೊಡುತ್ತಿದ್ದನು. ರಾಜೇಂದ್ರಾ! ಲೋಕದಲ್ಲಿ ಹಿರಿಯರ ನಡತೆಯನ್ನನುಸರಿಸಿ ಹೋಗುವುದೇ ಜನಗಳ ಸ್ವಭಾವವು. ಇದರಿಂದ ಪುರುಷಶ್ರೇಷ್ಠನಾದ ಆ ಮಹಾತ್ಮನು, ಯಾವ ಆನುಷ್ಠಾನಗಳನ್ನು ನಡೆಸುತ್ತಿದ್ದನೋ, ಸಮಸ್ತಲೋಕವೂ ಆ ಮಾರ್ಗವನ್ನೇ ಅನುಸರಿಸುತ್ತಿದ್ದುವು. ಮತ್ತು ಅವನು ಸಮಸ್ತಧರ್ಮಗಳನ್ನೂ ಒಳಕೊಂಡಿರುವ ವೇದರಹಸ್ಯಗಳೆಲ್ಲವನ್ನೂ ತಾನು ಬಲ್ಲವನಾಗಿದ್ದರೂ, ಇದನ್ನು ಆಗಾಗ ಬ್ರಾಹ್ಮಣೋತ್ತಮರಿಂದ ಕೇಳಿ ತಿಳಿಯುವಂತೆ ನಟಿಸುತ್ತಿದ್ದನು. ಅನರು ತೋರಿಸಿಕೊಟ್ಟ ದಾರಿಯಲ್ಲಿಯೇ ಹೋಗುತ್ತ, ಸಾವಾಧ್ಯಾಯಗಳಿಂದ ಪ್ರಜೆಗಳನ್ನು ರಕ್ಷಿಸುತ್ತಿದ್ದನು. ಕಾಲ, ದೇಶ, ದ್ರವ್ಯ, ವಯಸ್ಸು, ಶ್ರದ್ಧೆ, ಋತ್ವಿಕ್ಕುಗಳು, ಇನ್ನೂ ಯಾಗಕ್ಕೆ ಬೇಕಾದ ಹಲವು ಬಗೆಯ ಅಂಗಗಳನ್ನೂ ಅನುಸರಿಸಿ, ವಿಧ್ಯುಕ್ತಗಳಾದ ಒಂದೊಂದು ಯಾಗವನ್ನು ನೂರಾವರ್ತಿ ನಡೆಸಿಮುಗಿಸಿದನು ಈ ಋಷಭದೇವನು ಭಾರತವರ್ಷವನ್ನಾಳುತ್ತಿರುವಾಗ, ಅಲ್ಲಿನ ಪ್ರಜೆಗಳಲ್ಲಿ ಪ್ರತಿಯೊಬ್ಬ ಮನುಷ್ಯನೂ ಯಾವಾಗಲೂ, ತನಗೆ ಪ್ರಭುವಾದ ಆತನಲ್ಲಿ ಪೂರ್ಣಭಕ್ತಿಯೊಂದನ್ನು ಹೊರತು, ಬೇರೆ ಯಾವ ಪುರುಷಾರ್ಥವನ್ನೂ ಬಯಸುತ್ತಿರಲಿಲ್ಲ. ಆ ಋಷಭನು ಒಮ್ಮೆ ಭೂಸಂಚಾರವನ್ನು ಮಾಡುತ್ತ, ಬ್ರಹ್ಮಾವರ್ತವೆಂಬ ದೇಶಕ್ಕೆ ಹೋದನು. ಅಲ್ಲಿ ಅನೇಕಬ್ರಹ್ಮರ್ಷಿಗಳು ಸಭೆಸೇರಿದ್ದಾಗ, ಈತನೂ ಆ ಸಭೆಯಲ್ಲಿ ಪ್ರವೇಶಿಸಿ, ಅಲ್ಲಿ ನೆರೆದಿದ್ದವರೆಲ್ಲರೂ ಕೇಳುತ್ತಿರುವಹಾಗೆಯೇ, ತನ್ನಲ್ಲಿ ಭಕ್ತಿಯುಕ್ತರಾಗಿಯೂ, ವಿನೀತರಾಗಿಯೂ ಇರುವ ತನ್ನ ಮಕ್ಕಳನ್ನು ನೋಡಿ, ಅವರಿಗೆ ಹೀಗೆಂದು ಬೋಧಿಸುವನು. ಇಲ್ಲಿಗೆ ನಾಲ್ಕನೆಯ ಅಧ್ಯಾಯವು.

ಋಷಭನು ತನ್ನ ಮಕ್ಕಳಿಗೆ ಮೋಕ್ಷಧರ್ಮವನ್ನುಪದೇಶಿಸಿ, ತಾನು ಪರಮಹಂಸರ ಮಾರ್ಗವನ್ನನುಷ್ಠಿಸಿದುದು.

ಎಲೈ ಪರೀಕ್ಷಿದ್ರಾಜನೇ ಕೇಳು! ಆ ಋಷಭನು ಬ್ರಹ್ಮಸಭೆಯಲ್ಲಿದ್ದ ತನ್ನ ಮಕ್ಕಳನ್ನು ಕುರಿತು, 'ಎಲೈ ಕುಮಾರರೇ! ಈ ಲೋಕದಲ್ಲಿ ಪ್ರಾಣಿಗಳಿಗೆ ಮನುಷ್ಯ ದೇಹವೆಂಬುದು ದುರ್ಲಭವು. ಇದು ಬಹಳ ಕಷ್ಟದಿಂದ ಸಂಪಾದಿಸಿದ ಜನ್ಮವು. ಶಬ್ದಾದಿಭೋಗಗಳನ್ನನುಭವಿಸುವುದಕ್ಕಾಗಿ ಈ ಶರೀರವನ್ನು ಪಯೋಗಿಸಬಾರದು. ತತ್ಕಾಲಕ್ಕೆ ಸುಖದಂತೆ ತೋರಿದರೂ, ಮೊದಲು ಅವುಗಳನ್ನು ಸಂಪಾದಿಸುವುದಕ್ಕಾಗಿ ಎಷ್ಟೋ ಕಷ್ಟಪಡಬೇಕು. ಕೊನೆಗಾಲಕ್ಕೂ ಅದು ದುಃಖರೂಪವಾಗಿಯೇ ಪರಿಣಮಿಸುವುದು. ಆದುದರಿಂದ ಈ ದೇಹವು ಶ್ರಮಸಾಧ್ಯಗಳಾದ ಶಬ್ದಾದಿವಿಷಯಗಳನ್ನನುಭವಿಸುವುದಕ್ಕಾಗಿ ಏರ್ಪಟ್ಟುದಲ್ಲ. ಈ ಕಾಮೋಪಭೋಗಗಳು ಅಮೇಧ್ಯವನ್ನು ತಿನ್ನತಕ್ಕ ಹಂದಿ ನಾಯಿ ಮೊದಲಾದವುಗಳಿಗೂ ಅನುಭವಯೋಗ್ಯವಾಗಿರುವುವು. ಈ ಮನುಷ್ಯದೇಹವನ್ನೂ ಆ ಕಾರ್ಯಕ್ಕಾಗಿಯೇ ಉಪಯೋಗಿಸುವ ಪಕ್ಷದಲ್ಲಿ, ಆ ಹಂದಿ, ನಾಯಿ, ಮೊದಲಾದ ಜನ್ಮಕ್ಕೂ ಇದಕ್ಕೂ ಏನು ತಾರತಮ್ಯವಿರುವುದು? ಆದುದರಿಂದ, ಮಹರ್ಷಿಗಳೂ ಯಾವುದರಿಂದ ಸಂಸಾರವನ್ನು ದಾಟುವರೋ, ಯಾವುದರಿಂದ ಅನಂತವಾದ ಬ್ರಹ್ಮಾನಂದವುಂಟಾಗುವುದೋ, ಭಗವದಾರಾಧನರೂಪವಾದ ಆ ತಪಸ್ಸನ್ನು ಮಾಡುವುದೇ ಮನುಷ್ಯಜನ್ಮವನ್ನೆತ್ತಿದುದಕ್ಕೆ ಸಾರ್ಥಕವಾದ ಕಾರ್ಯವು. ಸಂಸಾರಬಂಧಕ್ಕೆ ಭೋಗಾಪೇಕ್ಷೆಯೂ, ಆ ಭೋಗಕ್ಕೆ ಸ್ತ್ರೀಯರೂ ಹೇಗೆ ಮೂಲವೋ, ಅದರಂತೆ ಮೋಕ್ಷಕ್ಕೆ ಭಗವದುಪಾಸನವೂ, ಆ ಭಗವದುಪಾಸನಕ್ಕೆ ಮಹಾತ್ಮರ ಸೇವೆಯೂ ಮುಖ್ಯೋಪಾಯವಾಗಿರುವುದು. ಸುಖದುಃಖಾದಿಗಳಲ್ಲಿಯೂ ಮನಸ್ಸು ಕಲಗದೆ, ಇಂದ್ರಿಯಗಳೆಲ್ಲವನ್ನೂ ಜಯಿಸಿ, ತಾಳ್ಮೆಯಿಂದಲೂ, ಭೂತದಯೆಯಿಂದಲೂ, ಪರೋಪಕಾರಬುದ್ಧಿಯಿಂದಲೂ ಕೂಡಿದ ಮಹಾತ್ಮರ ಸೇವೆಯನ್ನೇ ಪ್ರಧಾನವಾಗಿಟ್ಟುಕೊಳ್ಳಬೇಕು. ಯಾರು ಸರ್ವೇಶ್ವರನಾದ ನನ್ನನ್ನೇ ಪುರುಷಾರ್ಥವೆಂದು ನಂಬಿರುವರೋ ಹೆಂಡಿರು, ಮಕ್ಕಳು, ನೆಂಟರಿಷ್ಟರು, ಮುಂತಾದ ಪರಿವಾರಗಳಿಂದಲೂ, ಧನದಿಂದಲೂ, ತುಂಬಿದ ದುಃಖಪ್ರಚುರವಾದ ಗೃಹಾದಿಗಳಲ್ಲಿಯೂ, ತಮ್ಮ ದೇಹಧಾರಣವನ್ನೇ ಮುಖ್ಯವಾಗಿ ನೋಡುತ್ತಿರುವ ಸ್ವಜನರಲ್ಲಿಯೂ, ಸ್ವಲ್ಪಮಾತ್ರವೂ ಪ್ರೀತಿಯನ್ನು ತೋರಿಸಲಾರರೋ ಅಂತಹ ಮಹಾತ್ಮರ ಸಹವಾಸದಲ್ಲಿದ್ದರೆ, ಅದರಿಂದ ಭಗವದುಪಾಸನೆಯಲ್ಲಿ ಆಸಕ್ತಿಯೂ, ಅದರಿಂದ ಮುಕ್ತಿಯೂ ಉಂಟಾ

ಗುವುದು. ಲೋಕದಲ್ಲಿ ಜೀವನು, ದೇಹವನ್ನೇ ಆತ್ಮವೆಂದು ಭ್ರಮಿಸಿ, ಇಂದ್ರಿಯ ತೃಪ್ತಿಗಾಗಿ ಮಾಡಬಾರದ ಕಾರ್ಯಗಳೆಲ್ಲವನ್ನೂ ಮಾಡುವನು! ಪೂರ್ವಜನ್ಮದಲ್ಲಿ ತಾನು ಇಂದ್ರಿಯತೃಪ್ತಿಗಾಗಿ ಮಾಡಿದ ಆ ಕರ್ಮಫಲದಿಂದಲೇ ಈಗ ದುಃಖ ಪ್ರಚುರವಾಗಿಯೂ, ಅಶಾಶ್ವತವಾಗಿಯೂ ಇರುವ ಈದೇಹವನ್ನು ಹೊಂದಿರುವನು. ಈ ದೇಹದಲ್ಲಿಯೂ ಅದೇಮಾರ್ಗದಿಂದ ನಡೆಯುತ್ತಿದ್ದರೆ, ಇದರಂತೆಯೇ ಮುಂದೆ ದುಃಖಪ್ರಚುರವಾದ ಮತ್ತೊಂದು ದೇಹವನ್ನು ಹೊಂದಬೇಕಾಗುವುದಲ್ಲವೇ? ಆದುದರಿಂದ ನನಗೆ ಇಂದ್ರಿಯತೃಪ್ತಿಗಾಗಿ ನಡೆಸತಕ್ಕ ಕಾರ್ಯಗಳೊಂದೂ ಯುಕ್ತವಾಗಿ ತೋರಲಿಲ್ಲ. ಮನುಷ್ಯನಿಗೆ ಆತ್ಮಸ್ವರೂಪವನ್ನು ತಿಳಿಯಬೇಕೆಂಬ ಶ್ರದ್ಧೆಯು ಹುಟ್ಟದಿರುವವರೆಗೂ, ಅಜ್ಞಾನವೆಂಬುದು ಅದನ್ನು ಮರೆಸಿಕೊಂಡಿರುವುದು. ಆದುವರೆಗೆ ದೇಹವೇ ಆತ್ಮವೆಂಬ ಭ್ರಾಂತಿಯೂ ಅನುಸರಿಸಿ ಬರುವುದು. ಈ ಭ್ರಾಂತಿಯಿರುವವರೆಗೂ ಇಂದ್ರಿಯಗಳನ್ನು ತೃಪ್ತಿಗೊಳಿಸುವುದಕ್ಕೆ ಬೇಕಾದ ಕಾರ್ಯಗಳಲ್ಲಿಯೇ ಬುದ್ಧಿಯು ಪ್ರವರ್ತಿಸುತ್ತಿರುವುದು! ಹೀಗೆ ಕರ್ಮಗಳಲ್ಲಿ ಬುದ್ಧಿಯು ಪ್ರವರ್ತಿಸುವುದರಿಂದಲೇ ಜೀವನಿಗೆ ತಿರುಗಿ ಶರೀರಸಂಬಂಧವೂ ಉಂಟಾಗುವುದು. ಹೀಗೆ ಜೀವನಿಗೆ ಅವಿದ್ಯಾಸಂಬಂಧದಿಂದ ಕರ್ಮಗಳಲ್ಲಿ ಪ್ರವರ್ತನವೂ, ಅದರಿಂದ ಮೇಲೆ ಮೇಲೆ ಶರೀರಸಂಬಂಧವೂ ಉಂಟಾಗುತ್ತಲೇ ಬರುವುದು. ಆದುದರಿಂದ ಸರ್ವಾಂತರಾತ್ಮನಾದ ನನ್ನಲ್ಲಿ ಭಕ್ತಿಯುಂಟಾಗುವವರೆಗೆ, ಜೀವನಿಗೆ ಶರೀರಸಂಬಂಧವು ತಪ್ಪಿದುದಲ್ಲ. ಆತ್ಮಪರಮಾತ್ಮತತ್ವವನ್ನು ಅನುಸಂಧಿಸುವುದರಲ್ಲಿ ಬಹಳ ಆದರದಿಂದಿದ್ದು, "ಇಂದ್ರಿಯಗಳಿಗೆ ಶಬ್ದಾದಿವಿಷಯಗಳಲ್ಲಿ ಹುಟ್ಟುವ ಆತುರವು, ದೇಹಸಂಬಂಧದಿಂದುಟಾಗುವುದೇ ಹೊರತು ಆತ್ಮನಿಗೆ ಸಹಜವಾದುದಲ್ಲ" ವೆಂದು ತಿಳಿದುಕೊಳ್ಳಬೇಕಾದುದೇ ವಿವೇಕಬುದ್ಧಿಯುಳ್ಳವನ ಕರ್ತವ್ಯವು. ಈ ವಿವೇಕಜ್ಞಾನವು ಹುಟ್ಟುವವರೆಗೆ ಪುರುಷನು, ಆತ್ಮತತ್ವವನ್ನು ತಿಳಿಯದೆ, ಜ್ಞಾನಹೀನನಾಗಿ, ಮೈಥುನಸುಖವೇ ಮುಖ್ಯವಾಗಿ ಉಳ್ಳ ಗೃಹಸ್ಥಾಶ್ರಮದಲ್ಲಿ ಸೇರಿ ಪದರಲ್ಲಿ ಅನೇಕಸಂಕಟಗಳನ್ನನುಭವಿಸುವನು. ಎಲೈ ಕುಮಾರನೇ! ಅನಾದಿಯಾದ ಕರ್ಮವಾಸನೆಯಿಂದ ಜೀವನಿಗೆ ಅಹಂಕಾರ ಮಮಕಾರ ರೂಪವಾದ ಅವಿದ್ಯೆಯುಂಟಾಗುವುದು. ಆದರಿಂದ ಆಧ್ಯಾತ್ಮಿಕಾದಿತಾಪಗಳೂ ಅಂಟಿಬರುವುವು. ಈ ಸುಖದುಃಖಾನುಭವಗಳಿಂದ ಕರ್ಮಗಳು ಕಳೆದು ಹೋಗುತ್ತಿದ್ದರೂ, ಆ ಕರ್ಮಗಳ ವಾಸನೆಯುಮಾತ್ರನಿಶ್ಶೇಷವಾಗಿ ನಿವೃತ್ತವಾಗದೆ, ಅಂಟಿ ಬರುವುದರಿಂದ, ತಿರುಗೆ ಅವಿದ್ಯೆಯೂ, ಆದರಿಂದ ದೇಹಸಂಬಂಧವೂ, ಆದರಿಂದ ಪಾಪಗಳೂ, ಹೀಗೆ ಅನರ್ಥಪರಂಪರೆಯು ಚಕ್ರದಂತೆ ಸುತ್ತಿಸುತ್ತಿಬರುತ್ತಿರುವುದು.

ಎಲೈ ಪುತ್ರರೇ! ಅವಿದ್ಯಾದಿಗಳಿಗೆ ಕಾರಣವಾದ ಈ ಕರ್ಮವಾಸನೆಯು ಹೇಗೆ ಸಂಭವಿಸುವುದೆಂಬುದನ್ನೂ ಹೇಳುವೆನು ಕೇಳಿರಿ. ಸ್ತ್ರೀಪುರುಷರಲ್ಲಿ ಒಬ್ಬರಿಗೊಬ್ಬರ ಪ್ರೇಮವೇ ಅವರಿಬ್ಬರನ್ನೂ ಬೇರೆಬೇರೆ ದೃಢವಾಗಿ ಬಿಗಿಯತಕ್ಕ ಹೃದಯಗ್ರಂಥಿಯೆಂದು ಹೇಳುವರು. ಬಿಚ್ಚುವುದಕ್ಕೆ ಸಾಧ್ಯವಲ್ಲದ ಈ ಮನಸ್ಸಿನ ಗಂಟೇ ಕರ್ಮವಾಸನೆಗೆ ಸ್ಥಾನವಾಗಿರುವುದು. ಈ ಹೃದಯಗ್ರಂಥಿಯಿಂದಲೇ "ತಾನು, ತನ್ನ ಹೆಂಡತಿ, ತನ್ನ ಮಕ್ಕಳು, ತನ್ನ ಮಿತ್ರರು, ತನ್ನ ಬೊಕ್ಕಸ" ವೆಂಬ ಅಹಂಕಾರ ಮಮಕಾರಗಳು ಹುಟ್ಟುವು. ಅವಿದ್ಯಾರೂಪವಾದ ಮಹಾಮೋಹಕ್ಕೆ ಅವಕಾಶವಾಗುವುದು. ಕರ್ಮವಾಸನೆಗೆ ಮುಖ್ಯಾಶ್ರಯವಾಗಿರುವ ಈ ಮನಸ್ಸಿನ ಗಂಟು ಯಾವಾಗ ಸಡಿಲುವುದೋ, ಆಗ ಮನುಷ್ಯನು ಸಂಸಾರದಿಂದ ಮುಕ್ತನಾಗಿ, ಕರ್ಮಕ್ಷಯವನ್ನು ಹೊಂದಿ ಪರಮಪುರುಷನನ್ನು ಸೇರುವನು. ಈ ಗಂಟನ್ನು ಸಡಿಲಿಸುವುದಕ್ಕೆ ಉಪಾಯಗಳಾವುವೆಂಬುದನ್ನು ತಿಳಿಸುವೆನು ಕೇಳಿರಿ. ಶುದ್ಧಾತ್ಮನೂ, ಲೋಕಗುರುವೂ ಆದ ನನ್ನಲ್ಲಿ ಭಕ್ತಿಯನ್ನಿಡುವುದು! ನನ್ನನ್ನೇ ಕನುವರ್ತಿಸುವುದು! ಶಬ್ದಾದಿವಿಷಯಗಳಲ್ಲಿ ವಿರಕ್ತಿ! ಶೀತೋಷ್ಣಾದಿದ್ವಂದ್ವಗಳನ್ನು ಸಹಿಸಿಕೊಳ್ಳುವುದು! ಇಹಲೋಕದಲ್ಲಿಯೂ, ಸ್ವರ್ಗವೇ ಮೊದಲಾದ ಪರಲೋಕಗಳಲ್ಲಿಯೂ ಪ್ರಾಣಿಗಳಿಗೆ ಹೃಸನವೇ ಸಂಭವಿಸುವುದೆಂಬ ನಿಶ್ಚಯಬುದ್ಧಿ! ಹೇಯೋಪಾದೇಯಗಳನ್ನು ತಿಳಿಯಬೇಕೆಂಬ ಆಸೆ! ಉಪವಾಸವೇ ಮೊದಲಾದ ತಪಸ್ಸು! ವ್ಯರ್ಥವಿಷಯಗಳಲ್ಲಿ ಅಭಿಲಾಷೆಯಿಲ್ಲದಿರುವುದು! ತಮ್ಮ ತಮ್ಮ ವರ್ಣಾಶ್ರಮಧರ್ಮಗಳನ್ನು ನನ್ನ ಆರಾಧನರೂಪವಾಗಿಯೇ ನಡೆಸುವುದು! ಯಾವಾಗಲೂ ನನ್ನ ಕಥೆಗಳನ್ನೇ ಕೇಳುತ್ತಿರುವುದು! ಯಾವಾಗಲೂ ನನ್ನ ಭಕ್ತರ ಸಹವಾಸವನ್ನು ಮಾಡುವುದು! ಯಾವಾಗಲೂ ನನ್ನ ಗುಣಗಳನ್ನು ಕೀರ್ತಿಸುವುದು! ಬೇರೆ ಯಾವಪ್ರಾಣಿಗಳಲ್ಲಿಯೂ ವೈರಬುದ್ಧಿಯಿಲ್ಲದಿರುವುದು! ಸಮಸ್ತ ಭೂತಗಳನ್ನೂ ಸಮಬುದ್ಧಿಯಿಂದ ನೋಡುವುದು! ಇಂದ್ರಿಯಗಳನ್ನು ಜಯಿಸುವುದು! ತನ್ನ ದೇಹದಲ್ಲಿ ತಾನೆಂಬ ಬುದ್ಧಿಯನ್ನೂ, ಹೆಂಡಿರು ಮಕ್ಕಳು, ಮನೆ ಮಠ, ಮುಂತಾದುವುಗಳಲ್ಲಿ ತನ್ನದೆಂಬ ಬುದ್ಧಿಯನ್ನೂ ಬಿಟ್ಟುಬಿಡುವುದು, ಎಂದರೆ ಅಹಂಕಾರಮಮಕಾರಗಳನ್ನು ತ್ಯಜಿಸುವುದು, ಪ್ರಕೃತಿಗಿಂತಲೂ ಬೇರೆಯಾದ ಆತ್ಮಸ್ವರೂಪವನ್ನು ತಿಳಿಯುವುದು, ಶುದ್ಧಾಹಾರಗಳನ್ನೇ ಸೇವಿಸುವುದು, ಪ್ರಾಣವನ್ನೂ, ಇಂದ್ರಿಯಗಳನ್ನೂ ಮನಸ್ಸನ್ನೂ ಸಂಪೂರ್ಣವಾಗಿ ಗೆಲ್ಲುವುದು. ಸದ್ವಿಷಯಗಳಲ್ಲಿ ಶ್ರದ್ಧೆ! ಬ್ರಹ್ಮಚರ್ಯದ ನಿಯಮಗಳನ್ನನುಸರಿಸುವುದು! ತಾನು ನಡೆಸಬೇಕಾದ ಕಾರ್ಯಗಳನ್ನು ಅಕ್ಕರೆಯಿಂದ ನಡೆಸುವುದು! ಮಿತವಾಗಿ ಮಾತನಾಡುವುದು! ಎಲ್ಲವೂ

ಪರಬ್ರಹ್ಮಸ್ವರೂಪವೆಂಬ ಭಾವದಿಂದ ನೋಡುವುದು! ಶಾಸ್ತ್ರಜ್ಞಾನ ಬಲದಿಂದ ಪರಮಾತ್ಮಧ್ಯಾನರೂಪವಾದ ಜ್ಞಾನವನ್ನು ಸಂಪಾದಿಸುವುದು. ಈ ಕಾರ್ಯಗಳೆಲ್ಲವನ್ನೂ ಧೈರ್ಯದಿಂದಲೂ, ಪ್ರಯತ್ನದಿಂದಲೂ, ನಿಶ್ಚಯಬುದ್ಧಿಯಿಂದಲೂ ನಡೆಸುತ್ತ ಬಂದರೆ, ಹೃದಯಗ್ರಂಥಿಯೆಂಬ ಕರ್ಮವಾಸನೆಯು ಕಳೆದು, ದೇಹಾಭಿಮಾನವು ಬಿಟ್ಟು ಹೋಗುವುದು. ಪರೀಕ್ಷಿತನು ಮಹರ್ಷಿಗಳು ಉಪದೇಶಿಸಿದಂತೆ, ಈ ಜ್ಞಾನಯೋಗವನ್ನನುಷ್ಠಿಸುವವನು, ಕರ್ಮಗಳಿಗೆ ಮೂಲವಾದ ಅವಿದ್ಯೆಯಿಂದುಂಟಾಗಿರುವ ಜನ್ಮಾಂತರವಾಸನೆಯೆಂಬ ಹೃದಯಗ್ರಂಥಿಯನ್ನು ಭೇದಿಸಿದಮೇಲೆಯೇ ಆ ಯೋಗವನ್ನು ನಿಲ್ಲಿಸಬೇಕೇ ಹೊರತು ನಡುವೆ ಯಾವ ವಿಧವಾದ ವಿಘ್ನಗಳುಂಟಾದರೂ ಇದನ್ನು ಕೈಬಿಡಬಾರದು. ಎಲ್ಲೆ ಮುಕ್ಕಳಿಸಾ! ನನ್ನ ಅನುಗ್ರಹವನ್ನು ಪಡೆಯಬೇಕೆಂದುದೇಕ್ಷಿಸುವವನು, ಈ ವಿಷಯವನ್ನು ತಾನು ಚೆನ್ನಾಗಿ ತಿಳಿದು, ಅಜ್ಞಾನಿಯಾದ ಬೇರೆಯವರಿಗೂ ಅವನ್ನು ತಿಳಿಸುತ್ತಿರಬೇಕು. ತಂದೆಯು ಇದನ್ನರಿಯದ ತನ್ನ ಮಕ್ಕಳಿಗೂ ಆಚಾರ್ಯನು ತನ್ನ ಶಿಷ್ಯರಿಗೂ, ರಾಜನು ತನ್ನ ಪ್ರಜೆಗಳಿಗೂ ಅವಶ್ಯವಾಗಿ ಈ ವಿಷಯವನ್ನು ತಿಳಿಸುತ್ತಿರಬೇಕು. ಕರ್ಮಗಳಲ್ಲಿಯೇ ಬುದ್ಧಿಯೋಜಿಸಿಕೊಂಡು ಕಷ್ಟಪಡುತ್ತಿರುವವರನ್ನು, ಸಾಧ್ಯವಾದ ಮಟ್ಟಿಗೆ ಆವುಗಳಿಂದ ಹಿಂತಿರುಗಿಸಬೇಕು. ಈ ಯೋಗವನ್ನು ತಿಳಿಸಿದಮೇಲೆಯೂ ಅವರು ಒಂದುವೇಳೆ ಕರ್ಮವಾಸನೆಯಿಂದ ಇದನ್ನು ಅಂಗೀಕರಿಸದಿದ್ದ ಪಕ್ಷದಲ್ಲಿ, ಅವರ ಮೇಲೆ ಕೋಪಗೊಳ್ಳದೆ, ಅನುವರ್ತನದಿಂದಲೇ ಅವರನ್ನು ಎದ್ದಿ. ಅವರಿಗೆ ಕರ್ಮಾಭಿಲಾಷೆಯನ್ನು ತಪ್ಪಿಸಿ, ಈ ಯೋಗದಲ್ಲಿ ರುಚಿಯನ್ನು ಹುಟ್ಟಿಸಬೇಕು. ಪ್ರಾಯಕವಾಗಿ ಲೋಕದಲ್ಲಿ ಅನೇಕರು ತಮ್ಮ ಶ್ರೇಯಸ್ಸಿಗೆ ದಾರಿಯನ್ನು ಕಾಣದೆ ಮೂಢರಾಗಿರುವರು. ಅಂತವರು ವಿಷಯಸುಖಗಳನ್ನಪೇಕ್ಷಿಸುವುದಕ್ಕಾಗಿಯೇ ಅತ್ಯಾತುರದಿಂದ ಕಷ್ಟಪಟ್ಟು ಕರ್ಮಗಳನ್ನು ನಡೆಸುತ್ತಿರುವರು. ಈ ಸ್ವಲ್ಪಸುಖಗಳಿಗಾಗಿ ನುತ್ತೊಬ್ಬರಮೇಲೆ ದ್ವೇಷಾದಿಗಳನ್ನೂ ಹುಟ್ಟಿಸಿಕೊಳ್ಳುವರು. ಮುಂದೆ ತಮಗುಂಟಾಗುವ ಅನರ್ಥಗಳಲ್ಲಿ ಸ್ವಲ್ಪವೂ ದೃಷ್ಟಿಯಿಡರು! ಹಿತಾಹಿತಗಳನ್ನು ತಿಳಿದು, ದಯಾರ್ದ್ರಹೃದಯವುಳ್ಳ ಯಾವ ವಿವೇಕಿಯು ತಾನೇ, ಹೀಗೆ ಅಜ್ಞಾನಸಾಗರದಲ್ಲಿ ಮುಳುಗಿ ಹೋಗುತ್ತಿರುವ ಜಂತುಗಳನ್ನು ಕಣ್ಣಾರೆ ಕಂಡೂ ಕೈಬಿಡುವನು? ಅಂತವರಿಗೆ ಆ ಕರ್ಮಮಾರ್ಗದಲ್ಲಿ ಪ್ರೋತ್ಸಾಹವನ್ನು ಕೊಡುವವನು ಕೇವಲದಯಾಶೂನ್ಯನೆಂದೇ ಹೇಳಬೇಕಲ್ಲವೇ? ದಾರಿತಪ್ಪಿ ಹಳ್ಳದಲ್ಲಿ ಬೀಳುತ್ತಿರುವ ಕುರುಡನನ್ನು ಕಂಡಾಗಲೂ, ಅವನನ್ನು ಅದೇದಾರಿಯಲ್ಲಿ ಹೋಗುವಂತೆ ಪ್ರೇರಿಸತಕ್ಕವರನ್ನು ಏಷ್ಟನಿರ್ಘೃಣರೆಂದು ಹೇಳಬಹುದು! ಇನ್ನು ಹೆಚ್ಚು ಮಾತಿನಿಂದೇನು? ವಿವೇಕಿ

ಯಾದವನು ಸಂಸಾರ ಸಮುದ್ರದಲ್ಲಿ ಬಿದ್ದು ತೊಳಲುತ್ತಿರುವ ಪ್ರಾಣಿಗೆ ಈ ಯೋಗವನ್ನು ಪದೇಶಿಸಿ, ಅವನನ್ನು ಆ ಅಪಾಯದಿಂದ ತಪ್ಪಿಸುವುದಕ್ಕೆ ಎಂದಿಗೂ ಹಿಂತೆಗೆಯಲಾರನು. ಈ ಕಾರ್ಯಕ್ಕೆ ಯತ್ನಿಸದ ಗುರುವು ಗುರುವೆನಿಸಲಾರನು. ಅಂತಹ ಬಂಧುವು ಬಂಧುವಲ್ಲ. ಅಂತಹ ತಂದೆತಾಯಿಗಳೂ ತಂದೆತಾಯಿಗಳಲ್ಲ! ಅಂತಹ ದೈವವೂ ದೈವವಲ್ಲ! ಸ್ತ್ರೀಯರಿಗೆ ಅಂತಹ ಪತಿಯೂ ಪತಿಯಲ್ಲ. ಎಲ್ಲೈ ಕುಮಾರರೇ! ಈ ನನ್ನ ಶರೀರವು, ಇತರ ಮನುಷ್ಯರ ಶರೀರಗಳೊಡನೆ ಹೋಲಿಸಿ ನಿರೂಪಿಸತಕ್ಕುದಲ್ಲ. ನನ್ನ ಹೃದಯವು ಕೇವಲ ಸತ್ವಗುಣದಿಂದ ತುಂಬಿರುವುದು. ಆ ಸತ್ವ ಗುಣವು ಧರ್ಮವನ್ನು ಮುಂದಿಟ್ಟುಕೊಂಡು ಅಧರ್ಮವನ್ನು ಹಿಂದೆ ತಳ್ಳಿರುವುದು. ಹೀಗೆ ನನ್ನ ಶರೀರವು ಸತ್ವಗುಣಪ್ರಚುರವಾದುದರಿಂದಲೇ ಹಿರಿಯರು ನನ್ನ ಮೇಲ್ಮೆಯನ್ನು ನೋಡಿ ನನ್ನನ್ನು ಋಷಭನೆಂದು ಕರೆಯುತ್ತಿರುವರು. ಸತ್ವಮೂರ್ತಿಯಾದ ನನ್ನ ಶರೀರಸಂಬಂಧದಿಂದ ಹುಟ್ಟಿದ ನೀವೂ ಸತ್ವಗುಣಪ್ರಧಾನರಾಗಿಯೇ ಇರುವಿರಿ. ಆದುದರಿಂದ ನೀವೆಲ್ಲರೂ ನಿಮಗೆ ಸಹೋದರನಾಗಿಯೂ, ಪೂಜ್ಯನಾಗಿಯೂ ಇರುವ ಈ ಭರತನಲ್ಲಿ, ನಿಷ್ಕಪಟವಾದ ಭಕ್ತಿಯಿಂದ ನಡೆಯುತ್ತ ಬನ್ನಿರಿ! ಇದರಿಂದಲೇ ನೀವು ನನಗೆ ಮಾಡಬೇಕಾದ ಪಿತೃಶುಶ್ರೂಷೆಯನ್ನೂ, ನಿಮಗೆ ಕುಲಧರ್ಮವಾದ ಪ್ರಜಾರಕ್ಷಣವನ್ನೂ ಚೆನ್ನಾಗಿ ನಡೆಸಿದಂತಾಗುವುದು. ಪ್ರಪಂಚದಲ್ಲಿರುವ ಭೂತವರ್ಗಗಳಲ್ಲಿ ಸ್ಥಾವರಗಳಿಗಿಂತಲೂ ಜಂಗಮಗಳು ಮೇಲೆನಿಸುವುವು. ಅವುಗಳಲ್ಲಿಯೂ ಕ್ರಿಮಿಕೀಟಗಳು ಉತ್ತಮವೆನಿಸುವುವು. ಹಾಗೆಯೇ ಆ ಕ್ರಿಮಿಕೀಟಗಳಿಗಿಂತಲೂ ಪಶು ಪಕ್ಷಿ ಮೊದಲಾದುವುಗಳೂ. ಅದಕ್ಕಿಂತಲೂ ಮನುಷ್ಯರೂ, ಆ ಮನುಷ್ಯರಿಗಿಂತಲೂ ಪ್ರಮಥಗಣಗಳೂ, ಅವಕ್ಕಿಂತಲೂ ಗಂಧರ್ವರೂ, ಅವರಿಗಿಂತಲೂ ಸಿದ್ಧರೂ, ಸಿದ್ಧರಿಗಿಂತಲೂ ಕಿನ್ನರರೂ ಮೇಲೆನಿಸುವರು. ಕಿನ್ನರರಿಗಿಂತಲೂ ಅಸುರರೂ, ಅವರಿಗಿಂತಲೂ ಇಂದ್ರಾದಿದೇವತೆಗಳೂ, ಆ ದೇವತೆಗಳಿಗಿಂತಲೂ, ದಕ್ಷನೇ ಮೊದಲಾದ ಪ್ರಜಾಧಿಪತಿಗಳೂ ಉತ್ತಮರೆನಿಸುವರು ಆ ಪ್ರಜಾಧಿಪತಿಗಳಲ್ಲಿ ರುದ್ರನೂ, ಆ ರುದ್ರನಿಗಿಂತಲೂ ಬ್ರಹ್ಮದೇವನೂ ಮೇಲೆನಿಸಿರುವನು. ಆ ಬ್ರಹ್ಮನಿಗಿಂತಲೂ ನಾನು ಮೇಲೆನಿಸಿರುವೆನು ಹೀಗೆ ಸರ್ವದೇವೋತ್ತಮನೆನಿಸಿದ ನಾನೂಕೂಡ ಬ್ರಾಹ್ಮಣರನ್ನೇ ದೈವವೆಂದುತಿಳಿದು ಪೂಜಿಸುತಿರುವೆನು. ಆದುದರಿಂದ ಲೋಕದಲ್ಲಿ ಎಲ್ಲಕ್ಕಿಂತಲೂ ಬ್ರಹ್ಮಕುಲವೇ ಮೇಲೆನಿಸಿರುವುದು. ಎಲ್ಲೈ ಸಭಾಸದರೇ! ಬೇರೆ ಯಾವ ಪ್ರಾಣಿಯನ್ನೂ ನಾನು ಬ್ರಾಹ್ಮಣರಿಗೆ ಸಮಾನವಾಗಿ ಎಣಿಸತಕ್ಕವನಲ್ಲ. ಈ ಬ್ರಾಹ್ಮಣಮುಖದಿಂದ ಕೊಟ್ಟ ಹವಿಸ್ಸನ್ನು ನಾನು ಪ್ರೀತಿಯಿಂದ ಸ್ವೀಕರಿಸುವಂತೆ ಅಗ್ನಿಮುಖವಾಗಿ ಕೊಟ್ಟ ಹವಿಸ್ಸನ್ನೂ

ಭುಜಿಸತಕ್ಕವನಲ್ಲ! ಬ್ರಾಹ್ಮಣರೇ ಈ ಲೋಕದಲ್ಲಿ ವೇದವೆಂಬ ಅನಾದಿಯಾದ ನನ್ನ ಶರೀರವನ್ನು ಧರಿಸಿರುವರು! ಅತ್ಯಂತ ಪರಿಶುದ್ಧವಾದ ಸತ್ವಗುಣವೂ ಈ ಬ್ರಾಹ್ಮಣರಲ್ಲಿಯೇ ನೆಲೆಗೊಂಡಿರುವುದು! ಶಮ, ದಮ, ಸತ್ಯ, ಅನುಗ್ರಹ, ತಪಸ್ಸು, ತಾಳ್ಮೆ, ಆತ್ಮಾನುಭವ ಮುಂತಾದ ಸದ್ಗುಣಗಳೆಲ್ಲವೂ ಇವರಲ್ಲಿಯೇ ನೆಲೆಗೊಂಡಿರುವುವು. ಲೋಕದಲ್ಲಿ ಮಹಾತ್ಮರೆನಿಸಿದ ಬ್ರಹ್ಮಾದಿದೇವತೆಗಳಿಗೂ ನಿಯಾಮಕನಾಗಿ, ಸ್ವರ್ಗಮೋಕ್ಷಗಳನ್ನು ಕೊಡತಕ್ಕ ಪ್ರಭುವಾಗಿಯೂ ಇರುವ ನನ್ನಲ್ಲಿಯೂ ಆ ಬ್ರಾಹ್ಮಣರಿಗೆ ಪ್ರಾರ್ಥಿಸಿ ಪಡೆಯಬೇಕಾದುದೊಂದೂ ಇರುವುದಿಲ್ಲ. ಅವರಿಗೆ ನನ್ನಲ್ಲಿ ಭಕ್ತಿಯೊಂದು ಹೊರತು ಬೇರೊಂದರಲ್ಲಿಯೂ ಅಪೇಕ್ಷೆಯಿಲ್ಲ. ಆದುದರಿಂದ, ಈ ಭಗವದ್ಭಕ್ತಿಯಿಂದಲೇ ತಮ್ಮನ್ನು ಕೃತಕೃತ್ಯರನ್ನಾಗಿ ತಿಳಿದಿರುವ ಬ್ರಾಹ್ಮಣರನ್ನು ನೀವು ಶ್ರದ್ಧೆಯಿಂದ ಸೇವಿಸುತ್ತಿರಬೇಕು. ಮತ್ತು ಎಲೈ ಮಕ್ಕಳಿರಾ! ಪ್ರಕೃತಿ ಪುರುಷೇಶ್ವರರೆಂಬ ಮೂರುತತ್ವಗಳೂ ಪರಸ್ಪರವಿಲಕ್ಷಣಗಳೆಂಬ ನಿಶ್ಚಯಬುದ್ಧಿಯುಳ್ಳ, ನೀವು, ಚರಾಚರಾತ್ಮಕವಾದ ಈ ಸಮಸ್ತ ಪ್ರಪಂಚವೂ ನನ್ನ ಶರೀರವೆಂದು ತಿಳಿದು, ಆಗಾಗ ಗೌರವದಿಂದಲೇ ಅವುಗಳನ್ನು ಭಾವಿಸುತ್ತಿರಬೇಕು. ಇದೇ ನೀವು ನನಗೆ ನಡೆಸತಕ್ಕ ಆರಾಧನವು. ಮನೋವಾಕ್ಕಾಯಗಳೆಂಬ ಕಾರಣಗಳಿಂದಲೂ, ಕಣ್ಣು ಮೊದಲಾದ ಇಂದ್ರಿಯಗಳಿಂದಲೂ ನಡೆಸತಕ್ಕ ಎಲ್ಲಾ ಕಾರ್ಯಗಳಿಗೂ ನನ್ನ ಆರಾಧನವೇ ಮುಖ್ಯಫಲವು. ಎಷ್ಟೇಶಕ್ತನಾಗಿದ್ದರೂ ನನ್ನನ್ನು ಆರಾಧಿಸದಿದ್ದವನು, ಕಾಲಪಾಶದಲ್ಲಿ ಕಟ್ಟಿಡತಕ್ಕ ಮಹಾಮೋಹದಿಂದ ತಪ್ಪಿಸಿಕೊಳ್ಳಲಾರನು' ಎಂದನು. ಎಲೈ ಪರೀಕ್ಷಿದ್ರಾಜನೇ! ಋಷಭದೇವನು, ತನ್ನ ಮಕ್ಕಳು ಈ ಧರ್ಮಮಾರ್ಗವನ್ನು ಚೆನ್ನಾಗಿ ಬಲ್ಲವರಾಗಿದ್ದರೂ ಈ ಲೋಕದಲ್ಲಿ ಮೂಢರಾದ ಇತರಜನಗಳಿಗೆ ಹಿತಾಹಿತಗಳನ್ನು ತಿಳಿಸಬೇಕೆಂಬುದಕ್ಕಾಗಿ ತನ್ನ ಮಕ್ಕಳನ್ನೇ ಮುಂದಿಟ್ಟುಕೊಂಡು ಇದನ್ನು ವಿವರಿಸಿ ಹೇಳಿದನು. ಇಷ್ಟೇ ಅಲ್ಲದೆ, ಮಹಾತ್ಮನಾಗಿಯೂ, ಸರ್ವಸುಹೃತ್ತಾಗಿಯೂ ಇರುವ ಆ ಭಗವಂತನು, ಪ್ರವೃತ್ತಿಮಾರ್ಗವನ್ನು ಬಿಟ್ಟವರಾಗಿಯೂ, ಜಿತೇಂದ್ರಿಯರಾಗಿಯೂ, ಭಗವದ್ಧ್ಯಾನಪರರಾಗಿಯೂ, ಇರುವ ಮಹರ್ಷಿಗಳಿಗೂ, ಭಕ್ತಿಜ್ಞಾನ ವೈರಾಗ್ಯಗಳೆಂಬ ಪರಮಹಂಸರ ಧರ್ಮವನ್ನು ಪ್ರತಿಪಾದಿಸಬೇಕೆಂಬ ಉದ್ದೇಶದಿಂದ, ಭರತನೆಂಬ ತನ್ನ ಹಿರಿಯಮಗನನ್ನು ರಾಜ್ಯಪರಿಪಾಲನಕ್ಕಾಗಿ ನಿಯಮಿಸಿ, ಪಟ್ಟಾಭಿಷೇಕವನ್ನು ಮಾಡಿ, ತಾನು, ಉಡಿಗೆ ತೊಡಿಗೆ ಮೊದಲಾದ ಶರೀರಪರಿಕರಗಳೆಲ್ಲವನ್ನೂ ಆ ಅರಮನೆಯಲ್ಲಿಯೇ ತೆಗೆದುಹಾಕಿ, ದಿಗಂಬರನಾಗಿ, ಹುಚ್ಚನಂತೆ ತಲೆಯನ್ನು ಕೆದರಿಕೊಂಡು, ವೈದಿಕಾಗ್ನಿಗಳನ್ನು

ಆತ್ಮಸಮಾರೋಪಣಮಾಡಿಕೊಂಡು, ಸನ್ಯಾಸಿಯಾಗಿ ಬ್ರಹ್ಮಾವರ್ತದೇಶವನ್ನು ಬಿಟ್ಟು ಹೊರಟುಬಿಟ್ಟನು. ದಾರಿಯಲ್ಲಿ, ಜನರು ತನ್ನನ್ನು ಮಾತಾಡಿಸಿದರೂ ಉತ್ತರವನ್ನು ಕೊಡದೆ ಮುಂಕನಂತೆಯೂ, ಕಿವುಡನಂತೆಯೂ, ಕುರುಡನಂತೆಯೂ, ಮೂಗನಂತೆಯೂ, ಪಿಶಾಚಹಿಡಿದವನಂತೆಯೂ, ಹುಚ್ಚನಂತೆಯೂ ಹೋಗುತ್ತಿದ್ದನು. ಹೀಗೆ ಆ ಋಷಭನು ಎಲ್ಲರಿಗೂ ಹಾಸ್ಯಾಸ್ಪದವಾದ ವೇಷದಿಂದ, ಮೌನವ್ರತವನ್ನು ಹಿಡಿದು, ಬಾಯೆತ್ತದೆ ದಾರಿಯಲ್ಲಿ ಹೋಗುತ್ತಿದ್ದಾಗ ಅಲ್ಲಲ್ಲಿ ಪಟ್ಟಣಗಳಲ್ಲಿಯೂ, ಗ್ರಾಮಗಳಲ್ಲಿಯೂ, ಗಣಿಗಳಲ್ಲಿಯೂ, ಹೂತೋಟ ಮುಂತಾದ ಸ್ಥಳಗಳಲ್ಲಿಯೂ, ಸೇನಾನಿವಾಸಸ್ಥಾನಗಳಲ್ಲಿಯೂ, ಮುಂದೆಗಳಲ್ಲಿಯೂ, ಗೊಲ್ಲರ ಹಳ್ಳಿಗಳಲ್ಲಿಯೂ, ಸಂತೆಗಳಲ್ಲಿಯೂ, ನಡುಗಡುವೆ ಬೆಟ್ಟ, ಕಾಡು, ಋಷ್ಯಾಶ್ರಮ ಮುಂತಾದ ಸ್ಥಳಗಳಲ್ಲಿಯೂ ಮೂಢಜನರು ಅವನ ಮಹಿಮೆಯನ್ನು ತಿಳಿಯದೆ, ಮೇಲಿನ ವೇಷವನ್ನು ಮಾತ್ರ ನೋಡಿ ಮೂದಲಿಸಿ ಹಾಸ್ಯಮಾಡುತ್ತಿದ್ದರು. ಕೆಲವರು ಕೈಶಾಗದವನೆಂದು ತಿಳಿದು ಹೆದರಿಸುವರು! ಕೆಲವರು ವೇಧಿಬಿದ್ದು ಮೂತ್ರಸ್ರಾವವನ್ನು ಮಾಡುವರು. ಕೆಲವರು ಕೇಕರಿಸಿ ಉಗಿಯುವರು! ಕೆಲವರು ಮೈಮೇಲೆ ಕಲ್ಲೆಸೆಯುವರು. ಕೆಲವರು ಮಲವನ್ನು ಬಿಸುಡುವರು. ಕೆಲವರು ಮಣ್ಣೆರಚುವರು! ಕೆಲವರು ಅಪಾನವಾಯುವನ್ನು ಬಿಡುವರು! ಬಾಯಿಗೆ ಬಂದ ಹಾಗೆ ಜೈಯುವರು. ಹೀಗೆ ಸಿಕ್ಕಿದವರು ಸಿಕ್ಕಿದಹಾಗೆ ತನ್ನನ್ನು ತಿರಸ್ಕರಿಸುತ್ತಿದ್ದರೂ, ನೋಣಗಳ ಬಾಧೆಗೆ ಲಕ್ಷ್ಯಕೊಡದ ಮದಜಾನೆಯಂತೆ, ಆ ತಿರಸ್ಕಾರವನ್ನೂ ಗಮನಿಸದೆ, ಆತ್ಮಪರಮಾತ್ಮಸ್ವರೂಪವನ್ನನುಭವಿಸತಕ್ಕ ತನ್ನ ಮಹಿಮೆಯಲ್ಲಿಯೇ ತಾನು ನೆಲೆಗೊಂಡವನಾಗಿದ್ದನು. ವಾಸ್ತವವಾಗಿ ಅವನು ದೇಹವೆಂಬುದು ತನಗೆ ಪ್ರಕೃತಿಸಂಬಂಧದಿಂದುಂಟಾದ ಆಕಾರವೆಂದೂ, ದೇಹಾತ್ಮಭ್ರಾಂತಿಯುಳ್ಳವರಿಗೆ ಆ ದೇಹವೇ ಆತ್ಮವೆಂಬ ವ್ಯವಹಾರಕ್ಕೆ ವಿಷಯವಾಗುವುದೆಂದೂ ತಿಳಿದವನಾದುದರಿಂದ, ಆ ದೇಹದಲ್ಲಿಯಾಗಲೀ, ಪರಿವಾರದಲ್ಲಿಯಾಗಲೀ, "ತಾನು, ತನ್ನದು" ಎಂಬ ಅಹಂಕಾರಮಮಕಾರಗಳಿಲ್ಲದೆ, ಯಾವ ವಿಚಾರಕ್ಕೂ ಮನಸ್ಸು ಕಲಗದೆ, ಏಕಾಕಿಯಾಗಿ ಭೂಭಾಗವೆಲ್ಲವನ್ನು ಸುತ್ತುತ್ತ ಬಂದನು. ಈತನ ಕೈ, ಕಾಲು, ಎದೆ, ತೋಳು, ಹೆಗಲು, ಕೊರಲು, ಮುಖ ಮುಂತಾದ ಒಂದೊಂದವಯವವೂ ಅತ್ಯಂತಕೋಮಲವಾಗಿ ಸ್ವಾಭಾವಿಕಸೌಂದರ್ಯದಿಂದ ಶೋಭಿಸುತ್ತಿದ್ದುವು. ಸಹಜವಾದ ಮುಗುಳ್ನಗೆಯಿಂದ ಅವನ ಮುಖವು ಮತ್ತಷ್ಟು ಸೊಬಗನ್ನು ಬೀರುತ್ತಿತ್ತು. ಅಗಲೇ ಅರಳಿದ ತಾವರೆಹೂವಿನಂತೆ ಶೀತಲವಾದ ಪ್ರಸನ್ನದೃಷ್ಟಿಯಿಂದ ಶೋಭಿತವಾದ ಆತನ ರಕ್ತವಿಶಾಲಲೋಚನಗಳು, ಅವನ ಮಹಾಪುರುಷಲಕ್ಷಣವನ್ನು

ತೋರಿಸುತ್ತಿದ್ದುವು. ಒಂದಕ್ಕೊಂದು ಸಮವಾದ ಕೆನ್ನೆಗಳಿಂದಲೂ, ಕಿವಿಗಳಿಂದಲೂ, ಮತ್ತು ಅಂದವಾದ ಕಂಠದಿಂದಲೂ ಎಸಳಾದ ಮೂಗಿನಿಂದಲೂ ಅವನ ಮುಖವು ನೋಡುವವರಿಗೆ ಮೋಹವನ್ನುಂಟುಮಾಡುತ್ತಿತ್ತು. ಅಪ್ಪಟವಾದ ಮಂದಹಾಸವನ್ನೊಳಕೊಂಡ ತನ್ನ ಮುಖವಿಕಾಸವೆಂಬ ಮಹೋತ್ಸವದಿಂದ, ಅಲ್ಲಲ್ಲಿ ಪುರಸ್ತ್ರೀಯರ ಮನಸ್ಸನ್ನು ಮನ್ಮಥನ ಬಾಣಕ್ಕೆ ಗುರಿಮಾಡುತ್ತಿದ್ದನು. ಅಂದವಾಗಿ ಸುರುಳಿಗಟ್ಟಿದ ಆತನತಲೆಕೂದಲು, ಜಡೆಗಟ್ಟಿ ಪಿಂಗಳವರ್ಣವಾಗಿ, ಹಿಮ್ಮಡಿಯವರೆಗೆ ಜೋಲಾಡುತ್ತಿತ್ತು. ಇಂತಹ ದಿವ್ಯಸೌಂದರ್ಯವಿಶಿಷ್ಟನಾಗಿದ್ದರೂ ಆತನು, ಅಪಧೂತವೇಷದಿಂದ ಕೊಳೆಮುಚ್ಚಿದ ಮೈಯ್ಯುಳ್ಳವನಾಗಿ, ಪಿಶಾಚಗ್ರಸ್ತನಂತೆ ಕಾಣುತ್ತಿದ್ದನು. ಈ ಮಹಾತ್ಮನು, ಯೋಗಮಾರ್ಗಕ್ಕೆ ವಿರುದ್ಧವಾಗಿ ನಡೆಯುತಿರುವವರನ್ನು ಕಂಡರೂ, ಅದಕ್ಕೆ ಪ್ರತೀಕಾರವನ್ನು ಮಾಡುವುದು ನಿಂದ್ಯಕಾರ್ಯವೆಂದು ತಿಳಿದು, (ಬೆಟ್ಟದ ಹಾವಿನಂತೆ ಕದಲದೆ ಒಂದೇ ಸ್ಥಳದಲ್ಲಿದ್ದು, ಪ್ರಾರಬ್ಧಕರ್ಮವನ್ನು ಕಳೆಯುತಕ್ಕ) ಅಜಗರವ್ರತವನ್ನು ನಡೆಸುವುದಕ್ಕೆ ಸಂಕಲ್ಪಿಸಿಕೊಂಡು, ಒಂದಾನೊಂದು ಸ್ಥಳದಲ್ಲಿ ಮಲಗಿಬಿಟ್ಟನು. ಮಲಗಿದ್ದಂತೆಯೇ ಅನ್ನಾದಿಗಳನ್ನು ಭುಜಿಸುವನು! ಹಾಗೆಯೇ ಜಲಪಾನವನ್ನು ಮಾಡುವನು! ಹಾಗೆಯೇ ಮಲಮೂತ್ರಗಳನ್ನೂ ಬಿಡುವನು! ಆ ಮಲಮೂತ್ರಗಳಲ್ಲಿಯೇ ಬಿದ್ದು ಹೊರಳುತ್ತಿರುವನು! ಅವನ ಮೈಯೆಲ್ಲವೂ ಮಲಮೂತ್ರಗಳಿಂದ ಲೇಪಿತವಾಗಿದ್ದರೂ, ಅವನು ದೇಹಧರ್ಮವನ್ನು ಜಯಿಸಿದವನಾದುದರಿಂದಲೂ, ಮಹಾಮಹಿಮೆಯುಳ್ಳವನಾದುದರಿಂದಲೂ, ಅವನ ಮಲವೂಕೂಡ ಸುಗಂಧದಿಂದಲೇ ಕೂಡಿದ್ದಿತು! ಅದರಮೇಲೆ ಬೀಸಿಬಂದ ಗಾಳಿಯು ನಾಲು ಕಡೆಗಳನ್ನೂ ಹತ್ತುಯೋಜನದೂರದವರೆಗೆ ಸುಗಂಧವಿಶಿಷ್ಟವಾಗಿ ಮಾಡುತ್ತಿತ್ತು. ಹೀಗೆ ಆ ಋಷಭನು, ಪಶುವಿನಂತೆಯೂ, ಮೃಗದಂತೆಯೂ, ಕಾಗೆಯಂತೆಯೂ ಅಲ್ಲಲ್ಲಿ ನಡೆಯುತ್ತ, ನಿಲ್ಲುತ್ತ, ಕುಳ್ಳಿರುತ್ತ, ಮಲಗುತ್ತ ಕಾಲವನ್ನು ಕಳೆಯುತ್ತಿದ್ದನು. ಮತ್ತು ಕಾಗೆ, ಮೃಗ, ಪಶು ಇವುಗಳಂತೆಯೇ ತಿನ್ನುತ್ತಲೂ, ಕುಡಿಯುತ್ತಲೂ, ಮಲಮೂತ್ರಗಳನ್ನು ಬಿಡುತ್ತಲೂ ಇದ್ದನು. ಎಲೈ ಪರೀಕ್ಷಿದ್ರಾಜನೇ! ಪೂರ್ಣಕಾಮನಾಗಿ ಕೇವಲಾನಂದಮೂರ್ತಿಯಾಗಿದ್ದರೂ, ಋಷಭರೂಪಿಯಾದ ಆ ಭಗವಂತನು, ಯೋಗೀಶ್ವರರಿಗೆ ಹೀಗೆಯೇ ನಡೆಯಬೇಕೆಂಬ ಪೂರ್ವಗವನ್ನು ತೋರಿಸುವುದಕ್ಕಾಗಿಯೇ, ಹೀಗೆ ಹಲವು ಬಗೆಯ ಯೋಗವ್ರತಗಳನ್ನು ನಡೆಸುತ್ತಬಂದನು. ಮತ್ತು ಆತನು ಎಡೆಬಿಡದೆ ಆತ್ಮಾನಂದವನ್ನನುಭವಿಸುತ್ತ, ಸಮಸ್ತ ಭೂತಗಳಲ್ಲಿಯೂ ಅಂತರ್ಯಾಮಿಯಾದ ವಾಸುದೇವನೇ ತಾನೆಂದು ತಿಳಿದಿದ್ದನು. ಆತ್ಮಸ್ವರೂಪವನ್ನು ಮರೆಸತಕ್ಕ ಕರ್ಮಸಂಬಂಧವನ್ನು

ನಿಶ್ಶೇಷನಾಗಿ ನೀಗಿದವನಾದುದರಿಂದ, ಪ್ರಪಂಚದಲ್ಲಿ ಬ್ರಹ್ಮಾತ್ಮಕವಲ್ಲದ ಬೇರೆ ಸ್ವತಂತ್ರವಸ್ತುವುಂಟೆಂಬ ಭೇದಬುದ್ಧಿಯನ್ನು ಸ್ವಲ್ಪಮಾತ್ರವೂ ಮನಸ್ಸಿನಲ್ಲಿಡದೆ, ಸರ್ವಾರ್ಥಸಿದ್ಧಿಯನ್ನು ಹೊಂದಿ ಪೂರ್ಣಕಾಮನಾಗಿದ್ದನು. ಈ ಯೋಗಸಿದ್ಧಿಯಿಂದ ಅವನಿಗೆ ಆಕಾಶಗಮನ, ಮನೋವೇಗ, ಅಂತರ್ಧಾನ, ಪರಕಾಯಪ್ರವೇಶ, ಪರೋಕ್ಷದರ್ಶನ, ದೂರಶ್ರವಣ, ಮುಂತಾದ ಯೋಗೈಶ್ವರ್ಯಗಳೆಲ್ಲವೂ ಕೈಗೂಡಿ ಬಂದಿದ್ದರೂ, ಇವೆಲ್ಲವೂ ಮೋಕ್ಷವಿರೋಧಿಗಳೆಂದೂ, ಸಂಸಾರವರ್ಧಕಗಳೆಂದೂ ತಿಳಿದು ಅವುಗಳನ್ನು ಮನಸ್ಸಿನಿಂದಲಾದರೂ ಆದರಿಸದಿದ್ದನು. ಇಲ್ಲಿಗೆ ಐದನೆಯ ಅಧ್ಯಾಯವು.

---

## ಋಷಭದೇವನು ಶರೀರತ್ಯಾಗಮಾಡಿದುದು.

ಈ ನಡುವೆ ಪರೀಕ್ಷಿದ್ರಾಜನು ಶುಕಮುನಿಯೆನ್ನು ಕುರಿತು "ಎಲೈ ಮಹಾತ್ಮನೇ! ಆತ್ಮೋಪಾಸನದಲ್ಲಿಯೇ ನಿರತರಾಗಿ, ಜ್ಞಾನಯೋಗವೆಂಬ ಬೆಂಕಿಯಿಂದ ತಮ್ಮ ಕರ್ಮಬೀಜವನ್ನು ಭಸ್ಮಮಾಡಿಕೊಂಡವರಿಗೆ, ಈ ವಿಧವಾದ ಐಶ್ವರ್ಯಗಳು ಸಿದ್ಧಿಸಿದರೂ ಅವು ಅವರ ಮನಸ್ಸನ್ನು ಕೆಡಿಸಲಾರವಷ್ಟೆ? ಕರ್ಮಬೀಜವನ್ನು ಪೂರ್ತಿಯಾಗಿ ನಾಶಹೊಂದಿಸಿದಮೇಲೆ ತಿರುಗಿ ಸಂಸಾರವು ತಗಲುಕಟ್ಟಲಾರದಲ್ಲವೇ? ಕರ್ಮವಾಸನೆಯನ್ನು ನಿಶ್ಶೇಷವಾಗಿ ತೊಲಗಿಸಿಕೊಂಡವರು, ತಮಗೆ ಐಶ್ವರ್ಯವುಬಂದಾಗ ಅದಕ್ಕಾಗಿ ಅತ್ಯಾಸ್ಥೆಪಡುವುದೇಕೆ? ಆತ್ಮಜ್ಞಾನವನ್ನು ಪಡೆದು ಜಿತೇಂದ್ರಿಯನಾಗಿದ್ದ ಋಷಭನು, ತನಗೆ ಯೋಗಸಿದ್ಧಿಯು ಕೈಗೂಡಿದಾಗ ಅಸಂತುಷ್ಟಿಯನ್ನು ಹೊಂದಿದುದಕ್ಕೆ ಕಾರಣವನ್ನು ತಿಳಿಸಬೇಕು" ಎಂದನು. ಅದಕ್ಕಾ ಶುಕನು "ರಾಜೇಂದ್ರಾ! ನೀನು ಹೇಳಿದುದು ವಾಸ್ತವವು! ಆದರೆ ಮನಸ್ಸೆಂಬುದು ಬಹಳ ಚಂಚಲವು! ಕೆಲವರು ಮನಸ್ಸನ್ನು ಜಯಿಸಿದವರಾಗಿದ್ದರೂ ಬಹಳ ಚಂಚಲಸ್ವಭಾವವುಳ್ಳ ಆ ಮನಸ್ಸನ್ನು ನಂಬಲಾರರು. ಬೇಡನು, ಕಾಡಿನಲ್ಲಿ ಮೃಗವು ತನ್ನ ಕೈಗೆ ಸಿಕ್ಕಿ ಬೀಳುವವರೆಗೂ, ತಾನೇ ಅದಕ್ಕೆ ಅಧೀನನಂತೆ ನಟಿಸಿ, ಅದನ್ನು ವಂಚಿಸಿ ಕೊಲ್ಲುವನಲ್ಲವೇ! ಹಾಗೆಯೇ ಮನಸ್ಸೆಂಬುದು ಮೊದಲು ತನಗೆ ವಶವಾದಂತೆ ಕಂಡುಬಂದರೂ, ಆ ಮನಸ್ಸಿಗೆ ಸ್ವಲ್ಪದಾರಿಯನ್ನು ಕೊಟ್ಟರೆ, ಅದು ಅವರನ್ನು ಸ್ವಾಧೀನಪಡಿಸಿಕೊಂಡು ಸಂಸಾರವನ್ನು ತಗಲುಕಟ್ಟದೆ ಬಿಡದು.

ಆದುದರಿಂದಲೇ ಮೋಕ್ಷಾರ್ಥಿಗಳು ಎಷ್ಟುಮಾತ್ರವೂ ಮನಸ್ಸನ್ನು ನಂಬಲಾರರು. ಈ ವಿಷಯದಲ್ಲಿ ಹಿರಿಯರು ಹೀಗೆಂದು ಹೇಳುವರು. ''ಮನಸ್ಸೆಂಬುದು ಒಂದು ನೆಲೆಯಲ್ಲಿ ನಿಲ್ಲದೆ, ಬಹಳ ಚಂಚಲವಾಗಿರುವುದರಿಂದ. ಯಾವ ಸಂದರ್ಭದಲ್ಲಿಯೂ ಆ ಮನಸ್ಸನ್ನು ನಂಬಿ ನಡೆಯಬಾರದು! ಮನಸ್ಸನ್ನು ಜಯಿಸಿಬಿಟ್ಟೆವೆಂಬ ಧೈರ್ಯ ದಿಂದ ಅದನ್ನು ಹೋದದಾರಿಗೆ ಬಿಟ್ಟಪಕ್ಷದಲ್ಲಿ, ಬಹುಕಾಲದಿಂದ ಸಂಪಾದಿಸಿದ ಜ್ಞಾನರೂಪವಾದ ತಪಸ್ಸೆಲ್ಲವೂ ನಷ್ಟವಾಗುವುದು. ಆದುದರಿಂದ ತಾನು ಎಷ್ಟೇ ಜಿತೇಂದ್ರಿಯನಾಗಿದ್ದರೂ ಮನಸ್ಸು ತನಗೆ ವಶವಾಯಿತೆಂಬ ನಂಬಿಕೆಯಿಂದಿರ ಬಾರದು'' ಎಂದು ಹೇಳಿರುವರು. ಆದುದರಿಂದ ಯೋಗಸಿದ್ಧಿಯಿಂದ ಬಂದ ಐಶ್ವರ್ಯ ವಾದರೂ ಕಾಮುಕ್ಕೆ ದಾರಿಯನ್ನು ಕೊಡದಿರದು. ಮನಸ್ಸು ತನಗೆ ಸ್ವಾಧೀನವಾಗಿ ರುವುದೆಂಬ ಧೈರ್ಯದಿಂದ ಯೋಗೈಶ್ವರ್ಯಗಳನ್ನು ಕೈಕೊಂಡಪಕ್ಷದಲ್ಲಿ, ಕಾಮಕ್ಕೇ ಅವಕಾಶವನ್ನು ಕೊಟ್ಟಂತಾಗುವುದು. ಈ ಕಾಮವು ತಲೆಯಿಕ್ಕಿದೊಡನೆಯೇ ಕ್ರೋಧ, ಲೋಭ, ಮುಂತಾದ ಅರಿಷಡ್ವರ್ಗಗಳೆಲ್ಲವೂ ತಲೆಯಿಕ್ಕುವುವು. ವ್ಯಭಿ ಚಾರಿಣಿಯಾದ ಹೆಂಗಸು, ತನ್ನ ಕೈಹಿಡಿದ ಗಂಡನನ್ನು ವಂಚಿಸಿ, ವಿಟನನ್ನು ನಂಬಿ, ಅವನ ಮೂಲಕವಾಗಿ ತನ್ನ ಪತಿಯನ್ನೇ ಕೊಲ್ಲಿಸುವಂತೆ, ಯೋಗಿಯು ಮನಸ್ಸನ್ನು ನಂಬಿದ ಪಕ್ಷದಲ್ಲಿ, ಅದು ಅವನನ್ನು ವಂಚಿಸಿ, ಕಾಮಾದಿಗಳಿಗೆ ಅವಕಾಶವನ್ನು ಕೊಟ್ಟು, ಆ ಮೂಲಕವಾಗಿ ಯೋಗಿಯನ್ನು ಸಂಸಾರದಲ್ಲಿ ಮುಳುಗಿಸಿ, ಮೃತ ಪ್ರಾಯನನ್ನಾಗಿ ಮಾಡುವುದು. ಕಾಮ, ಕ್ರೋಧ, ಲೋಭ, ಮೋಹ, ಮದ, ಶೋಕ, ಭಯ, ಮುಂತಾದುವೆಲ್ಲವೂ ಮನುಷ್ಯನಿಗೆ ಅಂತಶ್ಶತ್ರುಗಳಾದುದರಿಂದ ಅವುಗಳಿಗೆ ಅವಕಾಶಕೊಡಬಾರದು. ಐಶ್ವರ್ಯವೆಂಬುದು ಯೋಗಸಿದ್ಧಿಯ ಮೂಲಕ ವಾಗಿ ಬಂದರೂ, ಬೇರೆ ಯಾವ ರೀತಿಯಿಂದ ಬಂದರೂ, ಅದನ್ನು ಅನುಭವಿಸ ಬೇಕೆಂಬ ಆಸೆಯಿಟ್ಟರೆ, ಅದು ಕರ್ಮಬಂಧವನ್ನುಂಟುಮಾಡುವುದು. ಆದುದರಿಂದ ಈ ಐಶ್ವರ್ಯವು, ಅಜ್ಞಾನಿಗೆ ಆಸೆಹುಟ್ಟಸಬಹುದೇ ಹೊರತು, ಪಂಡಿತನು ಅದನ್ನಂಗೀ ಕರಿಸಲಾರನು. ಇದಕ್ಕಾಗಿಯೇ ಋಷಭನು ಆ ಯೋಗಸಿದ್ಧಿಯನ್ನನುಭವಿಸುವು ದಕ್ಕೂ ಇಷ್ಟಪಡದೆ ಹೋದನು. ಅವನು, ತಾನೇ ಸಮಸ್ತ ಲೋಕಕ್ಕೂ ಅಲಂಕಾರ ಭೂತನಾಗಿದ್ದಾಗಲೂ, ಹಾಸ್ಯಾಸ್ಪದವಾದವೇಷದಿಂದ ಹುಚ್ಚನಂತೆಯೂ, ಜಡನಂ ತೆಯೂ ಕಾಣಿಸಿಕೊಳ್ಳುತ್ತ, ತನ್ನಲ್ಲಿದ್ದ ಭಗವದಂಶವನ್ನು ಮರೆಸಿಟ್ಟುಕೊಂಡಿದ್ದನು. ಕೊನೆಗೆ ಯೋಗೀಶ್ವರರಿಗೆ ದೇಹತ್ಯಾಗದ ರೀತಿಯನ್ನೂ ತಿಳಿಸಬೇಕೆಂದುದ್ದೇಶಿಸಿ, ಜೀವಾತ್ಮನು ಪ್ರಕೃತಿಸಂಬಂಧವಾದ ಅಜ್ಞಾನದಿಂದ ತನ್ನ ಸ್ಥಿತಿಯನ್ನೇ ತಾನು ಕಾಣದಿರುವಾಗಲೂ ಪರಮಾತ್ಮನಿಗೆ ಶರೀರವೆಂಬುದನ್ನು ಸಾಕ್ಷಾತ್ಕರಿಸಿಕೊಂಡು,

ತನ್ನ ಪ್ರಾರಬ್ಧವು ತೀರುವಕಾಲಕ್ಕೆ ದೇಹವನ್ನು ಬಿಟ್ಟುಬಿಟ್ಟನು. ಆತನು ದೇಹ ತ್ಯಾಗಮಾಡಿದ ರೀತಿಯನ್ನು ತಿಳಿಸುವೆನು ಕೇಳು. ಆತನು ಸಹಜವಾಗಿ ಶರೀರಾಭಿಮಾನವನ್ನು ಬಿಟ್ಟರೂ, ತನಗೆ ಕರ್ಮವಾಸನೆಯಿಂದ ದೇಹಾಭಿಮಾನವಿರುವಂತೆ ತೋರಿಸಿಕೊಳ್ಳುತ್ತ ಭೂಮಂಡಲವನ್ನು ಸುತ್ತುತ್ತಿದ್ದನಷ್ಟೆ ? ಹೀಗೆ ಸಂಚಾರವಶದಿಂದ ಕೊಂಕಣವೆಂದೂ, ವಂಕಪಟವೆಂದೂ, ಕುಟಕವೆಂದೂ ಕರೆಯಲ್ಪಡುವ ದಕ್ಷಿಣಕರ್ಣಾಟದೇಶಕ್ಕೆ ಹೋದನು. ಆಲ್ಲಿ ಕುಟಕಾಚಲವೆಂಬ ಬೆಟ್ಟಕ್ಕೆ ಸಮೀಪದಲ್ಲಿರುವ ಒಂದಾನೊಂದು ಕಾಡಿನಲ್ಲಿ ಸೇರಿ, ಬಾಯೊಳಗೆ ಒಂದು ಕಲ್ಲನ್ನಿಟ್ಟುಕೊಂಡು, ತಲೆಯನ್ನು ಕೆದರಿ, ದಿಗಂಬರನಾಗಿ ಸುತ್ತುತ್ತಿದ್ದನು ಈ ಕಾಲಕ್ಕೆ ಸರಿಯಾಗಿ ಗಾಳಿಯಿಂದಾಡುತ್ತಿದ್ದ ಒಂದಾನೊಂದು ಬಿದಿರುಮೆಳೆಯಿಂದ ಕಾಡು ಗಿಚ್ಚು ಹುಟ್ಟಿ, ಆ ಕಾಡೆಲ್ಲವನ್ನೂ ಸುಡುತ್ತಬರುವಾಗ, ಆ ಋಷಭನ ದೇಹವೂ ಇದರಲ್ಲಿ ದಗ್ಧವಾಯಿತು. ರಾಜೇಂದ್ರಾ ! ಮುಂದೆ ಆ ಕೊಂಕಣ ಮುಂತಾದ ದೇಶಗಳಿಗೆ ಅಧಿಪತಿಯಾಗುವ ಅರ್ಹತನೆಂಬ ರಾಜನು ಬ್ರಹ್ಮಚರ್ಯಾದಿ ಚತುರಾಶ್ರಮಧರ್ಮಗಳಿಗಿಂತಲೂ ವಿಲಕ್ಷಣವಾದ ಈ ಋಷಭನ ಚರಿತ್ರವನ್ನು ಕೇಳಿ, ಈ ವ್ರತಗಳೇ ಶಾಸ್ತ್ರವಿಹಿತಗಳೆಂದು ಭ್ರಮಿಸುವನು. ಈ ನೆವದಿಂದ ವೈದಿಕಕರ್ಮಗಳೆಲ್ಲವನ್ನೂ ಬಿಟ್ಟುಬಿಡಬಹುದೆಂದೂ ನಿಶ್ಚಯಿಸಿಕೊಳ್ಳುವನು. ಸರ್ವವಿಧದಲ್ಲಿಯೂ ನಿರ್ಭಯವಾದ ಸ್ವಧರ್ಮವನ್ನು ಬಿಟ್ಟು, ತಾನೂ ಆ ಋಷಭನಂತೆಯೇ ನಡೆಯುತ್ತ, ತನ್ನ ಪ್ರಜೆಗಳಿಗೂ ಅದನ್ನೇ ಉಪದೇಶಿಸುವನು. ಕಲಿಯುಗದಲ್ಲಿ ಅಧರ್ಮವೇ ಹೆಚ್ಚುತ್ತಿರುವುದರಿಂದ, ಅನೇಕಜನರು ತಮಗೆ ಪ್ರಾರಬ್ಧಕರ್ಮದಿಂದುಂಟಾದ ಅಜ್ಞಾನಕ್ಕೆ ವಶರಾಗಿ, ವೇದನಿಷಿದ್ಧಗಳಾದ ಪಾಷಂಡವ್ರತಗಳನ್ನೇ ಹಿಡಿಯುವರು. ಮೊದಲೇ ದೈವಮಾಯೆಯಿಂದ ಮೋಹಿತರಾದ ಆ ಜನರೆಲ್ಲರೂ, ಅರ್ಹತನ ಬೋಧೆಯಿಂದ ಮತ್ತಷ್ಟು ಮೋಹಿತರಾಗಿ, ತಮ್ಮ ವರ್ಣಾಶ್ರಮಗಳನ್ನೂ, ವಿಧ್ಯುಕ್ತವಾದ ಶೌಚ, ಸಂಧ್ಯಾವಂದನೆ ಮೊದಲಾದುವುಗಳನ್ನೂ ಬಿಟ್ಟು ಬಿಡುವರು ದೇವತೆಗಳಿಗೆ ಅವಮಾನಕಾರಣಗಳಾದ ಕುತ್ಸಿತವ್ರತಗಳನ್ನೇ ಹಿಡಿಯುವರು. ಕಲಿದೋಷದಿಂದ ವಿವೇಕಹೀನರಾಗಿ, ಸ್ನಾನ, ಆಚಮನ, ಸದಾಚಾರಗಳೊಂದೂ ಇಲ್ಲದೆ, ತಲೆಕೂದಲನ್ನು ಕತ್ತರಿಸಿಕೊಳ್ಳುತ್ತ, ವೇದವನ್ನೂ, ಪರಮಪುರುಷನನ್ನೂ, ಭಗವದ್ಭಕ್ತರನ್ನೂ ಬಹಳವಾಗಿ ನಿಂದಿಸುತ್ತಬರುವರು. ವೇದಸಾಮಾನ್ಯವಿಲ್ಲದೆ ನಿರಾಧಾರವಾದ ಈ ಆರ್ಹತಸ್ಮೃತಿಯಲ್ಲಿ ನಂಬಿಕೆಯಿಟ್ಟವರಿಲ್ಲರೂ, ಅಂಧತಮಸ್ಸೆಂಬ ನರಕದಲ್ಲಿ ಬೀಳುವುದರಲ್ಲಿ ಸಂದೇಹವಿಲ್ಲ ! ಆದರೆ, "ಭಗವದಂಶದಿಂದ ಹುಟ್ಟಿದ ಋಷಭನು, ತನ್ನ ನಡತೆಯಿಂದ ಹೀಗೆ ಲೋಕವನ್ನು

ವಂಚಿಸಬಹುದೇ? ಅವನು ಈ ನಾರ್ಗವನ್ನು ಹಿಡಿಯಬೇಕಾದ ಅವಶ್ಯವೇನು" ಎಂದು ಕೇಳುವೆಯಾ? ರಜೋಗುಣದಿಂದ ಬುದ್ಧಿಗೆಟ್ಟವರಿಗೆ ಯೋಗಚರ್ಯೆಯೆಂಬ ಇದೊಂದು ವಿಧವಾಗಿ ಮೋಕ್ಷಪಾಯವನ್ನು ತಿಳಿಸುವುದಕ್ಕಾಗಿಯೇ ಭಗವಂತನು ಋಷಭಾವತಾರವನ್ನೆತ್ತಿ ಹೀಗೆ ನಡೆಸಿರುವನು. ರಾಜಾ! ಲೋಕದಲ್ಲಿ ಆ ಋಷಭದೇವನ ಕೀರ್ತಿಯನ್ನು ಕೆಲವು ಶ್ಲೋಕಾರ್ಥಗಳಿಂದ ಹೀಗೆಂದು ಕೊಂಡಾಡುವರು. "ಈ ಭೂಮಿಯಲ್ಲಿರುವ ಏಳುದ್ವೀಪಗಳಲ್ಲಿ ಜಂಬೂದ್ವೀಪವು ಸರ್ವೋತ್ತಮವೆನಿಸಿರುವುದು. ಅದರಲ್ಲಿಯೂ ಒಂಭತ್ತು ಖಂಡಗಳಲ್ಲಿ ಭಾರತವರ್ಷವೆಂಬ ಖಂಡವು ಮೇಲೆನಿಸಿರುವುದು. ಅದರೊಳಗಿನ ಜನರೆಲ್ಲರೂ ಋಷಭರೂಪದಿಂದವತರಿಸಿದ ಆ ಭಗವಂತನ ಮಂಗಳಚರಿತ್ರಗಳನು ಯಾವಾಗಲೂ ಹೀಗೆ ಕೊಂಡಾಡುತ್ತಿರುವರು! "ಆಹಾ! ಪ್ರಿಯವ್ರತನ ವಂಶವು ಎಷ್ಟು ಪರಿಶುದ್ಧವಾದ ಕೀರ್ತಿಯಿಂದ ಬೆಳಗುತ್ತಿರುವುದು. ಸಾಕ್ಷಾತ್ಪರಮಪುರುಷನೇ ಇವರಲ್ಲಿ ಋಷಭರೂಪದಿಂದವತರಿಸಿ, ಮೋಕ್ಷಕಾರಣವಾದ ಧರ್ಮವನ್ನು ತಾನಾಗಿಯೇ ನಡೆಸಿ ತೋರಿಸಿದಾಗ, ಆ ವಂಶದ ಕೀರ್ತಿಯನ್ನು ಹೇಳಬೇಕಾದುದೇನು? ಯಾವನು, ಮನೋವೇಗ ಮುಂತಾದ ಯೋಗಶಕ್ತಿಗಳು ತಾವಾಗಿ ಮೇಲೆ ಬಿದ್ದುಬಂದರೂ ಅವೆಲ್ಲವನ್ನೂ ತ್ಯಜಿಸಿಬಿಟ್ಟನೋ, ಯಾವನು ತನಗೆ ಬೇಡವೆಂದು ತ್ಯಜಿಸಿಬಿಟ್ಟುದನ್ನು ಪಡೆಯುವುದಕ್ಕಾಗಿ ಮಹಾಯೋಗಿಗಳೆಲ್ಲರೂ ಪ್ರಯತ್ನಿಸುತ್ತಿರುವರೋ, ಅಂತಹ ಋಷಭದೇವನ ನಿಷ್ಠೆಯನ್ನು ಬೇರೆ ಯಾವ ಯೋಗಿಯುತಾನೇ ಮನಸ್ಸಿನಿಂದಲಾದರೂ ಅನುಸರಿಸಬಲ್ಲನು" ಎಂಬುದೇ ಆ ಶ್ಲೋಕಾರ್ಥವು. ಸಮಸ್ತಲೋಕಗಳಿಗೂ, ಸಕಲವೇದಗಳಿಗೂ, ಎಲ್ಲಾ ದೇವತೆಗಳಿಗೂ, ಗೋಬ್ರಾಹ್ಮಣರಿಗೂ ಗುರುವಾದ ಆ ಋಷಭದೇವನ ಚರಿತ್ರವು ಈ ರೀತಿಯವಾದುದು. ಇದನ್ನು ಪಠಿಸಿದಮಾತ್ರಕ್ಕೆ ಸಮಸ್ತಪಾಪಗಳೂ ನೀಗುವುವು. ಇದು ಸಮಸ್ತ ಮಂಗಳಗಳಿಗೂ ನೆಲೆಯಾದುದು. ಈ ಚರಿತ್ರವನ್ನು ಪ್ರತಿದಿನವೂ ಶ್ರದ್ಧೆಯಿಂದ ಯಾವನು ಬೇರೊಬ್ಬರಿಗೆ ಹೇಳುವನೋ, ಅವನಿಗೆ ಭಗವಂತನಲ್ಲಿ ನಿಶ್ಚಲವಾದ ಭಕ್ತಿಯೋಗವುಂಟಾಗುವುದು. ಅನೇಕಪಾಪಗಳಿಗೆ ನೆಲೆಯಾದ ಸಂಸಾರದುಃಖಗಳಿಂದ ಪರಿತಪಿಸುತ್ತಿರುವ ಆತ್ಮನನ್ನು, ಈ ಭಗವದ್ಭಕ್ತಿಯೆಂಬ ಅಮೃತಸಾಗರದಲ್ಲಿ ಸ್ನಾನಮಾಡಿಸಿ, ಭಗವದ್ಜ್ಞಾನಾನುಭವವೆಂಬ ಮಹಾನಂದವನ್ನನುಭವಿಸುತ್ತಿರುವ ವಿವೇಕಿಗಳು ಅನಾಯಾಸವಾಗಿ ಲಭಿಸುವ ಮೋಕ್ಷವನ್ನೂ ಕೂಡ ಆದರಿಸಲಾರರು. ಅವರು ಯಾವವಿಷಯದಲ್ಲಿಯೂ ತನ್ನದೆಂಬ ಅಭಿಮಾನವಿಲ್ಲದೆ, ಎಲ್ಲವನ್ನೂ ಭಗವದಧೀನವೆಂದೇ ನೆನೆಸತಕ್ಕವರಾದುದರಿಂದ, ಸಮಸ್ತಪುರುಷಾರ್ಥಗಳನ್ನೂ ಹೊಂದಿದಂತೆಯೇ ತೃಪ್ತರಾಗುವರು. ಓ ರಾಜಾ! ಪಾಂಡವ

ರಾದ ನಿಮಗೂ, ಮತ್ತು ಯಾದವರಿಗೂ ಭಗವಂತನು ಸಾಕ್ಷಾತ್ತಾಗಿ ತಾನೇ ರಕ್ಷಕನಾಗಿಯೂ, ಗುರುವಾಗಿಯೂ, ದೈವವಾಗಿಯೂ, ಮಿತ್ರನಾಗಿಯೂ, ಕುಲಪತಿಯಾಗಿಯೂ ಇರುವನು. ಹೆಚ್ಚೇಕೆ? ಸಮಯಬಂದಾಗ ಕಿಂಕರನಾಗಿಯೂ ಕೆಲಸ ಮಾಡಿರುವನು. ಹೀಗಿದ್ದರೂ ನಿಮ್ಮ ಹಿರಿಯರಾದ ಪಾಂಡವರಿಗಾಗಲೀ, ಮತ್ತು ತನ್ನನ್ನು ಎಡೆಬಿಡದೆ ಧ್ಯಾನಿಸಿದ ಇತರರಿಗಾಗಲೀ, ಅವನು ಮೋಕ್ಷವನ್ನು ಕೊಟ್ಟನೇ ಹೊರತು ಭಕ್ತಿಯೋಗವನ್ನು ಕೊಡಲಿಲ್ಲವಷ್ಟೇ? ಆದುದರಿಂದ ಮೋಕ್ಷಕ್ಕಿಂತಲೂ ಭಕ್ತಿಯೋಗವು ದುರ್ಲಭವು. ರಾಜಾ! ಯಾವನು ಪರಬ್ರಹ್ಮರೂಪವಾದ ಆತ್ಮಸ್ವರೂಪವನ್ನು ಎಡೆಬಿಡದೆ ಅನುಭವಿಸತಕ್ಕ ಮಹಾಲಾಭದಿಂದ, ಬೇರೆ ಪುರುಷಾರ್ಥಗಳಲ್ಲಿ ದೃಷ್ಟಿಯಿಡದಿದ್ದನೋ, ಮತ್ತು ಯಾವನು ಪಾಪಪ್ರವರ್ತನದಿಂದ ತಮ್ಮ ಶ್ರೇಯಸ್ಸನ್ನೇ ತಾವು ಕಾಣದಿರುವ ಜೀವನರಲ್ಲಿ ಕನಿಕರಗೊಂಡು, ಅವರಿಗೆ ನಿರ್ಭಯವಾದ ಆತ್ಮಾನುಭವವೆಂಬ ಮೋಕ್ಷೋಪಾಯವನ್ನು ತೋರಿಸಿಕೊಟ್ಟನೋ, ಋಷಭರೂಪಿಯಾದ ಆ ಪರಮಪುರುಷನಿಗೆ ನಮಸ್ಕಾರವು. ಇದು ಆರನೆಯ ಅಧ್ಯಾಯವು.

## ಭರತನ ಚರಿತ್ರವು.

ಎಲೈ ಪರೀಕ್ಷಿದ್ರಾಜನೇ? ಪರಮಪಾವನವಾದ ಋಷಭನ ಚರಿತ್ರವನ್ನು ನಿನಗೆ ಸಾಂಗವಾಗಿ ವಿವರಿಸಿದೆನಷ್ಟೆ! ಇನ್ನು ಅತನ ಜ್ಯೇಷ್ಠಪುತ್ರನಾದ ಭರತನ ಚರಿತ್ರವನ್ನು ವಿವರಿಸುವೆನು ಕೇಳು. ಆ ಭರತನು ಪರಮಭಾಗವತೋತ್ತಮನು! ಈತನು ತಂದೆಯಾಜ್ಞೆಯಿಂದ ರಾಜ್ಯವನ್ನು ನಡೆಸುತ್ತಿದ್ದಾಗ, ವಿಶ್ವರೂಪನ ಮಗಳಾದ ಪಂಚಜನಿಯೆಂಬವಳನ್ನು ವಿವಾಹಮಾಡಿಕೊಂಡನು. ಭೂತಾದಿಯೆಂಬ ತಾಮಸಾಹಂಕಾರದಿಂದ ಐದು ಭೂತಸೂಕ್ಷ್ಮಗಳು ಹುಟ್ಟಿದಂತೆ ಆ ಭರತನಿಗೆ ಪಂಚಜನಿಯಲ್ಲಿ ಸರ್ವವಿಧದಲ್ಲಿಯೂ ತನಗೆ ಸಮಾನಗುಣವುಳ್ಳ ಐದುಮಂದಿ ಮಕ್ಕಳು ಹುಟ್ಟಿದರು. ಇವರಿಗೆ ಕ್ರಮವಾಗಿ ಸುಮತಿ, ರಾಷ್ಟ್ರಭೃತ್ತು, ಸುದರ್ಶನ ಆವರಣ, ಧೂಮ್ರಕೇತುವೆಂದು ಹೆಸರು. ಭರತನು ಯಾವಭೂಭಾಗವನ್ನು ಪಾಲಿಸುತ್ತಿದ್ದನೋ, ಆಭಾಗವು ಭಾರತವರ್ಷವೆಂಬ ಅವನ ಹೆಸರಿನಿಂದಲೇ ಪ್ರಸಿದ್ಧ

ವಾಯಿತು! ಅನೇಕವಿಷಯಗಳನ್ನು ಬಲ್ಲವನಾಗಿದ್ದ ಆ ಭರತನು, ತನ್ನ ಕುಲಧರ್ಮವನ್ನು ತಾನು ಚೆನ್ನಾಗಿ ಅನುವರ್ತಿಸುತ್ತಿದ್ದುದಲ್ಲದೆ, ತನ್ನ ದೇಶದ ಪ್ರಜೆಗಳನ್ನೂ ಅವರವರ ವರ್ಣಾಶ್ರಮಧರ್ಮಗಳಲ್ಲಿ ನಿಯೋಗಿಸಿ, ತನ್ನ ಪಿತೃಪಿತಾಮಹರಂತೆಯೇ ಪ್ರಜಾರಂಜಕನಾಗಿ ರಾಜ್ಯವನ್ನು ಪಾಲಿಸುತ್ತಿದ್ದನು. ಮತ್ತು ಈತನು ಅಗ್ನಿಹೋತ್ರ ದರ್ಶಪೂರ್ಣಮಾಸ, ಚಾತುರ್ಮಾಸ್ಯ ಪಶು, ಸೋಮವೆಂಬ ನಾನಾಬಗೆಯ ಯಾಗಗಳಲ್ಲಿ, ಪ್ರಕೃತಿವಿಕೃತಿಗಳೆಂಬ ಎರಡುಮಾರ್ಗಗಳಿಂದಲೂ ಭಗವಂತನನ್ನು ಶ್ರದ್ಧೆಯಿಂದ ಆರಾಧಿಸುತ್ತ ಬಂದನು. ತ್ರಿಸಂಧ್ಯಾಕಾಲಗಳಲ್ಲಿಯೂ ಚಾತುರ್ಹೋತ್ರವೆಂಬ ವಿಧಿಯನ್ನನುಸರಿಸಿ ಸಾಮಾಗ್ರಿಗಳಲ್ಲಿಯಾಗಲೀ ಕರ್ಮಗಳಲ್ಲಿಯಾಗಲೀ ಲೋಪವಿಲ್ಲದಂತೆ, ಅನೇಕಯಾಗಗಳನ್ನು ನಡೆಸುತ್ತ ಬಂದರೂ, ಧರ್ಮವೆಂದೂ, ಅಪೂರ್ವವೆಂದೂ ಕರೆಯಲ್ಪಡುವ ಆ ಯಾಗಫಲವನ್ನೂ ಭಗವದನುಗ್ರಹವೆಂದೇ ತಿಳಿದು, ಅದನ್ನು ಆ ಭಗವದರ್ಪಣರೂಪವಾಗಿಯೇ ಭಾವಿಸುತ್ತಿದ್ದನು. ಬೇರೆಬೇರೆ ದೇವತೆಗಳನ್ನು ದ್ವೇಷಿಸಿ ಹೇಳತಕ್ಕ ಮಂತ್ರಿಗಳೂಕೂಡ, ಆ ದೇವತೆಗಳಿಗೆ ಅಂತರಾತ್ಮನಾಗಿ ಯಜ್ಞಪುರುಷನೆನಿಸಿದ ಪರಮಾತ್ಮನಲ್ಲಿಯೇ ಪರ್ಯವಸನ್ನವಾಗುವುದರಿಂದ, ತಾನು ಹೇಳತಕ್ಕ ಯಜ್ಞಮಂತ್ರಗಳಿಲ್ಲವನ್ನೂ ಸಾಸುದೇವನಮಂತ್ರವೆಂದೇ ಭಾವಿಸುತ್ತಿದ್ದನು. ತನ್ನ ಚಾತುರ್ಯದಿಂದಲೇ ತನ್ನ ಕರ್ಮವಾಸನೆಯೆಲ್ಲವನ್ನೂ ನೀಗಿ, ಬುದ್ಧಹೃದಯನಾಗಿದ್ದ ಆ ಭರತನು ಆ ಯಜ್ಞಕಾಲದಲ್ಲಿ, ಅಧ್ವರ್ಯುಗಳು ಹೋಮದ್ರವ್ಯವನ್ನು ತೆಗೆದು, ಇಂದ್ರಾದಿದೇವತೆಗಳನ್ನುದ್ದೇಶಿಸಿ ಹೋಮಮಾಡುತ್ತಿರುವಾಗ, ಆಯಾ ದೇವತೆಗಳನ್ನೂ ಪರಮಪುರುಷನಿಗೆ ಅವಯವವೆಂದೇ ಧ್ಯಾನಿಸುತ್ತಿದ್ದನು. ಹೀಗೆ ಭರತನು ತಾನು ನಡೆಸತಕ್ಕ ಕರ್ಮಗಳೆಲ್ಲವನ್ನೂ ಭಗವದಾರಾಧನರೂಪವಾಗಿಯೇ ನಡೆಸುತ್ತ, ಅದರಿಂದ ಶುದ್ಧಮನಸ್ಕನಾದನು. ಇದರಿಂದಲೂ ಆತನು ಕ್ರಮಕ್ರಮವಾಗಿ ತನ್ನ ಹೃದಯಕಮಲಮಧ್ಯದಲ್ಲಿ ಜೀವಶರೀರಕನಾಗಿ ನೆಲೆಗೊಂಡವನಾಗಿಯೂ, ಶ್ರೀವತ್ಸ, ಕೌಸ್ತುಭ, ವನಮಾಲಿಕೆ, ಶಂಖ, ಚಕ್ರವೊದಲಾದುವುಗಳಿಂದ ಶೋಭಿತನಾಗಿಯೂ, ಮಹಾಪುರುಷಲಕ್ಷಣಗಳಿಂದ ಕೂಡಿದವನಾಗಿಯೂ, ಇರುವ ವಾಸುದೇವಾತ್ಮಕನಾದ ಪರಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಂಡನು. ಭರತನಿಗೆ ಆ ಭಗವಂತನಲ್ಲಿ ದಿನದಿನಕ್ಕೆ ಭಕ್ತಿಯು ಹೆಚ್ಚಿತು. ಆವನ ಭಕ್ತಿಯೋಗವು ಪರಿಪಕ್ವವಾಯಿತು. ಹೀಗೆ ಹತ್ತು ಸಾವಿರವರ್ಷಗಳವರೆಗೆ ಸತ್ಕರ್ಮಗಳನ್ನಾಚರಿಸುತ್ತಿದ್ದು, ತನಗೆ ಭೋಗಾನುಭವದ ಕಾಲವು ಅತಿಕ್ರಮಿಸುತ್ತ ಬಂದುದನ್ನು ತಿಳಿದು, ಕುಲಕ್ರಮಾಗತವಾಗಿ ಬಂದ ರಾಜ್ಯಕೋಶಾದಿಗಳೆಲ್ಲವನ್ನೂ ತನ್ನ ಮಕ್ಕಳಿಗೆ ಹಂಚಿಕೊಟ್ಟನು. ಸಕಲೈಶ್ವರ್ಯ ಸಮೃದ್ಧವಾದ ತನ್ನ ಅರಮನೆಯನ್ನು

ಬಿಟ್ಟು ಹೊರಟು, ಪುಲಹಾಶ್ರಮವೆಂಬ ಸಾಲಗ್ರಾಮಕ್ಷೇತ್ರಕ್ಕೆ ಬಂದು ಸೇರಿದನು. ರಾಜೇಂದ್ರಾ! ಆ ಕ್ಷೇತ್ರವು ಬಹಳಪವಿತ್ರವಾದುದು! ಭಗವಂತನು ಈಗಲೂ ಅಲ್ಲಿ ತನ್ನನ್ನಾರಾಧಿಸತಕ್ಕ ಭಕ್ತರಿಗೆ, ಅವರವರ ಇಚ್ಛಾನುಸಾರವಾದ ರೂಪದಿಂದ ಪ್ರತ್ಯಕ್ಷನಾಗುವನು. ಅಲ್ಲಿ ಚಕ್ರನದಿಯೆಂಬ ಒಂದಾನೊಂದು ನದಿಯು ಪ್ರವಹಿಸುತ್ತ, ಆಕ್ಷೇತ್ರವೆಲ್ಲವನ್ನೂ ಪವಿತ್ರವಾಗಿ ಮಾಡುತ್ತಿರುವುದು. ಮೇಲೆ ಕೆಳಗೆಲ್ಲಾ ಚಕ್ರರೇಖೆಗಳುಳ್ಳ ಶಿಲೆಗಳಿಂದ ತುಂಬಿರುವುದರಿಂದ ಆ ನದಿಗೆ ಚಕ್ರನದಿಯೆಂದು ಹೆಸರು. ಆ ನದೀತೀರದಲ್ಲಿ ಭರತನು ಏಕಾಕಿಯಾಗಿದ್ದು, ಬಗೆಬಗೆಯ ಹೂಗಳಿಂದಲೂ ಚಿಗುರುಗಳಿಂದಲೂ, ತುಲಸೀದಳಗಳಿಂದಲೂ, ಜಲದಿಂದಲೂ, ಗಡ್ಡೆಗೆಣಸು ಮೊದಲಾದ ನೈವೇದ್ಯಗಳಿಂದಲೂ, ಭಗವಂತನ್ನಾರಾಧಿಸುತ್ತಿದ್ದನು. ಮತ್ತು ತಾನು ಶುದ್ಧವಾದ ಆಹಾರದಿಂದ ದೇಹಧಾರಣವನ್ನು ಮಾಡುತ್ತ ವಿಷಯಾಭಿಲಾಷೆಯನ್ನು ಬಿಟ್ಟು, ಜಿತೇಂದ್ರನಾಗಿ ಭಗವಂತನಲ್ಲಿ ಪ್ರೀತಿರೂಪವಾದ ಪರಮಭಕ್ತಿಯನ್ನು ಸಾಧಿಸುತ್ತಿದ್ದನು. ಈ ಕಾರ್ಯಗಳಿಂದ ಆ ಭರತನಿಗೆ ಪುಣ್ಯಕೀರ್ತಿಯಾದ ಭಗವಂತನಲ್ಲಿ ಎಣೆಯಿಲ್ಲದ ಅನುರಾಗವು ಹುಟ್ಟಿತು. ಈ ಅನುರಾಗಾತಿಶಯದಿಂದ ಅತನ ಹೃದಯವು ಕರಗಿತು. ಅವನ ದೇಹವು ಪುಳಕಿತವಾಯಿತು. ಅವನ ಕಣ್ಣುಗಳಲ್ಲಿ ಆನಂದಬಾಷ್ಪವು ತುಂಬಿಕೊಂಡಿತು. ಹೀಗೆ ಆ ಭರತನಿಗೆ, ಭಗವಂತನ ಪಾದಾರವಿಂದಗಳನ್ನು ಎಡೆಬಿಡದೆ ಧ್ಯಾನಿಸುವುದರಿಂದ ಭಕ್ತಿಯೋಗವು ಕ್ರಮಕ್ರಮವಾಗಿ ಹೆಚ್ಚಿ ಬಂದು, ಆದರಿಂದುಂಟಾದ ಆನಂದಪ್ರವಾಹದಲ್ಲಿ ಅವನ ಬುದ್ಧಿಯು ಮುಳುಗಿಹೋದುದರಿಂದ ಆಗ ಅವನಿಗೆ ತಾನು ನಡೆಸುತ್ತಿರುವ ಭಗವತ್ಪೂಜೆಯೂ ಮರೆತು ಹೋಗುವಂತಾಯಿತು. ಈ ವಿಧವಾಗಿ ಭರತನ ಕೃಷ್ಣಾಜಿನವನ್ನುಟ್ಟು, ಚಕ್ರನದಿಯಲ್ಲಿ ತ್ರಿಕಾಲಸ್ನಾನಮಾಡುವುದರಿಂದ ಯಾವಾಗಲೂ ಒದ್ದೆಯಾಗಿಯೂ, ಗೋರೋಚನದ ಬಣ್ಣಪ್ರಳ್ಳದಾಗಿಯೂ, ಸುರಳಿಸುರಳಿಯಾಗಿಯೂ ಇರುವ ಜಟಾಭಾರದಿಂದ ಶೋಭಿಸುತ್ತ, ಭಗವದಾರಾಧನನೆಂಬ ದೃಢವ್ರತವನ್ನು ನಡೆಸುತ್ತಿದ್ದನು. ಸೂರ್ಯೋದಯವಾದೊಡನೆ ಇದಿರೆದ್ದು ನಿಂತು, ಸೂರ್ಯಮಂಡಲ ಮಧ್ಯವರ್ತಿಯಾಗಿ ಸುವರ್ಣಜ್ಯೋತಿಯುಳ್ಳ ಭಗವಂತನ ಸ್ವರೂಪವನ್ನು ನಿರೂಪಿಸತಕ್ಕ ಋಕ್ಕಿನಿಂದ ಹೀಗೆಂದು ಸ್ತೋತ್ರಮಾಡುವನು. "ಯಾವನು ತನ್ನ ಸಂಕಲ್ಪದಿಂದಲೇ ಸಮಸ್ತಜಗತ್ತನ್ನೂ ಸೃಷ್ಟಿಸಿ, ತಾನೂ ಜೀವನ ಮೂಲಕವಾಗಿ ಅದರಲ್ಲಿ ಪ್ರವೇಶಿಸಿ, ಅದನ್ನು ಆಯಾ ಕಾರ್ಯಗಳಲ್ಲಿ ಪ್ರೇರಿಸುವನೋ ಅಂತಹ ಶ್ರೀಮನ್ನಾರಾಯಣನ ತೇಜೋಮಯವಾದ ಈ ಸ್ವರೂಪವನ್ನು ಶರಣು ಹೊಂದುವೆನು. ಮತ್ತು ಜೀವನು ದುರ್ವಿಷಯಗಳಲ್ಲಿ ಪ್ರೇರಿಸತಕ್ಕ ಬುದ್ಧಿಗೆ ವಶನಾಗಿ, ಕರ್ಮಗಳನ್ನು ನಡೆಸಿ, ಅದಕ್ಕೆ ತಕ್ಕ ಫಲವನ್ನನುಭವಿಸುವಾಗ, ಯಾವನು



೨೯. ನದಿಯಲ್ಲಿ ನೀರು ಕುಡಿಯುತಿದ್ದ ಒಂದಾನೊಂದು ಹೆಣ್ಣುಜಿಂಕೆಗೆ,
ಸಿಂಹಗರ್ಜನದಿಂದ ಗರ್ಭಸ್ರಾವವಾಗಲು, ಭರತನು ಆ ಮರಿಯನ್ನು ಕರೆತಂದುದು.

ಆ ಜೀವನಲ್ಲಿ ತಾನೂ ಅಂತರಾತ್ಮನಾಗಿದ್ದು, ಅವನು ವ್ಯಾಪಾರಗಳನ್ನು ನೋಡುತ್ತಿರುವನೋ, ಯಾವನು ಜಗತ್ಕಾರಣಭೂತನೋ, ಪ್ರಕೃತಿಮಂಡಲಕ್ಕಿಂತಲೂ ಹೊರಗೆ ಪ್ರಕಾಶಿಸುತ್ತಿರುವ ಆ ಪರಮಪುರುಷನ ತೇಜೋಮಯವಾದ ಶರೀರವನ್ನು ಶರಣು ಹೊಂದುವೆವು ಕೇವಲಜ್ಞಾನಮಯವಾಗಿ ಲೋಕವಿಲಕ್ಷಣವಾದ ಆ ರೂಪವನ್ನು ಮರೆಹೊಗುವೆನು"ಎಂದು ಹೇಳಿಸೂರ್ಯಮಂತ್ರದಿಂದ ಉಪಸ್ಥಾನಮಾಡುತ್ತಿದ್ದನು. ಇಲ್ಲಿಗೆ ಏಳನೆಯ ಅಧ್ಯಾಯವು.

---

ಭರತನು ನದೀತೀರದಲ್ಲಿರುವಾಗ, ಅಪಾಯಕ್ಕೆ ಸಿಕ್ಕಿಬಿದ್ದ ಒಂದು ಹುಲ್ಲೆಯನ್ನು ಕಂದು ಪೋಷಿಸಿ, ಕೊನೆಗೆ ತಾನೂ ಹುಲ್ಲೆಯ ಜನ್ಮವನ್ನು ಹೊಂದಿದುದು.

ರಾಜೇಂದ್ರಾ ಕೇಳು! ಆ ಭರತನು ಒಮ್ಮೆ ಚಕ್ರನದಿಯಲ್ಲಿ ಸ್ನಾನಮಾಡಿ, ನಡೆಸಬೇಕಾದ ನಿತ್ಯಕರ್ಮಗಳನ್ನು ಮುಗಿಸಿಕೊಂಡು, ಪ್ರಣವ ಮಂತ್ರವನ್ನು ಜಪಿಸುತ್ತ ನದೀತೀರದಲ್ಲಿ ಕುಳಿತಿದ್ದನು. ಮೂರು ಮುಹೂರ್ತ ಕಾಲದವರೆಗೆ ಈ ಮಂತ್ರಜಪವನ್ನು ನಾಡುವಷ್ಟರಲ್ಲಿ ಒಂದಾನೊಂದು ಹೆಣ್ಣುಜಿಂಕೆಯು, ಬಾಯಾರಿಕೆಯಿಂದ ನೀರು ಕುಡಿಯುವುದಕ್ಕಾಗಿ ತನ್ನ ಮಂದೆಯನ್ನು ಬಿಟ್ಟು ಒಂಟಿಯಾಗಿ ಬಂದು ಆ ನದಿಯಲ್ಲಿಳಿಯಿತು ಆದು ನೀರನ್ನು ಕುಡಿಯುತ್ತಿರುವಾಗಲೇ, ಸಮೀಪದಲ್ಲಿ ಲೋಕಭಯಂಕರವಾದ ಒಂದು ಸಿಂಹ ಗರ್ಜನವು ಆದರ ಕಿವಿಗೆ ಬಿದ್ದಿತು. ಸಹಜವಾಗಿಯೇ ಭೀರುಸ್ವಭಾವವುಳ್ಳ ಆಹೆಣ್ಣು ಜಿಂಕೆಗೆ, ಈ ಸಿಂಹಗರ್ಜನವು ಕಿವಿಗೆ ಬಿದ್ದೊಡನೆ ಎದೆಯೊಡೆಯುವಂತೆ ಭಯವುಂಟಾಯಿತು ಭಯದಿಂದ ಚಂಚಲದೃಷ್ಟಿಯುಳ್ಳ ಆ ಜಿಂಕೆಯು, ಸಿಂಹಗರ್ಜನವನ್ನು ಕೇಳಿ ನಡುಗುತ್ತ, ನೀರುಕುಡಿಯುವುದನ್ನೂ ಬಿಟ್ಟು, ಅತ್ಯಾತುರದಿಂದ ಥಟ್ಟನೆ ತಾನು ನಿಂತಿದ್ದ ಸ್ಥಳದಿಂದ ಹಾರಿ, ಆ ನದಿಯನ್ನು ದಾಟಿ ಹೋಗುವುದಕ್ಕೆ ಪ್ರಯತ್ನಿಸಿತು. ಆ ಕಾಲದಲ್ಲಿ ಆದು ಪೂರ್ಣಗರ್ಭಿಣಿಯಾಗಿದ್ದುದರಿಂದ, ಆದಕ್ಕೆ ಗರ್ಭಸ್ರಾವವುಂಟಾಗಿ, ಆ ಮರಿಯು ನೀರಿನಲ್ಲಿ ಬಿದ್ದಿತು. ಹೀಗೆ ಆ ಜಿಂಕೆಗೆ ಭಯಾತುರದಿಂದಲೂ, ನದಿಯನ್ನು ದಾಟಿ ಹೋಗುವ ಆಯಾಸದಿಂದಲೂ, ಗರ್ಭವು ಜಾರಿಬೀಳಲು, ಭಯದಿಂದಲೂ, ನೋವಿನಿಂದಲೂ ಪೀಡಿತವಾದ ಆ ಜಿಂಕೆಯು, ಒಂದೇ

ಓಟದಿಂದ ಮುಂದೆ ಹೋಗಿ, ಒಂದು ಪರ್ವತಗುಹೆಯನ್ನು ಹೊಕ್ಕಿತು. ಅತ್ಯಾಯಾಸದಿಂದ ಕೆಳಗೆ ಬಿದ್ದು ಕೊನೆಗೆ ಮರಣವನ್ನೂ ಹೊಂದಿತು. ಇತ್ತಲಾಗಿ ಭರತನು ನದೀಪ್ರಪಾಹದಲ್ಲಿ ತೇಲಿಹೋಗುತ್ತಿರುವ ಆ ಜಿಂಕೆಯ ಮರಿಯನ್ನು ನೋಡಿದನು. ಬಂಧುಗಳನ್ನಗಲಿ, ತಾಯಿಯೂ ಸತ್ತುದರಿಂದ ದಿಕ್ಕಿಲ್ಲದೆ ಪ್ರಾಣಾಪಾಯಕ್ಕೆ ಸಿಕ್ಕಿಬಿದ್ದ ಆ ಮರಿಯಲ್ಲಿ ಕನಿಕರಗೊಂಡು, ಅದನ್ನು ಆ ಪ್ರವಾಹದಿಂದೆತ್ತಿತಂದು, ತನ್ನ ಆಶ್ರಮದಲ್ಲಿರಿಸಿ ಕಾಪಾಡುತ್ತಿದ್ದನು. ಆ ಭರತನಿಗೆ ಕ್ರಮಕ್ರಮವಾಗಿ, ಆ ಜಿಂಕೆಯ ಮರಿಯಲ್ಲಿ ತನ್ನ ದೆಂಬ ಅಭಿಮಾನವು ಹುಟ್ಟಿತು. ಪ್ರತಿದಿನವೂ ಅದಕ್ಕೆ ಕಾಲಕಾಲಕ್ಕೆ ಆಹಾರವನ್ನು ಕೊಡುತ್ತಿದ್ದನು. ಆಗಾಗ ಅದರ ಮೈಯನ್ನು ತೊಳೆದು ಶುದ್ಧಮಾಡುತ್ತಿದ್ದನು. ಹೊಟ್ಟೆಯಲ್ಲಿ ಹುಟ್ಟಿದ ಮಗುವಿನಂತೆ ಬಾರಿ ಬಾರಿಗೂ ಅದನ್ನು ಮುದ್ದಾಡಿ ಲಾಲಿಸುತ್ತಿದ್ದನು. ಹುಲಿ ಮೊದಲಾದ ಕಾಡುಮೃಗಗಳ ಕೈಗೆ ಸಿಕ್ಕದಂತೆ ಎಚ್ಚರದಿಂದ ಕಾಪಾಡುತ್ತ ಬಂದನು. ಹೀಗೆ ಆ ಭರತನು ಯಾವಾಗಲೂ ಆ ಜಿಂಕೆಯ ಮರಿಯನ್ನು ಬೆಳೆಸುವುದರಲ್ಲಿಯೇ ಆಸಕ್ತನಾಗಿದ್ದುದರಿಂದಲೂ, ಯಾವಾಗಲೂ ಅದರ ಚಿಂತೆಯಲ್ಲಿಯೇ ಇದ್ದುದರಿಂದಲೂ, ಕ್ರಮಕ್ರಮವಾಗಿ ಅತನಿಗೆ ಭಗವದಾರಾಧನಾದಿಗಳಲ್ಲಿಯೂ, ಕರ್ಮಾನುಷ್ಠಾನದಲ್ಲಿಯೂ, ಶೌಚಾಚಾರಗಳಲ್ಲಿಯೂ, ದಿನದಿನಕ್ಕೆ ಒಕ್ಕರೆಯು ತಪ್ಪುತ್ತ ಬಂದಿತು. ಅವನು ಪಡೆಸುತ್ತಿದ್ದ ಧರ್ಮಗಳೆಲ್ಲವೂ ದಿನದಿನಕ್ಕೆ ತಗ್ಗುತ್ತ ಬಂದು, ಕೆಲವು ದಿನಗಳೊಳಗಾಗಿ ಸಮಸ್ತ ಧರ್ಮಗಳೂ ನಿಶ್ಶೇಷವಾಗಿ ನಷ್ಟವಾದುವು. ಭರತನು ಆ ಜಿಂಕೆಯ ಮರಿಯನ್ನು ನೋಡಿದಾಗಲೆಲ್ಲಾ, ತನ್ನ ಮನಸ್ಸಿನಲ್ಲಿ "ಅಯ್ಯೋ, ಪಾಪವೇ! ಕಾಲವಶದಿಂದ ತಂದೆ ತಾಯಿ ಮೊದಲಾದ ತನ್ನ ಬಂಧುವರ್ಗವೆಲ್ಲವನ್ನೂ ಅಗಲಿ ಬಂದ ಈ ಜಿಂಕೆಯ ಮರಿಯು ಪ್ರವಾಹದಲ್ಲಿ ಬಿದ್ದು ಸಾಯುತ್ತಿತ್ತಲ್ಲಾ! ಇಂಹ ದುರವಸ್ಥೆಗೆ ಸಿಕ್ಕಿಬಿದ್ದ ಈ ಪ್ರಾಣಿಯು ದೈವವಶದಿಂದ ನನ್ನ ಕೈಗೆ ಸಿಕ್ಕಿತು! ಈಗ ಈ ಮರಿಯು ನನ್ನನ್ನೇ ಬಿಟ್ಟು ಬೇರೊಬ್ಬ ರಕ್ಷಕನನ್ನು ಕಾಣದು! ಇದು ಸರ್ವವಿಧದಲ್ಲಿಯೂ ನನ್ನನ್ನೇ ನಂಬಿರುವುದರಿಂದ, ಇದನ್ನು ಚೆನ್ನಾಗಿ ಪೋಷಿಸಿ ವೃದ್ಧಿಗೆ ತರಬೇಕಾದುದೇ ನನ್ನ ಅವಶ್ಯಕರ್ತವ್ಯವು! ಇದನ್ನು ಲಾಲಿಸಿ ಸಂತೋಷಪಡಿಸಬೇಕಾದುದೇ ನನಗೆ ಮುಖ್ಯಕಾರ್ಯವು! ಇದರಿಂದ ನನ್ನ ಕಾರ್ಯಗಳೆಲ್ಲವೂ ಕೆಟ್ಟರೂ ಚಿಂತೆಯಿಲ್ಲ! ಇದಕ್ಕಾಗಿ ಕೋಪಿಸದೆ, ಇದನ್ನು ನಾನು ಪೋಷಿಸುತ್ತಿರಬೇಕಾದುದೇ ಯುಕ್ತವು. ವಿವೇಕಿಗಳಾದವರು ಮರಿಹೊಕ್ಕವರನ್ನು ಕಾಪಾಡದಿದ್ದರೆ ಬಹಳ ದೋಷಕ್ಕೆ ಗುರಿಯಾಗುವರು. ಪರೋಪಕಾರಿಗಳಾಗಿಯೂ, ಶಾಂತರಾಗಿಯೂ ಇರುವ ಪಂಡಿತರು, ಇಂತಹ ದೀನರಲ್ಲಿ ದಯೆಯನ್ನು ತೋರಿಸದೆ ಬಿಡರು!

ಸಜ್ಜನರು, ಮರೆಹೊಕ್ಕವರನ್ನು ರಕ್ಷಿಸುವ ವಿಷಯದಲ್ಲಿ ಸ್ವಪ್ರಯೋಜನ ಹಾನಿಯನ್ನೂ ಸ್ವಲ್ಪಮಾತ್ರವೂ ಲಕ್ಷಿಸಲಾರರು" ಎಂದು ತನ್ನಲ್ಲಿ ತಾನೇ ಚಿಂತಿಸುತ್ತ, ಆ ಮರಿಯಲ್ಲಿ ಮೇಲೆಮೇಲೆ ಹೆಚ್ಚಾಗಿ ಪ್ರೀತಿಯನ್ನು ತೋರಿಸುತ್ತಿದ್ದನು. ಅದು ಮೊದಲು ಅತನು ಪ್ರತಿದಿನವೂ ಆ ಜಿಂಕೆಯ ಮರಿಯೊಡನೆಯೇ ಕುಳಿತಿರುವನು! ಯಾವಾಗಲೂ ಅದರೊಡನೆಯೇ ಆಡುತ್ತಿರುವನು! ಅದರೊಡನೆಯೇ ತಾನೂ ಗೆಡ್ಡೆ ಗೆಣಸುಗಳನ್ನು ತಿನ್ನುವನು! ಹೀಗೆ ಭರತನಿಗೆ, ಆ ಜಿಂಕೆಯ ಮರಿಯಲ್ಲಿ ಮಿತಿಮೀರಿದ ಸ್ನೇಹವುಂಟಾಯಿತು! ಒಮ್ಮೊಮ್ಮೆ ದರ್ಭೆಗಳನ್ನಾಗಲೀ, ಪುಷ್ಪಗಳನ್ನಾಗಲೀ, ನೀರನ್ನಾಗಲೀ, ತರುವುದಕ್ಕಾಗಿ ತಾನು ಹೊರಗೆ ಹೋಗಬೇಕಾಗಿ ಬಂದಾಗಲೂ, ಹುಲಿ ತೋಳ, ಮುಂತಾದ ಕಾಡುಮೃಗಗಳಿಂದ ಆ ಜಿಂಕೆಗೆ ಏನಾದರೂ ಅಪಾಯವು ಸಂಭವಿಸಬಹುದೆಂಬ ಚಿಂತೆಯಿಂದ, ಅದನ್ನೂ ತನ್ನ ಸಂಗಡಲೇ ಕಾಡಿಗೆ ಕರೆದುಕೊಂಡು ಹೋಗುತ್ತಿದ್ದನು. ಕಾಡುದಾರಿಯಲ್ಲಿ ನಡೆಯುವಾಗ ಆ ಮೃಗವು ಅಶಕ್ತಿಯಿಂದಲೋ, ಆಜ್ಞಾನದಿಂದಲೋ, ತನ್ನೊಡನೆ ಬಾರದೆ, ಅಲ್ಲಲ್ಲಿ ಹಿಂದೆ ನಿಂತಾಗ, ತಾನೂ ಅದರೊಡನೆ ನಿಂತು ಬಿಡುತ್ತಿದ್ದನು! ಎಷ್ಟಾದರೂ ಅದು ಮುಂದೆ ನಡೆಯದಿದ್ದ ಸಂದರ್ಭದಲ್ಲಿ,ಅದನ್ನು ತಾನೇ ಹೆಗಲಮೇಲೆ ಹೊತ್ತುಕೊಂಡು ಮುಂದೆ ಸಾಗುತ್ತಿದ್ದವ.. ಮತ್ತು ತಾನು ಕುಳಿತಾಗ ಅದನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಳ್ಳುವನು! ತಾನು ಮಲಗುವಾಗ ಅದನ್ನು ತನ್ನ ಎದೆಯ ಮೇಲೆ ಮಲಗಿಸಿಕೊಳ್ಳುವನು. ಹೀಗೆ ಭರತನು ಮಿತಿಮೀರಿದ ಪ್ರೇಮದಿಂದ ಆ ಜಿಂಕೆಯನ್ನ ಬಾರಿಬಾರಿಗೂ ಮುದ್ದಿಸಲಾಲಿಸುತ್ತ, ಅದರಿಂದ ಬಹಳವಾಗಿ ಸಂತೋಷಿಸುತ್ತಿದ್ದನು. ಮತ್ತು ತನ್ನ ನಿತ್ಯನೈಮಿತ್ತಿಕಾದಿ ಕರ್ಮಗಳನ್ನು ನಡೆಸುತ್ತಿರುವಾಗಲೂ ನಡುನಡುವೆ ಆ ಜಿಂಕೆಯನು, ನೆನೆಸಿಕೊಂಡು ಅದರಕಡೆಗೆ ತಿರುಗುವನು! ಅದು ಕಣ್ಣಿಗೆ ಬೀಳದಿದ್ದಾಗ, ಎದ್ದೆದ್ದು ನೋಡುವನು! ಅದನ್ನು ಕಂಡ ಮೇಲೆ ನೆಮ್ಮದಿಯಿಂದ ಕುಳ್ಳಿರುವನು! ಅದು ಕಣ್ಣಿಗೆ ಬಿದ್ದಾಗಲೆಲ್ಲಾ ಸಂತೋಷಡಿಂದುಕ್ಕುತ್ತ, 'ಓ ನನ್ನ ಮುದ್ದುಮರಿಯೇ? ನಿನಗೆ ಸರ್ವದೇಶ ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ ಕ್ಷೇಮವುಂಟಾಗುತ್ತಿರಲಿ!' ಎಂದು ಆಶೀರ್ವದಿಸುವನು. ಹೀಗಿರುವಾಗ ಒಮ್ಮೆ ಅಕಸ್ಮಾತ್ತಾಗಿ ಆ ಜಿಂಕೆಯು ಅವನ ಕಣ್ಣಿಗೆ ಕಾಣಿಸದೆ ಹೋಗಲು, ತನ್ನ ಅಸ್ತಿಯೆಲ್ಲವನ್ನೂ ಕಳೆದುಕೊಂಡವನಂತೆ ಭಯದಿಂದ ತತ್ತಳಿಸುತ್ತ, ಅದನ್ನು ಕ್ಷಣಮಾತ್ರವೂ ಅಗಲಿರಲಾರದೆ. ಮೋಹಪರವಶವಾಗಿ ದುಃಖದಿಂದ ರೋದನಮಾಡತೊಡಗಿದನು. "ಅಯ್ಯೋ! ತಾಯ್ತಂದೆಗಳಿಲ್ಲದೆ ತಬ್ಬಲಿಯಾಗಿ ನನ್ನಲ್ಲಿ ಬಂದು ಸೇರಿದ ಆ ನನ್ನ ಮುದ್ದು ಮರಿಯು ಎಲ್ಲಿಯೋ ಕಾಣೆನಲ್ಲಾ!

ಇನ್ನೇನುಗತಿ! ಅಯ್ಯೋ! ನಾನೆಂತಹ ದುಷ್ಟನು! ಎಷ್ಟು ಕ್ರೂರಹೃದಯನು! ನಾನೆಷ್ಟು ದುರ್ಭಾಗ್ಯನು! ಕಿರಾತನಂತೆ ನಿರ್ದಯನಾದ ನನ್ನ ನ್ನು ನಂಬಿ ಬಂದು ದರಿಂದಲ್ಲವೇ ಆ ಮುದ್ದುಮೃಗಕ್ಕೆ ಈ ಅವಸ್ಥೆಯುಂಟಾಯಿತು! ಅಯ್ಯೋ! ನಾನು ಇಷ್ಟು ಎಚ್ಚರತಪ್ಪಿದವನೆಂಬುದನ್ನು ಕಾಣದೆ, ನನ್ನನ್ನು ಸಾಧುವೆಂದು ತಿಳಿದು ನನ್ನಲ್ಲಿ ಸೇರಿ ಮೋಸಹೋಯಿತು! ಹೇಗಾದರೂ ಆಗಲಿ! ದೈವಕ್ಕೆ ವೆಯಿಂದ ಆದು ಸಾಯದೆ ಬದುಕಿದ್ದು, ಈ ಆಶ್ರಮದಲ್ಲಿಯೇ ಎ ಲ್ಲಿ ಯಾ ದ ರೂ ಹುಲ್ಲುಮೇ ಯುತ್ತಿರುವುದನ್ನು ನಾನು ತಿರುಗಿ ಕಣ್ಣಾ ರೆ ಕಾಣುವೆನೇ! ಕಾಡಿನಲ್ಲಿ ಗುಂಪಾಗಿ ಸಂಚರಿಸುತಕ್ಕ ತೊಳ ನಾಯಿ ಮುಂತಾದುವಾಗಲೀ, ಒಂಟಿಯಾಗಿ ಬೊಂಬುಹಾಕ ತಕ್ಕ ಹುಲಿ ಮುಂತಾದುವಾಗಲೀ, ಅದನ್ನು ಭಕ್ಷಿಸದೆ ಬಿಡುವುದೇ? ಆ ಲೋಕ ಕ್ಷೇಮಕ್ಕಾಗಿ ಉದಿಸಿ ಸಂಚಾರಮಾಡುತ್ತಿರುವ ಸೂರ್ಯನೂ ಅಸ್ತಮಿಸುತ್ತಿರುವನಲ್ಲಾ! ಅಯ್ಯೋ! ಇನ್ನೂ ಆ ನನ್ನ ಮುದ್ದುಮೃಗವು ನನ್ನ ಬಳಿಗೆ ಬಂದು ಸೇರಲಿಲ್ಲ ವಲ್ಲಾ! ಆ ನನ್ನ ಜಿಂಕೆಯ ಮರಿಯೆಂಬ ರಾಜಕುಮಾರನು ತನ್ನ ಜಾತಿಗೆ ಸಹಜ ವಾದ ಮತ್ತು ಮನೋಹರವಾದ ತನ್ನ ಆಟಗಳಿಂದ ದುರ್ಭಾಗ್ಯನಾದ ನನ್ನ ಮನಸ್ಸನ್ನು ತಿರುಗಿ ಯಾವಾಗ ಆನಂದಪಡಿಸುವನೋ ಕಾಣೆನು! ಆಗಾಗ ನನ್ನೊ ಡನೆ ಸೇರಿ ಆಟವಾಡುತ್ತಿರುವಾಗ, ನಾನು ಸುಳ್ಳುಸುಳ್ಳಾಗಿ ತಪಸ್ಸುಮಾಡು ವಂತೆ ಕಣ್ಣುಮುಚ್ಚಿ ಕುಳಿತರೆ, ಆ ನನ್ನ ಮುದ್ದುಮೃಗವು ನನ್ನಲ್ಲಿ ಪ್ರಣಯ ಕೋಪವನ್ನು ತೋರಿಸುತ್ತ ಬಂದು, ಜಲಧಾರೆಯಂತೆ ಮೃದುವಾದ ತನ್ನ ಕೊಂಬಿನ ತುದಿಯಿಂದ ಬಾರಿಬಾರಿಗೂ ಭಯಪಟ್ಟು ನನ್ನನ್ನು ಸವರುತ್ತಿದ್ದಿತಲ್ಲಾ! ಅಂತಹ ನನ್ನ ಮುದ್ದುಮರಿಯನ್ನು ನಾನು ತಿರುಗಿ ಕಾಣುವೆನೇ? ಒಮ್ಮೊಮ್ಮೆ ಆ ಮೃಗವು ಕುಚೇಷ್ಟೆಗಾಗಿ ನಾನು ದರ್ಭೆಗಳಲ್ಲಿ ಮುಚ್ಚಿಟ್ಟ ಹವಿಸ್ಸುಗಳನ್ನು ಬಾಯಿಂದ ಕಡಿದು, ಅಶುದ್ಧವಾಗಿ ಮಾಡುವುದುಂಟು! ಆದಕ್ಕಾಗಿ ನಾನು ಕೋಪ ದಿಂದ ಗರ್ಜಿಸಿ ಹೆದರಿಸಿದಾಗ, ಆಕ್ಷಣವೇ ತನ್ನ ಆಟಗಳೆಲ್ಲವನ್ನೂ ಬಿಟ್ಟು ಜಿತೇಂದ್ರಿ ಯನಾದ ಋಷಿಕುಮಾರನಂತೆ ಸದ್ದಿಲ್ಲದೆ ನನ್ನ ಮುಂದೆ ಕುಳಿತಿರುವುದಲ್ಲಾ! ಅಂತಹ ನನ್ನ ಮುದ್ದುಮೃಗವು ಇನ್ನೂ ಏಕೆ ಬರಲಿಲ್ಲವೋ ಕಾಣೆನು" ಎಂದು ಆ ಮೃಗದ ಚಿಂತೆಯಿಂದ ವಿಲಪಿಸುತ್ತ, ಪರ್ಣಶಾಲೆಯನ್ನು ಬಿಟ್ಟು ಹೊರಗೆ ಬಂದನು. ಆಶ್ರಮದ ಹೊರಗೆ ಆ ಮೃಗದ ಹೆಜ್ಜೆಯ ಗುರುತುಗಳಿಂದ ಕೂಡಿದ ಭೂಪ್ರದೇಶವನ್ನು ನೋಡಿ ಮತ್ತಷ್ಟು ದುಃಖದಿಂದ ವಿಲಪಿಸುವನು. "ಆಹಾ! ಈ ಭೂದೇವಿಯು ಎಂತಹ ಭಾಗ್ಯಶಾಲಿನಿಯೋ! ಆ ನನ್ನ ಮುದ್ದು ಮೃಗದ ಪಾದವಾದ ಹೆಜ್ಜೆಯಗುರುತುಗಳನ್ನು ತನ್ನ ಮೈಗೆ ಭೂಷಣವಾಗಿ ಧರಿಸಿ

ರುವ ಈ ಭೂದೇವಿಯು ಪೂರ್ವಜನ್ಮದಲ್ಲಿ ಎಷ್ಟು ಪುಣ್ಯವನ್ನು ಮಾಡಿದ್ದಳೋ! ಆಹಾ! ಈ ಪಾದರೇಖೆಗಳು ಎಷ್ಟು ಮಂಗಳಕರಗಳಾಗಿರುವುವು! ಎಷ್ಟು ದಟ್ಟವಾಗಿರುವುವು! ಅದರ ಪಾದರೇಖೆಗಳನ್ನು ಹೊತ್ತಿರುವ ಈ ಭೂಮಿಯಾದರೂ, ನನಗೆ ಸರ್ವಸ್ವದಂತಿದ್ದ ಆ ಜಿಂಕೆಯ ಮರಿಯು ಹೋದದಾರಿಯನ್ನು ತೋರಿಸಿ ಕೊಡಬಾರದೇ! * ಈ ಭೂಭಾಗವು ಆ ಕೃಷ್ಣಸಾರಮೃಗದ ಹೆಜ್ಜೆಯ ಗುರುತುಗಳಿಂದಲಂಕೃತವಾಗಿ ಯಜ್ಞಾದಿಕರ್ಮಗಳಿಂದ ಇಷ್ಟಸಿದ್ಧಿಯನ್ನು ಪಡೆಯುವುದಕ್ಕೆ ತಾನು ತಕ್ಕ ಸ್ಥಾನವೆಂದು ಚೆನ್ನಾಗಿ ತೋರಿಸುತ್ತಿರುವುದು, ಓಹೋ! ಒಂದುವೇಳೆ ಇಂತಹ ಬಡಪಾಣಿಗಳಲ್ಲಿ ದಯಾಳುವಾದ ಚಂದ್ರನು ತಾಯಿಲ್ಲದೆ ತಬ್ಬಲಿಯಾದ ಆ ಮೃಗಶಿಶುವನ್ನು ನೋಡಿ ಕನಿಕರಗೊಂಡು, ಹುಲಿ ಮೊದಲಾದ ಕ್ರೂರಜಂತುಗಳ ಬಾಯಿಗೆ ಬೀಳದಂತೆ ರಕ್ಷಿಸುವುದಕ್ಕಾಗಿ ತನ್ನ ಬಳಿಕರೆದಿಟ್ಟುಕೊಂಡು ರಕ್ಷಿಸುತ್ತಿರಬಹುದೇ? ಅಹಾ! ನನ್ನ ಮೈಮೇಲೆ ಬೀಳತಕ್ಕ ಈ ಬೆಳದಿಂಗಳು ಎಷ್ಟು ಸುಖಕರವಾಗಿರುವುದು! ಆ ಜಿಂಕೆಯನ್ನು ಕಾಣದ ದುಃಖವೆಂಬ ದಾವಾಗ್ನಿಯಿಂದ ನನ್ನ ಹೃದಯವು ದಗ್ಧವಾಗುತ್ತಿದ್ದರೂ, ಆ ಸಂಕಟವನ್ನೂ ಲಕ್ಷ್ಯಮಾಡದೆ, ನಾನು ಆ ಜಿಂಕೆಯನ್ನು ಹುಡುಕುವುದಕ್ಕಾಗಿ ಅಲೆಯುತ್ತಿರುವುದನ್ನು ನೋಡಿ, ದಯಾಳುವಾದ ಈ ಚಂದ್ರನು ನನ್ನಲ್ಲಿ ಕನಿಕರಗೊಂಡು, ಪ್ರೀತಿಸೂಚಕವಾದ ಆನಂದಬಾಷ್ಪದಂತೆ ತಂಪಾಗಿಯೂ, ಅನುರಾಗಪೂರ್ಣಕವಾಗಿಯೂ ಇರುವ ಅಮೃತಮಯವಾದ ಕಿರಣಗಳಿಂದ ನನ್ನ ತಾಪವನ್ನು ನೀಗಿಸುತ್ತಿರುವನು ಹೀಗೆಂದು ಭರತನು ಹಲವು ಬಗೆಯ ಮನೋರಥಗಳಿಂದ ಕಳವಳಿಸಿ ರೋದಿಸುತ್ತಿದ್ದನು. ಆ ಜಿಂಕೆಯ ಮರಿಯೆಂಬ ಪ್ರಾರಬ್ಧಕರ್ಮವು ಆತನ ಯೋಗವಾರ್ಗಕ್ಕೆ ವಿಘ್ನವನ್ನುಂಟುಮಾಡಿದುದರಿಂದ, ಆವನು ನಡೆಸುತ್ತಿದ್ದ ಕರ್ಮಜ್ಞಾನ ಭಕ್ತಿಯೋಗಗಳೆಲ್ಲವೂ ಬಿಟ್ಟು ಹೋದುವು. ಎಲೈ ಪರೀಕ್ಷಿದ್ರಾಜನೇ! ಪ್ರಾರಬ್ಧಕರ್ಮವೆಂಬುದು ಯೋಗನಿಷ್ಠನಾದ ಭರತನಿಗೂ ಯಾವ ಸ್ಥಿತಿಯನ್ನು ತಂದಿಟ್ಟಿತು ನೋಡಿದೆಯಾ? ಆ ಭರತನಿಗೆ ಈ ವಿಧವಾದ ಅವಸ್ಥೆಗಳೆಲ್ಲವೂ ಬಂದು ಸೇರುವುದಕ್ಕೆ ಅವನ ಪ್ರಾರಬ್ಧವೇ ಕಾರಣವು! ಇಲ್ಲದಿದ್ದರೆ ಮನುಷ್ಯಜಾತಿಯಲ್ಲಿ ಹುಟ್ಟಿದ ಭರತನಿಗೆ, ವಿಜಾತೀಯವಾದ ಆ ಜಿಂಕೆಯಲ್ಲಿ ಅಷ್ಟೊಂದು ಮೋಹವುಂಟಾಗುತ್ತಿತ್ತೇ? ಮೋಕ್ಷವಿರೋಧಿಗಳೆಂಬ ಭಾವದಿಂದ ತನ್ನ ಹೆಂಡಿರುಮಕ್ಕಳನ್ನೇ ಬಿಟ್ಟುಬಂದ ಭರತನು, ಆ ಕಾಡುಜಿಂಕೆಯನ್ನು ಬಿಟ್ಟಿರಲಾರದೆ ಸಂಕಟಪಡಬೇಕಾದರೆ, ಇದು ಅವನ ಪ್ರಾರಬ್ಧ

---

* "ಯಸ್ಮಿನ್ ದೇಶೇ ಕೃಷ್ಣಮೃಗಸ್ತಸ್ಮಿನ್ ಧರ್ಮಾನ್ನಿಬೋಧತ" ಎಂಬ ಪ್ರಮಾಣದಿಂದ ಕೃಷ್ಣಮೃಗವಿದ್ದ ಸ್ಥಾನವು ಪವಿತ್ರವೆಂದೂ ಕರ್ಮಯೋಗ್ಯವೆಂದೂ ಗ್ರಾಹ್ಯವು.

ವಲ್ಲದೆ ಬೇರೇನು? ಈ ಜಿಂಕೆಯ ಮರಿಯೆಂಬ ವಿಘ್ನದಿಂದ ತನ್ನ ಯೋಗಾಭ್ಯಾಸವೆಲ್ಲವೂ ನಷ್ಟವಾದರೂ, ಅದನ್ನೂ ತಿಳಿಯಲಾರದೆ, ಯಾವಾಗಲೂ ಈ ಮೃಗವನ್ನು ಮುದ್ದಾಡುತ್ತ, ತನ್ನ ದೇಹವನ್ನೇ ತಾನು ಮರೆತಿದ್ದನು. ಹೀಗೆ ಎಚ್ಚರತಪ್ಪಿದ್ದ ಆ ಭರತನಿಗೆ, ದುರ್ನಿವಾರ್ಯವಾದ ಮೃತ್ಯುಕಾಲವು ಸಮೀಪಿಸಿತು. ಸರ್ಪವು ಮಹಾ ವೇಗದಿಂದ ಇಲಿಯ ಬಿಲವನ್ನು ಪ್ರವೇಶಿಸುವಂತೆ, ಮೃತ್ಯುವು ಅವನ ದೇಹವನ್ನೊಳ ಹೊಕ್ಕಿತು. ತನ್ನ ಮರಣಕಾಲದಲ್ಲಿಯೂ ಹೊಟ್ಟೆಯಲ್ಲಿ ಹುಟ್ಟಿದ ಮಗನಂತೆ ಪಕ್ಕದಲ್ಲಿ ಕುಳಿತು ದುಃಖಿಸುತ್ತಿರುವ ಆ ಜಿಂಕೆಯ ಮರಿಯನ್ನು ನೋಡುತ್ತ ಅದರಲ್ಲಿಯೇ ನಟ್ಟ ಮನಸುಳ್ಳವನಾಗಿ ಆ ಮೃಗದ ಸಂಗಡಲೇ ತನ್ನ ದೇಹವನ್ನೂ ಬಿಟ್ಟನು. ಅವನಿಗೆ ಪೂರ್ವವಾಸನೆಯು ಬಿಟ್ಟು ಹೋಗದುದರಿಂದಲೂ, * ಅಂತ್ಯ ಕಾಲದಲ್ಲಿಯೂ ಅವನು ಮೃಗವನ್ನೇ ಸ್ಮರಿಸುತ್ತ ದೇಹವನ್ನು ಬಿಟ್ಟುದರಿಂದಲೂ, ತಿರುಗಿ ಜಿಂಕೆಯ ರೂಪದಿಂದ ಹುಟ್ಟಿದನು. ರಾಜೇಂದ್ರಾ! ಅವನು ಹೀಗೆ ಮೃಗ ಜನ್ಮದಲ್ಲಿ ಹುಟ್ಟಿದ್ದರೂ ಪೂರ್ವಜನ್ಮದಲ್ಲಿ ಅವನು ನಡೆಸುತ್ತಿದ್ದ ಭಗವದಾರಾಧನದ ಪ್ರಭಾವದಿಂದ, ಅವನಿಗೆ ತಾನು ಈ ಮೃಗಜನ್ಮವನ್ನು ಹೊಂದುವುದಕ್ಕೆ ಕಾರಣವೇನೆಂಬುದು ತಿಳಿದು ಬಂದಿತು. ಹಿಂದೆ ತನಗೆ ಜಿಂಕೆಯ ಮರಿಯಲ್ಲಿದ್ದ ಮೋಹವೇ ತನ್ನ ಮೃಗಜನ್ಮಕ್ಕೆ ಕಾರಣವೆಂಬುದನ್ನು ತಿಳಿದು, ಅದಕ್ಕಾಗಿ ಮನಸ್ಸಿನಲ್ಲಿ ಹೀಗೆಂದು ಪರಿತಪಿಸುವನು. "ಆಯ್ಯೋ! ನಾನೆಷ್ಟು ದುರ್ಭಾಗ್ಯನು! ಮೊದಲು ನಾನು ಜ್ಞಾನಿಗಳ ಮಾರ್ಗವನ್ನವಲಂಬಿಸಿದ್ದರೂ, ನಡುವೆ ಬಂದ ವಿಘ್ನದಿಂದ ಅದನ್ನು ಬಿಟ್ಟು ತಪ್ಪುದಾರಿಗೆ ಹೋದೆನು. ಆಹಾ! ಎಂತಹ ಕಷ್ಟವು! ನಾನು ಪೂರ್ವದಲ್ಲಿ ಸರ್ವಸಂಗಪರಿತ್ಯಾಗಮಾಡಿ, ಜೀತೇಂದ್ರಿಯನಾಗಿ, ನಿರ್ಜನವಾದ ಅರಣ್ಯದಲ್ಲಿದ್ದು, ಭಗವತ್ಕಥೆಗಳನ್ನು ಕೇಳುವುದರಿಂದಲೂ, ಆತನ ರೂಪವನ್ನು ಧ್ಯಾನಿಸುವುದರಿಂದಲೂ, ಅವನನ್ನು ಕೀರ್ತಿಸುವುದರಿಂದಲೂ, ಆ ಭಗವಂತನಲ್ಲಿಯೇ ಮನಸ್ಸನ್ನು ನೆಲೆಗೊಳಿಸಿದ್ದೆನು. ಹೀಗೆ ಇತರಚಿಂತೆಯೆಲ್ಲವನ್ನೂ ಬಿಟ್ಟು ಪ್ರಯತ್ನಪೂರ್ವಕವಾಗಿ ಭಗವಂತನಲ್ಲಿ ನಿಲ್ಲಿಸಿದ್ದ ಮನಸ್ಸನ್ನು, ನಾನು ಬುದ್ಧಿಗೆಟ್ಟು, ಒಂದು ಜಿಂಕೆಯ ಮರಿಯಲ್ಲಿಟ್ಟೆನಾದುದರಿಂದ, ಆ ಮನಸ್ಸು ಅದೇ ಮಾರ್ಗವನ್ನು ಹಿಡಿದು, ಯೋಗಮಾರ್ಗದಿಂದ ನನ್ನನ್ನು ತಪ್ಪಿಸಿಬಿಟ್ಟಿತು. ಆಹಾ! ನಾನು ಎಂತಹ ಅವಿವೇಕಿಯು!" ಎಂದು ತನ್ನಲ್ಲಿ ತಾನು ಪಶ್ಚಾತ್ತಾಪಗೊಂಡು, ಆಗಲೇ ತನ್ನ ತಾಯಿಯನ್ನೂ, ತನ್ನ ತಂದೆಯನ್ನೂ ಬಿಟ್ಟು, ತಾನಿದ್ದ ಕಾಲಂಜರವೆಂಬ

* ಇಲ್ಲಿ "ಯಂಯಂ ವಾಪಿ ಸ್ಮರನ್ಭಾವಂ ತ್ಯಜತ್ಯಂತೇ ಕಳೇಬರಮ್। ತತ್ತದೇವೈತಿ ಕೌಂತೇಯ ಸದಾ ತದ್ಭಾವ ಭಾವಿತಃ" ಎಂಬ ಭಗವದ್ಗೀತಾವಾಕ್ಯವು ಅನುಸಂಧೇಯವು.

ಪರ್ವತಪ್ರಾಂತದಿಂದ ಹೊರಟು, ಪೂರ್ವಜನ್ಮದಲ್ಲಿ ತಾನು ತಪಸ್ಸುಮಾಡುತ್ತಿದ್ದ ಸಾಲಗ್ರಾಮವೆಂಬ ಕ್ಷೇತ್ರಕ್ಕೇ ಬಂದು ಸೇರಿತು. ಮಹರ್ಷಿಗಳಿಗೆ ಪ್ರಿಯವಾಗಿಯೂ, ಸಿದ್ಧಿಸ್ಥಾನವಾಗಿಯೂ ಇರುವ ಆ ಪುಲಹಾಶ್ರಮದಲ್ಲಿ, ಏಕಾಕಿಯಾಗಿದ್ದು, ತನ್ನ ದೇಹಾವಸಾನವನ್ನು ನಿರೀಕ್ಷಿಸುತ್ತ, ತಿರುಗಿ ತನಗೆ ಬೇರೆ ಯಾವ ವಿಷಯ ಚಿಂತೆಯು ತಗಲುಕಟ್ಟುವುದೋ ಎಂಬ ಭಯದಿಂದ, ಅತ್ತಿತ್ತ ಕದಲದೆ, ಬೇರೆ ಯಾವುದನ್ನೂ ಕಣ್ಣೆತ್ತಿ ನೋಡದೆ, ತರಗೆಲೆಯನ್ನು ತಿಂದು ಕಾಲವನ್ನು ಕಳೆಯುತ್ತಿತ್ತು. ತನ್ನ ಪ್ರಾರಬ್ಧಕರ್ಮವು ತೀರುತ್ತ ಬಂದು, ದೇಹಾವಸಾನವು ಸವಿಾಪಿಸಿ ಜೊಡನೆ, ಅರ್ಧದೇಹವು ಮುಳುಗುವಂತೆ, ನದಿಯಲ್ಲಿ ಪ್ರವೇಶಿಸಿ, ಅಲ್ಲಿಯೇ ಆ ದೇಹವನ್ನು ತೊರೆದು ಬಿಟ್ಟಿತು. ಇದು ಎಂಟನೆಯ ಅಧ್ಯಾಯವು.

---

## ಭರತನು ಮೃಗಶರೀರವನ್ನು ತೊರೆದಮೇಲೆ ತಿರುಗಿ ಬ್ರಾಹ್ಮಣಕುಮಾರನಾಗಿ ಹುಟ್ಟಿದುದು.

ರಾಜೇಂದ್ರಾ ಕೇಳು! ಇದು ಹೀಗಿರಲು, ಆಂಗಿರಸಗೋತ್ರದಲ್ಲಿ ಹುಟ್ಟಿದ ಬ್ರಾಹ್ಮಣೋತ್ತಮನೊಬ್ಬನಿದ್ದನು. ಆತನು ಶಮ, ದಮ, ತಪಸ್ಸು ವೇದಾಧ್ಯಯನ, ವೇದವನ್ನೋದಿಸುವುದು, ದೈವಾಧೀನವಾಗಿ ತನಗೆ ಸಿಕ್ಕಿದುದರಲ್ಲಿ ತೃಪ್ತಿ, ತಾಳ್ಮೆ, ವಿನಯ, ಔದಾರ್ಯ, ಶಾಸ್ತ್ರಜ್ಞಾನ, ಅಸೂಯೆಯಿಲ್ಲದಿರುವುದು, ಆತ್ಮಜ್ಞಾನದಿಂದ ಬ್ರಹ್ಮಾನಂದವನ್ನನುಭವಿಸತಕ್ಕ ಭಕ್ತಿ, ಮುಂತಾದ ಎಲ್ಲಾ ಸದ್ಗುಣಗಳಿಂದಲೂ ಕೂಡಿದ್ದನು. ಆ ಬ್ರಾಹ್ಮಣೋತ್ತಮನಿಗೆ ಹಿರಿಯಹೆಂಡತಿಯಲ್ಲಿ ಒಂಭತ್ತು ಮಂದಿ ಗಂಡುಮಕ್ಕಳು ಹುಟ್ಟಿದರು. ಅವರೆಲ್ಲರೂ ಶಾಸ್ತ್ರಶ್ರವಣದಲ್ಲಿಯೂ, ಸಡತೆಯಲ್ಲಿಯೂ, ಆಚಾರದಲ್ಲಿಯೂ, ರೂಪೌದಾರ್ಯಾದಿಗುಣಗಳಲ್ಲಿಯೂ ತಮ್ಮ ತಂದೆಯನ್ನೇ ಹೋಲುತ್ತಿದ್ದರು. ಆದೇ ಬ್ರಾಹ್ಮಣನಿಗೆ ಕಿರಿಯ ಹೆಂಡತಿಯಲ್ಲಿ ಒಂದು ಹೆಣ್ಣು ಶಿಶುವೂ, ಒಂದು ಗಂಡು ಶಿಶುವೂ ಜನಿಸಿತು ಆ ಎರಡು ಮಕ್ಕಳಲ್ಲಿ ಪುರುಷಶಿಶುವೇ, ಪೂರ್ವದಲ್ಲಿ ಭಾಗವತಶ್ರೇಷ್ಠನಾಗಿಯೂ, ರಾಜರ್ಷಿಗಳಲ್ಲಿ ಪ್ರಮುಖನಾಗಿಯೂ, ಇದ್ದು, ಇದರ ಹಿಂದಿನ ಜನ್ಮದಲ್ಲಿ ಹುಲ್ಲೆಯಾಗಿ ಹುಟ್ಟಿ ಆ ಶರೀರವನ್ನು ನೀಗಿದ ಭರತನೆಂದೂ, ಆ ಶರೀರವನ್ನು ಬಿಟ್ಟ ಮೇಲೆ, ಅವನು ಮುಕ್ತಿಯನ್ನು ಹೊಂದಿದುದರಿಂದ, ಅವನಿಗೆ ಅದೇ ಕೊನೆಯ

ಶರೀರವೆಂದೂ ಹೇಳುವರು. ಈ ಬ್ರಾಹ್ಮಣಜನ್ಮದಲ್ಲಿಯೂ ಅವನು ಭಗವದನುಗ್ರಹದಿಂದ ಪೂರ್ವಜನ್ಮದ ಸ್ಮರಣೆಯುಳ್ಳವನಾಗಿದ್ದನು. ಬಂಧುಗಳ ಸಹವಾಸದಲ್ಲಿದ್ದರೆ ಹಿಂದಿನಂತೆ ತಿರುಗಿ ಜನ್ಮಾಂತರವನ್ನು ಹೊಂದಬೇಕಾಗುವುದೆಂಬ ಭಯದಿಂದ, ಯಾವಾಗಲೂ ತಾನು ಪ್ರತ್ಯೇಕವಾಗಿಯೇ ಇರುತ್ತಿದ್ದನು. ಪಾರಬ್ಧಕರ್ಮಗಳನ್ನು ನೀಗಿಸತಕ್ಕ ಅಭಗವಂತನ ಗುಣಗಳನ್ನು ಕೇಳುವುದು, ಅತನನ್ನು ಸ್ಮರಿಸುವುದು, ಭಗವದ್ಗುಣಗಳನ್ನು ಕೀರ್ತಿಸುವುದು, ಅತನ ಪಾದಾರವಿಂದಗಳನ್ನು ಧ್ಯಾನಿಸುವುದು, ಇವೇ ಮೊದಲಾದ ಕಾರ್ಯಗಳಿಂದಲೇ ಕಾಲವನ್ನು ಕಳೆಯುತ್ತಿದ್ದನು. ಮತ್ತು ಯೋಗಾದರೂ ಜನರ ಸಹವಾಸವನ್ನು ತಪ್ಪಿಸುವುದಕ್ಕಾಗಿ ಹುಚ್ಚನಂತೆಯೂ ಕಿವುಡನಂತೆಯೂ, ಕುರುಡನಂತೆಯೂ ನಟಿಸುತ್ತಿದ್ದನು. ಇದನ್ನು ನೋಡಿ ಇವನ ತಂದೆಯು ಅವನು ಹುಚ್ಚನಂತೆ ಕಾಣುತ್ತಿದ್ದರೂ, ಪುತ್ರಸ್ನೇಹದಿಂದ ಅವನನ್ನು ಬಿಟ್ಟರಲಾರದೆ ಮನಸ್ಸಿನಲ್ಲಿ ಕೊರಗುತ್ತಿದ್ದನು. ಅವನಿಗೆ ವಿವಾಹಮಾಡುವುದಕ್ಕೆ ಹೆಣ್ಣು ಸಿಕ್ಕದಿದ್ದರೂ, ವ್ರತಸಮಾವರ್ತನಪರ್ಯಂತವಾದರೂ ನಡೆಸತಕ್ಕ ಸಂಸ್ಕಾರಗಳನ್ನಾದರೂ ನಡೆಸಬೇಕೆಂದು ನಿಶ್ಚಯಿಸಿ, ಉಪನಯನವನ್ನು ಮಾಡಿದನು. ಭರತನಾದರೂ ಪೂರ್ವವಾಸನೆಯಿಂದಲೇ ಎಲ್ಲವನ್ನೂ ತಿಳಿದಿದ್ದುದರಿಂದ, ಅವನಿಗೆ ಕಲಿಸಿಕೊಡಬೇಕಾದುದೊಂದೂ ಇರಲಿಲ್ಲ! ತಂದೆಯು ಅದನ್ನು ತಿಳಿಯದೆ ಮಗನಿಗೆ ವಿದ್ಯಾಭ್ಯಾಸವನ್ನು ಮಾಡಿಸಬೇಕಾದುದವಶ್ಯವೆಂದು ತಿಳಿದು, ಶೌಚಾಚಾರಗಳೇ ಮುಂತಾದ ಕರ್ಮನಿಯಮಗಳೆಲ್ಲವನ್ನೂ ಕಲಿಸುತ್ತಬಂದನು. ಭರತನಾದರೋ, ಹೇಗಾದರೂ ಆ ತಂದೆಯ ನಿರ್ಬಂಧದಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಪ್ರಯತ್ನಿಸುತ್ತ, ತಂದೆಯ ಸನ್ನಿಧಪದಲ್ಲಿರುವಾಗಲೇ ಅವನ ಇಷ್ಟಕ್ಕೆ ವಿರುದ್ಧವಾಗಿ, ಅಸಂಬದ್ಧವಾದ ಕಾರ್ಯಗಳನ್ನು ನಡೆಸುತ್ತ, ಏನೂ ತಿಳಿಯದ ಮೂಢನಂತೆ ಕಾಣಿಸಿಕೊಳ್ಳುತ್ತಿದ್ದನು. ತಂದೆಯೂಕೂಡ ತನ್ನ ಪ್ರಯತ್ನವನ್ನು ಬಿಡದೆ ಮಗನನ್ನು ಹೇಗಾದರೂ ಶಿಕ್ಷಿಸಿ ಅವನಿಗೆ ವೇದವನ್ನು ಕಲಿಸಿಬೇಕೆಂಬ ದೃಢಪ್ರಯತ್ನದಿಂದ, ವ್ಯಾಹೃತಿ, ಪ್ರಣವ, ಶಿರಸ್ಸು, ಎಂಬ ಮೂರುಪಾದಗಳಿಂದ ಕೂಡಿದಗಾಯತ್ರಿಯನ್ನು, ವಸಂತ, ಗ್ರೀಷ್ಮಋತುಗಳಿಗೆ ಸೇರಿದ ನಾಲ್ಕುತಿಂಗಳಲ್ಲಿ, ಎಡೆಬಿಡದೆ ಸಂತೆಹೇಳುತ್ತಿದ್ದನು. ಎಷ್ಟೆಷ್ಟು ಹೇಳಿದರೂ, ಭರತನು ಸ್ವರವರ್ಣಗಳನ್ನು ವಿಪರೀತವಾಗಿಯೇ ಉಚ್ಚರಿಸುತ್ತಿದ್ದನೇ ಹೊರತು, ಒಂದಾವರ್ತಿಯಾದರೂ ಅವನ ಬಾಯಿಂದ ಸರಿಯಾಗಿ ಹೊರಡಲಿಲ್ಲ. ತಂದೆಯು ಎಷ್ಟೆಷ್ಟು ನಿರ್ಬಂಧಪಡಿಸಿ ಹೇಳಿಕೊಟ್ಟರೂ, ಅದನ್ನು ತಾನು ಗ್ರಹಿಸಲಾರದವನಂತೆಯೇ ನಟಿಸುತ್ತಿದ್ದನು. ಇಷ್ಟಾದರೂ ಆಂಗಿರಸನಿಗೆ ಪುತ್ರವಾತ್ಸಲ್ಯವು ತಪ್ಪಲಿಲ್ಲ. ಹೀಗೆ ಪುತ್ರವಾತ್ಸಲ್ಯದಿಂದ

ಕೊರಗುತ್ತಿದ್ದ ಆಂಗಿರಸನು, ತನ್ನ ಮಗನಿಗೆ ಬ್ರಹ್ಮಚರ್ಯವ್ರತಕ್ಕೆ ಯೋಗ್ಯವಾದ ಶೌಚ, ಆಚಮನ, ಕಾಂಡವ್ರತ, ಗುರುಶುಶ್ರೂಷೆ ಮುಂತಾದ ನಿಯಮಗಳೆಲ್ಲವನ್ನೂ ಬಾರಿಬಾರಿಗೂ ಕಲಿಸುತ್ತಲೇ ಇದ್ದನು. ಜನ್ಮಾಂತರಸಂಸ್ಕಾರದಿಂದಲೇ ಭರತನು ಇವೆಲ್ಲವನ್ನೂ ಚೆನ್ನಾಗಿ ಬಲ್ಲವನಾದುದರಿಂದ, ಅವನ ಮನಸ್ಸಿಗೆ ಇದೊಂದೂ ರುಚಿಸಲಿಲ್ಲ. ತಂದೆಗೆ ಈ ಸೂಕ್ಷ್ಮಾಂಶವು ಸ್ವಲ್ಪವೂ ಗೊತ್ತಿಲ್ಲವಾದುದರಿಂದ, ಹೇಗಾದರೂ ಮಗನಿಗೆ ಬುದ್ಧಿಯನ್ನು ಕಲಿಸಬೇಕೆಂಬ ಹಟದಿಂದ ಎಷ್ಟೆಷ್ಟೋ ಕಷ್ಟಪಡುತ್ತಿದ್ದನು ಇವನ ಪ್ರಯತ್ನವೆಲ್ಲವೂ ವಿಫಲವಾಯಿತು! ಇಷ್ಟರಲ್ಲಿಯೇ ಆ ಬ್ರಾಹ್ಮಣನಿಗೆ ಆಯುಃಕಾಲವು ಮುಗಿಯುತ್ತ ಬಂದಿತು. ಹೆಂಡಿರು ಮಕ್ಕಳೆಂಬ ಅಭಿಮಾನದಿಂದ, ಕುಟುಂಬಪೋಷಣೆಯಲ್ಲಿ ನಿರತನಾಗಿ, ತಾನು ಸಾಯುವೆನೆಂಬ ಯೋಚನೆಯೇ ಇಲ್ಲದೆ ಮೈಮರೆತಿದ್ದಾಗ, ಇವನನ್ನು ಕೊಲ್ಲುವುದಕ್ಕಾಗಿ ಹೊಂಚು ಹಾಕುತ್ತಿದ್ದ ಮೃತ್ಯುವು ಮೇಲೆ ಬಿದ್ದಿತು. ಈ ಆಂಗಿರಸನ ಕಿರಿಯ ಹೆಂಡತಿಯು ತನ್ನ ಮಗನನ್ನೂ, ಮಗಳನ್ನೂ ಹಿರಿಯವಳ ವಶಕ್ಕೆ ಒಪ್ಪಿಸಿ, ತಾನೂ ಸಹಗಮನವನ್ನು ಮಾಡಿ ಪರಲೋಕವನ್ನು ಸೇರಿದಳು. ಕರ್ಮಪ್ರಧಾನವಾದ ವೇದವಾರ್ಗದಲ್ಲಿಯೇ ಬುದ್ಧಿಮೋಹಗೊಂಡವರಾಗಿಯೂ, ಆತ್ಮವಿದ್ಯೆಯಲ್ಲಿ ಆಕ್ಕರೆಯಿಲ್ಲದವರಾಗಿಯೂ ಇದ್ದ ಆ ಆಂಗಿರಸನ ಒಂಬತ್ತುಮಂದಿ ಪುತ್ರರೂ, ತಂದೆಯು ಮರಣ ಹೊಂದಿದಮೇಲೆ, ತಮ್ಮ ತಹೋದರನಾದ ಭರತನ ಮಹಿಮೆಯನ್ನು ತಿಳಿಯದೆ, ಅವನನ್ನು ಕೇವಲಮೂಢನೆಂದೇ ಭಾವಿಸಿ, ಅವನಿಗೆ ವಿದ್ಯೆಯನ್ನು ಹೇಳಿದರೂ ಫಲವಿಲ್ಲವೆಂಬ ನಿಶ್ಚಯದಿಂದ, ಅವನಿಗೆ ವಿದ್ಯಾಭ್ಯಾಸದ ಪ್ರಬಂಧವನ್ನು ತಪ್ಪಿಸಿ ಯಥೇಚ್ಛವಾಗಿ ಬಿಟ್ಟುಬಿಟ್ಟರು. ಎರಡುಕಾಲಿನ ಪಶುಗಳಂತೆ ಮೂಢರಾದ ಪ್ರಾಕೃತಜನರೆಲ್ಲರೂ, ಇವನ ಮಹಾಮಹಿಮೆಯನ್ನು ತಿಳಿಯದೆ, ಕಂಡಕಂಡಾಗ ಅವನನ್ನು ಹುಚ್ಚನೆಂದೂ, ಪಾಂಡಿತ್ಯಹೀನನೆಂದೂ, ಕಿವುಡನೆಂದೂ ಮೂದಲಿಸುತ್ತಿದ್ದರು. ಅವರ ತಿರಸ್ಕಾರವಾಕ್ಯಗಳನ್ನೂ ಲಕ್ಷಿಸುತ್ತಿದ್ದರೂ ಇವನು, ಅವರವರ ಭಾವನೆಗೆ ತಕ್ಕಂತೆಯೇ ಹುಚ್ಚನಂತೆಯೂ ಬೆಪ್ಪನಂತೆಯೂ ನಟಿಸುತ್ತಿದ್ದನು. ಆ ಭರತನಿಗೆ ತನಗಾಗಿ ತಾನು ಮಾಡಬೇಕಾದ ಕಾರ್ಯವೊಂದೂ ಇಲ್ಲದಿದ್ದರೂ, ಬಿಟ್ಟಿಗಾಗಿಯೋ, ಕೂಲಿಗಾಗಿಯೋ ಇತರರು ತನ್ನನ್ನು ನಿರ್ಬಂಧಿಸಿ ಹೇಳಿದ ಕೆಲಸಗಳೆಲ್ಲವನ್ನೂ ಮಾಡುತ್ತಿದ್ದನು. ಮತ್ತು ಅವನು ಇಂದ್ರಿಯತೃಪ್ತಿಯನ್ನಾಗಲೀ, ಶರೀರ ಸುಖವನ್ನಾಗಲೀ ಬಯಸದೆ, ದೇಹಧಾರಣಕ್ಕಾಗಿಯೇ ಆಹಾರವನ್ನು ತೆಗೆದುಕೊಳ್ಳುತ್ತಿದ್ದುದರಿಂದ, ಆಗಾಗ ಯಾಚನೆಯಿಂದಲೋ, ದೈವವಶದಿಂದಲೋ ತನ್ನ ಕೈಗೆ ಬಿದ್ದ ಅನ್ನವು, ಸ್ವಲ್ಪವಾಗಿದ್ದರೂ ಮೃಷ್ಟಾನ್ನವಾಗಿದ್ದರೂ, ಅದನ್ನೇ ತಿಂದು

ತಪಸ್ವಿಗಳಾದ ಇಂತಹ ಬ್ರಾಹ್ಮಣರು ಭಗವದಂಶದಿಂದ ಹುಟ್ಟಿದವರೆಂಬುದನ್ನು ಬಲ್ಲರೇ? ಆದುದರಿಂದಲೇ ಇವರು ಬ್ರಹ್ಮಕುಲವನ್ನು ಸ್ವಲ್ಪವಾತ್ರವೂ ಲಕ್ಷ್ಯ ಮಾಡದೆ ಇತ್ತಬಂದಂತೆ ದುರ್ಮಾರ್ಗದಲ್ಲಿಯೇ ವರ್ತಿಸುವರು! ಯಾವಾಗಲೂ ಪ್ರಾಣಿಹಿಂಸೆಯಿಂದಲೇ ವಿನೋದಿಸುವರು! ಈ ಭರತನಾದರೋ ಬ್ರಹ್ಮಸಾಯುಜ್ಯವನ್ನು ಹೊಂದುವುದಕ್ಕೆ ಸಿದ್ಧನಾಗಿರತಕ್ಕವನು! ಸಮಸ್ತ ಭೂತಗಳಲ್ಲಿಯೂ ಸಮಬುದ್ಧಿಯುಳ್ಳವನು! ಬ್ರಹ್ಮರ್ಷಿಗಳಲ್ಲಿ ಮೇಲೆನಿಸಿಕೊಂಡವನು. ಇಂತಹ ಮಹಾತ್ಮನು, ಆ ಘಾತುಕರ ಕೈಗೆ ಸಿಕ್ಕಿಬಿದ್ದನು. ಆಗ ಕಳ್ಳರೆಲ್ಲರೂ ಮಹಾಭಯಂಕರರಾಗಿಯೂ, ಕೇವಲ ನಿಷಿದ್ಧವಾಗಿಯೂ ಇರುವ ಕೊಲೆಗೆಲಸಕ್ಕಾಗಿ ಕೈಕಟ್ಟಿ ಅವನನ್ನು ಸುತ್ತಿಕೊಂಡಿದ್ದರು. ಆಗ ಆ ಗುಡಿಯೊಳಗಿನ ಕಾಳಿಕಾವಿಗ್ರಹವು, ಸಹಿಸಲಸಾಧ್ಯವಾದ ಆ ಜಡಭರತನ ಬ್ರಹ್ಮತೇಜಸ್ಸಿನಿಂದ ದಗ್ಧವಾದಂತೆ ಸಿಡಿದು, ಅದರಿಂದ ಕಾಳಿಕಾದೇವತೆಯು ನಿಜಾಕಾರದೊಡನೆ ಪ್ರತ್ಯಕ್ಷವಾಗಿ ಎದ್ದುಬಂದಳು. ಆಗ ಆ ಭದ್ರಕಾಳಿಯು ಭಯಂಕರ ಸ್ವರೂಪವನ್ನು ಕೇಳಬೇಕೇ. ಮಹತ್ತಾದ ಕೊರಳಿನಿಂದ ಮುಖದಲ್ಲಿ ಗಂಟಿಕ್ಕಿದ ಹುಬ್ಬುಗಳು! ವಕ್ರವಾದ ಕೋರೆದಾಡೆಗಳು! ಕೆಂಡದಂತೆ ಕೆಂಪೇರಿದ ಕಣ್ಣಾಲೆಗಳು! ಭಯಂಕರವಾದ ಮುಖ! ಹೀಗೆ ಘೋರಾಕಾರದಿಂದ ಜಗತ್ತೆಲ್ಲವನ್ನೂ ಒಂದೇ ತುತ್ತಾಗಿ ಮುಂಗಿ ಬಿಡುವಂತೆ, ಅಟ್ಟಹಾಸದಿಂದ ಕೂಗುತ್ತ ಮುಂದೆ ಬಂದು, ಆ ಬ್ರಾಹ್ಮಣನ ತಲೆಯನ್ನು ಕಡಿಯುವುದಕ್ಕಾಗಿ, ಕಳ್ಳರು ಕೈಯಲ್ಲಿ ಹಿಡಿದಿದ್ದ ಕತ್ತಿಯನ್ನು ತನ್ನ ಕೈಗೆ ಕಿತ್ತಿಟ್ಟುಕೊಂಡಳು. ಪರಮ ಪಾಪಿಗಳಾಗಿಯೂ, ಗರ್ವದಿಂದ ಕೊಬ್ಬಿದವರಾಗಿಯೂ ಇದ್ದ ಆ ಕಳ್ಳರ ತಲೆಗಳೆಲ್ಲವನ್ನೂ ಆದೇ ಕತ್ತಿಯಿಂದ ಕತ್ತರಿಸುತ್ತ ಬಂದಳು. ಅವರ ಕಂಠನಾಳದಿಂದ ಚಿಮ್ಮಿ ಹಾರುತ್ತಿರುವ ಬಿಸಿಬಿಸಿಯಾದ ರಕ್ತವನ್ನು, ತನ್ನ ಕಡೆಯ ಭೂತಗಳೊಡನೆ ತಾನೂ ಅತ್ಯಪೇಕ್ಷವಾಗಿ ಪಾನಮಾಡಿ ಈ ರಕ್ತಪಾನಮದದಿಂದ ಮೈಮರೆತು, ಬಹಳ ಹೊತ್ತಿನವರೆಗೆ ತನ್ನ ಪರಿವಾರಗಳೊಡನೆ ಹಾಡುತ್ತಲೂ, ಕುಣಿಯುತ್ತಲೂ, ತಲೆಬುರುಡೆಗಳಿಂದ ಚೆಂಡಾಡುತ್ತಲೂ ವಿನೋದಿಸುತ್ತಿದ್ದಳು. ರಾಜೇಂದ್ರಾ! ಆ ಕಳ್ಳರ ಗತಿಯೇನಾಯಿತು ನೋಡು! ದೊಡ್ಡವರಿಗೆ ಕೇಡನ್ನು ಬಯಸಿದವರು ತಾವೇ ಆ ಕೇಡಿಗೆ ಗುರಿಯಾಗುವರು. ಇದರಿಂದ ಭರತನು ಮರಣಕಾಲದಲ್ಲಿಯೂ ಹೆದರದಿದ್ದುದೂ, ನರಬಲಿಯಿಂದಲೇ ತೃಪ್ತಿಹೊಂದತಕ್ಕ ಭದ್ರಕಾಳಿಗೂ ಅವನಲ್ಲಿ ಈ ವಿಧವಾದ ದಯೆಯುಂಟಾದುದೂ ಆಶ್ಚರ್ಯವಲ್ಲವೇ?" ಎಂದು ನೀನು ಶಂಕಿಸಬಹುದು. ಇದೇನೂ ಆಶ್ಚರ್ಯವಲ್ಲ! ಇಂತಹ ಮಹಾತ್ಮರು, ಅಹಂಕಾರಮಮಕಾರಗಳೆಂಬ ಹೃದಯಗ್ರಂಥಿಯನ್ನು ಭೇದಿಸಿ, ದೇಹಾಭಿಮಾನವಿಲ್ಲದೆ, ಯಾರ

ಲ್ಲಿಯೂ ವೈರಭಾವವಿಲ್ಲದಂತಿರುವರು. ಯಾವ ವಿಧದಲ್ಲಿಯೂ ಭಯವಿಲ್ಲದ ಭಗವಂತನ ಪಾದಮೂಲವನ್ನೇ ನಂಬಿರುವರು! ಪರಮಹಂಸಾಶ್ರಮದಲ್ಲಿರುವ ಇಂತಹ ಭಗವದ್ಭಕ್ತರಿಗೆ ಸರ್ವವಿಧದಲ್ಲಿಯೂ ಆ ಭಗವಂತನೇ ರಕ್ಷಕನಾಗಿರುವನು. ಯಾವಾಗಲೂ ಎಚ್ಚರಗೊಂಡು ಕಾದಿರುವ ತನ್ನ ಕಾಲಚಕ್ರದಿಂದಲೂ ಸಮುಯೋಚಿತ ಸಂವಿಧಾನಗಳಿಂದಲೂ ಅವರನ್ನು ರಕ್ಷಿಸುವನು. ಅವರಿಗೆ ತಮ್ಮನ್ನು ಕೊಲ್ಲುವುದಕ್ಕೆ ಬಂದವರ ಮೇಲೆಯೂ ಕೋಪವಿರದು. ಅದಕ್ಕಾಗಿಯೇ ಭರತನು ತನ್ನ ತಲೆಯನ್ನು ಕಡಿಯುವ ಸಂದರ್ಭದಲ್ಲಿಯೂ ನಿರ್ಭಯನಾಗಿದ್ದನು. ಇದೇನೂ ಅತಿಶಯವಲ್ಲ. ಇದು ಒಂಭತ್ತನೆಯ ಅಧ್ಯಾಯವು.

---

## ಜಡಭರತನಮೇಲೆ ರಹೂಗಣನೆಂಬ ರಾಜನು ಪಲ್ಲಕ್ಕಿಯನ್ನು ಹೊರಿಸಿದುದು.

ಎಲೈ ಪರೀಕ್ಷಿದ್ರಾಜನೇ! ಆ ಜಡಭರತನು ಎಂತಹ ಮಹಾಜ್ಞಾನಿಯೆಂಬುದನ್ನು ತಿಳಿಸುವುದಕ್ಕೆ, ಮತ್ತೊಂದು ಕಥೆಯನ್ನು ತಿಳಿಸುವೆನು ಕೇಳು! ಸಿಂಧು ಸೌವೀರದೇಶವನ್ನಾಳುತ್ತಿದ್ದ ರಹೂಗಣನೆಂಬ ರಾಜನೊಬ್ಬನಿದ್ದನು. ಅವನು ಕಪಿಲಮುನಿಯಿಂದ ತತ್ತ್ವೋಪದೇಶವನ್ನು ಪಡೆಯುವುದಕ್ಕಾಗಿ, ಪಲ್ಲಕ್ಕಿಯನ್ನೇರಿ ಬರುತ್ತಿದ್ದಾಗ, ಇಕ್ಷುಮತೀನದಿಯ ತೀರದಲ್ಲಿ ಈ ಅಂಗಿರಸಪುತ್ರನಾದ ಜಡಭರತನು ಕೇವಲಧ್ಯಾನಪರನಾಗಿ ಕುಳಿತಿದ್ದನು. ರಾಜನು ಪಲ್ಲಕ್ಕಿಹೊರುವವರನ್ನು ಬಹಳವಾಗಿ ಆತುರಗೊಳಿಸುತ್ತಿದ್ದುದರಿಂದ, ಆವರಲ್ಲಿ ಪ್ರಮುಖನಾದವನು, ಪಲ್ಲಕ್ಕಿಯನ್ನು ಹೊರುವುದಕ್ಕಾಗಿ ಇನ್ನೂ ಕೆಲವು ಆಳುಗಳನ್ನು ಹಿಡಿದು ಸೇರಿಸಬೇಕೆಂದು ಹುಡುಕುತ್ತಿದ್ದ ಸಮಯದಲ್ಲಿ, ದೈವಿಕವಾಗಿ ಈ ಬ್ರಾಹ್ಮಣನು ಕಣ್ಣಿಗೆ ಬಿದ್ದನು. ಆಗ ಆತನು, "ಭಲೆ! ಇವನು ಯೌವನಸ್ಥನಾಗಿಯೂ, ದೃಢಗಾತ್ರನಾಗಿಯೂ, ಪುಷ್ಟಾಂಗನಾಗಿಯೂ ಇರುವುದರಿಂದ ಕತ್ತೆಯಂತೆಯೂ, ಗೂಳಿಯಂತೆಯೂ ಭಾರವನ್ನು ಹೊರುವುದಕ್ಕೆ ಸಮರ್ಥನಾಗಿರುವನು!" ಎಂದು ನಿಶ್ಚಯಿಸಿಕೊಂಡು, ಅವನನ್ನು ಬಲಾತ್ಕಾರದಿಂದ ಸೆಳೆದುತಂದು, ಮೊದಲಿದ್ದ ಆಳುಗಳ ಜತೆಗೆ ಅವನನ್ನೂ ಬಿಟ್ಟಯಾಳಾಗಿ ಸೇರಿಸಿಕೊಂಡನು. ಮಹಾತ್ಮನಾದ ಭರತನು ಇಂತಹ ಕಾರ್ಯಗಳಿಗೆ

ಅನರ್ಹನಾಗಿದ್ದರೂ ಹಿಂತೆಗೆಯದೆ, ಪಲ್ಲಕ್ಕಿಯಕೊಂಬಿಗೆ ಹೆಗಲನ್ನು ಕೊಟ್ಟು, ಸಾಧ್ಯವಾದಷ್ಟು ಭಾರವನ್ನು ಹೊತ್ತು ನಿಷ್ಕಪಟವಾಗಿ ದಾರಿನಡೆಯುತ್ತಿದ್ದನು. ಆದರೆ ಆಬ್ರಾಹ್ಮಣನಿಗೆ ಅಭ್ಯಾಸವಿಲ್ಲದುದರಿಂದ, ವಕ್ರವಕ್ರವಾಗಿ ಕಾಲಿಡುತ್ತಿದ್ದನು. ಇವನನ್ನನುಸರಿಸಿ ಹೋಗಬೇಕಾದುದರಿಂದ ಇತರವಾಹಕರ ನಡೆಯೂ ವಕ್ರವಾಗುತ್ತಿತ್ತು. ಒಂದು ಬಾಣಪಾತದಷ್ಟು ದೂರದವರೆಗೆ ಹೀಗೆಯೇ ನಡೆಯುತ್ತಬಂದಾಗ, ಪಲ್ಲಕ್ಕಿಯು ಬಹಳ ವಕ್ರವಾಗಿ ಹಿಂದೆಮುಂದೆ ತೂಗಾಡುತ್ತಿರುವುದನ್ನು ನೋಡಿ ಮೇಲೆ ಕುಳಿತಿದ್ದ ರಾಜನಿಗೆ ಮನಸ್ಸಿನಲ್ಲಿ ಕೋಪವು ಹುಟ್ಟಿತು ಆಗ ರಾಜನು, ತನ್ನ ವಾಹಕರನ್ನು ನೋಡಿ "ಎಲೈ ಸೇವಕರೇ! ಇದೇನಿದು! ಕ್ರಮವಾಗಿ ಕಾಲಿಡಬಾರದೇ? ಹೀಗೆ ವಕ್ರವಕ್ರವಾಗಿ ನಡೆಯುವುದೇಕೆ! ಸರಿಯಾಗಿ ನಡೆಯಿರಿ!" ಎಂದು ಗರ್ಜಿಸಿದನು. ಆಗ ದೂತರು ರಾಜನ ಕೋಪಕ್ಕೆ ಹೆದರಿ "ರಾಜೇಂದ್ರಾ! ನಾವು ಎಷ್ಟೋ ಎಚ್ಚರದಿಂದ ನಿಷ್ಕಪಟವಾಗಿ ನಡೆಯುತ್ತಿರುವೆವು. ನಿನ್ನ ನಿಯಮವನ್ನು ಮೀರಿ ಹೋಗತಕ್ಕವರಲ್ಲ! ಆದರೆ ಈ ಬ್ರಾಹ್ಮಣನು ಈಗಲೇ ಬಂದು ಹೆಗಲುಕೊಟ್ಟವನಾಗಿದ್ದರೂ, ಭಾರವನ್ನು ಹೊತ್ತುಬಳಲಿದವನಂತೆ ತನ್ನ ಪೆಚ್ಚೆಜ್ಜೆಯನ್ನು ತಾಕುತ್ತಿರುವನು. ಶೀಘ್ರವಾಗಿಯೂ ನಡೆಯಲಾರದೆ, ಕಪಟಿಯಾದ ಈ ಬ್ರಾಹ್ಮಣನ ದೆಸೆಯಿಂದ ನಮ್ಮ ನಡೆಯೂ ವಕ್ರವಾಗುತ್ತಿರುವುದು. ಆದುದರಿಂದ ಓ ಮಹಾರಾಜಾ! ಇನ್ನು ಮುಂದೆ ನೀವು ಮಿಂಡಿತರಾಗಿ ಇನನೊಡನೆ ಪಲ್ಲಕ್ಕಿಯನ್ನು ಹೊರಲಾರಿರಿ" ಎಂದರು. ಹೀಗೆ ಮೂತರು ವೈನ್ಯನಿಂದ ಹೇಳಿದ ಮಾತನ್ನು ಕೇಳಿ ರಾಜನು "ಹೌದು! ನಿಜ! ಬ್ರಾಹ್ಮಣನು ದೋಷಿಯಾಗಿದ್ದರೆ ಅವನ ಸಹವಾಸದಿಂದ ಬೇರೆಯವರೆಲ್ಲರೂ ಅದೋಷಕ್ಕೆ ಗುರಿಯಾಗಬೇಕಾಗುವುದು. ಇದು ಸಹವಾಸದೋಷವೇಹೊರತು ದೂತರ ತಪ್ಪಲ್ಲ" ವೆಂದು ನಿಶ್ಚಯಿಸಿಕೊಂಡನು. ಆ ರಾಜನು ಬಹುಕಾಲದವರೆಗೆ ಹಿರಿಯರಲ್ಲಿ ಸೇವೆಮಾಡಿದವನಾಗಿದ್ದರೂ, ಪ್ರಕೃತಿ ಸಂಬಂಧನಾದ ರಜೋಗುಣವು ಅವನ ಪ್ರಸನ್ನತೆಯನ್ನು ಕದಲಿಸಿತು. ಅವನಿಗೆ ಮನಸ್ಸಿನಲ್ಲಿ ಸ್ವಲ್ಪಸ್ವಲ್ಪವಾಗಿ ಕೋಪವು ಅಂಕುರಿಸುತ್ತು ಬಂದಿತು! ಹೀಗೆ ಕುಪಿತನಾದ ರಾಜನು, ಬೂದಿಮುಚ್ಚಿದ ಕೆಂಡದಂತೆ ತನ್ನ ಬ್ರಹ್ಮತೇಜಸನ್ನು ಹೊರಕ್ಕೆ ಕಾಣಿಸದಿದ್ದ ಆ ಬ್ರಾಹ್ಮಣನನ್ನು ಕುರಿತು, ಪರಿಹಾಸವಾಕ್ಯದಿಂದ ಹೀಗೆಂದು ಹೇಳುವನು. "ಅಪ್ಪಾ ಅಣ್ಣಾ! ಅಯ್ಯೋ ಪಾಪ! ಬಹುದೂರದಿಂದ ನೀನೊಬ್ಬನೇ ಈ ಪಲ್ಲಕ್ಕಿಯನ್ನು ಹೊತ್ತುತಂದು ಎಷ್ಟು ಬಳಲಿದೆಯೋ ಕಾಣೆನು! ಕೈಕಾಲುಗಳೆಲ್ಲವೂ ಸೋತು ಹೋಗಿರುವುವಲ್ಲನೇ? ಅಯ್ಯೋ ಪಾಪವೇ! ನಿನಗೆ ದೇಹದಲ್ಲಿ ಪುಷ್ಟಿಯಿಲ್ಲದೆ, ಮೈಯೆಲ್ಲವೂ ಬಹಳ ಬಡವಾಗಿರುವುದಲ್ಲಜೇ? ಇದಲ್ಲದೆ

ನೀನು ಹಣ್ಣು ಮುದುಕನಾದುದರಿಂದ ಕೈಲಾಗದವನಲ್ಲವೇ? ನಿನ್ನೊಡನೆ ಪಲ್ಲಕ್ಕಿಯನ್ನು ಹೊತ್ತಿರುವ ಬೇರೆ ಆಳುಗಳಿಲ್ಲರೂ ಈಗಲೇ ಬಂದವರಾದುದರಿಂದ ಅವರು ಅನಾಯಾಸವಾಗಿ ನಡೆಯುತ್ತಿರಬಹುದಲ್ಲವೇ?" ಎಂದು ವಿಪರೀತಾರ್ಥವುಳ್ಳ ಈ ಮಾತುಗಳಿಂದ ಆ ಬ್ರಾಹ್ಮಣನನ್ನು ಮೂದಲಿಸುತ್ತಿದ್ದನು. ಇವೆಲ್ಲವೂ ಕಿವಿಗೆ ಬೀಳುತ್ತಿದ್ದರೂ ಭರತನು ಬಾಯಿತ್ತೆ ಮೊದಲಿನಂತೆಯೇ ತನಗೆ ಬಂದಹಾಗೆ ಪಲ್ಲಕ್ಕಿಯನ್ನು ಹೊತ್ತು ನಡೆಯುತ್ತಲೇ ಇದ್ದನು. ಆದರೆ ಭರತನು ತನಗೆ ಪ್ರಾಪ್ತವಾಗಿರುವ ಆ ಶರೀರಸಂಬಂಧವು ಕರ್ಮಮೂಲಕವಾದುದೇ ಹೊರತು ಸಹಜವಲ್ಲವೆಂದೂ ಕರ್ಮಗಳ ಮೂಲಕವಾಗಿ ಪರಿಣಮಿಸಿದ ಪಂಚಭೂತಗಳೂ, ಶಬ್ದಾದಿವಿಷಯಗಳೂ, ಕರ್ಮೇಂದ್ರಿಯಗಳಿಂದ ನಡೆಯತಕ್ಕ ನಡೆ, ನುಡಿ ಮೊದಲಾದ ಕಾರ್ಯಗಳೂ, ಇಂದ್ರಿಯಗಳೂ, ಮನಸ್ಸು ವಾಸನೆ, ಇವೆಲ್ಲವೂ ಸೇರಿ ಈ ಶರೀರವೆಂಬ ಒಂದು ಆಕಾರವಿಶೇಷದಿಂದೇರ್ಪಟ್ಟಿರುವುದೆಂದೂ, ಇದು ಯಾವಾಗಲೂ ಒಂದು ನೆಲೆಯಲ್ಲಿ ನಿಲ್ಲದೆ ಬದಲಾಯಿಸುತ್ತಿರುವ ಸ್ವಭಾವವುಳ್ಳುದಾಗಿದ್ದರಿಂದ ಅಸತ್ತೆನಿಸಿಕೊಳ್ಳುವುದೆಂದೂ, ಆದೇ ತನಗೆ ಕೊನೆಯ ಶರೀರವೇಹೊರತು ತಿರುಗಿ ತನಗೆ ಆವಿಧವಾದ ಶರೀರಸಂಬಂಧವಿಲ್ಲವೆಂದೂ, ಚೆನ್ನಾಗಿ ತಿಳಿದವನಾಗುದರಿಂದ, ಆ ಶರೀರದಲ್ಲಿಯಾಗಲೀ, ಆ ಶರೀರಸಂಬಂಧಗಳಲ್ಲಿಯಾಗಲೀ ಸ್ವಲ್ಪವೂ ಅಭಿಮಾನವಿಲ್ಲದಂತಿದ್ದನು. ಈ ವಿಧವಾಗಿ ಅಭಿಮಾನವನ್ನು ಬಿಟ್ಟು, ಬ್ರಹ್ಮಸಾಯುಜ್ಯವನ್ನು ಪಡೆಯುವುದಕ್ಕೆ ಸಿದ್ಧನಾಗಿದ್ದುದರಿಂದಲೇ, ಆ ರಾಜನ ತಿರಸ್ಕಾರಾಕ್ಷಗಳಿಗೆ ಕಿವಿಹೊಡೆದೆ ಮೊದಲಿನಂತೆಯೇ ತನ್ನ ಕೆಲಸದಲ್ಲಿ ತೊಡಗಿದ್ದನು. ಸ್ವಲ್ಪದೂರದವರೆಗೆ ನಡೆಯುವಷ್ಟರಲ್ಲಿ ಪಲ್ಲಕ್ಕಿಯು ಮೊದಲಿನಂತೆಯೇ ವಕ್ರವಕ್ರವಾಗಿ ತಿರುಗುತ್ತಿರಲು, ಮೇಲೆ ಕೂತಿದ್ದ ರಾಜನಿಗೆ ಕೋಪವು ಉಕ್ಕುತ್ತ ಬಂದಿತು. ಆ ಕೋಪಾವೇಶದಿಂದ ರಹೂಗಣನು ಭರತನನ್ನು ನೋಡಿ, "ಏನೆಲಾ! ರಾಜನಾದ ನನ್ನ ಮಾತನ್ನೂ ಲಕ್ಷ್ಯಮಾಡದೆ ಸ್ವೇಚ್ಛೆಯಾಗಿ ನಡೆಯುತ್ತಿರುವೆ! ತಿಂದುತಿಂದು ಕೊಬ್ಬಿಬೆಳೆದಿದ್ದರೂ ಜೀವಚ್ಛವದಂತೆ ಕೆಲಸಮಾಡುವೆಯಾ? ಇರಲಿ! ನಿನ್ನ ಕೊಬ್ಬನ್ನು ಮುರಿಯುವೆನು ನೋಡು! ದಂಡಪಾಣಿಯಾದ ಯಮನು ಪ್ರಾಣಿಗಳನ್ನು ಶಿಕ್ಷಿಸುವಂತೆ ನಿನ್ನನ್ನ ದಂಡಿಸಿ, ನಿನ್ನನ್ನು ಸರಿಯಾದ ಮಾರ್ಗಕ್ಕೆ ತರುವೆನು ನೋಡು!" ಎಂದನು. ರಜಸ್ತಮೋಗುಣಗಳ ಹೆಚ್ಚಳಿಕೆಯಿಂದ ತಾನೇ ರಾಜನೆಂದೂ, ತಾನೇ ಪಂಡಿತನೆಂದೂ ಭಾವಿಸಿ, ಮುಂದಾಂಧನಾಗಿ ಭಾಗವತೋತ್ತಮರೆಲ್ಲರನ್ನೂ ಅವಮಾನಪಡಿಸುತ್ತಿದ್ದ ಆ ರಾಜನು, ಹೀಗೆ ಅಸಂಬದ್ಧಪ್ರಲಾಪನವನ್ನು ಮಾಡುತ್ತಿರುವಾಗಲೂ, ಭರತನು ಅವನ ಮಾತಿಗೆ ಕೋಪಿಸಲಿಲ್ಲ! ಇಷ್ಟುಮಾತ್ರ

ವಲ್ಲ! ಮನಸ್ಸಿನಲ್ಲಿಯೇ ಪರಬ್ರಹ್ಮನನ್ನು ಸಾಕ್ಷಾತ್ಕರಿಸಿದವನಾಗಿಯೂ, ಬ್ರಹ್ಮ ಸ್ವರೂಪನಾಗಿಯೂ, ಸರ್ವಭೂತಸುಹೃತ್ತಾಗಿಯೂ, ಮಹಾನುಭಾವನಾಗಿಯೂ ಇದ್ದ ಆ ಭರತನು, ಯೋಗಮಾರ್ಗವನ್ನರಿಯದ ಮೂಢನಾದ ಆರಾಜನಲ್ಲಿ ಕನಿಕರ ಗೊಂಡು, ಮುಗುಳ್ನಗೆಯೊಡನೆ ಮೃದುವಾಕ್ಯದಿಂದ ಹೀಗೆಂದು ಹೇಳುವನು. "ಓ ರಾಜೇಂದ್ರಾ! ಲೌಕಿಕದೃಷ್ಟಿಯಿಂದ ನೋಡಿದರೆ ನೀನು ಹೇಳಿದುದೆಲ್ಲವೂ ವಾಸ್ತವವೇ! ತತ್ವವನ್ನು ವಿಚಾರಿಸುವಾಗ ನಿನ್ನ ಮಾತುಗಳೆಲ್ಲವೂ ಅಸಂಬದ್ಧವಾಗುವುವು! ಏಕೆಂದು ಕೇಳುವೆಯಾ? ನೀನು ಕೇವಲ ಭ್ರಾಂತಿಯಿಂದ ಒಂದರ ಧರ್ಮವನ್ನು ಮತ್ತೊಂದರಲ್ಲಿ ಆರೋಪಿಸುತ್ತಿರುವೆ? ಲೋಕದಲ್ಲಿ ಭಾರವನ್ನು ಹೊತ್ತವನಿಗೆ ಶ್ರಮವೇಹೊರತು ನನಗಿಲ್ಲ! ಏಕೆಂದರೆ, ಈಗ ನಾನು ಭಾರವನ್ನು ಹೊತ್ತವನಲ್ಲ! ಬೇಗ ನಡೆಯೆಂದು ಹೇಳಿದೆಯಲ್ಲವೇ? ನಡೆಯತಕ್ಕವನಿಗೆ ಹೋಗಿ ಸೇರಬೇಕಾದ ಉದ್ದೇಶ್ಯಸ್ಥಳವೊಂದಿರಬಹುದು. ಅಂತಹಸ್ಥಳವೂ ನನ್ನ ಭಾಗಕ್ಕಿಲ್ಲ! ಏಕೆಂದರೆ, ನಾನು ನಡೆಯತಕ್ಕವನೂಅಲ್ಲ. ನನ್ನನ್ನು ಕೊಬ್ಬಿಬೆಳೆದವನೆಂದು ಹೇಳಿದೆಯಲ್ಲವೇ? ಆ ಬೆಳವಳಿಕೆಯೂ ನನ್ನ ದೇಹಕ್ಕೇಹೊರತು ನನಗಿಲ್ಲ! ಆದುದರಿಂದ ನಡೆಯುವುದಾಗಲೀ, ಹೊರುವುದಾಗಲೀ, ಬೆಳೆಯುವುದಾಗಲೀ, ನನಗೆ ಸಂಬಂಧಪಟ್ಟ ಕಾರ್ಯವಲ್ಲ. ಆತ್ಮಸ್ವರೂಪನನ್ನು ಚೆನ್ನಾಗಿ ತಿಳಿದವರ ಅಭಿಪ್ರಾಯವು ಇದೇ! ಉಬ್ಬಿಬೆಳೆಯುವುದಾಗಲೀ, ಕೃಶವಾಗುತ್ತಿರುವುದಾಗಲೀ, ರೋಗಗಳಾಗಲೀ, ಮನಸ್ಸಂಕಟಗಳಾಗಲೀ, ಇದರಂತೆಯೇ ಹಸಿವು, ಬಾಯಾರಿಕೆ, ಭಯ, ಕಾಮಕ್ರೋಧಗಳು, ಮುಪ್ಪು, ನಿದ್ರೆ, ವಿಷಯಾಸಕ್ತಿ, ದುಃಖ, ಅಹಂಕಾರ, ಮೋಹ, ಮದ, ಇವೇ ಮೊದಲಾದವುಗಳಾಗಲೀ, ದೇಹಕ್ಕೆ ಸಂಬಂಧಪಟ್ಟವುಗಳೇ ಹೊರತು ನನಗಲ್ಲ! ಏಕೆಂದರೆ ಜನನ ಮರಣಾದಿವಿಕಾರಗಳಿಲ್ಲದ ನನ್ನ ಆತ್ಮಕ್ಕೂ ಇವುಗಳಿಗೂ ಯಾವ ಸಂಬಂಧವೂಇಲ್ಲ. ನನ್ನನ್ನು ಜೀವಚ್ಛವವೆಂದು ಕರೆದೆಯಲ್ಲವೇ? ಆ ಮಾತಿಗೂ ನನಗೂ ಸಂಬಂಧವಿಲ್ಲ! ಬದುಕಿರುವುದಾಗಲೀ, ಸಾಯುವುದಾಗಲೀ, ವಿಕಾರಗಳನ್ನು ಹೊಂದುತ್ತಿರುವ ದೇಹಕ್ಕೇಹೊರತು, ಆತ್ಮನಿಗಿಲ್ಲ! ರಾಜನಾದ ನಿನ್ನ ಆಜ್ಞೆಯನ್ನು ನಾನು ಲಕ್ಷ್ಯಮಾಡದೆ ಹೋದುದಾಗಿ ಹೇಳಿದೆಯಲ್ಲವೇ? ಆ ನಿನ್ನ ಮಾತೂ ಯುಕ್ತವಾದುದಲ್ಲ. ಒಬ್ಬನು ಪ್ರಭುವೆಂದೂ, ಮತ್ತೊಬ್ಬನು ಅವನಿಗೆ ದಾಸನೆಂದೂ, ಸ್ವಾಮಿಭೃತ್ಯಭಾವದಿಂದುಂಟಾದ ಈ ಸಂಬಂಧವು, ಯಾರಲ್ಲಿ ಎಂದೆಂದಿಗೂ ಚ್ಯುತಿಯಿಲ್ಲದೆ ನೆಲೆಯಾಗಿ ನಿಲ್ಲಬಹುದೋ, ಅಂತವರಲ್ಲಿಯೇ ಆ ವಿಧವಾದ ಭಾವನೆಯೂ ನಿಜವಾಗಿರುವುದು! ಪ್ರಭುವಾದವನು ಆಯಾ ನಿಯಮಕ್ಕೆ ತಕ್ಕಂತೆ ನಡೆಯುವುದೂ ಅಂತವರಲ್ಲಿಯೇ ಸ್ಥಿರಪಡುವುದು.

ಈವಿಧವಾಗಿ ಎಂದಿಗೂ ತಪ್ಪಿಹೋಗದ ಸ್ವಾಮಿಭೃತ್ಯಸಂಬಂಧವು ಪರಮಾತ್ಮನಿಗೂ, ಜೀವಾತ್ಮನಿಗೂ ಇರುವುದೇಹೊರತು, ನಿನಗೂ ನನಗೂ ಆ ಸಂಬಂಧವಿಲ್ಲ. ಏಕೆಂದು ಕೇಳುವೆಯಾ ? ನೀನು ಎಂದೆಂದಿಗೂ ಹೀಗೆಯೇ ಪ್ರಭುವಾಗಿಯೇ ಇರುವೆಯೆಂಬ ನಿಶ್ಚಯವಿಲ್ಲ. ಈ ಜನ್ಮದಲ್ಲಿಯೇ ಆಗಲೀ, ಇನ್ನೊಂದು ಜನ್ಮಕ್ಕಾಗಲೀ, ನಿನ್ನ ರಾಜ್ಯವು ನನ್ನ ಕೈಗೆ ಬಂದರೆ, ಆಗ ನಿನ್ನ ಪ್ರಭುತ್ವವೂ, ನನ್ನ ದಾಸ್ಯವೂ ಬದಲಾಯಿಸಿ, ನಾನು ರಾಜನಾಗಿಯೂ, ನೀನು ದಾಸನಾಗಿಯೂ ಇರಬೇಕಲ್ಲವೇ? ಆದುದರಿಂದ ಪ್ರಭುವಲ್ಲದ ನಿನ್ನನ್ನು ಪ್ರಭುವಾಗಿ ತಿಳಿದುಕೊಂಡಿರುವುದೂ ಕೇವಲ ಭ್ರಮವು ! ನೀನು ನಿನ್ನನ್ನು ಪ್ರಭುವೆಂದೂ, ನನ್ನನ್ನು ಭೃತ್ಯನೆಂದೂ ಬಾಯಿಂದಾಡಿಕೊಳ್ಳುವುದೊಂದೇ ಹೊರತು, ನಮ್ಮಿಬ್ಬರಲ್ಲಿ ಈ ಭೇದವನ್ನು ತೋರಿಸುವುದಕ್ಕೆ ಸ್ವಲ್ಪವಾದರೂ ಅವಕಾಶವಿರುವಂತೆ ನನ್ನ ಬುದ್ಧಿಗೆ ತೋರಲಿಲ್ಲ. ಈ ಲೋಕದಲ್ಲಿ ರಾಜನಾರು ? ಭೃತ್ಯನಾರು ? ನೀನು ನನಗೆ ಪ್ರಭುವಲ್ಲ ! ನಾನು ನಿನಗೆ ದಾಸನೂ ಅಲ್ಲ. ರಾಜೇಂದ್ರಾ! ನನ್ನ ಮಾತಿಗಾಗಿ ಕೋಪಿಸಬೇಡ! ನಾವು ಮಾಡತಕ್ಕುದೇನು? ಅಯಾ ವಸ್ತುವಿನ ನಿಜವಾದ ಸ್ವರೂಪವನ್ನು ಮಾರ್ಪಡಿಸುವುದಕ್ಕೆ ಯಾರಿಂದ ತಾನೇ ಸಾಧ್ಯವು? ಅದೂ ಹೋಗಲಿ ! ನೀನು ನನ್ನನ್ನು ದಂಡಿಸುವುದಾಗಿ ಹೇಳಿದೆಯಲ್ಲವೇ? ಇದೂ ಕೇವಲ ಭ್ರಮವು ! ಪರಬ್ರಹ್ಮಸ್ವರೂಪವಾದ ಆತ್ಮವನ್ನು ಅನುಭವಿಸುವುದರಲ್ಲಯೇ ನೆಲೆಯಾಗಿ ನಿಂತು, ಹುಚ್ಚನಂತೆಯೂ, ಮೂಗನಂತೆಯೂ, ಕುರುಡನಂತೆಯೂ ನಡೆಯುತ್ತಿರುವ ನಾನು, ಈಗಾಗಲೇಲೋಕದಲ್ಲಿ ಜನರಿಂದ ಎಷ್ಟೋ ತಿರಸ್ಕಾರವನ್ನು ಹೊಂದಿರುವೆನು. ಇತರರು ನನ್ನನ್ನು ಹೊಡೆದು, ಬಡಿದು, ಹೆದರಿಸುತ್ತಿರುವುದನ್ನೆಲ್ಲಾ ಪ್ರೀತಿಯಿಂದಾದರಿಸುತ್ತಿರುವೆನು. ಹೀಗಿರುವಾಗ ನಿನ್ನ ದಂಡನೆಗಾಗಿ ನಾನು ದುಃಖಿಸುವೆನೇ ? ನೀನು ನನ್ನನ್ನು ದಂಡಿಸಿದುದರಿಂದ ಫಲವೇನು? ಒಂದುವೇಳೆ ಇತರಜನರಂತೆ ನಾನೂ ಆತ್ಮಸ್ವರೂಪವನ್ನು ತಿಳಿಯದೆ ಸಂಸಾರಿಯಾಗಿಯೇ ಕಷ್ಟಪಡುತ್ತಿದ್ದರೂ, ಆಗಲೂ ನಿನ್ನ ದಂಡನೆಯು, ಪಿಷ್ಟಪೇಷಣನ್ಯಾಯದಿಂದ ಸತ್ತಹಾವನ್ನು ಕೊಂದಂತೆಯೇ ಆಗುತ್ತಿತ್ತೇ ಹೊರತು, ಅದರಿಂದಲೂ ಏನೂ ಪ್ರಯೋಜನವಾಗುತ್ತಿರಲಿಲ್ಲ" ಎಂದನು. ಮನೋವಿಕಾರವಿಲ್ಲದವನಾಗಿಯೂ, ಜನ್ಮಾಂತರಕ್ಕೆ ಕಾರಣವಾದ ಕರ್ಮಸಂಬಂಧವಿಲ್ಲದವನಾಗಿಯೂ, ಅನುಭವದಿಂದಲೇ ಕರ್ಮಶೇಷವನ್ನು ಕಳೆದು ಶರೀರಾವಸಾನವನ್ನು ಇದಿರುನೋಡತಕ್ಕವನಾಗಿಯೂ ಇದ್ದ ಆ ಭರತನು, ರಾಜನು ಹೇಳಿದ ಒಂದೊಂದು ಮಾತಿಗೂ ಹೀಗೆ ಪ್ರತ್ಯುತ್ತರವನ್ನು ಹೇಳಿ, ಮೊದಲಿನಂತೆ ಪಲ್ಲಕ್ಕಿಯನ್ನು ಹೊರುತ್ತಾ ಮುಂದೆ ಹೋದನು. ಎಲೈ ಪರೀಕ್ಷಿದ್ರಾಜನೇ! ಆ ರಹೂಗಣನೆಂಬ

ರಾಜನೂಕೂಡ ಈ ಆತ್ಮತತ್ವವನ್ನು ಕೇಳಬೇಕೆಂದೇ ಹೊರಟಿದ್ದವನಾದುದರಿಂದ, ಅಜ್ಞಾನವನ್ನು ನೀಗಿಸತಕ್ಕ ಭರತನ ವಾಕ್ಯವನ್ನು ಕೇಳಿದೊಡನೆ ಭಯಗ್ರಸ್ತನಾಗಿ, ಥಟ್ಟನೆಪಲ್ಲಕ್ಕಿಯಿಂದ ಕೆಳಕ್ಕೆ ಧುಮುಕಿ, ತಾನು ರಾಜನೆಂಬ ಗರ್ವವನ್ನು ಬಿಟ್ಟು, ಆ ಭರತನ ಪಾದಗಳನ್ನು ಹಿಡಿದು ಸಾಷ್ಟಾಂಗ ಪ್ರಣಾಮವನ್ನು ಮಾಡಿ, ಅಪರಾಧಕ್ಷಮಾಪಣವನ್ನು ಮಾಡಿಕೊಳ್ಳುವನು. "ಓ ಮಹಾತ್ಮಾ! ನೀನು ಯಾರು? ನೀನು ಬ್ರಹ್ಮತೇಜಸ್ಸನ್ನು ಗುಪ್ತವಾಗಿಟ್ಟುಕೊಂಡು, ಹೀಗೆ ಸಂಚರಿಸುತ್ತಿರುವ ಕಾರಣವೇನು? ನಿನ್ನ ಕೊರಳಲ್ಲಿರುವ ಯಜ್ಞೋಪವೀತವನ್ನು ನೋಡಿದರೆ, ನೀನು ಬ್ರಾಹ್ಮಣನೆಂಬುದರಲ್ಲಿ ಸಂದೇಹವಿಲ್ಲ. ನೀನು ಹಾಸ್ಯಾಸ್ಪದವಾದ ಈ ವೇಷವನ್ನು ಧರಿಸಿರುವುದೇಕೆ? ನಿನ್ನ ತಂದೆಯಾರು? ನಿನ್ನ ಗುರುವಾರು? ನಿನ್ನ ವಾಸಸ್ಥಳವಾವುದು? ನೀನು ಇಲ್ಲಿಗೆ ಬಂದ ಕಾರಣವೇನು? ಒಂದುವೇಳೆ ನನ್ನನ್ನು ಅನುಗ್ರಹಿಸಬೇಕೆಂದು ಬಂದ ಕಪಿಲಮುನಿಯೇ ನೀನಾಗಿರಬಹುದೇ? ಓ ಬ್ರಾಹ್ಮಣೋತ್ತಮಾ! ನಾನು ಇಂದ್ರನ ವಜ್ರಾಯುಧಕ್ಕಾಗಲೀ, ರುದ್ರನ ಶೂಲಕ್ಕಾಗಲೀ, ಯಮದಂಡಕ್ಕಾಗಲೀ, ಸೂರ್ಯಚಂದ್ರಾಗ್ನಿಗಳೇ ಮೊದಲಾದ ದಿಕ್ಪಾಲಕರ ಅಸ್ತ್ರಗಳಿಗಾಗಲೀ ಹೆದರತಕ್ಕವನಲ್ಲ ಬ್ರಾಹ್ಮಣತಿರಸ್ಕಾರವೆಂಬ ಮಹಾಸ್ತ್ರವೊಂದಕ್ಕೆ ಮಾತ್ರ ನಾನು ಬಹಳವಾಗಿ ಹೆದರುವೆನು ಆದುದರಿಂದ ನೀನು ನನಗೆ ನಿನ್ನ ನಿಜಸ್ಥಿತಿಯನ್ನು ಶೀಘ್ರದಲ್ಲಿ ತಿಳಿಸಬೇಕು! ಸರ್ವಸಂಗಪರಿತ್ಯಾಗಮಾಡಿ, ಜ್ಞಾನವೆಂಬ ನಿನ್ನ ವೀರ್ಯವನ್ನು ಮರೆಸಿಟ್ಟುಕೊಂಡು, ಬೇರೊಬ್ಬರಿಗೆ ತಿಳಿಯದೆ ಜಡನಂತೆ ಕಾಣಿಸಿಕೊಳ್ಳುತ್ತಿರುವೆಯಲ್ಲಾ! ನಿನ್ನ ಬಾಯಿಂದ ಹೊರಡತಕ್ಕ ಒಂದೊಂದು ಮಾತೂ ಯೋಗಶಾಸ್ತ್ರಮರ್ಯಾದೆಯನ್ನು ಮುಚ್ಚಿಟ್ಟುಕೊಂಡಿರುವುದು! ಎಷ್ಟೇ ಸೂಕ್ಷ್ಮಬುದ್ಧಿಯಿಂದಾಲೋಚಿಸಿದರೂ, ನನಗೆ ನಿನ್ನ ಮಾತಿನ ಅಭಿಪ್ರಾಯವನ್ನು ಹೀಗೆಂದು ತಿಳಿಯುವುದಕ್ಕೇ ಸಾಧ್ಯವಿಲ್ಲದಿರುವುದು. ಓ ಮಹಾತ್ಮಾ! ಈಗ ನಾನು ತತ್ವಜ್ಞನಾಗಿಯೂ, ಹಿತೋಪದೇಶಕನಾಗಿಯೂ, ಜ್ಞಾನಾಂಶದಿಂದವತರಿಸಿದ ಸಾಕ್ಷಾದ್ವಿಷ್ಣುರೂಪಿಯಾಗಿಯೂ ಇರುವ ಕಪಿಲಮಹರ್ಷಿಯ ಬಳಿಗೆ ಹೋಗಿ, ಈ ಸಂಸಾರದಲ್ಲಿ ಪ್ರಾಣಿಗಳನ್ನುದ್ಧರಿಸತಕ್ಕ ಉಪಾಯವಾವುದೆಂದು ಕೇಳಿ ತಿಳಿಯಬೇಕೆಂಬ ಉದ್ದೇಶದಿಂದಲೇ ಹೊರಟಿರುವೆನು. ಆ ಕಪಿಲಮುನಿಯೇ ಲೋಕರಕ್ಷಣಕ್ಕಾಗಿ ವೇಷಾಂತರದಿಂದ ನಿಜರೂಪವನ್ನು ಮರೆಸಿಕೊಂಡು ಹೀಗೆ ಬಂದಿರಬಹುದೇ? ಸಂಸಾರದಲ್ಲಿ ಬಿದ್ದ ನನ್ನಂತಹ ಮೂಢರು ಯೋಗೀಶ್ವರರ ವಿಚಿತ್ರವ್ಯಾಪಾರಗಳನ್ನು ಹೇಗೆತಾನೇ ತಿಳಿಯಬಲ್ಲೆವು. ಓ ಮಹಾತ್ಮಾ! ನನಗೊಂದು ಸಂದೇಹವುಂಟು. ಇದಕ್ಕೆ ಮೊದಲು ನೀನು ಪಲ್ಲಕ್ಕಿ

ಯನ್ನು ಹೊರುತ್ತಿದ್ದಾಗಲೂ ನಾನು ಹೊರುವವನಲ್ಲವೆಂದು ಹೇಳಿದೆಯಲ್ಲವೇ? ಅದರ ಅರ್ಥವೇನು? ದೇಹಕ್ಕಿಂತಲೂ ಜೀವಾತ್ಮವು ವಿಲಕ್ಷಣವಾಗಿದ್ದರೂ, ಆ ಜೀವಕ್ಕೆ ದೇಹಸಂಬಂಧವಿದ್ದು ಕಾರ್ಯಗಳನ್ನು ನಡೆಸುವಾಗಲೇ ಶ್ರಮವು ತೋರುವುದು ಸಹಜವು! ಯುದ್ಧಾದಿಕಾಲದಲ್ಲಿ ನಾನೂ ಇದನ್ನು ಚೆನ್ನಾಗಿ ಅನುಭವಿಸಿದವನಾದುದರಿಂದ, ಈಗ ಭಾರವನ್ನು ಹೊತ್ತು ದಾರಿನಡೆಯುತ್ತಿರುವ ನಿನಗೂ ಹಾಗೆಯೇ ಇರಬಹುದೆಂದು ಊಹಿಸಬೇಕಾಗಿದೆಯಲ್ಲವೇ? ಹೀಗಿರುವಾಗ ನೀನು ಭಾರವನ್ನು ಹೊತ್ತಿಲ್ಲವೆಂದು ಹೇಳಿದುದು ಹೇಗೆ? ಅದಲ್ಲದೆ "ಇದೊಂದು ಲೋಕಪ್ರತೀತಿಮಾತ್ರವೇ ಹೊರತು ವಾಸ್ತವವಲ್ಲ" ವೆಂದು ನಿರಾಕರಿಸುವುದಕ್ಕಿಲ್ಲ. ಏಕೆಂದರೆ ಪಾತ್ರವಿದ್ದರೆ ನೀರನ್ನು ತರಬಹುದೇಹೊರತು, ಪಾತ್ರವಿಲ್ಲದ ಕಡೆಯಲ್ಲಿ ಆ ಕಾರ್ಯವೂ ಇಲ್ಲದಿರುವುದೇ? ಅದರಂತೆಯೇ ಪ್ರಮಾಣವಿಲ್ಲದೆ ಪ್ರತೀತಿಯೂ ಹುಟ್ಟಲಾರದು. ಆದುದರಿಂದ ಲೋಕವ್ಯವಹಾರವನ್ನು ಪ್ರಮಾಣವೆಂದೇ ಅಂಗೀಕರಿಸಬೇಕೆಲ್ಲದೆ, ಅಪ್ರಮಾಣವೆಂದು ನಿರಾಕರಿಸುವುದಕ್ಕಿಲ್ಲ. ಒಲೆಯಮೇಲಿಟ್ಟ ಪಾತ್ರೆಯು, ಬೆಂಕಿಯ ಕಾವು ತಗುಲಿದಹಾಗೆಲ್ಲಾ ಕಾಯುತ್ತಬರುವುದು. ಆ ಪಾತ್ರೆಯ ಸಂಬಂಧದಿಂದ ಅದರಲ್ಲಿಟ್ಟ ನೀರೂ ಕುದಿಯುವುದು. ಆ ನೀರಿನ ಸಂಬಂಧದಿಂದ ಅದರಲ್ಲಿ ಹಾಕಿದ ಅಕ್ಕಿಯೂ ಬೇಯುವುದು. ಇದರಂತೆಯೇ ಜೀವನಿಗೆ ದೇಹ, ಇಂದ್ರಿಯಗಳು, ಪ್ರಾಣ, ಕರ್ಮವಾಸನೆ, ಮನಸ್ಸು, ಇವುಗಳ ಸಂಬಂಧವು ಬಲವಾಗಿ ಅಂಟಿರುವಾಗ, ಶುದ್ಧಸ್ವರೂಪನಾದ ಆ ಆತ್ಮನಿಗೂ ದುಃಖಾತ್ಮಕವಾದ ಸಂಸಾರವು ತಗುಲುಕಟ್ಟುತ್ತದೆ. ಇದಲ್ಲದೆ ಈಗ ನಾನು ಕಮಲವರ್ಷದಿಂದ ರಾಜನಾಗಿ ಹುಟ್ಟಿರುವೆನು. ದುಷ್ಟರನ್ನು ದಂಡಿಸಿ ಶಿಷ್ಟರನ್ನು ಪಾಲಿಸುವುದೇ ಕ್ಷತ್ರಿಯರ ಕಾರ್ಯವು ನನ್ನ ಪಾಲಿಗಿದೆ. ಈ ನನ್ನ ಕ್ಷತ್ರಿಯಧರ್ಮವನ್ನು ನಾನು ಭಗವದಾರಾಧನೆರೂಪವಾಗಿ ನಡೆಸುವಪಕ್ಷದಲ್ಲಿ, ಅದನ್ನು ಪಿಷ್ಟಪೇಷಣದಂತೆ ವ್ಯರ್ಥವೆಂದು ನೀನು ಶೋಳುವುದು ಯುಕ್ತವೇ? ತನ್ನ ವರ್ಣಾಶ್ರಮಧರ್ಮಗಳನ್ನು ನಡೆಸತಕ್ಕವನು, ತನ್ನ ಪಾಪರಾಶಿಗಳೆಲ್ಲವನ್ನೂ ಕಳೆದುಕೊಳ್ಳುವನಲ್ಲವೇ? ಈ ಸೂಕ್ಷ್ಮಾಂಶವನ್ನು ನಾನು ನಿನ್ನಿಂದೇ ತಿಳಿಯಬೇಕೆಂಬುದುವೇನು? ಆದುದರಿಂದ ಓ ಮಹಾತ್ಮಾ! ಇದಕ್ಕೆ ಮೊದಲು ರಾಜನೆಂಬ ಮದದಿಂದ ನಾನು ನಿನ್ನನ್ನು ತಿರಸ್ಕರಿಸಿದುದಕ್ಕಾಗಿ ಕೋಪಿಸದೆ, ನನ್ನ ತಪ್ಪನ್ನು ಮನ್ನಿಸಿ, ಸಜ್ಜನತಿರಸ್ಕಾರದಿಂದ ನನಗುಂಟಾದ ಆ ಮಹಾಪಾಪವು ನೀಗುವಂತೆ ನನ್ನಲ್ಲಿ ಕೃಪಾದೃಷ್ಟಿಯನ್ನಿಡಬೇಕು. ಬ್ರಾಹ್ಮಣೋತ್ತಮಾ! ನಿನ್ನನ್ನು ಲೋಕಹಿತನಾದ ಪರಮಪುರುಷನಿಗೆ ಮಿತ್ರನೆಂದೆಣಿಸುವೆನು. ನೀನು ಸಮಸ್ತವನ್ನೂ ಬ್ರಹ್ಮಸ್ವರೂಪವಾಗಿ ನೋಡತಕ್ಕವನಾದುದರಿಂದ, ದೇಹಾಭಿಮಾನವಾಗಲೀ,

ಸ್ವತಂತ್ರಾಭಿಮಾನವಾಗಲೀ ಇಲ್ಲದವನು. ಆದುದರಿಂದ ನಾನು ಮಾಡಿದ ತಿರಸ್ಕಾರಕ್ಕಾಗಿ, ನಿನ್ನ ಮನಸ್ಸು ಕಲಗದಿರುವುದೇನೋ ಸಹಜವು. ಹಾಗಿದ್ದರೂ, ಮಹಾತ್ಮರ ತಿರಸ್ಕಾರದಿಂದ ನನಗುಂಟಾಗುವ ಅಧೋಗತಿಯನ್ನು ತಪ್ಪಿಸಬೇಕು. ಸಾಕ್ಷಾದ್ರುದ್ರನಂತೆ ಸಮರ್ಥನಾಗಿದ್ದವನೂ ಕೂಡ ಮಹಾತ್ಮರ ತಿರಸ್ಕಾರದಿಂದ ಸ್ಥಾವರರೂಪವನ್ನು ಹೊಂದದಿರಲಾರನು. ಇದು ಹತ್ತನೆಯ ಅಧ್ಯಾಯವು.

---

## ಭರತನು ರಹೂಗಣನಿಗೆ ತತ್ತ್ವೋಪದೇಶವನ್ನು ಮಾಡಿದುದು.

ಅದಕ್ಕಾ ಬ್ರಾಹ್ಮಣನು ರಾಜನನ್ನು ಕುರಿತು. "ರಾಜೇಂದ್ರಾ! ನೀನು ಆತ್ಮೈಶ್ವರಮಾತ್ಮತತ್ತ್ವವನ್ನು ಚೆನ್ನಾಗಿ ತಿಳಿಯದವನಾದರೂ ಬಲ್ಲವನಂತೆ ಆಕ್ಷೇಪಿಸುತ್ತಿರುವೆಯಲ್ಲಾ! ಆದುದರಿಂದ ನಿನ್ನನ್ನು ವಿವೇಕಿಯೆಂದು ಹೇಳುವುದಕ್ಕಿಲ್ಲ! ನೀನು ಹೇಳತಕ್ಕ ಉಪಪಾದನಗಳೆಲ್ಲವೂ ಅಜ್ಞರಿಗೆ ಸಮರ್ಪಕವಾಗಿರಬಹುದೇ ಹೊರತು, ತತ್ತ್ವಜ್ಞರು ಇದನ್ನು ನಂಬಲಾರರು. ಪ್ರಕೃತಿಪುರುಷ ಪರಮಾತ್ಮರೆಂಬ ತತ್ತ್ವತ್ರಯವನ್ನು ಚೆನ್ನಾಗಿ ವಿವರಿಸಿ ತೋರಿಸತಕ್ಕ ವೇದದ ಉತ್ತರಭಾಗವನ್ನು ಪರಿಶೀಲನಮಾಡದಿದ್ದವನಿಗೆ, ಈ ವಿಧವಾದ ದೇಹಾಭಿಮಾನವಾಗಲೀ, ಸ್ವತಂತ್ರಾಭಿಮಾನವಾಗಲೀ ಹುಟ್ಟುವುದು ಸಹಜವು. ಗೃಹಸ್ಥಾಶ್ರಮದಲ್ಲಿ ನಡೆಸತಕ್ಕ ಬಗೆಬಗೆಯ ಯಜ್ಞಾದಿಕರ್ಮಗಳನ್ನು ವಿವರಿಸುತ್ತ ಹೋಗುವುದರಿಂದಲೇ ಬಹಳವಾಗಿ ಬೆಳೆದುಹೋಗಿರುವ ವೇದದ ಪೂರ್ವಭಾಗಗಳಲ್ಲಿ, ತತ್ತ್ವಸ್ವರೂಪವು ಅಷ್ಟು ಶುದ್ಧವಾಗಿ ಶೋಧಿಸಲ್ಪಡುವುದಿಲ್ಲ. ಕರ್ಮಗಳಲ್ಲಿ ರುಚಿಯುಳ್ಳವರಿಗೆ ಅದು ಜ್ಞಾನಮಾರ್ಗದಲ್ಲಿ ರುಚಿಯನ್ನು ಹುಟ್ಟಿಸಲಾರದು. ಆದಲ್ಲದೆ ಮೋಕ್ಷವೊಂದು ಹೊರತು ಬೇರೆ ಇಹಪರಲೋಕದ ಸುಖವೆಲ್ಲವೂ ಸ್ವಪ್ನಸುಖದಂತೆ ಅಲ್ಪವೆಂದೂ, ಅಸ್ಥಿರವೆಂದೂ ತಿಳಿಯದೆ, ಅದಕ್ಕಾಗಿ ಆಸೆಪಡುವವನಿಗೆ ವೇದಾಂತಪರಿಚಯವಿದ್ದರೂ. ಆದು ತತ್ತ್ವಜ್ಞಾನವನ್ನು ಚೆನ್ನಾಗಿ ಹುಟ್ಟಿಸಲಾರದು. ಆದುದರಿಂದ ಮನುಷ್ಯನಿಗೆ ವೇದಾಂತಪರಿಶೀಲನದೊಡನೆ ವಿರಕ್ತಿಯೂ ಇದ್ದರೆಮಾತ್ರ ತತ್ತ್ವಜ್ಞಾನೋದಯಕ್ಕೆ ಕಾರಣವಾಗುವುದು. ಜೀವನ ಮನಸ್ಸು, ಸತ್ವರಜಸ್ತಮಸ್ಸುಗಳೆಂಬ ಮೂರುಗುಣಗಳಲ್ಲಿ ಯಾವುದಾದರೂ ಒಂದಕ್ಕೆ ವಶವಾಗಿರುವವರೆಗೂ, ಆಯಾ ಗುಣಗಳಿಗೆ ತಕ್ಕಂತೆ ಕರ್ಮಗಳನ್ನು ನಡೆಸುವನು. ಇಂದ್ರಿಯಗಳ ಮೂಲಕವಾಗಿ

ನಡೆಸಿದ ಆಯಾ ಕರ್ಮಗಳಿಗನುಸಾರವಾಗಿ ಉತ್ತಮಜನ್ಮವನ್ನೋ ನೀಚಜನ್ಮವನ್ನೋ ಹೊಂದುತ್ತಲೇ ಇರುವನು. ಪಂಚಭೂತಗಳಿಗೂ, ಏಕಾದಶೇಂದ್ರಿಯಗಳಿಗೂ ಆತ್ಮನಂತೆ ಪ್ರಧಾನವಾದ ಮನಸ್ಸೆಂಬುದು, ಹೀಗೆ ಕರ್ಮವಾಸನೆಗೂ ವಿಷಯಾಸಕ್ತಿಗೂ, ಸತ್ವಾದಿಗುಣಗಳಿಗೂ ತಕ್ಕಂತೆ ಪ್ರವರ್ತಿಸುತ್ತ, ಸೂಕ್ಷ್ಮಶರೀರದಲ್ಲಿಯೂ ಜೀವಾತ್ಮನನ್ನು ಅಂಟಿಬರುತ್ತಿರುವುದು. ಕರ್ಮವಾಸನೆಯ ಮೂಲಕವಾಗಿ ಜೀವನಿಗೆ ಮೇಲೆಮೇಲೆ ದೇವಮನುಷ್ಯಾದಿ ಶರೀರಗಳನ್ನೂ ಬೇರೆಬೇರೆ ಹೆಸರುಗಳನ್ನೂ, ಒಳಗೆ ರಾಗದ್ವೇಷಾದಿ ವಿಕಾರಗಳನ್ನೂ ಉಂಟುಮಾಡುತ್ತಿರುವುದು. ವಾಸ್ತವಕ್ಕೆ ಜೀವನು ಜ್ಞಾನಾನಂದಸ್ವರೂಪನಾಗಿ ಏಕರೂಪದಿಂದಿದ್ದರೂ, ಮನಸ್ಸೆಂಬುದು ಆ ಜೀವನಿಗೆ ನಾನಾರೂಪಾದಿಗಳಿಂದ ಹೊರಗೂ, ರಾಗದ್ವೇಷಾದಿಗಳಿಂದ ಒಳಗೂ ವಿಕಾರವಿದ್ದಂತೆ ಕಾಣಿಸುವುದು ಪ್ರಕೃತಿಪರಿಣಾಮರೂಪವಾದ ಮನಸ್ಸಿನೊಡಗೂಡಿ, ಇಂತಹ ಸಂಸಾರಚಕ್ರದಲ್ಲಿ ಪರ್ವತದಂತೆ ಅಲ್ಲಾಡದೆ ನಿಂತಿರುವ ಜೀವನು, ಆ ಸ್ಥಿತಿಯಲ್ಲಿಯೂ ತಾನು ಪರಮಾತ್ಮನಿಗೆ ಶರೀರ ಭೂತನಾಗಿ ಅವನೊಡನೆ ಸೇರಿಯೇ ಇದ್ದರೂ, ಅವನನ್ನು ಕಾಣದೆ, ಆ ಭಗವಂತನ ಸಂಕಲ್ಪದಿಂದ ತನಗೆ ಅನಿವಾರ್ಯನಾಗಿ ಮೇಲೆಬಿದ್ದು ಬರುವ ಸುಖದುಃಖಾದಿರೂಪಗಳಾದ ಕರ್ಮಫಲಗಳನ್ನು ಅನುಭವಿಸುತ್ತಿರುವನು. ಬೇರೆಬೇರೆಯವರಲ್ಲಿ ಆಕಾರ, ಹೆಸರು, ಜಾತಿ, ಮುಂತಾಗಿ ಹೊರಕ್ಕೆ ಕಾಣುವ ವಿಕಾರಗಳಾಗಲೀ, ಸುಖದುಃಖ ಮೊದಲಾದ ಒಳಗಿನ ವಿಕಾರಗಳಾಗಲೀ, ದೇಹಾತ್ಮಾಭಿಮಾನದಿಂದಲೇ ಉಂಟಾಗಿರತಕ್ಕವು. ಈ ವಿಕಾರಗಳೆಲ್ಲವೂ ದೇಹಧರ್ಮಗಳೇ ಆಗಿದ್ದರೂ, ಮೂಢರು ಅಜ್ಞಾನದಿಂದ ಆವುಗಳನ್ನು ಕೇವಲ ಜ್ಞಾನಾನಂದಸ್ವರೂಪನಾದ ಆತ್ಮನಲ್ಲಿ ಆರೋಪಿಸಿ ಹೇಳುವರು. ಮನಸ್ಸಿನ ಮೂಲಕವಾದ ಆ ಕರ್ಮಸಂಬಂಧವು ನೀಗುವವರೆಗೂ ಆ ಅಜ್ಞಾನವೂ ಬಿಟ್ಟುಹೋಗಲಾರದು. ಆದುದರಿಂದ, ದುಃಖಹೇತುವಾದ ಸಂಸಾರಕ್ಕಾಗಲೀ, ಆನಂದರೂಪವಾದ ಮೋಕ್ಷಕ್ಕಾಗಲೀ, ದೇವಾದಿಜನ್ಮಗಳನ್ನು ಪಡೆಯುವುದಕ್ಕಾಗಲೀ, ಹೀನಜನ್ಮಕ್ಕಾಗಲೀ, ಆ ಮನಸ್ಸೇ ಮೊದಲನೆಯ ಕಾರಣವೆಂದು ಹಿರಿಯರು ನಿರ್ಣಯಿಸಿರುವರು. ಮನಸ್ಸು ಸತ್ವಾದಿಗುಣಗಳೊಡನೆ ಸಂಬಂಧಿಸಿ, ಆ ಗುಣಕ್ಕೆ ತಕ್ಕ ಕಾರ್ಯಗಳಲ್ಲಿ ಪ್ರವರ್ತಿಸುತ್ತಿದ್ದರೆ, ಅದೇ ದುಃಖಕಾರಣವಾದ ಸಂಸಾರಕ್ಕೆ ಮೂಲವಾಗುವುದು. ಆ ಮನಸ್ಸೇ ಗುಣಸಂಬಂಧವಿಲ್ಲದೆಯೂ, ನಿರ್ವ್ಯಾಪಾರವಾಗಿಯೂ ಇದ್ದರೆ ಮಹಾನಂದರೂಪವಾದ ಮೋಕ್ಷಕ್ಕೆ ಕಾರಣವಾಗುವುದು. ಅಗ್ನಿಯು ಎಣ್ಣೆಬತ್ತಿಗಳನ್ನು ಹಿಡಿದು ಉರಿಯುವಾಗ, ಅದರ ಜ್ವಾಲೆಯು ಹೊಗೆಯೊಡನೆ ಕೂಡಿಯೇ ಇರುವಂತೆ, ಮನಸ್ಸು ಸತ್ವಾದಿಗುಣಗಳೊಡನೆ ಕಲೆತು, ಅದರ

ಮೂಲಕವಾಗಿ ಪುಣ್ಯಪಾಪಕರ್ಮಗಳಲ್ಲಿ ತೊಳಲುವುದರಿಂದ ರಾಗದ್ವೇಷಾದಿಗಳನ್ನೇ ಹೊಂದುವುದು. ಗುಣಗಳ ಸಂಪರ್ಕವಿಲ್ಲದೆ ನಿರ್ವ್ಯಾಪಾರವಾಗಿರುವಾಗ, ಸಹಜವಾದ ಶುದ್ಧಸತ್ವರೂಪವನ್ನು ಹೊಂದುವುದು. ಮನಸ್ಸಿಗೆ ಹನ್ನೊಂದು ಬಗೆಯ ವ್ಯಾಪಾರಗಳುಂಟು. ಅವುಗಳಲ್ಲಿ ಕರ್ಮೇಂದ್ರಿಯಗಳಿಂದ ಕ್ರಿಯಾರೂಪವಾಗಿ ಉಂಟಾಗತಕ್ಕವುಗಳೈದು! ಜ್ಞಾನೇಂದ್ರಿಯಗಳಿಂದ ಜ್ಞಾನರೂಪವಾಗಿ ಉಂಟಾಗತಕ್ಕವುಗಳೈದು! ಮತ್ತೊಂದು ಅಹಂಕಾರ ಮಮಕಾರಾದಿ ರೂಪವಾಗಿರುವುದು! ಶಬ್ದ, ರೂಪ, ರಸ, ಗಂಧ, ಸ್ಪರ್ಶಗಳೆಂಬಿವೈದೂ ಜ್ಞಾನೇಂದ್ರಿಯಗಳ ಮೂಲಕವಾಗಿಯೂ ಮಲಪಿಸರ್ಜನೆ, ಸಂಭೋಗ, ಸಂಚಾರ, ಶ್ರಮೆ, ಲಸ, ಚಾಯಿನಮತು. ಇವೈದೂ ಕರ್ಮೇಂದ್ರಿಯಗಳ ಮೂಲಕವಾಗಿಯೂ ಮನೋವ್ಯಾಪಾರಕ್ಕೆ ವಿಷಯವಾಗುವುವು. ಶರೀರವನ್ನು ತನ್ನದೆಂದು ನೆನೆಸತಕ್ಕ ಮಮಕಾರವೆಂಬುದು ಮನಸ್ಸಿನಲ್ಲಿ ಸಾಕ್ಷಾತ್ತಾಗಿ ಉಂಟಾಗತಕ್ಕ ವ್ಯಾಪಾರವು. ದೇಹವನ್ನೇ ಆತ್ಮವೆಂದು ನೆನಸತಕ್ಕ ಅಹಂಕಾರವೆಂಬುದು ಮನಸ್ಸಿನ ಹನ್ನೆರಡನೆಯ ವ್ಯಾಪಾರವೆಂದೂ ಇವು ಮನಸ್ಸಿನಲ್ಲಿ ಸಾಕ್ಷಾತ್ತಾಗಿಯೇ ಉಂಟಾಗತಕ್ಕದೆಂದೂ ಕೆಲವರು ಹೇಳುವರು. ಮನಸ್ಸಿನಿಂದ ನಡೆಯತಕ್ಕ ಈ ಹನ್ನೊಂದು ವ್ಯಾಪಾರಗಳೇ, ಪೃಥಿವಿ ಮೊದಲಾದ ಪಂಚಭೂತಗಳಿಂದಲೂ, ಅವುಗಳ ಸ್ವಭಾವಗಳಿಂದಲೂ, ಜನ್ಮಾಂತರ ವಸನೆಯಿಂದಲೂ, ಪುಣ್ಯಪಾಪಕರ್ಮಗಳಿಂದಲೂ, ಕಾಲದಿಂದಲೂ, ಬೇರೆಬೇರೆ ನೇಕ ವಿಧವನ್ನು ಹೊಂದಿ, ಸಹಜವಾಗಿಯೂ ಲಕ್ಷ್ಯವಾಗಿಯೂ, ಕೋಟಿಯೂಗೆರೆಯೂ ಜೇರ್ಪಡುವುವು. ಇವೆಲ್ಲವೂ ಕೇವಲ ಮನಸ್ಸಿನ ಕಾರ್ಯಗಳೇ ಅಲ್ಲ! ಜೀವಾತ್ಮನ ಮೂಲಕವಾಗಿ ಮನಸ್ಸಿಗುಂಟಾಗತಕ್ಕ ವ್ಯಾಪಾರಗಳೇ ಹೊರತು, ಮನಸ್ಸಂಬಂಧದಿಂದ ನೇರವಾಗಿ ಜೀವಸಿಗುಂಟಾಗತಕ್ಕವುಗಳೂ ಅಲ್ಲ. ಜೀವಾತ್ಮನ ಸಂಬಂಧವೊಂದೇ ಇದ್ದಮಾತ್ರಕ್ಕೂ ಮನಸ್ಸಿಗೆ ಈ ವ್ಯಾಪಾರಗಳುಂಟಾಗಲಾರವು. ಕರ್ಮಸಂಬಂಧವೆಂಬುದು ಇವಕ್ಕೆ ಮೂಲಕಾರಣವು. ಕರ್ಮಗಳನ್ನು ನಡೆಸುತ್ತಲೂ, ಅವುಗಳ ಫಲವನ್ನನುಭವಿಸುತ್ತಲೂ ಇರುವ ಜೀವರೊಡನೆ ಸಂಬಂಧವಿದ್ದಾಗ, ಮನಸ್ಸಿಗೆ ಪ್ರಕೃತಿಯ ಮೂಲಕವಾಗಿ ಸಂಭವಿಸತಕ್ಕ ಈ ವ್ಯಾಪಾರಗಳು ಪ್ರವಾಹದಂತೆ ನಿತ್ಯವಾಗಿ ನಡೆಯುತ್ತಲೇ ಇರುವುವು. ಆದರೆ ಒಮ್ಮೊಮ್ಮೆ (ಎಂದರೆ ಎಚ್ಚರದಲ್ಲಿದ್ದಾಗ) ಜಿನ್ನಾಗಿ ಹೊರಕ್ಕೆಕಾಣುತ್ತ, ಒಮ್ಮೊಮ್ಮೆ (ಎಂದರೆ ನಿದ್ರಾವಸ್ಥೆಯಲ್ಲಿ) ಮರೆಗೊಂಡಿರುವುವು. ಈ ಮನೋವ್ಯಾಪಾರಗಳೆಲ್ಲವನ್ನೂ ಪರಮಾತ್ಮನು ತಾನು ಶುದ್ಧನಾಗಿಯೇ ನೋಡುತ್ತಿರುವನು. ಆತನು ಶರೀರಸ್ವರೂಪವನ್ನು ಯಥಾವತ್ತಾಗಿ ತಿಳಿದವನು. ಪ್ರಕೃತಿ ಪುರುಷರಿಬ್ಬರಲ್ಲಿಯೂ ಒಳಹೊಕ್ಕು ಅವು

ಗಳನ್ನು ಧರಿಸಿ ನಿಯಮಿಸತಕ್ಕವನು. ಅವನೇ ಜಗತ್ತಿಗೆಲ್ಲಾ ಅಧಿಕಾರಣನು. ಪರಮಪುರುಷನು. ಸ್ವಯಂಪ್ರಕಾಶವುಳ್ಳವನು. ಜೀವಾತ್ಮನಿಗೂ ಈ ಸ್ವಯಂಪ್ರಕಾಶವೆ ಬ ಗುಣವು ಸಹಜವಾಗಿದ್ದರೂ, ಅದು ಪರಮಾತ್ಮನ ನಿತ್ಯಸಂಕಲ್ಪದಿಂದಲೇ ಇವನಿಗೆ ಏರ್ಪಟ್ಟಿರುವದು. ಪರಮಾತ್ಮನಿಗಾದರೋ ಆ ಗುಣ ಸಹಜವೆಂದುದೇ ಹೊರತು ಬೇರೊಬ್ಬನ ಸಂಕಲ್ಪದಿಂದಾದುದಲ್ಲ ಮತ್ತು ಆ ಪರಮಾತ್ಮನು ಜನ್ಮಾದಿಗಳಿಲ್ಲದವನು, ಬ್ರಹ್ಮಾದಿಗಳಿಗೂ ನಿಯಾಮಕನು. ನಾರಾಯಣನೆಂದೂ, ಭಗವಂತನೆಂದೂ, ವಾಸುದೇವನೆಂದೂ ಹೇಳ್ವದುವ ಆಖ್ಯಾಧಾರಣನಾಮಗಳೆಲ್ಲವೂ ಅವನೊಬ್ಬನಿಗೇ ಸಲ್ಲುವವು. ಆತನು ತನ್ನ ಅಶಬ್ದಶಕ್ತಿಯಿಂದ ಜೀವನಲ್ಲಿ ಒಳಹೊಕ್ಕು ಸೂರೆಸಿಕೊಂಡಿರುವರು. ಮಾಯೆಯು ಚರಾಚರಾತ್ಮಕವಾದ ಸಮಸ್ತ ಭೂತಗಳಲ್ಲಿಯೂ ಒಳಹೊಕ್ಕು, ಅವುಗಳನ್ನು ಬದಲೆಸುವಂತೆ, ಭಗವಂತನೂ ಸಮಸ್ತ ಪ್ರಪಂಚದಲ್ಲಿಯೂ ಒಳಹೊಕ್ಕು, ಪ್ರೇರಿಸಿ, ಅವುಗಳಿಂದ ಕೆಲಸಮಾಡಿಸುತ್ತಿರುವನು. ರಾಜೇಂದ್ರಾ! ಅಹಂಕಾರ ಮಮಕಾರರೂಪವಾದ ಈ ಮಾಯೆಯನ್ನು ಜ್ಞಾನೋದಯದಿಂದ ನೀಗಿಸಿ, ದೇಹಾದಿಗಳಲ್ಲಿ ಅಭಿಮಾನವನ್ನು ತೊರೆದು, ಪಂಚೇಂದ್ರಿಯಗಳೊಡಗೂಡಿದ ಮನಸ್ಸೆಂಬ ಆರುವರಿಂದ ಒಳಶತ್ರುಗಳನ್ನೂ ಜಯಿಸಿ, ಪರಮಾತ್ಮಸ್ವರೂಪವನ್ನು ತಿಳಿಯುವುದಕ್ಕೆ ಪ್ರಯತ್ನಿಸುವುದೇ ನಮಗೆ ಮೊದಲನೆಯ ಕಾರ್ಯವು. ಅದನ್ನು ತಿಳಿಯುವವರೆಗೂ ಜೀವನು ಸಂಸಾರಚಕ್ರದಲ್ಲಿ ಸುತ್ತುತ್ತಲೇ ಇರಬೇಕಾಗುವುದು. ಸಂಸಾರತಾಪಕ್ಕೂ ಮೋಕ್ಷಕ್ಕೂ ಕಾರಣವಾದ ಮನಸ್ಸನ್ನು ಮುಮುಕ್ಷುವೂ, ಅದರಿಂದುಂಟಾಗುವ ಶೋಕಮೋಹಾದಿಗಳೂ ನೀಗುವವರೆಗೆ ಜೀವನು ಪರಮಾತ್ಮತತ್ವವನ್ನು ತಿಳಿಯುವುದಕ್ಕೆ ಸಮರ್ಥನಾಗಲಾರನು. ಆದುದರಿಂದ ಮನಸ್ಸೇ ಜೀವನಿಗೆ ಸಹಜಶತ್ರುವಾಗಿರುವುದು. ಅದನ್ನ ಹಿಡಿಸದೆ ಉದಾಸೀನವಾಡಿದರೂ, ಅದರ ವೈಕ್ಯವು ಮೇಲೆಮೇಲೆ ಹೆಚ್ಚುತ್ತ ಬರುವುದು. ಅದು ಜೀವನಿಗೆ ಅಪ್ರಿಯವನ್ನೇ ಮಾಡುವ ಸ್ವಭಾವವುಳ್ಳದಾದುದರಿಂದ, ಅತ್ಯವಸ್ಸನ್ನು ಕೆಡಿಸಿಬಿಡುವುದು. ಆದುದರಿಂದ ರಾಜೇಂದ್ರಾ! ನೀನೂ, ಅಂತಃಕರಣಸ್ವರೂಪಿಯಾದ ಭಗವಂತನ ಪಾದಾಶ್ರಯವೆಂಬ ಶಸ್ತ್ರದಿಂದ ವಧಿಸುವವನಾಗು" ಎಂದನು. ಇಲ್ಲಿಗೆ ಹನ್ನೊಂದನೆಯ ಅಧ್ಯಾಯವು.

---

ಭರತನು ರಹೂಗಣನಿಗೆ ಆತ್ಮಸ್ವರೂಪವನ್ನು ತಿಳಿಸಿದುದು.

ಆ ಬ್ರಾಹ್ಮಣೋತ್ತಮನ ಉಪದೇಶವನ್ನು ಕೇಳಿ ರಹೂಗಣನು, ಅತ್ಯಾನಂದ ಭರಿತನಾಗಿ "ಓ ಮಹಾತ್ಮಾ! ಇದೋ! ನಿನಗೆ ಬಾರಿಬಾರಿಗೂ ನಮಸ್ಕಾರವು! ಲೋಕಕ್ಷೇಮವನ್ನೇ ಕಾರಣವಾಗಿಟ್ಟುಕೊಂಡು ಈ ಶರೀರವನ್ನೆತ್ತಿರುವ ನಿನಗೆ ನಮಸ್ಕಾರವು! ಆತ್ಮಜ್ಞಾನದಿಂದ ಯಾವ ಪ್ರಾಣಿಯಲ್ಲಿಯೂ ವೈರಬುದ್ಧಿಯಿಲ್ಲದೆ, ಸಮಸ್ತಭೂತಗಳನ್ನೂ ಸಮವಾಗಿ ಭಾವಿಸತಕ್ಕ ನಿನಗೆ ನಮಸ್ಕಾರವು! ಈ ಸಮ ಬುದ್ಧಿಯಿರುವುದರಿಂದಲೇ ಅಪರಾಧಿಯಾದ ನನ್ನಲ್ಲಿಯೂ ನೀನು ಕರುಣೆಯನ್ನು ತೋರಿಸುತ್ತಿರುವೆ! ಒಳಗೊಳಗೆ ಪರಮಾತ್ಮನನ್ನು ಸಾಕ್ಷಾತ್ಕರಿಸಿ, ಆ ಆನಂದದಲ್ಲಿರತಕ್ಕವನಾದರೂ ನೀನು ಬ್ರಾಹ್ಮಣಾಧಮನಂತೆ ಹಾಸ್ಯಾಸ್ಪದವಾದ ಈ ಅವಧೂತ ವೇಷದಿಂದ ನಿನ್ನ ಮಹಾಮಹಿಮೆಯನ್ನು ಹೊರಕ್ಕೆ ಕಾಣಿಸದಿರುವೆ! ಇಂತಹ ನಿನಗೆ ನಮಸ್ಕಾರವು! ಸ್ವಾಮಿ! ರೋಗಪೀಡಿತನಾದವನಿಗೆ ಮಹೌಷಧದಂತೆಯೂ, ಬಿಸಿಲಿನ ಬೇಗೆಯಿಂದ ಬೆಂದವನಿಗೆ ಹಿಮಜಲದಂತೆಯೂ, ದೇಹಾಭಿಮಾನವೆಂಬ ವಿಷಸರ್ಪದಿಂದ ಕಚ್ಚಲ್ಪಟ್ಟ ವಿವೇಕಹೀನನಾದ ನನಗೆ, ನಿನ್ನ ಹಿತೋಪದೇಶವು ಅಮೃತಮಯವಾದ ಔಷಧದಂತಿರುವದು. ಆದುದರಿಂದನನ್ನ ಸಂದೇಹಪರಿಹಾರಾರ್ಥವಾಗಿ ನಿನ್ನಲ್ಲಿ ಅನೇಕಪ್ರಶ್ನೆಗಳನ್ನು ಕೇಳಿತಿಳಿಯಬೇಕಾಗಿರುವದು! ಆವುಗಳನ್ನು ಮುಂದೆ ಕೇಳುವೆನು. ಆದರೆ ಇದುವರೆಗೆ ನೀನು ಹೇಳಿದ ಮಾತುಗಳೆಲ್ಲವೂ ವಿಶೇಷವಾಗಿ ಅಧ್ಯಾತ್ಮತತ್ವವನ್ನೊಳಕೊಂಡಿರುವುದರಿಂದ, ಅದರ ಅರ್ಥವನ್ನು ನಾನು ಸ್ಪಷ್ಟವಾಗಿ ತಿಳಿಯಲಾರಜೆ, ಹೋದೆನು. ಅದನ್ನು ತಿರುಗಿ ನಿನ್ನ ಬಾಯಿಂದಲೇ ಚೆನ್ನಾಗಿ ಕೇಳಿ ತಿಳಿಯಬೇಕೆಂಬ ಕುತೂಹಲವು ನನಗೆ ಬಹಳವಾಗಿರುವುದು. ಓ ಯೋಗೀಶ್ವರಾ! ಕಾರ್ಯಗಳನ್ನು ನಡೆಸುವಾಗ ಬೆವರು ಮುಂತಾದ ಶ್ರಮಚಿಹ್ನಗಳನ್ನು ನಾವು ಪ್ರತ್ಯಕ್ಷವಾಗಿ ಕಾಣುತ್ತಿರುವೆವು. "ನೀನು ಬಹಳ ಶ್ರಮಪಟ್ಟಿರುವೆ! ನಾನು ಶ್ರಮಪಟ್ಟೆನು" ಎಂದು ಲೋಕರೂಢಿಯಾಗಿ ವ್ಯವಹಾರದಲ್ಲಿಯೂ ಕಾಣುತ್ತಿರುವುದರಿಂದ, ಈ ಅರ್ಥವು ಮತ್ತಷ್ಟು ದೃಢಪಡುವುದು. ಈ ವಿಧವಾದ ವ್ಯವಹಾರಗಳು ಜಂಗಮಜೀವಗಳಲ್ಲಿ ಕಾಣುವುವೇ ಹೊರತು ಸ್ಥಾವರಗಳಲ್ಲಿ ಕಾಣುವುದಿಲ್ಲ. ಹೀಗಿರುವಾಗಲೂ ನೀನುಬಳಲಿಕೆಬೆವರು ಮುಂತಾದುವು ಆತ್ಮನಿಗಿಲ್ಲವೆಂದೂ ಹೇಳುವೆಯಲ್ಲವೇ? ಆದರ ತತ್ವವನ್ನು ಚೆನ್ನಾಗಿ ತಿಳಿಯಬೇಕೆಂಬ ಆಸೆಯು ನನ್ನನ್ನು ಬಹಳವಾಗಿ ಬಾಧಿಸುತ್ತಿರುವುದು. ಅದನ್ನು ಮೊದಲು ನೀನು ತಿಳಿಸಬೇಕು" ಎಂದನು. ಅದಕ್ಕಾ ಭರತನು, "ರಾಜೇಂದ್ರಾ ಕೇಳು! ಸ್ಥಾವರಗಳಾದರೇನು? ಜಂಗಮಗಳಾದರೇನು? ಅವೆಲ್ಲವೂ ಪಂಚಭೂತಗಳಿಂದ ಹುಟ್ಟಿದ

ವಿಕಾರವೇ ಹೊರತು ಬೇರೆಯಲ್ಲ. ಅವುಗಳಲ್ಲಿ ಜೀವಾತ್ಮನ ಕರ್ಮವಿಶೇಷದಿಂದ ಕೆಲವು ಶರೀರಗಳು ಸಂಚಾರಶಕ್ತಿಯುಳ್ಳವುಗಳಾಗಿ ಪ್ರಾಣಿಗಳೆನಿಸಿಕೊಳ್ಳುವುವು. ಈ ನಿನ್ನ ಪಲ್ಲಕ್ಕಿಯನ್ನು ಹೊತ್ತಿರತಕ್ಕ ಶರೀರಗಳೂ ಅಂತವೆಂದೇ ತಿಳಿ! ಈ ಸಂಸಾರಶಕ್ತಿಯಿಲ್ಲದ ಕಲ್ಲು ಮಣ್ಣು ಮುಂತಾದುವು ಅಚರಗಳೆನಿಸಿಕೊಳ್ಳುವುವು. ಹೀಗೆ ಜೀವನ ಕರ್ಮವಿಶೇಷದಿಂದಲೇ ಚರಾಚರತ್ವವೂ ಏರ್ಪಡುವುದು. ಇದೋ! ಇಲ್ಲಿ ನೋಡು! ಮೊದಲು ಕಾಲುಗಳು! ಅದರಮೇಲೆ ಕಣಕಾಲುಗಳು! ಅವುಗಳ ಮೇಲೆ ಮೊಳಕಾಲುಗಳು! ಅವುಗಳಮೇಲೆ ತೊಡೆ! ತೊಡೆಯಮೇಲೆ ನಡು! ಅದರ ಮೇಲೆ ಎದೆ! ಅದಕ್ಕೆ ಮೇಲೆ ಹೆಗಲು! ಅದರಮೇಲೆ ಈ ಮರದ ಪಲ್ಲಕ್ಕಿ! ಆ ಪಲ್ಲಕ್ಕಿಯಮೇಲೆ ಸೌವೀರದೇಶಕ್ಕೆ ಅರಸನೆಂದು ಕರೆಯಲ್ಪಡುವಒಂದಾನೊಂದು ಶರೀರವು ಕಾಣುತ್ತಿರುವುದಷ್ಟೇ? ಹೀಗೆ ಕಾಲಿನಿಂದ ಹಿಡಿದು, ಹೆಗಲಿನವರೆಗಿರುವ ಒಂದೇ ಬಗೆಯ ಮಾಂಸಪಿಂಡಗಳಿಗೆ, ಬೇರೆಬೇರೆ ಹೆಸರುಗಳು ಏರ್ಪಟ್ಟಿರುವಂತೆ, ಪಲ್ಲಕ್ಕಿಯ ಮೇಲಿರುವ ಒಂದುಮಾಂಸದಮುದ್ದಿಗೂ ರಾಜನೆಂಬ ವ್ಯವಹಾರವು ಬಂದಿರುವುದು. ನೀನು ಆಮಾಂಸದ ಮುದ್ದೆಯನ್ನೇ ತಾನೆಂದು ಭ್ರಮಿಸಿ "ನಾನುಸಿಂಧು ಸೌವೀರ ದೇಶಗಳಿಗೆ ರಾಜ" ನೆಂದು ಮದಾಂಧನಾಗಿ, ನಿನ್ನ ಆತ್ಮದಲ್ಲಿ ರಾಜತ್ವವನ್ನಾರೋಪಿಸಿಕೊಂಡಿರುವೆ. ಸೌವೀರರಾಜನೆಂದು ವ್ಯವಹರಿಸಲ್ಪಡುವ ಮಾಂಸಪಿಂಡಕ್ಕೂ ನಿನಗೂ, ಸ್ವರೂಪಸ್ವಭಾವಗಳಲ್ಲಿ ಎಷ್ಟೋಭೇದವುಂಟು. ಅದನ್ನರಿಯದೆ ನೀನು ನಿನ್ನ ಶರೀರವನ್ನೇ ನಾನೆಂದು ತಿಳಿದಿರುವೆ. ಈ ದೇಹಾಭಿಮಾನದಿಂದಲೇ ಈ ಪಲ್ಲಕ್ಕಿಯನ್ನು ಹೊತ್ತಿರುವ ಈ ಬಡಜನರನ್ನೂ ಬಲತ್ಕಾರದಿಂದ ಬಿಟ್ಟಿಕೆಲಸಕ್ಕೆ ಹಿಡಿದು, ದಯಾಶೂನ್ಯನಾಗಿ ವರ್ತಿಸುತ್ತಿರುವೆ! ಮತ್ತು "ನಾನೇ ಜನಗಳನ್ನು ಕಾಪಾಡುತ್ತಿರುವೆ" ನೆಂಬ ಅಹಂಕಾರದಿಂದಲೂ ಮೆರೆಯುತ್ತಿರುವೆ! ಅದರಿಂದ ನೀನು ದೇಹಾತ್ಮವಿವೇಕವುಳ್ಳ ಮಹಾತ್ಮರ ಸಭೆಗೆ ಯೋಗ್ಯನಲ್ಲ. ನಿನಗೆ "ನಾನು ರಾಜ" ನೆಂಬ ಬುದ್ಧಿಯು ಹುಟ್ಟಿದಿದ್ದ ಪಕ್ಷದಲ್ಲಿ, ಪ್ರಜೆಗಳನ್ನು ಕಾಪಾಡತಕ್ಕವನೆಂಬ ಬುದ್ಧಿಯು ಹುಟ್ಟರಲಾರದು. ತಾನು ರಾಜನೆಂದೂ ತಾನು ಕರ್ತವ್ಯವೆಂದೂ ತಿಳಿಯುವುದೆಲ್ಲವೂ, ಆತ್ಮಸ್ವರೂಪವನ್ನು ತಿಳಿಯದೆ ಭ್ರಾಂತಿಯಿಂದ ಹೇಳತಕ್ಕ ಮಾತೇಹೊರತು ನಿಜವಲ್ಲ! ಜಂಗಮ ಸ್ಥಾವರರೂಪಗಳಾದ ಇಂತಹ ದೇಹಗಳೆಲ್ಲವೂ ಭೂಮಿಯಲ್ಲಿಯೇ ಹುಟ್ಟಿ ಅದರಲ್ಲಿಯೇ ಲಯಹೊಂದುವುದನ್ನು ನಾವು ಕಣ್ಣಾರೆ ನೋಡುತ್ತಿರುವೆವು. ಆತ್ಮವು ನಿತ್ಯವಸ್ತುವಾಗಿ ವಿಕಾರವಿಲ್ಲದಿರುವುದು. ಆ ಆತ್ಮನಲ್ಲಿ ತಾನು ರಾಜನೆಂದೂ, ಮತ್ತೊಬ್ಬನು ಭೃತ್ಯನೆಂದೂ, ಒಬ್ಬನು ಸಣ್ಣವನೆಂದೂ, ಇನ್ನೊಬ್ಬನು ಸ್ಥೂಲನೆಂದೂ ಹೇಳುವುದಕ್ಕೆ ಬುದ್ಧಿಮೋಹವಲ್ಲದೆ ಬೇರೆಕಾರಣವಿಲ್ಲ.

ಈ ವ್ಯವಹಾರವು ಲೋಕಸಮಾನವಾಗಿದ್ದರೂ ಹಾಗೆ ಹೇಳತಕ್ಕವರೆಲ್ಲರೂ ಆತ್ಮ ತತ್ವವನ್ನು ತಿಳಿಯದೆ ಅಜ್ಞಾನಿಗಳೆಂದೇ ತಿಳಿಯಬೇಕು. ಜ್ಞಾನಿಗಳು ಎಂದಿಗೂ ಹೀಗೆ ಹೇಳಲಾರರು. ಕಾರ್ಯರೂಪವಾಗಿ ಕಾಣುವ ಅನಿತ್ಯವಸ್ತುಗಳೆಲ್ಲಕ್ಕೂ ಲಯ ಸ್ಥಾನವಾದ ಈ ಭೂಮಿಯೂ ಅನಿತ್ಯವಾದುದೇ ಹೊರತು ಶಾಶ್ವತವಲ್ಲ. ಏಕೆಂದರೆ, ಇದೂ ಭೂತಸೂಕ್ಷ್ಮಗಳ ಸಮೂಹದಿಂದುಂಟಾಗಿರುವಂಥದು. ಆ ಭೂತಸೂಕ್ಷ್ಮ ಗಳೂ ಸರ್ವೇಶ್ವರಸಂಕಲ್ಪದಿಂದ ಪ್ರಕೃತಿಮೂಲಕವಾಗಿ ಹುಟ್ಟಿರುವವು. ಆದುದರಿಂದ ಭೂಮಿಯೊಂದಲ್ಲದೆ, ಕಾರ್ಯರೂಪವಾಗಿ ಅನಿತ್ಯವೆನಿಸಿಕೊಳ್ಳುವವು. ಹೀಗೆಯೇ ಸಣ್ಣದೆಂದೂ ದೊಡ್ಡದೆಂದೂ, ಸಜೀವವೆಂದೂ, ನಿರ್ಜೀವವೆಂದೂ, ಬೇರೆ ಬೇರೆವಿಧದಿಂದ ಕರೆಯಲ್ಪಡುವ ಚರಾಚರಪ್ರಪಂಚವೆಲ್ಲವೂ ಆತ್ಮಕ್ಕಿಂತಲೂ ಬೇರೆಯಾಗಿರುವುದು. ಪ್ರಾಣಿಶರೀರಗಳೆಲ್ಲವೂ, ಪಂಚಭೂತಗಳಿಂದಲೂ, ಅವುಗಳ ಪರಿಣಾಮಸ್ವಭಾವಗಳಿಂದಲೂ, ಅಂತಃಕರಣದಿಂದಲೂ, ಕರ್ಮವಾಸನೆ, ಕಾಲ, ಮುಂತಾದುವುಗಳಿಂದಲೂ ಏರ್ಪಟ್ಟಿರುವುವು. ಇವೆಲ್ಲವೂ ಪ್ರಕೃತಿಯಿಂದುಂಟಾದ ವಿಕಾರಗಳಾಗಿರುವುದರಿಂದ ಆತ್ಮಕ್ಕೂ, ಇದಕ್ಕೂ ಏನೇನೂ ಸಂಬಂಧವಿಲ್ಲ. ಈ ವಿಷಯವನ್ನು ನೀನು ಸೂಕ್ಷ್ಮಬುದ್ಧಿಯಿಂದ ಚೆನ್ನಾಗಿ ವಿಚಾರಿಸಿ ತಿಳಿಯಬೇಕು ರಾಜೇಂದ್ರಾ! ಈ ಶರೀರಕ್ಕಿಂತಲೂ ಭಿನ್ನವಾದ ಆತ್ಮಸ್ವರೂಪವು ಎಂತಹದೆಂಬುದನ್ನು ತಿಳಿಸುವೆನು ಕೇಳು. ಆತ್ಮವು ಕೇವಲ ಜ್ಞಾನಸ್ವರೂಪವಾಗಿರುವುದು. ನೈಜಸ್ಥಿತಿಯಲ್ಲಿ ಆತ್ಮನಿಗೆ ಕರ್ಮಸಂಬಂಧವಿಲ್ಲವಾದುದರಿಂದ ಶುದ್ಧವೆನಿಸಿಕೊಂಡಿರುವುದು. ಅದು ಕೇವಲಪುರುಷಾರ್ಥಸ್ವರೂಪವಾಗಿರುವುದು. ಕೇವಲ ಜ್ಞಾನಸ್ವರೂಪವಾಗಿರುವುದರಿಂದ ಎಲ್ಲೆಲ್ಲಿಯೂ ನಿರಾಕಾರವಾಗಿರುವುದು. ಅದಕ್ಕೆ ಹೊರಗೆಂದೂ, ಒಳಗೆಂದೂ ಸ್ಥಲಭೇದವಿಲ್ಲ! ಜ್ಞಾನವೆಂಬ ಗುಣದಿಂದ ಎಲ್ಲೆಲ್ಲಿಯೂ ವ್ಯಾಪಿಸಿ, ಸತ್ಯವೆನಿಸಿಕೊಂಡಿರುವುದು. ತನಗೆ ತಾನೇ ಪ್ರಕಾಶಿಸಬಲ್ಲದು. ಅದಕ್ಕೆ ಹಸಿವು, ಬಾಯಾರಿಕೆ, ದುಃಖ, ಮೋಹ, ಜರೆ, ಮರಣಗಳೆಂಬ ಷಡೂರ್ಮಿಗಳೂ ಇಲ್ಲವು. ಭಗವಂತನೆಂದೂ ವಾಸುದೇವನೆಂದೂ ಹೇಳಲ್ಪಡುವ ಪರಮಾತ್ಮನಿಗೆ, ಆ ಆತ್ಮವು ಸರ್ವವಿಧದಿಂದಲೂ ಅಧೀನವಾದುದರಿಂದ, ಮಹಾತ್ಮರು ಅದನ್ನೇ ವಾಸುದೇವಾತ್ಮಕವೆಂದು ಹೇಳುವರು. ಓ ರಹೂಗಣಾ! ಆ ಆತ್ಮನ ನಿಜಸ್ಥಿತಿಯನ್ನು ತಿಳಿಯತಕ್ಕ ಜ್ಞಾನವು ಭಗವದ್ಭಕ್ತರ ಪಾದಧೂಳಿಯನ್ನು ಸೇವಿಸುವುದರಿಂದಲೇ ಉಂಟಾಗಬೇಕೇಹೊರತು, ಬೇರೆ ತಪಸ್ಸಿನಿಂದಾಗಲೀ, ಉಪವಾಸಾದಿವ್ರತಗಳಿಂದಾಗಲೀ, ಯಜ್ಞಯಾಗಾದಿಕರ್ಮಗಳಿಂದಾಗಲೀ, ದಾನಧರ್ಮಗಳಿಂದಾಗಲೀ, ಗೃಹಸ್ಥಧರ್ಮದಿಂದಾಗಲೀ, ವೇದಾಧ್ಯಯನ

ದಿಂದಾಗಲೀ, ಅಗ್ನಿ ಜಲಸೂರ್ಯೋಪಾಸನೆಗಳಿಂದಾಗಲೀ, ಲಭಿಸಲಾರದು. ಮಹಾತ್ಮರ ಸೇವೆಯಲ್ಲಿ ಅಷ್ಟೊಂದು ವಿಶೇಷವೇನೆಂದು ಕೇಳುವೆಯಾ? ಭಗವದ್ಭಕ್ತರಾದ ಮಹಾತ್ಮರು ಯಾವಾಗಲೂ, ಪುಣ್ಯಶ್ಲೋಕನಾದ ಭಗವಂತನ ಗುಣಗಳನ್ನು ಬಾಯಿಂದ ನುಡಿಯುತ್ತಿರುವರು. ಕ್ಷಣಮಾತ್ರವಾದರೂ ನಿಷ್ಕಥೆಗಳಲ್ಲಿ ಕಾಲವನ್ನು ಕಳೆಯುವವರಲ್ಲ. ಇಂಥವರ ಸೇವೆಯಾದರೆ, ಸತ್ಪಕಾಲಗಳಲ್ಲಿಯೂ ಭಗವಂತನ ಕಥೆಗಳು ಕಿವಿಗೆ ಬೀಳುತ್ತಿರುವವು. ಇದರಿಂದ ಮೋಕ್ಷವನ್ನು ಬಯಸತಕ್ಕವನ ಮನಸ್ಸು ವಾಸುದೇವನಲ್ಲಿ ನೆಲೆಗೊಳ್ಳುವುದು. ಆದುದರಿಂದ ಓ ರಾಜಾ! ಈಗ ನೀನು ಗೃಹಸ್ಥಧರ್ಮದಲ್ಲಿ ಬಿಸಿಯನ್ನು ನೀಗಿ, ಮಹಾತ್ಮರ ಸೇವೆಯನ್ನು ಮಾಡು ಶ್ರದ್ಧಾಪೂರ್ವಕವಾಗಿ. ಆಗ ನಿನಗೆ ಆತ್ಮಜ್ಞಾನವುಂಟಾಗುವುದು. ಇನ್ನು ನನಗೆ ನನ್ನ ಪೂರ್ವವೃತ್ತಾಂತವನ್ನು ತಿಳಿಸುವೆನು ಕೇಳು. ನಾನು ಪೂರ್ವಜನ್ಮದಲ್ಲಿ ಭರತನೆಂಬ ರಾಜನಾಗಿದ್ದೆನು. ಆ ರಾಜಪದವಿಯಲ್ಲಿಯೂ ನಾನು ಇಹಲೋಕಸುಖಗಳಲ್ಲಿ ಯಾಗಲೀ, ಸ್ವರ್ಗಾದಿಸುಖಗಳಲ್ಲಿಯಾಗಲೀ, ಆಪೇಕ್ಷೆಯಿಲ್ಲದೆ, ಭಗವದಾರಾಧನದಲ್ಲಿಯೇ ಕಾಲವನ್ನು ಕಳೆಯುತ್ತಿದ್ದೆನು. ಹೀಗಿದಾಗ ನನಗೆ ಒಂದಾನೊಂದು ಜಿಂಕೆಯಲ್ಲಿ ಪ್ರೇಮವು ಹುಟ್ಟಿತು. ಮೇಲೆಮೇಲೆ ಅದಲ್ಲಿ ಮೋಹವು ಬೆಳೆಯುತ್ತ ಬಂದಿತು. ಯಾವಾಗಲೂ ಅದರ ಚಿಂತೆಯಲ್ಲಿಯೇ ಇರುತ್ತಿದ್ದೆನು. ಇದರಿಂದ ನಾನು ನಡೆಸುತ್ತಿದ್ದ ಭಗವದಾರಾಧನವೆಲ್ಲವೂ ಕ್ರಮಕ್ರಮವಾಗಿ ತಗ್ಗಿ ನನ್ನ ಮನಸ್ಸು ಆ ಜಿಂಕೆಯಲ್ಲಿಯೇ ಪ್ರವರ್ತಿಸುತ್ತಿತ್ತು. ಮರಣಕಾಲದಲ್ಲಿಯೂ ಅದನ್ನೇ ಚಿಂತಿಸುತ್ತಿದ್ದುದರಿಂದ ನಾನು ಮುಂದಿನಜನ್ಮದಲ್ಲಿ ಜಿಂಕೆಯಾಗಿ ಹುಟ್ಟಿದೆನು. ಎಲೆ ಪೀತಾಗ್ರಣೀ! ಭಗವದಾರಾಧನದ ಪ್ರಭಾವವನ್ನು ನಾನೇನೆಂದು ಹೇಳಲಿ! ನಾನು ರಾಜನಾಗಿದ್ದಾಗ ನಡೆಸಿದ ಆ ಭಗವದುಪಾಸನದ ಮಹಿಮೆಯಿಂದ ನನಗೆ ಆ ಮೃಗಜನ್ಮದಲ್ಲಿಯೂ ಹಿಂದಿನ ಜನ್ಮದ ಸ್ಮರಣೆಯು ತಪ್ಪಿಹೋಗಲಿಲ್ಲ. ಆ ಜಿಂಕೆಯ ಜನ್ಮವು ಬಿಟ್ಟುಹೋದಮೇಲೆ ನಾನು ಈ ಬ್ರಾಹ್ಮಣಜನ್ಮದಲ್ಲಿ ಹುಟ್ಟಿದೆನು. ಈಗಲೂ ನನಗೆ ಹಿಂದಿನ ಜನ್ಮದ ಸ್ಥಿತಿಯೆಲ್ಲವೂ ನೆನಪಿನಲ್ಲಿರುವುದು. ಇದಕೂ ನಾನು ಮೊದಲನೆಯ ಜನ್ಮದಲ್ಲಿ ನಡೆಸಿದ ಭಗವದಾರಾಧನವೇ ಕಾರಣವು. ಆದರಿಂದ ಈಗ ನಾನು, ಇತರಜನಗಳೊಡನೆ ಸಹವಾಸಮಾಡಿದರೆ ಯಾವ ಕೇಡುಂಟಾಗುವುದೋ ಎಂದು ಹೆದರಿ, ಸಮಸ್ತ ಸಂಗಗಳನ್ನೂ ಬಿಟ್ಟು ನಿಂತಲ್ಲಿ ನಿಲ್ಲದೆ, ಮನೆಗಳೊಳಗೆ ಪ್ರವೇಶಿಸದೆ, ಭೂಸಂಚಾರದಿಂದಲೇ ಕಾಲವನ್ನು ಕಳೆಯುತ್ತಿರುವೆನು. ರಾಜೇಂದ್ರಾ! ದುಸ್ಸಹನಾಶವೆಂಬುದೇ ಜೀವನನ್ನು ಸಂಸಾರದಲ್ಲಿ ಕಟ್ಟಿಡುವುದು. ಆದುದರಿಂದ ಮೋಕ್ಷಾಪೇಕ್ಷೆಯುಳ್ಳವನು, ಸರ್ವಸಂಗಪರಿತ್ಯಾಗಮಾಡಿದ ಹಿರಿಯರ

ಸಹವಾಸವನ್ನು ಮಾಡುತ್ತ, ಅದರಿಂದುಂಟಾದ ಜ್ಞಾನವೆಂಬ ಶಸ್ತ್ರದಿಂದ, ದೇಹದಲ್ಲಿಯೂ ಅದಕ್ಕೆ ಸೇರಿದ ಪರಿವಾರಗಳಲ್ಲಿಯೂ, ಹೊಲ, ಮನೆ ಮುಂತಾದುವುಗಳಲ್ಲಿಯೂ, ಉಂಟಾಗುವ ಮೋಹವೆಂಬ ವೃಕ್ಷವನ್ನು ನಿರ್ಮೂಲವಾಗಿ ಛೇದಿಸಬೇಕು. ಭಗವತ್ಕಥೆಗಳನ್ನು ಹೇಳುವುದರಿಂದಲೂ, ಕೇಳುವುದರಿಂದಲೂ, ಭಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು ಓ ರಹೂಗಣಾ! ನೀನೂ ಈ ಮಾರ್ಗವನ್ನೇ ಅನುಸರಿಸುತ್ತಿದ್ದರೆ, ಸಂಸಾರವೆಂಬ ಕಾಡಿಗೆ ಎಲ್ಲೆಯಂತಿರುವ ಆ ಭಗವಂತನ ಪಾದಮೂಲವನ್ನು ಸೇರಬಹುದು." ಇದು ಹನ್ನೆರಡನೆಯ ಅಧ್ಯಾಯವು.

---

## * ಜಡಭರತನು ರಹೂಗಣನಿಗೆ ಸಂಸಾರದಲ್ಲಿರುವ ಕ್ಲೇಶಗಳನ್ನು ವಿವರಿಸಿದುದು.

ರಾಜೇಂದ್ರಾ! ಕೇಳು! ಪ್ರಕೃತಿಯೆಂಬುದೇ ಜೀವನನ್ನು ಕರ್ಮಮಾರ್ಗದಲ್ಲಿ ತಳ್ಳುವುದು. ಈ ಪ್ರಕೃತಿಯಲ್ಲಿ ಪ್ರವೇಶಿಸಿ, ಸತ್ವರಜಸ್ತಮಸ್ಸುಗಳೆಂಬ ಗುಣಭೇದಕ್ಕೆ ತಕ್ಕಂತೆ ಆಯಾ ಕರ್ಮಗಳಲ್ಲಿಯೇ ಕಣ್ಣಿಟ್ಟಿರುವ ಜೀವನು, ಆ ದಾರಿಯನ್ನು ದಾಟಬರಬೇಕಾದರೆ, ಭಗವದನುಗ್ರಹವೊಂದುಹೊರತು ಬೇರೆ ಉಪಾಯವಿಲ್ಲ. ವರ್ತಕನು ಹಣವನ್ನು ಸಂಪಾದಿಸುವುದಕ್ಕಾಗಿ ಕಾಡುಗುಡ್ಡಗಳೆಲ್ಲವನ್ನೂ ಸುತ್ತಿ ಬಳಲುವಂತೆ, ಜೀವನೂ ಧರ್ಮಾರ್ಥ ಕಾಮಗಳೆಂಬ ಪುರುಷಾರ್ಥಗಳನ್ನು ಸಂಪಾದಿಸಬೇಕೆಂಬ ಆತುರದಿಂದ, ಸಂಸಾರವೆಂಬ ಮಹಾರಣ್ಯದಲ್ಲಿ ಸುತ್ತಿಸುತ್ತಿ ಸಾಯುತ್ತಿರುವನು. ಅದರಲ್ಲಿ ಸ್ವಲ್ಪಮಾತ್ರವೂ ಸುಖವನ್ನು ಕಾಣಲಾರನು. ವರ್ತಕನು ತನ್ನಲ್ಲಿದ್ದ ಅಲ್ಪಸ್ವಲ್ಪ ಧನವನ್ನು ಸೇರಿಸಿಕೊಂಡು ಹೆಚ್ಚು ಹಣವನ್ನು ಸಂಪಾದಿಸುವ ಆಸೆಯಿಂದ ಕಾಡುಗುಡ್ಡಗಳನ್ನು ಸುತ್ತುವಾಗ, ಕಳ್ಳರ ಕೈಗೆ ಸಿಕ್ಕಿ, ಮೊದಲಿದ್ದ ಧನವನ್ನೂ ಕಳೆದುಕೊಳ್ಳುವಂತೆ, ಜೀವನೂಕೂಡ, ಜನ್ಮಾಂತರಗಳನ್ನು ಹೊಂದಿ, ಸಂಸಾರವೆಂಬ ಘೋರಾಟವಿಯಲ್ಲಿ ಸುತ್ತುವಾಗ, ಇಂದ್ರಿಯಗಳೆಂಬ ಆರುಮಂದಿ ಒಳಗಳ್ಳರು ಹೊಂಚುಹಾಕುತ್ತಿದ್ದು, ಇವನ ಅಲ್ಪಸ್ವಲ್ಪ ಪುಣ್ಯಕರ್ಮ

---

* ಈ ಅಧ್ಯಾಯದಲ್ಲಿ ಸಂಸಾರವು ಅರಣ್ಯರೂಪವಾಗಿ ಅನ್ಯಾಪದೇಶದಿಂದ ವರ್ಣಿಸಲ್ಪಡುವುದು. ಇವುಗಳ ಹೋಲಿಕೆಯು ಮುಂದಿನ ಅಧ್ಯಾಯದಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ.

ಗಳನ್ನೂ ಸುಲಿಯುವರು ರಾಜೇಂದ್ರಾ! ಸಂಸಾರವೆಂಬ ಘೋರಾಟವಿಯಲ್ಲಿ, ನರಿಮುಂತಾದ ಅನೇಕಕಾಡುಮೃಗಗಳುಂಟು. ಅವು ಕುರಿಯ ಮರಿಯನ್ನು ತೋಳ ಗಳು ಹೇಗೋಹಾಗೆ ಈ ಕಾಡಿನಲ್ಲಿ ಸಿಕ್ಕಿಬಿದ್ದವನನ್ನು ಸುತ್ತಿಮುತ್ತಿ ಕಿತ್ತು ತಿನ್ನು ವುವು. ಮತ್ತು ಈ ಕಾಡುದಾರಿಯಲ್ಲಿ ಬಳ್ಳಿಗಳೂ, ಪೊದೆಗಳೂ ಬಹಳವಾಗಿ ಬೆಳೆ ಯುತ್ತಲೇ ಇರುವುದರಿಂದ, ಅದರಲ್ಲಿ ಸೇರಿಕೊಂಡಿರುವ ಕಾಡುನೊಣ, ಸೊಳ್ಳೆ ಮುಂತಾದ ವಿಷಕ್ರಿಮಿಗಳು ಕಚ್ಚಿ ಕೊಲ್ಲುವುದಕ್ಕಾಗಿ ಬೆನ್ನಟ್ಟಿ ಬರುವುವು. ಈ ಕಾಡುದಾರಿಯಲ್ಲಿ ಪ್ರಯಾಣಮಾಡುವವನು, ಅಲ್ಲಲ್ಲಿ ಕಾಣುವ ಗಂಧರ್ವನಗರದ ವಿಚಿತ್ರಾಕಾರವನ್ನು ನೋಡಿ, ಅದನ್ನು ನಿತ್ಯವೆಂದೇ ಭ್ರಮಿಸಿ ಮರುಳಾಗುವನು. ಇದರಲ್ಲಿ ಅಲ್ಲಲ್ಲಿ ಕೊಳ್ಳೆಯ ಪಿಶಾಚಿಗಳು ಸುತ್ತುತ್ತಿರುವುವು. ಆ ದಾರಿಯಲ್ಲಿ ಹೋಗುವವನು, ಆ ಪಿಶಾಚಿಗಳ ಕೈಕೊಳ್ಳೆಯನ್ನು ಕಿತ್ತುಕೊಳ್ಳುವುದಕ್ಕೆ ಹೋಗಿ ಅಪಾಯಕ್ಕೆ ಗುರಿಯಾಗುವನು. ಅಲ್ಲಲ್ಲಿ ಕಾಣುವ ಬಿಸಿಲ್ಕೊರೆಯನ್ನು ನೀರೆಂದು ಭ್ರಮಿಸಿ, ಅದನ್ನು ಕುಡಿಯುವುದಕ್ಕಾಗಿ ಬೆಂಗಾಡಿನಲ್ಲಿ ಸುತ್ತಿಸುತ್ತಿ ಸಾಯುವನು. ಆಗಾಗ ಈ ಕಾಡಿನಲ್ಲಿ ಸುಳಿಗಾಳಿಯಿಂದ ಮೇಲೆದ್ದ ಧೂಳು ಕಣ್ಣಿಗೆ ಕವಿಯುವದ ರಿಂದ ಕುರುಡನಂತೆ ದಿಕ್ಕು ಕಾಣದೆ ಕಳವಳಿಸುವನು. ಅಲ್ಲಲ್ಲಿ ಮರೆಯಾಗಿ ಕೂಗುತ್ತಿ ರುವ ಜೀರುಂಡೆಗಳ ಧ್ವನಿಯಿಂದ ಕಿವಿಯ ಬೇನೆಯನ್ನು ಹೊಂದಿ ಕಷ್ಟಪಡುವನು! ಅಲ್ಲಲ್ಲಿ ಗೂಬೆಗಳ ಧ್ವನಿಯನ್ನು ಕೇಳಿ ಭಯಪಡುವನು! ಅಲ್ಲಲ್ಲಿ ಹಸಿವಿನಿಂದ ಪೀಡಿತ ನಾಗಿ, ನಡೆಯಲಾರದೆ ವಿಷವೃಕ್ಷಗಳನ್ನು ನಂಬಿ ಸಿಲ್ಲುವನು. ಕೆಲವು ಕಡೆಗಳಲ್ಲಿ ದಾಹದಿಂದ ಪೀಡಿತನಾಗಿ,ಬಿಸಿಲ್ಕೊರೆಯನ್ನೇ ಕಣ್ಣೀರೆಂದು ಭ್ರಮಿಸಿ ಅದಕ್ಕಿದಿರಾಗಿ ಓಡುವನು. ನೀರನ್ನು ಹುಡುಕುವಾಗ ಕೆಲವು ಕಡೆಗಳಲ್ಲಿ ನೀರಿಲ್ಲದ ಹಳ್ಳಗಳನ್ನು ನೋಡಿ, ಆ ಹಳ್ಳಕೊಳ್ಳಗಳಲ್ಲಿ ಬಿದ್ದು ಸಂಕಟಪಡುವನು. ಒಂದೊಂದು ಸಂದರ್ಭ ಗಳಲ್ಲಿ ತನಗೆ ಆಹಾರವು ಸಿಕ್ಕದಿದ್ದಾಗ ಮತ್ತೊಬ್ಬರ ಧನವನ್ನು ಕಳುವುದಕ್ಕೆ ಯತ್ನಿಸುವನು. ಆಗಾಗ ಕಾಡುಗಿಚ್ಚಿಗೆ ಸಿಕ್ಕಿ ಬೇಯುವನು. ಆಗಾಗ ಕ್ರೂರರಾದ ಯಕ್ಷರ ಕೈಗೆ ಸಿಕ್ಕಿ ಪ್ರಾಣಾಪಾಯಕ್ಕೆ ಗುರಿಯಾಗುವನು! ಒಮ್ಮೊಮ್ಮೆ ಕ್ರೂರ ರಾದ ರಾಜಭಟರ ಕೈಗೆ ಸಿಕ್ಕಿ, ತನ್ನ ಸರ್ವಸ್ವವನ್ನೂ ಕಳೆದುಕೊಂಡು ದುಃಖಿಸು ವನು. ಆ ದುಃಖದಿಂದಲೂ, ಮೋಹದಿಂದಲೂ ಆಗಾಗ ಮೂರ್ಛೆಬೀಳುವನು. ಒಮ್ಮೊಮ್ಮೆ ಗಂಧರ್ವನಗರದಂತೆ ಕಾಣುವ ಭೋಗವಸ್ತುಗಳನ್ನು ನೋಡಿ ಮೂಹೂರ್ತಕಾಲದವರೆಗೆ ಆದರಿಂದ ಸಂತೋಷಪಡುತ್ತಿರುವನು. ಒಮ್ಮೊಮ್ಮೆ ಮೀರಲಸಾಧ್ಯವಾದ ಬೆಟ್ಟವನ್ನೇರುವುದಕ್ಕೆ ಯತ್ನಿಸಿ, ಕಲ್ಲುಮುಳ್ಳುಗಳನ್ನು ತುಳಿದು, ಅದರನೋವನ್ನು ತಡೆಯಲಾರದೆ ತತ್ತಳಿಸುವನು. ಹಸಿವಿನಿಂದಕೂಗಿ

ಕೊಳ್ಳುತ್ತಿರುವ ತನ್ನ ಹೆಂಡಿರು ಮಕ್ಕಳೆಂಬ ಪರಿವಾರಗಳಿಗೆ ಅನ್ನವನ್ನಿಡಲಾರದೆ ಅವರಮೇಲೆ ಕೋಪಿಸಿಕೊಳ್ಳುವನು. ಒಮ್ಮೊಮ್ಮೆ ಬೆಟ್ಟದಹಾವಿನ ಬಾಯಿಗೆ ಸಿಕ್ಕಿ, ದಿಕ್ಕುತಿಳಿಯದೆ ಸಂಕಟಪಡುವನು. ಆಗಾಗ ವಿಷಸರ್ಪಗಳಿಂದ ಕಚ್ಚಲ್ಪಟ್ಟು ಮೂರ್ಛಿತನಾಗಿ ಹೆಣದಂತೆ ದಾರಿಯಲ್ಲಿ ಬಿದ್ದಿರುವನು. ಅಲ್ಲಲ್ಲಿ ಹಾಳುಬಾವಿಗಳಲ್ಲಿ ಜಾರಿಬಿದ್ದು ಕುರುಡನಂತೆ ಹಿಂದುಮುಂದು ಕಾಣದೆ ಮರುಗುವನು. ಒಮ್ಮೊಮ್ಮೆ ಜೇನಿನ ಆಸೆಗಾಗಿ ಅದರ ಗೂಡನ್ನು ಕಿತ್ತು, ಆ ಜೇನು ಹುಳುಗಳ ಬಾಧೆಗೆ ಸಿಕ್ಕಿ, ಆ ರಸವನ್ನೂ ಸಂಪಾದಿಸಲಾರದೆ ಕಷ್ಟಪಟ್ಟು ಹಂತಿರುಗುವನು. ಒಂದುವೇಳೆ ಬಹಳಶ್ರಮಪಟ್ಟು ಆ ಗೂಡನ್ನು ಕಿತ್ತು ಜೇನನ್ನು ತಂದರೂ, ಬೇರೆಯವರು ಇವನನ್ನು ವಂಚಿಸಿ ಅದನ್ನು ಕಿತ್ತುಕೊಂಡು ಹೋಗುವರು. ಅವರನ್ನೂ ವಂಚಿಸಿ ಬೇರೊಬ್ಬರು ಅದನ್ನು ಕಿತ್ತುಕೊಂಡು ಹೋಗುವರು. ಮತ್ತು ಈ ಕಾಡುದಾರಿಯಲ್ಲಿ ತಿರುಗತಕ್ಕ ಮನುಷ್ಯನು, ಮಳೆಗಾಳಿಬಿಸಿಲುಗಳ ಬಾಧೆಯನ್ನು ತಡೆಯಲಾರದೆ, ಅದಕ್ಕೆ ತಕ್ಕ ಪ್ರತೀಕಾರವನ್ನೂ ಮಾಡಲಾರದೆ, ಕಷ್ಟದಲ್ಲಿಯೇ ನರಳುವನು. ಆಗಾಗ ಹಣದಾಸೆಯಿಂದ ಇತರರೊಡನೆ ವ್ಯಾಪಾರವನ್ನಾರಂಭಿಸಿ, ಅವರನ್ನು ವಂಚಿಸುವುದಕ್ಕೆ ಯತ್ನಿಸಿ, ಅವರೊಡನೆ ದ್ವೇಷವನ್ನು ಸಂಪಾದಿಸಿಕೊಳ್ಳುವನು. ಒಮ್ಮೊಮ್ಮೆ ತನ್ನ ಕೈಯಲ್ಲಿದ್ದ ಹಣವೆಲ್ಲವೂ ವೆಚ್ಚವಾದಮೇಲೆ, ನಿಲ್ಲುವುದಕ್ಕೆ ನೆಳಲಿಲ್ಲದೆ ನುಲಗುವುದಕ್ಕೆ ಹಾಸಿಗೆಯಿಲ್ಲದೆ, ಮತ್ತೊಬ್ಬರಲ್ಲಿ ಯಾಚಿಸುವುದಕ್ಕೆ ತೊಡಗುವನು. ಈ ಯಾಚನೆಯಿಂದಲೂ ತನಗೆ ಬೇಕಾದವಸ್ತುವನ್ನು ಪಡೆಯಲಾರದೆ, ಪರಸ್ತ್ರೀಗೆ ಆಸೆಪಟ್ಟು ಅದರಿಂದ ಅವಮಾನವನ್ನು ಹೊಂದುವನು. ಹಣಕ್ಕಾಗಿ ಒಬ್ಬರನ್ನೊಬ್ಬರು ವಂಚಿಸತೊಡಗುವುದರಿಂದ, ಪರಸ್ಪರದ್ವೇಷವು ಹೆಚ್ಚಿ ಕಲಹವನ್ನಾರಂಭಿಸಬೇಕಾಗುವುದು! ರಾಜೇಂದ್ರಾ! ಈ ಕಾಡುದಾರಿಯು ಅನೇಕ ಕಷ್ಟಗಳಿಗೆ ನೆಲೆಯಾಗಿರುವುದರಿಂದ ಇದನ್ನು ಯಾರಿಂದಲೂ ಸುಲಭವಾಗಿ ದಾಟುವುದಕ್ಕೆ ಸಾಧ್ಯವಿಲ್ಲ. ತಾನು ಗಳಿಸಿಟ್ಟ ಹಣವೆಲ್ಲವನ್ನೂ ಕಳೆದುಕೊಂಡು ಅನೇಕ ಜನಗಳ ದ್ವೇಷಕ್ಕೆ ಪಾತ್ರನಾಗಿ, ಬದುಕಿದ್ದರೂ ಹೆಣದಂತೆ ನಿಸ್ಸಾರನಾಗಿ ಕಷ್ಟಪಡುವನು. ಬಂಧುವರ್ಗಗಳಲ್ಲಿ ತಂದೆ ತಾಯಿ ಮುಂತಾಗಿ, ಹಿಂದೆ ಸತ್ತವರನ್ನು ಬಿಟ್ಟು ಮುಂದೆ ಹುಟ್ಟುವ ಮಕ್ಕಳು ಮುಂತಾದವರಲ್ಲಿ ಮಮತೆಯನ್ನಿಟ್ಟು, ಅವರನ್ನೆತ್ತಿ ಮುದ್ದಾಡುತ್ತ, ಈ ದಾರಿಯಲ್ಲಿಯೇ, ಸುತ್ತಿಸುತ್ತಿ ತೊಳಲುತ್ತಿರುವನೇ ಹೊರತು, ಈ ಅರಣ್ಯಮಾರ್ಗವನ್ನು ದಾಟಿ ಹೋಗುವ ಉಪಾಯದಲ್ಲಿ ಯಾವನೂ ದೃಷ್ಟಿಯಿಡಲಾರನು. ಶೂರರಾಗಿಯೂ ದಿಗ್ಜಯಗಳನ್ನು ಜಯಿಸತಕ್ಕ ಬಾಹುಬಲವುಳ್ಳವರಾಗಿಯೂ ಇರುವ ರಾಜರೆಲ್ಲರೂ ಈ ಭೂಮಿಯನ್ನು "ನನ್ನದು ತನ್ನ" ದೆಂಬ

ಅಭಿಮಾನದಿಂದ ಅದಕ್ಕಾಗಿ ಒಬ್ಬರಮೇಲೊಬ್ಬರು ವೈರವನ್ನು ಬೆಳೆಸಿ, ಹೊಡೆದಾಡಿ, ಕೊನೆಗೆ ಯುದ್ಧದಲ್ಲಿ ಮಡಿದರೇಹೊರತು, ಪ್ರಾಣಹಿಂಸೆಯನ್ನೂ, ವೈರವನ್ನೂ ತೊರೆದ ಯೋಗಿಗಳು ಹೊಂದತಕ್ಕ ಶಾಶ್ವತಸ್ಥಾನವನ್ನು ಯಾರೂ ಹೊಂದಲಿಲ್ಲ! ರಾಜೇಂದ್ರಾ! ಪ್ರಾಪಂಚಿಕವಾದಸಂಸಾರದಲ್ಲಿರುವ ವೈಚಿತ್ರ್ಯವನ್ನು ಎಷ್ಟೆಷ್ಟು ಹೇಳಿದರೂ ತೀರದು! ಈ ದುರ್ಗಮವಾದ ದಾರಿಯಲ್ಲಿ ಸಂಚರಿಸತಕ್ಕ ಜೀವನು, ಅಲ್ಲಲ್ಲಿ ಅಂದವಾದ ಬಳ್ಳಿಗಳನ್ನು ಹಿಡಿದು ಜೋಲಾಡುವನು! ಅಲ್ಲಲ್ಲಿ ಕಿವಿಗಿಂಪಾಗಿ ಕೂಗುವ ಹಕ್ಕಿಗಳ ಕಲಕಲಧ್ವನಿಯನ್ನು ಕೇಳಿ ಹಿಗ್ಗುವನು! ಅಲ್ಲಲ್ಲಿ ಭಯಂಕರವಾದ ಸಿಂಹದ ಗುಹೆಯನ್ನು ನೋಡಿ ಹೆದರಿ, ನದಿಗಳೂ, ಹಳ್ಳಗಳೂ, ಬಕಗಳೂ ಸೇರತಕ್ಕ ಗುಹೆಗಳಲ್ಲಿ ಸೇರಿ, ಆ ಕ್ಷುದ್ರಮೃಗಗಳೊಡನೆಯೇ ಸ್ನೇಹವನ್ನು ಬೆಳೆಸುವನು. ಕೊನೆಗೆ ಅವುಗಳಿಂದಲೇ ವಂಚಿಸಲ್ಪಟ್ಟು ತಾನೂ ಅವುಗಳನ್ನು ವಂಚಿಸಿ ಹಂಸಗಳ ಗುಂಪಿನಲ್ಲಿ ಸೇರುವನು. ಆ ಹಂಸಗಳನಡತೆಯು ತನಗೆ ರುಚಿಸದೆ ಹೋದಾಗ, ಕಪಿಗಳ ಗುಂಪುಗಳನ್ನು ಸೇರುವನು. ಆ ಕಪಿಗಳ ಗುಂಪಿನಲ್ಲಿಯೇ ಆಡುತ್ತಿದ್ದು ತನ್ನ ದುರಾಸೆಯನ್ನು ತೀರಿಸುತ್ತಾ, ಈ ಸಹವಾಸಸುಖದಲ್ಲಿ ತನ್ನ ಮರಣಕಾಲವನ್ನೇ ಮರೆತುಬಿಡುವನು! ಏಕಸುಖಗಳಿಗೆ ನೆಲೆಯಾದ ಗೃಹಸ್ಥಾಶ್ರಮದಲ್ಲಿ ಬಿಸಿಪಟ್ಟು ಸ್ತ್ರೀಮೋಹದಿಂದ ಕಳವಳಿಸುತ್ತ, ಆ ಪುತ್ರಕಳತ್ರಾದಿಪರಿವಾರಗಳಲ್ಲಿರುವ ವಾತ್ಸಲ್ಯದಿಂದ ಯಾವಾಗಲೂ ಕುದಿಯುತ್ತಿರುವನು. ಸಂಸಾರವೆಂಬ ಈ ಬಲೆಯಲ್ಲಿ ಸಿಕ್ಕಿ ಅದನ್ನು ಬಿಡಿಸಿಕೊಳ್ಳುವುದಕ್ಕೆ ದಾರಿಯನ್ನು ಕಾಣದೆ ತತ್ತರಿಸುವನು. ಮತ್ತು ಈ ಕಾಡುದಾರಿಯಲ್ಲಿ ಹೋಗತಕ್ಕ ಮನುಷ್ಯನು, ಆಗಾಗ ಎಚ್ಚರತಪ್ಪಿ ಪರ್ವತಗುಹೆಗಳಲ್ಲಿ ಪ್ರವೇಶಿಸಿಬಿಡುವನು. ಅಲ್ಲಿದ್ದ ಕಾಡಾನೆಗೆ ಹೆದರಿ, ಯಾವುದಾದರೂ ಒಂದು ಕಾಡುಬಳ್ಳಿಯನ್ನು ಹಿಡಿದು ಜೋತಾಡಿಯಾಗಿ ನಿಲ್ಲುವನು. ಹೇಗೋ ಕಷ್ಟದಿಂದ ಆ ವಿಪತ್ತಿನಿಂದ ತಪ್ಪಿಬಂದರೂ, ತಿರುಗಿ ತನ್ನ ಗುಂಪಿನವರೊಡನೆ ಕಲೆತು, ತನ್ನನ್ನು ಸುಖಿಯೆಂದು ಭಾವಿಸುವನು. ಮೊದಲಿನಂತೆಯೇ ಆ ಸಂಸಾರವೆಂಬ ಅರಣ್ಯದಲ್ಲಿ ಭಗವಂತನ ಮಾಯೆಯಿಂದ ಕಟ್ಟಲ್ಪಟ್ಟವನಾಗಿ, ಅದರಿಂದ ತಪ್ಪಿಸಿಕೊಳ್ಳಲಾರದಂತಿರುವನು. ಆದುದರಿಂದ ಓ ರಹೂಗಣಾ! ನೀನೂ ಈಗ ಪ್ರಾಣಿಗಳನ್ನು ದಂಡಿಸುವೆನೆಂಬ ಅಧಿಕಾರಮದವನ್ನು ಬಿಟ್ಟು, ಸಮಸ್ತ ಭೂತಗಳಲ್ಲಿಯೂ ಸ್ನೇಹವುಳ್ಳವನಾಗಿ, ಶಬ್ದಾದಿವಿಷಯಗಳಲ್ಲಿ ಮನಸ್ಸಿಡದೆ, ನಿನ್ನ ವರ್ಣಾಶ್ರಮಧರ್ಮಗಳಿಂದ ಭಗವಂತನನ್ನಾರಾಧಿಸು! ಅದರಿಂದುಂಟಾದ ಆತ್ಮಜ್ಞಾನವೆಂಬ ಶಸ್ತ್ರದಿಂದ, ಪ್ರಕೃತಿಸಂಬಂಧವೆಂಬ ವೃಕ್ಷವನ್ನು ಕತ್ತರಿಸಿ, ಆ ಅರಣ್ಯಮಾರ್ಗವನ್ನು ದಾಟುವವನಾಗು!

ಅದರಿಂದಾಚೆಗೆ ನೀನು ವಿಷ್ಣುಸ್ಥಾನವನ್ನು ಹೊಂದಬಹುದು" ಎಂದನು. ಇದನ್ನು ಕೇಳಿ ರಹೂಗಣನು, "ಓ ಮಹಾತ್ಮಾ! ಎಲ್ಲಾ ಜನ್ಮಗಳಿಗಿಂಲೂ ಈ ಮನುಷ್ಯ ಜನ್ಮವೇ ಬಹಳ ಮೇಲಾದುದೆಂದು ಭಾವಿಸುವೆನು. ಪರಲೋಕದಲ್ಲಿ ದೇವತೆಗಳಾಗಿ ಹುಟ್ಟಿಯೂ ಫಲವಿಲ್ಲ! ದೇವಾದಿಜನ್ಮಗಳನ್ನು ಪಡೆದವರಿಗೆ ಭಗವದ್ಭಕ್ತಿಯಿಂದ ಶುದ್ಧಮನಸ್ಸುಳ್ಳ ನಿಮ್ಮಂತರ ಮಹಾತ್ಮರ ಸಹವಾಸವು ದುರ್ಲಭವಲ್ಲವೇ? ನಿಮ್ಮಂತವರಪಾದಧೂಳಿಯಿಂದ ಪಾಪಗಳನ್ನು ನೀಗಿದ ಮನುಷ್ಯರಿಗೆ, ಭಗವಂತನಲ್ಲಿ ಭಕ್ತಿಯುಂಟಾಗುವುದೇನೂ ಆಶ್ಚರ್ಯವಿಲ್ಲ! ನಿಮ್ಮೊಡನೆ ಒಂದು ಮುಹೂರ್ತಕಾಲದವರೆಗೆ ಸಹವಾಸಮಾಡಿದುದರಿಂದಲ್ಲವೇ, ಈಗ ನನ್ನ ಮನಸ್ಸಿನಲ್ಲಿ ಕುಯುಕ್ತಿಗಳಿಂದುಂಟಾಗಿದ್ದ ಅವಿವೇಕಗಳೆಲ್ಲವೂ ನೀಗಿದುವು! ಓ ಮಹಾತ್ಮಾ! ನಿಮ್ಮಂತಹ ಜ್ಞಾನಿಗಳು ಲೋಕದಲ್ಲಿ ಯಾವಯಾವ ರೀತಿಯಿಂದ ತಮ್ಮ ಮಹಿಮೆಯನ್ನು ಮರೆಸಿಕೊಂಡು ಸಂಚರಿಸುತ್ತಿರುವರೋ, ಅದನ್ನು ತಿಳಿಯವುದು ನಮ್ಮಂತಹ ಮೂಢರಿಗೆ ಸಾಧ್ಯವಲ್ಲ! ಆದುದರಿಂದ ಮೊತ್ತಕ್ಕೆ ಒಂದೇ ಮಾತಿನಿಂದ ಅವರೆಲ್ಲರಿಗೂ ನಮಸ್ಕರಿಸುವೆನು. ನಿಮ್ಮಂತೆ ತಮ್ಮ ದಿವ್ಯತೇಜಸ್ಸನ್ನು ಮರೆಸಿಕೊಂಡಿರತಕ್ಕವರು ಪ್ರಾಯದವರಾಗಲೀ, ವಟುಗಳಾಗಲೀ, ಮುದುಕರಾಗಿರಲೀ, ಎಳೆಮಕ್ಕಳಾಗಿರಲೀ, ಅವರೆಲ್ಲರಿಗೂ ಇದೋ ನಮಸ್ಕಾರವು! ನಿಮ್ಮಂತೆಯೇ ಅವಧೂತವೇಷದಿಂದ ಭೂಮಿಯಲ್ಲಿ ತಿರುಗುತ್ತಿರುವ ಸಮಸ್ತ ಬ್ರಾಹ್ಮಣರಿಗೂ ಇದೋ ನಮಸ್ಕಾರವು. ನಿಮ್ಮಂತಹ ಬ್ರಾಹ್ಮಣರಿಂದ ನಮ್ಮ ಕ್ಷತ್ರಿಯಕುಲಕ್ಕೆ ಸರ್ವವಿಧದಲ್ಲಿಯೂ ಕ್ಷೇಮವುಂಟಾಗಲಿ" ಎಂದನು. ಎಲೈ ಪರೀಕ್ಷಿದ್ರಾಜನೇ! ಎಣೆಯಿಲ್ಲದ ಮಹಿಮೆಯುಳ್ಳವನಾಗಿಯೂ, ಬ್ರಹ್ಮರ್ಷಿಪುತ್ರನಾಗಿಯೂ ಇರುವ ಆ ಭರತನು, ತನ್ನನ್ನು ತಿರಸ್ಕರಿಸಿದ ರಹೂಗಣನಲ್ಲಿಯೂ ದಯಾರ್ದ್ರಹೃದಯನಾಗಿ. ಆತನಿಗೆ ಆತ್ಮತತ್ವವನ್ನು ಪದೇಶಿಸಿ, ಅವನಲ್ಲಿ ಸ್ನೇಹವನ್ನೇ ತೋರಿಸುತ್ತಿದ್ದು, ಆ ರಾಜನಿಂದ ಸತ್ಕೃತನಾಗಿ, ಆಸ್ಥಳವನ್ನು ಬಿಟ್ಟು ಹೊರಟನು. ಆ ಬ್ರಾಹ್ಮಣನು ಇಂದ್ರಿಯಗಳನ್ನೂ, ಹಸಿವು ಬಾಯಾರಿಕೆ ಮುಂತಾದ ಷಡೂರ್ಮಿಗಳನ್ನೂ ಅಂತಃಕರಣವನ್ನೂ ಜಯಿಸಿದವನಾದುದರಿಂದ, ಜಲಪೂರ್ಣವಾದ ಮಹಾಸಮುದ್ರದಂತೆ ನಿಶ್ಚಲನಾಗಿ ಭೂಮಿಯನ್ನು ಸುತ್ತುತ್ತಿದ್ದನು. ಇತ್ತಲಾಗಿ ರಹೂಗಣನೂಕೂಡ, ಜಡಭರತನಿಂದ ಅಧ್ಯಾತ್ಮತತ್ವವನ್ನು ಪದೇಶಹೊಂದಿದೊಡನೆ, ಆ ಜ್ಞಾನದಿಂದುಂಟಾದ ದೇಹಾತ್ಮಾಭಿಮಾನವನ್ನು ನಿಶ್ಶೇಷವಾಗಿ ತ್ಯಜಿಸಿದನು. ಓ ಪರೀಕ್ಷಿದ್ರಾಜೇಂದ್ರಾ! ಭಗವದ್ಭಕ್ತರ ಮತ್ತು ಅವರನ್ನು ನಂಬಿದವರ ಪ್ರಭಾವವು ಇದೇರೀತಿಯಾಗಿರುವುದು" ಎಂದನು. ಆಗ ಪರೀಕ್ಷಿದ್ರಾಜನು, "ಎಲೈ ಮಹಾತ್ಮನೇ! ಸರ್ವಜ್ಞ

ನಾದ ನಿನ್ನಿಂದ ಸಂಸಾರದುಃಖವೆಂಬುದು ಬಹಳ ಚಮತ್ಕಾರವಾಗಿ ನಿರೂಪಿಸಲ್ಪಟ್ಟಿತು. ಆದರೆ ಅವೆಲ್ಲವನ್ನೂ ನೀನು ಒಂದು ಕಾಡಿಗೆ ಹೋಲಿಸಿ, ಪರೋಕ್ಷವಾಗಿಯೇ ಹೇಳಿದುದರಿಂದ, ಅದು ಜ್ಞಾನಿಗಳಿಗೆ ಮಾತ್ರ ಸುಲಭವಾಗಿ ತಿಳಿಯಬಹುದೇಹೊರತು, ನಮ್ಮಂತಹ ಅವ್ಯುತ್ಪನ್ನರಿಗೆ ತಿಳಿಯುವುದು ಕಷ್ಟವು. ಆದುದರಿಂದ ಅದನ್ನು ನೀನು ಪ್ರಕೃತೋಚಿತವಾದ ಶಬ್ದಗಳಿಂದಲೇ ಸ್ಪಷ್ಟವಾಗಿ ವಿವರಿಸಬೇಕು.'' ಎಂದನು. ಇದು ಹದಿಮೂರನೆಯ ಅಧ್ಯಾಯವು.

---

## ಭರತನು ಅರಣ್ಯಸಾದೃಶ್ಯದಿಂದ ಗೂಢನಾಗಿ ಹೇಳಿದ ಸಂಸಾರಕಷ್ಟಗಳನ್ನು ವ್ಯಕ್ತಪಡಿಸಿದುದು.

ರಾಜೇಂದ್ರಾ! ಹಾಗಿದ್ದರೆ ಅದನ್ನು ಸ್ಪಷ್ಟವಾಗಿಯೇ ವಿವರಿಸುವೆನು. ಕೇಳು! ಸರ್ವೇಶ್ವರನಾದ ಶ್ರೀನಾರಾಯಣನ ಅಧೀನವಾಗಿರುವ ಮಾಯೆಯೆಂಬುದು, ಪ್ರಾಣಿವರ್ಗವನ್ನು ಸಂಸಾರವೆಂಬ ಭಯಂಕರವಾದ ಕಾಡುದಾರಿಗೆ ತಂದು ಸೇರಿಸುವುದು. ದೇಹಾತ್ಮಾಭಿಮಾನವುಳ್ಳವರು ಈ ಸಂಸಾರದಲ್ಲಿ ಸೇರಿದಾಗ ಸತ್ವಗುಣದಿಂದ ಸತ್ಕರ್ಮಗಳಲ್ಲಿಯೂ, ತಮೋಗುಣದಿಂದ ದುಷ್ಕರ್ಮಗಳಲ್ಲಿಯೂ, ರಜೋಗುಣದಿಂದ ಮಿಶ್ರಕರ್ಮಗಳಲ್ಲಿಯೂ ಪ್ರವರ್ತಿಸಿ, ಆಯಾಕರ್ಮಾನುಸಾರವಾಗಿ ಉತ್ತಮ ಜನ್ಮವನ್ನೋ, ನೀಚಜನ್ಮವನ್ನೋ ಹೊಂದುತ್ತಿರುವರು. ಹೀಗೆ ದೇಹವನ್ನು ಹೊಂದಿದ್ದಾಗ ಅದು ಅದಕ್ಕುಂಟಾಗತಕ್ಕ ಬಾಲ್ಯ ಯೌವನಾದ್ಯವಸ್ಥೆಗಳಿಂದ ವಿಕಾರ ಹೊಂದುತ್ತಿರುವುದು. ಇದೇ ಸಂಸಾರವೆನಿಸುವುದು. ಇದು ಅನಾದಿಯಾಗಿ ಅನುಸರಿಸಿ ಬರುತ್ತಿರುವುದು. ಈ ಸಂಸಾರವನ್ನು ತಗುಲುಕಟ್ಟುವುದಕ್ಕೆ ಇಂದ್ರಿಯವರ್ಗಗಳೇ ದ್ವಾರವೆನಿಸಿರುವುವು. ಧನಾರ್ಜನೆಗಾಗಿ ಕಾಡುಗುಡ್ಡಗಳನ್ನು ಸುತ್ತಿತೊಳಲುವ ವರ್ತಕಸಮೂಹದಂತೆ, ಭಗವನ್ಮಾಯೆಯಿಂದ ಈ ಸಂಸಾರದಲ್ಲಿ ಕಟ್ಟಲ್ಪಟ್ಟ ಜೀವಸಮೂಹವು, ಕರ್ಮಮಾರ್ಗವೆಂಬ ದುರ್ಗಮವಾದ ಕಾಡುದಾರಿಯಲ್ಲಿಯೇ ಸುತ್ತುತ್ತಿರುವುದು. ಇದರಲ್ಲಿ ಸಿಕ್ಕಿದ ಜೀವನು ಹಿಂದಿನಕರ್ಮಫಲಗಳನ್ನನುಭವಿಸುತ್ತಿರುವಾಗಲೇ ತಿರುಗಿ ನಿಷ್ಫಲಗಳಾಗಿಯೂ ವಿಘ್ನಪ್ರಚುರವಾಗಿಯೂ ಇರುವ ವ್ಯಾಪಾರಗಳನ್ನೇ ಮೇಲೆಮೇಲೆ ನಡೆಸುತ್ತಿರುವನು. ಶ್ಮಶಾನದಂತೆ ಅನುಮಂಗಳಸ್ವರೂಪವಾದ ಈ ಸಂಸಾರವೆಂಬ ಘೋರಾರಣ್ಯದಲ್ಲಿ ಸುತ್ತಿ ಸಂಕಟ

ಪಡುತ್ತಿರುವಾಗಲೂ, ಸಂತಾಪನಿವಾರಕವಾಗಿಯೂ, ಭಕ್ತೋತ್ತಮರಿಂದ ಅನುಸರಿಸಲ್ಪಡುತಕ್ಕುದಾಗಿಯೂ ಇರುವ ಭಕ್ತಿಮಾರ್ಗವನ್ನು ಕಾಣಲಾರದೆ ತಪ್ಪುದಾರಿಯಲ್ಲಿಯೇ ಹೋಗುವನು. ಈ ಕಾಡುದಾರಿಯಲ್ಲಿ ಆರುಮಂದಿಕಳ್ಳರು ಹೊಂಚುಹಾಕುತ್ತಿರುವರೆಂದು ಹೇಳಿದನಲ್ಲವೇ? ಜ್ಞಾನೇಂದ್ರಿಯಗಳೈದು, ಮತ್ತು ಮನಸ್ಸು, ಇವಾರೂ ಆರುಮಂದಿ ಕಳ್ಳರೆಂದು ತಿಳಿ! ಇವು ಹೆಸರಿಗೆಮಾತ್ರ ಇಂದ್ರಿಯ ಗಳೆನಿಸಿಕೊಂಡಿದ್ದರೂ, ಒಳಗಳ್ಳರಂತೆ ಕೆಲಸಮಾಡುತ್ತಿರುವುವು. ವರ್ತಕನು ತನ್ನ ಕಷ್ಟಾರ್ಜಿತವಾದ ಅಲ್ಪಸ್ವಲ್ಪಧನವನ್ನು ಗಂಟುಕಟ್ಟಿಕೊಂಡು, ಧರ್ಮೋಪಯೋಗಿಯಾದ ಆ ಹಣದಿಂದ ಹೆಚ್ಚುಹಣವನ್ನು ಸಂಪಾದಿಸ ಬೇಕೆಂದು ಬಯಸಿ, ಕಾಡುದಾರಿಯಲ್ಲಿ ಹೋಗುವಾಗ, ಕಳ್ಳರ ಕೈಗೆ ಸಿಕ್ಕಿ ತನ್ನಲ್ಲಿ ಮೊದಲಿದ್ದ ಹಣವನ್ನೂ ಕಳೆದುಕೊಳ್ಳುವನಲ್ಲಯೇ? ಅದರಂತೆಯೇ ಮನುಷ್ಯನು ತಾನು ಪೂರ್ವದಲ್ಲಿನಡೆಸಿದ ಭಗವದಾರಾಧನರೂಪವಾದ ಅಲ್ಪಸ್ವಲ್ಪಧರ್ಮದಿಂದ, ಉತ್ತಮಜನ್ಮವನ್ನು ಪಡೆದಿರುವಾಗಲೂ, ಅದರಲ್ಲಿ ಸಂಸಾರಸುಖಾಕಾಂಕ್ಷೆಪಟ್ಟು, ಬುದ್ಧಿಹೀನನಾಗಿ, ಇಂದ್ರಿಯಗಳನ್ನು ನಿಗ್ರಹಿಸಲಾರದೆ ಎಚ್ಚರತಪ್ಪಿ, ಕರ್ಮಮಾರ್ಗವನ್ನು ಹಿಡಿದಪಕ್ಷದಲ್ಲಿ, ಒಳಗಳ್ಳರಂತೆ ಅವನಲ್ಲಿ ಸೇರಿರುವ ಇಂದ್ರಿಯಗಳು, ದರ್ಶನ, ಸ್ಪರ್ಶನ, ಶ್ರವಣ, ಆಸ್ವಾದನ, ಆಘ್ರಾಣಗಳೆಂಬ ತಮ್ಮ ವ್ಯಾಪಾರಗಳಿಂದಲೂ, ಸಂಕಲ್ಪವ್ಯವಸಾಯಗಳೆಂಬ ಆಂತಃಕರಣವೃತ್ತಿಗಳಿಂದಲೂ ಆ ಪುರುಷನನ್ನು ಮರುಳುಗೊಳಿಸಿ, ಅವನಲ್ಲಿ ಮೊದಲಿದ್ದ ಧರ್ಮವನ್ನೂ ಅಪಹರಿಸಿಬಿಡುವುವು. ಸಂಸಾರವೆಂಬ ಅಡವಿಯಲ್ಲಿ, ಹೆಂಡಿರು, ಮಕ್ಕಳು ಮುಂತಾದ ಪರಿವಾರಗಳೇ, ನರಿ ತೋಳ ಮುಂತಾದ ಕಾಡುಮೃಗಗಳೆಂದು ತಿಳಿ! ಈ ಪರಿವಾರದವರೆಲ್ಲರೂ ಹೆಸರಿಗೆ ಮಾತ್ರ ಸಂಟರೆನಿಸುವರೇ ಹೊರತು, ಸ್ವಭಾವದಲ್ಲಿ ಕಾಡುಮೃಗಗಳಲ್ಲದೆ ಬೇರೆಯಲ್ಲ! ಮುಂದೆಯಲ್ಲಿ ಸಾಕಿದ ಮೇಕೆಯನ್ನು ಬಲಾತ್ಕಾರದಿಂದ ಹಿಡಿದು ಸಾಗಿಸುವ ತೋಳಗಳಂತೆ, ಇವರು ಸರ್ವವಿಧದಲ್ಲಿಯೂ ಭಗವಂತನಿಗೆ ಅಧೀನವಾದ ಜೀವನನ್ನು ತಮಗಧೀನಮಾಡಿಕೊಂಡು, ಸುತ್ತಿಮುತ್ತಿ ಕಿತ್ತು ತಿನ್ನುವರು. ಈ ಸಂಸಾರವೆಂಬ ಹೊಲದಲ್ಲಿ ಮೇಲೆಮೇಲೆ ಬೆಳೆಯುತ್ತಿರುವ ಕರ್ಮಗಳೇ ಕಳೆಗಳು! ವರ್ಷವರ್ಷಕ್ಕೂ ಹೊಲವನ್ನುತ್ತು ಕೃಷಿಮಾಡುತ್ತಿದ್ದರೂ, ತಿರುಗಿ ಬಿತ್ತುವಕಾಲಕ್ಕೆ ಕಳೆಗಳು ತುಂಬಿಹೋಗಿರುವವಷ್ಟೆ? ಬೇರುಸಹಿತವಾಗಿ ಸುಟ್ಟಹೊರತು, ಆ ಕಳೆಗಳುಹುಟ್ಟುವುದು ನಿಶ್ಶೇಷವಾಗಿ ತಪ್ಪಲಾರದು! ಅದರಂತೆಯೇ ಗೃಹಸ್ಥಾಶ್ರಮವು ಕರ್ಮಗಳೆಂಬ ಸೊಪ್ಪುಸದೆಗಳಿಗೆ ಉತ್ಪತ್ತಿಕ್ಷೇತ್ರವೆನಿಸಿರುವುದು. ಇದರಲ್ಲಿ ಕರ್ಮಬೀಜಗಳನ್ನು ನಿಶ್ಶೇಷವಾಗಿ ನಾಶಹೊಂದಿಸದಿದ್ದರೆ, ಕಾಲಕಾಲಕ್ಕೆ ಮೊಳೆಯುತ್ತಲೇ ಇರುವುವು. ಮತ್ತು ಗೃಹ

ಹಿಂಬುದು ಕರ್ಮಗಳನ್ನು ತುಂಬಿಟ್ಟ ಕರಡಿಗೆಯಂತಿರುವುದು. ಭರಣಿಯಲ್ಲಿಟ್ಟ ಕರ್ಪೂರವು ತೀರಿಹೋದರೂ ಕರ್ಮವಾಸನೆಯೆಂಬುದು ಅಂಟಿಬರುತ್ತಲೇ ಇರುವುದು. ಹೀಗೆ ಕರ್ಮಕ್ಷೇತ್ರದ ದಾರಿಯಲ್ಲಿ ಹೋಗತಕ್ಕವನನ್ನು, ದುರ್ಜನರೆಂಬ ಕಾಡುನೊಣಗಳೂ ಸೊಳ್ಳೆಗಳೂ ಸುತ್ತಿಮುತ್ತಿ ಬಾಧಿಸುವುವು. ಮತ್ತು ಹೊಲದಲ್ಲಿಬೆಳೆದ ಪೈರುಗಳಿಗೆ ಮಿಡಿತೆಗಳಿಂದಲೂ, ಹಕ್ಕಿಗಳಿಂದಲೂ, ಕಳ್ಳರಿಂದಲೂ, ಇಲಿಗಳಿಂದಲೂ ಆಗಾಗ ಅಪಾಯವುಂಟಾಗುವಂತೆ, ಮನುಷ್ಯನು ಬಹಳ ಕಷ್ಟಪಟ್ಟು ಸಂಪಾದಿಸಿ, ತನ್ನ ಹೊರಗಿನ ಪ್ರಾಣದಂತೆ ರಕ್ಷಿಸಿಟ್ಟಿರುವ ಹಣವು ದುರ್ಜನರ ಪಾಲಾಗುವುದು. ಈ ಸಂಸಾರವೆಂಬ ಕಾಡುದಾರಿಯಲ್ಲಿ ತೊಳಲುತ್ತಿರುವ ಮನುಷ್ಯನು ಅಹಂಕಾರ ಮಮಕಾರರೂಪವಾದ ಅವಿವೇಕದಿಂದಲೂ, ವಿಷಯಾಸಕ್ತಿಯಿಂದಲೂ, ಕರ್ಮವಾಸನೆಯಿಂದಲೂ, ಬುದ್ಧಿಗೆಟ್ಟವನಾಗಿ, ಗಂಧರ್ವನಗರದಂತೆ ಅಸ್ಥಿರವಾದ ತನ್ನ ಶರೀರಾದಿಗಳನ್ನು ನೋಡಿ, ಅವುಗಳನ್ನೇ ಸ್ಥಿರವೆಂದು ಭ್ರಮಿಸಿ, ಆಗಾಗ ತನ್ನಲ್ಲಿತಾನೇ ಸಂತೋಷಿಸುತ್ತಿರುವನು. ಮತ್ತು ಈ ದಾರಿಯಲ್ಲಿ ನಡೆಯುತ್ತಿರುವಾಗ, ಮೃಗತೃಷ್ಣೆಯಂತೆ ಸುಖಭ್ರಾಂತಿಯನ್ನು ಹುಟ್ಟಿಸತಕ್ಕ ಶಬ್ದಾದಿವಿಷಯಗಳು ಮನುಷ್ಯನ ಮನಸ್ಸನ್ನು ಮರುಳುಮಾಡುವುವು. ದಾಹಗೊಂಡವನು ಬಿಸಿಲ್ಗೊರೆಗೆ ಆಸೆಪಡುವಂತೆ, ಪಾನ, ಭೋಜನ ಮೈಥುನಗಳೇ ಮೊದಲಾದ ವ್ಯಸನಗಳಲ್ಲಿ ಅಧಿಕಾತುರವುಳ್ಳ ಜೀವನು ಸಖಾಭಾಸಗಳಾದ ಆ ವಿಷಯಗಳಾಗಿ ಆಸೆವಡುವನು. ಕಾಡುದಾರಿಯಲ್ಲಿ ಕೊಳ್ಳೆಯ ಪಿಶಾಚಿಗಳಂತೆ ಇದರಲ್ಲಿ ಸುವರ್ಣವೆಂಬುದು ಆಗಾಗ ಕಣ್ಣಿಗೆ ಗೋಚರಿಸುತ್ತಿರುವುದು. ಕತ್ತಲೆಯಲ್ಲಿ ಕಣ್ಣುಕಾಣದೆ ತತ್ತಳಿಸುವನು. ತನ್ನ ಬೆಳಕಿಗಾಗಿ ಪಿಶಾಚಿಗಳ ಕೈಕೊಳ್ಳೆಯನ್ನು ಕಿತ್ತುಕೊಳ್ಳವಂತೆ, ಈ ಸಂಸಾರಮಾರ್ಗದಲ್ಲಿ ನಡೆಯತಕ್ಕ ಮನುಷ್ಯನು, ಆ ಸುವರ್ಣಕ್ಕಾಗಿ ಆಸೆಪಟ್ಟು ಅಪಾಯಕ್ಕೆಗುರಿಯಾಗುವನು. ರಾಜೇಂದ್ರಾ! ಆ ಸುವರ್ಣವೆಂಬುದನ್ನು ಅಗ್ನಿಯ ಮೂಲವೆಂದು ಹೇಳುವರು. ಅದು ಸಮಸ್ತದೋಷಗಳಿಗೂ ನೆಲೆಯಾಗಿರುವುದು. ಆ ಬಂಗಾರದಂತೆಯೇ ಬಣ್ಣವುಳ್ಳ ರಜೋಗುಣದಿಂದ ಬುದ್ಧಿಗೆಟ್ಟವನಿಗೆ ಆದರಲ್ಲಿ ಆಸೆಹುಟ್ಟುವುದೇನೂ ಆಶ್ಚರ್ಯವಲ್ಲ. ಮತ್ತು ಈ ಸಂಸಾರವೆಂಬ ಆಡವಿಯಲ್ಲಿ ಸಂಚರಿಸತಕ್ಕವನು ಮನೆ ಮಠಗಳಲ್ಲಿಯೂ ತನ್ನದೆಂಬ ಅಭಿಮಾನವನ್ನಿಟ್ಟು, ಅದರ ರಕ್ಷಣೆಗಾಗಿ ಎಡೆಬಿಡದೆ ದುಡಿಯುತ್ತಿರುವನು. ಅರಣ್ಯದಲ್ಲಿ ಸಂಚರಿಸತಕ್ಕವನಿಗೆ ಸುಳಿಗಾಳಿಯಿಂದ ಮೇಲೆದ್ದ ಧೂಳು ಕಣ್ಣಿಗೆ ಕವಿದಾಗ ಆ ಮನುಷ್ಯನು ದಿಕ್ಕುಕಾಣಗೆ ತತ್ತಳಿಸುವನಲ್ಲವೇ? ಅದರಂತೆ ಈ ಸಂಸಾರವೆಂಬ ಅರಣ್ಯದಲ್ಲಿ ಸ್ತ್ರೀಯರೇ ಸುಳಿಗಾಳಿಯು! ಅವರು ಪುರುಷನನ್ನು ತಮ್ಮ ಲಾಲನಪಾಲನಗಳಿಂದ ಚೆನ್ನಾಗಿ ಮೇಲಕ್ಕೇರಿಸು

ವರು. ಅವರುಹುಟ್ಟಿಸತಕ್ಕ ಮೋಹರೂಪವಾದ ರಜೋಗುಣವೇ ಆ ಸುಳಿಗಾಳಿಯಿಂದೆದ್ದ ಧೂಳೆಂದು ತಿಳಿ! ಇದರಲ್ಲಿ ಸಿಕ್ಕಿ ಮೋಹಾಂಧನಾದ ಪುರುಷನು, ಕರ್ಮಸಾಕ್ಷಿಗಳಾದ ದೇವತೆಗಳನ್ನೂ ಲಕ್ಷ್ಯಮಾಡದೆ ಆ ಮಾರ್ಗಕ್ಕೆ ಹೋಗುವನು. ಶಬ್ದಾದಿ ವಿಷಯಗಳು ನಿಸ್ಸಾರವೆಂಬುದನ್ನು ಆಗಾಗ ತಾನು ತಿಳಿಯುತ್ತಿದ್ದರೂ, ಒಮ್ಮೊಮ್ಮೆ ದೇಹಾಭಿಮಾನದಿಂದ ಆತ್ಮಚಿಂತೆಯನ್ನು ಮರೆತು, ಬಾಯಾರಿದವನು ಬಿಸಿಲ್ದೊರೆಗೆ ಆಸೆಪಟ್ಟೋಡುವಂತೆ, ಆ ವಿಷಯಸುಖಗಳನ್ನೇ ಪುರುಷಾರ್ಥವೆಂದು ಭ್ರಮಿಸಿ ಅದಕ್ಕಾಗಿ ದುಡಿಯುತ್ತಿರುವನು. ಗೂಬೆಗಳ ಧ್ವನಿಯಂತೆಯೂ, ಜೀರುಂಡೆಗಳ ಧ್ವನಿಯಂತೆಯೂ ಆಗಾಗ ಕರ್ಣಕಠೋರವಾಗಿ ಕೇಳಿಸುತ್ತಿರುವ ಶತ್ರುಜನಗಳ ತಿರಸ್ಕಾರವಾಕ್ಯಗಳಿಂದಲೂ, ರಾಜಭಟರ ಗರ್ಜನಧ್ವನಿಗಳಿಂದಲೂ ಕಿವಿಬೇನೆಯನ್ನು ಹೊಂದಿ, ದೈನ್ಯದಿಂದ ಕೊರಗುವನು. ಕಾಡಿನಲ್ಲಿ ನಿರರ್ಥಕವಾಗಿ ಬೆಳೆಯುವ ವಿಷವೃಕ್ಷಗಳಂತೆಯೂ, ವಿಷಜಲದಿಂದ ತುಂಬಿದ ಹೇಳಿಭಾವಿಗಳಂತೆಯೂ ತಮ್ಮಲ್ಲಿರುವ ಹಣವನ್ನು ತಮ್ಮ ದೇಹಸುಖಕ್ಕಾಗಲೀ, ದಾನಧರ್ಮಗಳಿಂದ ಕೀರ್ತಿಯನ್ನು ಸಂಪಾದಿಸುವುದಕ್ಕಾಗಲೀ ಉಪಯೋಗಿಸದೆ, ಒಳಗೊಳಗೆ ಬಚ್ಚಿಟ್ಟುಕೊಂಡು, ಜೀವಚ್ಛವದಂತೆ ವರ್ತಿಸುವ ಧನವಂತರು ಈ ಪ್ರಪಂಚದಲ್ಲಿ ಅನೇಕರುಂಟು. ಪುಣ್ಯಹೀನನಾಗಿ ಈ ಸಂಸಾರಾಟವಿಯಲ್ಲಿ ಸಂಚರಿತಕ್ಕ ಮನುಷ್ಯನು, ಆ ವಿಷವೃಕ್ಷಗಳನ್ನು ನಂಬಿ ನಿಂತಂತೆ, ಧನಾಭಿಲಾಷೆಯಿಂದ ಅಂತಹ ಧನಿಕರ ಕಾಲನ್ನು ಹಿಡಿದು, ತಾನೂ ಜೀವಚ್ಛವದಂತೆ ಅವರಲ್ಲಿ ದೈನ್ಯದಿಂದ ವರ್ತಿಸುತ್ತಿರುವನು. ಕಾಡಿನಲ್ಲಿ ತಿರುಗುವವನು, ಅಲ್ಲಲ್ಲಿ ಕಾಣುವ ಹಳ್ಳಕೊಳ್ಳಗಳನ್ನು ನೋಡಿ ನೀರಿನಾಸೆಗಾಗಿ ಅದರಲ್ಲಿಳಿದು, ಅಲ್ಲಿನೀರನ್ನೂ ಕಾಣದೆ, ಕಾಲುಮುರಿದು ಬೀಳುವಂತೆ, ಈ ಸಂಸಾರವೆಂಬ ಅರಣ್ಯದಲ್ಲಿ ತೊಳಲುತ್ತಿರುವ ಜೀವನೂಕೂಡ, ದೇವಬ್ರಾಹ್ಮಣನಿಂದಕರಾದ ಪಾಷಂಡಿಗಳ ದುರ್ಭೋಧನೆಗೆ ಮರುಳಾಗಿ, ಇಹಲೋಕಪರಲೋಕದ ಸುಖಗಳೆರಡನ್ನೂ ಕೆಡಿಸಿಕೊಂಡು, ಎರಡುವಿಧದಿಂದಲೂ ದುಃಖಕ್ಕೊಳಗಾಗುವನು. ಮತ್ತು ಈ ಪ್ರಪಂಚದಲ್ಲಿ ಜೀವನು, ತನ್ನ ಜೀವನಕ್ಕಾಗಿ ಅನೇಕಜನರನ್ನು ಪೀಡಿಸಿದಾಗಲೂ ತನಗೆ ಆಹಾರವು ದೊರಕದಿದ್ದ ಸಂದರ್ಭಗಳಲ್ಲಿ, ನಂಟರಿಷ್ಟರೆಂದೂ, ತಂದೆ ಮಕ್ಕಳೆಂದೂ ನೋಡದೆ ಎಲ್ಲರನ್ನೂ ಕಿತ್ತು ತಿನ್ನುವುದಕ್ಕೆ ಪ್ರಯತ್ನಿಸುವನು. ರಾಜಾ! ಸಂಸಾರಿಗೆ ಅವನು ವಾಸಮಾಡತಕ್ಕ ಮನೆಯೇ ಒಂದು ದೊಡ್ಡ ಬೆಂಗಾಡೆಂದು ತಿಳಿ! ಒಮ್ಮೊಮ್ಮೆ ಅವನು ಮನೆಗೆ ಬಂದು, ಅದರಲ್ಲಿ ತನಗೆ ಬೇಕಾದ ಭೋಗ್ಯವಸ್ತುಗಳಿಲ್ಲದುದನ್ನು ನೋಡಿದಾಗ, ಕಾಡುಗಿಚ್ಚಿನ ನಡುವೆ ಸಿಕ್ಕಿಬಿದ್ದವನಂತೆ ದುಃಖಾಗ್ನಿಯಿಂದ ಬೇಯುವನು. ಈ ಸಂಸಾರವೆಂಬ ಅರಣ್ಯದಲ್ಲಿ ಸಂಚರಿಸತಕ

ನನಿಗೆ, ದುಷ್ಕಾಲವಶದಿಂದ ಒಮ್ಮೊಮ್ಮೆ ರಾಜಭಟರೇ ಪ್ರತಿಕೂಲರಾಗುವರು. ಆ ರಾಜಭಟರೆಂಬ ರಾಕ್ಷಸರ ಕೈಗೆ ಸಿಕ್ಕಿಬಿದ್ದು, ತನ್ನ ಪ್ರಾಣದಂತಿರುವ ಧನವೆಲ್ಲ ವನ್ನೂ ಕಳೆದುಕೊಂಡು ಹೆಣದಂತಾಗುವನು. ತಂದೆ ಮಕ್ಕಳು ಮೊದಲಾದ ಬಂಧುವರ್ಗಗಳೆಲ್ಲವೂ ಸ್ವಪ್ನ ಪದಾರ್ಥಗಳಂತೆ ಸ್ವಲ್ಪಕಾಲವಿದ್ದು ಬಿಟ್ಟು ಹೋಗ ತಕ್ಕವುಗಳೇ ಹೊರತು ನಿತ್ಯವಲ್ಲ. ಮತ್ತು ಆಯಾ ಮನುಷ್ಯನ ಮನೋಭಾವನೆ ಯಿಂದಲೇ ಆ ಸಂಬಂಧಗಳೆಲ್ಲವೂ ಏರ್ಪಟ್ಟಿರುವುವು. ಹೀಗೆ ಅವೆಲ್ಲವೂ ಅನಿತ್ಯ ಗಳಾಗಿದ್ದರೂ, ಅವುಗಳನ್ನು ನಿತ್ಯವೆಂದು ಭ್ರಮಿಸುತ್ತ, ಸ್ವಪ್ನ ಸುಖದಿಂದ ಸಂತೋಷಪಡುವಂತೆ, ಅವರೊಡನೆ ಕ್ಷಣಮಾತ್ರ ಸುಖಕ್ಕಾಗಿ ಸಂತೋಷಪಡುವನು. ಮತ್ತು ಗೃಹಧರ್ಮದಲ್ಲಿದ್ದವನು ನಡೆಸಬೇಕಾದ ಕರ್ಮವಿಧಿಗಳು ಪರ್ವತದಂತೆ ಅಪಾರವಾಗಿ ಬಿದ್ದಿರುವುವು. ಬಹಳವಾದ ಹಣದಿಂದಲೂ, ಶರೀರಶ್ರಮದಿಂದಲೂ ನಡೆಸಬೇಕಾದ ಈ ಯಜ್ಞಾದಿಕರ್ಮಗಳನ್ನು ಕೊನೆಮುಟ್ಟಿಸುವುದಕ್ಕಾಗಿ ಪ್ರಯತ್ನಿಸುವನು. ಪರ್ವತಶಿಖರವನ್ನೇರುವುದಕ್ಕೆ ಯತ್ನಿಸುವವನು, ನಡುನಡುವೆ ಕಲ್ಲುಮುಳ್ಳುಗಳಲ್ಲಿ ಕಾಲುಮುರಿದು ಬೀಳುವಂತೆ, ಆಗಾಗ ಸಾಂಸಾರಿಕದುಃಖಗಳಿಂದಲೂ, ಇತರವಿಘ್ನ ಗಳಿಂದಲೂ ಅದನ್ನು ಕೊನೆಮುಟ್ಟಲಾರದೆ ಬಹಳ ದುಃಖಕೊಳ್ಳಗಾಗುವನು. ಮತ್ತು ಸಂಸಾರಿಯು ಜೀವನವನ್ನು ಸಂಪಾದಿಸಲಾರದಿದ್ದಾಗ, ದುಸ್ಸಹವಾದ ಜಾಠರಾಗ್ನಿಯ ಬಾಧೆಯಿಂದ ಕಂದಿಕುಂದಿ ಕೃಶನಾಗಿ, ಆಗಾಗ ತನ್ನ ಹೆಂಡಿರು ಮಕ್ಕಳಮೇಲೆಯೇ ನಿಷ್ಕಾರಣವಾಗಿ ಉರಿದು ಬೀಳುವನು. ರಾಜಾ! ಈ ಸಂಸಾರ ವೆಂಬ ಅರಣ್ಯಮಾರ್ಗದಲ್ಲಿ ಸಿದ್ಯೆಯೆಂಬುದೇ ದೊಡ್ಡ ಬೆಟ್ಟದ ಹಾವೆಂದು ತಿಳಿ! ಈ ಸಿದ್ಯೆಯೆಂಬ ಹಾವಿನ ಬಾಯಿಗೆ ತುತ್ತಾದವನು, ಅಂಧತಮಸ್ಸಿನಂತಿರುವ ಅಜ್ಞಾ ನದಿಂದ, ತನ್ನನ್ನಾಗಲೀ ಇತರರನ್ನಾಗಲಿ, ತಿಳಿಯದೆ, ಶೂನ್ಯಾರಣ್ಯದಲ್ಲಿ ಬಿಸುಟ ಬೀಳಿನಂತೆ ಪ್ರಜ್ಞೆಯಿಲ್ಲದೆ ಮಲಗಿರುವನು. ಆಗಾಗ ದುರ್ಜನರೆಂಬ ವಿಷಸರ್ಪಗಳ ಬಾಯಿಗೆ ಬಿದ್ದು, ಕೊಬ್ಬಡಗಿ, ದುಃಖದಿಂದಬೇಯುತ್ತ, ಹಾಳುಬಾವಿಯಲ್ಲಿ ಕಾಲುಜಾರಿಬಿದ್ದ ಕುರುಡನಂತೆ ಜ್ಞಾನಹೀನನಾಗಿ ಕಳವಳಿಸುವನು. ಮತ್ತೊಮ್ಮೆ ಅತ್ಯಲ್ಪವಾದ ವಿಷಯಸುಖವನ್ನು ಹುಡುಕುತ್ತ, ಅದಕ್ಕಾಗಿ ಪರಸ್ವತ್ತಿಗೂ, ಪರ ಸ್ತ್ರೀಯರಿಗೂ ಆಸೆಪಟ್ಟು, ಅದರಿಂದ ರಾಜದಂಡಕ್ಕೂ, ಇತರರ ಪ್ರಹಾರಕ್ಕೂ ಗುರಿಯಾಗಿ, ನರಕಪ್ರಾಯವಾದ ಕಾರಾಗೃಹದಲ್ಲಿ ಬೀಳುವನು. ರಾಜೇಂದ್ರಾ! ಜೀವನಿಗೆ ಸಂಸಾರದ ಮೂಲಕವಾಗಿ ಇಹಲೋಕಪರಲೋಕಗಳೆರಡರಲ್ಲಿಯೂ ಇಷ್ಟೊಂದು ದುರವಸ್ಥೆಗಳುಂಟಾಗುವುದಕ್ಕೆ ಕರ್ಮಗಳೇ ಕಾರಣವು. ಪ್ರವೃತ್ತಿ ಮಾರ್ಗದಲ್ಲಿಬಿದ್ದು ಫಲಾಪೇಕ್ಷೆಯಿಂದ ನಡೆಸತಕ್ಕ ಕರ್ಮವೇ ಈ ಸಂಸಾರಕ್ಕೆ ಜನ್ಮಕ್ಷೇತ್ರವೆಂದು ಹಿರಿಯರು ನಿರ್ಣಯಿಸಿರುವರು.

ವರು. ಅವರುಹುಟ್ಟಿಸತಕ್ಕ ಮೋಹರೂಪವಾದ ರಜೋಗುಣವೇ ಆ ಸುಳಿಗಾಳಿ ಯಿಂದೆದ್ದ ಧೂಳೆಂದು ತಿಳಿ! ಇದರಲ್ಲಿ ಸಿಕ್ಕಿ ಮೋಹಾಂಧನಾದ ಪುರುಷನು, ಕರ್ಮ ಸಾಕ್ಷಿಗಳಾದ ದೇವತೆಗಳನ್ನೂ ಲಕ್ಷ್ಯಮಾಡದೆ ಆ ಮಾರ್ಗಕ್ಕೆ ಹೋಗುವನು. ಶಬ್ದಾದಿ ವಿಷಯಗಳು ನಿಸ್ಸಾರವೆಂಬುದನ್ನು ಆಗಾಗ ತಾನು ತಿಳಿಯುತ್ತಿದ್ದರೂ, ಒಮ್ಮೊಮ್ಮೆ ದೇಹಾಭಿಮಾನದಿಂದ ಆತ್ಮಚಿಂತೆಯನ್ನು ಮರೆತು, ಬಾಯಾರಿದವನು ಬಿಸಿಲ್ದೊರೆಗೆ ಆಸೆಪಟ್ಟೋಡುವಂತೆ, ಆ ವಿಷಯಸುಖಗಳನ್ನೇ ಪುರುಷಾರ್ಥವೆಂದು ಭ್ರಮಿಸಿ ಅದ ಕ್ಕಾಗಿ ದುಡಿಯುತ್ತಿರುವನು. ಗೂಬೆಗಳ ಧ್ವನಿಯಂತೆಯೂ, ಜೀರುಂಡೆಗಳ ಧ್ವನಿ ಯಂತೆಯೂ ಆಗಾಗ ಕರ್ಣಕಠೋರವಾಗಿ ಕೇಳಿಸುತ್ತಿರುವ ಶತ್ರುಜನಗಳ ತಿರ ಸ್ಕಾರವಾಕ್ಯಗಳಿಂದಲೂ, ರಾಜಭಟರ ಗರ್ಜನಧ್ವನಿಗಳಿಂದಲೂ ಕಿವಿಬೇನೆಯನ್ನು ಹೊಂದಿ, ದೈನ್ಯದಿಂದ ಕೊರಗುವನು. ಕಾಡಿನಲ್ಲಿ ನಿರರ್ಥಕವಾಗಿ ಬೆಳೆಯುವ ವಿಷ ವೃಕ್ಷಗಳಂತೆಯೂ, ವಿಷಜಲದಿಂದ ತುಂಬಿದ ಹಳೇಭಾವಿಗಳಂತೆಯೂ ತಮ್ಮಲ್ಲಿರುವ ಹಣವನ್ನು ತಮ್ಮ ದೇಹಸುಖಕ್ಕಾಗಲೀ, ದಾನಧರ್ಮಗಳಿಂದ ಕೀರ್ತಿಯನ್ನು ಸಂ ಪಾದಿಸುವುದಕ್ಕಾಗಲೀ ಉಪಯೋಗಿಸದೆ, ಒಳಗೊಳಗೆ ಬಚ್ಚಿಟ್ಟುಕೊಂಡು, ಜೀವಚ್ಛವದಂತೆ ವರ್ತಿಸುವ ಧನವಂತರು ಈ ಪ್ರಪಂಚದಲ್ಲಿ ಅನೇಕರುಂಟು. ಪುಣ್ಯ ಹೀನನಾಗಿ ಈ ಸಂಸಾರಾಟವಿಯಲ್ಲಿ ಸಂಚರಿತಕ್ಕ ಮನುಷ್ಯನು, ಆ ವಿಷವೃಕ್ಷಗ ಳನ್ನು ನಂಬಿ ನಿಂತಂತೆ, ಧನಾಭಿಲಾಷೆಯಿಂದ ಅಂತಹ ಧನಿಕರ ಕಾಲನ್ನು ಹಿಡಿದು, ತಾನೂ ಜೀವಚ್ಛವದಂತೆ ಅವರಲ್ಲಿ ದೈನ್ಯದಿಂದ ವರ್ತಿಸುತ್ತಿರುವನು. ಕಾಡಿನಲ್ಲಿ ತಿರುಗುವವನು, ಅಲ್ಲಲ್ಲಿ ಕಾಣುವ ಹಳ್ಳಕೊಳ್ಳಗಳನ್ನು ನೋಡಿ ನೀರಿನಾಸೆಗಾಗಿ ಅದರಲ್ಲಿಳಿದು, ಅಲ್ಲಿನೀರನ್ನೂ ಕಾಣದೆ, ಕಾಲುಮುರಿದು ಬೀಳುವಂತೆ, ಈ ಸಂಸಾರ ವೆಂಬ ಅರಣ್ಯದಲ್ಲಿ ತೊಳಲುತ್ತಿರುವ ಜೀವನೂಕೂಡ, ದೇವಬ್ರಾಹ್ಮಣನಿಂದಕರಾದ ಪಾಷಂಡಿಗಳ ದುರ್ಭೋಧನೆಗೆ ಮರುಳಾಗಿ, ಇಹಲೋಕಪರಲೋಕದ ಸುಖಗಳೆರ ಡನ್ನೂ ಕೆಡಿಸಿಕೊಂಡು, ಎರಡುವಿಧದಿಂದಲೂ ದುಃಖಕ್ಕೊಳಗಾಗುವನು. ಮತ್ತು ಈ ಪ್ರಪಂಚದಲ್ಲಿ ಜೀವನು, ತನ್ನ ಜೀವನಕ್ಕಾಗಿ ಅನೇಕಜನರನ್ನು ಪೀಡಿಸಿದಾಗಲೂ ತನಗೆ ಆಹಾರವು ದೊರಕದಿದ್ದ ಸಂದರ್ಭಗಳಲ್ಲಿ, ನಂಟರಿಷ್ಟರೆಂದೂ, ತಂದೆ ಮಕ್ಕ ಳೆಂದೂ ನೋಡದೆ ಎಲ್ಲರನ್ನೂ ಕಿತ್ತು ತಿನ್ನುವುದಕ್ಕೆ ಪ್ರಯತ್ನಿಸುವನು. ರಾಜಾ! ಸಂಸಾರಿಗೆ ಅವನು ವಾಸಮಾಡತಕ್ಕ ಮನೆಯೇ ಒಂದು ದೊಡ್ಡ ಬೆಂಗಾಡೆಂದು ತಿಳಿ! ಒಮ್ಮೊಮ್ಮೆ ಅವನು ಮನೆಗೆ ಬಂದು, ಅದರಲ್ಲಿ ತನಗೆ ಬೇಕಾದ ಭೋಗ್ಯ ವಸ್ತುಗಳಿಲ್ಲದುದನ್ನು ನೋಡಿದಾಗ, ಕಾಡುಗಿಚ್ಚಿನ ನಡುವೆ ಸಿಕ್ಕಿಬಿದ್ದವನಂತೆ ದುಃಖಾಗ್ನಿಯಿಂದ ಬೇಯುವನು. ಈ ಸಂಸಾರವೆಂಬ ಅರಣ್ಯದಲ್ಲಿ ಸಂಚರಿಸತಕ

ವನಿಗೆ, ದುಷ್ಕಾಲವಶದಿಂದ ಒಮ್ಮೊಮ್ಮೆ ರಾಜಭಟರೇ ಪ್ರತಿಕೂಲರಾಗುವರು. ಆ ರಾಜಭಟರೆಂಬ ರಾಕ್ಷಸರ ಕೈಗೆ ಸಿಕ್ಕಿಬಿದ್ದು, ತನ್ನ ಪ್ರಾಣದಂತಿರುವ ಧನವೆಲ್ಲ ವನ್ನೂ ಕಳೆದುಕೊಂಡು ಹೆಣದಂತಾಗುವನು. ತಂದೆ ಮಕ್ಕಳು ಮೊದಲಾದ ಬಂಧುವರ್ಗಗಳೆಲ್ಲವೂ ಸ್ವಪ್ನ ಪದಾರ್ಥಗಳಂತೆ ಸ್ವಲ್ಪಕಾಲವಿದ್ದು ಬಿಟ್ಟು ಹೋಗ ತಕ್ಕವುಗಳೇ ಹೊರತು ನಿತ್ಯವಲ್ಲ. ಮತ್ತು ಆಯಾ ಮನುಷ್ಯನ ಮನೋಭಾವನೆ ಯಿಂದಲೇ ಆ ಸಂಬಂಧಗಳೆಲ್ಲವೂ ಏರ್ಪಟ್ಟಿರುವುವು. ಹೀಗೆ ಅವೆಲ್ಲವೂ ಅನಿತ್ಯ ಗಳಾಗಿದ್ದರೂ, ಅವುಗಳನ್ನು ನಿತ್ಯವೆಂದು ಭ್ರಮಿಸುತ್ತ, ಸ್ವಪ್ನ ಸುಖದಿಂದ ಸಂತೋಷಪಡುವಂತೆ, ಅವರೊಡನೆ ಕ್ಷಣಮಾತ್ರ ಸುಖಕ್ಕಾಗಿ ಸಂತೋಷಪಡುವನು. ಮತ್ತು ಗೃಹಧರ್ಮದಲ್ಲಿದ್ದವನು ನಡೆಸಬೇಕಾದ ಕರ್ಮವಿಧಿಗಳು ಪರ್ವತದಂತೆ ಅಪಾರವಾಗಿ ಬಿದ್ದಿರುವುವು. ಬಹಳವಾದ ಹಣದಿಂದಲೂ, ಶರೀರಶ್ರಮದಿಂದಲೂ ನಡೆಸಬೇಕಾದ ಈ ಯಜ್ಞಾದಿಕರ್ಮಗಳನ್ನು ಕೊನೆಮುಟ್ಟಿಸುವುದಕ್ಕಾಗಿ ಪ್ರಯತ್ನಿಸುವನು. ಪರ್ವತಶಿಖರವನ್ನೇರುವುದಕ್ಕೆ ಯತ್ನಿಸುವನು, ನಡುನಡುವೆ ಕಲ್ಲುಮುಳ್ಳುಗಳಲ್ಲಿ ಕಾಲುಮರಿದು ಬೀಳುವಂತೆ, ಆಗಾಗ ಸಾಂಸಾರಿಕದುಃಖಗಳಿಂದಲೂ, ಇತರವಿಘ್ನ ಗಳಿಂದಲೂ ಅದನ್ನು ಕೊನೆಮುಟ್ಟಲಾರದೆ ಬಹಳ ದುಃಖಕೊಳ್ಳಗಾಗುವನು. ಮತ್ತು ಸಂಸಾರಿಯು ಜೀವನವನ್ನು ಸಂಪಾದಿಸಲಾರದಿದ್ದಾಗ, ದುಸ್ಸಹವಾದ ಜಾಠರಾಗ್ನಿಯ ಬಾಧೆಯಿಂದ ಕಂದಿಕುಂದಿ ಕೃಶನಾಗಿ. ಆಗಾಗ ತನ್ನ ಹೆಂಡಿರು ಮಕ್ಕಳಮೇಲೆಯೇ ನಿಷ್ಕಾರಣವಾಗಿ ಉರಿದು ಬೀಳುವನು. ರಾಜಾ! ಈ ಸಂಸಾರ ವೆಂಬ ಅರಣ್ಯಮಾರ್ಗದಲ್ಲಿ ನಿದ್ರೆಯೆಂಬುದೇ ದೊಡ್ಡ ಬೆಟ್ಟದ ಹಾವೆಂದು ತಿಳಿ! ಈ ನಿದ್ರೆಯೆಂಬ ಹಾವಿನ ಬಾಯಿಗೆ ತುತ್ತಾದವನು, ಅಂಧತಮಸ್ಸಿನಂತಿರುವ ಅಜ್ಞಾ ನದಿಂದ, ತನ್ನನ್ನಾಗಲೀ ಇತರರನ್ನಾಗಲಿ, ತಿಳಿಯದೆ, ಶೂನ್ಯಾರಣ್ಯದಲ್ಲಿ ಬಿಸುಟ ಬೀಳಿನಂತೆ ಪ್ರಜ್ಞೆಯಿಲ್ಲದೆ ಮಲಗಿರುವನು. ಆಗಾಗ ದುರ್ಜನರೆಂಬ ವಿಷಸರ್ಪಗಳ ಬಾಯಿಗೆ ಬಿದ್ದು, ಕೊಬ್ಬಡಗಿ, ದುಃಖದಿಂದಬೇಯುತ್ತ, ಹಾಳುಬಾವಿಯಲ್ಲಿ ಕಾಲುಜಾರಿಬಿದ್ದ ಕುರುಡನಂತೆ ಜ್ಞಾನಹೀನನಾಗಿ ಕಳವಳಿಸುವನು. ಮತ್ತೊಮ್ಮೆ ಅತ್ಯಲ್ಪವಾದ ವಿಷಯಸುಖವನ್ನು ಹುಡುಕುತ್ತ, ಅದಕ್ಕಾಗಿ ಪರಸ್ವತ್ತಿಗೂ, ಪರ ಸ್ತ್ರೀಯರಿಗೂ ಆಸೆಪಟ್ಟು, ಅದರಿಂದ ರಾಜದಂಡಕ್ಕೂ, ಇತರರ ಪ್ರಹಾರಕ್ಕೂ ಗುರಿಯಾಗಿ, ನರಕಪ್ರಾಯವಾದ ಕಾರಾಗೃಹದಲ್ಲಿ ಬೀಳುವನು. ರಾಜೇಂದ್ರಾ! ಜೀವನಿಗೆ ಸಂಸಾರದ ಮೂಲಕವಾಗಿ ಇಹಲೋಕಪರಲೋಕಗಳೆರಡರಲ್ಲಿಯೂ ಇಷ್ಟೊಂದು ದುರವಸ್ಥೆಗಳುಂಟಾಗುವುದಕ್ಕೆ ಕರ್ಮಗಳೇ ಕಾರಣವು. ಪ್ರವೃತ್ತಿ ಮಾರ್ಗದಲ್ಲಿಬಿದ್ದು ಫಲಾಪೇಕ್ಷೆಯಿಂದ ನಡೆಸತಕ್ಕ ಕರ್ಮವೇ ಈ ಸಂಸಾರಕ್ಕೆ ಜನ್ಮಕ್ಷೇತ್ರವೆಂದು ಹಿರಿಯರು ನಿರ್ಣಯಿಸಿರುವರು.

ಜೇನುಗೂಡನ್ನು ಕೀಳುವಂತೆ ಇತರರು ಕೂಡಿಟ್ಟ ಹಣವನ್ನು ಕದ್ದು. ರಾಜ ನಟರ ಸೆರೆಯಲ್ಲಿ ಬಿದ್ದವನು, ಕಷ್ಟದಿಂದ ಅದನ್ನು ತಪ್ಪಿಸಿಕೊಂಡು ಬಂದರೂ, ತಾನು ದುರ್ಮಾರ್ಗದಿಂದ ಸಂಪಾದಿಸಿದ ಆ ಹಣವನ್ನನುಭವಿಸುತ್ತಿರುವಾಗ, ಇದನ್ನು ಬೇರೊಬ್ಬರು ಉಪಾಯದಿಂದ ಅಪಹರಿಸುವರು. ಅವರಿಂದ ಮತ್ತೊಬ್ಬರು ಕಿತ್ತುಕೊಳ್ಳುವರು. ಹೀಗೆ ಧನವೆಂಬುದು ಒಂದು ನೆಲೆಯಲ್ಲಿ ನಿಲ್ಲದೆ ಒಬ್ಬನ ಕೈಯಿಂದ ಮತ್ತೊಬ್ಬನ ಕೈಗೆ ಹಾರುತ್ತಿರುವುದೇಹೊರತು, ಅದನ್ನು ನೆಮ್ಮದಿಯಿಂದನುಭವಿಸತಕ್ಕವನೊಬ್ಬನೂ ಇಲ್ಲವು. ಸಂಸಾರವೆಂಬ ಕಾಡುದಾರಿಯಲ್ಲಿ ಕಿರುಗೆತಕ್ಕವನು ಒಮ್ಮೊಮ್ಮೆ ಬಿಸಿಲು ಮಳೆ ಗಾಳಿಗಳ ಬಾಧೆಯನ್ನು ತಡೆಯಲಾರದೆ ಮರುಗುವನು. ಮತ್ತೊಮ್ಮೆ ರೋಗಾದಿಗಳಿಂದ ಪೀಡಿತನಾಗಿ ನರಳುವನು. ಹೀಗೆ ಅಧ್ಯಾತ್ಮಿಕವೆಂದೂ, ಆಧಿಭೌತಿಕವೆಂದೂ, ಆಧಿದೈವಿಕವೆಂದೂ ಕರೆಯಲ್ಪಡುವ ತಾಪತ್ರಯಗಳಿಗೆ ಆಗಾಗ ಸಿಕ್ಕಿ, ಅದಕ್ಕೆ ತಕ್ಕ ಪ್ರತೀಕಾರವನ್ನು ಕಾಣದೆ ದುಃಖಿಸುವನು. ಒಮ್ಮೊಮ್ಮೆ ವ್ಯಾಪಾರದ ನೆವದಿಂದ ಬೇರೆಯವರಲ್ಲಿರುವ ಒಂದೆರಡುಕಾಸನ್ನು ಕಿತ್ತುಕೊಳ್ಳುವುದಕ್ಕೆ ಯತ್ನಿಸಿ, ಆ ಧನದಾಸೆಯಿಂದ ಅನೇಕ ಜನಗಳ ದ್ವೇಷಕ್ಕೆ ಪಾತ್ರನಾಗುವನು. ಇದೇನೆವದಲ್ಲಿ ಒಮ್ಮೊಮ್ಮೆ ತನ್ನಲ್ಲಿದ್ದುದೆಲ್ಲವನ್ನೂ ಕಳೆದುಕೊಂಡು, ಜೀವನಕ್ಕಿಲ್ಲದೆ ಸಂಕಟಪಡುತ್ತ, ಪರರಲ್ಲಿ ಯಾಚಿಸಿ ಅವಮಾನಾದಿಗಳನ್ನು ಹೊಂದುವನು. ಹೀಗೆ ಹಣದಮೂಲಕವಾಗಿಸ್ವಜನಗಳೊಡನೆ ವೈರವನ್ನು ಕಟ್ಟಿಕೊಂಡಾಗಲೂ, ಸ್ವಜಾತ್ಯಭಿಮಾನವೆಂಬ ಪೂರ್ವವಾಸನೆಯಿಂದ, ಆ ವೈರಿಗಳಲ್ಲಿಯೇ ವಿವಾಹಾದಿಕ್ರಿಯೆಗಳಿಂದ ಸಂಬಂಧವನ್ನು ಬೆಳೆಸುವನು. ಹೀಗೆ ಅನೇಕಕ್ಲೇಶಗಳಿಂದ ತುಂಬಿದ ಈ ಸಂಸಾರಮಾರ್ಗದಲ್ಲಿ ನಡೆಯುವವನು, ತಂದೆ, ತಾಯಿ ಮೊದಲಾದ ತನ್ನ ತನ್ನ ಬಂಧುವರ್ಗಗಳಲ್ಲಿ, ವಿಪತ್ತಿನಲ್ಲಿ ಸಿಕ್ಕಿದವರಿಗಾಗಿಯೂ, ಸತ್ತವರಿಗಾಗಿಯೂ ದುಃಖಿಸುವನು. ಸ್ವಲ್ಪಕಾಲದಲ್ಲಿಯೇ ಹಿಂದೆ ಸತ್ತವರ ಚಿಂತೆಯನ್ನು ಬಿಟ್ಟು, ಮುಂದೆ ಹುಟ್ಟಿದ ಮಕ್ಕಳನ್ನು ನೋಡಿ ಮುದ್ದಾಡಿ, ಸಂತೋಷದಿಂದ ಹಿಗ್ಗುವನು. ಆ ಮಕ್ಕಳಿಗೇನಾದರೂ ವಿಪತ್ತು ಸಂಭವಿಸಿದಾಗ, ಸಹಿಸಬಾರದ ಸಂಕಟದಿಂದ ಕೊರಗುವನು. ಕಣ್ಣೀರುಬಿಟ್ಟು ಗೋಳಿಡುವನು! ಜೇರೆ ಮಕ್ಕಳು ಹುಟ್ಟಿದಾಗ, ಮೊದಲಿನ ಮಕ್ಕಳ ಚಿಂತೆಯನ್ನು ಬಿಟ್ಟು ಹೊಸ ಮಕ್ಕಳನ್ನು ಲಾಲಿಸುತ್ತ ಆ ಸಂತೋಷದಿಂದುಬ್ಬುವನು. ಒಮ್ಮೊಮ್ಮೆ ಆ ಮಕ್ಕಳಾಟವನ್ನು ನೋಡಿ ಆಶ್ಚರ್ಯಪಟ್ಟು ಅದನ್ನು ಮತ್ತೊಬ್ಬರೊಡನೆ ಹೇಳಹೇಳಿ ಹಿಗ್ಗುವನು. ಅಟ್ಟಹಾಸದಿಂದ ನಗುವನು. ಆ ಮಕ್ಕಳಿಗೆ ಮುಂದೆ ಬರಬಹುದಾದ [illegible] ಇದಕ್ಕಿ ದಹಾಗೆ ಭಯಪಡುವನು. ಸಂಸಾರಿಯಾದ ಮನುಷ್ಯನು

ಹೀಗೆ ಸತ್ಕರ್ಮಗಳಿಲ್ಲವನ್ನೂ ಮರೆತು ಬಿಡುವನು. ಎಷ್ಟು ದಿನವಾದರೂ ಅಸಂಸಾರ ಮಾರ್ಗವನ್ನು ದಾಟುವುದಕ್ಕೆ ದಾರಿಯನ್ನು ಯೋಚಿಸಲಾರನು. ರಾಜೇಂದ್ರಾ! ಆ ಸಂಸಾರಮಾರ್ಗವನ್ನು ದಾಟಿಸುವುದಕ್ಕೆ, ಕರ್ಮಜ್ಞಾನಯೋಗಗಳಿಂದ ಸಹಕರಿಸಲ್ಪಟ್ಟ ಭಕ್ತಿಯೋಗವೊಂದು ಹೊರತು ಬೇರೆ ದಾರಿಯಲ್ಲ ಆ ಭಕ್ತಿಯೇ ನಿರತಿಶಯಾನಂದರೂಪವಾದ ಪರಮಾತ್ಮನನ್ನು ಸಾಕ್ಷಾತ್ಕರಿಸುವುದಕ್ಕೆ, ಮುಖ್ಯೋಪಾಯವಾದ ಯೋಗಾನುಶಾಸನವನ್ನು ಪೇಳಿಸುವುದು. ಕೇವಲ ಶಾಂತಸ್ವಭಾವರಾಗಿಯೂ ಜಿತೇಂದ್ರಿಯರಾಗಿಯೂ, ಮನಸ್ಸನ್ನು ನಿಗ್ರಹಿಸಿದವರಾಗಿಯೂ, ವೈರಬುದ್ಧಿಯಿಲ್ಲದವರಾಗಿಯೂ, ಸರ್ವಭೂತಸುಹೃತ್ತುಗಳಾಗಿಯೂ ಇರುವ ಮಹರ್ಷಿಗಳುಹೊರತು, ಬೇರೆ ಯಾರೂ ಅದನ್ನು ಪಡೆಯಲಾರರು. ದಿಗ್ಗಜಗಳನ್ನು ಜಯಿಸತಕ್ಕ ಬಾಹುಬಲವುಳ್ಳ ರಾಜಾಧಿರಾಜರಾದರೂ, ತಮ್ಮ ಮನಸ್ಸನ್ನು ಜಯಿಸಲಾರದಿದ್ದಪಕ್ಷದಲ್ಲಿ ಆ ಯೋಗಸಿದ್ಧಿಯನ್ನು ಪಡೆಯಲಾರರು. ಅಂತಹ ರಾಜರು ಈ ಭೂಮಿಯಲ್ಲಿ "ನನ್ನದು ತನ್ನದೆಂಬ ಅಭಿಮಾನವಿಟ್ಟು, ಯುದ್ಧದಲ್ಲಿ ಒಬ್ಬರಿಗೊಬ್ಬರು ಹೊಡೆದಾಡಿ, ಕೊನೆಗೆ ಯಾರೂ ಅದನ್ನು ಸ್ಥಿರವಾಗಿ ಅನುಭವಿಸಲಾರದೆ, ಆ ನೆಲದ ಮೇಲೆಯೇ ಸತ್ತುಬಿದ್ದರೇ ಹೊರತು ಯೋಗಿಗಳು ಹೊಂದಗಕ್ಕ ಗತಿಯನ್ನು ಯಾರೂ ಪಡೆಯಲಿಲ್ಲ. ರಾಜಾ! ಈ ಸಂಸಾರಮಾರ್ಗದಲ್ಲರುವ ಕಷ್ಟಪರಂಪರೆಗಳಿಗೆ ಮಿತಿಯೇಇಲ್ಲವು ಸುಖದುಃಖಗಳು, ರಾಗದ್ವೇಷಗಳು, ಭಯ, ಅಭಿಮಾನ, ಸಂತೋಷ ಶೋಕ ಮೋಹ, ಮದ, ಮಾತ್ಸರ್ಯ, ಅಸೂಯೆ, ಅವಮಾನ, ಹಸಿವು, ಬಾಯಾರಿಕೆ, ಆಧಿ, ವ್ಯಾಧಿ, ಹುಟ್ಟು, ಮುಪ್ಪು, ಸಾವು, ಇವೇ ಮೊದಲಾದ ಅನರ್ಥಗಳೆಲ್ಲವೂ ತುಯ್ದಾಡಿರುಗಿ ಮೇಲೆ ಬಿದ್ದು ಬರುತ್ತಲೇ ಇರುವುವು.

ಈ ಸಂಸಾರ ಮಾರ್ಗದಲ್ಲಿ ಸ್ತ್ರೀಯರೇ ಕಾಡುಬಳ್ಳಿಗಳೆಂದುತಿಳಿ! ಭಗವಂತನ ಮಾಯೆಯೇ ಈ ಸ್ತ್ರೀರೂಪದಿಂದಿದ್ದು ತನ್ನನ್ನು ನಂಬಿನಿಂತವರ ವಿವೇಕವನ್ನು ಕೆಡಿಸುವುದು. ತನಗೆ ಕ್ರೀಡಾಗೃಹದಂತಿರುವ ಈ ಭಗವನ್ಮಾಯೆಯಿಂದ ಮೋಹಿತವಾದ ಮನಸ್ಸುಳ್ಳ ಮನುಷ್ಯನು, ಆ ಹೆಂಡಿರುಮಕ್ಕಳ ನಡೆ ನುಡಿ ನೋಟಗಳಿಂದ ಆಕರ್ಷಿಸಲ್ಪಟ್ಟ ಮನಸ್ಸುಳ್ಳವನಾಗಿ, ಹಿಂದು ಮುಂದು ತಿಳಿಯದ, ಇಂದ್ರಿಯಗಳನ್ನೂ ಜಯಿಸಲಾರದೆ, ತನ್ನ ಆತ್ಮವನ್ನು ದುಃಖರೂಪವಾದ ಮಹಾನರಕದಲ್ಲಿ ತಳ್ಳುವನು. ರಾಜೇಂದ್ರಾ! ಭಗವಂತನಿಗೆ ಅಧೀನವಾಗಿ ನಡೆಯುತ್ತಿರುವ ಕಾಲಚಕ್ರದ ಮಹಿಮೆಯನ್ನೇನೆಂದು ಬಲ್ಲೆ? ಪರಮಾಣುವಿನಿಂದ ಹಿಡಿದು, ದ್ವಿಪರಾರ್ಧಪರ್ಯಂತವಾದ ಕಾಲವೇ ಇದರ ಸ್ವರೂಪವು! ಇದರ ವೇಗವನ್ನು ಯಾರೂ ತಡೆದು ನಿಲ್ಲಿಸಲಾರರು! ಇದು ಬ್ರಹ್ಮನು ಮೊದಲು, ಹುಲ್ಲುಕಡ್ಡಿಯವರೆಗಿರತಕ್ಕ

ಸಮಸ್ತ ಭೂತಗಳ ಆಯುರ್ದಾಯವನ್ನೂ ಅಳೆಯುತ್ತಿರುವುದು. ಎಚ್ಚರತಪ್ಪಿದ ವರಮೇಲೆ ಬಿದ್ದು ಅವರ ಆಯುಸ್ಸನ್ನು ಕ್ಷಣಮಾತ್ರದಲ್ಲಿ ಅಪಹರಿಸಿ ಬಿಡುವುದು ಲೋಕದಲ್ಲಿ ಸಂಸಾರಿಯಾದವನು, ಈ ಕಾಲಚಕ್ರದಿಂದ ತನಗೆ ಯಾವಾಗ ಮರಣ ವುಂಟಾಗುವುದೋ ಎಂದು ಅನವರತವೂ ಹೆದರುತ್ತಿರುವನು. ಈ ಮರಣವನ್ನು ತಪ್ಪಿಸಿಕೊಳ್ಳಬೇಕೆಂಬ ಬುದ್ಧಿಯು ಹುಟ್ಟಿದಾಗಲೂ, ಆ ಕಾಲಚಕ್ರವು ಯಾವನಿಗೆ ಅಧೀನವಾಗಿ ನಡೆಯುತ್ತಿರುವುದೋ, ಅಂತಹ ವಾಸುದೇವನನ್ನು ಸ್ಮರಿಸದೆ, ಬೇರೆ ಪಾಷಂಡದೇವತೆಗಳನ್ನು ಭಜಿಸುವುದಕ್ಕೆ ಯತ್ನಿಸುವನು. ರಾಜೇಂದ್ರಾ! ಈ ಸಂಸಾರವೆಂಬ ಕಾಡಿನಲ್ಲಿ ಹೊಂಚುಹಾಕುತ್ತಿದ್ದು, ನಂಬಿ ಬಂದವರನ್ನು ಕೆಡಿಸತಕ್ಕ ರಣಹದ್ದು, ಕೊಕ್ಕರೆ, ಮುಂತಾದ ಕ್ಷುದ್ರಜೀವಿಗಳುಂಟೆಂದು ಹೇಳಿದೆನಲ್ಲವೇ? ವೈದಿಕ ಸಿದ್ಧಾಂತಗಳಿಗೆ ಹೊರಗಾಗಿರುವ ಈ ಪಾಷಂಡದೇವತೆಗಳನ್ನು ನಂಬಿ, ಅಸುರನ್ನು ಭಜಿಸತಕ್ಕವನು, ಹದ್ದು ಮೊದಲಾದ ಕಾಡುಹಕ್ಕಿಗಳ ಸಹವಾಸವನ್ನು ನಂಬಿ, ಅವುಗಳಲ್ಲಿ ಸೇರಿದಂತಾಗುವನೇ ಹೊರತು ಬೇರೆಯಲ್ಲ! ಈ ಅರಣ್ಯದಲ್ಲಿ ಸಂಚರಿಸ ತಕ್ಕವನು, ಆ ಕ್ಷುದ್ರಮೃಗಗಳಿಂದ ವಂಚಿತನಾದಾಗ, ಹಂಸಗಳ ಗುಂಪಿಗೆ ಸೇರುವ ನೆಂದು ಹೇಳಿದೆನಲ್ಲವೇ? ಆ ಹಂಸಗಳೇ ಬ್ರಾಹ್ಮಣರೆಂದು ತಿಳಿ! ಯಾವಾಗ ಸಂಸಾರಿಯು, ಪಾಷಂಡಮತವನ್ನು ನಂಬಿ ತಾನು ಮೋಸಹೋದುದಾಗಿ ತಿಳಿದು ಕೊಳ್ಳುವನೋ, ಆಗ ಬ್ರಾಹ್ಮಣಕುಲದಲ್ಲಿ ಪ್ರವೇಶಿಸುವನು. ಉಪನಯನವೇ ಮೊದಲಾದ ಸಂಸ್ಕಾರಗಳಿಂದಲೂ, ಶ್ರೌತಸ್ಮಾರ್ತಗಳೆಂಬ ನಿತ್ಯಕರ್ಮಾನುಷ್ಠಾನ ಗಳಿಂದಲೂ ಯಜ್ಞಪುರುಷನಾದ ಭಗವಂತನನ್ನು ಎಡೆಬಿಡದೆ ಆರಾಧಿಸುತ್ತಿರು ವುದೇ ಈ ಬ್ರಾಹ್ಮಣಕುಲದ ಸ್ವಭಾವವು! ಸಂಸಾರಿಯು ಹಂಸಗಳ ನಡತೆಯು ತನಗೆ ಸರಿಬೀಳದಿದ್ದಾಗ ಕಪಿಗಳ ಗುಂಪಿನಲ್ಲಿ ಸೇರುವನೆಂದು ಹೇಳಿದೆನಲ್ಲವೇ! ಇದರಿಂದ ಬ್ರಾಹ್ಮಣಜಾತಿಗೆ ಯೋಗ್ಯವಾದ ಕರ್ಮಾನುಷ್ಠಾನದಲ್ಲಿ ರುಚಿಯಿಲ್ಲದ ವನು, ವೈದಿಕಕರ್ಮಗಳಿಂದ ಶುದ್ಧಿಯಿಲ್ಲದವನಾಗಿ, ಶೂದ್ರರ್ಗುಂಪಿನಲ್ಲಿ ಸೇರಿ, ಕಪಿಗಳಂತೆ ಸಂಭೋಗದಿಂದಲೂ, ಕುಟುಂಬ ಪೋಷಣೆಯಿಂದಲೂ ಕಾಲವನ್ನು ಕಳೆಯುವನು. ಇದರಲ್ಲಿ ಕಟ್ಟುಪಾಡಿಲ್ಲದೆ, ದೇಶಕಾಲಗಳೊಂದನ್ನೂ ನೋಡದೆ, ಮನಸ್ಸಿಗೆ ಬಂದಹಾಗೆ ಕ್ರೀಡಿಸುವನು. ಒಂದಕ್ಕೊಂದು ಮುಖವನ್ನು ನೋಡಿ ಹಲ್ಲು ಗಿರಿಯುವ ಕಪಿಗಳಂತೆ, ಹೆಂಡಿರುಮಕ್ಕಳ ಮುಖಾವಲೋಕನವೇ ಮೊದಲಾದ ಗ್ರಾಮ್ಯಕರ್ಮಗಳಿಂದಲೇ ಸಂತೋಷಪಟ್ಟು, ಕಳೆದು ಹೋಗುವ ಕಾಲವನ್ನೂ ತಿಳಿಯದೆ, ಮೈಮರೆತಿರುವನು. ಕಪಿಗಳು ತನ್ನ ಹೆಂಡಿರುಮಕ್ಕಳನ್ನು ಕಟ್ಟಿಕೊಂಡು ಮರದಮೇಲೆ ವಾಸಮಾಡುತ್ತ, ಆಗಾಗ ಮೈಥುನಸುಖದಿಂದ ಕಾಲವನ್ನು ಕಳೆಯು

ವಂತೆ, ಈ ಸಂಸಾರಿಯೂಕೂಡ, ಅತ್ಯಲ್ಪವಾದ ಐಹಿಕಸುಖಗಳಿಗೆ ನೆಲೆಯಾದ ಮನೆಗಳಲ್ಲಿ ಹೆಂಡಿರು ಮಕ್ಕಳೆಂಬ ಸಂಸಾರಪಾಶದಲ್ಲಿ ಸಿಕ್ಕಿಬಿದ್ದು ನರಳುವನು. ಸುಖದುಃಖಗಳನ್ನನುಭವಿಸುತ್ತ ಈ ಸಂಸಾರವೆಂಬ ಕಾಡುದಾರಿಯಲ್ಲಿ ಸಂಚರಿಸ ತಕ್ಕವನಿಗೆ, ಮೃತ್ಯುವೇ ಬೆನ್ನಟ್ಟಿ ಬರುವ ಕಾಡಾನೆಯೆಂದು ತಿಳಿ! ಇದರ ಭಯದಿಂದ ಜೀವನು ಪರ್ವತಗುಹೆಯಲ್ಲಿ ಪ್ರವೇಶಿಸುವನೆಂದರೆ, ರೋಗಾದಿ ವಿಪತ್ತುಗಳಲ್ಲಿ ಸಿಕ್ಕಿ ಬೀಳುವನೆಂದರ್ಥವು. ಈ ಆನೆಯ ಭಯವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಕಾಡುಬಳ್ಳಿಯನ್ನು ಹಿಡಿದು ಮೇಲೇರುವನೆಂದರೆ, ಕರ್ಮಗಳ ಬಲದಿಂದ ಆ ವಿಪತ್ತನ್ನು ತಪ್ಪಿಸಿಕೊಂಡು ಸ್ವಲ್ಪವಾಗಿ ಚೇತರಿಸಿಕೊಳ್ಳುವನೆಂದರ್ಥವು. ಹೀಗೆ ಚೇತರಿಸಿಕೊಂಡಮೇಲೂ ತಿರುಗಿ ಅದೇದಾರಿಯಲ್ಲಿ ಬಿದ್ದು, ತಿರುಗಿ ಅದೇ ವಿಧವಾದ ಕಷ್ಟಸುಖಗಳನ್ನು ಹೊಂದುತ್ತಿರುವನು. ರಾಜೇಂದ್ರಾ! ಈ ವಿಧವಾದ ಸಂಸಾರ ಚಕ್ರವೆಂಬುದು ಮನುಷ್ಯಲೋಕದವರಿಗೆಮಾತ್ರವೇ ಅಲ್ಲ. ಊರ್ಧ್ವಲೋಕದಲ್ಲಿರುವ ದೇವಾದಿಗಳೂ ಇದೇ ವಿಧವಾದ ಸಂಸಾರದಲ್ಲಿ ತೊಳಲುತ್ತಿರುವರೆಂದು ತಿಳಿ! ಎಲೈ ಪರೀಕ್ಷಿದ್ರಾಜನೇ! ಸಂಸಾರವಿಷಯದಲ್ಲಿ ಭರತನು ರಹೂಗಣನಿಗೆ ಹೇಳಿದ ಮಾತಿನ ಗೂಢಾರ್ಥವೇ ಇದು! ಋಷಭಪುತ್ರನಾದ ಆ ಭರತನ ಪ್ರಭಾವವನ್ನು ಸಂಗ್ರಹವಾಗಿ ತಿಳಿಸತಕ್ಕ ಕೆಲವುಶ್ಲೋಕಗಳುಂಟು. ಅವುಗಳ ಅರ್ಥವನ್ನು ವಿವರಿಸುವೆನು ಕೇಳು. "ಗರುಡನ ಗತಿಯನ್ನು ನೋಡವು ಹೇಗೋಹಾಗೇ, ಮಹಾತ್ಮನಾಗಿಯೂ, ರಾಜರ್ಷಿಯಾಗಿಯೂ ಇರುವ ಆ ಋಷಭಪುತ್ರನಾದ ಭರತನ ಮಾರ್ಗವನ್ನು ಈ ಲೋಕದಲ್ಲಿ ಬೇರೊಬ್ಬ ರಾಜನು ಮನಸ್ಸಿನಿಂದಲಾದರೂ ಹಿಂಬಾಲಿಸುವುದಕ್ಕೆ ಶಕ್ತನಾಗಲಾರನು. ಯಾವನು ಭಗವಂತನಲ್ಲಿಯೇ ನಟ್ಟ ಮನಸ್ಸುಳ್ಳವನಾಗಿ ಬೇರೆ ಯಾರಿಂದಲೂ ಬಿಡುವುದಕ್ಕೆ ಸಾಧ್ಯವಲ್ಲದ ಹೆಂಡಿರುಮಕ್ಕಳು, ನಂಟರಿಷ್ಟರು, ರಾಜ್ಯಕೋಶಗಳು, ಇವೇ ಮೊದಲಾದ ಸಮಸ್ತ ಭೋಗಸಾಮಗ್ರಿಗಳನ್ನೂ ತನ್ನ ಯೌವನಕಾಲದಲ್ಲಿಯೇ ಮಲದಂತೆ ಜಿಹ್ವಾಸೆಯಿಂದ ತೊರೆದುಬಿಟ್ಟನೋ, ಅವುಗಳನ್ನು ಬಿಟ್ಟುಹೋದುದುಮಾತ್ರವಲ್ಲದೆ ಸ್ವಲ್ಪವಾದರೂ ಅವುಗಳ ಚಿಂತೆಯನ್ನೇ ಮನಸ್ಸಿನಲ್ಲಿಡದಿದ್ದನೋ, ಅಂತಹ ಭರತನ ನಡತೆಯನ್ನು ಬೇರೆ ಯಾರುತಾನೇ ಅನುಸರಿಸಬಲ್ಲರು? ಇವನು ತಾನಾಳುತ್ತಿದ್ದ ಸಮಸ್ತ ಭೂಮಂಡಲವನ್ನೂ ತನ್ನ ಬಂಧುವರ್ಗಗಳನ್ನೂ, ತನ್ನ ಸಮಸ್ತ ಧನವನ್ನೂ ಬಿಟ್ಟು ಹೋದುದಲ್ಲದೆ, ದೇವತೆಗಳಿಗೂ ಆಸೆಹುಟ್ಟಿಸತಕ್ಕ ಭಾಗ್ಯಲಕ್ಷ್ಮಿಯು ತಾನಾಗಿ ಬಂದು ಪರಿಸಿದ್ದಾಗಲೂ, ಅದನ್ನೂ ಕಣ್ಣೆತ್ತಿನೋಡದೆ ನಿರಾಕರಿಸಿದನು. ಮಹಾತ್ಮರಲ್ಲಿ ಇದೇನೂ ಆಶ್ಚರ್ಯವಲ್ಲ! ಯಾವಾಗಲೂ ಭಗವತ್ಸೇವೆಯಲ್ಲಿಯೇ ನಿರತಕ್ಕ ಮಹಾತ್ಮರು, ಮೋಕ್ಷಸುಖ

ವನ್ನೂ ಕೂಡ ಆ ಭಗವತ್ಸೇವೆಗಿಂತಲೂ ಕಡಿಮೆಯೆಂದೇ ಭಾವಿಸುವರು! ಅಂತ ಪರಿಗೆ ಈ ಸಂಸಾರಸುಖದಲ್ಲಿ ವಿರಕ್ತಿಯುಂಟಾಗುವುದೇನಾಶ್ಚರ್ಯವು? ಯಾವ ಭರತನು ಪೂರ್ವಜನ್ಮದಲ್ಲಿ ತನ್ನ ಮೃಗಶರೀರವನ್ನು ಬಿಡುವ ಕಾಲದಲ್ಲಿಯೂಕೂಡ ಆ ಭಗವಂತನನ್ನು ಕುರಿತು ಓ ದೇವಾ! ಯಜ್ಞಸ್ವರೂಪನಾಗಿಯೂ ಯಜ್ಞಪತಿಯಾಗಿಯೂ, ಆಯಾ ಅವತಾರಗಳಿಂದ ವರ್ಣಾಶ್ರಮಧರ್ಮಗಳನ್ನು ಕಾಪಾಡತಕ್ಕವನಾಗಿಯೂ, ಭಕ್ತಿಯೋಗದಿಂದ ಲಭಿಸತಕ್ಕವನಾಗಿಯೂ, ಪ್ರಕೃತಿಯೆಂಬ ಮಾಯೆಯನ್ನು ನಿಯಮಿಸತಕ್ಕವನಾಗಿಯೂ, ಜೀವವರ್ಗಗಳಿಗೆ ಮುಖ್ಯಾಶ್ರಯನಾಗಿಯೂ, ಸಂಸಾರನಿವಾರಕನಾಗಿಯೂ, ಇರುವ ನಿನಗೆ ನಮಸ್ಕಾರವು" ಎಂದು ಉಚ್ಚಧ್ವನಿಯಿಂದ ಕೂಗಿ ಹೇಳುತ್ತ, ಆ ಜನ್ಮದಿಂದ ಮುಕ್ತನಾದನೋ, ಆ ಮಹಾತ್ಮನ ಆಶ್ಚರ್ಯಚರಿತ್ರವನ್ನು ಯಾರು ತಾನೇ ಅನುಸರಿಸಬಲ್ಲರು?" ಎಂಬುದೇ ಆ ಶ್ಲೋಕಾರ್ಥವು. ರಾಜೇಂದ್ರಾ! ಇದೇ ಭಗವದ್ಭಕ್ತರಲ್ಲಿ ಮೇಲೆನಿಸಿದ ಭರತನ ಚರಿತ್ರವು! ಶುದ್ಧಗುಣಗಳಿಂದಲೂ ಶುದ್ಧವಾದ ನಡತೆಯಿಂದಲೂ ಪ್ರಸಿದ್ಧನಾದ ಆ ರಾಜರ್ಷಿಯ ಚರಿತ್ರವು ಮಂಗಳಕರವಾಗಿಯೂ, ಕೀರ್ತಿಕರವಾಗಿಯೂ, ಇರುವುದು. ಆಯುಸ್ಸನ್ನೂ ಐಶ್ವರ್ಯವನ್ನೂ ಹೆಚ್ಚಿಸುವುದು. ಸ್ವರ್ಗಮೋಕ್ಷಗಳೆಲ್ಲವನ್ನೂ ಕೈಗೂಡಿಸುವುದು! ಹೀಗೆ ಎಲ್ಲರಿಂದಲೂ ಕೀರ್ತಿಸಲ್ಪಡುವ ಆ ಭರತನ ಚರಿತ್ರವನ್ನು ಯಾವನು ಕೇಳುವನೋ, ಯಾವನು ಹೇಳುವನೋ, ಯಾವನು ಅಭಿನಂದಿಸುವನೋ, ಅಂತವನಿಗೆ ಬೇರೊಬ್ಬರ ಅಪೇಕ್ಷೆಯಿಲ್ಲದೆ ಸರ್ವಾಭೀಷ್ಟಗಳೂ ತಾವಾಗಿ ಕೈಗೂಡಿ ಬರುವುವು" ಎಂದನು. ಇದು ಹದಿನಾಲ್ಕನೆಯ ಅಧ್ಯಾಯವು.

---

## ಶುಕನು ಪರೀಕ್ಷಿದ್ರಾಜನಿಗೆ ಭರತನ ಸಂತತಿಯನ್ನು ತಿಳಿಸಿದುದು.

ರಾಜೇಂದ್ರಾ! ಭರತನ ಚರಿತ್ರವನ್ನು ತಿಳಿಸಿದೆನಷ್ಟೆ? ಇನ್ನು ಅವನ ಸಂತತಿಕ್ರಮವನ್ನು ತಿಳಿಸುವೆನು ಕೇಳು! ಆ ಭರತನಿಗೆ ಸುಮತಿಯೆಂಬ ಪುತ್ರನು ಹುಟ್ಟಿದನು. ಆ ಸುಮತಿಯು ತನ್ನ ಅಜ್ಜನಾದ ಋಷಭನು ನಡೆಸಿದಯೋಗಮಾರ್ಗವನ್ನೇ ತಾನೂ ಅನುವರ್ತಿಸುತ್ತಿದ್ದನು. ಇದಕ್ಕಾಗಿ ಮುಂದೆ ಕೆಲವು ಪಾಷಂಡಿಗಳು, ಕುತ್ಸಿತಬುದ್ಧಿಯಿಂದ, ಅವನನ್ನು ಬೌದ್ಧದೇವತೆಯೆಂದು ಹೇಳುವರು.

ಅವನು ವಾಸ್ತವಕ್ಕೆ ಅಂಶವನಲ್ಲ! ಆ ಸುಮತಿಗೆ ಗೃಥ್ರಸೇನೆಯೆಂಬ ಪತ್ನಿಯಲ್ಲಿ ದೇವತಾಜಿತ್ತೆಂಬ ಕುಮಾರನೊಬ್ಬನು ಹುಟ್ಟಿದನು. ಆ ಕುಮಾರನಿಗೆ ಆಸುರಿಯೆಂಬ ಪತ್ನಿಯಲ್ಲಿ ದೇವದ್ಯುಮ್ನನೆಂಬ ಪುತ್ರನು ಹುಟ್ಟಿದನು. ಆ ದೇವದ್ಯುಮ್ನನಿಗೆ ಧೇನುಮತಿಯೆಂಬ ಭಾರ್ಯೆಯಲ್ಲಿ ಪರಮೇಷ್ಠಿಯೆಂಬ ಪುತ್ರನು ಜನಿಸಿದನು. ಅತನಿಗೆ ಸುವರ್ಚಲೆಯೆಂಬ ಪತ್ನಿಯಲ್ಲಿ ಪ್ರತೀಹನೆಂಬ ಪುತ್ರನು ಜನಿಸಿದನು. ಈ ಪ್ರತೀಹನು ಅನೇಕರಿಗೆ ಆತ್ಮವಿದ್ಯೆಯನ್ನುಪದೇಶಿಸಿ, ತಾನೂ ಅದರಂತೆಯೇ ಶುದ್ಧಮನಸ್ಸುಳ್ಳವನಾಗಿ ಯಾವಾಗಲೂ ಪರಮಪುರುಷನನ್ನೇ ಉಪಾಸನೆಮಾಡುತ್ತಿದ್ದನು. ಈ ಪ್ರತೀಹನಿಗೆ ಪ್ರತಿಹರ್ತೃವೆಂದೂ ಪ್ರಸ್ತೋತೃವೆಂದೂ, ಉದ್ಗಾತೃವೆಂದೂ ಮೂರುಮಂದಿಮಕ್ಕಳು ಹುಟ್ಟಿದರು. ಈ ಮೂವರೂ ಯಜ್ಞಾದಿಕರ್ಮಗಳಲ್ಲಿ ಬಹಳ ನಿಪುಣರಾಗಿದ್ದರು. ಅವರಲ್ಲಿ ಪ್ರತಿಹರ್ತನೆಂಬ ಹಿರಿಯವನಿಗೆ, ಸ್ತುತಿಯೆಂಬ ಪತ್ನಿಯಲ್ಲಿ ಅಜನೆಂದೂ, ಭೂಮನೆಂದೂ ಇಬ್ಬರು ಪುತ್ರರುಹುಟ್ಟಿದರು. ಅವರಲ್ಲಿ ಕಿರಿಯನಾದ ಭೂಮನು, ಋಷಿಕುತ್ಸೆಯೆಂಬ ತನ್ನ ಪತ್ನಿಯಲ್ಲಿ ಉದ್ಗೀಥನೆಂಬ ಪುತ್ರನನ್ನು ಪಡೆದನು. ಈ ಉದ್ಗೀಥನಿಗೆ ದೇವಕುತ್ಸೆಯೆಂಬ ಪತ್ನಿಯಲ್ಲಿ ಪ್ರಸ್ತಾರನೆಂಬವನೂ, ಅತನಿಗೆ ವಿಕುತ್ಸೆಯೆಂಬ ಪತ್ನಿಯಲ್ಲಿ ವಿಭುವೆಂಬ ಪುತ್ರನೂ ಜನಿಸಿದರು ಈ ವಿಭುವಿನ ಪತ್ನಿಗೆ ರತಿಯೆಂದು ಹೆಸರು. ಇವಳಲ್ಲಿ ಪೃಥುಷೇಣನೆಂಬ ಪುತ್ರನು ಹುಟ್ಟಿದನು. ಇವನಿಗೆ ಆಕೂತಿಯೆಂಬ ಭಾರ್ಯೆಯಲ್ಲಿ ಶಕ್ತನೆಂಬ ಮಗನು ಹುಟ್ಟಿದನು. ಆ ಶಕ್ತನಿಗೆ ಕೃತಿಯೆಂಬ ಪತ್ನಿಯಲ್ಲಿ ಮಹಾಭಾಗವತೋತ್ತಮನಾದ ಗಯನೆಂಬ ಕುಮಾರನು ಹುಟ್ಟಿದನು ಈತನ ಕೀರ್ತಿಯು ಅಪಾರವಾದುದು! ಇವನು ಲೋಕರಕ್ಷಣಕ್ಕಾಗಿ ಶುದ್ಧಸತ್ವಮೂರ್ತಿಯಾದ ಭಗವಂತನ ಅಂಶದಿಂದಲೇ ಅವತರಿಸಿದ್ದವನು! ಉದಾರಮನಸ್ಸೇ ಮೊದಲಾದ ಗುಣಗಳಿಂದ ಮಹಾಪುರುಷನೆಂದು ಪ್ರಖ್ಯಾತನಾಗಿದ್ದನು. ಈ ಮಹಾತ್ಮನು, ಪ್ರಜೆಗಳನ್ನು ಕ್ಷೇಮದಿಂದ ರಕ್ಷಿಸುವದು, ಅವರನ್ನು ಸಂತೋಷಪಡಿಸುವುದು, ಇವೇ ಮೊದಲಾದ ತನ್ನ ರಾಜಧರ್ಮದಿಂದಲೂ, ಪಂಚಮಹಾಯಜ್ಞಗಳೇ ಮೊದಲಾದ ನಿತ್ಯಕರ್ಮಗಳಿಂದಲೂ, ಸರ್ವದೇವೋತ್ತಮನಾದ ಆ ಪರಮಪುರುಷನನ್ನಾರಾಧಿಸುತ್ತ, ಅವುಗಳ ಫಲಕ್ಕೂ ತಾನು ಆಸೆಪಡದೆ, ಆ ಫಲಗಳೆಲ್ಲವನ್ನೂ ತನ್ನ ಮನೋವಾಕ್ಕಾಯಗಳೆಂಬ ತ್ರಿಕರಣಗಳಿಂದಲೂ ಆ ಭಗವಂತನಲ್ಲಿಯೇ ಅರ್ಪಿಸುತ್ತಿದ್ದನು. ಮತ್ತು ಆ ರಾಜನು ತನ್ನ ಕುಲಧರ್ಮದಿಂದಲೂ, ಬ್ರಹ್ಮವಿತ್ತುಗಳ ಪಾದಸೇವೆಯಿಂದ ತನಗೆ ಲಭಿಸಿದ ಭಕ್ತಿಯೋಗದಿಂದಲೂ ಮೇಲೆಮೇಲೆ ತನ್ನ ಮನಸ್ಸನ್ನು ಶುದ್ಧಪಡಿಸಿಕೊಂಡು, ದೇಹಾತ್ಮಭ್ರಾಂತಿಯನ್ನು ಬಿಟ್ಟು, ತನ್ನ ಹೃದಯಾಂತರ್ಯಾಮಿಯಾದ

ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡವನಾಗಿ, ಆ ಆನಂದವನ್ನನುಭವಿಸುತ್ತಿದ್ದನು. ದೇಹಾಭಿಮಾನವನ್ನೂ, ಸ್ವತಂತ್ರಾಭಿಮಾನವನ್ನೂ ತೊರೆದು, ಭೂಮಿಯನ್ನು ಪಾಲಿಸುತ್ತಿದ್ದನು. ರಾಜೇಂದ್ರಾ! ಪೂರ್ವವೃತ್ತಾಂತವನ್ನು ಬಲ್ಲ ಮಹನೀಯರು ಆಗಯನ ಚರಿತ್ರವನ್ನು ಹೀಗೆಂದು ಕೊಂಡಾಡಿರುವರು "ಲೋಕದಲ್ಲಿ ಬೇರೆಯಾವ ರಾಜನೂ ಕರ್ಮಗಳಲ್ಲಿ ಈ ಗಯನನ್ನು ಹೋಲಲಾರನು. ಈ ಗಯನು ವೇದೋಕ್ತ ಗಳಾದ ಅನೇಕ ಯಜ್ಞಗಳನ್ನು ಮುಗಿಸಿದವನು. ಸಮಸ್ತವನ್ನೂ ಬಲ್ಲವನು! ಸಮಸ್ತ ಲೋಕಗಳಿಂದಲೂ ಸಮ್ಮಾನಿಸಲ್ಪಡುತ್ತಿದ್ದವನು! ಧರ್ಮಪರಿಪಾಲಕನು! ಸಮಸ್ತ ಭಾಗ್ಯಗಳನ್ನೂ ಪಡೆದವನು! ಸತ್ಪುರುಷರಿಗೆ ತಾನೇ ಅಧಿಪತಿಯೆನಿಸಿದ್ದರೂ, ಅವರನ್ನೂ ಭಕ್ತಿಯಿಂದ ಸೇವಿಸುತ್ತಿದ್ದವನು. ಸಾಕ್ಷಾದ್ಭಗವದಂತದಿಂದ ಹುಟ್ಟಿದರೆ ಹೊರತು, ಬೇರೆ ಯಾವರಾಜನೂ ಈತನಿಗೆ ಸಮಾನನೆನಿಸಲಾರನು! ಅಮೋಘವಾದ ಅನುಗ್ರಹಶಕ್ತಿಯುಳ್ಳ ಶ್ರದ್ಧೆ, ಮೈತ್ರಿ, ದಯೆ, ಕೀರ್ತಿ, ಶ್ರೀ, ಸ್ಮೃತಿ, ಮೇಧೆ, ಧೃತಿ, ತಿತಿಕ್ಷೆ, ಕ್ಷಮೆಯೆಂಬ ಹೆಸರುಳ್ಳ ದಕ್ಷಕುಮಾರಿಯರೆಲ್ಲರೂ ತಮ್ಮ ತೇಜೋ ಬಲದಿಂದ ಯಾವನನ್ನು ಉತ್ತಮಸ್ಥಿತಿಗೆ ತಂದರೋ, ಕರುವನ್ನು ಕಂಡಾಗ ಸಮೃದ್ಧವಾದ ಹಾಲನ್ನು ಸೊರೆಯಿಸಿಕ್ಕುವ ಧೇನುವಿನಂತೆ, ಭೂದೇವಿಯು ಯಾವನ ಗುಣಗಳನ್ನು ನೋಡಿ, ತನ್ನಿಂದ ಬೇಕುಬೇಕಾದ ಪದಾರ್ಥಗಳನ್ನು ಕರೆಯುತ್ತ ಆತನು ನಿಷ್ಕಾಮನಾಗಿದ್ದರೂ ಆತನ ಪ್ರಜೆಗಳ ಕೋರಿಕೆಗಳೆಲ್ಲವನ್ನೂ ತಾನಾಗಿಯೇ ಈಡೇರಿಸುತ್ತಿದ್ದಳೋ, ಅಂತಹ ಗಯಮಹಾರಾಜನ ಸದ್ಗುಣಗಳನ್ನು ಬೇರೆ ಯಾವರಾಜನು ತಾನೇ ಅನುಸರಿಸಬಲ್ಲನು? ಮತ್ತು ಆ ಗಯನು ನಿಷ್ಕಾಮನಾ ಗಿದ್ದರೂ, ವೇದೋಕ್ತಧರ್ಮಗಳು ತಾವಾಗಿ ಅವನ ಕೋರಿಕೆಗಳನ್ನು ಸಲ್ಲಿಸುವು ತ್ತಿದ್ದವು! ಯುದ್ಧದಲ್ಲಿ ನಿರ್ಜಿತರಾದ ರಾಜರೆಲ್ಲರೂ ತಾವಾಗಿ ಅವನಿಗೆ ಯಥೇಚ್ಛ ವಾದ ಕಪ್ಪಗಳನ್ನು ತಂದೊಪ್ಪಿಸುತ್ತಿದ್ದರು! ಧರ್ಮಪರಿಪಾಲನದಿಂದ ಸಂತುಷ್ಟರಾದ ಬ್ರಾಹ್ಮಣರೆಲ್ಲರೂ, ತಾವು ಪರಲೋಕಸಾಧನೆಗಾಗಿ ಮಾಡಿದ ಧರ್ಮಗಳ ಫಲದಲ್ಲಿ, ಆರನೆಯ ಭಾಗವನ್ನು ಕಂದಾಯವಾಗಿ ಸಲ್ಲಿಸುತ್ತಿದ್ದರು. ಮತ್ತು ಆಗಯನು, ಇಂದ್ರಾದಿದೇವತೆಗಳೆಲ್ಲರೂ ಸೋಮಪಾನದಿಂದ ಮದವೇರುವಂತೆ ಮಹಾವೈಭವ ದಿಂದ ನಡೆಸುತ್ತಿದ್ದ ಯಜ್ಞಗಳಲ್ಲಿ, ನಿಷ್ಕಪಟವಾಗಿಯೂ, ನಿಶ್ಚಲವಾಗಿಯೂ ಇರುವ ಭಕ್ತಿಯೋಗದಿಂದ ಸಮರ್ಪಿಸಿದ ಯಜ್ಞಫಲಗಳನ್ನು ಯಜ್ಞಸ್ವರೂಪನಾದ ಭಗ ವಂತನು ತಾನಾಗಿಯೇ ಬಂದು ಪ್ರೀತಿಯಿಂದ ಕೈಕೊಳ್ಳುತ್ತಿದ್ದನು. ಯಾವ ಭಗ ವಂತನನ್ನು ಸಂತೋಷಪಡಿಸುವುದರಿಂದ, ಬ್ರಹ್ಮದೇವನು ಮೊದಲಾಗಿ ಹುಲ್ಲುಕಡ್ಡಿ ಯವರೆಗೆ ದೇವತಿರ್ಯಙ್ಮನುಷ್ಯಸ್ಥಾವರಗಳೇ ಮೊದಲಾದ ಸಮಸ್ತ ಪ್ರಪಂಚವೂ

ತೃಪ್ತಿಹೊಂದುವುವೋ, ಯಾವನು ಸಮಸ್ತ ಪ್ರಪಂಚಕ್ಕೂ ಪ್ರಾಣಿಭೂತನೋ, ಆ ಭಗವಂತನೇ ಸಾಕ್ಷಾತ್ತಾಗಿ ಅವನ ಯಾಗದಲ್ಲಿ ಸಂಪ್ರೀತನಾಗಿ, ಅವನಿಗೆ ತನ್ನಲ್ಲಿ ಮೇಲೆಮೇಲೆ ಭಕ್ತಿಯೋಗವನ್ನು ಕರುಣಿಸುತ್ತಿದ್ದನು. ಇಂತಹ ಉದಾರಗುಣವುಳ್ಳ ಗಯನನ್ನು ಬೇರೆ ಯಾವರಾಜನು ತಾನೇ ಅನುಕರಿಸಬಲ್ಲನು ?" ಎಂಬುದೇ ಆ ಗಯನ ಗುಣಗಳನ್ನು ವರ್ಣಿಸಿರತಕ್ಕ ಶ್ಲೋಕಾರ್ಥಗಳು. ಓ ಪರೀಕ್ಷಿದ್ರಾಜಾ ! ಇನ್ನು ಆ ತನ ಮುಂದಿನ ಸಂತತಿಯನ್ನು ತಿಳಿಸುವೆನು ಕೇಳು. ಆ ಗಯನಿಗೆ ಜಯಂತಿಯೆಂಬ ಭಾರ್ಯೆಯಲ್ಲಿ, ಚಿತ್ರರಥನೆಂದೂ ಸ್ವಾತಿಯೆಂದೂ ಅವರೋಧನನೆಂದೂ ಮೂವರು ಮಕ್ಕಳು ಜನಿಸಿದರು. ಅವರಲ್ಲಿ ಚಿತ್ರರಥನೆಂಬವನಿಗೆ, ಊರ್ಜೆಯೆಂಬ ಪತ್ನಿಯಲ್ಲಿ ಸಮ್ರಾಜನೆಂಬ ಮಗನು ಹುಟ್ಟಿದನು. ಆತನಿಗೆ ಉತ್ಕಲೆಯೆಂಬ ಪತ್ನಿಯಲ್ಲಿ, ಮರೀಚಿಯೆಂಬವನೂ, ಆ ಮರೀಚಿಗೆ ಬಿಂದುಮತಿಯೆಂಬ ಪತ್ನಿಯಲ್ಲಿ ಬಿಂದುಮಂತನೆಂಬ ಪುತ್ರನೂ, ಆ ಬಿಂದುಮಂತನಿಗೆ ಸುಷೇಣೆಯೆಂಬ ಪತ್ನಿಯಲ್ಲಿ ಮಧುವೆಂಬವನೂ ಮಧುವಿಗೆ ಸುಮನಸೆಯೆಂಬವಳಲ್ಲಿ ವೀರವ್ರತನಂಬ ಪುತ್ರನೂ ಜನಿಸಿದರು. ಹಾಗೆಯೇ ಆ ವೀರವ್ರತನಿಗೆ ಪ್ರಭೋಧೆಯೆಂಬ ಪತ್ನಿಯಲ್ಲಿ ಮಧುವೆಂದೂ, ಪ್ರಮಧುವೆಂದೂ ಇಬ್ಬರು ಮಕ್ಕಳಾದರು. ಆ ಮಧುವಿಗೆ ಸತ್ಯೆಯೆಂಬವಳಲ್ಲಿ ಭೌವನನೆಂಬ ಪುತ್ರನು ಹುಟ್ಟಿದನು. ಅವನಿಗೆ ದೋಷಣೆಯೆಂಬವಳಲ್ಲಿ ತ್ವಷ್ಟೃವೆಂಬವನೂ, ಆತನಿಗೆ ವಿರೋಚನೆಯೆಂಬವಳಲ್ಲಿ ವಿರಜನೆಂಬ ಪುತ್ರನೂ ಜನಿಸಿದರು. ಆ ವಿರಜನಿಗೆ ವಿಷೂಚಿಯೆಂಬ ಭಾರ್ಯೆಯಲ್ಲಿ ಶತ್ರುಜಿತ್ತು ಮೊದಲಾದ ನೂರುಮಂದಿಪುತ್ರರೂ, ಒಬ್ಬ ಕನ್ಯೆಯೂ ಹುಟ್ಟಿದರು. ಕೊನೆಯಲ್ಲಿ ಹುಟ್ಟಿದ ನೂರುಮಂದಿ ಮಕ್ಕಳಿಗೂ ತಂದೆಯಾದ ವಿರಜನು, ಶ್ರೀಮಹಾವಿಷ್ಣುವು ದೇವಕುಲವನ್ನು ಹೇಗೋಹಾಗೆ, ಪ್ರಿಯವ್ರತನ ವಂಶವನ್ನು ತನ್ನ ಎಣೆಯಿಲ್ಲದ ಕೀರ್ತಿಯಿಂದ ಅಲಂಕರಿಸುತ್ತಿದ್ದನು. ಇದು ಹದನೈದಿನೆಯ ಅಧ್ಯಾಯವು.

---

## ಶುಕನು ಪರೀಕ್ಷಿದ್ರಾಜನಿಗೆ ಭೂಮಂಡಲದ ವಿಸ್ತಾರವನ್ನೂ ಅದ್ದನ ದ್ವೀಪಸಮುದ್ರಾದಿ ವಿಭಾಗಗಳನ್ನೂ ತಿವರಿಸಿದುದು

ಪರೀಕ್ಷಿದ್ರಾಜನು ತಿರುಗಿ ಶುಕಮುನಿಯನ್ನು ಕುರಿತು "ಓ ಮಹರ್ಷೀ! ಹಿಂದೆ ನೀನು ಪ್ರಪಂಚಪರಿಮಾಣವನ್ನು ತಿಳಿಸುವಾಗ, ಸೂರ್ಯನು ಎಲ್ಲಿಯವರೆಗೆ ತನ್ನ ಕಿರಣಗಳಿಂದ ಬೆಳಗುವನೋ, ನಕ್ಷತ್ರಸಮೂಹಗಳೊಡನೆ ಚಂದ್ರನು ಎಲ್ಲಿಯವರೆಗೆ ಕಾಣುವನೋ, ಆ ವಿಸ್ತಾರವನ್ನೂ, ಸಪ್ತದ್ವೀಪವಿಭಾಗಗಳನ್ನೂ, ಅವುಗಳ ಪರಿಮಾಣಾದಿಗಳನ್ನೂ ಸಂಗ್ರಹವಾಗಿ ಸೂಚಿಸಿದೆಯಲ್ಲವೇ? ಅವುಗಳ ಬೇರೆ ಬೇರೆ ಲಕ್ಷಣ, ಆಳತೆ, ಮುಂತಾದುವುಗಳನ್ನು ನಾನೂ ಇನ್ನೂ ಚೆನ್ನಾಗಿ ತಿಳಿಯಬೇಕೆಂದಿರುವೆನು. ಆದರೆ "ಭಗವತ್ಕಥೆಗಳನ್ನು ಬಿಟ್ಟು ಇವುಗಳನ್ನು ತಿಳಿಯುವುದರಿಂದ ಲಾಭ"ವೇನೆಂದು ನೀನು ಕೇಳಬಹುದು. ಎಷ್ಟೋ ಲಾಭವುಂಟು. ಸತ್ವಾದಿಗುಣಗಳ ಪರಿಣಾಮದಿಂದ ಹುಟ್ಟಿದ ಈ ಪ್ರಪಂಚವೆಲ್ಲವೂ ಭಗವಂತನ ಸ್ಥೂಲರೂಪವಲ್ಲದೆ ಬೇರೆಯಲ್ಲ. ಈ ಸ್ಥೂಲರೂಪವನ್ನು ಮೊದಲು ಮನನಮಾಡಿಕೊಂಡರೆ, ಅದರಮೇಲೆ ಗುಣಸಂಬಂಧವಿಲ್ಲದುದಾಗಿಯೂ, ಅಂಗುಷ್ಠಪ್ರಮಾಣವುಳ್ಳದಾಗಿಯೂ, ಸ್ವಯಂಪ್ರಕಾಶವಾಗಿಯೂ, ವಾಸುದೇವಾದಿಶಬ್ದಗಳಿಂದ ಬೋಧಿತವಾಗಿಯೂ ಇರುವ ಪರಬ್ರಹ್ಮದಲ್ಲಿ ಆ ಮನಸ್ಸನ್ನು ಸ್ಥಿರವಾಗಿ ನಿಲ್ಲಿಸಿಡಬಹುದು. ಸ್ಥೂಲರೂಪವನ್ನು ತಿಳಿದಮೇಲೆ ಮನಸ್ಸಿಗೆ ಸೂಕ್ಷ್ಮರೂಪವನ್ನು ತಿಳಿಯುವ ಸಾಮರ್ಥ್ಯವುಂಟಾಗುತ್ತದು. ಆದುದರಿಂದ ಓ ಗುರುವರ್ಯಾ! ಆ ವಿವರವನ್ನು ನನಗೆ ತಿಳಿಸಬೇಕು" ಎಂದನು. ಆದಕ್ಕಾ ಶುಕಮುನಿಯು. "ರಾಜೇಂದ್ರಾ, ಕೇಳು! ಬ್ರಹ್ಮಾಂಡಗಳು ಅನಂತವಾಗಿರುವುವು. ಇವೆಲ್ಲವೂ ಭಗವಂತನ ಸತ್ವರಜಸ್ತಮಸುಗಳೆಂಬ ಮಾಯಾಗುಣಗಳಿಂದುಂಟಾದ ಪರಿಣಾಮಗಳು! ಇವೆಲ್ಲವೂ ಭಗವಂತನ ಲೀಲಾವಿಭೂತಿಗಳು! ಇವುಗಳೊಳಗೆ ಅಂತರ್ಗತವಾಗಿರುವ ಬೇರೆಬೇರೆ ಲೋಕಗಳ ಹೆಸರು, ಆಕಾರ, ಮುಂತಾದುವುಗಳೆಲ್ಲವನ್ನೂ ಪೂರ್ತಿಯಾಗಿ ಜಾಯಿಂದ ಹೇಳುವುದಕ್ಕಾಗಲೀ, ಮನಸ್ಸಿನಿಂದ ಊಹಿಸುವುದಕ್ಕಾಗಲೀ ಯಾರಿಗೂ ಸಾಧ್ಯವಿಲ್ಲ. ದೇವತೆಗಳಂತೆ ಚಿರಾಯುಸ್ಸನ್ನು ಪಡೆದು ಬಂದ ಮನುಷ್ಯನಾದರೂ, ಅವೆಲ್ಲವನ್ನೂ ಪೂರ್ಣವಾಗಿ ಮುಗಿಸುವುದಕ್ಕೆ ಸಮರ್ಥನಲ್ಲ. ಆದುದರಿಂದ ಅವುಗಳ ಮುಖ್ಯಭಾಗಗಳ ಹೆಸರು, ಆಳತೆ, ಅವುಗಳಲ್ಲಿರತಕ್ಕ ಒಳಭೇದಗಳು, ಅವುಗಳ ಬೇರೆಬೇರೆ ಲಕ್ಷಣಗಳು, ಇವುಗಳನ್ನು ಮಾತ್ರ ಸ್ವಲ್ಪವಾಗಿ ವಿವರಿಸುವೆನು ಕೇಳು. ಈಗ ನಾವಿರುವ ಸ್ಥಲವೇ ತ್ರಸಿದ್ಧವಾದ ಜಂಬೂದ್ವೀಪವೆ

ನಿಸುವುದು. ಇದು ಈ ಭೂಮಂಡಲವೆಂಬ ಕಮಲದ ಒಳದಳಗಳಂತೆ ಎಲ್ಲಾ ದ್ವೀಪಗಳ ನಡುವೆ ಪ್ರಕಾಶಿಸುತ್ತ, ಸುತ್ತಳತೆಯಲ್ಲಿ ಲಕ್ಷಯೋಜನವಿಸ್ತೀರ್ಣವಾಗಿ ಸಮವರ್ತುಲಾಕಾರದಿಂದಿರುವುದು. ಇವರಲ್ಲಿ ವರ್ಷಗಳೆಂಬ ಒಂಬತ್ತು ವಿಭಾಗಗಳುಂಟು. ಒಂದೊಂದುವರ್ಷವೂ ಒಂಬತ್ತು ಸಹಸ್ರಯೋಜನಗಳ ಅಳತೆಯಿಂದಿರುವುವು. ಈವರ್ಷಗಳನ್ನು ಬೇರೆಬೇರೆವಿಭಾಗಿಸಿತೋರಿಸತಕ್ಕ ಎಲ್ಲೆಯಕಲ್ಲುಗಳಂತೆ, ನೀಲ, ಶ್ವೇತ, ಶೃಂಗವಂತ, ನಿಷಧ, ಹೇಮಕೂಟ, ಹಿಮಾಲಯ, ಮಾಲ್ಯವಂತ, ಗಂಧಮಾದನಗಳೆಂಬ ಎಂಟುಪರ್ವತಗಳು ಆ ವರ್ಷಗಳ ನಡುನಡುವೆ ಸೇರಿರುವುವು. ಈ ವರ್ಷಗಳಲ್ಲಿ ಇಲಾವೃತವೆಂಬುದು ಎಲ್ಲಕ್ಕಿಂತಲೂ ನಡುವೆ ಇರುವುದು. ಆ ಇಲಾವೃತವರ್ಷದಮಧ್ಯದಲ್ಲಿ, ಕುಲಗಿರಿಗಳಿಗೆ ಪ್ರಧಾನವೆನಿಸಿಕೊಂಡ ಮೇರುವೆಂಬ ಸುವರ್ಣಪರ್ವತವಿರುವುದು. ಆ ಪರ್ವತವು ಔನ್ನತ್ಯದಲ್ಲಿ ಜಂಬೂದ್ವೀಪದ ಅಗಲದಷ್ಟು ಎಂದರೆ ಲಕ್ಷಯೋಜನಪ್ರಮಾಣವುಳ್ಳದು. ಭೂಮಂಡಲವೆಂಬ ಕಮಲಕ್ಕೆ ಈ ಪರ್ವತವೇ ಕರ್ಣಿಕೆಯಂತಿರುವುದು. ಈ ಪರ್ವತವು ತುದಿಯಲ್ಲಿ ಮುನ್ನೂರತ್ತೆರಡು ಸಹಸ್ರಯೋಜನಗಳ ಸುತ್ತಳತೆಯುಳ್ಳದಾಗಿಯೂ, ಬುಡದಲ್ಲಿ ಹದಿನಾರು ಸಹಸ್ರಯೋಜನಗಳ ಸುತ್ತಳತೆಯುಳ್ಳದಾಗಿಯೂ ಇರುವುದು. ಹಾಗೆಯೇ ನೆಲಹೊಳಗೂ ಹದಿನಾರು ಸಹಸ್ರಯೋಜನಗಳವರೆಗೆ ವ್ಯಾಪಿಸಿರುವುದು. ಇಲಾವೃತವರ್ಷದ ಉತ್ತರಕ್ಕೆ, ನೀಲ, ಶ್ವೇತ, ಶೃಂಗವಂತಗಳೆಂಬ ಮೂರು ಪರ್ವತಗಳು ಕ್ರಮವಾಗಿ ರಮ್ಯಕ, ಹಿರಣ್ಮಯ, ಕುರುಗಳೆಂಬ ಮೂರುವರ್ಷಗಳಿಗೆ ಎಲ್ಲೆಕಟ್ಟುಗಳಾಗಿರುವುವು. ಈ ಪರ್ವತಗಳೆಲ್ಲವೂ ಪೂರ್ವಪಶ್ಚಿಮವಾಗಿ ವ್ಯಾಪಿಸಿ, ಎರಡು ದಿಕ್ಕುಗಳಲ್ಲಿಯೂ, ಲವಣಸಮುದ್ರವನ್ನು ಮುಟ್ಟುತ್ತಿರುವುವು. ಒಂದೊಂದುಪರ್ವತವೂ ಎರಡುಸಹಸ್ರಯೋಜನಗಳಷ್ಟು ವಿಶಾಲವಾಗಿರುವುವು. ಇವುಗಳಲ್ಲಿ ಹಿಂದಿನದಕ್ಕಿಂತಲೂ ಮುಂದಿನದು, ಉದ್ದಗಲದಲ್ಲಿಮಾತ್ರ, ಹತ್ತೊಂದರಲ್ಲಿ ಒಂದು ಪಾಲಿನಷ್ಟು ಚಿಕ್ಕದಾಗಿರುವುವು. ಇವುಗಳಂತೆಯೇ ಇಲಾವೃತದ ದಕ್ಷಿಣಭಾಗದಲ್ಲಿ ನಿಷಧ, ಹೇಮಕೂಟ, ಹಿಮಾಲಯಗಳೆಂಬ ಮೂರುಪರ್ವತಗಳು, ಪೂರ್ವಪಶ್ಚಿಮವಾಗಿ ವ್ಯಾಪಿಸಿ, ಆಳತೆಯಲ್ಲಿಯೂ ಹಿಂದೆ ಹೇಳಿದ ನೀಲಾದಿ ಪರ್ವತಗಳಂತೆಯೇ ಇರುವುವು. ಇವು ಕ್ರಮವಾಗಿ ಹರಿ, ಕಿಂಪುರುಷ, ಭಾರತವರ್ಷಗಳಿಗೆ ಎಲ್ಲೆಕಟ್ಟಾಗಿರುವುವು. ಹಾಗೆಯೇ ಇಲಾವೃತದ ಪೂರ್ವಕ್ಕೆ ಗಂಧಮಾದನವೂ, ಪಶ್ಚಿಮಕ್ಕೆ ಮಾಲ್ಯವಂತವೂ, ಉಭಯಪಾರ್ಶ್ವಗಳಲ್ಲಿರುವ ನೀಲ ನಿಷಧಪರ್ವತಗಳವರೆಗೂ ವ್ಯಾಪಿಸಿ, ಎರಡು ಸಹಸ್ರಯೋಜನಗಳ ಅಳತೆಯುಳ್ಳದಾಗಿ, ಒಂದು ಕಡೆಯಲ್ಲಿ ಭದ್ರಾಶ್ವವೆಂಬ ವರ್ಷಕ್ಕೂ, ಮತ್ತೊಂದುಕಡೆಯಲ್ಲಿ ಕೇತುಮಾಲವೆಂಬ ವರ್ಷಕ್ಕೂ ಎಲ್ಲೆಕಟ್ಟಾಗಿರುವುವು.

ಇದಲ್ಲದೆ ಮೇರುವಿಗೆ ಪೂರ್ವಾದಿಚತುರ್ದಿಕ್ಕುಗಳಲ್ಲಿಯೂ, ಕ್ರಮವಾಗಿ, ಮಂದರ, ಮೇರುಮಂದರ, ಸುಪಾರ್ಶ್ವ, ಕುಮುದವೆಂಬ ನಾಲ್ಕು ಪರ್ವತಗಳು, ಹತ್ತು ಸಾವಿರ ಯೋಜನಗಳ ಪ್ರಮಾಣವುಳ್ಳವುಗಳಾಗಿ, ಆ ಮೇರುಪರ್ವತದ ಸುತ್ತಲೂ ಜಗತಿ ಕಟ್ಟುಗಳಂತೆ ಏರ್ಪಟ್ಟಿರುವುವು. ಈ ನಾಲ್ಕು ಪರ್ವತಗಳಲ್ಲಿ ಕ್ರಮವಾಗಿ. ಮಾವು, ನೇರಳೆ, ಕಡವು, ಆಲವೆಂಬ ನಾಲ್ಕು ಬಗೆಯ ಗಿಡಗಳು ಆ ಪರ್ವತಗಳ ಜಯಧ್ವಜಗಳಂತೆ ಹನ್ನೊಂದು ಸಹಸ್ರ ಯೋಜನಗಳ ಎತ್ತರಕ್ಕೂ ನೂರುಯೋಜನಗಳಅಗಲಕ್ಕೂ ಶಾಖೋಪಶಾಖೆಯಿಂದ ಹರಡಿರುವುವು. ಮತ್ತು ಆ ನಾಲ್ಕುಬೆಟ್ಟಗಳಲ್ಲಿ ಕ್ರಮವಾಗಿ ಹಾಲು, ಜೇನು, ಕಬ್ಬಿನರಸ, ಶುದ್ಧಜಲ ಇವುಗಳಿಂದ ತುಂಬಿದ ನಾಲ್ಕುಮಡುಗಳುಂಟು. ಓ ರಾಜೇಂದ್ರ! ಈ ಮಡುಗಳಲ್ಲಿ ಸ್ನಾನಪಾನಗಳನ್ನು ಮಾಡುತ್ತಿರುವ ಗಂಧರ್ವಸಮೂಹವು. ಜನ್ಮಸಿದ್ಧವಾದ ಅಣಿಮಾದಿಸಿದ್ಧಿಗಳನ್ನು ಪಡೆದು ಸುಖಿಸುತ್ತಿರುವುದು. ಮತ್ತು ಆ ನಾಲ್ಕುಬೆಟ್ಟಗಳಲ್ಲಿಯೂ, ಕ್ರಮವಾಗಿ ನಂದನವೆಂದೂ, ಚೈತ್ರರಥವೆಂದೂ, ವೈಭ್ರಾಜಕವೆಂದೂ, ವಿಶ್ವತೋಭದ್ರವೆಂದೂ ಹೆಸರುಗೊಂಡ, ನಾಲ್ಕುದಿವ್ಯೋದ್ಯಾನಗಳುಂಟು. ಆಲ್ಲಿ ಯಾವಾಗಲೂ ದೇವಸ್ತ್ರೀಯರು ತಮ್ಮತಮ್ಮ ಪತಿಗಳೊಡಗೂಡಿ ಬಂದು, ಗಂಧರ್ವರಿಂದ ಸ್ತುತಿಸಲ್ಪಡುತ್ತ, ಸಂತೋಷದಿಂದ ವಿಹರಿಸುತ್ತಿರುವರು. ಆ ಮಂದರಪರ್ವತಾಗ್ರಕ್ಕೆ ಸ್ವಲ್ಪಕೆಳಭಾಗದಲ್ಲಿ, ಒಂದುಸಾವಿರದ ನೂರುಯೋಜನಗಳ ಎತ್ತರಕ್ಕೆ ಬೆಳೆದಿರುವ (ದೇವಚೂತವೆಂಬ) ಒಂದು ಮಾವಿನ ಮರವುಂಟಷ್ಟೆ? ಅದು ಪರ್ವತ ಶಿಖರದಂತೆ ದೊಡ್ಡದಾಗಿಯೂ. ಅಮೃತಸಮಾನವಾಗಿಯೂ ಇರುವ ಫಲಗಳನ್ನು ಕೊಡುತ್ತಿರುವುದು. ಇವು ಪಕ್ವವಾಗಿ ಕೆಳಗೆ ಬಿದ್ದು ಒಡೆಯುವಾಗ, ಅದರಿಂದ ಪ್ರವಹಿಸುತ್ತಿರುವ ಹಣ್ಣಿನ ರಸವು ಅತ್ಯಂತಮಧುರವಾಗಿಯೂ, ಸುಗಂಧವಿಶಿಷ್ಟವಾಗಿಯೂ ಇರುವುದಲ್ಲದೆ, ಇನ್ನೂ ಅನೇಕವಸ್ತುಗಳ ಸುವಾಸನೆಯಿಂದ ಪರಿಮಳಿತವಾಗಿ ನದೀರೂಪದಿಂದ ಹರಿಯುತ್ತಿರುವುದು. ಈನದಿಯ ಬಣ್ಣವು ಕೆಂಪಾಗಿರುವುದರಿಂದ ಇದನ್ನು ಅರಣೋದೆಯೆಂದು ಕರೆಯುವರು. ಈ ಅರಣೋದೆಯೆಂಬ ನದಿಯು, ಮಂದರಶಿಖರದಿಂದ ಕೆಳಕ್ಕೆ ಪ್ರವಹಿಸಿ, ಇಳಾವೃತಖರ್ಷದ ಪೂರ್ವಭಾಗವೆಲ್ಲವನ್ನೂ ಜಲಸಮೃದ್ಧವಾಗಿ ಮಾಡುತ್ತಿರುವುದು. ಪಾರ್ವತೀದೇವಿಯ ಅನುಚರಸ್ತ್ರೀಯರೆಲ್ಲರೂ, ಆನದಿಯ ರಸವನ್ನೇ ಪಾನಮಾಡುತ್ತಿರುವುದರಿಂದ, ಅವರ ಮೇಲೆ ಬೀಸಿ ಬಂದ ಗಾಳಿಯು ಸಮಸ್ತದಿಕ್ಕುಗಳಲ್ಲಿಯೂ. ಹತ್ತು ಯೋಜನದೂರಗಳವರೆಗೆ ಸುಗಂಧವಿಶಿಷ್ಟವಾಗಿ ಮಾಡುತ್ತಿರುವುದು. ಇನ್ನು ಆಸ್ತ್ರೀಯರ ಶರೀರಗಂಧವು ಹೇಗಿರುವುದೆಂಬುದನ್ನು ಕೇಳಬೇಕೇ? ಮೇರುಮಂದರವೆಂಬ ಪರ್ವತಶಿಖರದ

ಮೇಲೆ ಜಂಬೂವೃಕ್ಷವಿರುವುದೆಂದು ಹೇಳಿದೆನಲ್ಲವೇ? ಆದರಲ್ಲಿ ಬಿಡತಕ್ಕ ನೇರಳೇ ಹಣ್ಣುಗಳು ಆನೆಯ ದೇಹದಷ್ಟು ದೊಡ್ಡವುಗಳಾಗಿರುವುವು. ಒಳಗಿನ ಬೀಜವು ಬಹುಸೂಕ್ಷ್ಮವಾಗಿರುವುದು. ಈ ಹಣ್ಣಿಗಳು ಪಕ್ವವಾಗಿ ಕೆಳಗೆ ಬಿದ್ದು ಒಡೆದಾಗ ಅದರಿಂದುಂಟಾದ ಹಣ್ಣಿನ ರಸವು ಜಂಬೂನದಿಯೆಂಬ ಹೆಸರಿನಿಂದ ಪ್ರವಹಿಸಿ, ಇಳಾವೃತದ ದಕ್ಷಿಣಭಾಗದಲ್ಲೆಲ್ಲಾ ವ್ಯಾಪಿಸಿರುವುದು. ಆ ನದಿಯು ಪ್ರವಹಿಸುವಾಗ, ಅದರ ಎರಡುಪಾರ್ಶ್ವದ ತೀರಗಳಲ್ಲಿಯೂ ಇರುವ ಮಣ್ಣು, ಆ ಜಂಬೂರಸ ಸೋಡನೆ ಕಲೆತು ಬಿಸಿಲುಗಾಳಿಗಳ ಸಂಯೋಗದಿಂದ ಒಂದುವಿಧವಾದ ಪಾಕವನ್ನು ಹೊಂದಿ ಸುವರ್ಣವೆನಿಸುವುದು. ಹೀಗೆ ಜಂಬೂನದಿಯಿಂದ ಹುಟ್ಟಿದುದಕ್ಕಾಗಿಯೇ ಸುವರ್ಣಕ್ಕೆ ಜಾಂಬೂನದವೆಂದು ಹೆಸರುಂಟಾಯಿತು. ಈಸುವರ್ಣದಿಂದಲೇ ದೇವತೆಗಳು, ತಮಗೂ, ತಮ್ಮ ಸ್ತ್ರೀಯರಿಗೂ ಬೇಕಾದ ಕಿರೀಟಕುಂಡಲಾದ್ಯಾಭರಣಗಳನ್ನು ಮಾಡಿಸಿ ಧರಿಸುತ್ತಿರುವರು. ಸುಪಾರ್ಶ್ವವೆಂಬ ಪರ್ವತದಮೇಲೆ ದೊಡ್ಡ ಕದಂಬ ವೃಕ್ಷವುಂಟೆಂದು ಹೇಳಿದೆನಲ್ಲವೇ? ಆ ವೃಕ್ಷದ ಬಿಲಗಳಲ್ಲಿ, ಐದುಕಡೆಗಳಿಂದ ಜೇನಿನ ಪ್ರವಾಹವು ಸುರಿಯುತ್ತಿರುವುದು. ಈಒಂದೊಂದುಧಾರೆಯೂ ಐದೈದು ಮಾರು ನಷ್ಟು ಅಗಲವಾಗಿ ಬೀಳುತ್ತಿರುವುದು. ಈ ಮಧುಧಾರೆಗಳು ಸುಪಾರ್ಶ್ವಶಿಖರದಿಂದ ಕೆಳಗೆ ಬಿದ್ದು, ಆ ಪರ್ವತದ ತಪ್ಪಲನ್ನೂ, ಇಳಾವೃತದ ಪಶ್ಚಿಮಭಾಗವನ್ನೂ ಪರಿಮಳಿಸುತ್ತಿರುವುದು. ಈ ಜೇನಿನ ರಸವನ್ನು ಪಾನಮಾಡಿದವರ ಉಸಿರಿನಗಾಳಿಯು, ವಾಯುಮಂಡಲದಲ್ಲಿ ಕಲೆತು, ನಾಲ್ಕುಕಡೆಗೂ ನೂರುಯೋಜನಗಳದೂರದವರೆಗೆ ಸುಗಂಧವಿಶಿಷ್ಟವಾಗಿ ಮಾಡುತ್ತಿರುವುದು. ಅತ್ತಲಾಗಿ ಕುಮುದಪರ್ವತದಮೇಲೆ ಬೆಳೆವಿರುವ ಆಲದ ಮರವೊಂದುಂಟೆಂದು ಹೇಳಿದೆನಲ್ಲವೇ? ಆದಕ್ಕೆ ಶತವಲಿಶವೆಂದೂ ಹೆಸರು. ಅದರ ಕೊಂಬೆಗಳಿಂದ ಕೆಲವು ನದಿಗಳು ಬೀಳುತ್ತಿರುವುವು. ಇವು ಹಾಲು, ಮೊಸರು, ಜೇನು, ತುಪ್ಪ, ಬೆಲ್ಲ, ಅನ್ನ, ಮೊದಲಾದ ಭಕ್ಷ್ಯಪದಾರ್ಥಗಳನ್ನೂ, ವಸ್ತ್ರಾಭರಣವೇ ಮೊದಲಾದ ಭೋಗಸಾಮಗ್ರಿಗಳನ್ನೂ, ಹಾಸಿಗೆ ಮೊದಲಾದ ಇನ್ನೂ ಬೇರೆಬೇರೆ ಕೋರಿಕೆಗಳನ್ನೂ, ಈಡೇರಿಸಬಲ್ಲುವು. ಈ ನದಿಗಳು ಕುಮುದಪರ್ವತದಿಂದ ಕೆಳಕ್ಕಿಳಿದು, ಇಳಾವೃತದ ಉತ್ತರಭಾಗದಲ್ಲಿರುವ ಜನರನ್ನು ಸರ್ವವಿಧದಿಂದಲೂ ತೃಪ್ತಿಪಡಿಸುತ್ತಿರುವುದು. ಈ ನದಿಗಳಲ್ಲಿ ಸ್ನಾನಪಾನಾದಿಗಳನ್ನು ಮಾಡತಕ್ಕವರು ಯಾವಜ್ಜೀವವೂ ಸುಖಿಗಳಾಗಿಯೇ ಇರುವರು. ಅವರ ದೇಹದಲ್ಲಿ ನರೆ, ಸುಕ್ಕು, ಮೊದಲಾದ ವಾರ್ಧಕಚಿಹ್ನಗಳಾಗಲೀ, ಆಧಿವ್ಯಾಧಿ, ಬೆವರು, ದುರ್ಗಂಧ, ಮುಂತಾದುವುಗಳಾಗಲೀ, ಎಂದಿಗೂ ಉಂಟಾಗಲಾರವು. ಅವರು ಮರಣಕ್ಕಾಗಲೀ, ಆಪತ್ತು

ತ್ಯುವಿಗಾಗಲೀ, ಗುರಿಯಾಗಲಾರರು. ಮತ್ತು ಅವರಿಗೆ ಶೀತೋಷ್ಣಗಳಿಂದುಂಟಾಗುವ ಬಾಧೆಗಳಾಗಲೀ, ರಾಗ ದ್ವೇಷ ಭಯಾದಿ ಮನೋವಿಕಾರಗಳಾಗಲೀ, ತೋರಲಾರವು. ಇದಲ್ಲದೆ ಭೂಮಂಡಲವೆಂಬ ಕಮಲಕ್ಕೆ ಕರ್ಣಿಕೆಯಂತಿರುವ ಮೇರುವಿನ ಸುತ್ತಲೂ, ಕುರಂಗ, ಕುರರ, ಕುಸುಂಭ, ವೈಕಂಕತ, ತ್ರಿಕೂಟ, ಶಿಶಿರ, ಪತಂಗ, ರುಚಕ, ನಿಷಾದ, ಸಿತಿವಾಸ, ಕಪಿಲ, ಶಂಖ, ವೈಡೂರ್ಯ, ಹಾರುವಿಹಂಗ, ಋಷಭ, ನಾಗ, ಕಾಲಾಂಜನ, ನಾರದ, ಇವೇ ಮೊದಲಾದ ಪರ್ವತಗಳು ಆ ಕಮಲದ ಕುಸುರಿಗಳಂತೆ ಶೋಭಿಸುತ್ತಿರುವುವು. ಇವುಹೊರತು ಮೇರುವಿಗೆ ಪೂರ್ವಭಾಗದಲ್ಲಿ ಸಹಸ್ರಯೋಜನಗಳ ದೂರದಿಂದಾಚೆಗೆ ಜಠರ ದೇವಕೂಟಗಳೆಂಬ ಬೇರೆ ಎರಡು ಬೆಟ್ಟಗಳು ಕಾಣುತ್ತಿರುವುವು. ಅವೆರಡೂ ಹದಿನೆಂಟುಸಹಸ್ರಯೋಜನಗಳಷ್ಟು ಉದ್ದವಾಗಿಯೂ, ಅಗಲದಲ್ಲೆಯೂ, ಎತ್ತರದಲ್ಲಿಯೂ ಎರಡು ಸಾವಿರಯೋಜನಗಳ ಅಳತೆಯುಳ್ಳದಾಗಿಯೂ ಇರುವುವು. ಇದೇರೀತಿಯಲ್ಲಿ ಮೇರುವಿನ ಪಶ್ಚಿಮಕ್ಕೆ ಪವನ ಪಾರಿಯಾತ್ರಕಗಳೆಂದೂ, ದಕ್ಷಿಣಕ್ಕೆ ಕೈಲಾಸ ಕರವೀರಗಳೆಂದೂ, ಉತ್ತರಕ್ಕೆ ತ್ರಿಶೃಂಗ ಮಕರಗಳೆಂದೂ ಎರಡೆರಡು ಪರ್ವತಗಳುಂಟು. ಹೀಗೆ ಎಂಟುಪರ್ವತಗಳಿಂದ ಪರಿವೃತವಾದ ಮೇರುಗಿರಿಯು, ದರ್ಭಾಸ್ತರಣಗಳಿಂದ ಪರಿವೇಷ್ಟಿತವಾದ ಯಾಗಾಗ್ನಿಯಂತೆ ಪ್ರಕಾಶಿಸುತ್ತಿರುವುದು. ಆ ಮೇರುಶಿಖರದ ಮಧ್ಯಭಾಗದಲ್ಲಿ ಚತುರ್ಮುಖನಿಂದ ನಿರ್ಮಿತವಾದ ಶಾತಕುಂಭಿಯೆಂಬ ಪಟ್ಟಣವುಂಟು. ಅದು ಸಮಚತುರಶ್ರ (ಚಚ್ಚೌಕ) ವಾಗಿ ಹತ್ತು ಸಾವಿರಯೋಜನದಷ್ಟು ಅಗಲವಾಗಿರುವುದು. ಅದರ ಸುತ್ತಿನ ಎಂಟುದಿಕ್ಕುಗಳಲ್ಲಿಯೂ ಇಂದ್ರಾದ್ಯಷ್ಟದಿಕ್ಪಾಲಕರಿಂದ ಪಾಲಿಸಲ್ಪಡುವ ಎಂಟುಪ್ರಧಾನಪುರಗಳುಂಟು. ಇವುಗಳಿಗೆ ಕ್ರಮವಾಗಿ ಅಮರಾವತಿ, ತೇಜೋವತಿ, ಸಂಯಮನಿ, ಕೃಷ್ಣಾಂಗನೆ, ಶ್ರದ್ಧಾವತಿ, ಗಂಧವತಿ, ಮಹೋದಯೆ, ಯಶೋವತಿಯೆಂದು ಹೆಸರು. ಈ ಒಂದೊಂದು ಪುರವೂ ಎರಡೂವರೆ ಸಹಸ್ರಯೋಜನಗಳ ವಿಸ್ತಾರವುಳ್ಳದು.” ಎಂದನು. ಇದು ಹದಿನಾರನೆಯ ಅಧ್ಯಾಯವು.

---

## ಗಂಗಾವತರಣವು. ಮತ್ತು ಇಳಾವೃತವೇ ಮೊದಲಾದ ಅಯಾವರ್ಷಗಳಲ್ಲಿ ಆರಾಧಿಸಲ್ಪಡುವ ಭಗವತ್ಸ್ವರೂಪಗಳು.

ರಾಜೇಂದ್ರಾ ಕೇಳು! ಪೂರ್ವದಲ್ಲಿ ಯಾಗಸ್ವರೂಪಿಯಾದ ವಿಷ್ಣುಮೂರ್ತಿಯು, ವಾಮನರೂಪದಿಂದವತರಿಸಿ, ತನ್ನ ಮೂಂಡಿಗಳಿಂದ ಬ್ರಹ್ಮಾಂಡವನ್ನು ಳೆಯುವುದಕ್ಕೆ ಯತ್ನಿಸಿದನಷ್ಟೆ? ಆಗ ಆತನು ಊರ್ಧ್ವಲೋಕಗಳನ್ನು ಳೆಯುವುದಕ್ಕಾಗಿ ತನ್ನ ಎಡಗಾಲನ್ನು ಮೇಲೆ ನೀಡಿದಾಗ, ಆ ಪಾದದ ಹೆಬ್ಬರಳಿನ ಉಗುರಿನಿಂದ, ಬ್ರಹ್ಮಾಂಡಕಟಾಹದ ಮೇಲಿನ ಮುಚ್ಚಲದಲ್ಲಿ ಒಂದು ರಂಧ್ರವುಂಟಾಯಿತು. ಆ ರಂಧ್ರದ ಮೂಲಕವಾಗಿ ಹೊರಗಿನ ಆವರಣಜಲವು, ಈ ಬ್ರಹ್ಮಾಂಡಕಟಾಹದೊಳಗೆ ಪ್ರವೇಶಿಸಿತು. ಆ ತ್ರಿವಿಕ್ರಮಮೂರ್ತಿಯ ಪಾದಕಮಲದಲ್ಲಿದ್ದ ಕುಂಕುಮ ಬಣ್ಣದಿಂದ ಕೂಡಿದ ಆ ಜಲಧಾರೆಯು, ಕಮಲಕೇಸರದಿಂದ ಶೋಭಿತವಾದಂತೆ ಪ್ರಕಾಶಿಸುತ್ತಿತ್ತು. ಸಹಜವಾಗಿಯೇ ಸಕಲಪಾಪನಿವಾರಕವಾದ ಆ ಜಲವು ಭಗವಂತನ ಪಾದಸ್ಪರ್ಶದಿಂದ ಮತ್ತಷ್ಟು ಪವಿತ್ರವಾಯಿತು. ಸ್ನಾನಪಾನಗಳಿಂದ ಸಮಸ್ತಪಾಪಗಳನ್ನೂ ನೀಗಿಸತಕ್ಕ ಆ ಜಲಪ್ರವಾಹವು ಅಲ್ಲಿ ಬೇರೆನಾಮಾಂತರಗಳಿಲ್ಲದೆ ವಿಷ್ಣುಪದಿಯೆಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಈ ಜಲಪ್ರವಾಹವು ಅನೇಕ ಯುಗಸಹಸ್ರಗಳವರೆಗೆ ಆಕಾಶದಲ್ಲಿ ಎಲ್ಲಕ್ಕಿಂತಲೂ ಮೇಲೆನಿಸಿದ ಊರ್ಧ್ವಲೋಕದಲ್ಲಿಯೇ ಪ್ರವಹಿಸುತ್ತಿತ್ತು. ರಾಜೇಂದ್ರಾ! ಈ ಸ್ಥಾನಕ್ಕೂ ವಿಷ್ಣುಪದವೆಂದೇ ಹೆಸರು. ಉತ್ತಾನಪಾದನ ಮಗನಾಗಿಯೂ, ದೃಢವ್ರತನಾಗಿಯೂ, ಪರಮಭಾಗವತೋತ್ತಮನಾಗಿಯೂ ಇರುವ ಧ್ರುವನಿಗೆ, ಇದು ನಿವಾಸಸ್ಥಾನವಾದುದರಿಂದ ಇದನ್ನು ಧ್ರುವಲೋಕವೆಂದೂ ಹೇಳುವರು. ಈಗಲೂ ಆ ಧ್ರುವನು ಭಗವಂತನ ಪಾದಸ್ಪರ್ಶದಿಂದುಂಟಾದ ಆ ತೀರ್ಥವನ್ನು ನೋಡಿ, ಮೇಲೆಮೇಲೆ ಭಕ್ತಿ ಹೆಚ್ಚುತ್ತಿರುವುದರಿಂದಕರಗಿದಮನಸ್ಸುಳ್ಳವನಾಗಿ, ಆ ಭಗವಂತನಲ್ಲಿತನಗುಂಟಾದ ಪ್ರೇಮಾತಿಶಯದಿಂದ ಮೈಮರೆತು ಅರ್ಧನಿಮಿಲಿತಗಳಾದ ನೇತ್ರಗಳಿಂದ ಆನಂದಬಾಷ್ಪವನ್ನು ತುಳುಕಿಸುತ್ತ, ಆ ಆನಂದದಿಂದ ಪುಳಕಿತವಾದ ಮೈಯುಳ್ಳವನಾಗಿ, ತನ್ನ ಕುಲದೇವತೆಯ ಪಾದತೀರ್ಥವೆಂದು ಅದನ್ನು ಆಗಾಗ ತಲೆಯಿಂದ ಧರಿಸುತ್ತಿರುವನು. ಇದನ್ನು ನೋಡಿ ಆ ಧ್ರುವಮಂಡಲವನ್ನು ಸುತ್ತಿ ತಿರುಗುತ್ತಿರುವ ಸಪ್ತರ್ಷಿಗಳೂಕೂಡ, ತಮ್ಮ ತಪಸ್ಸಿಗೆ ಇದೇ ಉತ್ತಮಫಲವೆಂದು ತಿಳಿದು, ಬಹುಮಾನಪುರಸ್ಸರವಾಗಿ ಆ ತೀರ್ಥವನ್ನು ತಮ್ಮ ಜಟಾಭಾರಗಳಿಂದ ಧರಿಸುವರು. ಸರ್ವಾಂತರಾತ್ಮನಾದ ವಾಸುದೇವನಲ್ಲಿ ತಮಗುಂಟಾದ ಭಕ್ತಿಯೋಗದಿಂದ, ಧರ್ಮ

ರ್ಥಕಾಮಗಳೇ ಮೊದಲಾದ ಬೇರೆ ಪುರುಷಾರ್ಥಗಳಿಗಾಗಲೀ, ಕೊನೆಗೆ ಕೈವಲ್ಯ ಕ್ಕಾಗಲೀ ಆಸೆಪಡದ ಈ ಮಹರ್ಷಿಗಳು, ಮುಮುಕ್ಷುಗಳು ಮುಕ್ತಿಯನ್ನು ಹೇಗೋ ಹಾಗೆ ಅತೀರ್ಥವನ್ನು ಅತ್ಯಾದರದಿಂದ ಕೈಕೊಳ್ಳುತ್ತಿರುವರು. ಹೀಗೆ ಮಹಾತ್ಮನಾದ ಧ್ರುವನಿಂದಲೂ, ಸಪ್ತರ್ಷಿಗಳಿಂದಲೂ ಬಹುಮಾನಿಸಲ್ಪಡುತ್ತಿರುವ ಆ ಪುಣ್ಯ ನದಿಯು, ಅನೇಕಸಹಸ್ರಕೋಟಿ ದೇವವಿಮಾನಗಳಿಂದ ತುಂಬಿದ ಆಕಾಶಮಾರ್ಗ ದಿಂದ ಕೆಳಗಿಳಿಯುತ್ತ, ಚಂದ್ರಲೋಕವನ್ನು ದಾಟಿ ಮೇರುಶಿಖರದಲ್ಲಿರುವ ಬ್ರಹ್ಮಪುರದಲ್ಲಿ ಬಂದು ಬೀಳುವುದು. ಅಲ್ಲಿ ನಾಲ್ಕು ಶಾಖೆಗಳಾಗಿ ಒಡೆದು, ಸೀತೆ ಯೆಂದೂ, ಅಲಕನಂದೆಯೆಂದೂ, ಚಕ್ಷುವೆಂದೂ, ಭದ್ರೆಯೆಂದೂ ಬೇರೆಬೇರೆ ಹೆಸರು ಗಳಿಂದ ನಾಲ್ಕುದಿಕ್ಕುಗಳಿಗೂ ಹೊರಟು, ಕೊನೆಗೆ ಸಮುದ್ರವನ್ನು ಪ್ರವೇಶಿಸು ವುದು. ಈ ನಾಲ್ಕು ಶಾಖೆಗಳಲ್ಲಿ, ಪೂರ್ವಾಭಿಮುಖವಾಗಿ ಹೊರಟ ಸೀತೆಯೆಂಬ ಪ್ರವಾಹವು, ಮೊದಲು, ಮೇರುವಿನ ತಳದಲ್ಲಿರುವ ಕೇಸರ, ಅವಷ್ಟಂಭ ಮೊದಲಾದ ಪರ್ವತಶಿಖರಗಳ ಮಾರ್ಗವಾಗಿ ಹರಿದು, ಅವುಗಳ ಕೆಳಗೆ ಕ್ರಮಕ್ರಮವಾಗಿ ಕುಮು ದಕುಕುರಾದಿಪರ್ವತಶಿಖರಗಳಿಂದ ಕೆಳಗಿಳಿದು, ಗಂಧಮಾದನಪರ್ವತದಮೇಲೆ ಬಿದ್ದು, ಅಲ್ಲಿಂದ ಹೊರಟು, ಭದ್ರಾಶ್ವವರ್ಷದಲ್ಲಿ ಪೂರ್ವಾಭಿಮುಖವಾಗಿಯೇ ಪ್ರವಹಿಸುತ್ತ ಬಂದು, ಕೊನೆಗೆ ಲವಣಸಮುದ್ರವನ್ನೇ ಸೇರುವುದು. ಹೀಗೆಯೇ ಚಕ್ಷುವೆಂಬ ಶಾಖೆಯು ಮಾಲ್ಯವತ್ಪರ್ವತಶಿಖರದಿಂದಿಳಿದು, ಮಹಾವೇಗದಿಂದ ಪ್ರವಹಿಸುತ್ತ, ಕೇತುಮಾಲವರ್ಷದಲ್ಲಿ ವ್ಯಾಪಿಸಿ, ಪಶ್ಚಿಮದಿಕ್ಕಿನಲ್ಲಿ ಲವಣಸಮುದ್ರ ವನ್ನು ಸೇರುವುದು. ಉತ್ತರಾಭಿಮುಖವಾಗಿ ಹೊರಟ ಭದ್ರಾನದಿಯು, ಅನೇಕ ಸ್ಥಳಗಳಲ್ಲಿ ಶಿಖರದಿಂದ ಶಿಖರಕ್ಕೆ ಮೇಲುಮುಖವಾಗಿ ಹಾರುತ್ತ, ಕೊನೆಗೆ ಶೃಂಗ ವತ್ಪರ್ವತಶಿಖರದಿಂದ ಕೆಳಕ್ಕಿಳಿದು, ಉತ್ತರದಿಕ್ಕಿನಲ್ಲಿ ಕುರುವರ್ಷವೆಂಬ ಭೂಭಾಗ ವೆಲ್ಲವನ್ನೂ ವ್ಯಾಪಿಸಿ, ಲವಣಸಮುದ್ರದಲ್ಲಿ ಬೀಳುವುದು. ಅದರಂತೆಯೇ ದಕ್ಷಿಣಾಭಿ ಮುಖವಾಗಿ ಹೊರಟ ಅಲಕನಂದೆಯು, ಅನೇಕ ಪರ್ವತಶಿಖರಗಳನ್ನು ದಾಟಿ, ತನ್ನ ಮಹಾವೇಗದಿಂದ ಹೇಮಕೂಟ ಹಿಮಕೂಟಗಳೆಂಬ ಪರ್ವತಶಿಖರಗಳೆರಡನ್ನೂ ಭೇದಿಸುತ್ತ ಬಂದು, ಕರ್ಮಕ್ಷೇತ್ರವೆನಿಸಿದ ಭಾರತವರ್ಷದಲ್ಲಿ ಪ್ರವಹಿಸಿ, ದಕ್ಷಿಣ ದಿಕ್ಕಿನಲ್ಲಿ ಸಮುದ್ರವನ್ನು ಸೇರುವುದು. ಇಷ್ಟೇ ಅಲ್ಲದೆ ಮೇರು ಮೊದಲಾದ ಪರ್ವತಗಳಲ್ಲಿ ಹುಟ್ಟಿದ ಇನ್ನೂ ಅನೇಕನದೀನದಗಳು, ಭಾರತವರ್ಷವೇ ಮೊದಲಾದ ಒಂದೊಂದು ಭೂಭಾಗದಲ್ಲಿಯೂ ಲಕ್ಷೋಪಲಕ್ಷವಾಗಿ ಪ್ರವಹಿಸುತ್ತಿರುವವು ರಾಜೇಂದ್ರಾ! ಜಂಬೂದ್ವೀಪದಲ್ಲಿ ಈ ಭಾರತವರ್ಷವೇ ಪುಣ್ಯಪಾಪಕರ್ಮಗಳನ್ನು ನಡೆಸತಕ್ಕ ಸ್ಥಾನವಾದುದರಿಂದ ಇದನ್ನು ಕರ್ಮಕ್ಷೇತ್ರವೆನ್ನುವರು. ಉಳಿದ ಎಂಟು

ವರ್ಷಗಳೂ. ಪುಣ್ಯಾತ್ಮರು ಹಿಂದೆ ತಾವು ಪರಲೋಕದಲ್ಲಿ ಅನುಭವಿಸಿ ಮಿಕ್ಕಿರುವ ಪುಣ್ಯಫಲವನ್ನು ಅನುಭವಿಸತಕ್ಕ ಸ್ಥಳಗಳಾಗಿರುವುದರಿಂದ ಅವು ಭೋಗಕ್ಷೇತ್ರ ಗಳೆನಿಸುವುವು. ಅಲ್ಲಿರತಕ್ಕವರೆಲ್ಲರೂ ತ್ರೇತಾಯುಗದ ಮನುಷ್ಯರಂತೆ ಸದಾಸುಖ ದಿಂದ ಕಾಲವನ್ನು ಕಳೆಯುತ್ತಿರುವರು ! ಅವರೊಬ್ಬೊಬ್ಬರೂ ದೇವತೆಗಳಂತೆ ತೇಜ ಸ್ಸುಳ್ಳವರು. ಅವರೊಬ್ಬೊಬ್ಬರೂ ಹತ್ತುಸಾವಿರ ಆನೆಯಬಲವುಳ್ಳವರು! ಹತ್ತು ಸಹಸ್ರವರ್ಷಗಳ ಆಯುರ್ದಾಯವುಳ್ಳವರು. ಒಬ್ಬೊಬ್ಬರೂ ವಜ್ರದಂತೆ ದೃಢವಾದ ಮೈಯುಳ್ಳವರು! ಹೀಗೆ ಅವರಿಗೆ ಎಣೆಯಿಲ್ಲದಬಲವೂ, ಯೌವನವೂ, ಉತ್ಸಾಹವೂ ಇರುವುದರಿಂದ, ಅ ವ ರ ಅನ್ನಪಾನಸಂಭೋಗಾದಿಸುಖಗಳೇ ಅತಿಶಯಿತವಾಗಿ ತೋರುತ್ತಿರುವುವು. ಅಲ್ಲಿನ ಸ್ತ್ರೀಯರು, ತಮ್ಮ ಆಯುಃಕಾಲವು ಮುಗಿಯವುದಕ್ಕೆ ಒಂದುವರ್ಷವುಮಾತ್ರ ಉಳಿದಿರುವಾಗ ಒಂದು ಸಂತಾನವನ್ನು ಮಾತ್ರಪಡೆಯು ವರು. ಇದರಿಂದ ಅಲ್ಲಿನವರು ಕಳತ್ರಸುಖವನ್ನು ಎಂದಿಗೂ ಲೋಪವಿಲ್ಲದೆ ಅನುಭವಿಸು ವರು. ಮತ್ತು ಅಲ್ಲಿನ ಉದ್ಯಾನವೃಕ್ಷಗಳು, ಎಲ್ಲಾ ಕಾಲಗಳಲ್ಲಿಯೂ, ಎಲ್ಲಾ ಋತುಗಳಲ್ಲಿ ಬಿಡುವ ಫಲಪುಷ್ಪಾದಿಗಳ ಭಾರದಿಂದ ಬಗ್ಗಿ, ನಾನಾಬಗೆಯ ಬಳ್ಳಿ ಗಳಿಂದಾವೃತವಾಗಿ ಶೋಭಿಸುತ್ತಿರುವುವು. ಇಂತಹರಮಣೀಯೋದ್ಯಾನಗಳಲ್ಲಿಯೂ, ಆತ್ರಮಗಳಲ್ಲಿಯೂ ಪರ್ವತಕ್ರಾಂತಗಳಲ್ಲಿಯೂ, ಅರಳಿದ ತಾವರೆಕೊಳಗಳು ವಿಶೇಷ ವಾಗಿ ಕಂಗೊಳಿಸುತ್ತಿರುವುವು. ಆ ಕಮಲವನದಲ್ಲಿ ಮಕರಂದಪಾನದಿಂದ ಮದಿಸಿದ ಹಂಸಸಾರಸ ಚಕ್ರವಾಕಾದಿಪಕ್ಷಿಗಳು, ಮಧುರಗಾನವನ್ನು ಮಾಡುತ್ತಿರುವುವು. ಇವುಗಳ ಮಧುರತ್ವದಿಂದಲೂ, ಭ್ರಮರಜಂಕಾರಗಳಿಂದಲೂ ಪ್ರತಿಧ್ವನಿತಗಳಾದ ತಾವರೆಕೊಳಗಳಲ್ಲಿ, ದೇವತಾಸ್ತ್ರೀಯರು ಜಲಕ್ರೀಡೆಗಳನ್ನಾಡುತ್ತಿರುವಾಗ ಆ ಸ್ತ್ರೀಯರ ಹಾವಭಾವ ವಿಲಾಸಗಳಿಂದಲೂ, ಅವರ ಮಂದಹಾಸದಿಂದಲೂ, ಅವರ ಮಧುರಗಾನದಿಂದಲೂ, ಮೋಹಿತರಾದ ದೇವಶ್ರೇಷ್ಠರು, ಅನೇಕ ಗಂಧರ್ವರಿಂದ ಸ್ತುತಿಸಲ್ಪಡುತ್ತ ಅಲ್ಲಲ್ಲಿ ಯಥೇಚ್ಛವಾಗಿ ವಿಹರಿಸುತ್ತಿರುವರು. ಇದಕ್ಕಾಗಿಯೇ ಆ ಪ್ರದೇಶಗಳನ್ನು ಭೂಸ್ವರ್ಗವೆಂದು ಹೇಳುವರು. ರಾಜಾ ! ಇಳಾವೃತವೇ ಮೊದ ಲಾದ ಈ ಒಂಭತ್ತುವರ್ಷಗಳಲ್ಲಿಯೂ ಭಗವಂತನಾದ ಶ್ರೀಮನ್ನಾರಾಯಣನೇ, ಆಯಾ ವರ್ಷಾಧಿಪತಿಗಳಾದ ಮಹಾಪುರುಷರಿಂದ ಆರಾಧಿಸಲ್ಪಡುತ್ತ, ಆವರನ್ನನು ಗ್ರಹಿಸುವುದಕ್ಕಾಗಿ, ಬೇರೊಬ್ಬರಿಂದಲೂಹಿಸಿ ತಿಳಿಯುವುದಕ್ಕೂ ಸಾಧ್ಯವಲ್ಲದ ಕಲ್ಯಾಣಗುಣಗಳುಳ್ಳ ಬೇರೆಬೇರೆ ದಿವ್ಯಮಂಗಳವಿಗ್ರಹದೊಡನೆ ಈಗಲೂ ಸಾನ್ನಿಧ್ಯ ವನ್ನು ಮಾಡುತ್ತಿರುವನು. ಆಯಾವರ್ಷಪತಿಗಳನ್ನೂ, ಅವರಿಂದಾರಾಧಿಸಲ್ಪಟ್ಟ ಭಗವತ್ಸ್ವರೂಪವನ್ನೂ ವಿವರಿಸುವೆನು ಕೇಳು.

ಇಳಾವೃತವರ್ಷದಲ್ಲಿ ಮಹಾತ್ಮನಾದ ರುದ್ರನೊಬ್ಬನು ಹೊರತು ಅಲ್ಲಿ ಬೇರೆ ಪುರುಷಾಕೃತಿಯೇ ಇಲ್ಲವು. ಬೇರೆ ಯಾವ ಪುರುಷನೂ ಅದರಲ್ಲಿ ಪ್ರವೇಶಿಸಲಾರ ನೆಂದು ಪಾರ್ವತಿಯ ಶಾಪವುಂಟು. ಇದನ್ನು ತಿಳಿಯದೆ, ಯಾವನಾದರೂ ಅದರಲ್ಲಿ ಕಾಲಿಟ್ಟಪಕ್ಷದಲ್ಲಿ, ಒಡನೆಯೇ ಅವನೂ ಸ್ತ್ರೀರೂಪವನ್ನು ಹೊಂದಿಬಿಡುವನು. ಪಾರ್ವತೀದೇವಿಯು ಈ ವಿಧವಾಗಿ ಶಾಪವನ್ನು ಕೊಡುವುದಕ್ಕೆ ಕಾರಣವೇನೆಂಬುದನ್ನೂ, ಆ ಶಾಪದಿಂದ ಯಾರಿಗೆ ಯಾವಾಗ, ಸ್ತ್ರೀತ್ವವುಂಟಾಯಿತೆಂಬುದನ್ನೂ ಮುಂದೆ ಒಂಭತ್ತನೆಯ ಸ್ಕಂಧದಲ್ಲಿ ವಿವರವಾಗಿ ತಿಳಿಸುವೆನು. ಆ ಇಲಾವೃತವರ್ಷದಲ್ಲಿ ರುದ್ರನು, ಪಾರ್ವತೀದೇವಿಯ ಅನುಚರರಾದ ಅನೇಕಸಹಸ್ರಸ್ತ್ರೀಯರಿಂದ ಸೇವಿಸಲ್ಪಡುತ್ತ, ಭಗವಂತನ (ವಾಸುದೇವಾದಿ) ನಾಲ್ಕುವ್ಯೂಹಗಳಲ್ಲಿ ಕೊನೆಯದಾಗಿಯೂ, ಸಂಕರ್ಷಣವೆಂಬ ಹೆಸರುಳ್ಳದಾಗಿಯೂ ತಮೋರೂಪವಾದ ಪ್ರಕೃತಿಯನ್ನು ಅಡಗಿಸಿಕೊಂಡುದಾಗಿಯೂ ಇರುವ ಮೂರ್ತಿಯನ್ನು, ಧ್ಯಾನಯೋಗದಿಂದ ಸಾಕ್ಷಾತ್ಕರಿಸಿಕೊಂಡು, ಮುಂದೆ ಹೇಳುವ ಮಂತ್ರಾರ್ಥದಿಂದ ಆತನನ್ನು ಸ್ತೋತ್ರಮಾಡುತ್ತಿರುವನು. "ಓಂಕಾರಶಬ್ದವಾಚ್ಯನಾಗಿಯೂ, ಸಮಸ್ತ ಕಲ್ಯಾಣವಿಶಿಷ್ಟನಾಗಿಯೂ ಜಗತ್ತಿನ ಸೃಷ್ಟಿಸ್ಥಿತಿಸಂಹಾರಗಳಿಂದ ವಿನೋದಿಸತಕ್ಕವನಾಗಿಯೂ, ವಾಸುದೇವನೆಂಬ ಹೆಸರಿನಿಂದ ಕೀರ್ತಿಸಲ್ಪಡತಕ್ಕವನಾಗಿಯೂ, ಚೇತನಾಚೇತನಗಳಿಗಿಂತಲೂ ವಿಲಕ್ಷಣವಾದ ಸರ್ವಜ್ಞತ್ವಾದಿಗುಣಗಳಿಂದ ಕೂಡಿದವನಾಗಿಯೂ, ಅಪ್ರಮೇಯನಾಗಿಯೂ, ಎಲ್ಲೆಯಿಲ್ಲದ ಮಹಿಮೆಯುಳ್ಳವನಾಗಿಯೂ, ಇರುವ ಪರಮಪುರುಷನಿಗೆ ನಮಸ್ಕಾರವು" ಎಂಬುದೇ ಆ ಮಂತ್ರಾರ್ಥವು. ಈ ಮಂತ್ರಜಪದೊಡನೆ ರುದ್ರನು, ಇನ್ನೂ ಅನೇಕವಿಧದಿಂದ ಹೀಗೆಂದು ಸ್ತೋತ್ರಮಾಡುವನು. "ಓ ಪರಮಪುರುಷಾ! ನೀನು ಸರ್ವಲೋಕಾರಾಧ್ಯನು. ಆಶ್ರಿತರನ್ನು ಸರ್ವವಿಧದಲ್ಲಿಯೂ ರಕ್ಷಿಸತಕ್ಕ ಪಾದಾರವಿಂದಗಳುಳ್ಳವನು. ಜ್ಞಾನಶಕ್ತಿ ಮೊದಲಾದ ಆರುಗುಣಗಳಿಗೆ ನೆಲೆಯಾದವನು! ಸಮಸ್ತ ಲೋಕಕ್ಕೂ ಮುಖ್ಯಾಶ್ರಯನು! ಜಗತ್ಕಾರಣಭೂತವಾದ ತನ್ನ ರೂಪವನ್ನು ಭಕ್ತರ ಕೋರಿಕೆಗೆ ತಕ್ಕಂತೆ ಬೇರೆಬೇರೆ ವಿಧದಿಂದ ತೋರ್ಪಡಿಸತಕ್ಕವನು! ಆಶ್ರಿತರಿಗೆ ಸಂಸಾರಬಂಧವನ್ನು ಬಿಡಿಸತಕ್ಕವನು! ವಿಮುಖರಾದವರಿಗೆ ಸಂಸಾರವನ್ನು ಕಟ್ಟತಕ್ಕವನು! ಇಂತಹ ಸರ್ವೇಶ್ವರನಾದ ನಿನಗೆ ನಮಸ್ಕಾರವು. ಓ ದೇವಾ! ಎಲ್ಲವನ್ನೂ ಸಾಕ್ಷಾತ್ಕರಿಸತಕ್ಕವನಾಗಿ, ಸರ್ವಸ್ವತಂತ್ರನೆನಿಸಿಕೊಂಡ ನಿನ್ನ ಜ್ಞಾನವೆಂಬುದು, ಕಾಮಕ್ರೋಧಾದಿಗಳನ್ನು ಜಯಿಸಲಾರದ ನಮ್ಮಂತವರ ಜ್ಞಾನದಂತೆ, ಮಾಯಾಗುಣದಿಂದುಂಟಾದ ರಾಗದ್ವೇಷಾದಿಗಳಿಂದ ಸ್ವಲ್ಪವಾತ್ರವೂ ಕೆಡಲಾರದು. ಸಂಸಾರವನ್ನು

ಜಯಿಸಬೇಕೆಂಬ ಆಸೆಯುಳ್ಳ ಯಾವ ವಿವೇಕಿಯುತಾನೇ ನಿನ್ನ ಪಾದಸೇವೆಯಲ್ಲಿ ವಿಮುಖನಾಗುವನು ? ಓ ಪರಮಪುರುಷಾ ! ದೇಹವನ್ನೇ ಆತ್ಮವೆಂದು ಭಾವಿಸುವ ಮೂಢಜನರ ಭಾವನೆಗೆ ತಕ್ಕಂತೆ, ನೀನೂ ನಿನ್ನ ಮಾಯೆ ಯಿಂದ ಅವರ ಕಣ್ಣಿಗೆ ಮದ್ಯಮದದಿಂದ ಕೆಂಪೇರಿದ ಕಣ್ಣುಳ್ಳವನಂತೆ ಕಾಣಿಸುತ್ತಿರುವೆ. ಆದರೆ ವಾಸ್ತವ ದಲ್ಲಿ ನಿನ್ನ ದಿವ್ಯಮಂಗಳ ವಿಗ್ರಹವು ಅಪ್ರಾಕೃತವಾಗಿಯೂ, ಕರ್ಮವಶ್ಯವಲ್ಲ ದೆಯೂ ಇರುವುದು. ನೀನೇ ಸ್ವೇಚ್ಛೆಯಿಂದಲೇ ನಿನಗೆ ಬೇಕಾದ ರೂಪವನ್ನು ಸ್ವೀಕರಿಸತಕ್ಕವನು. ಈ ಕಾರಣದಿಂದಲ್ಲವೇ ಇಲ್ಲಿನ ನಾಗಕನ್ಯೆಯರೂ ನಿನ್ನ ಪಾದಾರವಿಂದವನ್ನು ಮುಟ್ಟಿದಮಾತ್ರಕ್ಕೆ ಕಾಮವಿಕಾರಹೊಂದಿ ಮನಸ್ಸು ಕಲಗಿ, ಮುಂದೆ ಪ್ರಜೆಯನ್ನೂ ನಡೆಸಲಾರದೆ ಸುಮ್ಮನಾಗುವರು. ಕಾಮದಿಂದ ಕಲಗಿದ ಮನಸ್ಸುಳ್ಳ ತಾವು ಶುದ್ಧಸತ್ವಮೂರ್ತಿಯಾದ ನಿನ್ನ ಪಾದಗಳನ್ನು ಮುಟ್ಟುವು ದಕ್ಕೆ ಹೆದರಿ ಹಿಂಜರಿಯುವರು ! ಇಂತಹ ಮಹಾಮಹಿಮೆಯುಳ್ಳ ನಿನ್ನ ಸೇವೆ ಯಲ್ಲಿ ಯಾವನು ತಾನೇ ಆಸೆಪಡದಿರುವನು ? ಓ ವಾಸುದೇವಾ ! ಆ ವೇದಾಂತ ಗಳೆಲ್ಲವೂ ನಿನ್ನನ್ನೇ ಸೃಷ್ಟಿಸ್ಥಿತಿಸಂಹಾರಗಳಿಗೆ ಕಾರಣನನ್ನಾಗಿ ಹೇಳುವುವು. ಮತ್ತು ನೀನು ಸ್ವರೂಪಸ್ವಭಾವಗಳಲ್ಲಿಯಾಗಲೀ, ದೇಶ, ಕಾಲ, ವಸ್ತು ಸ್ಥಿತಿಗಳಲ್ಲಿಯಾಗಲೀ ವ್ಯತ್ಯಾಸವಿಲ್ಲದವನು. ಸಹಸ್ರಫಣೆಗಳುಳ್ಳ ನಿನ್ನ ಶಿರಸ್ಸಿನ ಯಾವುದೋ ಒಂದು ಕಡೆಯಲ್ಲಿ, ಸಾಸಿವೆಯಕಾಳಿನಂತೆ ಅಂಟಿಕೊಂಡಿರುವ ಈ ಭೂಮಂಡಲವನ್ನು ನೀನು ಕೇವಲ ಲೀಲಾಮಾತ್ರದಿಂದಲೇ ಧರಿಸಿರತಕ್ಕವನು. ಇಂತಹ ಅಪಾರಮಹಿಮೆಯುಳ್ಳ ನಿನ್ನನ್ನು ಯಾವನು ತಾನೇ ಸಂತೋಷದಿಂದಾದರಿಸಲಾರನು ? ಓ ಪರಮಾತ್ಮಾ ! ಮಹತ್ತತ್ವಕ್ಕೆ ಅಭಿಮಾನಿಯಾಗಿಯೂ, ಸೃಷ್ಟಿಕಾರ್ಯಕ್ಕೆ ಬೇಕಾದ ಜ್ಞಾನವುಳ್ಳವ ನಾಗಿಯೂ, ನಮ್ಮೆಲ್ಲರಿಗಿಂತಲೂ ಮೊದಲನೆಯವನಾಗಿಯೂ, ರಜೋಗುಣಪ್ರಧಾ ನನಾಗಿಯೂ ಇರುವ ಚತುರ್ಮುಖನೂಕೂಡ, ನಿನ್ನಿಂದಲೇ ಹುಟ್ಟಿದವನು. ದೇವ ಮನುಷ್ಯಾದಿಶರೀರಗಳಲ್ಲಿ ಸಾತ್ವಿಕ, ರಾಜಸ, ತಾಮಸಗಳೆಂಬ ಮೂರುಬಗೆಯ ಅಹಂಕಾರಗಳನ್ನು ನಡೆಸುವುದಕ್ಕಾಗಿ ನಾನೂ ಆ ಬ್ರಹ್ಮದೇವನಿಂದ ಸೃಷ್ಟಿಸಲ್ಪ ಟ್ಟಿನು. ನೀನು ಕೊಟ್ಟಿರುವ ಜ್ಞಾನದಿಂದಲೇ ನಾನು ಆ ಕಾರ್ಯಗಳನ್ನು ನಡೆಸುತ್ತಿರು ವೆನು. ಆದುದರಿಂದ ಮಹತ್ತು, ಮೂರುಬಗೆಯ ಅಹಂಕಾರಗಳು, ಮತ್ತು ಚತು ರ್ಮುಖಬ್ರಹ್ಮನು ಮೊದಲಾದ ನಾವೆಲ್ಲರೂ, ಸೂತ್ರದಿಂದ ಬಿಗಿಯಲ್ಪಟ್ಟ ಹಕ್ಕಿ ಗಳಂತೆ, ನಿನ್ನ ಆಜ್ಞಾಧೀನರಾಗಿ ನಿನ್ನ ಅನುಗ್ರಹದಿಂದಲೇ ಆಯಾವ್ಯಾಪಾರವನ್ನು ನಡೆಸಬಲ್ಲವರಾಗಿ, ಬ್ರಹ್ಮಾಂಡವನ್ನೂ, ಅದರೊಳಗಿನ ವಸ್ತುಸಮೂಹಗಳನ್ನೂ ಸೃಷ್ಟಿಸುತ್ತಿರುವೆವು. ಓ ಸರ್ವೇಶ್ವರಾ ! ಜೀವನು ದೇಹೇಂದ್ರಿಯಾದಿಗಳ ಸಂಬಂಧ

ದಿಂದ ಆತ್ಮಪರಮಾತ್ಮಸ್ವರೂಪವನ್ನರಿಯಲಾರದೆ, ಸಂಸಾರದಲ್ಲಿ ಮಳುಗಿ ಹೋಗುವನು. ತನ್ನನ್ನು ಕಟ್ಟಿರುವ ಧರ್ಮಗ್ರಂಥಿರೂಪವಾದ ನಿನ್ನ ಮಾಯೆಯಕಟ್ಟನ್ನೇ ತಿಳಿಯಲಾರದವನು, ಅದನ್ನು ಬಿಡಿಸಿಕೊಳ್ಳತಕ್ಕ ಉಪಾಯವನ್ನು ಹೇಗೆ ತಿಳಿಯಬಲ್ಲನು? ಆದುದರಿಂದ ಪ್ರಕೃತಿಸಂಬಂಧವನ್ನುಂಟುಮಾಡುವುದಕ್ಕಾಗಲೀ, ಅದನ್ನು ನೀಗಿಸುವುದಕ್ಕಾಗಲೀ, ನೀನೇ ಸಮರ್ಥನು! ಇಂತಹ ವಿಚಿತ್ರಶಕ್ತಿಯುಳ್ಳ ನಿನಗೆ ನಮಸ್ಕಾರವು" ಎಂದು ರುದ್ರನು ಸಂಕರ್ಷಣಮೂರ್ತಿಯಾದ ಭಗವಂತನನ್ನು ಸ್ತುತಿಸುವನು. ಇದು ಹದಿನೇಳನೆಯ ಅಧ್ಯಾಯವು.

---

## ಭದ್ರಾಶ್ವವರ್ಷವೇ ಮೊದಲಾದ ಆರುವರ್ಷಗಳಲ್ಲಿ ಭಗವಂತನು ಆಯಾವರ್ಷಪುರುಷರಿಂದ ಆರಾಧಿಸಲ್ಪಡುವ ಕ್ರಮಗಳು.

ರಾಜೇಂದ್ರಾ! ಕೇಳು! ಭದ್ರಾಶ್ವವರ್ಷಕ್ಕೆ ಧರ್ಮನೆಂಬವನ ಪುತ್ರನಾದ ಭದ್ರಶ್ರವನೆಂಬವನೇ ಅಧಿಪತಿಯು. ಇವನೊಡನೆ ಆತನ ವಂಶದಲ್ಲಿ ಪ್ರಧಾನರೆನಿಸಿಕೊಂಡ ಮಹಾಪುರುಷರೆಲ್ಲರೂ ಸಾಕ್ಷಾದ್ಭಗವಂತನಿಗೆ ಅತಿಪ್ರಿಯವಾಗಿಯೂ, ಧರ್ಮಸ್ವರೂಪವಾಗಿಯೂ, ಇರುವ ಹಯಗ್ರೀವಮೂರ್ತಿಯನ್ನು ಯೋಗಬಲದಿಂದ ಸಾಕ್ಷಾತ್ಕರಿಸಿ, ಆರಾಧಿಸುತ್ತಿರುವರು. "ಓಂಕಾರಸ್ವರೂಪನಾಗಿಯೂ, ಬದ್ಧಜೀವನಿಗೆ ಪ್ರಕೃತಿಸಂಬಂಧವನ್ನು ನೀಗಿಸಿ, ಬ್ರಹ್ಮಪ್ರಾಪ್ತಿರೂಪವಾದ ಮೋಕ್ಷವನ್ನು ಕೈಗೂಡಿಸತಕ್ಕವನಾಗಿಯೂ ಇರುವ ನಿನಗೆ ನಮಸ್ಕಾರವು," ಎಂಬೀ ಅರ್ಥವುಳ್ಳ ಮಂತ್ರವನ್ನು ಜಪಿಸಿ ಹೀಗೆಂದು ಸ್ತುತಿಸುವರು. "ಆಹಾ! ಇದಲ್ಲವೇ ಆಶ್ಚರ್ಯವು! ಲೋಕದಲ್ಲಿ ಮನುಷ್ಯನು, ತನ್ನ ತಂದೆ, ತಾಯಿ, ಮೊದಲಾದ ಬಂಧುವರ್ಗವು ಮೃತ್ಯುವಶವಾದುದನ್ನು ಕಣ್ಣಾರೆನೋಡಿಯೂ, ಅದೇ ಗತಿಯೆಂಬುದನ್ನು ತಿಳಿಯದೆ, ತನ್ನ ಶರೀರವು ಸ್ಥಿರವೆಂದೇ ಎಣಿಸುತ್ತಿರುವನು. ಇವೆಲ್ಲವೂ ಭಗವಂತನಾದ ನಿನ್ನ ಮಾಯೆಯಲ್ಲದೆ ಬೇರೇನು? ಸತ್ತವರ ದೇಹವನ್ನು ಅತ್ತಲಾಗಿ ದಹನಮಾಡಿ ಬಂದಕೂಡಲೇ ಇತ್ತಲಾಗಿ, ಸುಖಭ್ರಾಂತಿಯನ್ನು ಹುಟ್ಟಿಸತಕ್ಕ ಶಬ್ದಾದಿವಿಷಯಗಳಿಗಾಗಿ ಆತುರಪಟ್ಟು, ಪಾಪಕರ್ಮಗಳಲ್ಲಿ ಪ್ರವರ್ತಿಸುವನು. ಆ ಹಿಂದಿನವರು ಗಳಿಸಿಟ್ಟ ಹಣದಿಂದಲೇ ತಾನು ಸುಖಪಡುವುದಕ್ಕೆ ಬಯ

ಸುವನು. ಸಾಮಾನ್ಯಜನರ ಸಂಗತಿಯು ಹಾಗಿರಲಿ! ವೇದಾಂತವಿದ್ಯೆಯನ್ನು ಚೆನ್ನಾಗಿ ಓದಿ ಆತ್ಮೋಪಾಸನೆಯಲ್ಲಿ ಅನುಭವವುಳ್ಳವರೂ ಕೂಡ, ಈ ಪ್ರಪಂಚವೆಲ್ಲವೂ ಅಸ್ಥಿರವೆಂದು ಹೇಳುತ್ತಿರುವುದು ಮಾತ್ರವೇ ಹೊರತು, ಅವರೂ ನಿನ್ನ ಮಾಯೆಯಿಂದ ಮೋಹಿತರಾಗಿ, ಸತ್ತವರನ್ನು ಕಂಡು ದುಃಖಿಸುವರು. ತಮಗೆ ಮಕ್ಕಳು ಹುಟ್ಟಿದಾಗ ಸಂತೋಷಿಸುವರು. ಆದುದರಿಂದ ಈ ನಿನ್ನ ವ್ಯಾಪಾರವು ಪರಮಾಶ್ಚರ್ಯಕರವಾಗಿರುವುದು. ದೇವಾ! ನಮಗೆ ಆ ವಿಧವಾದ ಮೋಹವನ್ನು ತಪ್ಪಿಸದೇಕೆಂಬುದಕ್ಕಾಗಿಯೇ ನಾವು ನಿನ್ನಲ್ಲಿ ಮರೆಹೊಗುವೆವು. ಇದಕ್ಕಿಂತಲೂ ಮತ್ತೊಂದಾಶ್ಚರ್ಯವೇನೆಂದರೆ, ನೀನು ಪ್ರಪಂಚ ಸೃಷ್ಟಿಸ್ಥಿತಿಸಂಹಾರಗಳೆಂಬ ಕಾರ್ಯಗಳನ್ನು ನಡೆಸುತ್ತಿದ್ದರೂ ಕರ್ಮರಹಿತನೆನಿಸಿಕೊಳ್ಳುವೆ? ಸೂಕ್ಷ್ಮದಶೆಯಲ್ಲಿಯೂ, ಸ್ಥೂಲದಶೆಯಲ್ಲಿಯೂ, ಪ್ರಕೃತಿಯನ್ನು ಶರೀರವಾಗಿ ಹೊಂದಿದ್ದವನಾದರೂ ಅಪ್ರಾಕೃತನೆನಿಸಿಕೊಳ್ಳುವೆ? ಪ್ರಪಂಚದಲ್ಲಿ ಕಾಣುವ ಬೇರೆಬೇರೆ ಆಕಾರಭೇದದಿಂದ ಅವತರಿಸುತ್ತಿದ್ದರೂ, ವಿಕಾರರಹಿತನೆನಿಸಿಕೊಳ್ಳುವೆ! ತತ್ವವನ್ನು ವಿಚಾರಿಸಿದರೆ ಇದೇನೂ ಆಶ್ಚರ್ಯವಲ್ಲ. ಈ ಸೃಷ್ಟ್ಯಾದಿಕಾರ್ಯಗಳೆಲ್ಲವೂ ನಿನಗೆ ಲೀಲಾರ್ಥವಾಗಿರುವುವು. ಪುಣ್ಯಪಾಪಕರ್ಮಗಳು ಜೀವನನ್ನು ದೇವಮನುಷ್ಯಾದಿ ಶರೀರಗಳಲ್ಲಿ ಕಟ್ಟಿಡುವಂತೆ, ಆ ಕರ್ಮವು ನಿನ್ನನ್ನು ಕಟ್ಟಲಾರದು. ಆದುದರಿಂದ ನೀನು ಕರ್ಮರಹಿತನಾಗಿ ಸೃಷ್ಟ್ಯಾದಿಕಾರ್ಯಗಳನ್ನು ನಡೆಸುವೆಯೆಂಬುದೂ ಯುಕ್ತವೇ! ನೀನು ಪ್ರಕೃತಿಶರೀರನಾಗಿದ್ದರೂ ಜೀವನಂತೆ,ನಿನಗೆ ಪ್ರಕೃತಿಸಂಬಂಧದಿಂದುಂಟಾದ ಜ್ಞಾನಸಂಕೋಚವಿಲ್ಲವಾದುದರಿಂದ ನೀನು ಅಪ್ರಾಕೃತನೆಂಬುದೂ ಯುಕ್ತವೇ!! ಮತ್ತು ನೀನು ಹೊಂದತಕ್ಕರೂಪಾಂತರಗಳೆಲ್ಲವೂ ನಿನ್ನ ಸ್ವೇಚ್ಛೆಯಿಂದಲೇ ಅಂಗೀಕರಿಸಲ್ಪಟ್ಟುದೇ ಹೊರತು, ಜೀವನಂತೆ ಕರ್ಮಸಂಬಂಧದಿಂದುಂಟಾದ ವಿಕಾರವಲ್ಲ. ಆದುದರಿಂದ ನೀನು ವಿಕಾರವಿಲ್ಲದವನೆಂಬುದೂ ಯುಕ್ತವೇ ! ಶರೀರದಲ್ಲಿ ಸೇರಿರುವ ಜೀವನಿಗೆ ಆ ಶರೀರಗತವಾದ ಬಾಲ್ಯಯೌವನಾದಿ ವಿಕಾರಗಳು ಹೇಗೆ ಉಂಟಾಗುವುದಿಲ್ಲವೋ, ಆದರಂತೆ ನೀನು ವಿಕಾರಹೊಂದತಕ್ಕ ಎಲ್ಲಾ ವಸ್ತುಗಳಲ್ಲಿಯೂ ಅಡಗಿದ್ದರೂ ನಿನಗೂ ಆಯಾವಸ್ತುಗತವಾದ ವಿಕಾರವೊಂದೂ ಹುಟ್ಟಲಾರದು. ಹೀಗೆ ವಿಚಿತ್ರಶಕ್ತಿಯುಳ್ಳ ನಿನಗೆ ನಮಸ್ಕಾರವು. ಓ ದೇವಾ? ಹಿಂದೊಮ್ಮೆ ದೈನಂದಿನ ಪ್ರಳಯಕಾಲದಲ್ಲಿ, ದೈತ್ಯನೊಬ್ಬನು ವೇದಗಳನ್ನಪಹರಿಸಿಕೊಂಡು ಹೋಗಲು, ಬ್ರಹ್ಮನ ಪ್ರಾರ್ಥನೆಯಿಂದ ನೀನು ಈ ಹಯಗ್ರೀವಸ್ವರೂಪವನ್ನು ಧರಿಸಿ, ಆ ರಾಕ್ಷಸನನ್ನು ಕೊಂದು, ಆ ವೇದಗಳನ್ನು ತಿರುಗಿ ಬ್ರಹ್ಮನಿಗೊಪ್ಪಿಸಿದೆ! ಆದುದರಿಂದಲೇ ನೀನು ಧರ್ಮಮೂರ್ತಿಯೆನಿಸಿಕೊಂಡಿರುವೆ. ಅಂತಹ ಅಮೋಘಚರಿತ್ರ

ವುಳ್ಳ ನಿನಗೆ ನಮಸ್ಕಾರವು." ಎಂಬೀವಾಕ್ಯಗಳಿಂದ ಭದ್ರಾಶ್ವವರ್ಷದವರುಭಗವಂತನಾದ ಹಯಗ್ರೀವನನ್ನು ಸ್ತುತಿಸುವರು.

ರಾಜೇಂದ್ರಾ! ಹರಿವರ್ಷದಲ್ಲಿ ಭಗವಂತನು ನರಸಿಂಹಸ್ವರೂಪದಿಂದ ಕಂಗೊಳಿಸುವನು! ಆ ಅವತಾರಕಾರಣವನ್ನು ಮುಂದೆ ಚೆನ್ನಾಗಿ ವಿವರಿಸುವೆನು. ಗುಣಗಳಲ್ಲಿ ಸಾಕ್ಷಾದ್ಭಗವಂತನಿಗೆ ಸಮಾನನಾಗಿಯೂ, ಪರಮಭಾಗವತೋತ್ತಮನಾಗಿಯೂ, ತನ್ನ ನಡತೆಗಳಿಂದ ದೈತ್ಯದಾನವಕುಲವನ್ನೇ ಪವಿತ್ರಮಾಡತಕ್ಕವನಾಗಿಯೂ, ಇರುವ ಪ್ರಹ್ಲಾದನೆಂಬವನೇ ಆ ವರ್ಷದ ಅಧಿಪತಿಯು. ಆ ಪ್ರಹ್ಲಾದನು ಫಲಾಂತರದಲ್ಲಿ ಅಪೇಕ್ಷೆಯಿಲ್ಲದ ಸ್ಥಿರವಾದ ಭಕ್ತಿಯೋಗದಿಂದ ಕೂಡಿದವನಾಗಿ, ಅಲ್ಲಿನ ನಿವಾಸಿಗಳಾದ ತನ್ನ ಪ್ರಜೆಗಳೊಡನೆ ಆ ನೃಸಿಂಹಸ್ವರೂಪನನ್ನು ಈ ಮಂತ್ರದಿಂದ ಜಪಿಸಿ ಧ್ಯಾನಿಸುವನು. 'ಓಂಕಾರವಾಚ್ಯನಾದ ಓ ಭಗವಂತಾ! ನೃಸಿಂಹರೂಪಿಯಾದ ನಿನಗೆ ನಮಸ್ಕಾರವು! ಸಮಸ್ತ ತೇಜಸ್ಸುಗಳಿಗೂ ಪ್ರಕಾಶಕನಾದ ನಿನಗೆ ನಮಸ್ಕಾರವು! ವಜ್ರದಂತೆ ದೃಢವಾದ ನಖದಂಷ್ಟ್ರಗಳುಳ್ಳ ಓ ನಾರಸಿಂಹಾ! ಪ್ರತ್ಯಕ್ಷನಾಗು! ನನ್ನ ಕರ್ಮವಾಸನೆಗಳನ್ನು ತೊಲಗಿಸು ತೊಲಗಿಸು! ನಮ್ಮ ಸಂಸಾರಭಯವನ್ನು ನೀಗಿಸು! ಮ್ಯಾದೋರು! ಮ್ಯಾದೋರು!" ಎಂಬೀ ಉಪಾಸನಮಂತ್ರವನ್ನು ಜಪಿಸಿ, ಹೀಗೆಂದು ಸ್ತುತಿಸುವನು. "ದೇವಾ! ನಿನ್ನಿಂದ ಲೋಕಕ್ಕೆಲ್ಲವೂ ಕ್ಷೇಮವಾಗಲಿ! ಮಾರ್ಜಾರಿಲ್ಲರೂ ಕ್ರೋಧಾದಿಗಳನ್ನು ಬಿಟ್ಟು ಮನಶ್ಶಾಂತಿಯುಳ್ಳವರಾಗಲಿ! ಸಮಸ್ತಭೂತಗಳೂ ಅನ್ಯೋನ್ಯಕ್ಷೇಮಚಿಂತೆಯಿಂದಿರಲಿ! ಆ ಸಮಸ್ತಭೂತಗಳ ಮನಸ್ಸು ಶಮದಮಾದಿಗುಣಗಳಿಂದ ಸನ್ಮಾರ್ಗದಲ್ಲಿ ಪ್ರವರ್ತಿಸಲಿ! ನನ್ನ ಮತ್ತು ಬೇರೆ ಎಲ್ಲಾ ಭೂತಗಳ ಮನಸ್ಸೂ, ಬೇರೆ ಫಲಾಪೇಕ್ಷೆಯಿಲ್ಲದೆ ನಿನ್ನಲ್ಲಿಯೇ ಪ್ರವರ್ತಿಸುತ್ತಿರಲಿ! ಓ ಪರಮೇಶ್ವರಾ! ನಮ್ಮ ಮನಸ್ಸು ಮನೆಯಿಂದಿಮಕ್ಕಳಲ್ಲಿಯೂ, ಧನದಲ್ಲಿಯೂ! ಬಂಧುಗಳಲ್ಲಿಯೂ ಆಸಕ್ತಿಯನ್ನು ಬಿಟ್ಟು, ಭಗವದ್ಭಕ್ತರಲ್ಲಿವಾತ್ರವೇ ಚಿಸೆಯುಳ್ಳುದಾಗಿರಲಿ! ಭಗವದ್ಭಕ್ತರಲ್ಲಿಸಹವಾಸನಮಾಡತಕ್ಕವರ ಮನಸ್ಸು ಬೇರೆಚಿಂತೆಯಿಲ್ಲದೆ ನಿನ್ನಲ್ಲಿಯೇ ನೆಲೆಗೊಳ್ಳುವುದು! ಆಗ ಆದು ಸಂಸಾರದುಃಖವನ್ನೂ ಕಾಣಲಾರದು. ಅಂತಹ ಭಗವದ್ಭಕ್ತರ ಸಹವಾಸದಲ್ಲಿರುವವರು, ತಮ್ಮ ಶರೀರಧಾರಣೆಗೆ ಬೇಕಾದಷ್ಟು ವಸ್ತುಗಳಲ್ಲಿ ಮಾತ್ರವೇ ತೃಪ್ತಿಹೊಂದಿ, ಶೀಘ್ರದಲ್ಲಿ ಮುಕ್ತಿಯನ್ನೂ ಸಂಪಾದಿಸಬಲ್ಲರು. ಹಾಗಿಲ್ಲದೆ ಇಂದ್ರಿಯತೃಪ್ತಿಯಲ್ಲಿ ಆಸಕ್ತರಾಗಿ, ಶಬ್ದಾದಿವಿಷಯಗಳಲ್ಲಿ ಮನಸ್ಸಿಟ್ಟವರು, ಎಂದೆಂದಿಗೂ ಆ ಮುಕ್ತಿಯನ್ನು ಪಡೆಯಲಾರರು. ನನ್ನ ಬುದ್ಧಿಗೂಕೂಡ ನಿನ್ನನ್ನು ಎಡೆಬಿಡದೆ ಧ್ಯಾನಿಸತಕ್ಕ ಪ್ರವೃತ್ತಿಯು, ಅಂತಹಭಕ್ತೋತ್ತಮರಸಹವಾಸ

ದಿಂದಲೇ ಲಭಿಸುವುದು. ಗಂಗಾದಿಪುಣ್ಯತೀರ್ಥಗಳಂತೆ ಪರಿಶುದ್ಧವಾದ ನಿನ್ನ ಗುಣಗಳನ್ನು ಅನವರತವೂ ಕೀರ್ತಿಸತಕ್ಕ ಭಕ್ತರ ಮನಸ್ಸಿನಲ್ಲಿ, ನೀನು ಅವರ ಕಿವಿಯ ಮಾರ್ಗವಾಗಿ ಪ್ರವೇಶಿಸಿ, ಅವರ ಮನಸ್ಸಿನಲ್ಲಿರುವ ಕಲ್ಮಷಗಳೆಲ್ಲವನ್ನೂ ಛೇಗಿಸತಕ್ಕವನು. ಭೋಗಮೋಕ್ಷಪ್ರದನಾದ ಆ ನಿನ್ನ ಗುಣಗಳನ್ನು ವಿವೇಕಿಯಾದ ಯಾವ ಮನುಷ್ಯನುತಾನೇ ಕೊಂಡಾಡದಿರುವನು. ಮನುಷ್ಯನಿಗೆ, ಭಗವಂತನಾದ ನಿನ್ನಲ್ಲಿ ಫಲಾಪೇಕ್ಷೆಯಿಲ್ಲದೆ ಭಕ್ತಿಯೋಗವುಂಟಾದ ಪಕ್ಷದಲ್ಲಿ, ಇಂದ್ರಾದಿದೇವತೆಗಳೂ ಅವನ ಸೇವಕರಾಗುವರು. ಸಮಸ್ತಗುಣಗಳೂ ಅವನಿಗೆ ತಾನಾಗಿ ಕೈಗೂಡಿ ಬರುವುವು. ಆಶ್ರಿತರಪಾಪವನ್ನು ನೀಗಿಸತಕ್ಕ ಆ ನಿನ್ನಲ್ಲಿ ಭಕ್ತಿಯಿಲ್ಲದೆ, ವಿಷಯಾತುರನಾಗಿ, ಅಲ್ಲಲ್ಲಿ ತೊಳಲುತಿರುವನಿನಗೆ, ಮಹಾಮಹಿಮೆಯುಳ್ಳ ಭಗವದ್ಭಕ್ತರ ಗುಣಗಳಲ್ಲಿ ಲೇಶಮಾತ್ರವೂ ಲಭಿಸಲಾರದು. ಮೀನುಗಳಿಗೆ ಜಲವೇ ಜೀವನಾಧಾರವಾಗಿರುವಂತೆ, ಸಮಸ್ತಜೀವಗಳಿಗೂ ನೀನೇ ಧಾರಕನಾಗಿರುವೆ. ಆದುದರಿಂದ, ಮನುಷ್ಯನು ರೂಪಯೌವನಾದಿಗಳಿಂದಲೂ, ಮನೆ, ಮಕ್ಕಳು, ಹಣ, ಮುಂತಾದ ಭಾಗ್ಯಸಮೃದ್ಧಿಗಳಿಂದಲೂ ಪೂರ್ಣನಾಗಿದ್ದರೂ, ನಿನ್ನನ್ನು ಮರೆತು ಆ ಗೃಹಾದಿಗಳಲ್ಲಿಯೇ ಆಸಕ್ತನಾಗಿದ್ದಪಕ್ಷದಲ್ಲಿ, ಆಗ ಅವನು ಅನುಭವಿಸತಕ್ಕ ದಾಂಪತ್ಯಸುಖಕ್ಕೆ, ವಯಸ್ಸಿದ್ದಾಗ ಮೇಲ್ಮೈಯೇಹೊರತು, ಆತ್ಮಪರಮಾತ್ಮಜ್ಞಾನವೆಂಬಾಗುವ ನಿರತಿಶಯಾನಂದ ದಂತೆ ಆ ಸುಖವು ನಿತ್ಯವಾದುದಲ್ಲ. ನಿನ್ನ ಭಕ್ತಿಯೊಂದೇ ನಿರತಿಶಯಾನಂದಕ್ಕೆ ಕಾರಣವು. ವಿಷಯಸುಖಗಳೆಲ್ಲವೂ ದುಃಖಹೇತುಗಳು! ಆದುದರಿಂದ ಕಾಮ, ಕ್ರೋಧ, ರಾಗ, ದುಃಖ, ಅಹಂಕಾರ, ಅತ್ಯಾಶೆ, ಭಯ, ದೈನ್ಯ, ಮನೋವ್ಯಾಧಿ, ಮುಂತಾದುವುಗಳಿಗೆ ಮುಖ್ಯಸ್ಥಾನವಾಗಿಯೂ, ಜನನಮರಣರೂಪವಾದ ಸಂಸಾರಚಕ್ರದಲ್ಲಿ ಸ್ತುತಿಸತಕ್ಕುದಾಗಿಯೂ ಇರುವ ಗೃಹಾದಿಗಳನ್ನು ತೊರೆದು, ನೃಸಿಂಹರೂಪಿಯಾದ ನಿನ್ನ ಪಾದಾರವಿಂದಗಳನ್ನು ಭಜಿಸತಕ್ಕವರಿಗೆ, ಯಾವಾ ವಿಧದಲ್ಲಿಯೂ ಭಯವಿರದು." ಎಂಬುದಾಗಿ ಪ್ರಹ್ಲಾದನು ನೃಸಿಂಹಮೂರ್ತಿಯನ್ನು ಅನವರತವೂ ಸ್ತುತಿಸುವನು.

ರಾಜೇಂದ್ರಾ! ಕೇತುಮಾಲವರ್ಷದಲ್ಲಿ ಭಗವಂತನು, ಶ್ರೀಮಹಾಲಕ್ಷ್ಮಿಗೂ, ಮತ್ತು ಆವರ್ಷಾಧಿಪತಿಗಳೆನಿಸಿದ ಸಂವತ್ಸರನೆಂಬ ಪ್ರಜಾಧಿಪತಿಯ ಮಕ್ಕಳಿಗೂ ಪ್ರಿಯವನ್ನುಂಟುಮಾಡುವುದಕ್ಕಾಗಿ, ಪ್ರದ್ಯುಮ್ನರೂಪದಿಂದ ನೆಲೆಗೊಂಡಿರುವನು. ಸಂವತ್ಸರನೆಂಬ ಪ್ರಜಾಧಿಪತಿಗೆ ರಾತ್ರ್ಯಭಿಮಾನಿದೇವತೆಗಳೆಂಬ ಮೂವತ್ತಾರುಸಾವಿರಮಂದಿ ಹೆಣ್ಣು ಮಕ್ಕಳೂ, ಹಗಲಿನ ಅಭಿಮಾನಿದೇವತೆಗಳೆಂಬ ಮೂವತ್ತಾರುಸಾವಿರಮಂದಿ ಗಂಡು ಮಕ್ಕಳೂ

ಇರುವರು. ಈ ಅಹೋರಾತ್ರಾಭಿಮಾನಿದೇವತೆಗಳೇ ಶತಸಂವತ್ಸರರೂಪವಾದ ಮನುಷ್ಯನ ಆಯುರ್ದಾಯವನ್ನು ಅಳೆಯತಕ್ಕವರು. ಈ ರಾತ್ರ್ಯಭಿಮಾನಿದೇವತೆಗಳು ಗರ್ಭವತಿಯರಾಗಿ, ಪ್ರಸವಕಾಲದಲ್ಲಿರುವಾಗ, ಸಂವತ್ಸರಾಂತದಲ್ಲಿ ಶ್ರೀವಿಷ್ಣು ಚಕ್ರದ ತೇಜಸ್ಸಿನಿಂದ ಎದೆಯೊಡೆದು ಗರ್ಭಸ್ರಾವಹೊಂದುವರು. ಆತರ ಗರ್ಭ ಶಿಶುಗಳು ಸತ್ತು ಕೆಳಗೆ ಬೀಳುವುವು. ಈ ಸ್ಥಿತಿಯಲ್ಲಿ ಭಗವಂತನು, ಮಹಾಲಕ್ಷ್ಮಿಗೂ, ಆ ಅಹೋರಾತ್ರಾಭಿಮಾನಿದೇವತೆಗಳಿಗೂ ಪ್ರಿಯವನ್ನುಂಟುಮಾಡುವುದಕ್ಕಾಗಿ ಪ್ರದ್ಯುಮ್ನರೂಪದಿಂದಿರುವನು. ಆಗ ಪರಮಪುರುಷನು ತನ್ನ ಅಂದವಾದ ಗತಿವಿಲಾಸದಿಂದಲೂ, ಮುಂದಹಾಸಸುಂದರವಾದ ಮುಖದಿಂದಲೂ, ಪ್ರಸನ್ನ ದೃಷ್ಟಿಯಿಂದಲೂ, ಸುಂದರವಾದ ಹುಬ್ಬಿನಾಟದಿಂದಲೂ, ಶ್ರೀಮಹಾಲಕ್ಷ್ಮಿಯನ್ನು ಸಂತೋಷಗೊಳಿಸುತ್ತ, ಅವಳ ಹಾವಭಾವವಿಲಾಸಗಳಿಂದ ತನ್ನ ಇಂದ್ರಿಯಗಳನ್ನೂ ಸಂತೋಷಗೊಳಿಸುತ್ತಿರುವನು. ಇದರಿಂದ ತೃಪ್ತಳಾದ ಮಹಾಲಕ್ಷ್ಮಿಯು, ಆ ಭಗವಂತನ ಮಾಯಾಮಯವಾದ ರೂಪವನ್ನು ನೋಡಿ, ರಾತ್ರಿಯಲ್ಲಿ ರಾತ್ರ್ಯಭಿಮಾನಿದೇವತೆಗಳಾದ ಆ ಹೆಣ್ಣು ಮಕ್ಕಳೊಡನೆಯೂ, ಹಗಲಲ್ಲಿ ಅಹರಭಿಮಾನಿದೇವತೆಗಳಾದ ಆ ಗಂಡುಮಕ್ಕಳೊಡನೆಯೂ ಸೇರಿ, ಯೋಗನಿಷ್ಠಳಾಗಿ, ಬೀಜಾಕ್ಷರ ಪೂರ್ವಕವಾದ ಈ ಕೆಳಗಿನ ಮಂತ್ರದೊಡನೆ ಸ್ತುತಿಸುತ್ತಿರುವಳು. "ಓಂಕಾರವಾಚ್ಯನಾಗಿಯೂ, ಇಂದ್ರಿಯಗಳಿಗೆ ಅಧಿಪತಿಯಾಗಿಯೂ, ಪ್ರಕೃತಿಪುರುಷರಿಗೆ ದುರ್ಲಭವಾದ ಜ್ಞಾನಾದಿಗುಣಗಳುಳ್ಳವನೆಂದು ವೇದಾಂತಗಳಿಂದ ಪ್ರತಿಪಾದ್ಯನಾಗಿಯೂ, ಕರ್ಮೇಂದ್ರಿಯ . ಜ್ಞಾನೇಂದ್ರಿಯಗಳ ಮತ್ತು ಮನಸ್ಸಿನ ವ್ಯಾಪಾರಗಳಿಗೂ, ಪೃಥಿವ್ಯಾದಿ ಪಂಚಮಹಾಭೂತಗಳಿಗೂ ಒಳಹೊಕ್ಕು ಪ್ರೇರಿಸತಕ್ಕವನಾಗಿಯೂ, ಆ ಪಂಚಭೂತಗಳೊಡಗೂಡಿದ ಏಕಾದಶೇಂದ್ರಿಯಗಳೆಂಬ ಹದಿನಾರುಕಲೆಗಳನ್ನೂ ಶರೀರವಾಗಿ ಹೊಂದಿದವನಾಗಿಯೂ, ವೇದಸ್ವರೂಪನಾಗಿಯೂ ಇರುವ ನಿನಗೆ ನಮಸ್ಕಾರವು. ವ್ಯಷ್ಟಿತತ್ವಗಳನ್ನೆಲ್ಲಾ ಶರೀರವಾಗಿ ಹೊಂದಿ ಅನ್ನಮಯನೆನಿಸಿಕೊಂಡ ನಿನಗೆ ನಮಸ್ಕಾರವು! ಜೀವಶರೀರಕನಾದ ನಿನಗೆ ನಮಸ್ಕಾರವು! ಸರ್ವಾತ್ಮಕನಾದ ನಿನಗೆ ನಮಸ್ಕಾರವು! ಮನೋಬಲ, ಇಂದ್ರಿಯಬಲ, ದೇಹಬಲವೆಂಬಿವುಗಳಿಗೆ ಕಾರಣನಾಗಿಯೂ, ಸರ್ವಜನಪ್ರಿಯನಾಗಿಯೂ, ಆಶ್ರಿತರನ್ನು ಪ್ರೀತಿಸತಕ್ಕವನಾಗಿಯೂ ಇರುವ ನಿನಗೆ ಪ್ರತ್ಯಕ್ಷದಲ್ಲಿಯೂ, ಪರೋಕ್ಷದಲ್ಲಿಯೂ ನಮಸ್ಕಾರವು." ಎಂಬೀ ಅರ್ಥವುಳ್ಳ ಮಂತ್ರವನ್ನು ಜಪಿಸುತ್ತ ಹೀಗೆಂದು ಸ್ತುತಿಸುವಳು. "ಓ ದೇವಾ! ಲೋಕದಲ್ಲಿ ಅನೇಕಸ್ತ್ರೀಯರು, ಸರ್ವೇಂದ್ರಿಯಗಳಿಗೂ ಸ್ವತಂತ್ರನಿಯಾಮಕನಾದ ನಿನ್ನನ್ನು ಅನೇಕವ್ರತಗಳಿಂ

ದಾರಾಧಿಸಿ, ನೀನು ಪ್ರಸನ್ನನಾಗಿರುವಾಗಲೂ ನಿನ್ನ ಪಾದಸೇವೆಯನ್ನು ಕೇಳಿ ಕೊಳ್ಳದೆ, ತಮಗೆ ಬೇರೊಬ್ಬ ಪತಿಯನ್ನು ಕೊಡಬೇಕೆಂದು ಕೇಳಿಕೊಳ್ಳುವರು. ಇದು ಕೇವಲಮೌಢ್ಯವಲ್ಲದೆ ಬೇರೆಯಲ್ಲ! ಏಕೆಂದರೆ, ನಿನ್ನ ಅನುಗ್ರಹದಿಂದ ಅವರಿಗೆ ಲಭಿಸತಕ್ಕ ಪುರುಷರಾದರೋ ಯಾವ ವಿಧದಲ್ಲಿಯೂ ಸ್ವತಂತ್ರರಲ್ಲದು ದರಿಂದ, ಅವರು ಆ ಪತ್ನಿಯರಿಗೆ ಅತಿಪ್ರಿಯರಾದ ಮಕ್ಕಳನ್ನಾಗಲೀ, ಧನವನ್ನಾಗಲೀ, ಅವರ ಆಯುಸ್ಸನ್ನಾಗಲೀ ಕಾಪಾಡುವುದಕ್ಕೆ ಸಮರ್ಥರಲ್ಲ. ಯಾವನು ಯಾವ ಸಂದರ್ಭದಲ್ಲಿಯೂ ತಾನು ಭಯವಿಲ್ಲದವನಾಗಿ, ಭಯಾತುರರಾದ ತನ್ನ ಕಡೆಯವರನ್ನು ಸರ್ವವಿಧದಿಂದಲೂ ರಕ್ಷಿಸಬಲ್ಲನೋ ಅಂತವನಿಗೆಮಾತ್ರವೇ ಪತಿಯೆಂಬ ಹೆಸರು ಸಲ್ಲುವುದು! ಪ್ರಸಿದ್ಧಗುಣವುಳ್ಳ ನೀನೊಬ್ಬನೇ ಆ ಶಕ್ತಿಯುಳ್ಳವನೇಹೊರತು, ಲೋಕದಲ್ಲಿ ನಿನ್ನಂತವನು ಬೇರೊಬ್ಬನಿಲ್ಲ. ಸಮಾನಬಲವುಳ್ಳವರಿಬ್ಬರಿದ್ದಾಗ, ಅವರಲ್ಲಿ ಪರಸ್ಪರಭಯಕ್ಕೆ ಕಾರಣವುಂಟು. ಈ ಭಯವು ಏಕಾಧಿಪತ್ಯದಲ್ಲಿರುವ ಚಕ್ರವರ್ತಿಗಳಿಗೂ ತಪ್ಪಿದುದಲ್ಲ. ನಿನಗೆ ಸಮಾನರೊಬ್ಬರೂ ಇಲ್ಲದುದರಿಂದ ನಿನಗೆ ಭಯವೆಂಬ ಪ್ರಸಕ್ತಿಯೇ ಇಲ್ಲವು. ಆದುದರಿಂದ ಪತಿಯೆಂಬ ಶಬ್ದಕ್ಕೆ ಲೋಕದಲ್ಲಿ ನೀನೊಬ್ಬನೇ ತಕ್ಕ ಪಾತ್ರನು. ಇದಲ್ಲದೆ ಸ್ತ್ರೀಯರು ತಮ್ಮ ಪತಿಯ ಪ್ರೀತಿಯನ್ನು ಸಂಪಾದಿಸಬೇಕಾದರೆ, ಅವನನ್ನು ನಾನಾಬಗೆಯ ಉಪಚಾರಗಳಿಂದ ಸಂತೋಷಗೊಳಿಸಬೇಕಾಗಿರುವುದು. ನೀನು ಜೀವರಾಶಿಯನ್ನು ರಕ್ಷಿಸುವುದರಲ್ಲಿ ಅದೊಂದನ್ನೂ ಅಪೇಕ್ಷಿಸತಕ್ಕವನಲ್ಲ. ಜೀವನಿಗೆ "ತಾನು ಸರ್ವವಿಧದಲ್ಲಿಯೂ ಪರಮಾತ್ಮನಿಗೆ ಅಧೀನ" ನೆಂಬ ಜ್ಞಾನವೊಂದು ಮಾತ್ರ ಹುಟ್ಟಿದರೆ, ನೀನು ಬೇರೊಂದನ್ನೂ ಇದಿರುನೋಡದೆ, ಆದರಿಂದಲೇ ತೃಪ್ತನಾಗಿ ಅವನನ್ನು ರಕ್ಷಿಸುವೆ. ಲೋಕದಲ್ಲಿ ಸಮಸ್ತಪುರುಷಾರ್ಥಸ್ವರೂಪನಾದ ನಿನ್ನನ್ನು ಕುರಿತು, ಪತಿ ಪುತ್ರ ಧನಾಶೆಯುಳ್ಳ ಒಬ್ಬ ಸ್ತ್ರೀಯು ಎಷ್ಟೇವಿಧದಿಂದ ಆರಾಧಿಸಿದರೂ ನೀನು ಅವಳಿಗೆ, ಆ ಆಲ್ಪಫಲಗಳನ್ನೇ ಕೊಡತಕ್ಕವನು. ವಾಸ್ತವದಲ್ಲಿ ಎಲ್ಲರಿಗೂ ನೀನೊಬ್ಬನೇ ಆಶ್ರಯಪಡತಕ್ಕ ವಸ್ತುವೇ ಹೊರತು ಬೇರೆ ಯಾವುದೂ ಅಪೇಕ್ಷಿಸಲ್ಪಡತಕ್ಕವುಗಳಲ್ಲ. ಇದನ್ನು ತಿಳಿಯದೆ ಪತಿಪುತ್ರಾದಿಗಳನ್ನು ಕೋರತಕ್ಕ ಹೆಂಗಸು, ಕೊನೆಗೆ ಅವುಗಳ ವಿಯೋಗದಿಂದ ಅಪಾರವಾದ ದುಃಖಕ್ಕೆ ಗುರಿಯಾಗಬೇಕಾಗುವುದು. ದೇವಾ! ನಿನ್ನನ್ನು ಕೈಹಿಡಿದ ನನಗೊಬ್ಬಳಿಗೆಮಾತ್ರ, ಎಂದೆಂದಿಗೂ ನಾಶವಿಲ್ಲದ ಶಾಶ್ವತ ಸುಖವುಂಟೇಹೊರತು ಬೇರೊಬ್ಬ ಹೆಂಗಸಿಗೆ ಈ ಸುಖವಿರಲಾರದು. ಇಷ್ಟೇ ಅಲ್ಲವೆ, ಇಂದ್ರಿಯಪ್ರೀತಿಗಾಗಿ ವಿಷಯಭೋಗಗಳನ್ನು ಬಯಸುವ ಬ್ರಹ್ಮೇಂದ್ರರುದ್ರಾದಿ ದೇವತೆಗಳೂ ಕೂಡ, ನಿನ್ನ ಕಟಾಕ್ಷಲೇಶವನ್ನು ಪಡೆಯುವುದಕ್ಕಾಗಿ ಅನೇಕತಪಸ್ಸು

ಗಳಿಂದ ನನ್ನನ್ನು ಭಜಿಸುವರು. ನನಗೆ ಈ ವಿಧವಾದ ಮೇಲ್ಮೆಯುಂಟಾಗಿರುವುದಕ್ಕೂ, ನಾನು ನಿನ್ನ ಪ್ರೀತಿಗೆಪಾತ್ರಳಾಗಿರುವುದೇ ಕಾರಣವು. ಎಷ್ಟೇತಪಸ್ಸುಗಳಿಂದ ನನ್ನನ್ನು ಭಜಿಸಿದರೂ ನಿನ್ನಲ್ಲಿ ವಿಮುಖರಾದವರಿಗೆ ನಾನೂ ಒಲಿಯತಕ್ಕವಳಲ್ಲ. ಏಕೆಂದರೆ ನಾನು ನಿನಗಿಂತಲೂ ಬೇರೆಯಾದವಳಲ್ಲ! ಆದುದರಿಂದ ನಿನ್ನ ಪಾದಾಶ್ರಿತರಿಗೆಮಾತ್ರ ನಾನು ಅನುಕೂಲೆಯಾಗಿರುವೆನೇ ಹೊರತು, ಉಳಿದವರು ಎಷ್ಟೇತಪಸ್ಸನ್ನು ಮಾಡಿದರೂ ಅವರು ನನ್ನ ಕಟಾಕ್ಷಕ್ಕೆ ಪಾತ್ರರಾಗರು. ಓ ನಾಥಾ! ನೀನು ಆಶ್ರಿತವತ್ಸಲನು! ಸಕಲ ಪುರುಷಾರ್ಥಸ್ವರೂಪನು! ಸಮಸ್ತ ಪುರುಷಾರ್ಥಪ್ರದವೆಂದು ಲೋಕಪ್ರಸಿದ್ಧಿಯನ್ನು ಹೊಂದಿದ ನಿನ್ನ ಹಸ್ತ ಕಮಲವನ್ನು, ನೀನು ಭಕ್ತರ ಶಿರಸ್ಸಿನಲ್ಲಿಡುವಂತೆ, ನನ್ನ ಶಿರಸ್ಸಿನಲ್ಲಿಯೂ ಇಟ್ಟು ಅನುಗ್ರಹಿಸುವವನಾಗು! ನೀನು ನಿನ್ನ ಅಸಾಧಾರಣಚಿಹ್ನವಾದ ಶ್ರೀವತ್ಸವೆಂಬ ಮಚ್ಚೆಯನ್ನು ಹೇಗೋಹಾಗೆ, ನನ್ನನ್ನೂ ನಿನ್ನ ಎದೆಯಲ್ಲಿಯೇ ಧರಿಸಿರತಕ್ಕವನಾದರೂ, ನಿನಗೆ ನಿನ್ನ ಭಕ್ತರಲ್ಲಿರತಕ್ಕ ಅನುಗ್ರಹವು ನನ್ನಲ್ಲಿರದು. ಸರ್ವೇಶ್ವರನಾದ ನಿನ್ನ ಅಭಿಪ್ರಾಯವನ್ನೂ, ನಿನ್ನ ನಡತೆಯನ್ನೂ ಯಾರು ತಾನೇ ತಿಳಿಯಬಲ್ಲರು! ನಾಥಾ! ನೀನು ನಿನ್ನ ಭಕ್ತರಲ್ಲಿ ತೋರಿಸತಕ್ಕ ಅನುಗ್ರಹವನ್ನೇ ನನ್ನಲ್ಲಿಯೂ ತೋರಿಸುತ್ತಿರಬೇಕೆಂದು ನಾನು ಬಾರಿಬಾರಿಗೂ ಬೇಡಿಕೊಳ್ಳುವೆನು" ಎಂದು ಲಕ್ಷ್ಮೀದೇವಿಯು ಕಾಮದೇವರೂಪಿಯಾದ ಭಗವಂತನನ್ನು ಸ್ತುತಿಸುತ್ತಿರುವಳು.

ರುಕ್ಮಕವರ್ಷದಲ್ಲಿ ಭಗವಂತನು, ಹಿಂದೆ ತಾನು ಯುಗಾಂತಸಮಯದಲ್ಲಿ ಆ ವರ್ಷಾಧಿಪತಿಯಾದ ಮನುವಿಗೆ ತೋರಿಸಿದುದಾಗಿಯೂ, ತನಗೆ ಅತ್ಯಂತಪ್ರಿಯವಾಗಿಯೂ ಇರುವ ಮತ್ಸ್ಯಾವತಾರದ ರೂಪವನ್ನೇ ಈಗಲೂ ಕಾಣಿಸುತ್ತಿರುವನು. ಆ ಮನುವು ಈಗಲೂ ಆ ಭೂಭಾಗದಲ್ಲಿ ಅವಿಚ್ಛಿನ್ನವಾದ ಭಕ್ತಿಯಿಂದ ಆ ಮೂರ್ತಿಯನ್ನೇ ಆರಾಧಿಸುತ್ತ, ಈಕೆಳಗಿನ ಮಂತ್ರವನ್ನು ಜಪಿಸುವನು! "ಪ್ರಣವ ಸ್ವರೂಪನಾಗಿಯೂ, ಷಡ್ಗುಣ ಪರಿಪೂರ್ಣನಾಗಿಯೂ ಇರುವ ಆ ಶ್ರೀಹರಿಯ ಪ್ರಥಮಾವತಾರಕ್ಕೆ ನಮಸ್ಕಾರವು. ಶುದ್ಧಸತ್ವಮೂರ್ತಿಯಾಗಿಯೂ, ಪ್ರಾಣಾಶ್ರಯನಾಗಿಯೂ, ಇಂದ್ರಿಯಬಲಕ್ಕೂ ಮನೋಬಲಕ್ಕೂ ದೇಹಬಲಕ್ಕೂ ಆಧಾರಭೂತನಾಗಿಯೂ, ಇರುವ ಮಹಾಮತ್ಸ್ಯರೂಪಕ್ಕೆ ನಮಸ್ಕಾರವು" ಎಂಬೀ ಮಂತ್ರಾರ್ಥವನ್ನು ಜಪಿಸಿ ಹೀಗೆಂದು ಸ್ತುತಿಸುವನು. "ದೇವಾ! ನಿನ್ನ ರೂಪವನ್ನು ಒಳಗಾಗಲೀ, ಹೊರಗಾಗಲೀ, ಹೀಗೆಂದು ನಿರ್ಣಯಿಸುವುದಕ್ಕೆ ಲೋಕಪಾಲಕರಿಗೂ ಸಾಧ್ಯವಿಲ್ಲ! ನೀನು ವೇದಾತ್ಮಕವಾದ ಮಹಾಧ್ವನಿಯೊಡನೆ ಸಂಚರಿಸುತ್ತಿರುವೆ. ಮನುಷ್ಯನು ಸೂತ್ರದಿಂದ ಕಟ್ಟಿ ಬೊಂಬೆಯನ್ನಾಡಿಸುವಂತೆ, ನೀನು

ಚಿದಚಿದಾತ್ಮಕವಾದ ಸಮಸ್ತ ಜಗತ್ತನ್ನೂ ವೇದವಾಕ್ಯವೆಂಬ ಸೂತ್ರದಿಂದ ಕೈವಶಮಾಡಿಕೊಂಡು ಆಡಿಸತಕ್ಕವನು. ಆದುದರಿಂದ ಸಮಸ್ತ ಲೋಕಗಳಿಗೂ ನೀನೊಬ್ಬನೇ ಈಶ್ವರನು. ಇಂದ್ರಾದಿ ಲೋಕಪಾಲಕರೆಲ್ಲರೂ ತಮ್ಮೊಳಗೆ ಅಸೂಯೆಯನ್ನು ಬಿಟ್ಟು ಐಕಮತ್ಯದಿಂದ ಒಂದಾಗಿ ಸೇರಿಯಾಗಲೀ, ಪ್ರತ್ಯೇಕವಾಗಿಯಾಗಲೀ, ಎಷ್ಟೆಷ್ಟೇ ವಿಧದಿಂದ ಪ್ರಯತ್ನಮಾಡಿದರೂ, ದ್ವಿಪಾತ್ತುಗಳೆಂದೂ, ಚತುಷ್ಪಾತ್ತುಗಳೆಂದೂ, ಸರೀಸೃಪಗಳೆಂದೂ, ನಾನಾಭೇದವುಳ್ಳ ಜಂಗಮಸ್ಥಾವರರೂಪವಾದ ಈ ಪ್ರಪಂಚವನ್ನು ತಮ್ಮ ಸ್ವಶಕ್ತಿಯಿಂದ ರಕ್ಷಿಸಲಾರರು. ಅದಕ್ಕೆ ನೀನೊಬ್ಬನೇ ಶಕ್ತನು! ದೇವಾ! ಹಿಂದೆ, ಪ್ರಳಯಕಾಲದ ಮಹಾಸಮುದ್ರಮಧ್ಯದಿಂದ ನಾನಾ ಬಗೆಯ ಓಷಧಿಗಳಿಗೂ ಆಧಾರವಾಗಿದ್ದ ಈ ಭೂಮಂಡಲವನ್ನೂ, ನನ್ನನ್ನೂ, ಮೇಲೆತ್ತಿತಂದು, ಮಹಾವೀರ್ಯದಿಂದ ಸಂಚರಿಸಿದವನೇ ನೀನು! ಸಮಸ್ತ ಜಗತ್ತಿಗೂ ಪ್ರಾಣಸ್ವರೂಪನಾದ ನಿನಗೆ ನಮಸ್ಕಾರವು." ಎಂಬೀಸ್ತುತಿವಾಕ್ಯಗಳಿಂದ ಮನುವು ಮತ್ಸ್ಯರೂಪಿಯಾದ ಭಗವಂತನನ್ನು ಸ್ತುತಿಸುವನು.

ಹಿರಣ್ಮಯವರ್ಷದಲ್ಲಿ ಭಗವಂತನು ಕೂರ್ಮರೂಪದಿಂದ ನೆಲೆಗೊಂಡಿರುವನು. ಭಗವಂತನಿಗೆ ಅತ್ಯಂತಪ್ರಿಯವಾದ ಆ ಮೂರ್ತಿಯನ್ನು ಪಿತೃಗಣಾಧಿಪತಿಯಾದ ಅರ್ಯಮನೆಂಬವನು ಆ ಪ್ರದೇಶನಿವಾಸಿಗಳೊಡನೆ ಆರಾಧಿಸುತ್ತಿರುವನು. ಅವನು ಆ ಭಗವಂತನನ್ನು ಕುರಿತು, "ಓಂಕಾರನಾಮ್ನನಾದ ಕೂರ್ಮರೂಪಿಯಾದ ಭಗವಂತನಿಗೆ ನಮಸ್ಕಾರವು! ಸಮಸ್ತ ಜಂತುಗಳನ್ನೂ, ಅವುಗಳ ಗುಣಗಳನ್ನೂ ತನ್ನಲ್ಲಿ ಧರಿಸಿದವನಾಗಿಯೂ ಅಗಾಧವಾದ ಸಮುದ್ರದಲ್ಲಿ ಬೇರೊಬ್ಬರಿಗೆ ತಿಳಿಯದೆ ವಾಸಮಾಡತಕ್ಕನಾಗಿಯೂ, ಪ್ರಕೃತಿಸಂಬಂಧಶರೀರವಿಲ್ಲದನಾಗಿಯೂ, ಮಹಾಮಹಿಮೆಯುಳ್ಳವನಾಗಿಯೂ, ಸರ್ವಾಧಾರನಾಗಿಯೂ ಇರುವ ನಿನಗೆ ನಮಸ್ಕಾರವು." ಎಂಬೀಮಂತ್ರವನ್ನು ಜಪಿಸಿ, ಈಕೆಳಗಿನ ವಾಕ್ಯಗಳಿಂದ ಸ್ತುತಿಸುವನು. "ಓದೇವಾ! ಈ ಪ್ರಪಂಚಸ್ವರೂಪವೆಲ್ಲವೂ ನಿನ್ನ ಮಾಯೆಯಿಂದಲೇ ಏರ್ಪಟ್ಟಿದ್ದು, ಜೀವವರ್ಗಗಳಿಗೆ ಭೋಗಸಾಧನವಾಗಿ ಬೇರೆಬೇರೆ ಜಾತಿಗುಣಾದಿಭೇದಗಳಿಂದ ಇಷ್ಟೆಂದು ನಿರ್ಣಯಿಸುವುದಕ್ಕಾಗದಷ್ಟು ಅನೇಕಾನೇಕರೂಪಗಳಿಂದ ತೋರುತ್ತಿರುವುದು. ಓ ದೇವಾ! ಜರಾಯುಜಗಳು (ಗರ್ಭಚೀಲದಲ್ಲಿ ಹುಟ್ಟತಕ್ಕ ಮನುಷ್ಯಮೃಗಾದಿ ಜಾತಿಗಳು) ಸ್ವೇದಜಗಳು, (ಕಶ್ಮಲದಲ್ಲಿ ಶಾಕದಿಂದ ಹುಟ್ಟತಕ್ಕ ಕ್ರಿಮಿಕೀಟಗಳು, ಅಂಡಜಗಳು, (ಮೊಟ್ಟೆಯೊಡೆದು ಹುಟ್ಟತಕ್ಕ ಪಕ್ಷಿಮುಂತಾದುವು) ಉದ್ಭಿಜ್ಜಗಳು, (ನೆಲದಿಂದಮೊಳೆತು ಬೆಳೆಯತಕ್ಕ ವೃಕ್ಷಜಾತಿಗಳು) ಈ ನಾಲ್ಕುಭೇದವುಳ್ಳ ಚರಾಚರಾತ್ಮಕವಾದ ಸಮಸ್ತಪ್ರಪಂಚವೂ ನಿನ್ನ ಶರೀರ

ವಲ್ಲದೆ ಬೇರೆಯಲ್ಲ. ಇದಲ್ಲದೆ ದ್ಯುಲೋಕ, ಆಕಾಶ, ಭೂಮಿ, ಪರ್ವತ, ನದನದೀ ಸಮುದ್ರಗಳು,ದ್ವೀಪಗಳು, ಚಂದ್ರಸೂರ್ಯಾದಿಗ್ರಹಗಳು,ಅಶ್ವಿನಿ ಮೊದಲಾದ ಎಲ್ಲಾ ಶಬ್ದಗಳಿಂದಲೂ ನೀನೊಬ್ಬನೇ ಕರೆಯಲ್ಪಡುತ್ತಿರುವೆ. ಲೆಕ್ಕವಿಲ್ಲದಷ್ಟು ಬೇರೆಬೇರೆ ವಿಧದಿಂದ ಕರೆಯಲ್ಪಡುವ ದೇವಾದಿನಾಮಗಳೂ, ದೇವಾದಿ ಶರೀರಗಳೂ, ಪೃಥಿವಿ ಮೊದಲಾದ ದ್ರವ್ಯಗಳೂ, ನಿನ್ನ ರೂಪಾಂತರಗಳಾಗಿದ್ದರೂ, ಮಂದಬುದ್ಧಿಯುಳ್ಳ ಮೂಢರಿಗೆ ಚೆನ್ನಾಗಿ ತಿಳಿಯುವುದಕ್ಕಾಗಿ, ಕಪಿಲಾದಿಮಹರ್ಷಿಗಳು ಆ ನಿನ್ನ ರೂಪಗಳನ್ನೇ ಇಪ್ಪತ್ತನಾಲ್ಕುತತ್ವಗಳೆಂದೂ, ಇಪ್ಪತ್ತೈದು ತತ್ವಗಳೆಂದೂ ವಿವರಿಸಿ ತೋರಿಸಿರುವರು. ಆ ಪ್ರಮೇಯಪ್ರಭಾವವುಳ್ಳ ನಿನ್ನ ಸ್ವರೂಪವನ್ನು ತಿಳಿದೊಡನೆಯೇ ಈ ಸಂಖ್ಯಾಭೇದಗಳೆಲ್ಲವೂ ಹಾರಿ ಹೋಗುವುದು. ಏಕೆಂದರೆ ಅವೆಲ್ಲವೂ ನಿನಗೆ ಶರೀರವಾಗಿ ಏಕರೂಪದಿಂದಿರುವುವು. ಆ ನಿನ್ನ ಸ್ವರೂಪವು ಸಾಂಖ್ಯಶಾಸ್ತ್ರದಿಂದ ಚೆನ್ನಾಗಿ ತಿಳಿಯತಕ್ಕುದಾಗಿರುವುದು ಅಂತಹ ನಿನಗೆ ನಮಸ್ಕಾರವು." ಎಂದು ಆರ್ಯಮನು ಕೂರ್ಮಮೂರ್ತಿಯನ್ನು ಸ್ತುತಿಸುವನು.

ಉತ್ತರ ಕುರುವರ್ಷದಲ್ಲಿ ಯಜ್ಞಪುರುಷನಾದ ಭಗವಂತನು ವರಾಹರೂಪದಿಂದ ನೆಲೆಗೊಂಡಿರುವನು. ಆತನನ್ನು ಭೂದೇವಿಯು,ಅಲ್ಲಿನಮಹಾಪುರುಷರೊಡನೆ, ನಿಶ್ಚಲವಾದ ಭಕ್ತಿಯೋಗದಿಂದ ಈಕೆಳಗಿನಮಂತ್ರವನ್ನು ಜಪಿಸಿಸ್ತೋತ್ರಮಾಡುತ್ತಿರುವಳು."ಓಂಕಾರಶಬ್ದವಾಚ್ಯನಾದಭಗವಂತನಿಗೆನಮಸ್ಕಾರವು.ಬೇರೆಬೇರೆಮಂತ್ರಗಳಿಂದಕರೆಯಲ್ಪಡುವ ಇಂದ್ರಾದಿದೇವತೆಗಳೆಲ್ಲರನ್ನೂ ಶರೀರವಾಗಿ ಉಳ್ಳ ಯಜ್ಞಸ್ವರೂಪನಾದ ವರಾಹಮೂರ್ತಿಗೆ ನಮಸ್ಕಾರವು. ಸೋಮವಿಶಿಷ್ಟವಾಗಿಯೂ, ಸೋಮವಿಲ್ಲದೆಯೂ ನಡೆಸಲ್ಪಡುವ ಯಾಗಭೇದಗಳೆಲ್ಲವನ್ನೂ ಶರೀರವಾಗಿ ಹೊಂದಿದ ಮಹಾಪುರುಷನಿಗೆ ನಮಸ್ಕಾರವು. ತಾನೇ ಯಜ್ಞಸ್ವರೂಪನಾಗಿಯೂ, ತಾನೇ ಆ ಯಜ್ಞಗಳಿಂದ ಆರಾಧಿಸಲ್ಪಡತಕ್ಕವನಾಗಿಯೂ, ತಾನೇ ಆ ಯಜ್ಞಗಳಿಗೆ ಫಲವನ್ನು ಕೊಡತಕ್ಕವನಾಗಿಯೂ, ತಾನೇ ಯಜ್ಞಸಾಧನನಾಗಿಯೂ, ತಾನೇ ಹವಿಸ್ಸಾಗಿಯೂ ಇರುವ ಭಗವಂತನಿಗೆ ನಮಸ್ಕಾರವು. ಜ್ಞಾನಶಕ್ತಿ ಮೊದಲಾದ ಷಡ್ಗುಣಗಳಿಂದತುಂಬಿದ ಪರಮಪುರುಷನಿಗೆ ನಮಸ್ಕಾರವು. ರಕ್ತನೇತ್ರಗಳುಳ್ಳ ಶ್ವೇತವರಾಹಮೂರ್ತಿಗೆ ನಮಸ್ಕಾರವು!" ಎಂಬೀ ಅರ್ಥವುಳ್ಳ ಮಂತ್ರವನ್ನು ಜಪಿಸಿ ಹೀಗೆಂದು ಸ್ತೋತ್ರಮಾಡುವಳು. "ದೇವಾ! ಕರ್ಮಬದ್ಧರಾಗಿ ದೇವಾದಿಶರೀರಗಳನ್ನು ಹೊಂದಿರುವ ಜೀವಾತ್ಮರಲ್ಲಿ, ಅರಣಿಯೊಳಗಿನ ಬೆಂಕಿಯಂತೆ ನೀನು ಮರೆಸಿಕೊಂಡಿರುವೆ! ನಿನ್ನನ್ನು ತಿಳಿಯುವುದಕ್ಕಾಗಿ, ಅರಣಿಯನ್ನು ಜ್ಞಬೆಂಕಿಯನ್ನು ತೆಗೆಯುವಂತೆ, ಪ್ರಾಜ್ಞರಾದ ಮುಹನೀಯರು, ತಮ್ಮ ಮನಸ್ಸೆಂಬು

ಕಡೆತದ ಕಲ್ಲಿನಿಂದ ಕಡೆದು, ನಿನ್ನನ್ನು ಸಾಕ್ಷಾತ್ಕರಿಸುವರು. ಇಂತಹ ಮಹಾ ಪ್ರಭಾವವುಳ್ಳವನಾಗಿಯೂ, ಸರ್ವಶರಣ್ಯನಾಗಿಯೂ ಸರ್ವನಿಯಾಮಕನಾಗಿಯೂ ಇರುವ ನಿನಗೆ ನಮಸ್ಕಾರವು. ಓ ಭಗವಂತಾ! ಆತ್ಮತತ್ವವನ್ನು ಚೆನ್ನಾಗಿ ತಿಳಿದ ಮಹಾಪುರುಷರು, ಭೂತೇಂದ್ರಿಯಗಳ ಸಮುದಾಯದಿಂದ ನಿರ್ಮಿಸಲ್ಪಟ್ಟಿರುವ ಶರೀರವನ್ನೂ ಅದರಲ್ಲಿ ಕರ್ತೃರೂಪದಿಂದಿರುವ ಜೀವಾತ್ಮನನ್ನೂ, ಅದಕ್ಕೆ ಕಾರಣವೆನಿಸಿದ ಪ್ರಕೃತಿಗುಣಗಳಾದ ಸತ್ವರಜಸ್ತಮಸ್ಸುಗಳನ್ನೂ ತಮ್ಮ ವಿವೇಚನೆಯಿಂದ ತಿಳಿದಿರುವರು. ನೀನೂ ಅವುಗಳಲ್ಲಿ ಸೇರಿ ಏಕರೂಪದಿಂದ ಕಲೆತಿದ್ದರೂ, ಅವೆಲ್ಲಕ್ಕೂ ನೀನೇ ನಿಯಾಮಕನಾಗಿ ಆ ಪ್ರಕೃತಿಪುರುಷರಿಗಿಂತಲೂ ವಿಲಕ್ಷಣನೆಂಬುದನ್ನೂ ಕಂಡು ಕೊಳ್ಳುವರು. ಹೀಗೆ ಮಹಾತ್ಮರಿಗೆ ಮಾತ್ರ ಗೋಚರಿಸತಕ್ಕ ಸ್ವರೂಪವುಳ್ಳ ನಿನಗೆ ನಮಸ್ಕಾರವು. ಓ ದೇವಾ! ನೀನು ಪ್ರಕೃತಿಗುಣಗಳಾದ ರಜಸ್ಸತ್ವತಮೋ ಗುಣಗಳಿಂದಲೇ, ಜಗತ್ತಿನ ಸೃಷ್ಟಿಸ್ಥಿತಿಸಂಹಾರಗಳನ್ನು ನಡೆಸುತ್ತಿರುವೆ. ಜೀವಾತ್ಮರ ಕ್ಷೇಮಕ್ಕಾಗಿಯೇ ನೀನು ಇವುಗಳನ್ನು ನಡೆಸುವೆಯೇ ಹೊರತು, ಈ ಕಾರ್ಯದಿಂದ ನೀನು ಪಡೆಯಬೇಕಾದ ಪ್ರಯೋಜನವೊಂದೂ ಇರುವುದಿಲ್ಲ. ಆಯಸ್ಕಾಂತದ ಮುಂದಿರುವ ಲೋಹವು, ಅದರಮಾರ್ಗವನ್ನೇ ಹಿಡಿದು ಸುತ್ತುವಂತೆ ಪ್ರಕೃತಿಯು, ನಿನ್ನ ಸಂಕಲ್ಪಾನುಸಾರವಾಗಿ ಸೃಷ್ಟ್ಯಾದಿ ಕಾರ್ಯಗಳನ್ನು ನಡೆಸುತ್ತಿರುವುದು. ಈ ಸೃಷ್ಟ್ಯಾದಿಕಾರ್ಯಗಳಿಗೂ, ಅನಾದಿಯಾದ ಪ್ರಣ್ಮಶಾಪಕರ್ಮಗಳಿಗೂ ನೀನು ಸಾಕ್ಷಿಯಾಗಿಮಾತ್ರವೇ ಇರತಕ್ಕವನು. ಆದುದರಿಂದ ಜೀವನಿಗೆ ದುಃಖಕಾರಣಗಳಾದ ಜನ್ಮ ಜರಾ ಮರಣಾದಿಗಳುಂಟಾಗುವ ವಿಷಯದಲ್ಲಿ ನಿನ್ನನ್ನು ಪಕ್ಷಪಾತಿಯೆಂದಾಗಲೀ, ದಯಾಶೂನ್ಯನೆಂದಾಗಲೀ ಹೇಳುವುದಕ್ಕಿಲ್ಲ. ಹೀಗೆ ಸರ್ವಸಮನಾದ ನಿನಗೆ ನಮಸ್ಕಾರವು. ಹೇ ನಾಥಾ! ಪೂರ್ವದಲ್ಲಿ ರಾಕ್ಷಸನ ಕೈಗೆ ಸಿಕ್ಕಿದ್ದ ನನ್ನನ್ನು ಉದ್ಧರಿಸುವುದಕ್ಕಾಗಿಯೇ, ನೀನು ಈ ವರಾಹರೂಪವನ್ನು ಕೈಕೊಂಡು ಪಾತಾಳದಲ್ಲಿ ಪ್ರವೇಶಿಸಿ, ಮದದಾನೆಯಂತೆ ಮೇಲೆ ಬಿದ್ದ ರಾಕ್ಷಸನನ್ನುಕೊಂದು, ಲೀಲಾಮಾತ್ರದಿಂದಲೇ ಮಹಾಸಮುದ್ರದಲ್ಲಿ ಮುಳುಗಿಹೋಗಿದ್ದ ನನ್ನನ್ನು ನಿನ್ನ ಕೋರೆದಾಡೆಯಿಂದ ಮೇಲಕ್ಕೆತ್ತಿ ತಂದೆಯಲ್ಲವೇ? ಇಂತಹ ಆದಿವರಾಹಮೂರ್ತಿಯಾದ ನಿನಗೆ ನಮಸ್ಕಾರವು" ಎಂದು ಭೂದೇವಿಯು ವರಾಹಮೂರ್ತಿಯನ್ನು ಸ್ತುತಿಸುತ್ತಿರುವಳು. ಇದು ಹದಿನೆಂಟನೆಯ ಅಧ್ಯಾಯವು.

———

ಕಿಂಪುರುಷವರ್ಷದಲ್ಲಿಯೂ, ಭರತವರ್ಷದಲ್ಲಿಯೂ ಭಗವಂತನ ರೂಪವನ್ನೂ, ಅಲ್ಲಿನ ಉಪಾಸಕರನ್ನೂ ಭರತವರ್ಷದ ಮೇಲ್ಮೈಯನ್ನೂ ತಿಳಿಸಿದುದು.

ಕಿಂಪುರುಷವರ್ಷದಲ್ಲಿ ಆದಿಪುರುಷನಾದ ಭಗವಂತನು, ಲಕ್ಷ್ಮಣಾಗ್ರಜನಾಗಿಯೂ, ಸೀತಾಕಾಂತನಾಗಿಯೂ ಇರುವ ಶ್ರೀರಾಮಮೂರ್ತಿಯಾಗಿ ನೆಲೆಗೊಂಡಿರುವನು. ಆತನ ಪಾದಸೇವೆಯಲ್ಲಿ ಅತ್ಯಾದರವುಳ್ಳ ಪರಮಭಾಗವತೋತ್ತಮನಾದ ಆಂಜನೇಯನು, ಅಲ್ಲಿನ ನಿವಾಸಿಗಳಾದ ಕಿಂಪುರುಷರೂಡಗೂಡಿ ಅವಿಚ್ಛಿನ್ನವಾದ ಭಕ್ತಿಯಿಂದ ಆತನನ್ನಾರಾಧಿಸುತ್ತಿರುವನು. ಗಂಧರ್ವರು ಆ ಕಿಂಪುರುಷವರ್ಷದ ಪ್ರಜೆಗಳಲ್ಲಿ ಪ್ರಮುಖನಾದ ಆರ್ಷ್ಟಿಷೇಣನನ್ನು ಮುಂದಿಟ್ಟುಕೊಂಡು, ಮಂಗಳಕರವಾದ ಶ್ರೀರಾಮಚರಿತ್ರವನ್ನು ಯಾವಾಗಲೂ ಗಾನಮಾಡುತ್ತಿರುವರು. ಆಂಜನೇಯನು ಅದನ್ನು ಭಕ್ತಿಯಿಂದ ಬದ್ಧಾಂಜಲಿಯಾಗಿ ಕೇಳುತ್ತಿರುವುದಲ್ಲದೆ, ತಾನೂ ಈ ಕೆಳಗಿನ ಮಂತ್ರಜಪದೊಡನೆ ಆ ಶ್ರೀರಾಮಮೂರ್ತಿಯನ್ನು ಸ್ತೋತ್ರಮಾಡುತ್ತಿರುವನು "ಓಂಕಾರಸ್ವರೂಪನಾದ ಭಗವಂತನಿಗೆ ನಮಸ್ಕಾರವು! ಬ್ರಹ್ಮಾದಿಗಳಿಂದಲೂ ಸ್ತುತಿಸಲ್ಪಡತಕ್ಕವನಾಗಿದ್ದರೂ, ಸಾಧುಗಳ ಲಕ್ಷಣಗಳನ್ನೂ, ನಡತೆಗಳನ್ನೂ, ವ್ರತಗಳನ್ನೂ ನಡೆಸಿ ತೋರಿಸುತ್ತಿರುವ ಆ ಪರಮಾತ್ಮನಿಗೆ ನಮಸ್ಕಾರವು! ಶಾಂತಚಿತ್ತನಾದ ಶ್ರೀರಾಮಮೂರ್ತಿಗೆ ನಮಸ್ಕಾರವು! ಸಾಮಾನ್ಯಜನದ ನಡತೆಯನ್ನನುವರ್ತಿಸುತ್ತಿರುವ ಆ ಪರಮ್ಮಾತನಿಗೆ ನಮಸ್ಕಾರವು. ಸಾಧುವೆಂಬ ಪ್ರಸಿದ್ಧಿಗೆ ಒರೆಗಲ್ಲಿನಂತೆ ನಿರ್ಣಯಸ್ಥಾನವಾಗಿಯೂ, ಬ್ರಾಹ್ಮಣಕುಲಕ್ಕೆ ರಕ್ಷಕನಾಗಿಯೂ, ಮಹಾಪುರುಷಲಕ್ಷಣವಿಶಿಷ್ಟನಾಗಿಯೂ, ರಾಜಾಧಿರಾಜನಾಗಿಯೂ, ಇರುವ ಶ್ರೀರಾಮದೇವನಿಗೆ ನಮಸ್ಕಾರವು." ಎಂಬೀ ಮಂತ್ರವನ್ನು ಜಪಿಸುತ್ತ ಹೀಗೆಂದು ಸ್ತುತಿಸುವನು. "ಕೇವಲ ಶುದ್ಧಜ್ಞಾನಸ್ವರೂಪನಾಗಿಯೂ ತನ್ನ ತೇಜಸ್ಸಿನಿಂದಲೇ ಸತ್ವರಜಸ್ತಮೋಗುಣಗಳಿಂದುಂಟಾಗತಕ್ಕ ಉತ್ಪತ್ತಿಸ್ಥಿತಿ ಮರಣಗಳೆಂಬ ಮೂರುಬಗೆಯ ವಿಕಾರಗಳನ್ನೂ ನೀಗಿದವನಾಗಿಯೂ, ಹೆಸರು, ಬಾಯಾರಿಕೆ, ಮುಂತಾದ ಷಡೂರ್ಮಿಗಳಿಲ್ಲದವನಾಗಿಯೂ, ಸ್ವಯಂಪ್ರಕಾಶವಿಶಿಷ್ಟನಾಗಿಯೂ, ಉತ್ತಮಜ್ಞಾನಕ್ಕೆ ಗೋಚರಿಸತಕ್ಕವನಾಗಿಯೂ, ನಾಮರೂಪಾದಿಭೇದಗಳಿಲ್ಲದವನಾಗಿಯೂ ಇರುವ ಪುರುಷೋತ್ತಮನನ್ನು ಮರೆಹೊಗುವೆನು. ಓ ನಾಥಾ! ನೀನು ಮನುಷ್ಯಾವತಾರವನ್ನು ಕೈಕೊಂಡುದು ರಾಕ್ಷಸವಧಕ್ಕಾಗಿಮಾತ್ರವೇ ಅಲ್ಲ! ಲೋಕಕ್ಕೆ ಸಂಸಾರದಲ್ಲಿರುವ ದುಃಖಪರಂಪರೆಗಳನ್ನು ತಿಳಿಸುವುದರೊಡನೆ, ಧರ್ಮಸಂಸ್ಥಾಪನೆಯನ್ನು ಮಾಡುವುದಕ್ಕಾಗಿಯೂ

ನೀನೂ ಈ ಅವತಾರವನ್ನು ಪರಿಗ್ರಹಿಸಿರುವೆ! ಹಾಗಿಲ್ಲದಪಕ್ಷದಲ್ಲಿ ಆತ್ಮಾನುಭವ ನಂದಲೇ ನಿತ್ಯಾನಂದಮೂರ್ತಿಯಾಗಿ ನೆಲೆಗೊಂಡಿರುವ ನಿನಗೆ ದುಃಖವೆಂದರೇನು? ನಿತ್ಯಾನಪಾಯಿನಿಯಾದ ಲಕ್ಷ್ಮೀದೇವಿಯೊಡನೆ ವಿಹರಿಸುತ್ತಿರುವ ನಿನಗೆ, ಸೀತಾ ವಿಯೋಗವೇ ಮೊದಲಾದ ಕಷ್ಟಗಳೆಲ್ಲಿಯವು? ಅವೆಲ್ಲವೂ ಲೋಕದ ಜನಗಳಿಗೆ ಸಂಸಾರದುಃಖವನ್ನು ತೋರಿಸುವುದಕ್ಕಾಗಿ ಮಾಡಿದ ನಟನಗಳೇಹೊರತು ನಿಜವಲ್ಲ! ರಾಕ್ಷಸವಧವೇ ಈ ಅವತಾರದ ಮುಖ್ಯಪ್ರಯೋಜನವೆಂದು ಹೇಳುವ ಹಾಗಿದ್ದರೆ, ನೃಸಿಂಹಾದ್ಯವತಾರಗಳಂತೆ ದುಃಖಾನುಭವವಿಲ್ಲದಂತೆಯೇ ಕ್ರೂರರಾಕ್ಷಸರನ್ನು ಕೊಂದು ನಿನ್ನ ಸರ್ವೇಶ್ವರತ್ವವನ್ನು ಮಾತ್ರ ತೋರಿಸಬಹುದಾಗಿತ್ತಲ್ಲವೇ? ಸರ್ವ ಶಕ್ತನಾದ ನಿನಗೆ ಅದೊಂದು ಸಾಧ್ಯವೇ? ರಾಮರೂಪದಿಂದವತರಿಸಿದ ಓ ಪರಮ ಪುರುಷಾ! ನೀನು ಸಾಂಸಾರಿಕಧರ್ಮಗಳನ್ನು ನಿಶ್ಶೇಷವಾಗಿ ನೀಗಿದ ಶುದ್ಧಮನಸ್ಸುಳ್ಳ ಸನಕಾದಿಗಳಿಗೂ ಅಂತರಾತ್ಮನಾಗಿರತಕ್ಕವನು! ಆಶ್ರಿತರಲ್ಲಿ ಎಣೆಯಿಲ್ಲದ ವಾತ್ಸಲ್ಯವುಳ್ಳವನು! ಅವರ ಪ್ರೀತಿಗೂ ನೀನು ಮುಖ್ಯಪಾತ್ರನಾದವನು. ಜ್ಞಾನ, ಶಕ್ತಿ, ಮೊದಲಾದ ಷಡ್ಗುಣಗಳಿಂದ ತುಂಬಿದವನು. ಸಮಸ್ತಲೋಕವೂ ನಿನ್ನಲ್ಲಿ ಆಡಗಿರುವುದರಿಂದಲೂ, ನೀನೂ ಆ ಸಮಸ್ತವಸ್ತುಗಳಲ್ಲಿ ಅಂತರಾತ್ಮನಾಗಿರುವುದರಿಂದಲೂ, ವಾಸುದೇವನೆಂದು ಕರೆಯಲ್ಪಡುತ್ತಿರುವೆ? ಹೀಗೆ ಸಮಸ್ತವಸ್ತುಗಳಲ್ಲಿಯೂ ನೀನು ಕಲೆತಿದ್ದರೂ, ಆಯಾವಸ್ತು ದೋಷಗಳು ನಿನ್ನನ್ನು ಮುಟ್ಟಲಾರವು. ಆದುದರಿಂದಲೇ ನೀನು ನಿತ್ಯಶುದ್ಧನೆಂದು ಹೆಸರುಗೊಂಡವನು. ಸರ್ವ ವ್ಯಾಪಿಯಾಗಿದ್ದರೂ ಶಬ್ದಾದಿವಿಷಯಗಳಲ್ಲಿ ಆಸಕ್ತಿಯಿಲ್ಲದ ನೀನು, ಪತ್ನಿಯಾದ ಸೀತೆಯನ್ನಾಗಲೀ, ತಮ್ಮನಾದ ಲಕ್ಷ್ಮಣನನ್ನಾಗಲೀ, ಆಗಲಿ ದುಃಖಿಸುವುದೆಂದರೇನು? ಇವೆಲ್ಲವೂ ಲೋಕಶಿಕ್ಷಣಕ್ಕಾಗಿ ನೀನು ಮಾಡಿದ ನಟನಮಾತ್ರವಲ್ಲದೆ ಬೇರೆಯಲ್ಲ. ದೇವಾ! "ಒಂದಾವರ್ತಿ ತನ್ನಲ್ಲಿ ಮಿತ್ರಭಾವವನ್ನು ತೋರಿಸಿದ ಮಾತ್ರಕ್ಕೆ ಅಂತವರನ್ನು ಎಂದೆಂದಿಗೂ ಕೈಬಿಡುವವನಲ್ಲ" ವೆಂದು ಪ್ರತಿಜ್ಞೆ ಮಾಡಿದ ನೀನು ನಿನ್ನ ಪಾದಸೇವೆಯಲ್ಲಿಯೇ ನಿತ್ಯಾಸಕ್ತರಾಗಿಯೂ, ನಿನಗೆ ನಿತ್ಯಾನಪಾಯಿಗಳಾಗಿಯೂ ಇರುವ ಸೀತಾಲಕ್ಷ್ಮಣರನ್ನು ಆಗಲುವುದೆಂದರೇನು? ಓ ಮಹನೀಯಾ! ಆಶ್ರಿತರಕ್ಷಣೆಯವಿಷಯದಲ್ಲಿ, ನೀನು ಉತ್ತಮಕುಲವನ್ನಾಗಲೀ, ಸೌಂದರ್ಯವನ್ನಾಗಲೀ, ಬುದ್ಧಿಚಾತುರ್ಯವನ್ನಾಗಲೀ, ಆಕಾರವನ್ನಾಗಲೀ, ನೋಡತಕ್ಕವನಲ್ಲ. ಆದುದರಿಂದ ಸರ್ವಭೂತಸುಹೃತ್ತಾದ ಪರಬ್ರಹ್ಮವೇ ನೀನೆಂಬುದರಲ್ಲಿ ಸಂದೇಹವಿಲ್ಲ. ಹಾಗಿಲ್ಲದೆ ಕುಲರೂಪಾದಿಗಳ ಮೇಲ್ಮೆಯನ್ನು ನೋಡಿಯೇ ನೀನು ಸಂತೋಷಿಸುವಪಕ್ಷದಲ್ಲಿ, ತಿರ್ಯಗ್ಜಾತಿಯಲ್ಲಿ ಹುಟ್ಟಿದ ನಮ್ಮಂತಹ ಕಪಿಗಳಲ್ಲಿ

ನೀನು ಸ್ನೇಹವನ್ನು ಮಾಡುತ್ತಿದ್ದೆಯಾ ? ಆದುದರಿಂದ ಓ ನಾಥಾ ! ನೀನು ಭಕ್ತಾನುಗ್ರಹಾರ್ಥವಾಗಿಯೇ ಈ ಮನುಷ್ಯರೂಪವನ್ನು ಕೈಕೊಂಡಿರುವೆ ! ನಿನ್ನಲ್ಲಿ ಎಣೆಯಿಲ್ಲದ ಪ್ರಭಾವವಿರುವುದರಿಂದಲೇ ಕ್ರಿಮಿಕೀಟಗಳು ಮೊದಲಾಗಿ ಕೋಸಲದೇಶದ ಪ್ರಾಣಿಗಳೆಲ್ಲವೂ ನಿನ್ನೊಡನೆ ಉತ್ತಮಗತಿಯನ್ನು ಹೊಂದಿದುವು ! ಓ ಪರುಷೋತ್ತಮಾ ! ಹೀಗೆ ರಾಮರೂಪದಿಂದ ಮನುಷ್ಯಾವತಾರವನ್ನೆತ್ತಿ, ಸರ್ವಜನಪ್ರಿಯನಾಗಿಯೂ, ಉಪಕಾರಾಭಿಜ್ಞನಾಗಿಯೂ ಇರುವ ನಿನ್ನ ಮುಂದೆ ನಿಂತು, ಒಂದಾವರ್ತಿ ಕೈಮುಗಿದವನು, ದೇವತೆಯಾಗಲೀ, ರಾಕ್ಷಸನಾಗಲೀ, ನರನಾಗಲೀ, ವಾನರನಾಗಲೀ, ಅವನು ನಿನ್ನ ಪೂರ್ಣಾನುಗ್ರಹಕ್ಕೆ ಪಾತ್ರನಾಗಿ ಸಕಲಾಭೀಷ್ಟಗಳನ್ನೂ ಹೊಂದುವನು.'' ಎಂದುಕ್ಷಿಹನುಮಂತನು ಶ್ರೀರಾಮಮೂರ್ತಿಯನ್ನು ಸರ್ವದಾ ಸ್ತುತಿಸುತ್ತಿರುವನು.

ಭಾರತವರ್ಷದಲ್ಲಿ ಭಗವಂತನು ನಾರಾಯಣನೆಂಬ ಹೆಸರಿನಿಂದ ಬದರಿಕಾಶ್ರಮದಲ್ಲಿ ತಪಸ್ವಿಯಾಗಿ ನೆಲೆಗೊಂಡಿರುವನು. ಮೋಕ್ಷಾರ್ಥಿಗಳಿಗೆ ತಪೋಮಾರ್ಗವನ್ನು ತೋರಿಸಿ, ಆ ಮಾರ್ಗದಿಂದ ಅವರನ್ನು ದಡ ರಿಸಬೇಕೆಂಬ ದಯಾಬುದ್ಧಿಯಿಂದ, ಕರ್ಮಜ್ಞಾನ ಭಕ್ತಿಯೋಗಗಳನ್ನೂ, ಅಣಿಮಾದ್ಯೈಶ್ವರ್ಯಗಳನ್ನೂ ಹೆಚ್ಚಿಸತಕ್ಕುದಾಗಿಯೂ, ಪ್ರಾಣೇಂದ್ರಿಯಜಯದಿಂದ ಆತ್ಮ ಸಾಕ್ಷಾತ್ಕಾರವನ್ನುಂಟುಮಾಡತಕ್ಕುದಾಗಿಯೂ ಇರುವ ತಪಸ್ಸನ್ನು ಮಾಡುತ್ತ, ತನ್ನ ಮಹಿಮೆಯನ್ನು ಹೊರಕ್ಕೆ ಕಾಣಿಸದೆ, ಕಲ್ಪಾಂತದವರೆಗೆ ಇಲ್ಲಿಯೇ ಸಾನ್ನಿಧ್ಯವನ್ನು ಮಾಡುತ್ತಿರುವನು. ಈತನನ್ನು ಪೂಜ್ಯನಾದ ನಾರದನು, ವರ್ಣಾಶ್ರಮಧರ್ಮಗಳಲ್ಲಿ ನಿರತರಾದ ಆ ಭಾರತವರ್ಷವಾಸಿಗಳೊಡನೆ ಸೇರಿ, ಭಗವಂತನಿಂದ ಸಾಕ್ಷಾತ್ತಾಗಿ ಉಪದೇಶಿಸಲ್ಪಟ್ಟ ಕರ್ಮಜ್ಞಾನಯೋಗಗಳಮೂಲಕವಾಗಿ ಭಕ್ತಿಯೋಗದಿಂದ. ಆರಾಧಿಸುವನು. ಭಗವದನುಭವವನ್ನು ವಿವರಿಸತಕ್ಕ ಪಾಂಚರಾತ್ರವನ್ನು ಸಾವರ್ಣಿಮನುವಿಗೆ ಉಪದೇಶಿಸುತ್ತ, ಈ ಕೆಳಗಿನ ಮಂತ್ರಜಪದೊಡನೆ ಆ ನಾರಾಯಣಮೂರ್ತಿಯನ್ನು ಸ್ತುತಿಸುತ್ತಿರುವನು. ''ದೇವಾ ! ಓಂಕಾರಸ್ವರೂಪನಾಗಿ ಷಡ್ಗುಣಪೂರ್ಣನಾಗಿರುವ ನಿನಗೆ ನಮಸ್ಕಾರವು. ಎಣೆಯಿಲ್ಲದ ಸೌಶೀಲ್ಯಗುಣವುಳ್ಳವನಾಗಿಯೂ, ಆತ್ಮಕ್ಕಿಂತಲೂ ಬೇರೆಯಾದ ದೇಹೇಂದ್ರಿಯಾದಿಗಳ ವ್ಯಾಪಾರವನ್ನು ಜಯಿಸಿದವನಾಗಿಯೂ, ಮೋಕ್ಷಾರ್ಥಿಗಳಿಗೆ ಮುಖ್ಯಧನವಾಗಿಯೂ ಇರುವ ನಿನಗೆ ನಮಸ್ಕಾರವು ! ಸಮಸ್ತ ಕಲ್ಯಾಣಗುಣಪರಿಪೂರ್ಣನಾಗಿಯೂ, ನಿಖಿಲದೋಷಗಳನ್ನು ನಿಗ್ರಹಿಸಿದವನಾಗಿಯೂ, ಇರುವ ನಿನಗೆ ನಮಸ್ಕಾರವು. ಪರಮಹಂಸನೆನಿಸಿ ಹಿತೋಪದೇಶಕನಾದ ನಾರಾಯಣನಿಗೆ ನಮಸ್ಕಾರವು ! ನಮಸ್ಕಾರವು ! ಜ್ಞಾನಾನಂದಸ್ವರೂಪ

ವಾದ ಆತ್ಮಾನುಭವದಲ್ಲಿ ಮುಳುಗಿದವನಾಗಿಯೂ, ಸಮಸ್ತಭೂತಗಳಿಗೂ ಪ್ರಭುವಾಗಿಯೂ ಇರುವ ನಿನಗೆ ನಮಸ್ಕಾರವು! ನಮಸ್ಕಾರವು." ಎಂಬೀ ಅರ್ಥವುಳ್ಳ ಮೂಲಮಂತ್ರವನ್ನು ಜಪಿಸುತ್ತ, ಆ ಭಗವದ್ಗುಣಗಳನ್ನು ಹೀಗೆಂದು ಗಾನಮಾಡುವನು. "ಯಾವನು ಈ ಜಗತ್ತಿಗೆ ತಾನೇ ಮೊದಲು ಸೃಷ್ಟಿಕರ್ತನಾಗಿದ್ದರೂ, ಜೀವಾತ್ಮರು ದೇವ ಮನುಷ್ಯಾದಿಶರೀರಭೇದಗಳನ್ನು ಹೊಂದುವುದಕ್ಕೆ ಅವರವರ ಕರ್ಮಗಳೇ ಪ್ರಧಾನಕಾರಣವಾದುದರಿಂದ, ಅದಕ್ಕೆ ತನ್ನನ್ನು ಕರ್ತನನ್ನಾಗಿ ಅಭಿಮಾನಿಸುವುದಿಲ್ಲವೋ, ಯಾವನು, ಆ ದೇವಮನುಷ್ಯಾದಿಶರೀರಗಳಲ್ಲಿ ತಾನೂ ಅಂತರಾತ್ಮನಾಗಿದ್ದರೂ, ಆ ದೇಹಸಂಬಂಧದಿಂದುಂಟಾಗುವ ಸುಖದುಃಖಗಳಿಗೆ ಗುರಿಯಾಗುವುದಿಲ್ಲವೋ, ಯಾವನು ಪ್ರಕೃತಿಯನ್ನು ತನಗೆ ಶರೀರವನ್ನಾಗಿ ಹೊಂದಿದ್ದರೂ, ಜೀವಾತ್ಮನಂತೆ ಅಪರ ಗುಣಗಳಾದ ಸತ್ವರಜಸ್ತಮಸ್ಸುಗಳಿಂದ ಜ್ಞಾನಸಂಕೋಚವನ್ನು ಹೊಂದುವುದಿಲ್ಲವೋ, ಅಂತಹ ಮಹಾಪ್ರಭಾವದಿಂದ ಎಣೆಯಿಲ್ಲದವನಾಗಿಯೂ, ದೋಷರಹಿತನಾಗಿಯೂ, ಜಗತ್ಸಾಕ್ಷಿಯಾಗಿಯೂ ಇರುವ ಭಗವಂತನಿಗೆ ನಮಸ್ಕಾರವು. ಓ ಯೋಗೀಶ್ವರಾ! ಅನೇಕ ದುಃಖಕ್ಕೆ ಕಾರಣವಾಗಿ ಹೇಯಗಳೆನಿಸಿದ ದೇಹಾದಿಗಳನ್ನು ಅನಾದರಿಸಿ, ದೇಹಾವಸಾನದವರೆಗೆ ನಿನ್ನಲ್ಲಿ ಭಕ್ತಿಯಿಂದ ಮನಸ್ಸನ್ನು ನೆಲೆಗೊಳಿಸವುದೊಂದೇ ಯೋಗಾಭ್ಯಾಸದ ಉತ್ತಮವಾದ ಫಲವು. ಬ್ರಹ್ಮದೇವನು ನನಗೆ ಹೇಳಿರುವುದೂ ಇಷ್ಟೇಹೊರತು ಬೇರೆಯಲ್ಲ. ನಿನ್ನಲ್ಲಿ ಭಕ್ತಿಯಿಲ್ಲದೆ ಲೌಕಿಕಗಳಾದ ಹೆಂಡಿರುಮಕ್ಕಳು, ಆಸ್ತಿಪಾಸ್ತಿಗಳು ಮುಂತಾದುವುಗಳಲ್ಲಿಯೂ, ಪಾರಲೌಕಿಕವಾದ ಸ್ವರ್ಗಾದಿಭೋಗಗಳಲ್ಲಿಯೂ ಆಸೆಯಿಟ್ಟು ಅದನ್ನು ಪಡೆಯುವುದಕ್ಕೆ ಬೇಕಾದ ಉಪಾಯಗಳನ್ನೇ ಚಿಂತಿಸುತ್ತಿರುವನು. ಅನೇಕಶಾಸ್ತ್ರಗಳನ್ನು ತಿಳಿದ ಪಂಡಿತನಾಗಿದ್ದರೂ ನಿಂದ್ಯವಾದ ತನ್ನ ಈ ಶರೀರತ್ಯಾಗಕ್ಕಾಗಿ ಭಯಪಡುತ್ತಲೇ ಇರುವನು. ಅವನು ಶ್ರಮಪಟ್ಟು ಸಂಪಾದಿಸಿದ ಶಾಸ್ತ್ರಜ್ಞಾನವೆಲ್ಲವೂ ಕೆಲಸಕ್ಕೆ ಬಾರದಂತೆಯೇ ಆಗುವುವು. ಆದುದರಿಂದ ಓ ಪ್ರಭೂ! ನಿನ್ನಲ್ಲಿ ನಮಗೆ ಬೇರೆ ಫಲಾಪೇಕ್ಷೆಯಿಲ್ಲದ ಭಕ್ತಿಯೋಗವನ್ನು ಕರುಣಿಸಬೇಕು. ಮತ್ತು ದುಃಖಹೇತುವಾದ ಈ ಶರೀರದಲ್ಲಿ ನಿನ್ನ ಮಾಯೆಯಿಂದ ನಮಗುಂಟಾಗಿರುವ ಮಮತೆಯನ್ನು ತಪ್ಪಿಸಬೇಕು. ಈ ಅಜ್ಞಾನವನ್ನು ಬಿಡುವುದಕ್ಕೆ ನಿನ್ನಲ್ಲಿ ಭಕ್ತಿಯೊಂದುಹೊರತು ಬೇರೆ ಉಪಾಯವಿಲ್ಲ! ಆದುದರಿಂದ ನಮಗೆ ಸ್ವಾಭಾವಿಕವಾದ ಆ ಭಕ್ತಿಯು ಹುಟ್ಟುವಂತೆ ನೀನೇ ಅನುಗ್ರಹಿಸಬೇಕು" ಎಂದು ನಾರದನು ಸ್ತೋತ್ರಮಾಡುತ್ತಿರುವನು.

ಓ ಪರೀಕ್ಷಿದ್ರಾಜಾ! ಈ ಭಾರತವರುಷದಲ್ಲಿ, ಮಹಾನದಿಗಳೂ, ಪರ್ವತಗಳೂ ಅನೇಕವಾಗಿರುವುವು. ಮಲಯ, ಮಂಗಳಪ್ರಸ್ಥ, ಮೈನಾಕ, ತ್ರಿಕೂಟ, ಋಷಭ, ಕೂಟರ, ಕೊಲ್ಲ, ಸಹ್ಯ, ವೇದಗಿರಿ, ಋಷ್ಯಮೂಕ, ಶ್ರೀಶೈಲ, ವೆಂಕಟಾದ್ರಿ, ಮಹೇಂದ್ರ, ವಾರಿಧರ, ವಿಂಧ್ಯ, ಶುಕ್ತಿಮಂತ, ಋಕ್ಷಗಿರಿ, ಪಾರಿಯಾತ್ರ, ದ್ರೋಣ, ಚಿತ್ರಕೂಟ, ಗೋವರ್ಧನ, ರೈವತಕ, ಕುಂಭಕನೀಲ, ಕಾಕಮುಖ, ಇಂದ್ರಕೀಲ, ರಾಮಗಿರಿ, ಮುಂತಾದ ಇನ್ನೂ ಸಾವಿರಾರು ಪರ್ವತಗಳೂ, ಅವುಗಳ ತಪ್ಪಲಿನಿಂದಹುಟ್ಟಿದ ನದೀನದಗಳೂ, ಅಸಂಖ್ಯಾತವಾಗಿರುವುವು ಈ ನಧಿಗಳಿಂದ ಪ್ರವಹಿಸುವ ಪುಣ್ಯತೀರ್ಥವು, ಭಾರತವರ್ಷದಲ್ಲಿರುವ ಪ್ರಜೆಗಳನ್ನು ನಾಮೋಚ್ಚಾರಣಮಾತ್ರದಿಂದಲೇ ಪವಿತ್ರರನ್ನಾಗಿ ಮಾಡುತ್ತಿರುವುದು. ಹೀಗಿರುವಾಗ ಆ ನದೀತೀರ್ಥವನ್ನೇ ಸ್ನಾನ ಪಾನಗಳಿಗಾಗಿ ಉಪಯೋಗಿಸುತ್ತಿರುವ ಇಲ್ಲಿನ ನಿವಾಸಿಗಳು ಪಾಪರಹಿತರೆಂಬುದನ್ನು ಹೇಳಬೇಕಾದುದೇನು? ಇಲ್ಲಿನ ನದಿಗಳಲ್ಲಿ, ಚಂದ್ರಮಸೆ, ತಾಮ್ರಪರ್ಣಿ, ಅವಟೋದೆ, ಕೃತಮಾಲೆ, ವೈಹಾಯಸಿ, ಕಾವೇರಿ, ವೇಣಿ, ಪಯಸ್ವಿನಿ, ಪಯೋಷ್ಣಿ, ಶರ್ಕಾವರ್ತೆ, ತುಂಗಭದ್ರೆ, ಕೃಷ್ಣವೇಣಿ, ಭೀಮರಥಿ, ಗೋದಾವರಿ, ನಿರ್ವಿಂಧ್ಯೆ, ಪಯೋಷ್ಣಿ, ತಾಪಿ, ರೇವಾನದಿ, ಶೀಲಾನದಿ, ಸುರಸೆ, ನರ್ಮದೆ, ಚರ್ಮಣ್ವತಿ, ಎಂಬಿವುಗಳೂ, ಸಿಂಧು, ಶೋಣಗಳೆಂಬ ನದಗಳೂ, ಮಹಾನದಿ, ವೇದಸ್ಮೃತಿ, ಯಷಿಕುಲ್ಯೆ, ಶ್ರಿಸಮೆ, ರೌಶಿಕಿ, ಮಂದಾಕಿನಿ, ಯಮುನೆ ಸರಸ್ವತಿ, ದೃಷದ್ವತಿ, ಗೋಮತಿ ಸರಯು, ಭೋಗವತಿ, ಸುಷುಮ್ನೆ, ಶತದ್ರು, ಚಂದ್ರಭಾಗೆ, ಮರುದ್ವೃಧೆ, ಕಾವೇರಿ ವಿತಸ್ತೆ, ವಿಶ್ವೆಯೆಂಬ ಮಹಾನದಿಗಳೂ ವಿಶೇಷಪ್ರಸಿದ್ಧವಾಗಿರುವುವು. ಈ ವರ್ಷದಲ್ಲಿ ಹುಟ್ಟಿದ ಪುರುಷರು, ತಾವುತಾವು ನಡೆಸಿದ ಸಾತ್ವಿಕ, ರಾಜಸ, ತಾಮಸಗಳೆಂಬ ಮೂರುಬಗೆಯಕರ್ಮಗಳಿಗನುಸಾರವಾಗಿ, ದೇವಗತಿಯನ್ನೂ, ಮನುಷ್ಯಗತಿಯನ್ನೂ ನರಕಗತಿಯನ್ನೂ ಹೊಂದುವರು. ತಮ್ಮತಮ್ಮ ವರ್ಣಾಶ್ರಮಧರ್ಮಗಳನ್ನು ನಡೆಸುತ್ತ, ಅದರಿಂದ ಭಕ್ತಿಯೋಗವನ್ನು ಹೆಚ್ಚಿಸಿಕೊಂಡವರು ಮುಕ್ತಿಯನ್ನೂ ಹೊಂದಬಹುದು. ಆದರೆ ಈ ವರ್ಣಾಶ್ರಮಧರ್ಮಾನುಷ್ಠಾನಗಳಿಂದ ಸ್ವರ್ಗಾದಿಗತಿಗಳನ್ನುಂಟು ಮಾಡತಕ್ಕ ಕರ್ಮಗ್ರಂಥಿಯನ್ನು ಸಂಪೂರ್ಣವಾಗಿ ತೊರೆದು, ಭಗವಂತನಲ್ಲಿ ಫಲಾಪೇಕ್ಷೆಯಿಲ್ಲದ ಭಕ್ತಿಯೋಗವನ್ನು ಹೆಚ್ಚಿಸಿಕೊಂಡಾಗಮಾತ್ರವೇ, ಮೋಕ್ಷವು ಲಭಿಸುವುದು. ಈ ಕರ್ಮಗಳೆಲ್ಲವೂ ಸ್ವರ್ಗಾದಿಲೋಕಗಳಿಗೆ ಸಾಧಕವಾಗಿದ್ದರೂ ಭಗವಂತನಲ್ಲಿ ನಿಶ್ಚಲವಾದ ಭಕ್ತಿಯನ್ನಿಟ್ಟು ಅವುಗಳನ್ನು ನಡೆಸುತ್ತ ಬಂದರೆ, ಆ ಭಕ್ತಿಯೋಗವು ಸ್ವರ್ಗಾದಿಗತಿಗಳನ್ನು ತಡೆದು, ಮೋಕ್ಷಮಾರ್ಗಕ್ಕೆ ತಿರುಗಿಸುವುದು. ಈ ವಿಧವಾದ ಮನೋದಾರ್ಢ್ಯವು ಕೆಲವು ಮಹಾಪುರುಷರಲ್ಲಿ

ಮಾತ್ರವೇನೆಲೆಗೊಂಡಿರುವುದು, ಭಗವಂತನು ಸಮಸ್ತಭೂತಗಳಿಗೂ ಅಂತರಾತ್ಮನಾಗಿಯೇ ಇರುವುದರಿಂದ, ಅವನನ್ನು ಉಪಾಸನೆ ಮಾಡುವುದಕ್ಕಾಗಿ, ಬೇರೆಲ್ಲಿಯೂ ಹುಡುಕಿಕೊಂಡು ಹೋಗಬೇಕಾದುದಿಲ್ಲ. ಅವರವರ ಹೃದಯದಲ್ಲಿಯೇ ಯಾವಾಗಲೂ ನೆಲೆಗೊಂಡಿರುವನು. ಈ ಶರೀರಕ್ಕಿಂತಲೂ ಅವನು ಬೇರೆಯಾಗಿರುವನು. ಶರೀರಧರ್ಮಗಳೊಂದೂ ಅವನನ್ನು ಮುಟ್ಟಲಾರವು. ಅವನಿಗೆ ದೇವಮನುಷ್ಯಾದಿನಾಮರೂಪಭೇದಗಳಿಲ್ಲ! ತನಗೆತಾನೇ ಆಧಾರನೇ ಹೊರತು ತನಗೆ ಬೇರೊಂದಾಧಾರವನ್ನಪೇಕ್ಷಿಸತಕ್ಕನಲ್ಲ. ಈ ಭಾರತವರ್ಷವಾಸಿಗಳೆಲ್ಲರೂ ವಾಸುದೇವನೆಂದು ಕರೆಯಲ್ಪಡುವ ಅಂತಹ ಪರಮಾತ್ಮನಲ್ಲಿ, ಭಕ್ತಿಯೋಗದಿಂದ ಮೋಕ್ಷವನ್ನು ಹೊಂದುವರು ಆದುದರಿಂದ ಓ ಪರೀಕ್ಷಿದ್ರಾಜಾ! ದೇವತೆಗಳು ಮೊದಲಾಗಿ ಪರಲೋಕದವರೆಲ್ಲರೂ ಈ ಭಾರತವರ್ಷದ ಮಹಿಮೆಯನ್ನು ಹೀಗೆಂದು ಕೊಂಡಾಡುತ್ತಿರುವರು.

"ಆಹಾ! ಈ ಭಾರತವರ್ಷನಿವಾಸಿಗಳು ಎಷ್ಟು ಸುಕೃತವನ್ನು ಮಾಡಿರುವರೋ! ಅಥವಾ ಇಲ್ಲಿ ಹುಟ್ಟದಮಾತ್ರಕ್ಕೆ ಭಗವಂತನು ಅಂತವರಲ್ಲಿ ತಾನಾಗಿಯೇ ಅನುಗ್ರಹವನ್ನು ತೋರಿಸುತ್ತಿರಬಹುದೇ? ತಮ್ಮ ಜನ್ಮವನ್ನು ಭಗವಂತನ ಸೇವೆಯಿಂದ ಸಾರ್ಥಕಗೊಳಿಸುತ್ತಿರುವ ಇಲ್ಲಿನ ನಿವಾಸಿಗಳಲ್ಲವೇ ಪರಮಧನ್ಯರು! ಆಹಾ! ಸ್ವರ್ಗಾದಿಸುಖಗಳನ್ನನುಭವಿಸುತ್ತಿದ್ದರೂ ನಮಗೆ, ಇಲ್ಲಿ ಜನ್ಮವನ್ನೆತ್ತಬೇಕೆಂಬ ಆಸೆಯು ಹುಟ್ಟುತ್ತಿರುವುದಲ್ಲಾ? ಈ ಸ್ವರ್ಗಾದಿ ಲೋಕಗಳನ್ನು ಸುಖಕರಗಳೆಂದು ಭಾವಿಸತಕ್ಕವರು ಕೇವಲಮೂಢರು! ಇಲ್ಲಿನ ಸುಖಸ್ಪೊಂದು ಸುಖವಲ್ಲ! ಇಲ್ಲಿನವರಿಗೆ ಶ್ರೀಮನ್ನಾರಾಯಣನ ಪಾದಸ್ಮರಣಕ್ಕೇ ಅವಕಾಶವಿಲ್ಲ. ಇಂದ್ರಿಯಸುಖಗಳಿಂದ ಮೈಮರೆತಿಳಿಯದೆ ಮತ್ತರಾಗಿರುವ ಇಲ್ಲಿನವರಿಗೆ ಹೇಗೆ ತಾನೇ ಭಗವಂತನ ಸ್ಮರಣವುಂಟಾಗುವುದು? ಅಯ್ಯೋ! ಇಂತಹ ತುಚ್ಛವಾದ ಸ್ವರ್ಗವನ್ನಪೇಕ್ಷಿಸಿ ಕೆಲವರು ದುಷ್ಕರವಾದ ತಪಸ್ಸನ್ನು ನಡೆಸುವರು! ಕಷ್ಟಪಟ್ಟು ಯಾಗಗಳನ್ನು ಮಾಡುವರು! ಅನೇಕವ್ರತಗಳನ್ನೂ ದಾನಧರ್ಮಗಳನ್ನೂ ನಡೆಸುವರು! ಇಷ್ಟು ಕಷ್ಟಪಟ್ಟೂ, ಕೊನೆಗೆ ಅಸ್ಥಿರವಾದ ಸ್ವಲ್ಪಸುಖವನ್ನು ಹೊಂದುವರು! ಇದರಿಂದ ಲಾಭವೇನು? ಈ ಭಾರತವರ್ಷದಲ್ಲಿಯೋ, ಅಲ್ಪಾಯುಸ್ಸುಳ್ಳ ಶರೀರವನ್ನು ಪಡೆದಿದ್ದರೂ, ಆ ಸ್ವಲ್ಪಕಾಲದ ಶರೀರದಿಂದ ಮಾಡಿದ ಕರ್ಮಫಲಗಳನ್ನು ಭಗವಂತನಿಗೆ ಸಮರ್ಪಿಸಿ, ಅದರಿಂದ ಎಂದೆಂದಿಗೂ ಜರಾಮರಮರಣಗಳಿಲ್ಲದ ಶ್ರೀವೈಕುಂಠವನ್ನು ಹೊಂದಬಹುದು, ಆದುದರಿಂದ ಪುನರ್ಜನ್ಮಕ್ಕೆ ಕಾರಣವಾದ ಈ ಲೋಕದಲ್ಲಿ ಒಂದು ಕಲ್ಪಕಾಲದವರೆಗೆ ದೀರ್ಘಾಯುಸ್ಸನ್ನು ಪಡೆಯುವುದಕ್ಕಿಂತಲೂ, ಶಾಶ್ವತವಾದ

ಮೋಕ್ಷವನ್ನು ಹೊಂದಿಸತಕ್ಕ ಈ ಭಾರತವರ್ಷದಲ್ಲಿ ಸ್ವಲ್ಪಾಯುಸ್ಸುಳ್ಳ ಮನುಷ್ಯ ಜನ್ಮವನ್ನೆತ್ತುವುದೇ ಮೇಲೆಂದು ತೋರುವುದು. ಈ ಭಾರತವರ್ಷದಲ್ಲಿ ಹುಟ್ಟಿದವರು ಸ್ವಲ್ಪಕಾಲವಿರತಕ್ಕ ತಮ್ಮ ಶರೀರದಿಂದಲೇ ಭಗವದನುಗ್ರಹವನ್ನು ಸಂಪಾದಿಸಿ ಪುನರ್ಜನ್ಮವಿಲ್ಲದಂತೆ ಮಾಡಿಕೊಳ್ಳುವರು. ಮುಖ್ಯವಾಗಿ ಯಾವಪ್ರದೇಶದಲ್ಲಿ ಭಗವತ್ಕಥಾರೂಪವಾದ ಅಮೃತನದಿಗಳು ಪ್ರವಹಿಸುವುದಿಲ್ಲವೋ ಯಾವಪ್ರದೇಶದಲ್ಲಿ ಭಗವದಾರಾಧನರೂಪವಾದ ಮಹೋತ್ಸವಗಳನ್ನೂ, ಯಜ್ಞಾದಿಗಳನ್ನೂ ನಡೆಸುವುದಕ್ಕೆ ಅವಕಾಶವಿಲ್ಲವೋ, ಆ ಪ್ರದೇಶವು ಬ್ರಹ್ಮಲೋಕವಾಗಿದ್ದರೂ ಆಸೆಪಡುವುದಕ್ಕೆ ಯೋಗ್ಯವಲ್ಲ. ಇಂತಹ ಭಾರತವರ್ಷದಲ್ಲಿ ಹುಟ್ಟಿರುವಾಗಲೂ, ಯಾರು ಭಗವಂತನ ಪೂಜೆಯಿಂದಲೂ, ಪ್ರದಕ್ಷಿಣನಮಸ್ಕಾರಗಳಿಂದಲೂ, ಕೀರ್ತನದಿಂದಲೂ, ದರ್ಶನದಿಂದಲೂ, ಆತನ ಪಾದಾರ್ಪಿತವಾದ ತುಲಸಿಯನ್ನಾಘ್ರಾಣಿಸುವುದರಿಂದಲೂ, ಆತನ ಅನುಗ್ರಹಕ್ಕೆ ಪಾತ್ರರಾಗದೆ, ಪುನರ್ಜನ್ಮರಹಿತವಾದ ಮೋಕ್ಷವನ್ನು ಪಡೆಯುವುದಕ್ಕೆ ಯತ್ನಿಸದೆ, ಪುನರ್ಜನ್ಮಕ್ಕೆ ಕಾರಣವಾದ ಸಂಸಾರದಲ್ಲಿಯೇ ಬೀಳುವರೋ, ಅಂತವರು ಬೇಡನ ಕೈಯಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ತಕ್ಕ ಶಕ್ತಿಯಿದ್ದಾಗಲೂ, ತಾನಾಗಿ ಬಂದು ಬಲೆಗೆ ಬೀಳುವ ಕಾಡುಹಕ್ಕಿಗಳಂತೆಯೇ ಹೊರತು ಬೇರೆಯಲ್ಲ ! ಮತ್ತು ಭಗವಂತನು ಎಲ್ಲೆಲ್ಲಿಯೂ ಏಕರೂಪನಾಗಿ ಪೂರ್ಣಕಾಮನಾಗಿದ್ದರೂ, ಈ ಭಾರತವರ್ಷವಾಸಿಗಳು ಯಾಗಕಾಲದಲ್ಲಿ ಅಗ್ನೀಂದ್ರಾದಿದೇವತೆಗಳ ಹೆಸರಿನಿಂದ ಮಂತ್ರಪೂರ್ವಕವಾಗಿ ಕೊಡತಕ್ಕ ಹವಿರ್ಭಾಗಗಳೆಲ್ಲವನ್ನೂ ತಾನು ಆಯಾರೂಪದಿಂದಲೇ ಬಂದು ಸಂತೋಷದಿಂದ ಸ್ವೀಕರಿಸುವನು. ಪೂರ್ಣಕಾಮನಾಗಿದ್ದರೂ ಅವನು ಅವುಗಳನ್ನು ಆಸೆಯಿಂದ ಗ್ರಹಿಸುವುದು ಆಯಾಯಾಭಕ್ತರನ್ನನುಗ್ರಹಿಸುವುದಕ್ಕಾಗಿಯೇ ಹೊರತು ಬೇರೆಯಲ್ಲ. ಹೀಗೆ ಭಗವಂತನನ್ನಾರಾಧಿಸಿ ತಮ್ಮತಮ್ಮ ಕೋರಿಕೆಗೆ ತಕ್ಕಂತೆ ಉತ್ತಮ ಸಿದ್ಧಿಯನ್ನು ಪಡೆಯತಕ್ಕ ಈ ಭಾರತವರ್ಷವಾಸಿಗಳಲ್ಲವೇ ಧನ್ಯರು ? ಯಾವಯಾವ ಕೋರಿಕೆಗಳನ್ನು ಬಯಸಿ ಭಗವಂತನನ್ನಾರಾಧಿಸಿದರೂ, ಭಗವಂತನು ಅವರವರಿಗೆ ಆಯಾ ಕೋರಿಕೆಗಳನ್ನೀಡೇರಿಸುವನೆಂಬುದರಲ್ಲಿ ಸಂದೇಹವಿಲ್ಲ ! ಆದರೇನು ? ಫಲಾಪೇಕ್ಷೆಯಿಂದ ಮಾಡಿದ ಕರ್ಮಗಳಿಗೆ ಆಯಾಫಲವನ್ನೇ ಕೊಡುವನೇಹೊರತು, ಉತ್ತಮಪುರುಷಾರ್ಥವಾದ ಮೋಕ್ಷವನ್ನು ಕೊಡುವವನಲ್ಲ. ಹೀಗೆಫಲಾಪೇಕ್ಷೆಯಿಂದ ಭಗವಂತನನ್ನಾರಾಧಿಸಿದವರು, ಆ ಫಲವು ಕೈಗೂಡಿದಮೇಲೆಯೂ ತೃಪ್ತಿಯಿಲ್ಲದೆ ಮತ್ತೊಂದು ಫಲಕ್ಕಾಗಿ ಆಸೆಪಡುವರು. ಆದುದರಿಂದ ಅಂತವರನ್ನು ನಿತ್ಯದರಿದ್ರರೆಂದೇ ಹೇಳಬೇಕು. ಏಕೆಂದರೆ, ಇಂತವರಿಗೆ ಎಂದಿಗೂ ತೃಪ್ತಿಯಿರುವುದಿಲ್ಲ. ಯಾವ

ಫಲವನ್ನೂ ಅಪೇಕ್ಷಿಸದೆ ತನ್ನನ್ನಾರಾಧಿಸತಕ್ಕವರಿಗೆ, ಭಗವಂತನು, ಅವರ ಕೋರಿಕೆಗಳೆಲ್ಲವನ್ನೂ ತಾನಾಗಿಯೇ ಕೈಗೂಡಿಸತಕ್ಕ ತನ್ನ ಪಾದಾರವಿಂದವನ್ನು ಕೊಡುವನು. ಇನ್ನು ಹೆಚ್ಚು ಮಾತಿನಿಂದೇನು? ನಾವು ಹಿಂದೆ ಮಾಡಿದ ಯಜನಾಧ್ಯಯನಗಳೇ ಮೊದಲಾದ ಸತ್ಕರ್ಮಫಲಗಳಲ್ಲಿ, ಇದುವರೆಗೆ ನಾವು ಅನುಭವಿಸಿದ ಸ್ವರ್ಗಾದಿಸುಖಗಳು ಹೋಗಿ, ಪುಣ್ಯಶೇಷವೇನಾದರೂ ಉಳಿದಿರುವಪಕ್ಷದಲ್ಲಿ ಅದಕ್ಕೆ ಫಲವಾಗಿ, ಮುಂದೆಯಾದರೂ ನಮಗೆ ಈ ಭಾರತವರ್ಷದಲ್ಲಿ ಭಗವಂತನ ಪಾದಸೇವೆಗೆ ಅನುಕೂಲಿಸುವಂತೆ ಮನುಷ್ಯಜನ್ಮವುಂಟಾಗಲಿ! ಆ ಜನ್ಮವನ್ನೆತ್ತಿದವರಿಗೆ ಭಗವಂತನು ಸರ್ವವಿಧದಲ್ಲಿಯೂ ಕ್ಷೇಮವನ್ನುಂಟುಮಾಡುವನು" ಎಂದು ದೇವಸಭೆಯಲ್ಲಿ ದೇವತೆಗಳು ಈ ಭಾರತವರ್ಷವನ್ನು ಯಾವಾಗಲೂ ಕೊಂಡಾಡುತ್ತಿರುವರು.

ಓ ಪರೀಕ್ಷಿದ್ರಾಜಾ! ಇದುವರೆಗೆ ಜಂಬೂದ್ವೀಪದೊಳಗಿನ ನವಖಂಡಗಳನ್ನೂ, ಅಲ್ಲಿನ ಮನುಷ್ಯರು ವರ್ಣಾಶ್ರಮ ಧರ್ಮನಿರತರೆಂಬುದನ್ನೂ ತಿಳಿಸಿದೆನಷ್ಟೆ? ಹಿಂದೆ ಸಗರಪುತ್ರರು ತಮ್ಮತಂದೆಯ ಯಾಗದ ಕುದುರೆಯನ್ನು ಹುಡುಕುವುದಕ್ಕಾಗಿ ಆಲ್ಲಲ್ಲಿ ನೆಲವನ್ನು ಭೇದಿಸಿದಾಗ, ಅದರಿಂದ ಎಂಟು ದ್ವೀಪಗಳಾದುವೆಂದೂ, ಅವು ಈ ಜಂಬೂದ್ವೀಪಕ್ಕೆ ಉಪದ್ವೀಪಗಳೆಂದೂ ಕೆಲವುಮಹಾತ್ಮರು ಹೇಳಿರುವರು. ಈ ಉಪದ್ವೀಪಗಳಿಗೆ ಕ್ರಮವಾಗಿ, ಸ್ವರ್ಣಪ್ರಸ್ಥ, ಚಂದ್ರಶುಕ್ಲ, ಆವರ್ತನ, ರಮಣಕ, ಮಂದೇಹಾರುಣ, ಪಾಂಚಜನ್ಯ, ಸಿಂಹಳ, ಲಂಕೆಗಳೆಂದು ಹೆಸರು. ಓ ರಾಜೇಂದ್ರಾ! ನಿನ್ನ ಕೋರಿಕೆಯಂತೆ ಜಂಬೂದ್ವೀಪದೊಳಗಣ ದೇಶವಿಭಾಗಗಳೆಲ್ಲವನ್ನೂ ಕ್ರಮವಾಗಿ ವಿವರಿಸಿದುದಾಯಿತು." ಇಲ್ಲಿಗೆ ಹತ್ತೊಂಬತ್ತನೆಯ ಅಧ್ಯಾಯವು.

---

## ಪ್ಲಕ್ಷಾದಿದ್ವೀಪಗಳ ವಿವರಣವು.

ರಾಜೇಂದ್ರಾ! ಇನ್ನು ಪ್ಲಕ್ಷಾದಿದ್ವೀಪಗಳ ಲಕ್ಷಣಗಳನ್ನೂ ವಿಭಾಗಗಳನ್ನೂ, ಅಳತೆ, ಆಕಾರ ಮೊದಲಾದುವನ್ನೂ ವಿವರಿಸುವೆನು ಕೇಳು! ಮೇರುಪರ್ವತವು ಜಂಬೂದ್ವೀಪದಿಂದಲೂ, ಆ ಜಂಬೂದ್ವೀಪವು ತನ್ನಷ್ಟೇ ಲಕ್ಷಯೋಜನ ವಿಸ್ತಾರವುಳ್ಳ ಲವಣಸಮುದ್ರದಿಂದಲೂ ಆವರಿಸಲ್ಪಟ್ಟಿರುವಂತೆ, ಆ ಲವಣ

ಸಮುದ್ರವು ಪ್ಲಕ್ಷದ್ವೀಪದಿಂದ ಆವೃತವಾಗಿರುವುದು. ಜಂಬೂದ್ವೀಪವನ್ನು ಸುತ್ತಿ ಲವಣಸಮುದ್ರವೂ, ಅದನ್ನು ಸುತ್ತಿ ಪ್ಲಕ್ಷದ್ವೀಪವೂ ಆವರಿಸಿರುವುದನ್ನು ನೋಡಿದರೆ, ಒಂದು ಪಟ್ಟಣವನ್ನು ಸುತ್ತಿದೊಡ್ಡ ಕಂದಕವೂ, ಆ ಕಂದಕದ ಹೊರವಲಯದಲ್ಲಿ ದೊಡ್ಡ ಉದ್ಯಾನವನವೂ ಇರುವ ಸನ್ನಿವೇಶಕ್ಕೆ ಸರಿಹೋಲಿಸಬಹುದು. ಹೀಗೆ ಸಮುದ್ರದ್ವೀಪಗಳು ಮೇಲೆಮೇಲೆ ವಲಯಾಕಾರವಾಗಿ ವ್ಯಾಪಿಸಿರುವುದರಿಂದ, ಲವಣಸಮುದ್ರಕ್ಕಿಂತಲೂ ಈ ಪ್ಲಕ್ಷದ್ವೀಪದ ವಿಸ್ತಾರವು ಇಮ್ಮಡಿಯಾಗಿರುವುದು. ಇದರಲ್ಲಿರತಕ್ಕ ಪ್ರಸಿದ್ಧವಾದ ಆಲದ (ಪ್ಲಕ್ಷ) ಮರವು, ಜಂಬೂದ್ವೀಪದೊಳಗಣ ಜಂಬೂವೃಕ್ಷದಂತೆಯೇ ಮಹತ್ತಾದ ಪ್ರಮಾಣಕ್ಕೆ ಬೆಳೆದಿರುವುದು. ಇದಕ್ಕಾಗಿಯೇ ಈ ದ್ವೀಪಕ್ಕೆ ಪ್ಲಕ್ಷದ್ವೀಪವೆಂದು ಹೆಸರು. ಈ ವೃಕ್ಷವು ಸುವರ್ಣಚ್ಛಾಯೆಯಿಂದ ಬೆಳಗುತ್ತಿರುವುದು. ಈ ವೃಕ್ಷದಬುಡದಲ್ಲಿ ಅಗ್ನಿಯು ಸಪ್ತಜ್ವಾಲೆಗಳಿಂದ ಜ್ವಲಿಸುತ್ತಿರುವುದು. ಈದ್ವೀಪಕ್ಕೆ ಪ್ರಿಯವ್ರತಪುತ್ರನಾದ ಇಧ್ಮಜಿಹ್ವನೆಂಬನನು ಅಧಿಪತಿಯು. ಇವನು ಆದ್ವೀಪವನ್ನು ಏಳುವಿಭಾಗವಾಗಿ ಬೇರ್ಪಡಿಸಿ ಅವುಗಳ ಅಧಿಕಾರವನ್ನು ತನ್ನ ಏಳುಮಂದಿಮಕ್ಕಳಿಗೆ ಹಂಚಿಕೊಟ್ಟನು. ಈ ವಿಭಾಗಗಳಿಗೆ ವರ್ಷಗಳೆಂದೇ ಹೆಸರು. ಈ ಸಪ್ತವರ್ಷಗಳೂ, ಆಯಾ ರಾಜಕುಮಾರರಹೆಸರಿನಿಂದಲೇ ಪ್ರಖ್ಯಾತವಾಗಿ, ಶಿವ, ಯಶಸ್ಯ, ಸುಭದ್ರ, ಶಾಂತ, ಕ್ಷೇಮ, ಅಭಯ, ಅಮೃತವೆಂಬ ನಾಮಗಳಿಂದ ಕರೆಯಲ್ಪಡುವುವು. ಕ್ರಮವಾಗಿ ಈ ಏಳುವರ್ಷಗಳಲ್ಲಿ ಏಳುಪರ್ವತಗಳೂ, ಏಳುನದಿಗಳೂ ಪ್ರಸಿದ್ಧಿಗೊಂಡಿರುವುವು. ಆಪರ್ವತಗಳೇಳೂ, ಆಯಾವರ್ಷಗಳನ್ನು ವಿಭಾಗಿಸಿ ತೋರಿಸತಕ್ಕ ಎಲ್ಲೆಕಟ್ಟುಗಳಾಗಿರುವುವು. ಈ ಪರ್ವತಗಳಿಗೆ ಕ್ರಮವಾಗಿ, ಮಣಿಕೂಟ, ವಜ್ರಕೂಟ, ಇಂದ್ರಸೇನ, ಜ್ಯೋತಿಷ್ಮಂತ, ತಾಮ್ರವರ್ಣ, ಹಿರಣ್ಯಗ್ರೀವ, ಮೇಘಮಾಲಗಳೆಂದು ಹೆಸರು. ಇಲ್ಲಿನ ಮಹಾನದಿಗಳಿಗೂ ಕ್ರಮವಾಗಿ, ಅರುಣೆ, ಸ್ಯಮಣೆ, ಆಂಗಿರಸಿ, ಸಾವಿತ್ರಿ, ಸುಪ್ರಭಾತೆ, ಋತಂಭರೆ, ಸತ್ಯಂಭರೆಯೆಂದು ಹೆಸರು. ಇಲ್ಲಿ ಹಂಸರೆಂದೂ, ಪತಂಗರೆಂದೂ, ಊರ್ಧ್ವಾಯನರೆಂದೂ, ಸತ್ಯಾಂಗರೆಂದೂ ಹೆಸರುಗೊಂಡ ನಾಲ್ಕುವರ್ಣದವರುಂಟು. ಇವರು ಈ ನದೀಜಲದ ಸ್ನಾನಪಾನಗಳಿಂದ ರಜಸ್ತಮೋಗುಣಗಳನ್ನು ತೀಗಿ, ಸಹಸ್ರಾಯುಷ್ಯವುಳ್ಳವರಾಗಿ, ದೇವಕುಮಾರರಿಗೆ ಸಮಾನವಾದ ರೂಪಾತಿಶಯವುಳ್ಳ ಪುತ್ರಸಂತಾನವನ್ನು ಪಡೆಯುತ್ತ ಶ್ರುತಿಸ್ಮೃತಿಗಳಲ್ಲಿ ಹೇಳಿದ ಕರ್ಮಯೋಗಗಳಿಂದ, ಷಾಡ್ಗುಣ್ಯಪರಿಪೂರ್ಣನಾಗಿಯೂ. ಇರುವ ಸೂರ್ಯಶರೀರಕನಾದ ಭಗವಂತನನ್ನು ಎಡೆಬಿಡದೆ ಆರಾಧಿಸಿ ಈ ಮಂತ್ರದಿಂದ ಸ್ತುತಿಸುವರು. "ಅನಾದಿಯಾಗಿಯೂ, ನಿರ್ವಿಕಾರನಾಗಿಯೂ, ಸಮಸ್ತಕರ್ಮಗಳಿಗೂ ಫಲವನ್ನು

ಕೊಡತಕ್ಕವನಾಗಿಯೂ, ತನ್ನನ್ನು ನಂಬಿದವರಿಗೆ ಮೋಕ್ಷಪ್ರದನಾಗಿಯೂ, ತನ್ನಲ್ಲಿ ವಿಮುಖರಾದವರಿಗೆ ಸಂಸಾರಬಂಧವನ್ನುಂಟುಮಾಡ ತಕ್ಕವನಾಗಿಯೂ ಇರುವ ಶ್ರೀಮಹಾವಿಷ್ಣುವಿಗೆ ಯಾವನು ಶರೀರವೆನ್ನಿಸಿಕೊಂಡಿರುವನೋ, ಅಂತಹ ಸೂರ್ಯರೂಪಿಯಾದ ಜೀವಾತ್ಮನನ್ನು ಮರೆಹೊಗುವವು" ಎಂದು ಬಾರಿಬಾರಿಗೂ ಈ ಮಂತ್ರವನ್ನು ಜಪಿಸಿ, ಸೂರ್ಯೋಪಾಸನೆಯನ್ನು ಮಾಡುತ್ತಿರುವರು. ಪ್ಲಕ್ಷ ದ್ವೀಪವು ಮೊದಲಾಗಿ ಐದುದ್ವೀಪಗಳಲ್ಲಿ, ಪ್ರಾಯಕವಾಗಿ ಸಮಸ್ತಪುರುಷರೂ, ಪೂರ್ಣಾಯುಸ್ಸು, ಮನೋಬಲ, ಇಂದ್ರಿಯಬಲ, ದೇಹಬಲ, ಮುಂತಾದುವುಗಳಲ್ಲಿ ಸಹಜವಾಗಿಯೇ ಮೇಲೆನಿಸಿಕೊಂಡಿರುವರು.

ಈ ಪ್ಲಕ್ಷದ್ವೀಪವು ತನ್ನಷ್ಟೇ ವಿಸ್ತಾರವುಳ್ಳ ಇಕ್ಷುಸಮುದ್ರದಿಂದ ಆವೃತವಾಗಿರುವಂತೆ, ಅದರಿಂದಾಚೆಗೆ ಶಾಲ್ಮಲಿದ್ವೀಪವೆಂಬುದು. ಈಸಮುದ್ರಕ್ಕೆ ಎರಡರಷ್ಟು ವಿಸ್ತಾರವುಳ್ಳುದಾಗಿ ತನ್ನಷ್ಟೇ ವಿಶಾಲವಾದ ಸುರಾಸಮುದ್ರದಿಂದ ಪರಿವೇಷ್ಟಿತವಾಗಿರುವುದು. ಹಿಂದೆ ಹೇಳಿದ ಜಂಬೂಪ್ಲಕ್ಷ ವೃಕ್ಷಗಳಂತೆಯೇ ಇದರಲ್ಲಿ ಮಹೋನ್ನತವಾದ ಒಂದುಶಾಲ್ಮಲಿ ವೃಕ್ಷವಿರುವುದಂದ ಇದಕ್ಕೆ ಶಾಲ್ಮಲಿ ದ್ವೀಪವೆಂದು ಹೆಸರು. ಈ ಶಾಲ್ಮಲಿದ್ವೀಪವನ್ನು ಪೂರ್ವದಲ್ಲಿ ಪ್ರಿಯವ್ರತನ ಮಗನಾದ ಯಜ್ಞಬಾಹುವೆಂಬವನು,ಬಹುಕಾಲದವರೆಗೆಪಾಲಿಸುತ್ತಿದ್ದು,ಕೊನೆಗೆ ಅಭೂಭಾಗವನ್ನು ಏಳುವರ್ಷಗಳಾಗಿವಿಭಾಗಿಸಿ, ತನ್ನ ಏಳುಮಂದಿ ಮಕ್ಕಳಿಗೂ ಹಂಚಿಕೊಟ್ಟನು.ಈಏಳುವರ್ಷಗಳೂ,ಆಯಾವರ್ಷಾಧಿಪತಿಗಳ ಹೆಸರಿನಿಂದಲೇಪ್ರಸಿದ್ಧಗಳಾಗಿ, ಸುರೋಚನ, ಸೌಮನಸ್ಯ, ರಮಣಕ, ದೇವಬರ್ಹ, ಪಾರಿಬರ್ಹ, ಆಪ್ಯಾಯನ, ಅಭಿಜ್ಞಾತಗಳೆಂಬಹೆಸರಿನಿಂದ ಕರೆಯಲ್ಪಡುವುವು. ಈಏಳುವರ್ಷಗಳಲ್ಲಿಯೂಕ್ರಮವಾಗಿ, ಸ್ವರಸ, ಶತಶೃಂಗ,ವಾಮದೇವ, ಕುಮುದ,ಮುಕುಂದ,ಪುಷ್ಪವರ್ಷ,ಶತಶ್ರುತಿಯೆಂಬ ಏಳುಪರ್ವತಗಳೂ, ಅನುಮತಿ, ಸಿನೀವಾಲಿ, ಸರಸ್ವತಿ, ಕುಹು, ರಜನಿ, ನಂದೆ, ರಾಕೆ, ಯಮುನೆಯೆಂಬ ಏಳುಮಹಾನದಿಗಳೂ ಪ್ರಸಿದ್ಧಿಗೊಂಡಿರುವುವು. ಇಲ್ಲಿನ ನಿವಾಸಿಗಳಲ್ಲಿ, ಶ್ರುತಧರರೆಂದೂ, ವಿದ್ಯಾಧರರೆಂದೂ, ವಸುಂಧರರೆಂದೂ, ಇಷಂಧರರೆಂದೂ ನಾಲ್ಕು ವರ್ಣದವರುಂಟು. ಇವರೆಲ್ಲರೂ ವೇದೋಕ್ತಗಳಾದ ಧರ್ಮಗಳಿಂದ, ವೇದಮಯನಾಗಿಯೂ, ಪರಮಪುರುಷನಿಗೆ ಶರೀರಭೂತನಾಗಿಯೂ, ಇರುವ ಪೂಜನಾದ ಚಂದ್ರನೆಂಬ ಜೀವನನ್ನು ಆರಾಧಿಸುತ್ತ, ಈ ಕೆಳಗಿನ ಮಂತ್ರದಿಂದ ಆತನನ್ನು ಸ್ತುತಿಸುವರು. "ಯಾವ ಮಹಾತ್ಮನು ಶುಕ್ಲಪಕ್ಷದಲ್ಲಿ ದೇವತೆಗಳಿಗೂ, ಕೃಷ್ಣಪಕ್ಷದಲ್ಲಿ ಪಿತೃದೇವತೆಗಳಿಗೂ ತನ್ನ ಕಿರಣಗಳಿಂದ ಅನ್ನವನ್ನು ವಿಭಾಗಿಸಿಕೊಟ್ಟು

ಪೋಷಿಸುತ್ತಿರುವನೋ, ಆಚಂದ್ರನು ಪ್ರಜೆಗಳಾದ ನಮ್ಮೆಲ್ಲರಿಗೂ ಪ್ರಭುವಾಗಿ, ನಮಗೆ ಸುಖವನ್ನುಂಟುಮಾಡಲಿ !" ಎಂಬುದೇ ಆಮಂತ್ರಾರ್ಥವು.

ರಾಜೇಂದ್ರಾ! ಆ ಸುರಾಸಮುದ್ರದಿಂದಾಚೆಗೆ ಅದಕ್ಕೆ ಎರಡರಷ್ಟು ವಿಶಾಲವಾದ ಕುಶದ್ವೀಪವು, ತನ್ನಷ್ಟೇ ವಿಸ್ತಾರವುಳ್ಳ (ಎಂದರೆ ಎಂಟುಲಕ್ಷಯೋಜನದ ವಿಸ್ತಾರವುಳ್ಳ) ಘೃತಸಮುದ್ರದಿಂದಾವೃತವಾಗಿರುವುದು. ಆದ್ವೀಪದಲ್ಲಿ ಬ್ರಹ್ಮದೇವನಿಂದ ಸಾಕ್ಷಾತ್ತಾಗಿ ಸೃಷ್ಟಿಸಲ್ಪಟ್ಟು ಅಗ್ನಿಯಂತೆ ಜಾಜ್ವಲ್ಯಮಾನವಾದ ಒಂದಾನೊಂದು ಕುಶಸ್ತಂಭವುಂಟು. ಇದಕ್ಕಾಗಿಯೇ ಅದಕ್ಕೆ ಕುಶದ್ವೀಪವೆಂದು ಹೆಸರು. ಆ ಕುಶಸ್ತಂಭವು ತನ್ನ ಎಳೇಹಲ್ಲುಗಳ ಕಾಂತಿಯಿಂದ ಹತ್ತುದಿಕ್ಕುಗಳನ್ನೂ ಬೆಳಗುತ್ತಿರುವುದು. ಪ್ರಿಯವ್ರತನ ಮಗನಾದ ಹಿರಣ್ಯರೇತಸ್ಸೆಂಬವನು, ಆದ್ವೀಪವನ್ನು ಕೆಲವುಕಾಲದವರೆಗೆ ಆಳುತ್ತಿದ್ದು ಕೊನೆಗೆ ಅದನ್ನು ಏಳುವರ್ಷಗಳಾಗಿ ವಿಭಾಗಿಸಿ, ತನ್ನ ಏಳುಮಂದಿಮಕ್ಕಳಿಗೆ ಹಂಚಿಕೊಟ್ಟು ತಾನುತಪಸ್ಸಿಗೆಹೋದನು. ಈಏಳು ಭೂಭಾಗಗಳೂ ಕ್ರಮವಾಗಿ ಆ ವರ್ಷಾಧಿಪತಿಗಳ ಹೆಸರಿನಿಂದಲೇ ಪ್ರಖ್ಯಾತವಾಗಿ, ವಸು, ದಾನ, ದೃಢರುಚಿ, ನಾಭಿಗುಪ್ತ, ಸತ್ಯವ್ರತ, ವಿಪ್ರನಾಮ, ದೇವನಾಮಗಳೆಂದು ಕರೆಯಲ್ಪಡುವುವು. ಇದರಲ್ಲಿ ಆ ಏಳುವರ್ಷಗಳನ್ನೂ ಬೇರೆಬೇರೆ ವಿಭಾಗಿಸಿ ತೋರಿಸತಕ್ಕ ಏಳುಪರ್ವತಗಳುಂಟು. ಅವುಗಳಿಗೆ ಕ್ರಮವಾಗಿ, ಬಭ್ರು, ಚತುಶ್ಶೃಂಗ, ಕಪಿಲ, ಚಿತ್ರಕೂಟ, ದೇವಾನೀಕ, ಊರ್ಧ್ವರೋಮ, ದ್ರವಿಣಗಳೆಂದು ಹೆಸರು. ಮತ್ತು ಇದರಲ್ಲಿ, ರಸಕುಲ್ಯೆ, ಮಧುಕುಲ್ಯೆ, ಶ್ರುತವಿಂದೆ, ವಿಮ್ರವಿಂದೆ, ದೇವಗರ್ಭ, ಘೃತಚ್ಯುತೆ, ಮಂತ್ರಮಾಲೆಗಳೆಂಬ ಏಳು ಮಹಾನದಿಗಳುಂಟು. ಈನದೀತೀರ್ಥವನ್ನೇ ಸ್ನಾನಪಾನಗಳಿಗಾಗಿ ಉಪಯೋಗಿಸುವುದರಿಂದ, ಅಲ್ಲಿನ ನಿವಾಸಿಗಳೆಲ್ಲರೂ ಪಾಪರಹಿತರಾಗಿರುವರು. ಇವರಲ್ಲಿ ಕುಶಲರೆಂದೂ, ಕೋವಿದರೆಂದೂ, ಅಭಿಯುಕ್ತರೆಂದೂ ಕುಲಕರೆಂದೂ ನಾಲ್ಕು ವರ್ಣದವರುಂಟು. ಇವರೆಲ್ಲರೂ ತಮ್ಮ ಕರ್ಮನೈಪುಣ್ಯದಿಂದ ಅಗ್ನಿಶರೀರಕನಾದ ಭಗವಂತನನ್ನಾರಾಧಿಸುತ್ತ ಈ ಕೆಳಗಿನ ಮಂತ್ರಜಪದಿಂದ ಅವನನ್ನು ಸ್ತುತಿಸುವರು. "ಎಲೈ ಅಗ್ನಿದೇವನೇ! ನೀನು ಪರಬ್ರಹ್ಮನೆನಿಸಿಕೊಂಡ ಶ್ರೀಮನ್ನಾರಾಯಣನಿಗೆ ಶರೀರಭೂತನು, ಮತ್ತು ಭಗವದಂಶಭೂತರಾದ ಇಂದ್ರಾದಿದೇವತೆಗಳೆಲ್ಲರಿಗೂ ಯಜ್ಞಗಳಲ್ಲಿ ಕೊಟ್ಟ ಹವಿರ್ಭಾಗವನ್ನು ಅವರವರಿಗೆ ಸಲ್ಲಿಸತಕ್ಕವನು. ಆದುದರಿಂದ, ಆಯಾದೇವತೆಗಳಿಗೆ ಅಂತರಾತ್ಮನಾದ ಶ್ರೀವಿಷ್ಣುವಿಗೆ ಪ್ರೀತಿಯನ್ನುಂಟುಮಾಡಿ, ಅವನ ಅನುಗ್ರಹಕ್ಕೆ ನಮ್ಮನ್ನು ಪಾತ್ರರಾಗುವಂತೆ ಮಾಡು !" ಎಂಬುದೇ ಅವರು ಜಪಿಸತಕ್ಕ ಮಂತ್ರಾರ್ಥವು.

ರಾಜೇಂದ್ರಾ! ಈ ಕುಶದ್ವೀಪಕ್ಕೆ ಎರಡರಷ್ಟು ವಿಶಾಲವಾಗಿ, ಹದಿನಾರು ಲಕ್ಷ ಯೋಜನವಿಸ್ತಾರವುಳ್ಳ ಕ್ರೌಂಚದ್ವೀಪವು, ಘೃತಸಮುದ್ರವನ್ನು ಸುತ್ತಿಕೊಂಡಿರುವುದು. ಮತ್ತು ಈ ಕ್ರೌಂಚದ್ವೀಪವನ್ನು ಆದರಷ್ಟೇ ವಿಶಾಲವಾದ ದಧಿಸಮುದ್ರವು ಕೋಟೆಯ ಸುತ್ತಿನ ಕಂದಕದಂತೆ ಆವರಿಸಿರುವುದು. ಇದರಲ್ಲಿ ಕ್ರೌಂಚವೆಂಬ ಒಂದುಪರ್ವತವುಂಟು. ಪೂರ್ವದಲ್ಲಿ ಕುಮಾರಸ್ವಾಮಿಯು, ತನ್ನ ಬಾಣಗಳಿಂದ ಈ ಪರ್ವತವನ್ನು ಭೇದಿಸುವುದಕ್ಕೆ ತೊಡಗಿ, ಇದರ ತಪ್ಪಲುಗಳೆಲ್ಲವನ್ನೂ ಕೆಡಹುತ್ತ ಬಂದಾಗ, ಈ ಪರ್ವತವು ದಧಿಸಮುದ್ರದಲ್ಲಿ ಮರೆಸಿಕೊಂಡಿತು. ವರುಣನು ಅದನ್ನು ಈಗಲೂ ಸುರಕ್ಷಿತವಾಗಿ ಕಾಪಾಡುತ್ತಿರುವುದರಿಂದ ನಿರ್ಭಯವಾಗಿರುವುದು. ಈ ಪರ್ವತಸಂಬಂಧದಿಂದಲೇ ಆ ದ್ವೀಪಕ್ಕೆ ಕ್ರೌಂಚದ್ವೀಪವೆಂಬ ಹೆಸರಾಯಿತು. ಪ್ರಿಯವ್ರತಕುಮಾರನಾದ ಘೃತಪೃಷ್ಠನೆಂಬವನು, ಇದನ್ನಾಳುತ್ತಿದ್ದು ಕೊನೆಗೆ ಆ ಭೂಭಾಗವನ್ನು ಏಳುವರ್ಷಗಳಾಗಿ ವಿಭಾಗಿಸಿ, ತನ್ನ ಏಳುಮಂದಿಮಕ್ಕಳಿಗೂ ಹಂಚಿಕೊಟ್ಟು, ತಾನು ವಿರಕ್ತನಾಗಿ, ಪುಣ್ಯಶ್ಲೋಕನಾದ ಪರಮಾತ್ಮನ ಪಾದ ಸಾನ್ನಿಧ್ಯವನ್ನು ಸೇರಿದನು. ಈ ಘೃತಪೃಷ್ಠನ ಏಳುಮಂದಿಮಕ್ಕಳಿಗೂ ಕ್ರಮವಾಗಿ, ಆನೋದ. ಮಧುವಹ, ಮೇಘಪೃಷ್ಠ, ಸುದಾಮ, ಋಷಿಜ್ಯ, ಲೋಹಿತಾರ್ಣ, ವನಸ್ಪತಿಗಳೆಂದು ಹೆಸರು. ಇವರು ಪಾಲಿಸುತ್ತಿದ್ದ ಆ ಏಳುವರ್ಷಗಳೂ ಆವರವರ ಹೆಸರಿನಿಂದಲೇ ಪ್ರಖ್ಯಾತವಾಗಿರುವುವು. ಈ ದ್ವೀಪದಲ್ಲಿ ಆಯಾವರ್ಷಗಳನ್ನು ವಿಭಾಗಿಸಿತೋರಿಸತಕ್ಕ ಏಳುಪರ್ವತಗಳುಂಟು. ಈ ಪರ್ವತಗಳಿಗೆ ಕ್ರಮವಾಗಿ, ಶುಕ್ಲ, ವರ್ಧಮಾನ, ಭೋಜನ, ಉಪಬರ್ಹಣ, ಆನಂದ, ನಂದನ, ಸರ್ವತೋಭದ್ರಗಳೆಂದು ಹೆಸರು. ಮತ್ತು ಇಲ್ಲಿ, ಅಭಯೆ, ಅಮೃತೋದೆ, ಆರ್ಯಕೆ, ತೀರ್ಥವತಿ, ತೃಪ್ತಿರೂಪೆ, ಪವಿತ್ರವತಿ, ಶುಕ್ಲೆಯೆಂಬ ಏಳುಮಹಾನದಿಗಳುಂಟು. ಈ ನದೀಜಲದಲ್ಲಿ ಸ್ನಾನಪಾನಗಳಿಂದ ಇಲ್ಲಿನವರೆಲ್ಲರೂ, ಶುದ್ಧಾತ್ಮರಾಗಿರುವರು. ಇವರಲ್ಲಿ ಗುರುಗಳೆಂದೂ, ಋಷಭರೆಂದೂ, ದ್ರವಿಣಕರೆಂದೂ, ದೇವಕರೆಂದೂ ನಾಲ್ಕುವರ್ಣದವರುಂಟು. ಇವರೆಲ್ಲರೂ ಬೊಗಸೆಯಲ್ಲಿ ನೀರನ್ನು ತುಂಬಿಕೊಂಡು, ಭಗವಂತನಿಗೆ ಶರೀರವಾದ ಜಲದೇವತೆಯನ್ನು ಭಗವದ್ರೂಪದಿಂದಲೇ ಆರಾಧಿಸುತ್ತ, ಕೆಳಗಿನ ಮಂತ್ರದಿಂದ ಸ್ತುತಿಸುತ್ತಿರುವರು. "ಓ ಜಲದೇವತೆಗಳಿರಾ! ನೀವು ಭಗವಂತನಿಗೆ ಶಕ್ತಿಭೂತರಾಗಿರತಕ್ಕವರು. ಭೂಲೋಕಭುವರ್ಲೋಕ ಸುವರ್ಲೋಕಗಳೆಲ್ಲವನ್ನೂ ಪಾವನಮಾಡತಕ್ಕವರು. ಹೀಗೆ ಲೋಕಶುದ್ಧಿಗಾಗಿ ಪರಮಾತ್ಮನಿಂದ ಸಾಕ್ಷಾತ್ತಾಗಿ ಸೃಷ್ಟಿಸಲ್ಪಟ್ಟ ನೀವು, ನಿಮ್ಮ ಸ್ಪರ್ಶಮಾತ್ರದಿಂದ ನಮ್ಮ ಜನ್ಮವನ್ನು ಪಾವನಮಾಡಬೇಕು." ಎಂಬುದೇ ಅವರು ಜಪಿಸತಕ್ಕ ಮಂತ್ರಾರ್ಥವು.

ರಾಜೇಂದ್ರಾ! ದಧಿಸಮುದ್ರದಿಂದಾಚೆಗೆ ಮೂವರೆತ್ತೆರಡು ಲಕ್ಷಯೋಜನದ ವಿಸ್ತಾರವುಳ್ಳ ಶಾಕದ್ವೀಪವೆಂಬುದು,ಅಷ್ಟೇ ವಿಶಾಲವಾದ ಕ್ಷೀರಸಮುದ್ರದಿಂದ ಆವೃತವಾಗಿರುವುದು. ಆ ದ್ವೀಪದಲ್ಲಿ ಶಾಕವೆಂಬ ಒಂದಾನೊಂದು ವೃಕ್ಷವುಂಟು. ಈ ವೃಕ್ಷದ ವಾಸನೆಯು ಆ ದ್ವೀಪವನ್ನೆಲ್ಲಾ ಪರಮಳಿತವಾಗಿ ಮಾಡುತ್ತಿರುವುದು. ಈ ವೃಕ್ಷದ ಸಂಬಂಧದಿಂದಲೇ ಆ ದೀಪಕ್ಕೆ ಶಾಕದ್ವೀಪವೆಂಬ ಹೆಸರಾಯಿತು. ಪ್ರಿಯವ್ರತನ ಮಗನಾದ ಮೇಧಾತಿಥಿಯೆಂಬವನು, ಈ ದ್ವೀಪವನ್ನಾಳುತ್ತಿದ್ದು ಕೊನೆಗೆ ಅಲ್ಲಿನಭೂಭಾಗವನ್ನು ಏಳುವರ್ಷಗಳಾಗಿ ವಿಭಾಗಿಸಿ, ತನ್ನ ಏಳುಮಂದಿ ಮಕ್ಕಳಿಗೆ ಹಂಚಿಕೊಟ್ಟನು. ಇವನಮಕ್ಕಳಿಗೆ ಕ್ರಮವಾಗಿ ಪುರೋಜವ, ಮನೋಜವ, ವೇಪಮಾನ, ತಾಮಾನೀಕ, ಚಿತ್ರರಥ, ಬಹುರೂಪ, ವಿಶ್ವಧಾರರೆಂದು ಹೆಸರು. ಇವರಭಾಗಕ್ಕೆ ಬಂದವರ್ಷಗಳೂ ಅದೇಹೆಸರಿನಿಂದ ಪ್ರಸಿದ್ಧಿಗೊಂಡಿರುವುವು. ಮೇಧಾತಿಥಿಯು ತನ್ನ ಮಕ್ಕಳಿಗೆ ರಾಜ್ಯವನ್ನು ಹಂಚಿಕೊಟ್ಟಮೇಲೆ, ತಾನು ನಿತ್ಯಾನಂದಸ್ವರೂಪನಾದ ಭಗವಂತನಲ್ಲಿ ನಟ್ಟ ಮನಸ್ಸುಳ್ಳವನಾಗಿ ತಪೋವನಕ್ಕೆ ಹೋದನು. ಈ ದ್ವೀಪದಲ್ಲಿ ಈಶಾನ ಉರುಶೃಂಗ, ಬಲಭದ್ರ, ಶತಕೇಸರ, ಸಹಸ್ರ ಸ್ರೋತಸ್ಸು, ದೇವಪಾಲ, ಮಹಾನಸ ಎಂಬ ಏಳು ಸೀಮಾಪರ್ವತಗಳೂ ಅಣಕೆ, ಅಯುರ್ದ, ಉಭಯಪ್ರಷ್ಠಿ, ಅಪರಾಜಿತೆ ಪಂಚಪದಿ, ಸಹಸ್ರಸ್ರುತಿ, ನಿಜಧೃತಿ ಯೆಂಬ ಏಳುಮಹಾನದಿಗಳೂ ಹೆಸರುಗೊಂಡಿರುವುವು. ಇಲ್ಲಿ ಋತವ್ರತ, ಸತ್ಯವ್ರತ ದಾನವ್ರತ, ಸಂವ್ರತರೆಂಬ ನಾಲ್ಕುವರ್ಣದವರುಂಟು. ಇವರೆಲ್ಲರೂ ಪ್ರಾಣಾಯಾಮ ಸಿದ್ಧಿಯಿಂದ ರಜಸ್ತಮೋಗುಣಗಳನ್ನು ಜಯಿಸಿ, ಭಗವಂತನಿಗೆಶರೀರಭೂತನಾದ ವಾಯುವನ್ನು ಧ್ಯಾನಯೋಗದಿಂದ ಆರಾಧಿಸುತ್ತ,ಆಗಾಗ ಈಕೆಳಗಿನ ಮಂತ್ರದಿಂದ ಸ್ತುತಿಸುವರು. "ಶರೀರಗಳಲ್ಲಿ ಮುಖ್ಯಪ್ರಾಣನಾಗಿ ಒಳಹೊಕ್ಕು, ತನಗೆ ಚಿಹ್ನೆ ಗಳಾದ ಪ್ರಾಣಾಪಾನಗಳೇ ಮೊದಲಾದ ಐದುಬಗೆಯ ವ್ಯಾಪಾರಗಳಿಂದ ಸಮಸ್ತ ಪ್ರಾಣಿಗಳನ್ನೂ ಧರಿಸತಕ್ಕವನಾಗಿಯೂ, ಸಕಲಜಗತ್ತನ್ನೂ ತನ್ನ ವಶಪಡಿಸಿ ಕೊಂಡಿರತಕ್ಕವನಾಗಿಯೂ, ಇರುವ ಸರ್ವಾಂತರ್ಯಾಮಿಯಾದ ವಾಯುಶರೀರಕ ನಾದ ಸರ್ವೇಶ್ವರನು ನಮ್ಮನ್ನು ರಕ್ಷಿಸಲಿ!" ಎಂಬುದೇ ಆ ಮಂತ್ರಾರ್ಥವು.

ರಾಜಾ! ಕ್ಷೀರಸಮುದ್ರದಿಂದಾಚೆಗೆ ಪುಷ್ಕರದ್ವೀಪವುಂಟು. ಅದು ಅರುವತ್ತ ನಾಲ್ಕು ಲಕ್ಷಯೋಜನಗಳ ವಿಸ್ತಾರವುಳ್ಳುದಾಗಿ, ತನ್ನಷ್ಟೇ ವಿಸ್ತಾರವುಳ್ಳ ಶುದ್ಧ ಜಲಸಮುದ್ರದಿಂದ ಆವೃತವಾಗಿರುವುದು. ಆ ದ್ವೀಪದಲ್ಲಿ ಲಕ್ಷದಳಗಳುಳ್ಳ ಒಂದು ಸುವರ್ಣಮಯವಾದ ಕಮಲವು ಅಗ್ನಿಜ್ವಾಲೆಯಂತೆ ಬೆಳಗುತ್ತಿರುವುದು. ವಿಕಸಿತ ವಾದ ಆ ಕಮಲವೇ ಬ್ರಹ್ಮದೇವನ ಆಸನವೆಂದು, ಅಲ್ಲಿನ ಪ್ರಜೆಗಳಿಂದ ಧ್ಯಾನಿ

ಸಲ್ಪಡುತ್ತಿರುವುದು ಇದರಿಂದಲೇ ಅವನಿಗೆ ಕಮಲಾಸನನೆಂದೂ, ಆ ದ್ವೀಪಕ್ಕೆ ಪುಷ್ಕರದ್ವೀಪವೆಂದೂ ಹೆಸರುಂಟಾಯಿತು. ಆ ದ್ವೀಪದ ನಟ್ಟಡುವೆ ಹತ್ತು ಸಾವಿರ ಯೋಜನಗಳ ಔನತ್ಯವುಳ್ಳ, ಮತ್ತು ಅಷ್ಟೇ ವಿಶಾಲವಾದ ಮಾನಸೋತ್ತರವೆಂಬ ಪರ್ವತವೊಂದುಂಟು. ಅದು ತನ್ನ ಒಳಗೂ ಹೊರಗೂ ಇರುವ ಭೂಭಾಗಗಳಿಗೆ ಸೀಮಾಪರ್ವತವಾಗಿ ಅದನ್ನು ಎರಡುವರ್ಷಗಳಾಗಿ ವಿಭಾಗಿಸುವುದು. ಈ ಬಿಟ್ಟದ ನಾಲ್ಕು ದಿಕ್ಕುಗಳಲ್ಲಿಯೂ ಕ್ರಮವಾಗಿ ಇಂದ್ರ, ಯಮ, ಕುಬೇರ, ವರುಣರೆಂಬ ನಾಲ್ಕು ದಿಕ್ಪಾಲಕರ ಪಟ್ಟಣಗಳುಂಟು. ದೇವತೆಗಳಿಗೆ ಅಹೋರಾತ್ರರೂಪವಾದ ಉತ್ತರಾಯಣ ದಕ್ಷಿಣಾಯನಗಳೆಂಬ ಎರಡು ವಿಭಾಗಗಳುಳ್ಳ ಸಂವತ್ಸರವೆಂಬುದು ಆ ಮಾನಸೋತ್ತರಪರ್ವತದಮೇಲೆ, ಮೇರುವನ್ನು ಸುತ್ತಿಬರುತ್ತಿರುವ ಸೂರ್ಯರಥದ ಚಕ್ರದಂತಿರುವುದು. ಈ ಪುಷ್ಕರದ್ವೀಪವನ್ನು ಪ್ರಿಯವ್ರತನ ಮಗನಾದ ವೀತಿಹೋತ್ರನೆಂಬವನು, ಬಹುಕಾಲದವರೆಗೆ ಪಾಲಿಸುತ್ತಿದ್ದು, ಕೊನೆಗೆ ರಮಣ ಕಥಾತಕರೆಂಬ ತನ್ನ ಮಕ್ಕಳಿಬ್ಬರಿಗೆ ಅದನ್ನು ಹಂಚಿಕೊಟ್ಟು, ತಾನು ತನ್ನಣ್ಣನಾದ ಮೇಧಾತಿಥಿಯಂತೆ ಭಗವದಾರಾಧನದಲ್ಲಿ ನಿರತನಾಗಿದ್ದನು ಆ ವರ್ಷಗಳೆರಡೂ ಆ ರಾಜಕುಮಾರರ ಹೆಸರಿನಿಂದಲೇ ಕರೆಯಲ್ಪಡುವುವು. ಆ ದೇಶದ ಪ್ರಜೆಗಳೆಲ್ಲರೂ ತಮ್ಮ ಕರ್ಮಶೇಷವನ್ನು ಕಳೆಯುವುದಕ್ಕಾಗಿ, ಧ್ಯಾನಯೋಗದಿಂದ ಚತುರ್ಮುಖರೂಪಿಯಾದ ಭಗವಂತನನ್ನು ಆರಾಧಿಸುತ್ತ ಈ ಮಂತ್ರವನ್ನು ಜಪಿಸುತ್ತಿರುವರು. "ಜೀವಾ! ವರ್ಣಾಶ್ರಮಭೇದಗಳುಳ್ಳ ಲೋಕದ ಜನವೆಲ್ಲವೂ, ಪರಮಾತ್ಮನಿಗೆ ಶರೀರಭೂತನಾಗಿಯೂ, ವೇದವೇದ್ಯನಾಗಿಯೂ, ಸೃಷ್ಟಿಕರ್ತನಾಗಿಯೂ ಇರುವ ಯಾವ ನಿನ್ನನ್ನು 'ಕಾರ್ಯರೂಪವಾಗಿ ಕಾಣುವ ಈ ಸಮಸ್ತ ಪ್ರಪಂಚವೂ ನೀನೇ' ಎಂಬ ಅಭೇದಜ್ಞಾನದಿಂದ ಅವಿಚ್ಛಿನ್ನವಾದ ಭಕ್ತಿಯಿಟ್ಟು ಆರಾಧಿಸುತ್ತಿರುವುವೋ, ಅಂತಹ ನಿನಗೆ ನಮಸ್ಕಾರವು." ಎಂಬುದೇ ಆ ಮಂತ್ರಾರ್ಥವು.

ಓ ಪರೀಕ್ಷಿದ್ರಾಜೇಂದ್ರಾ! ಇದೇ ಸಪ್ತದ್ವೀಪಗಳ ಸನ್ನಿವೇಶವು. ಇದರಿಂದಾಚೆಗೂ ಕೆಲವು ಭಾಗಗಳುಂಟು. ಈ ಶುದ್ಧಸಮುದ್ರದಿಂದಾಚೆಗೆ ಲೋಕಾಲೋಕವೆಂಬ ಹೆಸರುಳ್ಳ ಒಂದಾನೊಂದು ಪರ್ವತವು, ಕೋಟೆಯಂತೆ ಸುತ್ತಲೂ ಆವರಿಸಿಕೊಂಡಿರುವುದು. ಶುದ್ಧಸಮುದ್ರದಿಂದಾಚೆಗೆ, ಜನಸಂಚಾರವುಳ್ಳ ಒಳಭಾಗಕ್ಕೂ, ಜನಸಂಚಾರಕ್ಕೆ ಅವಕಾಶವಿಲ್ಲದ ಹೊರಭಾಗಕ್ಕೂ ನಡುವೆ ಈ ಪರ್ವತವು ಏರ್ಪಟ್ಟಿರುವುದರಿಂದಲೇ, ಇದಕ್ಕೆ ಲೋಕಾಲೋಕವೆಂದು ಹೆಸರು. ಮೇರುಪರ್ವತಕ್ಕೂ ಮಾನಸೋತ್ತರಪರ್ವತಕ್ಕೂ ನಡುವೆ ಇರುವಷ್ಟು (೧೫೭೫೦೦೦) ವಿಸ್ತಾರವುಳ್ಳ, ಒಂದು

ಭೂಭಾಗವು, ಶುದ್ಧ ಸಮುದ್ರದಿಂದಾಚೆಗೆ ಲೋಕಾಲೋಕದವರೆಗಿರುವ ಭೂಮಿಯಷ್ಟೇ ವಿಶಾಲವಾಗಿರುವುದು. ಆದರಿಂದಾಚೆಗೆ ಮತ್ತೊಂದು ಭೂಭಾಗವು ಕೇವಲ ಸ್ವರ್ಣಮಯವಾಗಿ, ಕನ್ನಡಿಯಂತೆ ಥಳಥಳಿಸಿ ಮಿರುಗುತ್ತಿರುವುದು. (೮೦೦೦೦೦) ಯೋಜನ ವಿಸ್ತಾರವುಳ್ಳ ಆ ಭೂಮಿಯ ಮೇಲಿಟ್ಟ ವಸ್ತುವೊಂದೂ ತಿರುಗಿ ನಮ್ಮ ಕೈಗೆ ಸಿಕ್ಕಲಾರದು. ಲೋಕಾಲೋಕಪರ್ವತದಿಂದಾಚೆಗೆ ಯಾವಪ್ರಾಣಿಯೂ ಇಲ್ಲದೆ ಜನಶೂನ್ಯವಾಗಿರುವುದು. ಈ ಕಾರಣದಿಂದಲೇ ಅದನ್ನು ಅಲೋಕ (ಲೋಕವಲ್ಲದುದು) ಎಂದು ಹೇಳುವರು.

ಲೋಕಾಲೋಕಪರ್ವತಕ್ಕೆ ಒಳಭಾಗದಲ್ಲಿರುವ ಭೂಮಿಯು ಲೋಕವೆಂದೂ, ಹೊರಭಾಗದಲ್ಲಿರುವ ಭೂಮಿಯು ಅಲೋಕವೆಂದೂ ಕರೆಯಲ್ಪಡುವುದರಿಂದ, ಇವುಗಳ ನಡುವೆ ಸೇರಿರುವ ಆ ಪರ್ವತಕ್ಕೆ ಲೋಕಾಲೋಕವೆಂದು ಹೆಸರಾಯಿತು. ಈ ಪರ್ವತವು ಮೂರುಲೋಕಕ್ಕೂ ಒಂದು ಕೋಟೆಯಂತೆ ಈಶ್ವರನಿಂದ ಸೃಷ್ಟಿಸಲ್ಪಟ್ಟಿರುವುದು. ಸೂರ್ಯನಿಂದ ಹಿಡಿದು ಧ್ರುವನವರೆಗಿರುವ ಜ್ಯೋತಿರ್ಮಂಡಲವೆಲ್ಲವೂ, ತಮ್ಮ ಕೆಳಗಡೆಯಲ್ಲಿರುವ ಭೂಲೋಕ ವೊದಲಾದ ಈ ಮೂರುಲೋಕಗಳನ್ನೂ ತಮ್ಮ ಕಾಂತಿಯಿಂದ ಬೆಳಗುತ್ತಿರುವುವು. ಆದರಿಂದಾಚೆಗೆ ಈ ಚಕ್ರವಾಳ ಪರ್ವತವು ಅಡ್ಡಲಾಗಿರುವುದರಿಂದ ಆ ಪರ್ವತದ ಹಿಂಭಾಗಕ್ಕೆ ಈ ಜ್ಯೋತಿಶ್ಚಕ್ರಗಳ ಕಾಂತಿಯು ವ್ಯಾಪಿಸಲಾರದು. ಏಕೆಂದರೆ, ಆ ಪರ್ವತವು ಧ್ರುವಮಂಡಲವನ್ನೂ ಮೀರುವಷ್ಟು ಮಹೋನ್ನತವಾಗಿರುವುದು. ಇದರಿಂದ ಈ ಪರ್ವತದ ಒಂದುಕಡೆಗೆ ಸೂರ್ಯನ ಬೆಳಕೂ, ಮತ್ತೊಂದುಕಡೆಗೆ ಕತ್ತಲೆಯೂ ವ್ಯಾಪಿಸಿರುವುದರಿಂದಲೂ ಇವಕ್ಕೆ ಲೋಕಾಲೋಕವೆಂದು ಹೆಸರು. ಪಂಡಿತರು ಈ ಭೂಮಂಡಲದ ಪ್ರಮಾಣ ಲಕ್ಷಣಗಳನ್ನು ಈ ವಿಧವಾಗಿ ನಿರೂಪಿಸಿರುವರು. ಲೋಕಾಲೋಕಪರ್ವತವು ಎತ್ತರದಲ್ಲಿಯೂ, ವಿಸ್ತಾರದಲ್ಲಿಯೂ * ಐವತ್ತುಕೋಟೆಯೋಜನವಿಸ್ತಾರವುಳ್ಳ ಈ ಭೂಮಿಯ ಅಳತೆಯಲ್ಲಿ ನಾಲ್ಕರಲ್ಲಿ ಒಂದು ಪಾಲಿನಷ್ಟು (ಎಂದರೆ ಹನ್ನೆರಡೂವರೆ

* ಇಲ್ಲ ಭೂಮಂಡಲ ವಿಸ್ತಾರವು ಐವತ್ತು ಕೋಟಿ ಯೋಜನಗಳೆಂದು ಹೇಳಿದೆ. ಇದರ ವಿಭಾಗಕ್ರಮವೇನೆಂದರೆ:—ಜಂಬೂದ್ವೀಪದ ಒಂದು ಕೊನೆಯಿಂದ ಮತ್ತೊಂದು ಕೊನೆಯವರೆಗೆ ಒಂದು ಲಕ್ಷಯೋಜನಗಳಾದುದರಿಂದ, ಅದರ ನಡುವೆ ಇರುವ ಮೇರುಪರ್ವತದ ಬುಡದಿಂದ ನೆಟ್ಟಗೆ ಲವಣಸಮುದ್ರದವರೆಗೆ ಐವತ್ತು ಸಾವಿರಯೋಜನಗಳಾಗುವುವು. ಅದರಿಂದಾಚೆಗೆ ಸಮುದ್ರದ್ವೀಪಾದಿಗಳ ಅಳತೆಯನ್ನು ಅಲ್ಲಲ್ಲಿ ಹೇಳಿರುವ ಪ್ರಮಾಣದಿಂದಲೇ ತೆಗೆದುಕೊಂಡರೆ, ಶುದ್ಧೋದಧಿಯ ಕೊನೆಯವರೆಗೆ ೫೫೫೦೦೦೦ ಯೋಜನಗಳಾಗುವುವು. ಶುದ್ಧೋದಧಿಯಿಂದಾಚೆಗಿರುವ ಮತ್ತೊಂದು ಭೂಭಾಗವು, ಮೇರುವಿಗೂ ಪುಷ್ಕರದ್ವೀಪದ ನಟ್ಟನಡುವೆ ಇರುವ ಮಾನಸೋತ್ತರಪರ್ವತಕ್ಕೂ ನಡುವೆ ಇರುವಷ್ಟು ವಿಸ್ತಾರವುಳ್ಳದೆಂದು ಹೇಳಿದೆ

ಕೋಟಿಯೋಜನಗಳ) ಪ್ರಮಾಣವುಳ್ಳದೆಂದು ಹೇಳುವರು. ಈ ಪರ್ವತದಮೇಲೆ ನಾಲ್ಕುದಿಕ್ಕುಗಳಲ್ಲಿಯೂ ಕ್ರಮವಾಗಿ ಋಷಭ, ಪುಷ್ಕರಚೂಡ, ವಿಮಾನ, ಅಪರಾಜಿತಗಳೆಂಬ ನಾಲ್ಕು ಮಹಾಗಜಗಳುಂಟು. ಇವುಲೋಕಕ್ಷೇಮಕ್ಕಾಗಿ ಲೋಕಗುರುವಾದ ಬ್ರಹ್ಮದೇವನಿಂದ ಏರ್ಪಡಿಸಲ್ಪಟ್ಟಿರುವುವು. ಆ ದಿಗ್ಗಜಗಳಿಗೂ, ತನ್ನ ಅಂಶಭೂತರಾದ ಇಂದ್ರಾದಿಲೋಕಪಾಲಕರಿಗೂ, ಆಯಾಕಾರ್ಯಗಳಿಗೆ ಬೇಕಾದ ವಿವಿಧಸಾಮರ್ಥ್ಯವನ್ನುಂಟುಮಾಡುವುದಕ್ಕಾಗಿಯೂ, ಈ ಸಮಸ್ತ ಜಗತ್ತಿನ ಕ್ಷೇಮಕ್ಕಾಗಿಯೂ, ನಿತ್ಯವಿಭೂತಿ, ಲೀಲಾವಿಭೂತಿಗಳೆಂಬ ವಿಭೂತಿದ್ವಯಕ್ಕೂ ಪ್ರಭುವಾದ ಪರಮಪುರುಷನು, ಕಲ್ಪಾಂತದವರೆಗೆ ತಾನೂ ಅಲ್ಲಿ ಸರ್ವಾಂತರ್ಯಾಮಿಯಾಗಿ ನೆಲೆಗೊಂಡಿರುವನು. ಮತ್ತು ಯಾವ ಸ್ವರೂಪವು, ಜ್ಞಾನಯೋಗ ಕರ್ಮಯೋಗಗಳಿಂದಲೂ, ವೈರಾಗ್ಯದಿಂದಲೂ, ಅಣಿಮಾದ್ಯಷ್ಟಸಿದ್ಧಿಗಳನ್ನು ಪಡೆಯುವವರೆಗೆ ದೃಢವಾಗಿ ಸಾಧಿಸತಕ್ಕ ಉಪಾಸನಬಲದಿಂದಲೂ ಗೋಚರಿಸುವುದೋ, ಅಂತಹ ತನ್ನ ದಿವ್ಯಮಂಗಳವಿಗ್ರಹವನ್ನು ಧರಿಸಿ, ವಿಷ್ವಕ್ಸೇನಾದಿ ಪರಿಚರರೊಡಗೂಡಿ, ಶಂಖಚಕ್ರಾದಿ ದಿವ್ಯಾಯುಧಗಳನ್ನು ಹಿಡಿದು, ಆ ಲೋಕಾಲೋಕಪರ್ವತದ ಮೇಲೆ ನಾನಾಕಡೆಗಳಲ್ಲಿಯೂ ಲೋಕಕ್ಷೇಮಕ್ಕಾಗಿ ಸಾನ್ನಿಧ್ಯವನ್ನು ಮಾಡುತ್ತಿರುವನು.

ರಾಜೇಂದ್ರಾ! ಈ ಲೋಕಾಲೋಕದ ಹಿಂಭಾಗದಲ್ಲಿ ಸೇರಿದ ಅಲೋಕವೆಂಬ ಪ್ರದೇಶವೂ ಕೂಡ, ಆ ಪರ್ವತದ ಒಳಗಿನ ಲೋಕದಷ್ಟೇ ಅಳತೆಯುಳ್ಳದಾಗಿರುವುದು. ಇದರಿಂದಾಚೆಗೆ ಶುದ್ಧವಾದ ಯೋಗಮಹಿಮೆಯುಳ್ಳ ಯೋಗೀಶ್ವರರು ಮಾತ್ರ ಸಂಚರಿಸುವರೇ ಹೊರತು, ಬೇರೆ ಪ್ರಾಕೃತಜನರ ಪ್ರವೇಶಕ್ಕೆ ಅವಕಾಶವಿಲ್ಲ. ರಾಜೇಂದ್ರಾ! ಇವೆಲ್ಲವೂ ಭೂಮಂಡಲದ ಪರಿಮಾಣವು. ಬ್ರಹ್ಮಾಂಡದ ಒಟ್ಟುಪರಿಮಾಣವೆಷ್ಟೆಂಬುದನ್ನು ಸೂರ್ಯನ ನೆಲೆಯಿಂದ ತಿಳಿಯಬೇಕು. ಭೂಮಂಡಲದ ನಟ್ಟನಡುವೆ ಮೇರುವಿರುವಂತೆ, ಬ್ರಹ್ಮಾಂಡದ ಮಧ್ಯದಲ್ಲಿ, (ಭೂಮಂಡಲದ ಮತ್ತು ದ್ಯುಮಂಡಲದ ನಡುವೆ ಅಂತರಾಳದಲ್ಲಿ) ಸೂರ್ಯನಿರುವನು. ಸೂರ್ಯ

---

ದರಿಂದ, ಅದರ ವಿಸ್ತಾರವು ೧೫೭೫೦೦೦೦ ಯೋಜನಗಳು. ಅದರಿಂದಾಚೆಗೆ ಅದರ್ಶಭೂಮಿಯೆಂಬುದು ೬೪೯೦೦೦೦೦ ಯೋಜನಗಳು. ಇವೆಲ್ಲವನ್ನೂ ಕೂಡಿಸಿದರೆ ಹನ್ನೆರಡೂವರೆ ಕೋಟಿಯೋಜನಗಳಾಗುವುವು. ಇಷ್ಟೇ ಭೂಭಾಗವು ಚಕ್ರವಾಳ (ಲೋಕಾಲೋಕ) ಪರ್ವತದಿಂದಾಚೆಗೂ ಇರುವುದರಿಂದಮೇರುವಿನಿಂದ ಅಂಡಭಿತ್ತಿಯವರೆಗೆ ಇಪ್ಪತ್ತೈದು ಕೋಟಿಯೋಜನಗಳಾಗುವುವು. ಒಂದು ಕಡೆಯ ಅಂಡಭಿತ್ತಿಯಿಂದ ಮತ್ತೊಂದು ಕಡೆಯ ಅಂಡಭಿತ್ತಿಯವರೆಗೆ ಐವತ್ತು ಕೋಟಿಯೋಜನಗಳೆಂದು ಗ್ರಾಹ್ಯವು.

ನಿಗೂ ಸುತ್ತಿನ ಅಂಡಭಿತ್ತಿಗೂ ನಡುವೆ, ಇಪ್ಪತ್ತೈದು ಕೋಟಿಯೋಜನಗಳ ಅವಕಾಶವು ಬಿಟ್ಟಿರುವುದು. ಈ ಬ್ರಹ್ಮಾಂಡವು ಕಾಲಕಾಲಕ್ಕೆ ನಾಶಹೊಂದ ತಕ್ಕು ದಾದುದರಿಂದ ಇದನ್ನು ಮೃತಾಂಡವೆಂದು ಹೇಳುವರು. ಸೂರ್ಯನು ಇದರ ನಡುವೆ ಇರುವುದರಿಂದ ಅವನಿಗೆ ಮಾರ್ತಾಂಡನೆಂದು ಹೆಸರು. ಸುವರ್ಣದಂತೆ ರಮಣೀಯವಾದ ಈ ಅಂಡವೇ ಬ್ರಹ್ಮನಿಗೆ ಉತ್ಪತ್ತಿಸ್ಥಾನವಾದುದರಿಂದ, ಆ ಬ್ರಹ್ಮನಿಗೆ ಹಿರಣ್ಯಗರ್ಭನೆಂದು ಹೆಸರಾಯಿತು. ಪೂರ್ವಾದಿದಿಕ್ಕುಗಳೂ, ಭೂಲೋಕ, ದ್ಯುಲೋಕ, ಅಂತರಿಕ್ಷಗಳೆಂಬ ದೇಶಭೇದಗಳೂ, ಹಾಗೆಯೇ ಸ್ವರ್ಗ, ಮೋಕ್ಷಸ್ಥಾನ ಗಳೂ, ನರಕಗಳೂ, ಅತಲವಿತಲ ಮೊದಲಾದ ಪಾತಾಳಲೋಕಗಳೂ, ಇವೆಲ್ಲವೂ ಆ ಸೂರ್ಯನ ನೆಲೆಯಿಂದಲೇ ವಿಭಾಗಿಸಲ್ಪಟ್ಟಿರುವುವು. ಭಗವತ್ಸ್ವರೂಪನಾದ ಆ ಸೂರ್ಯನೇ ದೇವತಿರ್ಯಙ್ಮನುಷ್ಯಗಳು, ಗಿಡಬಳ್ಳಿಗಳು, ಮೊದಲಾದ ಸಮಸ್ತ ಜೀವರಾಶಿ ಗಳ ನೇತ್ರೇಂದ್ರಿಯಗಳಲ್ಲಿ ಅಧಿಷ್ಠಾನದೇವತೆಯಾಗಿದ್ದು ಅದನ್ನು ಪ್ರಕಾಶಗೊಳಿ ಸುತ್ತಿರುವನು. ಇದು ಇಪ್ಪತ್ತನೆಯ ಅಧ್ಯಾಯವು.

---

## ಸೂರ್ಯಗತಿಕ್ರಮವು.

ಓ, ರಾಜೇಂದ್ರಾ! ಇಷ್ಟೇ ಭೂಲೋಕದ ಪ್ರಮಾಣವು. ಆ ಭೂಮಂಡಲದ ಸನ್ನಿವೇಶಗಳನ್ನೂ, ಲಕ್ಷಣಗಳನ್ನೂ ನಿನಗೆ ಕ್ರಮವಾಗಿ ವಿವರಿಸಿದುದಾಯಿತು. ದ್ಯುಮಂಡಲದ ಪರಿಮಾಣವೂ ಇಷ್ಟೇ ಎಂಬುದನ್ನು ಜ್ಞಾನಿಗಳಾದ ಹಿರಿಯರು ನಿಶ್ಚಯಿಸಿರುವರು. ಬೀಸುವ ಕಲ್ಲಿನಲ್ಲಿಯಾಗಲೀ, ದ್ವಿದಳಧಾನ್ಯಗಳಲ್ಲಿಯಾಗಲೀ, ಒಂದು ಹೋಳಿನ ಪ್ರಮಾಣವನ್ನು ತಿಳಿಸುವುದರಿಂದ, ಅದರ ಮತ್ತೊಂದು ಹೋಳಿನ ಪ್ರಮಾಣವನ್ನೂ ಹಾಗೆಯೇ ಊಹಿಸಬಹುದಲ್ಲವೇ? ಅದರಂತೆಯೇ ಬ್ರಹ್ಮಾಂಡ ವೆಂಬ ಗೋಳದಲ್ಲಿ, ಸೂರ್ಯನ ಕೆಳಗಿರುವ ಭೂಮಂಡಲವೆಂಬ ಅರ್ಧಭಾಗದ ಪ್ರಮಾಣಲಕ್ಷಣಗಳನ್ನು ತಿಳಿಸಿದುದರಿಂದ, ಅದರ ಮೇಲಿನ ಭಾಗವಾದ ದ್ಯುಲೋಕದ ಪ್ರಮಾಣವನ್ನೂ ಹಾಗೆಯೇ ಊಹಿಸಬಹುದು. ಈ ಭೂಮಂಡಲಕ್ಕೂ, ದ್ಯುಲೋಕಕ್ಕೂ ನಡುವೆ ಇರುವ ಭಾಗವನ್ನೇ ಅಂತರಿಕ್ಷಲೋಕವೆಂದು ಹೇಳುವರು. ಈ ಅಂತರಿಕ್ಷವು, ಮೇಲೆ ದ್ಯುಮಂಡಲವನ್ನೂ, ಕೆಳಗೆ ಭೂಮಂಡಲವನ್ನೂ ಮುಟ್ಟುತ್ತಿರುವುದು. ಭಗವಂತನಾದ ಸೂರ್ಯನು, ಈ ಅಂತರಿಕ್ಷದ ನಟ್ಟನಡುವೆ

ನೆಲೆಗೊಂಡು ತನ್ನ ಕಿರಣದಿಂದ ಭೂರ್ಭುವಸ್ಸುವರ್ಲೋಕಗಳೆಂಬ ಮೂರು ಲೋಕಗಳನ್ನೂ ತಪಿಸುತ್ತಿರುವನು. ಈ ಸೂರ್ಯನಿಗೆ ಉತ್ತರಾಯಣವೆಂದೂ, ದಕ್ಷಿಣಾಯನವೆಂದೂ, ವೈಷುವತವೆಂದೂ ಕರೆಯಲ್ಪಡುವ ಮಂದಗತಿ, ಶೀಘ್ರಗತಿ, ಸಮಗತಿಗಳೆಂಬ ಮೂರು ಗತಿಗಳುಂಟು. ಈ ಗತಿಗಳಿಂದ ಆರೋಹಣ, ಅವರೋಹಣ, ಸಮಸ್ಥಾನಗಳೆಂದು ಕರೆಯಲ್ಪಡುವ ಮಕರಾದಿರಾಶಿಗಳಲ್ಲಿ, ಭಗವಂತನ ನಿಯಮಕ್ಕನುಸಾರವಾಗಿ ಕಾಲಕ್ರಮದಿಂದ ಮೇಲೇರುತ್ತಲೂ, ಕೆಳಕ್ಕಿಳಿಯುತ್ತಲೂ ಇರುವನು. ಇದರಿಂದ ಹಗಲು ರಾತ್ರಿಗಳು ಒಮ್ಮೊಮ್ಮೆ ಹ್ರಸ್ವವಾಗಿಯೂ, ದೀರ್ಘವಾಗಿಯೂ, ಸಮವಾಗಿಯೂ ನಡೆಯುತ್ತಿರುವುವು. ಸೂರ್ಯನು ಮೇಷತುಲಾರಾಶಿಗಳಲ್ಲಿರುವಾಗ, ಅಹೋರಾತ್ರಗಳೆರಡೂ ಸಮವಾಗಿರುವುವು. ವೃಷಭ, ಕಟಕ, ಸಿಂಹ, ಕನ್ಯಾರಾಶಿಗಳಲ್ಲಿ ಸಂಚರಿಸುವಾಗ, ಹಗಲು ಹೆಚ್ಚುತ್ತ ಬರುವುದು. ರಾತ್ರಿಕಾಲಗಳಲ್ಲಿ ಒಂದೊಂದು ಗಳಿಗೆಯಂತೆ ಕಡಿಮೆಯಾಗುತ್ತ ಬರುವುದು. ವೃಶ್ಚಿಕ, ಧನಸ್ಸು, ಮಕರ, ಕುಂಭ, ಮೀನ ರಾಶಿಗಳಲ್ಲಿ ಸೂರ್ಯನಿರುವಾಗ, ಅಹಃಪರಿಮಾಣದಲ್ಲಿ ತಿಂಗಳೊಂದಕ್ಕೆ ಒಂದೊಂದು ಗಳಿಗೆಯಂತೆ ಕಡಿಮೆಯಾಗುತ್ತ ಬರುವುದು. ಆದುದರಿಂದ ದಕ್ಷಿಣಾಯನದವರೆಗೆ ಹಗಲಿನ ಪ್ರಮಾಣವು ಹೆಚ್ಚುತ್ತ ಬರುವುದು. ಉತ್ತರಾಯಣದವರೆಗೆ ರಾತ್ರಿಯು ಹೆಚ್ಚುತ್ತ ಬರುವುದು. ಸೂರ್ಯನು ಮಾನಸೋತ್ತರಪರ್ವತದಲ್ಲಿದ್ದುಕೊಂಡು, ಮೇರುವನ್ನು ಸುತ್ತಿ ಬರುತ್ತಿರುವನೆಂದೂ, ಹೀಗೆ ಪ್ರತಿದಿನವೂ ಒಂಬತ್ತುಕೋಟಿ ಐವತ್ತೊಂದು ಲಕ್ಷ ಯೋಜನದವರೆಗೆ ಸಂಚರಿಸುವನೆಂದೂ ಹಿರಿಯರು ನಿಶ್ಚಯಿಸಿರುವರು. ಆ ಮಾನಸೋತ್ತರಪರ್ವತದಮೇಲೆ, ಮೇರುವಿಗೆ ಪೂರ್ವದಕ್ಷಿಣ ಪಶ್ಚಿಮೋತ್ತರ ದಿಕ್ಕುಗಳಲ್ಲಿ ಕ್ರಮವಾಗಿ ಇಂದ್ರ, ಯಮ, ವರುಣ, ಸೋಮದೇವತೆಗಳ ಪಟ್ಟಣಗಳಾದ ದೇವಧಾನಿ, ಸಂಯಮನಿ, ನಿಮ್ಲೋಚನಿ, ವಿಭಾವರಿಯೆಂಬ ನಾಲ್ಕು ಪಟ್ಟಣಗಳುಂಟು. ಹೀಗೆ ಮೇರುವಿಗೆ ನಾಲ್ಕು ದಿಕ್ಕುಗಳಲ್ಲಿಯೂ ಇರುವ ಆ ನಾಲ್ಕುಪಟ್ಟಣಗಳಲ್ಲಿ ಸಮಸ್ತಪ್ರಾಣಿಗಳ ವ್ಯಾಪಾರಕ್ಕೂ, ವಿಶ್ರಾಂತಿಗೂ ಕಾರಣಗಳೆನಿಸಿದ ಉದಯ, ಮಧ್ಯಾಹ್ನ, ಅಸ್ತಮಯ, ನಿಶೀಥ, (ರಾತ್ರಿ)ಗಳೆಂಬ ಕಾಲಭೇದಗಳುಂಟಾಗುವುವು. ಎಂದರೆ, ಮೇರುವಿನದಕ್ಷಿಣದಲ್ಲರತಕ್ಕವರಿಗೆಸೂರ್ಯನು ಇಂದ್ರಪಟ್ಟಣವಾದ ದೇವಧಾನಿಯಲ್ಲಿದ್ದಾಗ, ಸೂರ್ಯೋದಯವೂ, ಯಮಪಟ್ಟಣವಾದ ಸಂಯಮನಿಯಲ್ಲಿದ್ದಾಗ ಮಧ್ಯಾಹ್ನವೂ, ವರುಣಪಟ್ಟಣವಾದ ನಿಮ್ಲೋಚನಿಯಲ್ಲಿದ್ದಾಗ ಅಸ್ತಮಯವೂ, ಸೋಮಪಟ್ಟಣವಾದ ವಿಭಾವರಿಯಲ್ಲಿದ್ದಾಗ ರಾತ್ರಿಯೂ ಆಗುವುದು. ಹೀಗೆಯೇ ಸೂರ್ಯನು ಮೇರುವನ್ನು ಸುತ್ತಿಬರುತ್ತಿರುವು

ದರಿಂದ, ಮೇರುವಿನಪಶ್ಚಿಮದಿಕ್ಕಿನಲ್ಲಿದ್ದವರಿಗೆ ದಕ್ಷಿಣದಿಕ್ಕಿನಿಂದಾರಂಭಿಸಿ ಪೂರ್ವದಿ ದಿಕ್ಕುಗಳವಿಭಾಗವೂ, ಉದಯಾದಿಕಾಲಗಳೂ ಏರ್ಪಡುವುವು. ಉತ್ತರದಲ್ಲಿದ್ದವರಿಗೆ ಪಶ್ಚಿಮದಿಂದ ಮೊದಲಾಗಿ ಪೂರ್ವಾದಿದಿಗ್ವಿಭಾಗಗಳೂ ಉದಯಾದಿಕಾಲಗಳೂ ಬೇರ್ಪಡುವುವು. ಪೂರ್ವದಲ್ಲಿದ್ದವರಿಗೆ ಈ ದಿಗ್ವಿಭಾಗಗಳೂ, ಕಾಲಭೇದಗಳೂ ಮೇರುವಿನ ಉತ್ತರದಿಂದ ಆರಂಭವಾಗುವುದು. ಈ ವ್ಯತ್ಯಾಸಗಳು ಭೂಲೋಕದಲ್ಲಿ ರತಕ್ಕವರಿಗೇ ಹೊರತು ಮೇರುವಿನಲ್ಲಿದ್ದವರಿಗಿಲ್ಲ. ಅಲ್ಲಿ ಸೂರ್ಯನು ಸರ್ವದಾ ಮಧ್ಯಗತನಾಗಿ ಪ್ರಕಾಶಿಸುತ್ತಿರುವುದರಿಂದ, ಅವರಿಗೆ ಯಾವಾಗಲೂ ಮಧ್ಯಾಹ್ನ ಹೊರತು ರಾತ್ರಿಯೆಂಬುದೇ ಇಲ್ಲ. ಸೂರ್ಯನು ಆಕಾಶದಲ್ಲಿ ಸಂಚರಿಸುವಾಗ, ತನ್ನನ್ನು ನೋಡುವ ಜನಗಳಿಗೆ ತಾನು ಬಲಭಾಗದಲ್ಲಿದ್ದು, ಮೇರುವನ್ನು ಅವರ ಎಡಕ್ಕೆ ಬಿಡುವನು. ಏಕೆಂದರೆ ಸೂರ್ಯನು ಮೇರುವಿಗೆ ಯಾವಾಗಲೂ ಎಡವಾಗಿಯೇ ತಿರುಗುತ್ತಿರುವುದರಿಂದಲೂ, ಅದರಿಂದಲೇ ದಿಗ್ವಿಭಾಗಗಳುಂಟಾಗುವುದರಿಂದಲೂ, ಎಲ್ಲಾ ದ್ವೀಪವರ್ಷಗಳಿಗೂ ಮೇರುವೆಂಬುದು ಉತ್ತರದಲ್ಲಿಯೇ ಇರುವುದು. ಮತ್ತು ಎಲ್ಲಿ ಸೂರ್ಯೋದಯವು ಕಾಣುತ್ತಿರುವುದೋ, ಅದಕ್ಕೆ ನೆಟ್ಟಗಿರುವ ಇದಿರುಭಾಗದಲ್ಲಿ ಅಸ್ತಮಯವು ಕಾಣುತ್ತಿರುವುದು. ಎಂದರೆ ಪೂರ್ವದಿಕ್ಕಿನಲ್ಲಿ ಸೂರ್ಯೋದಯವಾದಾಗ ಅದಕ್ಕೆ ನೇರವಾದ ಪಶ್ಚಿಮದಿಕ್ಕಿನಲ್ಲಿ ಅಸ್ತಮಯವಾಗುವುದು. ಅದರಂತೆಯೇ ಒಂದು ದಿಕ್ಕಿನಲ್ಲಿ ಸೂರ್ಯನು ಮಧ್ಯಾಹ್ನಗತನಾಗಿ ತಪಿಸುತ್ತಿರುವಾಗ, ಅದಕ್ಕೆ ನೇರವಾದ ಇದಿರುದಿಕ್ಕಿನಲ್ಲಿ ಅರ್ಧರಾತ್ರಿಯು ನಡೆಯುತ್ತಿರುವುದು. ಈ ಮೇರುವಿನ ನಾಲ್ಕುದಿಕ್ಕುಗಳಲ್ಲಿಯೂ ಇರುವ ಪಟ್ಟಣಗಳಲ್ಲಿ, ಕ್ರಮವಾಗಿ ಒಂದಕ್ಕೊಂದಕ್ಕೆ ಎರಡುಕೋಟಿ, ಮೂವತ್ತೆಳುಲಕ್ಷದ ಇಪ್ಪತ್ತುಸಾವಿರಯೋಜನಗಳ ದೂರವಿರುವುದು. ಈ ದೂರವನ್ನು ಸೂರ್ಯನು ಹದಿನೈದುಗಳಿಗೆಗಳ ಕಾಲದಲ್ಲಿದಾಟಿ ಹೋಗುವನು. ಹೀಗೆಯೇ ಚಂದ್ರಾದಿಗ್ರಹಗಳೂ ಕೂಡ, ಅಶ್ವಿನ್ಯಾದಿನಕ್ಷತ್ರಗಳೊಡನೆ, ಮೇಲೆ ಹೇಳಿದ ಇಂದ್ರಾದಿಪುರಗಳಲ್ಲಿ ಕ್ರಮವಾಗಿ ಉದಯಿಸುತ್ತಲೂ, ಅಸ್ತಮಿಸುತ್ತಲೂ ಇರುವುವು. ಸೂರ್ಯನ ವೇದಮಯವಾದ ರಥವು ಆನಾಲ್ಕುಪಟ್ಟಣಗಳಲ್ಲಿಯೂ ಒಂದು ಮುಹೂರ್ತಕಾಲಕ್ಕೆ ಮೂವತ್ತನಾಲ್ಕುಲಕ್ಷದ ಎಂಟುನೂರುಯೋಜನಗಳಂತೆ ಸುತ್ತಿಬರುವುದು. ಆ ಸೂರ್ಯರಥಕ್ಕೆ ಒಂದೇ ಗಾಲಿಯು. ಅದನ್ನೇ ಸಂವತ್ಸರವೆಂದು ಹೇಳುವರು. ಈ ಗಾಲಿಗೆ ಮಾನಗಳೆಂಬ ಹನ್ನೆರಡು ಅಡ್ಡಗಡ್ಡಿ (ಆರ) ಗಳೂ, ಋತುಗಳೆಂಬ ಆರುಪಟ್ಟಿಗಳೂ, ಚಾತುರ್ಮಾಸ್ಯಗಳೆಂಬ ಮೂರುತಿರುಗುಳಿಗಳೂ ಇರುವುವು. ಆ ರಥದ ಅಚ್ಚಿನಒಂದು ಕೊನೆಯು ಮೇರುವಿನ ತುದಿಯಲ್ಲಿ ತಗುಲಿಸಲ್ಪಟ್ಟಿರುವುದು. ಮತ್ತೊಂದು

ಕೊನೆಯು ಮಾನಸೋತ್ತರಪರ್ವತದಲ್ಲಿ, ಐವತ್ತು ಸಾವಿರಯೋಜನಗಳ ಎತ್ತರದಲ್ಲಿ ತಗುಲಿಸಲ್ಪಟ್ಟಿರುವುದು. ಸೂರ್ಯರಥಕ್ಕಿರುವ ಒಂದುಚಕ್ರವು, ಆ ಅಚ್ಚಿನಕೊನೆಯಲ್ಲಿ ಸೇರಿ ಎಣ್ಣೆಯ ಗಾಣದಂತೆ ಮಾನಸೋತ್ತರಪರ್ವತದಮೇಲೆಯೇ ಉರುಳುತ್ತಿರುವುದು. ಮೇರುವಿನಿಂದ ಮಾನಸೋತ್ತರಪರ್ವತದವರೆಗೆ ನೀಡಿದ ಈ ಅಚ್ಚಿನ ಅಳತೆಯು, ಒಂದು ಕೋಟಿ, ಐವತ್ತೇಳುಲಕ್ಷದ ಐವತ್ತು ಸಾವಿರಯೋಜನಗಳು. ಆದೇಚಕ್ರದಲ್ಲಿ ತಗುಲಿಸಲ್ಪಟ್ಟಿರುವ ಮತ್ತೊಂದು ಇರಿಚಿಯು, ಎಣ್ಣೆಯ ಗಾಣದ ಕಂಬದಂತೆ ಮೇಲುಮುಖವಾಗಿ ಹೊರಟು, ಅದರಮತ್ತೊಂದು ಕೊನೆಯಲ್ಲಿ ಧ್ರುವ ನಕ್ಷತ್ರಕ್ಕೆ ತಗುಲಿಸಲ್ಪಟ್ಟಿರುವುದು. ಇದರಅಳತೆಯು, ಮೇರುವಿನಿಂದ ಮಾನ ಸೋತ್ತರಪರ್ವತದವರೆಗೆ ನೀಡಿರುವ ಮೊದಲನೆಯ ಅಚ್ಚಿನ ಅಳತೆಯಲ್ಲಿ ಕಾಲು ಪಾಲು ಎಂದರೆ ಮೂವತ್ತೊಂಬತ್ತು ಲಕ್ಷದಮೂವತ್ತೇಳುಸಾವಿರದ ಐನೂರುಯೋ ಜನಗಳಿರುವುದು. ಈ ಸೂರ್ಯರಥದಲ್ಲಿ ರಥಿಕನು ಕುಳ್ಳಿರತಕ್ಕ ಸ್ಥಳವು, ಮೂವತ್ತಾರು ಲಕ್ಷಯೋಜನಗಳ ಉದ್ದವುಳ್ಳುದಾಗಿಯೂ, ಅದರಲ್ಲಿ ಕಾಗಪಾಲು ಅಲಾಲವುಳ್ಳು ದಾಗಿಯೂ ಇರುವುದು. ಈ ರಥನೊಗವೂಕೂಡ, ಉದ್ದದಲ್ಲಿಯೂ, ಅಗಲದಲ್ಲಿಯೂ ಆ ರಥದ ಜಗತಿಯನ್ನೇ ಹೋಲುತ್ತಿರುವುದು. ಆ ಸೂರ್ಯರಥದಲ್ಲಿ ಸಾರಥಿಯಾದ ಅರುಣನಿಂದ ನಡೆಸಲ್ಪಡುವ ಏಳು ಕುದುರೆಗಳುಂಟು. ಅವು ಗಾಯತ್ರಿ ಮೊದಲಾದ ಛಂದಸ್ಸುಗಳ ಹೆಸರಿನಿಂದ ಕರೆಯಲ್ಪಡುತ್ತ, ಸೂರ್ಯನನ್ನು ತಕ್ಕ ಸ್ಥಳಕ್ಕೆ ತಕ್ಕ ಕಾಲದಲ್ಲಿ ತಂದು ಸೇರಿಸುವುವು. ಸಾರಥಿಯಾದ ಅರುಣನು, ಸೂರ್ಯನಿಗೆ ಮುಂದೆ, ಹಿಂದುಮುಖವಾಗಿ ಕುಳಿತು ಕುದುರೆಗಳನ್ನು ನಡೆಸುತ್ತಿರುವನು. ಹೆಬ್ಬೆರಳಿನ ಗಣ್ಣಿ ನಷ್ಟುಆಕಾರವುಳ್ಳ ವಾಲಖಿಲ್ಯರೆಂಬ ಅರುವತ್ತು ಸಾವಿರಮಂದಿ ಋಷಿಗಳು, ಹೀಗೆಯೇ ಸೂರ್ಯನಮುಂದೆ ಆ ರಥದಲ್ಲಿ ಕುಳಿತು, ಆತನ ನಿಯಮಾನುಸಾರವಾಗಿ ಸೂಕ್ತಗಳನ್ನು ಹೇಳಿ ಅವನನ್ನು ಸ್ತೋತ್ರಮಾಡುವರು. ಇದಲ್ಲದೆ ಋಷಿಗಳು, ಗಂಧರ್ವರು, ಅಪ್ಸರಸ್ತ್ರೀಯರು, ನಾಗರು, ಯಕ್ಷರು, ರಾಕ್ಷಸರು, ದೇವತೆಗಳೆಂಬ ಈ ಏಳು ದೇವಗಣಗಳಲ್ಲಿ ಒಂದೊಂದು ಗಣಕ್ಕೆ ಇಬ್ಬಿಬ್ಬರಂತೆ ಹದಿನಾಲ್ಕುಮಂದಿ ಪ್ರಧಾನರು ಬಂದುಬೇರೆಬೇರೆ ತಿಂಗಳಲ್ಲಿ ಬೇರೆಬೇರೆ ಹೆಸರುಳ್ಳ ಪರಮಾತ್ಮಸ್ವರೂಪ ನಾದ ಸೂರ್ಯನನ್ನು ಬೇರೆಬೇರೆ ವ್ಯಾಪಾರಗಳಿಂದ ಉಪಾಸಿಸುತ್ತಿರುವರು ಈ ಭೂಮಂಡಲವು ಒಂಭತ್ತುಕೋಟಿ, ಐವತ್ತೊಂದು ಲಕ್ಷಯೋಜನಗಳ ಸುತ್ತಳ ತೆಯುಳ್ಳುದು! ಅದರಲ್ಲಿ ಸೂರ್ಯನು ಒಂದುಕ್ಷಣಕ್ಕೆ ಎರಡು ಸಾವಿರಯೋಜನಗಳ ಮೇಲೆ ಎರಡು ಹರಿದಾರಿಯ ದೂರವನ್ನು ದಾಟುವನು. ಇಲ್ಲಿಗೆಇಪ್ಪತ್ತೊಂದನೆಯ ಅಧ್ಯಾಯವು.

---

## ಚಂದ್ರಾದಿಗ್ರಹಗಳ ಸ್ಥಾನಗಳು ಮತ್ತು ಗತಿಗಳು.

ಪರೀಕ್ಷಿದ್ರಾಜನು ಶುಕಮುನಿಯನ್ನು ಕುರಿತು "ಓಮಹರ್ಷೀ! ಭಗವಂತನಾದ ಸೂರ್ಯನು ಮೇರುವನ್ನೂ ಧ್ರುವನನ್ನೂ ಪ್ರದಕ್ಷಿಣವಾಗಿ ಸುತ್ತುವನೆಂದು ಹೇಳಿದೆ! ನಕ್ಷತ್ರಗಳಿಗಿದಿರಾಗಿ ಮಕರಾದಿರಾಶಿಗಳಲ್ಲಿ ಸುತ್ತುವನೆಂದೂ ಹೇಳಿದೆಯಲ್ಲವೇ? ಪರಸ್ಪರವಿರುದ್ಧವಾದ ಈ ಎರಡು ಬಗೆಯ ಗತಿಗಳೂ ಒಬ್ಬನಿಗೆ ಏಕಕಾಲದಲ್ಲಿಹೇಗೆ ಸರಿಹೋಗುವುವೆಂಬುದನ್ನು ತಿಳಿಸಬೇಕು" ಎಂದನು. ಆದಕ್ಕಾಶುಕನು "ಓ ರಾಜೇಂದ್ರಾ ಕೇಳು" ಕುಂಬಾರನ ಚಕ್ರವು ಸುತ್ತುವುದನ್ನು ನೋಡಿರುವೆಯಷ್ಟೆ? ಆ ಚಕ್ರದಮೇಲೆ ಬಂದು ಕುಳಿತ ಇರುವೆ ಮುಂತಾದಪ್ರಾಣಿಗಳೂ ಆಚಕ್ರದೊಡನೆ ಸುತ್ತುತ್ತಿರುವುವಲ್ಲದೆ ತಾವೂ ಅದರಮೇಲೆ ತಮ್ಮ ಗತಿಯಿಂದ ಸಂಚರಿಸುವುದುಂಟು. ಮೊದಲು ಒಂದು ಸ್ಥಲದಲ್ಲಿ ಕಾಣುತ್ತಿದ್ದ ಒಂದು ಸಣ್ಣಹುಳುವನ್ನು ಸ್ವಲ್ಪಕಾಲದಮೇಲೆ ಅದೇ ಚಕ್ರದ ಮತ್ತೊಂದು ಸ್ಥಳದಲ್ಲಿ ಕಾಣುವೆವು. ಆದುದರಿಂದ ಆ ಹುಳುಗಳು ಚಕ್ರದೊಡನೆ ಸುತ್ತುವುದುಮಾತ್ರವಲ್ಲದೆ, ಆ ಚಕ್ರದಲ್ಲಿ ತಾವೂ ನಡೆಯುತ್ತಿರುವುವೆಂದು ಸ್ಪಷ್ಟವಾಗುವುದು ಹೀಗೆಯೇ ಧ್ರುವನನ್ನೂ ಮೇರುವನ್ನೂ, ಪ್ರದಕ್ಷಿಣವಾಗಿ ಸುತ್ತುತ್ತಿರುವ ಕಾಲಚಕ್ರದೊಡನೆ, ಆದರಲ್ಲಿರುವ ಸೂರ್ಯನೂ, ಇತರ ಗ್ರಹಗಳೂ, ಸುತ್ತುವುದಲ್ಲದೆ, ಒಂದು ನಕ್ಷತ್ರದಲ್ಲಿಯೂ, ಒಂದು ರಾಶಿಯಲ್ಲಿಯೂ, ಸೇರಿದ್ದ ಆಗ್ರಹಗಳು ತಮ್ಮ ಗತಿಯಿಂದ ಸ್ವಲ್ಪಕಾಲದ ಮೇಲೆ ಆದಕ್ಕೆಮುಂದಿನ ಬೇರೆ ನಕ್ಷತ್ರದಲ್ಲಿಯೂ ರಾಶಿಯಲ್ಲಿಯೂ ಕಾಣುವುವು. ಆದುದರಿಂದ ಆಗ್ರಹಗಳಿಗೂ ಬೇರೆ ಗತಿಗಳುಂಟೆಂಬುದರಲ್ಲಿ ಸಂದೇಹವಿಲ್ಲ. ಷಡ್ಗುಣ ಪರಿಪೂರ್ಣನೂ, ಆದಿಪುರುಷನೂ ಆದ ಶ್ರೀಮನ್ನಾರಾಯಣನು, ಹೀಗೆ ಸೂರ್ಯ ಸ್ವರೂಪನಾಗಿ, ವೇದಮಯವಾದ ತನ್ನ ಸ್ವರೂಪವನ್ನು ಹನ್ನೆರಡುವಿಧವಾಗಿ ವಿಭಾಗಿಸಿಕೊಂಡು, ಲೋಕಕ್ಷೇಮಕ್ಕಾಗಿಯೂ, ಕಾಲನಿಯಮದಿಂದ ಕರ್ಮಗಳಿಗೆ ಶುದ್ಧಿಯನ್ನುಂಟುಮಾಡುವುದಕ್ಕಾಗಿಯೂ, ವಸಂತಾದಿಋತುಗಳಲ್ಲಿ, ಮಳೆ, ಗಾಳಿ, ಬಿಸಿಲು, ಮುಂತಾದಋತುಗುಣಗಳನ್ನು ಹುಟ್ಟಿಸುತ್ತಿರುವನು. ಸೂರ್ಯ ರೂಪದಿಂದಿರುವ ಆ ಭಗವಂತನು ವೇದಗಳಿಂದಲೂ, ಪಂಡಿತರಿಂದಲೂ ಉಪಾಸನೆ ಮಾಡಲ್ಪಡುತ್ತಿರುವನು. ಲೋಕದಜನರು ವೇದೋಕ್ತವಾದ ತಮ್ಮ ತಮ್ಮ ವರ್ಣಾಶ್ರಮಧರ್ಮಗಳನ್ನನುಸರಿಸಿ, ಯಜ್ಞಾದಿಕರ್ಮಗಳಿಂದಲೂ, ಉಪಾಸನೆಯಿಂದಲೂ, ಆ ಸೂರ್ಯರೂಪಿಯಾದ ಭಗವಂತನನ್ನಾರಾಧಿಸಿ, ಅನಾಯಾಸವಾಗಿ ಶೀಘ್ರದಲ್ಲಿಯೇ ಸ್ವರ್ಗಮೋಕ್ಷಾದಿರೂಪವಾದ ಶ್ರೇಯಸ್ಸನ್ನೂ ಹೊಂದುವರು. ಹೀಗೆ ಸರ್ವಾಂತರ್ಯಾಮಿಯಾದ ಭಗವಂತನು ಆದಿತ್ಯರೂಪದಿಂದ ಭೂಮಿಗೂ,

ಊರ್ಧ್ವಲೋಕಗಳಿಗೂ ನಡುವೆ ಅಂತರಿಕ್ಷದ ಮಧ್ಯಭಾಗದಲ್ಲಿ * ಶಿಂಶುಮಾರವೆಂಬ ಕಾಲಚಕ್ರದಲ್ಲಿದ್ದುಕೊಂಡು, ಅದರಲ್ಲಿರುವ ಮೇಷಾದಿರಾಶಿಗಳಲ್ಲಿ ನಕ್ಷತ್ರಗಳಿಗಿದಿರಾಗಿ ನಡೆಯುತ್ತ ಬರುವುದರಿಂದ, ಸಂವತ್ಸರಕ್ಕೆ ಅವಯವಗಳೆನಿಸಿಕೊಂಡ ಹನ್ನೆರಡು ತಿಂಗಳುಗಳು ಏರ್ಪಡುವುವು. ಅವುಗಳನ್ನೇ ಸೂರ್ಯಗತಿಯಿಂದ ರಾಶಿಗಳೆಂದು ಹೇಳುವರು. ಈ ಮಾಸಗಳೇ ಚಾಂದ್ರಮಾನದಿಂದ ಶುಕ್ಲಕೃಷ್ಣಪಕ್ಷಗಳೆಂದೂ, ಸೌರಮಾನದಿಂದ ಎರಡೂ ಕಾಲು ಮಹಾನಕ್ಷತ್ರಗಳೆಂದೂ, ಪಿತೃಮಾನದಿಂದ ಒಂದು ಅಹೋರಾತ್ರವೆಂದೂ ಕರೆಯಲ್ಪಡುವುವು. ಸೂರ್ಯನು ಹನ್ನೆರಡು ರಾಶಿಗಳಿಂದ ಕೂಡಿದ ಒಂದು ಸಂವತ್ಸರದಲ್ಲಿ, ಆರನೆಯಭಾಗವಾದ ಎರಡು ರಾಶಿಗಳನ್ನು ಎಷ್ಟು ಕಾಲದಲ್ಲಿ ದಾಟಿ ಹೊಗುವನೋ ಅದನ್ನು ಸಂವತ್ಸರಕ್ಕೆ ಅವಯವವಾದ ಋತುವೆನ್ನುವರು. ಅದೇ ಸೂರ್ಯನು ಈ ಹನ್ನೆರಡು ರಾಶಿಗಳಲ್ಲಿ ಆರುರಾಶಿಗಳನ್ನು ಎಷ್ಟುಕಾಲದಲ್ಲಿ ದಾಟುವನೋ ಆ ಕಾಲಕ್ಕೆ ಆಯನವೆಂದು ಹೆಸರು. ಈ ಹನ್ನೆರಡು ರಾಶಿಗಳಿಂದ ತುಂಬಿದ ನಭೋಮಂಡಲವನ್ನು, ಸೂರ್ಯನು ತನ್ನ ಮುಂದಗತಿಯಿಂದಲೂ, ಶೀಘ್ರಗತಿಯಿಂದಲೂ, ಸಮಗತಿಯಿಂದಲೂ ಎಷ್ಟು ಕಾಲದಲ್ಲಿ ಸಂಪೂರ್ಣವಾಗಿ ದಾಟಿಹೋಗುವನೋ ಆ ಕಾಲವು † ಸಂವತ್ಸರವೆಂದೂ

---

* ಇಲ್ಲಿ ತಿಳಿಯಬೇಕಾದ ಕ್ರಮವೇನೆಂದರೆ:—ಭಗವದಾತ್ಮಕವಾದ ಶಿಂಶುಮಾರವೆಂಬ ಕಾಲಚಕ್ರವು ಎಡೆಬಿಡದೆ ಸುತ್ತುತ್ತಿರುವುದು. ಇದು ಸಮಸ್ತಗ್ರಹನಕ್ಷತ್ರಗಳಿಗೆಲ್ಲಾ ಆಧಾರವಾಗಿ, ನೂರೆಂಭತ್ತುಮೂರು ವಲಯಾಕಾರ ರೇಖೆಗಳಿಂದ ಕೂಡಿರುವುದು. ಈ ರೇಖೆಗಳಲ್ಲಿ ಅಂತರ್ವಲಯವೆಂದೂ, ಬಹಿರ್ವಲಯವೆಂದೂ, ಮಧ್ಯವಲಯವೆಂದೂ ಮೂರು ವಿಭಾಗಗಳುಂಟು. ಈ ವಲಯಗಳನ್ನು ದಾಟುತ್ತಿರುವುದರಿಂದಲೇ ಸೂರ್ಯನಿಗೆ ಗತಿಭೇದಗಳುಂಟಾಗುವುವು. ಇದರಿಂದ ಸೂರ್ಯನಿಗೆ ಆರೋಹಣ, ಅವರೋಹಣ, ಸಮಸ್ಥಾನಗಳೆಂದು ಮೂರವಸ್ಥೆಗಳುಂಟು. ಸೂರ್ಯನು ಹೊರವಲಯದಿಂದ ಒಳವಲಯಕ್ಕೆ ಏರಿಹೋಗುವುದೇ ಆರೋಹಣ, ಇದನ್ನೇ ಉತ್ತರಾಯಣವೆನ್ನುವರು. ಆ ಒಳವಲಯದಿಂದ ಹೊರವಲಯಕ್ಕೆ ಬರುವಾಗ, ಅವರೋಹಣವೆನಿಸುವುದು. ಇದೇ ದಕ್ಷಿಣಾಯನವು. ಮಧ್ಯವಲಯದಲ್ಲಿದ್ದಾಗ ಸಮಸ್ಥಿತಿಯೆನಿಸುವುದು. ಇದರಲ್ಲಿ ರಾತ್ರಿಹಗಲುಗಳು ಸಮವಾಗಿರುವುವು. ಇದಕ್ಕೆ ವೈಷುವತವೆಂದೂ ಹೆಸರು. ಉತ್ತರಾಯಣವೆಂಬ ಆರೋಹಣದಲ್ಲಿ ಮೇಲೇರುವುದಕ್ಕಾಗಿ ಬಹಳ ಹೊತ್ತು ಹಿಡಿಯುವುದರಿಂದ, ಆಗ ಸೂರ್ಯನಿಗೆ ಮಂದಗತಿಯುಂಟಾಗಿ, ಹಗಲು ದೀರ್ಘವಾಗುವುದು. ರಾತ್ರಿಯು ತಗ್ಗುವುದು. ದಕ್ಷಿಣಾಯನವೆಂಬ ಅವರೋಹಣದಲ್ಲಿ ಶೀಘ್ರಗಮನವಿರುವುದರಿಂದ ಹಗಲು ತಗ್ಗಿ, ರಾತ್ರಿಯು ದೀರ್ಘವಾಗುವುದು. ಈ ಎರಡಯನಗಳ ಸಂಧಿಕಾಲದಲ್ಲಿ ಸೂರ್ಯನ ಗತಿಯು ಸಮವಾದುದರಿಂದ ಆಗ ಅಹೋರಾತ್ರಗಳೂ ಸಮವಾಗಿ ನಡೆಯುವುವೆಂದು ಗಮನಾರ್ಹ್ಯವು.

† ಇಲ್ಲಿನ ಭೇದಗಳು ಹೇಗೆಂದರೆ:—ಜ್ಯೋತಿಃಶಾಸ್ತ್ರದಲ್ಲಿ ಸೌರಮಾನವೆಂದೂ, ಚಾಂದ್ರಮಾನವೆಂದೂ ಎರಡು ಭೇದಗಳುಂಟು. ಸೂರ್ಯಗತಿಯಿಂದ ಕಾಲವನ್ನಳೆಯುವುದು ಸೌರ:

ಪರಿವತ್ಸರವೆಂದೂ, ಇಳಾವತ್ಸರವೆಂದೂ ಇದ್ವತ್ಸರವೆಂದೂ ಬೇರೆಬೇರೆ ಹೆಸರಿನಿಂದ ಕರೆಯಲ್ಪಡುವುದು. ಈ ಸೂರ್ಯಮಂಡಲಕ್ಕೆ ಲಕ್ಷಯೋಜನಗಳಮೇಲೆ ಚಂದ್ರನು ಬಹಳ ವೇಗದಿಂದ ಸಂಚರಿಸುತ್ತಿರುವನು ಈ ಕಾರಣದಿಂದ ಇವನನ್ನು ಉಗ್ರಚಾರಿಯೆಂದು ಕರೆಯುವರು. ಸೂರ್ಯನು ಒಂದು ಸಂವತ್ಸರಕಾಲದಲ್ಲಿ ದಾಟಿಹೋಗುವ ಅಂತರಿಕ್ಷಮಂಡಲವನ್ನು, ಚಂದ್ರನು ಎರಡು ಪಕ್ಷಗಳಲ್ಲಿ ದಾಟಿ ಹೋಗುವನು. ಸೂರ್ಯನು ಒಂದು ತಿಂಗಳಲ್ಲಿ ಸಂಚರಿಸತಕ್ಕ ದಾರಿಯನ್ನು, ಚಂದ್ರನು ಎರಡೂ ಕಾಲು ನಕ್ಷತ್ರಗಳನ್ನು ದಾಟುವ ಹೊತ್ತಿನಲ್ಲಿ ದಾಟಿಬಿಡುವನು ಸೂರ್ಯನು ಒಂದು ಪಕ್ಷದಲ್ಲಿ ಸಂಚರಿಸುವ ದಾರಿಯನ್ನು ಚಂದ್ರನು ಒಂದು ಹಗಲಲ್ಲಿ ದಾಟುವನು. ಮತ್ತು ಎಲೈ ಪರೀಕ್ಷಿದ್ರಾಜನೇ! ಚಂದ್ರನು ಆಗಾಗ ಹೆಚ್ಚುತ್ತಲೂ, ಕುಂದುತ್ತಲೂ ಇರುವ ಕಳೆಗಳಿಂದ ಪಿತೃದೇವತೆಗಳಿಗೆ ಅಹೋರಾತ್ರರೂಪವಾದ ಶುಕ್ಲಕೃಷ್ಣ ಪಕ್ಷಗಳನ್ನು ಮಾಡುತ್ತಿರುವನು. ಮತ್ತು ಸಮಸ್ತ ಜೀವರಾಶಿಗಳ ಪ್ರಾಣಗಳಿಗೂ ತೃಪ್ತಿಯನ್ನುಂಟುಮಾಡುತ್ತ, ಮೂವತ್ತು ಮುಹೂರ್ತಗಳೊಳಗಾಗಿ ಒಂದೊಂದು ನಕ್ಷತ್ರವನ್ನು ದಾಟುವನು. ಷೋಡಶಕಳೆಗಳಿಂದ ಕೂಡಿದ ಚಂದ್ರರೂಪಿಯಾದ ಭಗವಂತನು, ಮನಸ್ಸಿಗೆ ಅಧಿಷ್ಠಾನದೇವತೆಯಾದುದರಿಂದ, ಮನೋಮಯನೆಂದೂ, ಸರ್ವೌಷಧಿಗಳಿಗೂ ಪ್ರಭುವಾದುದರಿಂದಅನ್ನಮಯನೆಂದೂ ಸಮಸ್ತ ಪ್ರಾಣಿಗಳ ಜೀವನಕ್ಕೂ ಕಾರಣವಾದುದರಿಂದ ಅಮೃತಮಯನೆಂದೂ, ದೇವತೆಗಳು, ಪಿತೃಗಳು ಪಶುಪಕ್ಷಿ ಮೃಗಾದಿಗಳು, ಮುಂತಾದ ಸಮಸ್ತಭೂತಗಳ ಪ್ರಾಣಗಳಿಗೂ ತೃಪ್ತಿಕರನಾದುದರಿಂದ ಸರ್ವಮಯನೆಂದೂ ಕೀರ್ತಿಸಲ್ಪಡುವನು. ಆ ಚಂದ್ರಮಂಡಲದಿಂದ ಮೂರುಲಕ್ಷಣಯೋಜನಗಳಿಗೆ ಮೇಲೆ, ಅಭಿಜಿತ್ತೆಂಬ ನಕ್ಷತ್ರ ಮೊದಲಾಗಿ ಇಪ್ಪತ್ತೆಂಟು ನಕ್ಷತ್ರಗಳು, ಭಗವನ್ನಿಯಮದಿಂದ ಮೇರು

---

ಮಾನವು. ಚಂದ್ರಗತಿಯಿಂದಳೆಯುವುದು ಚಾಂದ್ರಮಾನವು. ಸೂರ್ಯನು ಮಕರಾದಿರಾಶಿಗಳಲ್ಲಿ ಪ್ರವೇಶಿಸಿದದಿನವೇ ಸೌರಮಾನದಲ್ಲಿ ಆಯಾತಿಂಗಳಿಗೆ ಆರಂಭದಿನವಾಗುವುದು. ಶುಕ್ಲಪಕ್ಷದ ಪಾಡ್ಯವು ಚಾಂದ್ರಮಾನದಲ್ಲಿ ಮಾಸಾರಂಭ ದಿನವಾಗುವುದು. ಈ ಶುಕ್ಲಪಕ್ಷದ ಪಾಡ್ಯದ ದಿನವೇ ಸಂಕ್ರಮಣವಾಗಿ, ಎರಡು ವಿಧದಿಂದಲೂ ಮಾಸಾರಂಭವಾದ ವರ್ಷಕ್ಕೆ ಸಂವತ್ಸರವೆಂದು ಹೆಸರು. ಆ ಸಂವತ್ಸರದಲ್ಲಿ ಸೌರಮಾನ ರೀತಿಯಿಂದ ಆರುದಿನಗಳು ಹೆಚ್ಚಿ, ಚಾಂದ್ರಮಾನರೀತಿಯಿಂದ ಆರುದಿನಗಳು ತಗ್ಗುವುವು. ಹೀಗೆ ಐದುವರ್ಷಗಳು ಕಳೆದರೆ ನಡುವೆ ಎರಡು ಅಧಿಕಮಾಸಗಳು ಬಂದು, ಆ ದಿನಸಂಖ್ಯೆಯನ್ನು ಸರಿಮಾಡುವುವು. ಈ ಐದುಸಂವತ್ಸರಗಳೇ ಕ್ರಮವಾಗಿ, ಅವಾಂತರಭೇದದಿಂದ, ಸಂವತ್ಸರ ಪರಿವತ್ಸರಾದಿ ನಾಮಗಳಿಂದ ಕರೆಯಲ್ಪಡುವುವು. ತಿರುಗಿ ಆರನೆಯ ವರ್ಷವು ಕ್ರಮವಾಗಿ ಒಂದೇ ದಿನದಲ್ಲಿ ತೊಡಗುವುದರಿಂದ ಆದು ಸಂವತ್ಸರವೆನಿಸುವುದು.

ವನ್ನು ಪ್ರದಕ್ಷಿಣವಾಗಿ ಸುತ್ತುತ್ತಿರುವುವು. ಈ ನಕ್ಷತ್ರಗಳಿಗೆ ಕಾಲಚಕ್ರದೊಡನೆ ಸುತ್ತುತ್ತಿರುವುದೊಂದುಹೊರತು ಸೂರ್ಯಾದಿಗಳಂತೆ ಬೇರೆ ವಿಧವಾಗಿ ಗತಿಯಿಲ್ಲವು. ಈ ನಕ್ಷತ್ರಮಂಡಲದಿಂದ ಎರಡು ಲಕ್ಷಯೋಜನಗಳಿಗೆಮೇಲೆ ಶುಕ್ರನಿರುವನು. ಇವನು ಸೂರ್ಯನಿಗೆ ಹಿಂದೆಯೂ, ಮುಂದೆಯೂ ಸಮವಾಗಿಯೂ ಸಂಚರಿಸುವನು. ಇವನು ಸೂರ್ಯನೊಡನೆ ಸಂಚರಿಸುವ ಕಾಲದಲ್ಲಿ, ಅವನಂತೆಯೇ ಮಂದಗತಿ, ಶೀಘ್ರಗತಿ, ಸಮಗತಿಗಳೆಂಬ ಮೂರು ಬಗೆಯ ಗತಿಗಳಿಂದ ಹೋಗುವನು. ಇವನು ಯಾವಾಗಲೂ ಲೋಕಕ್ಕೆ ಅನುಕೂಲನಾಗಿಯೇ ಇರುವನು. ಈ ಶುಕ್ರನು ಆಯಾ ನಕ್ಷತ್ರಗಳನ್ನು ದಾಟಿ ಹೋಗುವಕ್ರಮದಿಂದಲೇ, ಪ್ರಜೆಗಳು ಪ್ರಾಯಕವಾಗಿ ಮಳೆಯನ್ನು ಊಹಿಸಿ ತಿಳಿಯುವರು. ಈ ಶುಕ್ರನು ಮಳೆಗೆ ಪ್ರತಿಬಂಧಕಗಳಾದ ಗ್ರಹಗಳನ್ನು ತಡೆದು, ಮಳೆಯುಂಟಾಗುವಂತೆ ಮಾಡುವ ಸ್ವಭಾವವುಳ್ಳವನು. ರಾಜೇಂದ್ರಾ! ಈ ಶುಕ್ರಗತಿಯನ್ನು ಹೇಳಿದುದರಿಂದ ಬುಧ ಗತಿಯನ್ನೂ ಹೇಳಿದಂತೆಯೇ ತಿಳಿ! ಈ ಬುಧನು ಶುಕ್ರನಿಂದಾಚೆಗೆ ಎರಡುಲಕ್ಷ ಯೋಜನಗಳಮೇಲೆ ಕಾಣುತ್ತಿರುವನು. ಇವನು ಪ್ರಾಯಕವಾಗಿ ಲೋಕಕ್ಕೆ ಅಶ್ರೇಯಸ್ಸನ್ನೇ ಸೂಚಿಸತಕ್ಕವನು. ಈತನು ಸೂರ್ಯನನ್ನಗಲಿ ಬೇರೆಯಂಗಿ ಹೋದಾಗ ಅತಿವೃಷ್ಟಿ, ಅನಾವೃಷ್ಟಿ, ಬಿರುಗಾಳಿ, ಮುಂತಾದ ಅನರ್ಥಗಳಿಗೆ ಕಾರಣವಾಗುವು ದೆಂದು ಹಿರಿಯರು ಹೇಳಿರುವರು. ಈ ಬುಧಗ್ರಹದಿಂದ ಎರಡುಲಕ್ಷಯೋಜನಗಳಿಗೆ ಮೇಲೆ ಅಂಗಾರಕಗ್ರಹವು ಕಾಣುವುದು. ಈ ಅಂಗಾರಕನು ಮೂರುಮೂರುಪಕ್ಷ ಗಳಿಗೆ ಒಂದೊಂದು ರಾಶಿಯನ್ನು ದಾಟಿ ಹೋಗುತ್ತಿರುವನು. ಇದುಸಹಜವಾಗಿ ಅಶುಭಗ್ರಹವಾಗಿದ್ದರೂ, ವಕ್ರಗತಿಯಿಲ್ಲದಿದ್ದಾಗ ಹಾನಿಯನ್ನುಂಟುಮಾಡುವುದು. ಅಂಗಾರಕಗ್ರಹದಿಂದ ಎರಡುಲಕ್ಷಯೋಜನಗಳಿಗೆಮೇಲೆ ಬೃಹಸ್ಪತಿಯಿರುವನು. ಇವನು ಒಂದೊಂದು ರಾಶಿಯಲ್ಲಿ ಒಂದೊಂದು ಸಂವತ್ಸರಕಾಲವಿರುವನು. ಇವನು ವಕ್ರಚಾರಿಯಲ್ಲದ ಕಾಲದಲ್ಲಿ ಬ್ರಾಹ್ಮಣರಿಗೆ ಕ್ಷೇಮವನ್ನುಂಟುಮಾಡುವನು. ಈ ಗ್ರಹದಿಂದ ಎರಡುಲಕ್ಷಯೋಜನಗಳಿಗೆ ಮೇಲೆ ಶನೈಶ್ಚರನು ಕಾಣುವನು. ಈತನು ಒಂದೊಂದು ರಾಶಿಯಲ್ಲಿ ಮೂವತ್ತು ತಿಂಗಳು ನಿಲ್ಲುತ್ತ, ಕ್ರಮವಾಗಿ ಎಲ್ಲಾ ರಾಶಿ ಗಳನ್ನೂ ಸುತ್ತಿಬರುವನು. ಇವನು ಪ್ರಾಣಿಗಳ ಜನ್ಮರಾಶಿಯಲ್ಲಿಯಾಗಲೀ ಅದರ ಹಿಂದುಮುಂದಿನರಾಶಿಗಳಲ್ಲಿಯಾಗಲೀ ಸಂಚರಿಸುವಾಗ, ಅವರಿಗೆ ಹಾನಿಯನ್ನುಂಟು ಮಾಡುವನು. ಈ ಏಳುವರೆವರುಷಗಳಲ್ಲಿ ಶನಿಪೀಡೆಯು ಅವರನ್ನು ಬಹಳವಾಗಿ ಬಾಧಿಸುತ್ತಿರುವುದು. ಈಶನಿಮಂಡಲಕ್ಕೆ ಮೇಲೆ ಹನ್ನೊಂದುಲಕ್ಷಯೋಜನಗಳ ದೂರದಲ್ಲಿ ಸಪ್ತರ್ಷಿಮಂಡಲವುಂಟು. ಈಸಪ್ತರ್ಷಿಗಳೂ ಲೋಕಕ್ಷೇಮವನ್ನುಂಟು

ಮಾಡುವುದಕ್ಕಾಗಿ, ವಿಷ್ಣುಸ್ಥಾನವೆಂದು ಕರೆಯಲ್ಪಡುವ ಧ್ರುವಮಂಡಲವನ್ನು ಪ್ರದಕ್ಷಿಣವಾಗಿ ಸುತ್ತುತ್ತಿರುವರು. ಇಲ್ಲಿಗೆ ಇಪ್ಪತ್ತೆರಡನೆಯ ಅಧ್ಯಾಯವು.

---

## ಧ್ರುವಮಂಡಲದ ಸ್ವರೂಪವು. ಶಿಂಶುಮಾರಚಕ್ರದ ವಿವರಣವು.

ರಾಜೇಂದ್ರಾ ಕೇಳು. "ಆ ಸಪ್ತರ್ಷಿಮಂಡಲಕ್ಕೆ ಮೇಲೆ, ಹದಿನೈದು ಲಕ್ಷ ಯೋಜನಗಳ ದೂರದಲ್ಲಿ ಧ್ರುವಮಂಡಲವುಂಟು. ಅದನ್ನೇ ಶ್ರೀಮಹಾವಿಷ್ಣುವಿನ ಸ್ಥಾನವೆಂದು ಹೇಳುವರು. ಉತ್ತಾನಪಾದನ ಪುತ್ರನಾದ ಮಹಾತ್ಮನಾದ ಧ್ರುವನು ಆ ಸ್ಥಾನದಲ್ಲಿರುವನು ಇಂದ್ರಾಗ್ನಿಗಳೂ, ಕಶ್ಯಪ ಪ್ರಜಾಪತಿಯೂ, ಯಮನೂ ಆ ಧ್ರುವನನ್ನು ಗೌರವಪೂರ್ವಕವಾಗಿ ಪ್ರದಕ್ಷಿಣಮಾಡುತ್ತಿರುವರು. ಈಗಲೂ ಆ ಧ್ರುವನು ಕಲ್ಪಾಂತದವರೆಗೆ ಜೀವಿಸುವ ಪ್ರಜೆಗಳೆಲ್ಲರಿಗೂ ಆಶ್ರಯನಾಗಿರುವನು ಇವನ ಚರಿತ್ರೆಗಳೆಲ್ಲವನ್ನೂ ನಾನು ಮೊದಲೇ ತಿಳಿಸಿರುವೆನಷ್ಟೆ? ಯಾರಿಗೂ ತಿಳಿಯದ ವೇಗದಿಂದ, ಯಾವಾಗಲೂ ಎಚ್ಚರತಪ್ಪದೆ ಓಡುತ್ತಿರುವ ಕಾಲಚಕ್ರವೆಂಬುದು ಭಗವಂತನ ಸ್ವರೂಪವಲ್ಲದೆ ಬೇರೆಯಲ್ಲ. ಈ ಕಾಲಚಕ್ರದಿಂದ ಸುತ್ತಿಸಲ್ಪಡುವ ಅಶ್ವಿನಿ ಮೊದಲಾದ ತಾರೆಗಳಿಗೂ, ಸೂರ್ಯಾದಿಗ್ರಹಗಳಿಗೂ, ಇತರ ನಕ್ಷತ್ರಗಳಿಗೂ, ಈ ಧ್ರುವನು ಮೇಟಿಯಮರದಂತೆ ಆಧಾರವಾಗಿ ನಿಲ್ಲಿಸಲ್ಪಟ್ಟು, ಈಶ್ವರಾಜ್ಞೆಯಿಂದ ಅನವರತವೂ ಬೆಳಗುತ್ತಿರುವನು. ಕಳಗಳಲ್ಲಿ ಧಾನ್ಯದ ತೆನೆಗಳನ್ನು ತುಳಿಸುವುದಕ್ಕಾಗಿ, ಮಧ್ಯದ ಕಂಬಕ್ಕೆ ಮುಪ್ಪುರಿಯ ಹಗ್ಗಗಳಿಂದ ಬಿಗಿದ ಎತ್ತುಗಳು ತಮ್ಮ ಹದ್ದನ್ನು ಬಿಟ್ಟು ಕದಲದೆ, ವಲಯಾಕಾರವಾಗಿ ಸುತ್ತುತ್ತಿರುವುವಲ್ಲವೇ? ಅದರಂತೆಯೇ ಗ್ರಹನಕ್ಷತ್ರಾದಿಗಳೆಲ್ಲವೂ ಕಾಲಚಕ್ರದ ಒಳಗೂ ಹೊರಗೂ ವಾಯುಪಾಶದಿಂದ ಕಟ್ಟಲ್ಪಟ್ಟು, ಈ ಧ್ರುವನನ್ನೇ ಆಧಾರ ಸ್ತಂಭವಾಗಿಟ್ಟುಕೊಂಡು ಕಲ್ಪಾಂತದವರೆಗೆ ಸುತ್ತುತ್ತಿರುವುವು. ಮತ್ತು ಮೇಘಗಳೂ, ಹದ್ದು, ಗಿಡುಗ, ಮೊದಲಾದ ಪಕ್ಷಿಗಳೂ, ವಾಯುವೇಗಕ್ಕೆ ವಶವಾಗಿ ತಮ್ಮ ಕರ್ಮಬಲದಿಂದ ಆಕಾಶದಲ್ಲಿ ಸಂಚರಿಸುವಂತೆ, ಈ ನಕ್ಷತ್ರಗಳೆಂಬ ಜೀವಗಳೂಕೂಡ ಕರ್ಮಮೂಲಕವಾಗಿ ನಕ್ಷತ್ರಶರೀರವೆಂಬ ಈ ಪ್ರಕೃತಿಯ ಸಂಬಂಧವನ್ನು ಪಡೆದುಕೊಂಡಿ, ಆ ಕರ್ಮಬಲದಿಂದಲೇ ಕೆಳಗೆ ಬೀಳದಂತೆ ಆಕಾಶಗಾಮಿಗಳಾಗಿ ಅಲ್ಲಿಯೇ, ಸಂಚರಿಸುತ್ತಿರುವುವು. ಹೀಗೆ ಗ್ರಹನಕ್ಷತ್ರಗಳಿಗೆಲ್ಲಾ ಆಧಾರವಾದ

ಶಿಂಶುಮಾರವೆಂಬ ಕಾಲಚಕ್ರವನ್ನು ಸಮಸ್ತಲೋಕಧಾರಕನಾದ ವಾಸುದೇವನ ಸ್ವರೂಪದಿಂದಲೇ ಧ್ಯಾನಿಸಬೇಕೆಂದು ನೇದಗಳು ನಿರೂಪಿಸುವುವು. ಈ ಶಿಂಶುಮಾರ ಚಕ್ರವು ಭಗವತ್ಸ್ವರೂಪದಿಂದ ಸಮಸ್ತಜ್ಯೋತಿರ್ಮಂಡಲಗಳಿಗೂ ಆಧಾರವೆಂಬು ದನ್ನು, ಅನೇಕಯೋಗಿಗಳು ಯೋಗಧಾರಣೆಯಿಂದ ತಿಳಿದುಕೊಳ್ಳುತ್ತಿರುವರು. ಶಿಂಶುಮಾರಚಕ್ರರೂಪಿಯಾದ ಈ ಭಗವಂತನು, ಬಲಮುರಿಶಂಖದಂತೆ ತನ್ನ ದೇಹವನ್ನು ಬಲಮುಖವಾಗಿ ಸುಳಿಸುತ್ತಿ, ತಲೆಯನ್ನು ಕೆಳಗಿಟ್ಟು, ಬಾಲವನ್ನು ಮೇಲೆ ಮಾಡಿ ಮಲಗಿದ ಸರ್ಪದಂತಿರುವನು. ಅವನ ಬಾಲದತುದಿಯಲ್ಲಿ ಧ್ರುವನೂ, ಅದಕ್ಕೆ ಸ್ವಲ್ಪ ಕೆಳಭಾಗದಲ್ಲಿ ಕಶ್ಯಪ ಪ್ರಜಾಪತಿಯೂ, ಅವನಿಂದ ಕೆಳಕೆಳಗೆ ಕ್ರಮ ವಾಗಿ, ಅಗ್ನಿ, ಇಂದ್ರ, ಧರ್ಮದೇವತೆಗಳೂ, ಬಾಲದ ಬುಡದಲ್ಲಿ ಧಾತೃವಿಧಾತೃ ಗಳೂ, ಕಟಿ ಭಾಗದಲ್ಲಿ (ಸೊಂಟ) ಸಪ್ತರ್ಷಿಗಳೂ ಇರುವುದಾಗಿ ಯೋಗಿಗಳು ತಮ್ಮ ಯೋಗದೃಷ್ಟಿಯಿಂದ ನಿರ್ಧರಿಸಿರುವರು. ಹೀಗೆ ದೇಹವನ್ನು ಸುತ್ತಿ ಮಲ ಗಿದ ಸರ್ಪದೇಹದಂತಿರುವ ಆ ಶಿಂಶುಮಾರಚಕ್ರದ ಬಲಭಾಗದಲ್ಲಿ ಉತ್ತರಾಯಣ ನಕ್ಷತ್ರಗಳೆನಿಸಿದ ಹದಿನಾಲ್ಕು ನಕ್ಷತ್ರಗಳಿರುವುವು. (ಅಭಿಜಿನ್ನಕ್ಷತ್ರವೂ ಸೇರಿ ಶ್ರವಣ ಮೊದಲಾಗಿ ಪುನರ್ವಸುವರೆಗಿನ ಹದಿನಾಲ್ಕು ನಕ್ಷತ್ರಗಳು ಉತ್ತರಾಯಣ ನಕ್ಷತ್ರಗಳೆನಿಸುವುವು.) ಆ ಚಕ್ರದ ಎಡಪಕ್ಕದಲ್ಲಿ, ಪುಷ್ಯ ಮೊದಲಾಗಿ ಉತ್ತ ರಾಷಾಢದವರೆಗೆ ಹದಿನಾಲ್ಕು ನಕ್ಷತ್ರಗಳುಂಟು. ಇವು ದಕ್ಷಿಣಾಯನ ನಕ್ಷತ್ರ ಗಳು. ಇದರಿಂದ ಉಭಯಪಾರ್ಶ್ವಗಳಲ್ಲಿಯೂ ಸಮವಾಗಿ ದ್ವಂದ್ವಾವಯವ ಗಳೇರ್ಪಡುವುವು. ಆ ಶಿಂಶುಮಾರದ ಬೆನ್ನಿನಮೇಲೆ ಅಜವೀಥಿಯೆಂಬ ಮಾರ್ಗ ವುಂಟು. ಅಜವೀಥಿಯೆಂದರೆ, ಸೂರ್ಯನು ಶೀಘ್ರಗತಿಯಿಂದ ಹೋಗುವ ದಕ್ಷಿಣಾ ಯನವೆಂಬ ಮಾರ್ಗವಿಶೇಷವು. ಉದರಭಾಗದಲ್ಲಿ ಆಕಾಶಗಂಗೆಯಿರುವುದು. ಆದರ ಉಭಯಪಾರ್ಶ್ವಗಳಲ್ಲಿ ದ್ವಂದ್ವಾವಯವಗಳಂತೆ ಏರ್ಪಟ್ಟಿರುವ ಇಪ್ಪತ್ತೈದು ನಕ್ಷತ್ರಗಳಲ್ಲಿ, ಪುನರ್ವಸು ಪುಷ್ಯಗಳೆರಡೂ, ಕ್ರಮವಾಗಿ ಬಲಭಾಗದ ಮತ್ತು ಎಡಭಾಗದ ನಿತಂಬಸ್ಥಾನಗಳಲ್ಲಿರುವುವು. ಹಾಗೆಯೇ ಆರ್ದ್ರ ಮತ್ತು ಆಶ್ಲೇಷ ಯೆಂಬಿವು, ಬಲದ ಮತ್ತು ಎಡದ ಪಾದಗಳಲ್ಲಿಯೂ, ಅಭಿಜಿತ್ತು ಉತ್ತರಾಷಾಢ ಗಳೆಂಬಿವೆರಡೂ ನಾಸಿಕೆಗಳಲ್ಲಿಯೂ, ಶ್ರವಣಪೂರ್ವಾಷಾಢಗಳು ಕಣ್ಣುಗಳ ಸ್ಥಾನ ದಲ್ಲಿಯೂ, ಧನಿಷ್ಠಾಮೂಲಗಳು ಕಿವಿಗಳ ಸ್ಥಾನದಲ್ಲಿಯೂ, ಮಖ ಮೊದಲಾದ ದಕ್ಷಿಣಾಯನನಕ್ಷತ್ರಗಳೆಂಟೂ ಎಡಭಾಗದ ಮುಖಗಳಲ್ಲಿಯೂ, ಮೃಗಶೀರ್ಷವೇ ಮೊದಲಾದ ಉತ್ತರಾಯಣನಕ್ಷತ್ರಗಳೆಂಟೂ ಬಲಭಾಗದ ಮುಖಗಳಲ್ಲಿಯೂ, ಶತಭಿಷಕ್ಕು, ಜ್ಯೇಷ್ಠೆ, ಈ ನಕ್ಷತ್ರಗಳೆರಡೂ ಕ್ರಮವಾಗಿ ದಕ್ಷಿಣವಾಮಭುಜ

ಗಳಲ್ಲಿಯೂ ಇರುವುದಾಗಿ ಯೋಗಿಗಳು ಅನುಸಂಧಾನಮಾಡುವರು. ಮತ್ತು ಮೇಲಿನ ಮತ್ತು ಕೆಳಗಿನ ದವಡೆಗಳಲ್ಲಿ ಕ್ರಮವಾಗಿ ಅಗಸ್ತ್ಯಯಮರೂ, ಮುಖದಲ್ಲಿ ಅಂಗಾರಕನೂ, ಉಪಸ್ಥದಲ್ಲಿ ಶನಿಯೂ, ಹಿರಳಿನಲ್ಲಿ (ಕಂಠದ ಹಿಂಭಾಗ) ಬೃಹಸ್ಪತಿಯೂ, ಎದೆಯಲ್ಲಿ ಸೂರ್ಯನೂ, ಹೃದಯದಲ್ಲಿ ನಾರಾಯಣನೂ, ಮನಸ್ಸಿನಲ್ಲಿ ಚಂದ್ರನೂ, ಹೊಕ್ಕುಳಲ್ಲಿ ಶುಕ್ರನೂ, ಸ್ತನಗಳಲ್ಲಿ ಅಶ್ವಿನೀದೇವತೆಗಳಿಬ್ಬರೂ, ಪ್ರಾಣಾಪಾನಗಳಲ್ಲಿ ಬುಧನೂ, ಕಂಠದಲ್ಲಿ ರಾಹುವೂ, ಸರ್ವಾಂಗಗಳಲ್ಲಿಯೂ ಕೇತುವೆಂಬ ನಕ್ಷತ್ರಸಮೂಹಗಳೂ, ಇತರನಕ್ಷತ್ರಗಳೆಲ್ಲವೂ ರೋಮಕೂಪಗಳಲ್ಲಿಯೂ ಇರುವಂತೆ ಧ್ಯಾನಿಸುವರು. ರಾಜಾ! ಇದೇ ಸರ್ವದೇವತಾಮಯವಾದ ಶಿಂಶುಮಾರ ಚಕ್ರವೆಂಬ ಭಗವಂತನ ಸ್ವರೂಪವು. ಈ ಸ್ವರೂಪವನ್ನು ಪ್ರತಿದಿನವೂ ತ್ರಿಸಂಧ್ಯಾಕಾಲಗಳಲ್ಲಿ, ಸಾವಧಾನಚಿತ್ತರಾಗಿ ಮೌನದಿಂದ ಧ್ಯಾನವಿಷಯವಾಗಿ ಮಾಡಿಕೊಂಡು ನೋಡುತ್ತ, ಈ ಕೆಳಗಿನ ಮಂತ್ರಗಳಿಂದ ಸ್ತುತಿಸಬೇಕು. "ಜ್ಯೋತಿರ್ಮಂಡಲ ಸ್ವರೂಪನಾಗಿಯೂ, ಕಾಲಕ್ಕೆ ಆಧಾರಭೂತನಾಗಿಯೂ, ಬ್ರಹ್ಮಾದಿದೇವತೆಗಳಿಗೂ ಪ್ರಭುವಾಗಿಯೂ, ಇರುವ ಶಿಂಶುಮಾರಸ್ವರೂಪನಾದ ಪರಮಪುರುಷನಿಗೆ ನಮಸ್ಕಾರವು" ಎಂಬುದೇ ಆ ಮಂತ್ರಾರ್ಥವು. ರಾಜೇಂದ್ರಾ! ಸಕಲಗ್ರಹ ನಕ್ಷತ್ರತಾರಾಮಯವಾಗಿಯೂ, ಪಾಪನಿವಾರಕವಾಗಿಯೂ, ಸಮಸ್ತ ದೇವತೆಗಳಿಗೂ ಪ್ರಧಾನವಾಗಿಯೂ, ಭಗವಂತನ ಸ್ವರೂಪನಾಗಿಯೂ ಇರುವ ಈ ಶಿಂಶುಮಾರವೆಂಬ ಕಾಲಚಕ್ರವನ್ನು ತ್ರಿಸಂಧ್ಯಾಕಾಲಗಳಲ್ಲಿಯೂ ಸಮಸ್ಮರಿಸಿದರೂ, ಸ್ಮರಿಸಿದರೂ, ಮಂತ್ರಜಪದಿಂದ ಸ್ತುತಿಸಿದರೂ ಹಿಂದುಮುಂದಿನ ಪಾಪಗಳೆಲ್ಲವೂ ನಶಿಸುವುವು. ಇದು ಇಪ್ಪತ್ತಮೂರನೆಯ ಅಧ್ಯಾಯವು.

---

## ಸೂರ್ಯನ ಕೆಳಗಿರುವ ರಾಹು ಮೊದಲಾದ ಗ್ರಹಗಳ ಗತಿಯನ್ನೂ, ಭೂಮಿಯ ಕೆಳಗಿನ ಅತಲಾದಿ ಲೋಕಗಳ ಸ್ಥಿತಿಯನ್ನೂ ವಿವರಿಸಿದುದು.

ರಾಜಾ! ಸೂರ್ಯನಕೆಳಗೆ, ಹತ್ತು ಸಾವಿರಯೋಜನಗಳ ದೂರದಲ್ಲಿ ಸಿಂಹಿಕೆಯ ಮಗನಾದ ರಾಹುವು ನಕ್ಷತ್ರರೂಪದಿಂದಿರುವನೆಂದು ಕೆಲವು ತತ್ವಜ್ಞರು ನಿರ್ಣಯಿಸಿರುವರು. ಇವನು ಪಾಪಬುದ್ಧಿಯುಳ್ಳ ಅಸುರರಲ್ಲಿಯೂ ಪರಮನೀಚನೆನಿಸಿಕೊಂಡವನು. ಹೀಗೆ ಅಯೋಗ್ಯನಾಗಿದ್ದರೂ ಇವನು, ಭಗವಂತನ ಅನುಗ್ರಹದಿಂದ ದೇವತ್ವವನ್ನೂ. ನವಗ್ರಹಗಳಲ್ಲಿ ಒಂದು ಸ್ಥಾನವನ್ನೂ ಪಡೆದನು. ಇವನು ಹುಟ್ಟಿ ಬೆಳೆದುದು ಮೊದಲಾದ ಚರಿತ್ರಗಳನ್ನೆಲ್ಲಾ ಮುಂದೆ ವಿವರವಾಗಿ ತಿಳಿಸುವೆನು. ಈಗ ನಮಗೆ ಕಾಣುತ್ತಿರುವ ಸೂರ್ಯಮಂಡಲದ ಅಡಿನೆತ್ತಿಯು ಹತ್ತುಸಾವಿರಯೋಜನಗಳ ವಿಸ್ತಾರವುಳ್ಳದೆಂದು ಹಿರಿಯರು ನಿರ್ಣಯಿಸಿರುವರು. ಹಾಗೆಯೇ ಚಂದ್ರಮಂಡಲವು ಹನ್ನೆರಡುಸಾವಿರಯೋಜನಗಳ ವಿಸ್ತಾರವುಳ್ಳದೆಂದೂ, ರಾಹುಮಂಡಲವು ಹದಿಮೂರುಸಾವಿರಯೋಜನಗಳ ವಿಸ್ತಾರವುಳ್ಳದೆಂದೂ ಹೇಳುವರು. ಹಿಂದೆ ಸಮುದ್ರಮಥನವಾದಮೇಲೆ ಭಗವಂತನು ಅಮೃತವನ್ನು ಹಂಚಿಕೊಡುವಾಗ, ಈ ರಾಹುವು ಚಂದ್ರಸೂರ್ಯರನಡುವೆ ಅವಿತುಕೊಂಡು, ತಾನೂ ಅಮೃತವನ್ನು ಕುಡಿಯುವುದಕ್ಕೆ ಯತ್ನಿಸಿದನು. ಆಗ ಚಂದ್ರಸೂರ್ಯರು ಈ ರಹಸ್ಯವನ್ನು ಹೊರಪಡಿಸಿದರು. ಇದಕ್ಕಾಗಿ ರಾಹುವು ಚಂದ್ರಸೂರ್ಯರಮೇಲೆ ವೈರವನ್ನಿಟ್ಟು, ಒಮ್ಮೊಮ್ಮೆ ಪರ್ವಕಾಲದಲ್ಲಿ ಸೂರ್ಯಚಂದ್ರರಿಗುಂಟಾಗಬಹುದಾದ ಅಪಾಯವನ್ನು ತಪ್ಪಿಸುವುದಕ್ಕಾಗಿ ಭಗವಂತನು, ತನಗೆ ಅತ್ಯಂತಪ್ರಿಯವಾಗಿಯೂ, ದುಸ್ಸಹವಾದ ತೇಜಸ್ಸುಳ್ಳುದಾಗಿಯೂ ಇರುವ ಸುದರ್ಶನಚಕ್ರವನ್ನು ಪ್ರಯೋಗಿಸಿ, ಈ ರಾಹುವನ್ನು ತಡೆಯುವನು. ಈ ಚಕ್ರಜ್ವಾಲೆಯನ್ನು ಸಹಿಸಲಾರದೆ ರಾಹುವು ಮುಹೂರ್ತಕಾಲದವರೆಗೆ, ಹಾಗೆಯೇ ಅದರಮುಂದೆ ಸ್ತಬ್ಧನಾಗಿ ನಿಂತಿದ್ದು, ಆಮೇಲೆ ಭಯದಿಂದ ಹಿಂಜರಿದು ಓಡಿಹೋಗುವನು. ಇವನು ಭಯಾತುರನಾಗಿ ಓಡುವಾಗ, ಅವನ ಬಿಂಬದ ನೆರಳು ಸೂರ್ಯಚಂದ್ರಮಂಡಲಗಳಮೇಲೆ ಬಿದ್ದು ಅವುಗಳನ್ನು ಮರೆಸುವುದು. ಅವನ ನೆಟ್ಟಗೆ ಓಡಿಹೋಗುವಾದ ಬಿಂಬವು ಪೂರ್ಣವಾಗಿ ಮರೆಸಿಹೋಗುವುದುಂಟು. ಇವನು ವಕ್ರವಾಗಿ ಓಡುವಾಗ ಅದರಲ್ಲಿ ಸ್ವಲ್ಪಭಾಗವು ಕಾಣುವುದೂ ಉಂಟು. ಅದನ್ನೇ ಜನರು ಗ್ರಹಣವೆಂದು ಹೇಳುವರು. ಈ ರಾಹುಮಂಡಲದ ಕೆಳಗೆ ಹತ್ತುಸಾವಿರಯೋಜನಗಳ ದೂರದಲ್ಲಿ ಸಿದ್ಧ ಚಾರಣವಿದ್ಯಾಧರರ ನಿವಾಸ ಸ್ಥಾನಗಳುಂಟು. ಇವುಗಳ ಕೆಳಗೆ ಭೂತಪ್ರೇತಪಿಶಾಚಗಳಿಗೂ, ಯಕ್ಷರಿಗೂ

ವಿಹಾರಸ್ಥಾನವಾದ ಅಂತರಿಕ್ಷಲೋಕವಿರುವುದು. ಎಲ್ಲಿಯವರೆಗೆ ಗಾಳಿಯು ವೇಗವಾಗಿ ಬೀಸುತ್ತಿರುವುದೋ ಎಲ್ಲಿಯವರೆಗೆ ಮೇಘಗಳು ಕಣ್ಣಿಗೆ ಕಾಣುವುವೋ, ಅಲ್ಲಿಯವರೆಗೆ ಅಂತರಿಕ್ಷಲೋಕವೆನಿಸುವುದು. ಈ ಅಂತರಿಕ್ಷದಿಂದ ನೂರುಯೋಜನಗಳ ಕೆಳಗೆ ಈ ಭೂಮಂಡಲವಿರುವುದು. ಹಂಸಗಳು, ಭಾಸಪಕ್ಷಿಗಳು, ಹದ್ದುಗಳು, ಗರುಡಪಕ್ಷಿ ಮೊದಲಾದ ಪ್ರಬಲಪಕ್ಷಿಗಳು ತಮ್ಮ ಶಕ್ತಿಯಿಂದ ಎಷ್ಟು ಎತ್ತರಕ್ಕೆ ಹಾರಬಲ್ಲುವೋ, ಅಲ್ಲಿಯವರೆಗೂ ಭೂಲೋಕವೆಂದೇ ಕರೆಯಲ್ಪಡುವುದು. ಈ ಭೂಮಂಡಲದ ಲಕ್ಷಣಪರಿಮಾಣಾದಿಗಳನ್ನು ಆದಕ್ಕೆ ಮೊದಲೇ ಹೇಳಿರುವೆನಷ್ಟೆ ? ಈ ಭೂಮಂಡಲದ ಕೆಳಗೆ ಭೂಮಿಯಲ್ಲಿ ಏಳುಬಿಲಗಳುಂಟು. ಈ ಒಂದೊಂದು ಬಿಲವೂ ಹತ್ತುಸಾವಿರಯೋಜನಗಳ ವಿಸ್ತಾರವುಳ್ಳುದಾಗಿ ಅಷ್ಟೇ ಎತ್ತರದಿಂದಿರುವುದು. ಇವುಗಳೊಳಗಿನ ಭೋಗಾನುಭವದಲ್ಲಿಯೂ ಪರಸ್ಪರ ತಾರತಮ್ಯವುಂಟು. ಕ್ರಮವಾಗಿ ಮೇಲಿನಿಂದ ಕೆಳಕೆಳಗೆ ಕಾಣುವ ಈಲೋಕಗಳಿಗೆ, ಅತಲ ವಿತಲ, ಸುತಲ, ತಲಾತಲ, ಮಹಾತಲ ಪಾತಾಳಗಳೆಂದು ಹೆಸರು. ಇವುಗಳನ್ನು ಬಿಲಸ್ವರ್ಗಗಳೆಂದು ಕರೆಯುವರು. ಇಲ್ಲಿ ಸ್ವರ್ಗಕ್ಕಿಂತಲೂ ಮೇಲಾದ ಕಾಮಭೋಗಗಳಿಂದಲೂ, ಐಶ್ವರ್ಯಗಳಿಂದಲೂ, ಆನಂದದಿಂದಲೂ, ಸಂಪತ್ಸಮೃದ್ಧಿಯಿಂದಲೂ, ಪರಿವಾರಸಮೃದ್ಧಿಯಿಂದಲೂ ತುಂಬಿದ ನಿವಾಸಸ್ಥಾನಗಳೂ, ಉದ್ಯಾನವನಗಳೂ, ಕ್ರೀಡಾಗೃಹಗಳೂ, ಸಂಭೋಗಸ್ಥಾನಗಳೂ ಕಂಗೊಳಿಸುತ್ತಿರುವುವು. ದೈತ್ಯರೂ, ದಾನವರೂ, ತಮ್ಮಲ್ಲಿ ಸಮಾನಪ್ರೀತಿಯುಳ್ಳ ಹೆಂಡಿರುಮಕ್ಕಳೊಡನೆಯೂ, ಬಂಧುಮಿತ್ರಪರಿವಾರಗಳೊಡನೆಯೂ ಸೇರಿ, ಕುಟುಂಬ ಧರ್ಮದಲ್ಲಿ ನಿತ್ಯಸಂತೋಷಿಗಳಾಗಿರುವರು. ಇವರು ಕುಟುಂಬಿಗಳಾಗಿದ್ದರೂ, ಭಗವಂತನಲ್ಲಿ ಭಕ್ತಿಯನ್ನು ಬಿಡದೆ, ಮಾಯಾಬಲದಿಂದ ವಿನೋದಿಸುತ್ತಿರುವನು. ಈ ಅತಲಾದಿಲೋಕಗಳಲ್ಲಿ ಬಹಳ ಮಾಯಾವಿಯಾದ ಮಯನೆಂಬ ಅಸುರಶಿಲ್ಪಿಯಿಂದ ನಿರ್ಮಿತಗಳಾದ ಅನೇಕ ಗಳುಂಟು. ಈ ಪುರಗಳು ನೋಡುವವರಿಗೆ ಅತ್ಯಾಶ್ಚರ್ಯಕರಗಳಾಗಿ, ಖಚಿತಗಳಾದ ಅರಮನೆಗಳಿಂದಲೂ ಕೋಟೆಗಳಿಂದಲೂ, ಗೋಪುರದೇ ಳಿಂದಲೂ, ಸಭಾಸ್ಥಾನಗಳಿಂದಲೂ, ಆಂಗಳಗಳಿಂದಲೂ, ಇನ್ನೂ ಬಗೆ ವೇಶಗಳಿಂದಲೂ, ನೇತ್ರಾನಂದವನ್ನುಂಟುಮಾಡುವುವು. ಮತ್ತು ಪತಿಗಳ ಅರಮನೆಗಳಲ್ಲಿ, ಗಿಳಿ ಕೋಗಿಲೆ, ಪಾರಿವಾಳ, ಮುಂತಾದ ಪಕ್ಷಿ ಮಧುರಧ್ವನಿಯು, ಯಾವಾಗಲೂ ಕರ್ಣಾನಂದಕರವಾಗಿ ಕೇಳಿಸು ಅಲ್ಲಿನ ಉದ್ಯಾನಗಳು, ಚಿಗುರು, ಹಣ್ಣು, ಕಾಯಿ ಮುಂತಾದುವು ಬಗ್ಗಿದ ನಾನಾಜಾತಿಯ ವೃಕ್ಷಗಳಿಂದ ತುಂಬಿ, ಸರ್ವೇಂದ್ರಿಯಗಳಿಗು

ವನ್ನು ಕೊಡುತ್ತಿರುವುದು. ಈ ಉದ್ಯಾನವನಗಳ ನಡುನಡುವೆ, ರಾಜಸ್ತ್ರೀಯರ ಸಂಚಾರದಿಂದಲೂ, ಹಂಸಸಾರಸಗಳೇ ಮೊದಲಾದ ಜಲಪಕ್ಷಿಗಳ ಕೋಲಾಹಲ ಧ್ವನಿಯಿಂದಲೂ, ಎಸಗುಗಳ ಸಂಚಾರವೇಗದಿಂದ ಅಲುಗುತ್ತಿರುವ ತಾವರೆ ನೈದಿಲೆ ಮೊದಲಾದ ನೀರು ಹೂಗಳಿಂದಲೂ, ಆ ಕಮಲಗಂಧಕ್ಕಾಗಿ ಸುತ್ತಿಸುತ್ತಿಬರುವ ಭ್ರಮರಗಳ ಮಧುಜೇಂಕಾರದಿಂದಲೂ ಒಪ್ಪುತ್ತಿರುವ ಕಮಲಸರೋವರಗಳುಂಟು; ಈ ಸನ್ನಿವೇಶಗಳಿಂದ ಆ ಲೋಕಗಳು ಸ್ವರ್ಗದಸೊಬಗನ್ನೂ ಮೀರುತ್ತಿರುವುವು. ಅಲ್ಲಿನವರೆಲ್ಲರೂ ಚಿರಾಯುಗಳಾದುದರಿಂದ, ಅಹೋರಾತ್ರ ವಿಭಾಗಗಳಿಂದ ಕಳೆದು ಹೋಗುವ ಕಾಲಕ್ಕಾಗಿ ಅವರು ಸ್ವಲ್ಪವೂ ಭಯಪಡುವುದಿಲ್ಲ, ಸರ್ಪಶ್ರೇಷ್ಠಗಳ ಫಣಾರತ್ನ ಕಾಂತಿಯಿಂದ ಅಲ್ಲಿ ಕತ್ತಲೆಯೆಂಬ ಪ್ರಸಕ್ತಿಯೇ ಇರುವುದಿಲ್ಲ. ಆ ಲೋಕ ವಾಸಿಗಳು, ಯಾ ವಾ ಗ ಲೂ ದಿವ್ಯೌಷಧಿಗಳನ್ನೂ, ದಿವ್ಯರಸಾಯನಗಳನ್ನೂ, ದಿವ್ಯಾನ್ನಗಳನ್ನೂ, ದಿವ್ಯಪಾನಗಳನ್ನೂ ಉಪಯೋಗಿಸುತ್ತಿರುವುದರಿಂದಲೂ, ಅವರಿಗೆ ಆಧಿವ್ಯಾಧಿಗಳಾಗಲೀ, ನರೆಸುಕ್ಕು, ಮೊದಲಾದ ಮುಪ್ಪಿನ ಚಿಹ್ನೆಗಳಾಗಲಿ, ದೇಹದಲ್ಲಿ ದುರ್ಗಂಧ, ಬೆವರು, ಬಳಲಿಕೆ ಬಣ್ಣಗೆಡುವುದು, ಆಸುತ್ಸಾಹ, ಮುಂತಾದ ದುರವಸ್ಥೆಗಳಾಗಲೀ, ಎಂದಿಗೂ ಸಂಭವಿಸುವುದಿಲ್ಲ. ಸುದರ್ಶನಚಕ್ರವೆಂಬ ಶ್ರೀಮಹಾ ವಿಷ್ಣುವಿನ ತೇಜಸ್ಸಿನಿಂದ ಹೊರತು, ಅವರಿಗೆ ಬೇರೆ ಯಾತರಿಂದಲೂ ಮರಣಭಯ ವಿಲ್ಲ! ಸುದರ್ಶನವೆಂಬ ವಿಷ್ಣುತೇಜಸ್ಸು, ಆ ಲೋಕದಲ್ಲಿ ಪ್ರವೇಶಿಸಿದೊಡನೆ, ಪ್ರಾಯಕವಾಗಿ ಅಲ್ಲಿನ ಅಸುರಸ್ತ್ರೀಯರಿಗೆ ಭಯದಿಂದ ಗರ್ಭವು ಕಲಗಿಬೀಳುವುದು.

ರಾಜೇಂದ್ರಾ! ಈ ಪಾತಾಳರಂಧ್ರಗಳಲ್ಲಿ ಮೊದಲನೆಯದಾದ ಅತಲ ವೆಂಬ ಬಿಲದಲ್ಲಿ ಮಯಪುತ್ರನಾದ ಬಲನೆಂಬ ದಾನವನು ವಾಸಮಾಡುತ್ತಿರುವನು. ಸೃಗಲು ಈ ಮಯನಿಂದಲೇ ತೊಂಭತ್ತಾರುಬಗೆಯ ಮಾಯೆಗಳು ಸೃಷ್ಟಿ ವನ್ನು ವ. ಈಗಲೂ ಅವುಗಳಲ್ಲಿ ಕೆಲವನ್ನು ಕೆಲವು ಮಾಯಾವಿಗಳು ಪ್ರಯೋಗಿ ಮುಹೂರ್ತ. ಈ ಬಲನೆಂಬ ದಾನವನು, ಒಮ್ಮೆ ಆಕಳಿಸುವಾಗ ಅವನ ಮುಖದಿಂದ ಮೇಲೆ ಭಗಿಯ ಸ್ತ್ರೀಗಣಗಳು ಹುಟ್ಟಿದವು. ಈ ಮೂರು ಗುಂಪಿಗೆ ಕ್ರಮವಾಗಿ, ನಾಗ, ೀ ಕಾಮಿನಿ, ಪುಂಶ್ಚಲಿಗಳೆಂದು ಹೆಸರು. (ತಮ್ಮ ಸಜಾತೀಯ ಪುರುಷರಲ್ಲಿ ಮರೆಸುವ್ಭಿಚರಿಸತಕ್ಕವರುಸ್ವೈರಿಣಿಗಳು. ಇತರ ವರ್ಣದವರಲ್ಲಿಯೂ ರಮಿಸತಕ್ಕ ಹೋಗುವುದುಗಳು. ಈ ನಿಯಮದಲ್ಲಿಯೂ ನೆಲೆಯಾಗಿ ನಿಲ್ಲದವರು ಪುಂಶ್ಚಲಿಗಳು.) ವುದೂ ಉಂಟಾಯಸ್ತ್ರೀಯರೂ, ಆ ಸ್ಥಲಕ್ಕೆ ಯಾವನಾದದೂ ಪುರುಷನು ತಲೆ ಲವ ಕೆಳಗೆ ಕಂಡರೆ, ಅವನನ್ನು ಹಾಟಕವೆಂಬ ಒಂದಾನೊಂದು ರಸಾಯನ ನಿವಾಸ ಸ್ಥಾನವಪಡಿಸಿಕೊಂಡು. ಅವನಿಗೆ ಪೂರ್ಣವಾದ ಭೋಗಶಕ್ತಿಯನ್ನುಂಟು

ಮೊಡಿ, ತಮ್ಮ ವಿಲಾಸಗಳಿಂದಲೂ, ಅನುರಾಗಸೂಚಕವಾದ ಮಂದಹಾಸದಿಂದಲೂ, ಮೋಹಕರವಾದ ಕಟಾಕ್ಷವೀಕ್ಷಣದಿಂದಲೂ, ರಹಸ್ಯವಾದ ಮಾತುಗಳಿಂದಲೂ, ಆಲಿಂಗನಾದಿವಿನೋದಗಳಿಂದಲೂ ಮರುಳುಗೊಳಿಸಿ, ಅವರೊಡನೆ ಯಥೇಷ್ಟವಾಗಿ ರಮಿಸುವರು. ರಾಜೇಂದ್ರಾ! ಆ ಸ್ತ್ರೀಯರು ಕೊಡತಕ್ಕ ಹಾಟಕವೆಂಬ ರಸಾಯನವು ಪುರುಷನ ಮೈಗೆಸೇರಿದೊಡನೆ, ಅವನು ಮೈತಿಳಿಯದಷ್ಟು ಮದಾಂಧನಾಗಿ, ತನ್ನನ್ನು ಸಾವಿರಾನೆಗಳ ಬಲವುಳ್ಳವನೆಂದು ತಿಳಿದುಕೊಳ್ಳುವುದಲ್ಲದೆ, ತಾನೇ ಸಿದ್ಧನೆಂದೂ ತಿಳಿದು ಹೆಮ್ಮೆಯಿಂದ ಬೀಗಿ ಬೆರೆಯುವನು.

ಈ ಅತಲವೆಂಬ ಬಿಲದಕೆಳಗೆ ವಿತಲವೆಂಬ ಎರಡನೆಯ ಬಿಲವುಂಟು. ಇದರಲ್ಲಿ ಪೂಜ್ಯನಾದ ರುದ್ರನು ಹಾಟಕೇಶ್ವರನೆಂಬ ಹೆಸರಿನಿಂದ ಪಾರ್ವತೀಸಮೇತನಾಗಿ ನೆಲೆಗೊಂಡಿರುವನು. ಈತನು ಬ್ರಹ್ಮದೇವನಿಂದ ಪ್ರಜಾವೃದ್ಧಿಗಾಗಿ ನಿಯಮಿಸಲ್ಪಟ್ಟವನು. ಆ ಲೋಕದಲ್ಲಿ ಪಾರ್ವತೀಪರಮೇಶ್ವರರ ವೀರ್ಯದಿಂದ ಹಾಟಕಿನಿಯೆಂಬ ಒಂದಾನೊಂದು ನದಿಯು ಹುಟ್ಟಿಪ್ರವಹಿಸುತ್ತಿರುವುದು. ಹಾಟಕವೆಂದು ಕರೆಯಲ್ಪಡುವ ಸುವರ್ಣಕ್ಕೆ ಇದು ಉತ್ಪತ್ತಿಸ್ಥಾನವಾದುದರಿಂದ, ಇದಕ್ಕೆ ಕಾರಣನಾದ ರುದ್ರನಿಗೂ ಹಾಟಕೇಶ್ವರನೆಂದೇ ಹೆಸರಾಯಿತು. ಇಲ್ಲಿ ಅಗ್ನಿಯು ಗಾಳಿಯ ಸಹಾಯದಿಂದ ಪ್ರಬಲಿಸಿ, ತನ್ನ ತೇಜಸ್ಸಿನಿಂದ ಆ ಹಾಟಕಿನೀನದಿಯನ್ನು ಆಗಾಗ ಪಾನಮಾಡಿ ಕಕ್ಕುತ್ತಿರುವನು. ಆ ಅಗ್ನಿಯು ಬಾಯಿಂದ ಕಕ್ಕಿದುದೆಲ್ಲವೂ ಹಾಟಕವೆಂಬ ಸುವರ್ಣರೂಪವಾಗಿ ಹೊರಗೆ ಬೀಳುವುದು. ಈ ಸುವರ್ಣದಿಂದಲೇ ಅಲ್ಲಿನ ನಿವಾಸಿಗಳಾದ ದಾನವಶ್ರೇಷ್ಠರಿಲ್ಲರೂ, ತಮಗೂ, ತಮ್ಮ ಸ್ತ್ರೀಯರಿಗೂ ಬೇಕಾದ ಆಭರಣಗಳನ್ನು ಮಾಡಿ ಧರಿಸುತ್ತಿರುವರು.

ಇದರಿಂದಾಚೆಗೆ ಸುತಲವೆಂಬ ಮೂರನೆಯ ಬಿಲದಲ್ಲಿ ಪರಮಭಾಗವತೋತ್ತಮನಾಗಿಯೂ, ಪ್ರಣ್ಯಶ್ಲೋಕನಾಗಿಯೂ ಇರುವ ಬಲಿಚಕ್ರವರ್ತಿಯು ಈಗಲೂ ಆಳುತ್ತಿರುವನು. ಈತನು ವಿರೋಚನನೆಂಬ ದಾನವನ ಮಗನು. ಹಿಂದೊಮ್ಮೆ ಈ ಬಲಿಯು, ತನ್ನ ವೀರ್ಯದಿಂದ ಇಂದ್ರಾದಿದೇವತೆಗಳೆಲ್ಲರನ್ನೂ ಜಯಿಸಿ, ತ್ರೈಲೋಕ್ಯವನ್ನೂ ತನ್ನ ವಶಮಾಡಿಕೊಂಡನು. ಇದರಿಂದ ದೇವತೆಗಳಿಗೆ ಪ್ರಾಪ್ತವಾದ ಕಷ್ಟವನ್ನು ನೀಗಿಸುವುದಕ್ಕಾಗಿ, ಭಗವಂತನು ವಾಮನರೂಪದಿಂದ ಅದಿತಿದೇವಿಗೆ ಮಗನಾಗಿ ಹುಟ್ಟಿ, ಉಪಾಯದಿಂದ ಆ ಬಲಿಯನ್ನು ನಿಗ್ರಹಿಸಿ, ರಾಜ್ಯವನ್ನು ಇಂದ್ರನ ವಶಮಾಡಿದನು. ಈ ಸಂದರ್ಭದಲ್ಲಿ ಬಲಿಯು ತನ್ನ ಸ್ವರ್ಗರಾಜ್ಯಸಂಪತ್ತನ್ನು ಕಳೆದುಕೊಂಡರೂ, ತಿರುಗಿ ಆ ಭಗವದನುಗ್ರಹದಿಂದಲೇ, ಇಂದ್ರಾದಿದೇವತೆಗಳಿಗೂ ದುರ್ಲಭವಾದ ಈ ಬಿಲಾಧಿಪತ್ಯವನ್ನು ಪಡೆದು, ನಿರ್ಭ

ಯನಾಗಿ, ಸ್ವಧರ್ಮದಿಂದ ಈ ಗ ಲೂ ಆ ಭಗವಂತನನ್ನಾರಾಧಿಸುತ್ತಿರುವನು. ರಾಜೇಂದ್ರಾ! ಬಲಿಯು ಈ ಲೋಕಾಧಿಪತ್ಯವನ್ನು ಪಡೆದುದು ಹಿಂದೆ ಯಜ್ಞಕಾಲದಲ್ಲಿ ವಾಮನರೂಪಿಯಾದ ಭಗವಂತನಿಗೆ ತಾನು ಮಾಡಿದ ಭೂದಾನದ ಫಲವೆಂದು ತಿಳಿಯಬೇಡ! ಇವನು ಸಂಪೂರ್ಣವಾಗಿ ಆ ಭಗವದನುಗ್ರಹಕ್ಕೆ ಪಾತ್ರನಾಗಿದ್ದ ಪಕ್ಷದಲ್ಲಿ, ಅಕ್ಷಣವೇ ಪರಮಪುರುಷಾರ್ಥವಾದ ಮುಕ್ತಿಯನ್ನೇ ಪಡೆಯಬೇಕಾಗಿದ್ದಿತು. ಆದುದರಿಂದ ಆಗ ಭಗವಂತನು ಇವನಲ್ಲಿ ಪೂರ್ಣಾನುಗ್ರಹವನ್ನು ತೋರಿಸಲಿಲ್ಲವೆಂದು ತಿಳಿ! ಷಾಡ್ಗುಣ್ಯಪರಿಪೂರ್ಣನಾಗಿಯೂ ಸರ್ವಜೀವಾಂತರ್ಯಾಮಿಯಾಗಿಯೂ, ಉತ್ತಮೋತ್ತಮನಾಗಿಯೂ ಇರುವ ಪರಮಾತ್ಮನಾದ ವಾಸುದೇವನು, ತಾನೇ ಸಾಕ್ಷಾತ್ತಾಗಿ ಬಂದು ಕೈಸೀಡಿ ಮೂರಡಿಯ ನೆಲವನ್ನು ಯಾಚಿಸಿದಾಗ, ಬಲಿಯು ಅಂತಹ ಸತ್ಪಾತ್ರದಲ್ಲಿ ಶ್ರದ್ಧೆಯಿಂದ ಮಾಡಿದ ಭೂದಾನಕ್ಕೆ ತಕ್ಕ ಪ್ರತಿಫಲವು ಮೋಕ್ಷವೇಹೊರತು, ಬೇರೆಯಲ್ಲ. ಅಂತಹ ಸತ್ಕಾರ್ಯಕ್ಕೆ ಈ ಬಿಲಾಧಿಪತ್ಯವನ್ನು ಪ್ರತಿಫಲವೆಂದೂ ಎಂದಿಗೂ ಎಣಿಸಬಾರದು. ಕೆಮ್ಮುವುದು, ಸೀನುವುದು, ಆಕಳಿಸುವುದು, ಎಡವಿಬೀಳುವುದು, ಮುಂತಾದ ಸಂದರ್ಭಗಳಲ್ಲಿ ಆ ಭಗವಂತನ ನಾಮವನ್ನು ಒಂದಾವರ್ತಿಯಾದರೂ ಬಾಯಿಂದ ಹೇಳಿದಮಾತ್ರಕ್ಕೆ, ಮನುಷ್ಯನಿಗೆ, ಮೋಕ್ಷಾಪೇಕ್ಷೆಯುಳ್ಳ ಮಹಾಯೋಗಿಗಳೂ ಕರ್ಮಜ್ಞಾನಭಕ್ತಿಯೋಗಾದಿಗಳಿಂದ ಎಷ್ಟೋಶ್ರಮಪಟ್ಟು ಸಾಧಿಸಬೇಕಾದ ಕರ್ಮವಿಮೋಚನವು ಅನಾಯಾಸವಾಗಿ ಕೈಗೂಡಿಬರುವುದು. ಅಂತಹ ಭಗವಂತನಲ್ಲಿ ಸಾಕ್ಷಾತ್ತಾಗಿ ಮಾಡಿದ ಭೂದಾನಕ್ಕೆ ಈ ಬಿಲಾಧಿಪತ್ಯವನ್ನು ಪ್ರತಿಫಲವೆಂದು ಹೇಳಬಹುದೇ! ಇವೆರಡಕ್ಕೂ ಏನೇನೂ ಸಂಬಂಧವಿಲ್ಲ ಇಲ್ಲಿ ಭಗವಂತನು ಬಲಿಚಕ್ರವರ್ತಿಗೆ, ಭೋಗೈಶ್ವರ್ಯಗಳನ್ನು ಕೊಡುವನೆನಿದಿಂದ, ಸ್ವಸ್ವರೂಪವನ್ನು ಮರೆಸತಕ್ಕ ತನ್ನ ಮಾಯೆಯಲ್ಲಿಯೇ ಸಿಕ್ಕಿಸಿಟ್ಟನೇಹೊರತು, ಪೂರ್ಣಾನುಗ್ರಹವನ್ನು ತೋರಿಸಿದ್ದ ಸಂದರ್ಭದಲ್ಲಿ, ಮುಕ್ತಿಯನ್ನೇ ಕೊಡುತ್ತಿದ್ದನು. ಭಗವಂತನು ವಾಮನರೂಪಿಯಾಗಿ ಬಂದು ಬಲಿಯಲ್ಲಿ ಯಾಚಿಸಿದುದೂ, ಇಂದ್ರನ ಕೋರಿಕೆಯನ್ನೀಡೇರಿಸುವುದಕ್ಕಾಗಿಯೇಹೊರತು, ಬಲಿಚಕ್ರವರ್ತಿಯನ್ನು ಅನುಗ್ರಹಿಸುವುದಕ್ಕಲ್ಲ. ಏಕೆಂದರೆ, ಬಲಿಚಕ್ರವರ್ತಿಯು ಭಕ್ತೋತ್ತಮನಾದುದರಿಂದಲೂ, ಇವನು ಇಂದ್ರನನ್ನು ಜಯಿಸಿ ತ್ರೈಲೋಕ್ಯವನ್ನೂ ತಾನೇ ವಶಮಾಡಿಕೊಂಡುದರಿಂದಲೂ, ಭಕ್ತನಾದ ಅವನನ್ನು ದಂಡಿಸುವುದಕ್ಕೆ ಭಗವಂತನಿಗೆ ಮನಸ್ಸು ಬಾರದುದರಿಂದಲೂ, ಅವನು ವಶಪಡಿಸಿಕೊಂಡಿದ್ದ ಸ್ವರ್ಗಾಧಿಪತ್ಯವನ್ನು ಕಿತ್ತುಕೊಳ್ಳುವುದಕ್ಕೆ ಬೇರೆ ಉಪಾಯವಿಲ್ಲದುದರಿಂದಲೂ, ತ್ರಿವಿಕ್ರಮಮೂರ್ತಿಯು ಅವನಲ್ಲಿ ಯಾಚಿಸಿ ತೆಗೆಯ

ಬೇಕಾಯಿತು. ಓ ಪರೀಕ್ಷಿದ್ರಾಜೇಂದ್ರಾ! ಬಲಿಚಕ್ರವರ್ತಿಯು ಜಾತಿಯಲ್ಲಿ ದಾನವನಾಗಿದ್ದರೂ, ಎಂತಹ ವಿಷ್ಣುಭಕ್ತನೆಂಬುದಕ್ಕೆ ಒಂದು ನಿದರ್ಶನವನ್ನು ಹೇಳುವೆನು ಕೇಳು! ವಾಮನಮೂರ್ತಿಯು ತನ್ನಲ್ಲಿ ಬಂದು ಮೂರಡಿಯ ನೆಲವನ್ನು ಯಾಚಿಸಿದಾಗ, ಬಲಿಚಕ್ರವರ್ತಿಯು ಅವನ ಮಾಯೆಯನ್ನು ತಿಳಿಯದೆ, ಅವನು ಕೇಳಿದಷ್ಟು ಸ್ಥಳವನ್ನು ಕೊಡುವುದಾಗಿ ವಾಗ್ದಾನಮಾಡಿದನು. ವಾಮನಮೂರ್ತಿಯು ತನ್ನ ಎರಡಡಿಗಳಿಂದಲೇ ತ್ರೈಲೋಕ್ಯವನ್ನೂ ಅಳೆದು ಬಿಟ್ಟುದರಿಂದ, ಮೂರನೆಯಹೆಜ್ಜೆಗೆ ಸ್ಥಳವಿಲ್ಲದಂತಾಯಿತು. ಆಗ ಬಲಿಗೆ ಅವನ ಶರೀರವೊಂದು ಹೊರತು ಬೇರೊಂದೂ ಸ್ವಾಧೀನವಿರಲಿಲ್ಲ. ಇದರಿಂದ ಅವನು ವಾಗ್ದಾನಮಾಡಿದ ಮೂರನೆಯ ಹೆಜ್ಜೆಗೆ ತಕ್ಕಷ್ಟು ನೆಲವನ್ನು ಕೊಡುವುದಕ್ಕೆ ಸ್ಥಳವಿಲ್ಲದಂತಾಯಿತು. ಇದನ್ನೇ ನೆವವಾಗಿಟ್ಟುಕೊಂಡು ಭಗವಂತನು, ಅವನನ್ನು ವರುಣಪಾಶಗಳಿಂದ ಬಿಗಿದು, ಒಂದಾನೊಂದು ಪರ್ವತಗುಹೆಗೆ ಬಿಸುಟನು. ಆಗಲೂ ಬಲಿಚಕ್ರವರ್ತಿಯು ಆ ಭಗವಂತನಲ್ಲಿ ತನಗಿದ್ದ ಭಕ್ತಿಯನ್ನು ಬಿಡದೆ ಹೀಗೆಂದು ಹೇಳುವನು. "ಆಹಾ! ಏನು ಕಷ್ಟವು! ಇಂದ್ರನು ಅನೇಕವಿಷಯಗಳನ್ನು ತಿಳಿದು ಮಹಾತ್ಮನೆನಿಸಿಕೊಂಡಿದ್ದರೂ, ಈ ಪುರುಷಾರ್ಥಗಳಲ್ಲಿ ಯಾವುದು ಮೇಲೆಂಬ ತಾರತಮ್ಯವನ್ನು ತಿಳಿಯದೆಹೋದನು. ಮಹಾಬುದ್ಧಿಶಾಲಿಯೆನಿಸಿಕೊಂಡು, ಇವನಿಗೆ ಮಂತ್ರಾಲೋಚನೆಗಳಲ್ಲಿ ಸಹಾಯ ಮಾಡತಕ್ಕ ಬೃಹಸ್ಪತಿಯೂಕೂಡ, ಪುರುಷಾರ್ಥಗಳ ತಾರತಮ್ಯವನ್ನು ಚೆನ್ನಾಗಿ ತಿಳಿದವನಲ್ಲವೆಂಬುದು ನಿಶ್ಚಯವು! ಭಗವಂತನು ತನ್ನಲ್ಲಿ ಅಷ್ಟೊಂದು ಪ್ರೀತಿಯನ್ನಿಟ್ಟರುವಾಗಲೂ, ಇಂದ್ರನು, ವಾಮನರೂಪದಿಂದ ತನಗೆ ತಮ್ಮನಾಗಿ ಅವತರಿಸಿದ ಆ ಭಗವಂತನ ಮೂಲಕವಾಗಿ ನನ್ನಲ್ಲಿ ತ್ರೈಲೋಕ್ಯಾಧಿಪತ್ಯವನ್ನು ಯಾಚಿಸಿದನೇಹೊರತು, ಆ ಭಗವಂತನಲ್ಲಿ ದಾಸ್ಯವನ್ನು ಯಾಚಿಸದೆ ಹೋದನು. ಆಹಾ! ಮೂರುಲೋಕವನ್ನೂ ತನ್ನ ವಶಮಾಡಿಕೊಂಡು, ಯಾರಿಗೂ ತಿಳಿಯದ ಹಾಗೆ ಗಂಭೀರವೇಗದಿಂದ ನಡೆದು ಹೋಗುತ್ತಿರುವ ಕಾಲದಗತಿಯನ್ನು ಯಾರು ತಾನೇ ತಿಳಿಯಬಲ್ಲರು! ಈತ್ರೈಲೋಕ್ಯವೂ ಕಾಲಕ್ಕೆ ವಶವಾಗಿಒಂದೊಂದುಮನ್ವಂತರದವರಿಗಿದ್ದು ನಾಶಹೊಂದತಕ್ಕವುಗಳೇಹೊರತು, ಅದರಮೇಲೆ ಕ್ಷಣಕಾಲವೂ ನಿಲ್ಲುವುದಿಲ್ಲ. ಇದನ್ನಾಳತಕ್ಕ ಐಶ್ವರ್ಯವೂ ಒಂದೈಶ್ವರ್ಯವಲ್ಲ! ಈ ಅಲ್ಪೈಶ್ವರ್ಯಕ್ಕಾಗಿ ಅಷ್ಟೊಂದು ಶ್ರಮಪಟ್ಟ ಇಂದ್ರನನ್ನು, ಎಂದಿಗೂ ವಿವೇಕಿಯೆಂದು ಹೇಳುವುದಕ್ಕಿಲ್ಲ. ಇದನ್ನು ತಿಳಿದೇ ನನ್ನ ಅಜ್ಜನಾದ ಪ್ರಹ್ಲಾದನು, ಪಿತೃರಾಜ್ಯಕ್ಕೆ ಆಸೆಪಡದೆ ಭಗವಂತನಲ್ಲಿ ದಾಸ್ಯವನ್ನೇ ಯಾಚಿಸಿದನು. ಭಗವಂತನು ನೃಸಿಂಹನಾಗಿ ಬಂದು ತನ್ನ ತಂದೆಯಾದ ಹಿರಣ್ಯಕಶಿಪುವನ್ನು ಕೊಂದು, ಆ ರಾಜ್ಯವನ್ನು ತನಗೆ

ಕೊಟ್ಟಾಗಲೂ, ಅದನ್ನು ಅಲ್ಪವೆಂದೇ ತಿಳಿದು ನಿರಾಕರಿಸಿ, ಸರ್ವವಿಧದಿಂದಲೂ ನಿರ್ಭಯವಾದ ಮೋಕ್ಷವನ್ನೇ ಅಪೇಕ್ಷಿಸಿದನು. ಕರ್ಮಬಂಧವನ್ನು ನೀಗಲಾರದೆ ಭಗವದನುಗ್ರಹಕ್ಕೂ ಪಾತ್ರನಾಗದೆ ಇರುವ ನನ್ನಂತವನು, ಮಹಾತ್ಮನಾದ ಆ ಪ್ರಹ್ಲಾದನ ಮಾರ್ಗವನ್ನು ಹಿಡಿಯಬೇಕೆಂದರೆ ಹೇಗೆತಾನೇ ಸಾಧ್ಯವು?'' ಎಂದು ಪಶ್ಚಾತ್ತಾಪದಿಂದ ಮರುಗುತ್ತಿದ್ದನು. ರಾಜೇಂದ್ರಾ! ಈ ಬಲಿಚಕ್ರವರ್ತಿಯ ಚರಿತ್ರವನ್ನು ಮುಂದೆನಿನಗೆ ವಿವರವಾಗಿ ತಿಳಿಸುವೆನು. ಸಕಲಲೋಕ ಗುರುವಾಗಿಯೂ, ಸಮಸ್ತಜೀವಗಳಿಗೂ ಪ್ರಭುವಾಗಿಯೂ ಇರುವ ಶ್ರೀಮನ್ನಾರಾಯಣನು ಭಕ್ತವತ್ಸಲನಾದುದರಿಂದ, ಈಗಲೂ ಆ ಬಲಿಚಕ್ರವರ್ತಿಯ ಮನೆಬಾಗಿಲಲ್ಲಿ, ಗದಾಪಾಣಿಯಾಗಿ ಕಾಯುತ್ತಿರುವನು. ಹಿಂದೊಮ್ಮೆ ರಾವಣನು ದಿಗ್ವಿಜಯಕ್ಕಾಗಿ ಹೊರಟು ಲೋಕವೆಲ್ಲವನ್ನೂ ಜಯಿಸಿ, ಕೊನೆಗೆ ಬಲಿಚಕ್ರವರ್ತಿಯ ಮನೆಯನ್ನು ಪ್ರವೇಶಿಸುವುದಕ್ಕೆ ಬಂದಾಗ, ಅಲ್ಲಿ ದ್ವಾರಪಾಲಕನಾಗಿ ನಿಂತಿದ್ದಭಗವಂತನು, ಅವನನ್ನು ತನ್ನ ಕಾಲಿನ ಹೆಬ್ಬೆರಳಿನಿಂದ ಚಿಮ್ಮಿ, ಲಕ್ಷಯೋಜನದೂರದಲ್ಲಿ ತೂರಿಬೀಳುವಂತೆಮಾಡಿದನು. ಈ ಚರಿತ್ರಗಳೆಲ್ಲವನ್ನೂ ಮುಂದೆ ಚೆನ್ನಾಗಿ ವಿವರಿಸುವೆನು.

ರಾಜಾ! ಸುತಲಲೋಕದ ಕೆಳಗೆ ತಲಾತಲವೆಂಬ ವಿವರವಿರುವುದು. ಮಯನೆಂಬ ದಾನವನು ಅದನ್ನಾಳುತ್ತಿರುವನು. ಇವನೇಮೊದಲು ತ್ರಿಪುರಗಳಿಗೆ ಅಧಿಪತಿಯಾಗಿದ್ದವನು. ಬಹಳ ಮಾಯಾವಿಯು! ಲೋಕಕ್ಷೇಮಾರ್ಥವಾಗಿ ರುದ್ರನು ಆ ತ್ರಿಪುರಗಳನ್ನು ದಹಿಸಿದಮೇಲೆ, ಈ ಮಯನು ಬಹಳವಾಗಿ ಬೇಡಿಕೊಂಡುದರಿಂದ ರುದ್ರನು ಅವನಲ್ಲಿ ಅನುಗ್ರಹವನ್ನು ತೋರಿಸಿ, ಅವನಿಗೆ ಈ ತಲಾತಲದ ಅಧಿಕಾರವನ್ನು ಕೊಟ್ಟು ಇಲ್ಲಿರಿಸಿರುವನು. ಮತ್ತು ಶ್ರೀಮಹಾವಿಷ್ಣುವಿನ ಸುದರ್ಶನಚಕ್ರಕ್ಕೆ ತಾನು ಭಕ್ತನಾದುದರಿಂದ, ಮಯನಿಗೆ ಅದರ ಭಯವಿಲ್ಲದಂತೆ ತಪ್ಪಿಸುತ್ತಿರುವನು.

ಈ ತಲಾತಲದಿಂದ ಕೆಳಗೆ ಮಹಾತಲವೆಂಬ ಬಿಲವುಂಟು. ಇಲ್ಲಿ ಕದ್ರುವಿನ ಮಕ್ಕಳಾಗಿಯೂ, ಅನೇಕಫಣೆಗಳುಳ್ಳವುಗಳಾಗಿಯೂ ಇರುವ ಸರ್ಪಸಮೂಹಗಳು ವಾಸಿಸುತ್ತಿರುವುವು. ಕೋಪಸ್ವಭಾವವುಳ್ಳ ಈ ಸರ್ಪಗಣಗಳಲ್ಲಿ, ಕುಹಕ, ತಕ್ಷಕ, ಕಾಳಿಯ, ಸುಷೇಣರೇಮೊದಲಾದವರು ಪ್ರಮುಖರೆನಿಸಿಕೊಂಡಿರುವರು. ಇವರುಬಹಳ ಉದ್ದವಾದ ಮೈಯುಳ್ಳವರು. ಈ ಸರ್ಪಗಳಿಗೆ ವಿಷ್ಣುವಾಹನವಾದ ಗರುತ್ಮಂತನಿಂದ ಯಾವಾಗಲೂ ಭಯವು ತಪ್ಪಿದುದಲ್ಲ. ಹಾಗಿದ್ದರೂ ಇಲ್ಲಿ ತಮ್ಮ ಪೆಂಡಿರುಮಕ್ಕಳು, ನಂಟರಿಷ್ಟರು ಮೊದಲಾದ ಕುಟುಂಬದವರಲ್ಲಿ ಅತ್ಯಾಸಕ್ತಿಯುಳ್ಳವರಾಗಿ, ಅದರಿಂದ ಮೈಮರೆತು ವಿಹರಿಸುತ್ತಿರುವರು.

ಮಹಾತಲದ ಕೆಳಗೆ ರಸಾತಲವೆಂಬ ಬಿಲವುಂಟು. ಆದರಲ್ಲಿ ದನುಪುತ್ರರೆಂದೂ, ದಿತಿಪುತ್ರರೆಂದೂ, ಪಣಿಗಳೆಂದೂ ಕರೆಯಲ್ಪಡುವ ಬೇರೆಬೇರೆ ಪಂಗಡದವರು ವಾಸಿಸುತ್ತಿರುವರು. ಇವರೆಲ್ಲರೂ ದೇವಶತ್ರುಗಳು. ಪಣಿಗಳೆಂಬ ಪಂಗಡದವರಲ್ಲಿ ನಿವಾತಕವಚರೆಂದೂ, ಕಾಲಕೇಯರೆಂದೂ, ಹಿರಣ್ಯಪುರನಿವಾಸಿಗಳೆಂದೂ ಮೂರುಜಾತಿಯವರುಂಟು. ಇವರು ಹುಟ್ಟುವಾಗಲೇ ಮಹಾಬಲಾಢ್ಯರು. ಸಾಹಸ ಕಾರ್ಯಗಳಲ್ಲಿ ಎಣೆಯಿಲ್ಲದವರು! ಇವರ ವೀರ್ಯಕ್ಕೆ ಯಾವಲೋಕದಲ್ಲಿಯೂ ತಡೆಯಿಲ್ಲ. ಭಗವಂತನ ತೇಜೋಮಯವಾದ ಸುದರ್ಶನಚಕ್ರಕ್ಕೂ ಹೆದರದಷ್ಟು ಹೆಮ್ಮೆಯುಳ್ಳವರು. ಇವರೆಲ್ಲರೂ ಬಿಲದಲ್ಲಿ ಆಡಗಿರುವ ಮಹಾಸರ್ಪಗಳಂತೆ, ಆ ಲೋಕದಲ್ಲಿ ವಸಿಸುತ್ತಿರುವರು. ಆದರೆ ಇಂದ್ರನಕಡೆಯಿಂದ ದೂತ್ಯಕ್ಕಾಗಿ ಬಂದ ಒಂದಾನೊಂದು ಹೆಣ್ಣುನಾಯಿಯು, ಆಗಾಗ ಹೇಳುತ್ತಿರುವ ಮಂತ್ರರೂಪವಾದ ವಾಕ್ಯವನ್ನು ಕೇಳಿ, ಇವರು ಇಂದ್ರನ ವಿಷಯದಲ್ಲಿ ಭಯಪಡುತ್ತಿರುವರು.

ರಾಜೇಂದ್ರಾ! ಆ ರಸಾತಲದ ಕೆಳಗೆ ಪಾತಾಳವೆಂಬ ಬಿಲವಿರುವುದು. ಇದರಲ್ಲಿ ಸರ್ಪಲೋಕಕ್ಕೆ ಪ್ರಭುಗಳೆನಿಸಿಕೊಂಡ, ಶಂಖ, ಕುಳಿಕ, ಮಹಾಶಂಖ, ಶ್ವೇತ, ಧನಂಜಯ, ಧೃತರಾಷ್ಟ್ರ, ಶಂಖಚೂಡ, ಕಂಬಳ, ಅಶ್ವತರ, ದೇವದತ್ತರೇ ಮೊದಲಾದ ಸರ್ಪಶ್ರೇಷ್ಠಗಳುಂಟು. ಇವರೆಲ್ಲರಿಗೂ ವಾಸುಕಿಯು ಪ್ರಧಾನನಾಗಿರುವನು. ಇವೆಲ್ಲವೂ ಮಹಾಕೋಪಸ್ವಭಾವವುಳ್ಳವುಗಳು. ಇವುಗಳಲ್ಲಿ ಐದು ಹೆಡೆಯುಳ್ಳವುಕೆಲವು! ಆರು ಹೆಡೆಗಳುಳ್ಳವು ಕೆಲವು! ಏಳು ಹೆಡೆಗಳುಳ್ಳವು ಕೆಲವು! ಹತ್ತು ಹೆಡೆಗಳುಳ್ಳವು ಕೆಲವು! ಇವುಗಳ ಫಣಾಮಣಿಗಳ ಕಾಂತಿಯು, ಆ ಪಾತಾಳ ವಿವರಮೊಳಗಣ ಅಂಧಕಾರವೆಲ್ಲವನ್ನೂ ಧ್ವಂಸಮಾಡಿ, ಅನವರತವೂ ಆ ಸ್ಥಳವನ್ನು ಬೆಳಗುತ್ತಿರುವುದು. ಇಲ್ಲಿಗೆ ಇಪ್ಪತ್ತನಾಲ್ಕನೆಯ ಅಧ್ಯಾಯವು.

———

## ಪಾತಾಳದ ಕೆಳಗೆ ಭೂಮಂಡಲವನ್ನು ಹೊತ್ತಿರುವ ಆದಿಶೇಷನಸ್ವರೂಪವು.

ರಾಜೇಂದ್ರಾ ಕೇಳು! ಈ ಪಾತಾಳದ ಕೆಳಗೆ ಮೂವತ್ತುಸಾವಿರ ಯೋಜನಗಳಿಂದಾಚೆಗೆ, ತಾಮಸಾಹಂಕಾರಕ್ಕೆ ಅಧಿಷ್ಠಾನದೇವತೆಯಾಗಿಯೂ, ಅನಂತನೆಂಬ ಹೆಸರುಳ್ಳದಾಗಿಯೂ ಇರುವ ಭಗವಂತನ ಅಂಶವೊಂದುಂಟು! ಸಂಕರ್ಷಣರೂಪಿಯಾದ ಭಗವಂತನಿಂದುಪದೇಶಿಸಲ್ಪಟ್ಟ ಸಾತ್ವತವೆಂಬ ಪಾಂಚರಾತ್ರಸಂಹಿತೆಯನ್ನು ತಿಳಿದವರಾಗಿಯೂ, ಭಗವದಂಶದ ಮಹಿಮೆಯನ್ನು ಬಲ್ಲವರಾಗಿಯೂ ಇರುವ ಮಹಾತ್ಮರು, ಅತನನ್ನೇ ಸಂಕರ್ಷಣಾಂಶವೆಂದು ಹೇಳುವರು. ಜೀವಾತ್ಮರಿಗೆ ಇಂದ್ರಿಯಗೋಚರವಲ್ಲದ ವಸ್ತುಗಳ ಜ್ಞಾನವನ್ನು ಉಂಟುಮಾಡುವುದರಿಂದಲೂ, ಜೀವವರ್ಗಗಳೆಲ್ಲಕ್ಕೂ ಅಭಿಮಾನಿದೇವತೆಯಾಗಿ, ಅವಕ್ಕೆ "ನಾನು" (ಅಹಂ) ಎಂಬ ಬುದ್ಧಿ ಹುಟ್ಟುವುದಕ್ಕೆ ಕಾರಣನಾಗಿರುವುದರಿಂದಲೂ, ಅವನನ್ನು ಸಂಕರ್ಷಣನೆಂದು ಹೇಳುವರು. ಇವನಿಗೆ ಅನಂತನೆಂದೂ ಹೆಸರು. ಏಕೆಂದರೆ, ಅವನ ಸ್ವರೂಪವನ್ನೂ, ಆಕಾರವನ್ನೂ ಇಷ್ಟೆಂದ್ದು ಅಳತೆಯಿಡುವುದಕ್ಕೂ ಸಾಧ್ಯವಿಲ್ಲ ಸಹಸ್ರ ಶಿರಸ್ಸುಳ್ಳ ಆ ಅನಂತನ ಯಾವುಪೋ ಒಂದು ತಲೆಯಮೂಲೆಯಲ್ಲಿ, ಈಭೂಮಂಡಲವೆಲ್ಲವೂ ಒಂದು ಸಾಸಿವೆಯ ಕಾಳಿನಂತೆ ಅಂಟಿಕೊಂಡಿರುವುದು. ಇಂತಹ ಅದ್ಭುತ ರೂಪವುಳ್ಳವನಾದುದರಿಂದಲೇ ಅವನನ್ನು ಅನಂತನೆಂದು ಕರೆಯುವರು. ಎರಡು ಪರಾರ್ಧಗಳ ಕಾಲವು ಕಳೆದಮೇಲೆ, ಮಹಾಪ್ರಳಯವು ನಡೆಯಬೇಕಾದಸಂದರ್ಭದಲ್ಲಿ, ಈ ಸಂಕರ್ಷಣಮೂರ್ತಿಯು ಸಮಸ್ತಲೋಕವನ್ನೂ ತನ್ನಲ್ಲಿ ಉಪಸಂಹಾರ ಮಾಡಿಕೊಳ್ಳಬೇಕೆಂದು ಸಂಕಲ್ಪಿಸಿ, ಕೋಪದಿಂದ ಹುಬ್ಬುಗಳನ್ನು ಗಂಟಿಕ್ಕುವನು. ಆ ಹುಬ್ಬುಗಳ ಮಧ್ಯದಿಂದ ಸಾಂಕರ್ಷಣರೆಂದು ಕರೆಯಲ್ಪಡುವ ಏಕಾದಶರುದ್ರ ಸಮೂಹವು, ಮೂರುಕಣ್ಣುಗಳೊಡನೆ, ತ್ರಿಶೂಲವನ್ನು ಕೈಯಲ್ಲಿ ಹಿಡಿದು, ಹೊರಕ್ಕೆ ಬಂದು ಪ್ರಪಂಚವನ್ನು ಸಂಹರಿಸುವುದು. ಮತ್ತು ಸಾತ್ವತಶ್ರೇಷ್ಠರೆಲ್ಲರೂ ಈ ಸಂಕರ್ಷಣಮೂರ್ತಿಗೆ ಅವಿಚ್ಛಿನ್ನವಾದ ಭಕ್ತಿಯೋಗದಿಂದ ನಮಸ್ಕರಿಸುವಾಗ, ಕುಂಡಲಕಾಂತಿಯಿಂದಲಂಕೃತವಾದ ತಮ್ಮ ಗಂಡಸ್ಥಳವು ಆ ನಖರತ್ನಗಳಲ್ಲಿ ಅತಿ ಮನೋಹರವಾಗಿ ಪ್ರತಿಬಿಂಬಿಸುವುದನ್ನು ಕಂಡು, ಆನಂದಭರಿತರಾಗಿ, ಎಡೆಬಿಡದೆ ಅದನ್ನೇ ನೋಡುತ್ತಿರುವರು. ಮತ್ತು ಅಲ್ಲಿನ ನಾಗಕನ್ಯೆಯರೆಲ್ಲರೂ, ತಮ್ಮತಮ್ಮ ಇಷ್ಟಸಿದ್ಧಿಗಾಗಿ ಬಂದು, ಭೂಷಣಗಳಿಂದಲಂಕೃತವಾಗಿಯೂ, ದೀರ್ಘವಾಗಿಯೂ, ಕೋಮಲವಾಗಿಯೂ, ಬೆಳ್ಳಿಯ ಕಂಬಗಳಂತೆ ಸ್ವಚ್ಛವಾಗಿಯೂ ಇರುವ ಆ ಭಗವಂತನ ಬುಜಗಳಿಗೆ, ಕುಂಕುಮಚಂದನಗಳೇ ಮೊದಲಾದ ಸುಗಂಧದ್ರವ್ಯಗಳನ್ನು

ಲೇಪಿಸುವರು. ಆಗ ಆತನ ಭುಜಸ್ಪರ್ಶದಿಂದ ಮನಸ್ಸು ಕಲಗಿ, ಮನ್ಮಥಾವೇಶದಿಂದ ಮೈಮರೆತು ನಿಲ್ಲುವರು. ಭಕ್ತರಲ್ಲಿರುವ ಪ್ರೇಮದಿಂದಲೂ, ಆತ್ಮಾನುಭವದಿಂದುಂಟಾದ ಸಂತೋಷದಿಂದಲೂ, ವಿಕಸಿತವಾಗಿ, ಮದದಿಂದ ತೊಳಲುತ್ತಿರುವರು. ಸ್ವಲ್ಪಕೆಂಪಾಗಿಯೂ ದಯಾಪೂರ್ಣವಾಗಿಯೂ ಇರುವ ಕಟಾಕ್ಷಗಳಿಂದ ಮನೋಹರವಾದ ಆತನ ಮುಖಕಮಲವನ್ನು ಲಜ್ಜೆಯಿಂದ ನೋಡುತ್ತಿರುವರು. ಜಗತ್ಕಾರಣನಾದ ಇಂತಹ ಸಂಕರ್ಷಣಮೂರ್ತಿಯು ಕೊನೆಮೊದಲಿಲ್ಲದ ಕಲ್ಯಾಣಗುಣಗಳಿಂದಪೂರ್ಣನಾಗಿ, ತನ್ನ ದಿವ್ಯತೇಜಸ್ಸಿನಿಂದ ಪ್ರಕಾಶಿಸುತ್ತ, ತಡೆಯಬಾರದ ತನ್ನ ಕೋಪಾವೇಶವನ್ನೂ ತಡೆದುಕೊಂಡು, ಲೋಕಕ್ಷೇಮಕ್ಕಾಗಿ ಅಲ್ಲಿ ನೆಲೆಗೊಂಡಿರುವನು. ದೇವತೆಗಳು, ಅಸುರರು, ಉರಗರು, ಸಿದ್ಧರು, ಗಂಧರ್ವರು, ವಿದ್ಯಾಧರರು, ಮಹರ್ಷಿಗಳು ಮೊದಲಾದವರೆಲ್ಲರೂ, ಗುಂಪುಗುಂಪಾಗಿ ಸೇರಿ ಆ ಮಹಾತ್ಮನನ್ನು ಧ್ಯಾನಿಸುತ್ತಿರುವರು. ಆ ಭಗವಂತನು ಆತ್ಮಾನುಭವದಿಂದುಂಟಾದ ಆನಂದದಿಂದ ಅರಳಿದ ಕಣ್ಣುಗಳುಳ್ಳವನಾಗಿ, ಭಾವಗರ್ಭಿತಗಳಾಗಿಯೂ, ಮಂದಹಾಸ ಪೂರ್ವಕಗಳಾಗಿಯೂ ಇರುವ ತನ್ನ ವಚನಾಮೃತಗಳಿಂದ, ತನ್ನ ಭಕ್ತರನ್ನೂ ದೇವಶ್ರೇಷ್ಠರನ್ನೂ ಸಂತೋಷಗೊಳಿಸುತ್ತಿರುವಷ್ಟು ಹೊಸದಾದ ಕೃಷ್ಣತುಲಸೀದಳಗಳ ಸುವಾಸನೆಯಿಂದಲೂ, ಮಕರಂದಪಾನದಿಂದ ಮದಿಸಿದ ಭ್ರಮರಗಳ ಜೇಂಕಾರದಿಂದಲೂ ಕೂಡಿದ ವೈಜಯಂತಿಯೆಂಬ ವನಮಾಲಿಕೆಯಿಂದ ಶೋಭಿಸುತ್ತಿರುವನು. ನೀಲವಸ್ತ್ರವನ್ನು ನಡುವಿಗೆ ಕಟ್ಟಿ, ಒಂದೇ ಕಿವಿಯಲ್ಲಿ ಮಕರಕುಂಡಲವನ್ನು ತೊಟ್ಟು, ಐರಾವತದಂತೆ ಶುಭ್ರವರ್ಣವುಳ್ಳವನಾಗಿ, ಸುಕುಮಾರವಾದ ತನ್ನ ಕೈಯಿಂದ ನೇಗಿಲನ್ನೂರಿ ಹಿಡಿದು, ಸುವರ್ಣಮಯವಾದ ಹಲಗೆಯೆಂಬ ಆಯುಧವನ್ನು ಹಿಡಿದು ಠೀವಿಯಿಂದ ನೆಲೆಗೊಂಡಿರುವನು. ಮತ್ತು ಆ ಭಗವಂತನು, ತನ್ನ ಚರಿತ್ರವನ್ನು ಕೇಳಿ ತನ್ನನ್ನು ಧ್ಯಾನಿಸತಕ್ಕ ಮುಮುಕ್ಷುಗಳಲ್ಲಿ ಎಣೆಯಿಲ್ಲದ ಪ್ರೀತಿಯುಳ್ಳವನಾಗಿ, ಅವರ ಹೃದಯದಲ್ಲಿ ಪ್ರವೇತಿಸಿ, ಅವರಿಗೆ ಅನಾದಿಯಾದ ಕರ್ಮವಾಸನೆಯಿಂದ ಬಿಗಿಯಲ್ಪಟ್ಟುದಾಗಿಯೂ, ಅವಿದ್ಯಾಮಯವಾಗಿಯೂ, ಸತ್ವರಜಸ್ತಮೋಗುಣಗಳಿಂದತುಂಬಿದುದಾಗಿಯೂ, ಇರುವಅವರ ಹೃದಯಗ್ರಂಥಿಯನ್ನು ಬಿಡಿಸುವನು. ರಾಜೇಂದ್ರಾ! ಅಸಂಕರ್ಷಣಮೂರ್ತಿಯ ಪ್ರಭಾವವನ್ನು ತುಂಬುರು ನಾರದರಿಬ್ಬರೂ ಬ್ರಹ್ಮಸಭೆಯಲ್ಲಿ ಹೀಗೆಂದು ಗಾನಮಾಡುವರು. "ಪ್ರಪಂಚದ ಸೃಷ್ಟಿಸ್ಥಿತಿಲಯಗಳಿಗೆ ಕಾರಣಗಳೆನಿಸಿಕೊಂಡ ಸತ್ವರಜಸ್ತಮಸ್ಸುಗಳೆಂಬ ಪ್ರಕೃತಿಗುಣಗಳು, ಯಾವ ಮಹಾತ್ಮನ ಸಂಕಲ್ಪದಿಂದಲೇ ಆಯಾಕಾರ್ಯಗಳಲ್ಲಿ ಸಾಮರ್ಥ್ಯವನ್ನು ಹೊಂದುವುವೋ, ಈ ಗುಣತ್ರಯವನ್ನೊಳಕೊಂಡ ಪ್ರಕೃತಿಯೂಕೂಡ

ಮಹದಾದಿಕಾರ್ಯಗಳನ್ನು ಸೃಷ್ಟಿಸುವುದಕ್ಕೆ ತಕ್ಕ ಸಾಮರ್ಥ್ಯವನ್ನು ಯಾವನ ಸಂಕಲ್ಪದಿಂದಲೇ ಪಡೆದಿರುವುದೋ, ಮತ್ತು ಯಾವನು ತನ್ನಲ್ಲಿ ದೇವಮನುಷ್ಯಾದಿ ರೂಪಭೇದಗಳಿಲ್ಲದೆ ತಾನೊಬ್ಬನಾಗಿಯೇ ಇರುವನೋ, ಯಾವನ ರೂಪವೇ ಪ್ರಕೃತಿ ಪುರುಷಾತ್ಮಕವಾಗಿ ಕಾರ್ಯಾವಸ್ಥೆಯಲ್ಲಿ ನಾನಾರೂಪವನ್ನು ಹೊಂದುವುದೋ, ಅಂತಹ ಭಗವಂತನ ಸ್ವರೂಪವನ್ನು ನಾವು ಹೇಗೆತಾನೇ ತಿಳಿಯಬಲ್ಲೆವು! ಮತ್ತು ಯಾವ ಮಹಾತ್ಮನಲ್ಲಿಯೇ ಚಿದಚಿದಾತ್ಮಕವಾದ ಈ ಪ್ರಪಂಚವೆಲ್ಲವೂ ಕಾಣಬರುವುದೋ, ಯಾವನು ಭಕ್ತಾನುಗ್ರಹಾರ್ಥವಾಗಿ ಶುದ್ಧಸತ್ವಮಯವಾದ ದಿವ್ಯಮಂಗಳವಿಗ್ರಹವನ್ನು ಧರಿಸಿರುವನೋ, ಯಾವನು ಬ್ರಹ್ಮರುದ್ರಾದಿ ದೇವತೆಗಳಿಗೂ ಪ್ರಭುವಾಗಿ ಪರಮೇಶ್ವರನೆನಿಸಿಕೊಂಡಿರುವನೋ, ಯಾವನು ಜಗತ್ಸೃಷ್ಟಿಮೊದಲಾದ ಮಹಾವೀರ್ಯವುಳ್ಳವನೋ ಅಂತಹ ಸರ್ವೇಶ್ವರನು ಭಕ್ತರಾದ ನಮ್ಮ ಮನಸ್ಸನ್ನು ವಶಪಡಿಸಿಕೊಳ್ಳುವುದಕ್ಕಾಗಿ ತನ್ನ ಸ್ವೇಚ್ಛೆಯಿಂದಲೇ ಈ ರೂಪವನ್ನು ಕೈಕೊಂಡಿರುವನು. ಮತ್ತು ನಾಗಕನ್ನಿಕೆಯರಿಂದ ಆರಾಧಿಸಲ್ಪಡುವುದೂ, ಸಾತ್ವತಶಾಸ್ತ್ರವನ್ನು ಪದೇಶಿಸುವುದೂ, ಭೂಮಂಡಲವನ್ನು ಹೊತ್ತಿರುವುದೂ, ಇವೆಲ್ಲವೂ ಅವನು ತಾನಾಗಿ ಸ್ವೇಚ್ಛೆಯಿಂದ ಕೈಕೊಂಡುದೇ ಹೊರತು ಅವು ಕರ್ಮಸಂಬಂಧದಿಂದ ಬಂದುದಲ್ಲ. ಆತನ ಸ್ವರೂಪ ಸ್ವಭಾವಗಳು ಬೇರೊಬ್ಬರಿಗೆ ತಿಳಿಯಲಾರದಂತಿದ್ದರೂ, ನಮ್ಮಂತವರನ್ನು ಅನುಗ್ರಹಿಸುವುದಕ್ಕಾಗಿಯೇ ಈ ಲೀಲೆಗಳನ್ನು ನಡೆಸುತ್ತಿರುವನು. ಇದಲ್ಲದೆ ಆ ಭಗವಂತನ ನಾಮಾವಳಿಯ ಪ್ರಭಾವವು ನಿರುಪಮಾನವಾಗಿರುವುದು. ರೋಗಪೀಡಿತನಾಗಲೀ, ಮಹಾಪಾತಕಿಯಾಗಲೀ, ಒಂದಾವರ್ತಿ ಪರಿಹಾಸಕ್ಕಾಗಿಯಾದರೂ, ಆ ಭಗವಂತನ ನಾಮವನ್ನು ಕೀರ್ತಿಸಿದರೂ, ಅಥವಾ ದೈವಾಧೀನವಾಗಿ ಮತ್ತೊಬ್ಬರು ಹೇಳುವಾಗ ಅದನ್ನು ಕಿವಿಯಿಂದ ಕೇಳಿದರೂ ಅವನ ಸಮಸ್ತ ಪಾಪಗಳೂ ರೋಗಗಳೂ ಲಕ್ಷಣವೇ ನಿವೃತ್ತಿ ಹೊಂದುವುವು. ಆದುದರಿಂದ ಮೋಕ್ಷಾಪೇಕ್ಷೆಯುಳ್ಳವರು, ಈ ಸಂಕರ್ಷಣ ಮೂರ್ತಿಯನ್ನು ಬಿಟ್ಟು, ಬೇರೆ ಯಾವನನ್ನು ತಾನೇ ಆಶ್ರಯಿಸುವರು! ಅನೇಕನದಿಗಳಿಂದಲೂ, ಪರ್ವತಗಳಿಂದಲೂ, ಸಮುದ್ರಗಳಿಂದಲೂ, ವಿವಿಧಜೀವರಾಶಿಗಳಿಂದಲೂ ಕೂಡಿದ ಈ ಸಮಸ್ತಭೂಮಂಡಲವೂ, ಸಹಸ್ರಶಿರಸ್ಸುಳ್ಳ ಯಾವನತಲೆಯಲ್ಲಿ ಅಣುಮಾತ್ರವಾಗಿ ತಗುಲಿಕೊಂಡಿರುವುದೋ, ಅಂತಹ ಅಪ್ರಮೇಯಮಹಿಮೆಯುಳ್ಳ ಆ ಭಗವಂತನ ಅನಂತಕಲ್ಯಾಣಗುಣಗಳನ್ನು, ಸಾವಿರ ನಾಲಗೆಯುಳ್ಳ ನಾದರೂ ವರ್ಣಿಸಿ ಮುಗಿಸಲಾರನು ಇಂತಹ ಮಹಾಪ್ರಭಾವದಿಂದಲೂ, ಅಪಾವೀರ್ಯದಿಂದಲೂ, ಅಪ್ರಮೇಯಗುಣಗಳಿಂದಲೂ ಕೂಡಿದ ಸರ್ವಸ್ವತಂತ್ರನಾದ

ಆದಿಶೇಷನು, ರಸಾತಲದಕೆಳಗೆ ಅಸಹಾಯನಾಗಿದ್ದು, ಲೋಕಕ್ಷೇಮಾರ್ಥವಾಗಿ ಈ ಭೂಮಂಡಲವನ್ನು ಹೊತ್ತಿರುವನು" ಎಂಬುದೇ ಆ ತುಂಬುರುನಾರದರ ಸ್ತುತಿ ವಾಕ್ಯಗಳು.

ಓ ರಾಜೇಂದ್ರಾ! ಬೇರೆಬೇರೆ ಕಾಮಾಪೇಕ್ಷೆಯುಳ್ಳ ಮನುಷ್ಯರು ಹೊಂದ ತಕ್ಕ ಲೋಕಗಳೆಲ್ಲವೂ ಇಷ್ಟೇ! ಮನುಷ್ಯರು ಅವರವರ ಕರ್ಮಾನುಸಾರವಾಗಿ ಭೋಗಗಳನ್ನನುಭವಿಸುವುದಕ್ಕೆ ಭಗವಂತನಿಂದಲೇ ಈ ಲೋಕಗಳೆಲ್ಲವೂ ಸೃಷ್ಟಿ ಸಲ್ಪಟ್ಟಿರುವುವು. ಅವೆಲ್ಲವನ್ನೂ ನಾನು ಹಿರಿಯರಿಂದಕೇಳಿದ ರೀತಿಯಲ್ಲಿ ನಿನಗೂ ವರ್ಣಿಸಿ ಹೇಳಿರುವೆನು. ರಾಜೇಂದ್ರಾ! ಸಂಸಾರಿಗಳಿಗೆ ಫಲಾಪೇಕ್ಷೆಯಿಂದನಡೆಸಿದ ಪ್ರವೃತ್ತಿಧರ್ಮಗಳಿಗೆ ಫಲರೂಪವಾಗಿ ಲಭಿಸತಕ್ಕ ಈ ಗತಿಗಳು, ಸುಖದುಃಖಗಳ ತಾರತಮ್ಯದಿಂದ ನಾನಾವಿಧಗಳಾಗಿರುವುವು. ಅವೆಲ್ಲವನ್ನೂ ನಿನಗೆ ತಿಳಿಸಿದು ದಾಯಿತು. ಇನ್ನು ಮುಂದೆ ಯಾವ ವಿಷಯವನ್ನು ತಿಳಿಯಬೇಕೆಂದಿರುವೆಯೋ ಅದನ್ನು ಕೇಳು" ಎಂದನು. ಇಲ್ಲಿಗೆ ಇಪ್ಪತ್ತೈದನೆಯ ಅಧ್ಯಾಯವು.

---

## ಶುಕಮುನಿಯು ಪರೀಕ್ಷಿದ್ರಾಜನಿಗೆ ನರಕಯಾತನೆಗಳನ್ನು ತಿಳಿಸಿದುದು.

ಆಗ ಪರೀಕ್ಷಿದ್ರಾಜನು ಶುಕಮುನಿಯನ್ನು ಕುರಿತು "ಓ ಮಹರ್ಷೀ! ಹಿಂದೆ ಹೇಳಿದ ಲೋಕಗಳೆಲ್ಲವೂ, ಸುಖದುಃಖಗಳ ತಾರತಮ್ಯದಿಂದ ಒಂದ ಕ್ಕೊಂದು ವಿಲಕ್ಷಣವಾಗಿರುವುದೆಂದು ಹೇಳಿದೆಯಲ್ಲವೇ? ಅದು ಹೇಗೆ? ಜೀವಾತ್ಮರು ಫಲಾಪೇಕ್ಷೆಯಿಂದ ನಡೆಸತಕ್ಕ ಒಂದೇವಿಧವಾದ ಪ್ರವೃತ್ತಿಧರ್ಮದಿಂದ ಈ ಲೋಕಗಳನ್ನು ಹೊಂದುವಾಗ, ಕೆಲವರಿಗೆ ಸುಖವೂ, ಕೆಲವರಿಗೆ ದುಃಖವೂ, ಬೇರೆ ಕೆಲವರಿಗೆ ಸುಖದುಃಖಗಳು ಮಿಶ್ರವಾಗಿಯೂ ಬರುವುದು ಹೇಗೆ? ಆ ವಿಷಯವನ್ನು ನನಗೆ ವಿವರಿಸಿ ತಿಳಿಸಬೇಕು" ಎಂದನು. ಅದಕ್ಕಾ ಶುಕನು "ರಾಜೇಂದ್ರಾ ಕೇಳು! ಸತ್ವರಜಸ್ತಮೋ ಗುಣಗಳ ತಾರತಮ್ಯದಿಂದ, ಜೀವಾತ್ಮರಲ್ಲಿ ಸಾತ್ವಿಕರೆಂದೂ, ರಾಜಸರೆಂದೂ, ತಾಮಸರೆಂದೂ ಮೂರು ಭೇದಗಳುಂಟು. ಅದರಂತೆಯೇ ಅವರ ಶ್ರದ್ಧೆಯೂ, ಈ ಸತ್ವಾದಿಗುಣಗಳಿಂದ ಮೂರು ಬಗೆಯಾಗಿಬೇರ್ಪಡುವುವು. ಆಯಾಜೀವಾತ್ಮರಲ್ಲಿರುವ ಗುಣಗಳಿಗೆ ತಕ್ಕಂತೆ ಅವರ

ಬುದ್ಧಿಯೂ, ಆವರವರು ನಡೆಸತಕ್ಕ ಕಾರ್ಯಗಳೂ ಮೂರುವಿಧವಾಗಿರುವುವು. ಇವುಗಳ ತಾರತಾಮ್ಯವನ್ನನುಸರಿಸಿಯೇ ಅವರವರಿಗೆ ಬೇರೆಬೇರೆ ಲೋಕಪ್ರಾಪ್ತಿಯುಂಟಾಗಿ, ಅಲ್ಲಲ್ಲಿ ಅನುಭವಿಸತಕ್ಕ ಕರ್ಮಫಲಗಳೂ ಬೇರ್ಪಡುವುವು. ಧರ್ಮಕಾರ್ಯಗಳಾದರೂಕೂಡ, ಆಯಾಕಾರ್ಯಗಳನ್ನು ನಡೆಸತಕ್ಕವರ ಗುಣಸ್ವಭಾವಗಳ ಮತ್ತು ಅವರ ಶ್ರದ್ಧಾಭಕ್ತಿಗಳ ತಾರತಮ್ಯವನ್ನನುಸರಿಸಿ, ಸುಖಾನುಭವದಲ್ಲಿ ಹೇಗೆ ತಾರತಾಮ್ಯವನ್ನುಂಟುಮಾಡುವುವೋ, ಹಾಗೆಯೇ ನಿಷದ್ಧಕಾರ್ಯಗಳಿಗೂ ಕೂಡ, ತಮೋಗುಣಪ್ರಚುರವಾದ ಶ್ರದ್ಧಾಬುದ್ಧಿಗಳಿಂದ ನಡೆಸಿದ ಕಾರ್ಯಗಳಿಗೆ ತಕ್ಕಂತೆ ದುಃಖದಲ್ಲಿಯೂ ತಾರತಾಮ್ಯವನ್ನುಂಟುಮಾಡುವುದು. ರಾಜೇಂದ್ರಾ! ಅಜ್ಞಾನವೆಂಬುದು ಅನಾದಿಯಾಗಿ ಅನುಸರಿಸಿಬರುವುದು. ಇದು ತಮೋಗುಣಮೂಲಕವಾದುದು. ಈ ಅಜ್ಞಾನದಿಂದ ಮಾಡತಕ್ಕ ಕರ್ಮಗಳು ಹಲವು ಬಗೆಯಾಗಿರುವುದರಿಂದ ಆ ಕರ್ಮಫಲಗಳಾದ ದುರ್ಗತಿಗಳೂ ಅಸಂಖ್ಯಾತವಾಗಿರುವುವು. ಅವೆಲ್ಲವನ್ನೂ ಪೂರ್ತಿಯಾಗಿ ಹೇಳುವುದು ಸಾಧ್ಯವಲ್ಲ. ಅವುಗಳಲ್ಲಿ ವಿಶೇಷದುಃಖಕರವಾದ ಕೆಲವು ಗತಿಗಳನ್ನು ಮಾತ್ರ ವರ್ಣಿಸುವೆನು ಕೇಳು" ಎಂದನು ಅದಕ್ಕಾ ರಾಜನು "ಮುನೀಂದ್ರಾ! ಹಾಗಿದ್ದರೆ,ನರಕಗತಿಗಳೆಲ್ಲವೂ ಕೇವಲ ದುಃಖಪ್ರಚುರವಾಗಿರುವುದೆಂದು ಹೇಳುವರಷ್ಟೆ? ಆ ನರಕವೆಂಬುದು ಈಭೂಮಿಯಲ್ಲಿಯೇ ಅಡಗಿರುವ ಬೇರೆ ಪ್ರದೇಶಗಳೇ? ಅಥವಾ ಈ ಮೂರು ಲೋಕಗಳಿಗಿಂತಲೂ ಹೊರಗಿರುವುವೇ? ಅಥವಾ ಈ ಮೂರುಲೋಕದ ಅಂತರಾಳದಲ್ಲಿರುವುವೇ? ಆ ಸಂಗತಿಯನ್ನು ವಿಸ್ತರಿಸಿ ಹೇಳಬೇಕು" ಎಂದನು. ಅದಕ್ಕಾ ಶುಕಮುನಿಯು "ರಾಜೇಂದ್ರಾ! ಆ ನರಕವೆಂಬುದೂ ಈ ಬ್ರಹ್ಮಾಂಡದಲ್ಲಿಯೇ ಅಂತರ್ಗತವಾಗಿರುವುದು. ಅದು ಈ ಭೂಮಂಡಲದಕೆಳಗೆ ಅಂಡಜಲಕ್ಕೆ ಮೇಲಾಗಿರುವುದು. ಈ ಭೂಮಂಡಲಕ್ಕೆ ದಕ್ಷಿಣದಿಕ್ಕಿನಲ್ಲಿ, ಅಗ್ನಿಷ್ವಾತ್ತರೇ ಮೊದಲಾದ ಪಿತೃಗಣಗಳುಂಟು. ಇವರು ತಮ್ಮ ತಮ್ಮ ಕುಲದವರ ಶ್ರೇಯಸ್ಸಿಗಾಗಿ ಆಶೀರ್ವಾದಗಳನ್ನು ಮಾಡುತ್ತ ಉತ್ತಮವಾದ ಸಮಾಧಿಯೋಗದಲ್ಲಿರುವರು. ಈ ಪಿತೃದೇವತೆಗಳಿಗೆ ಪತಿಯಾದ ಸೂರ್ಯಪುತ್ರನಾದ ಯಮನೂ ಭಗವದಾಜ್ಞೆಯನ್ನನುಸರಿಸಿ, ತನ್ನ ಪರಿವಾರಗಳೊಡನೆ ಅಲ್ಲಿರುವನು. ಭೂಲೋಕದಲ್ಲಿ ಮರಣಹೊಂದಿದವರನ್ನು ತನ್ನ ಭಟರ ಮೂಲಕವಾಗಿ ತನ್ನಲ್ಲಿಗೆ ಕರೆತರಿಸಿಕೊಂಡು, ಅವರವರು ಮಾಡಿದ ಪಾಪಕಾರ್ಯಗಳಿಗೆ ತಕ್ಕ ದಂಡನೆಯನ್ನು ವಿಧಿಸುತ್ತಿರುವನು. ಅದನ್ನೇ ನರಕವೆನ್ನುವರು. ಕೆಲವರು ಈ ನರಕಗಳನ್ನು ಇಪ್ಪತ್ತೊಂದು ವಿಧವಾಗಿ ಹೇಳುವರು. ಅವುಗಳ ಹೆಸರು, ಆಕಾರ, ಲಕ್ಷಣ, ಮುಂತಾದುವುಗಳನ್ನು ಕ್ರಮವಾಗಿ

ಹೇಳುವೆನು ಕೇಳು. ಇವಕ್ಕೆ ತಾಮಿಸ್ರ, ಅಂಧತಾಮಿಸ್ರ, ರೌರವ, ಮಹಾರೌರವ, ಕುಂಭೀಪಾಕ, ಕಾಲಸೂತ್ರ, ಅಸಿಪತ್ರವನ, ಸೂಕರಮುಖ, ಅಂಧಕೂಪ, ಕೃಮಿ ಭೋಜನ, ಸಂದಂಶ, ತಪ್ತೋರ್ಮಿ, ವಜ್ರಕಂಟಕಶಾಲ್ಮಲಿ, ವೈತರಣಿ, ಪೂಯೋದ, ಪ್ರಾಣರೋಧ, ವಿಶಸನ, ಲಾಲಾಭಕ್ಷ, ಸಾರಮೇಯಾದನ, ಅವೀಚಿ, ಅಯಃಪಾನ ಗಳೆಂದು ಹೆಸರು. ಇವಲ್ಲದೆ, ಕ್ಷಾರಕರ್ದಮ, ರಕ್ಷೋಗಣಭೋಜನ, ಶೂಲಪ್ರೋತ, ದಂದಶೂಕ, ಅವಟನಿರೋಧನ, ಪರ್ಯಾವರ್ತನ, ಸೂಚೀಮುಖಗಳೆಂಬ ಇವೇಳೂ ಸೇರಿ ಇಪ್ಪತ್ತೆಂಟು ನರಕಗಳಿರುವುವು. ಇವುಗಳಲ್ಲಿ ಅನುಭವಿಸತಕ್ಕ ನಾನಾವಿಧ ದುಃಖಗಳಿಗೂ, ಯಾತನೆಗಳಿಗೂ ಪಾರವೇ ಇಲ್ಲ. ಆದುದರಿಂದ ಇವೆಲ್ಲವೂ ಯಾತನಾಭೂಮಿಗಳೆನಿಸುವುವು. ಯಾವನು ಈ ಲೋಕದಲ್ಲಿ ಮತ್ತೊಬ್ಬರ ಹಣವನ್ನಾಗಲೀ, ಮಕ್ಕಳನ್ನಾಗಲೀ, ಸ್ತ್ರೀಯರನ್ನಾಗಲೀ, ಅಪಹರಿಸುವನೋ, ಅಂತವನು ಮಹಾಭಯಂಕರರಾದ ಯಮದೂತರಿಂದ ಯಮಪಾಶದಲ್ಲಿ ಬಿಗಿಯಲ್ಪಟ್ಟು ತಾಮಿಸ್ರವೆಂಬ ನರಕದಲ್ಲಿ ನೂಕಲ್ಪಡುವನು. ಇದರಲ್ಲಿ ಬಿದ್ದ ಜೀವನು, ತಿನ್ನುವುದಕ್ಕೆ ಅನ್ನವಿಲ್ಲದೆ, ಕುಡಿಯುವುದಕ್ಕೆ ನೀರಿಲ್ಲದೆ, ಹಸಿವು ಬಾಯಾರಿಕೆಗಳಿಂದ ಪೀಡಿತನಾಗಿ, ಭಯಂಕರವಾದ ಯಾತನೆಗಳನ್ನನುಭವಿಸುವನು. ಆಗಾಗ ಯಮಭಟರು ದಂಡಪ್ರಹಾರಗಳಿಂದ ಹೊಡೆಯುವರು! ಆಗಾಗ ಹೆದರಿಸುವರು! ದೊಡ್ಡ ದೊಡ್ಡ ಬಂಡೆಗಳನ್ನು ತಂದು ಮೇಲೆ ಹಾಕುವರು. ಅಂಧಕಾರಮಯವಾದ ಆ ನರಕದಲ್ಲಿ ಈ ವಿಧವಾದ ಹಿಂಸೆಗಳೆಲ್ಲವನ್ನೂ ಅನುಭವಿಸುತ್ತ, ಆಗಾಗ ಮೂರ್ಛೆಬೀಳುತ್ತಿರುವನು. ಯಾವನು ಮತ್ತೊಬ್ಬ ಪುರುಷನನ್ನು ವಂಚಿಸಿ, ಆತನ ಹೆಂಡಿರು ಮಕ್ಕಳನ್ನಾಗಲೀ, ಧನವನ್ನಾಗಲೀ, ಅನುಭವಿಸುವನೋ, ಅವನು ಅಂಧತಾಮಿಸ್ರವೆಂಬ ನರಕದಲ್ಲಿ ತಳ್ಳಲ್ಪಡುವನು. ಇದರಲ್ಲಿ ಬಿದ್ದವನೂಕೂಡ ಅನೇಕಯಾತನೆಗಳನ್ನನುಭವಿಸುತ್ತ, ಆ ಹಿಂಸೆಯನ್ನು ತಡೆಯಲಾರದೆ ಮೂರ್ಛಿತನಾಗಿ, ಕಣ್ಣು ಕಾಣದೆ, ಬುಡವನ್ನು ಕಡಿದ ಮರದಂತೆ ಕೆಳಗೆ ಬಿದ್ದುಬಿಡುವನು. ಇದರಿಂದಲೇ ಈ ನರಕವನ್ನು ಅಂಧತಾಮಿಸ್ರವೆಂದು ಹೇಳುವರು. ಯಾವನು "ನಾನು ನನ್ನದು" ಎಂಬ ಅಹಂಕಾರಮಮಕಾರಗಳಿಂದ, ಕೇವಲ ಕುಟುಂಬ ಪೋಷಣೆಯಲ್ಲಿದ್ದು, ಇತರ ಭೂತಗಳಿಗೆ ದ್ರೋಹಮಾಡುವನೋ, ಅವನು ಶೀಘ್ರಕಾಲದಲ್ಲಿಯೇ ಆ ಕುಟುಂಬಾದಿಗಳೆಲ್ಲವನ್ನೂ ಅಗಲಿ, ತನ್ನ ಪಾಪಕ್ಕೆಫಲವಾಗಿ ತಾನೊಬ್ಬನೇ ರೌರವವೆಂಬ ನರಕದಲ್ಲಿ ಬಿದ್ದು, ಯಮಭಟರಿಂದ ಅನೇಕ ಯಾತನೆಗಳನ್ನನುಭವಿಸುವನು. ಮತ್ತು ಅವನು ಈ ಮೊದಲು ಯಾವಯಾವ ಪ್ರಾಣಿಗಳನ್ನು ಯಾವಯಾವವಿಧದಿಂದ ಹಿಂಸಿಸಿದ್ದನೋ, ಅವೆಲ್ಲವೂ ರುರುಗಳೆಂಬ ಒಂದುಬಗೆಯ ಕ್ರೂರಜಂತುಗಳಾಗಿ ಬಂದು,

ಮೊದಲೇ ಯಮಯಾತನೆಗಳಲ್ಲಿ ಸಿಕ್ಕಿ ಸೆಂಕಟಪಡುತ್ತಿರುವ ಆತನನ್ನು ಅದೇ ವಿಧದಿಂದ ಹಿಂಸಿಸುವುವು. ರಾಜಾ! ರುರುಗಳೆಂದರೆ ಮಹಾಸರ್ಪಗಳಿಗಿಂತಲೂ ಕ್ರೂರ ಸ್ವಭಾವವುಳ್ಳ ಒಂದುಬಗೆಯ ಜಂತುಗಳು. ಇವುಗಳಿಂದ ತುಂಬಿರುವುದರಿಂದಲೇ ಆ ನರಕವನ್ನು ರೌರವವೆಂದು ಹೇಳುವರು. ಮಹಾರೌರವವೆಂಬ ನರಕದಲ್ಲಿಯೂ ಇದೇವಿಧವಾದ ಯಾತನೆಗಳುಂಟು. ಇದರಲ್ಲಿ ಮತ್ತೊಂದು ವಿಶೇಷವೇನೆಂದರೆ, ಇದರಲ್ಲಿರತಕ್ಕ ರುರುಗಳು ಹಿಂಸಿಸುವುದು ಮಾತ್ರವಲ್ಲದೆ, ಆ ನರಕದಲ್ಲಿ ಬಿದ್ದವನ ಮಾಂಸವನ್ನು ಕಿತ್ತು ತಿನ್ನುವುವು. ಯಾವನು ಈ ಲೋಕದಲ್ಲಿ ತನ್ನ ಹೊಟ್ಟೆ ಹೊರೆಯುವುದರಲ್ಲಿಯೇ ಆತುರವುಳ್ಳವನಾಗಿ, ಇತರಪ್ರಾಣಿಗಳಲ್ಲಿ ಸ್ವಲ್ಪಮಾತ್ರವೂ ಮರುಕವಿಲ್ಲದೆ, ಪಶುಪಕ್ಷಿ ಮೃಗಾದಿಗಳ ಮಾಂಸವನ್ನು ಪಕ್ವಮಾಡಿ ತಿನ್ನುವನೋ, ಅಂತಹ ಕ್ರೂರನು, ರಾಕ್ಷಸಜಾತಿಗಿಂತಲೂ ಹೀನರಾದ, ಯಮದೂತರಿಂದ ಕುಂಭೀಪಾಕವೆಂಬ ನರಕದಲ್ಲಿ ತಳ್ಳಲ್ಪಡುವನು. ಅಲ್ಲಿ ಅನನನ್ನು ಯಮಭಟರು ಕಾಡೆಣ್ಣೆಯ ಕೊಪ್ಪರಿಗೆಯಲ್ಲಿ ಹಾಕಿ ಪಚನಮಾಡುವುದರಿಂದ ಅದಕ್ಕೆ ಕುಂಭೀಪಾಕವೆಂದು ಹೆಸರು. ಯಾವನು ಈ ಲೋಕದಲ್ಲಿ, ತಾಯ್ತಂದೆಗಳ ವಿಷಯದಲ್ಲಿಯಾಗಲೀ, ಬ್ರಾಹ್ಮಣರ ವಿಷಯದಲ್ಲಿಯಾಗಲೀ, ದ್ರೋಹವನ್ನೆಣಿಸುವನೋ, ಅವನು ಕಾಲಸೂತ್ರವೆಂಬ ನರಕದಲ್ಲಿ ತಳ್ಳಲ್ಪಡುವನು. ಇದು ಹತ್ತು ಸಾವಿರ ಯೋಜನಗಳ ಸುತ್ತಳತೆಯುಳ್ಳ ಒಂದು ತಾಮ್ರದ ತೊಟ್ಟಿಯಂತಿದ್ದು, ಕೆಳಗೆ ಅಗ್ನಿಜ್ವಾಲೆಯಿಂದಲೂ, ಮೇಲೆ ಸೂರ್ಯತಾಪದಿಂದಲೂ ಯಾವಾಗಲೂ ತಪ್ತವಾಗುತ್ತಿರುವುದು. ಇದರಲ್ಲಿ ಬಿದ್ದವನ ಶರೀರವು, ಕೆಳಗೆ ಬೆಂಕಿಯ ಕಾವಿನಿಂದಲೂ ಮೇಲೆ ಸೂರ್ಯತಾಪದಿಂದಲೂಬೆಂದು ಬೆಂಡಾಗುತ್ತಿರುವುದರಿಂದ, ಈ ಸಂಕಟವನ್ನು ತಡೆಯಲಾರದೆ ಆ ಮನುಷ್ಯನು,ಒಂದುಸ್ಥಿತಿಯಲ್ಲಿರದೆ, ಒಮ್ಮೆ ಮಲಗುವನು! ಒಮ್ಮೆ ನಿಲ್ಲುವನು! ನಾನಾಕಡೆಗಳಿಗೂ ಓಡುವನು! "ಅಯ್ಯೋ! ನನ್ನನ್ನು ಬಿಡಿರಿ!" ಎಂದು ಮೊರೆಯಿಡುವನು. ಈರೀತಿಯಾಗಿ, ಒಂದು ಹಸುವಿನ ಮೈಯಲ್ಲಿ ಎಷ್ಟುಕೂದಲುಗಳುಂಟೋ, ಅಷ್ಟುಸಂವತ್ಸರಗಳವರೆಗೆ ಈ ಸಂಕಟಗಳನ್ನೆಲ್ಲಾ ಅನುಭವಿಸುತ್ತಿರುವನು. ಹೀಗೆ ಬಹುಕಾಲದವರೆಗೆ ಕಷ್ಟದಲ್ಲಿರಬೇಕಾದುದರಿಂದಲೇ, ಇದಕ್ಕೆ ಕಾಲಸೂತ್ರವೆಂದು ಹೆಸರು. ಯಾವನು ತನಗೆ ರೋಗಾದಿಭಾಧೆಗಳೊಂದೂ ಇಲ್ಲದಿದ್ದಾಗಲೂ, ವೇದೋಕ್ತಗಳಾದ ತನ್ನ ವರ್ಣಾಶ್ರಮಧರ್ಮಗಳನ್ನು ನಡೆಸದೆ, ಪಾಷಂಡಿಗಳ ಮತವನ್ನು ಹಿಡಿದು, ತನ್ನ ಮನಸ್ಸಿಗೆ ತೋರಿದಂತೆ ನಡೆಯುವನೋ, ಅವನು ಅಸಿಪತ್ರವನವೆಂಬ ನರಕದಲ್ಲಿ ಬೀಳುವನು. ಅಲ್ಲಿಯಮಭಟರು ಅವನನ್ನು ಕೊರಡೆಗಳಿಂದ ಹೊಡೆಯುವರು. ಆ ಬಾಧೆಯನ್ನು ತಡೆಯಲಾರದೆ ನಾನಾದಿಕ್ಕುಗಳಿಗೆ ಓಡು

ವನು. ಹೀಗೆ ಓಡುವಾಗ, ಕತ್ತಿಯಲಗಿನಂತೆ ಎರಡು ಪಾರ್ಶ್ವಗಳಲ್ಲಿಯೂ ತೀಕ್ಷ್ಣವಾದ ಅಲಗುಳ್ಳ ತಾಳೆಯ ಪೊದರುಗಳಲ್ಲಿ ಬಿದ್ದು, ಮೈಯೆಲ್ಲವೂ ಹರಿದು, "ಅಯ್ಯೋ ಕೆಟ್ಟೆನು ಕೆಟ್ಟೆ" ನೆಂದು ಕೂಗುತ್ತ ಅಲ್ಲಲ್ಲಿ ಮೂರ್ಛೆಬೀಳುವನು. ಹೀಗೆ ತನ್ನ ಸ್ವಧರ್ಮವನ್ನು ಬಿಟ್ಟವನು ಪಾಷಂಡಿಗಳ ಧರ್ಮಕ್ಕೆ ಯೋಗ್ಯವಾದ ಫಲವನ್ನೇ ಅನುಭವಿಸುವನು. ಈ ಲೋಕದಲ್ಲಿ ಯಾವರಾಜನು ಅಥವಾ ರಾಜಪುರುಷನು, ನಿರಪರಾಧಿಗಳಿಗೆ ಶಿಕ್ಷೆಯನ್ನು ಮಾಡುವನೋ, ಅಥವಾ ಬ್ರಾಹ್ಮಣರಿಗೆ ಶರೀರದಂಡನೆಯನ್ನು ಮಾಡುವನೋ, ಅಂತಹ ಪಾಪಿಯು ಸೂಕರಮುಖವೆಂಬ ನರಕದಲ್ಲಿ ಬೀಳುವನು. ಆಲ್ಲಿ ಯಮಭಟರು, ಅವನ ದೇಹವನ್ನು ಕಬ್ಬಿನ ಗಾಣದಲ್ಲಿ ಕಬ್ಬನ್ನು ಹಿಂಡುವಂತೆ ಹಿಂಡುವರು. ಈ ಬಾಧೆಯನ್ನು ತಡೆಯಲಾರದೆ ಆ ಪಾಪಿ ಜೀವನು, ದೀನಧ್ವನಿಯಿಂದ ಕೂಗುವನು. ಮೊದಲು ತನ್ನಿಂದ ಪೀಡಿತರಾದವರು ಹೇಗೆ ಮೂರ್ಛಿತರಾದರೋ, ಹಾಗೆಯೇ ತಾನೂ ಮೂರ್ಛೆಹೊಂದುವನು. ಈ ನರಕದಲ್ಲಿ ಹಂದಿಯ ಯೂತಿಯುಳ್ಳ ಕೆಲವು ಕ್ರೂರಜಂತುಗಳು ಈ ಹಿಂಸೆಯನ್ನು ಮಾಡುವುದರಿಂದ, ಇದಕ್ಕೆ ಸೂಕರಮುಖವೆಂದು ಹೆಸರು. ಯಾವನು, ಇತರಭೂತಗಳಿಗೆ ಹಿಂಸೆಯಾಗುವುದೆಂಬ ತಿಳುವಳಿಕೆಯಿದ್ದಾಗಲೂ, ಪರರಿಗೆ ತಮ್ಮಿಂದಾಗುವ ಬಾಧೆಯನ್ನು ತಿಳಿಯಲಾರದೆ, ರಕ್ತಪಾನಾದಿಗಳಿಂದಲೇ ಬದುಕತಕ್ಕ ಸೊಳ್ಳೆ, ತಗಣಿ, ಮುಂತಾದುವುಗಳಮೇಲೆ ಕೋಪಿಸಿ, ಹಿಂಸೆಯನ್ನು ಮಾಡುವನೋ, ಅವನು ಆ ಭೂತದ್ರೋಹಕ್ಕೆ ಫಲವಾಗಿ ಅಂಧಕೂಪವೆಂಬ ನರಕದಲ್ಲಿ ಬೀಳುವನು. ಆ ನರಕದಲ್ಲಿ ಬಿದ್ದ ಮನುಷ್ಯನು, ಪೂರ್ವದಲ್ಲಿ ತನ್ನಿಂದ ಹಿಂಸಿಸಲ್ಪಟ್ಟ ಆಯಾಜಂತುಗಳಿಂದಲೇ ಹಿಂಸಿಸಲ್ಪಡುತ್ತ, ಕ್ಷಣಕಾಲವೂ ನೆಮ್ಮದಿಯಿಂದ ಮಲಗಲಾರದೆ, ನಿಂತಲ್ಲಿ ನಿಲ್ಲದೆ, ರೋಗಪೀಡಿತವಾದ ಶರೀರದಲ್ಲಿ ಬದ್ದುತೊಳಲುವ ಜೀವನಂತೆ, ಅಂಧಕಾರದಲ್ಲಿ ಬಿದ್ದು ಸಂಕಟಪಡುವನು. ಈ ನರಕವು ಗಾಢಾಂಧಕಾರದಿಂದ ತುಂಬಿದ ಹಾಳು ಬಾವಿಯಂತಿರುವುದರಿಂದ ಇದಕ್ಕೆ ಅಂಧಕೂಪವೆಂದು ಹೆಸರು. ರಾಜೇಂದ್ರಾ! ಈ ಲೋಕದಲ್ಲಿ ಯಾವನು ಭಿಕ್ಷೆಯಿಂದಾಗಲೀ, ದೈವಾಧೀನವಾಗಿಯಾಗಲೀ ತನಗೆ ಸಿಕ್ಕಿದ ಅನ್ನವನ್ನು, ಅತಿಥಿಗಳಿಗೆ ಕೊಡದೆ, ತಾನೊಬ್ಬನೇ ಭುಜಿಸುವನೋ, ಯಾವನು, ಪಂಚಮಹಾಯಜ್ಞಾದಿಗಳನ್ನು ನಡೆಸದೆ ಆಹಾರವನ್ನು ತಿನ್ನುವನೋ, ಅವನು ಪರಲೋಕದಲ್ಲಿ ಅನೇಕಕ್ರಿಮಿಗಳಿಂದ ತುಂಬಿ ಲಕ್ಷಯೋಜನವಿಸ್ತಾರವುಳ್ಳ ಕ್ರಿಮಿಭೋಜನವೆಂಬ ಕುಂಡದಲ್ಲಿ ಬೀಳುವನು. ಇದರಲ್ಲಿ ಬಿದ್ದವನು ಅಲ್ಲಿನ ಹುಳಗಳ ಗುಂಪಿನಲ್ಲಿ ತಾನೂ ಒಂದು ಹುಳುವಿನಂತೆ ಒದ್ದಾಡುವನು. ಆ ಕ್ರಿಮಿಗಳನ್ನೇ ಭಕ್ಷಿಸುವನು. ಆ ಕ್ರಿಮಿಗಳಿಂದಲೇ ತಾನೂ ಆಗಾಗ ಕಚ್ಚಿತಿನ್ನಲ್ಪಡುವನು.

ಆ ಕುಂಡವು ಎಷ್ಟು ಯೋಜನಗಳ ವಿಸ್ತಾರವುಂಟೋ ಅಷ್ಟು ವರುಷಗಳವರೆಗೆ ದುಃಖವನ್ನ ನುಭವಿಸುತ್ತಿರುವನು. ಆಯ್ಯೋ ! ಆಗ ಅವನ ಕಷ್ಟವನ್ನು ಕೇಳಬೇಕೇ ? ತಾನು ಹಿಂದೆ ಅತಿಥಿಗಳನ್ನಾದರಿಸದೆ ಹೋದುದಕ್ಕಾಗಿಯೂ, ಪಂಚಮಹಾಯಜ್ಞಗಳನ್ನು ನಡೆಸದೆ ಹೋದುದಕ್ಕಾಗಿಯೂ, ಬಹಳ ಪಶ್ಚಾತ್ತಾಪಪಟ್ಟು ಕೊರಗುತ್ತಿರುವನು. ಯಾವನು ಈಲೋಕದಲ್ಲಿ ತನಗೆ ಯಾವವಿಧವಾದ ವಿಪತ್ತೂ ಇಲ್ಲದಿರುವಾಗಲೂ, ಕಳ್ಳತನದಿಂದಾಗಲೀ, ಬಲಾತ್ಕಾರದಿಂದಾಗಲೀ, ಬ್ರಾಹ್ಮಣರ ಅಥವಾ ಇತರರ ಹಿರಣ್ಯರತ್ನಾದಿಗಳನ್ನು ಕೈಸೇರಿಸಿಕೊಳ್ಳುವನೋ, ಅವನನ್ನು ಯಮಭಟರು ಸಂದಂಶವೆಂಬ ನರಕದಲ್ಲಿ ನೂಕಿ, ಕೆಂಪಗೆ ಕಾಯಿಸಿದ ಕಬ್ಬಿಣದ ಇಕ್ಕುಳದಿಂದ ಅವನ ದೇಹವನ್ನು ಕೀಳುವರು. ಇದರಿಂದಲೇ ಈ ನರಕಕ್ಕೆ ಸಂದಂಶವೆಂದು ಹೆಸರು. ಲೋಕದಲ್ಲಿ ಪುರುಷನು, ತನಗೆ ಯೋಗ್ಯಳಲ್ಲದ ಸ್ತ್ರೀಯನ್ನಾಗಲೀ ಹೆಂಗಸುತನಗೆ ಯೋಗ್ಯನಲ್ಲದ ಪುರುಷನ್ನಾಗಲೀ ಭೋಗಿಸಿದರೆ, ಅವರನ್ನು ಯಮಭಟರು ತಪ್ತೋರ್ಮಿಯೆಂಬ ನರಕದಲ್ಲಿ ನೂಕಿ ಉರಿಯುತ್ತಿರುವ ಲೋಹದ ಕಂಬವನ್ನು ಆಲಿಂಗನಮಾಡಿಸಿ, ಕೊರಡೆಗಳಿಂದ ಹೊಡೆಯುವರು. ಇಲ್ಲಿ ಯಾವನು ಲೋಭಬುದ್ಧಿಯಿಂದ ಯೋಗ್ಯತಾಯೋಗ್ಯತೆಗಳನ್ನು ವಿಚಾರಿಸದೆ, ಸೇವಿಸಬಾರದ ವರನ್ನು ಸೇವಿಸುವನೋ, ಅವನನ್ನು ಯಮಭಟರು, ವಜ್ರಕಂಟಕಶಾಲ್ಮಲಿಯೆಂಬ ನರತಕ್ಕೆ ತಳ್ಳಿ, ಅಲ್ಲಿ ವಜ್ರದಂತೆ ದೃಢವಾದ ಮುಳ್ಳುಗಳುಳ್ಳ ಶಾಲ್ಮಲಿವೃಕ್ಷದಮೇಲೇರಿಸಿ, ಅವನ ಸರ್ವಾವಯವಗಳೂ ಹರಿದುಹೋಗುವಂತೆ ಹಿಂಸಿಸುವರು. ಇಲ್ಲಿ ಯಾವ ರಾಜರು, ಅಥವಾ ರಾಜಭಟರು, ತಾವು ವೈದಿಕಧರ್ಮಮಾರ್ಗವನ್ನು ವಿಾರುವುದಲ್ಲದೆ, ತಮ್ಮ ಪ್ರಜೆಗಳನ್ನೂ ಅದೇವಿಧವಾಗಿ ಬಲಾತ್ಕರಿಸುವರೋ, ಅವರು ವೈತರಣಿಯೆಂಬ ನರಕದಲ್ಲಿ ಬೀಳುವರು. ನರಕಕ್ಕೆ ಸುತ್ತಿನ ಕಂದಕದಂತಿರುವ ಆ ನದಿಯಲ್ಲಿ, ಮೊಸಳೆ ವಿಾನು, ಮುಂತಾದ ಜಲಜಂತುಗಳೆಲ್ಲವೂ ಸುತ್ತಿಮುತ್ತಿ ಅವನ ದೇಹವನ್ನು ಕಿತ್ತು ತಿನ್ನುವುವು. ಹೀಗೆ ನಾನಾಕಡೆಗಳಲ್ಲಿ ಕ್ರೂರಜಂತುಗಳು ಕಿತ್ತು ತಿನ್ನುತ್ತಿದ್ದರೂ, ಆ ಪಾಪಿಜೀವನು, ತನ್ನ ಪಾಪಶೇಷದಿಂದ ಪ್ರಾಣವಿಯೋಗವನ್ನು ಹೊಂದದೆ, ಬಹುಕಾಲದವರೆಗೆ ಆ ಚಿತ್ರಹಿಂಸೆಯನ್ನೇ ಅನುಭವಿಸುತ್ತಿರುವನು. ಆಗ ತಾನು ಹಿಂದೆ ಮಾಡಿದ ಪಾಪಗಳನ್ನು ನೆನೆಸಿಕೊಂಡು ಪಶ್ಚಾತ್ತಾಪದಿಂದ ಕೊರಗುವನು. ಮತ್ತು ಮಲಮೂತ್ರಗಳು, ಕೀವು, ಕೊಬ್ಬು, ಕೆನ್ನೀರು, ರಕ್ತ, ಕೂದಲು, ಉಗುರು, ಎಲುಬು, ಮುಂತಾದ ಕಶ್ಮಲಗಳಿಂದ ತುಂಬಿದ ಆ ನದಿಯ ಹಳ್ಳದಲ್ಲಿ ಹೊರಳುತ್ತಿರುವನು. ಈ ಲೋಕದಲ್ಲಿ ತಾನು ಉತ್ತಮಜಾತಿಯಲ್ಲಿ ಹುಟ್ಟಿರುವಾಗಲೂ ಯಾವನು, ನೀಚಜಾತಿಯ ಹೆಂಗಸನ್ನು ಪರಿಗ್ರಹಿಸಿ, ಶೌಚಾ

ಚಾರಗಳನ್ನು ಬಿಟ್ಟು, ನಾಚಿಕೆಯಿಲ್ಲದೆ, ಮೃಗಜಾತಿಯಂತೆ ಸ್ವೇಚ್ಛಾಚಾರಿಯಾಗಿ ಪ್ರವರ್ತಿಸುವನೋ, ಅವನು ಪರಲೋಕದಲ್ಲಿ ಕೇವಿನಿಂದಲೂ, ಮಲಮೂತ್ರಗಳಿಂದಲೂ, ಶ್ಲೇಷ್ಮದಿಂದಲೂ, ಜೊಲ್ಲಿನಿಂದಲೂ ತುಂಬಿದ ಮಡುವಿನಲ್ಲಿ ಬಿದ್ದು, ಒದ್ದಾಡುತ್ತ ಆ ಕಶ್ಮಲಗಳನ್ನೇ ಭಕ್ಷಿಸುತ್ತಿರುವನು. ಹೀಗೆ ಕೇವಲ ಕಶ್ಮಲಗಳಿಂದ ತುಂಬಿರುವುದರಿಂದ ಈ ನರಕಕ್ಕೆ ಪೂಯೋದವೆಂದು ಹೆಸರು. ಈ ಲೋಕದಲ್ಲಿ ಯಾವನು ಬ್ರಾಹ್ಮಣಾದಿವರ್ಣದಲ್ಲಿ ಹುಟ್ಟಿದ್ದಾಗಲೂ, ಕತ್ತೆ, ನಾಯಿ, ಮುಂತಾವುದುಗಳನ್ನು ಸಾಕುತ್ತ, ಜನಗಳು ಯಾತ್ರಾರ್ಥವಾಗಿ ಹೋಗಿಬರತಕ್ಕ ಪುಣ್ಯತೀರ್ಥಗಳಿಲ್ಲದ ಕಡೆಗಳಲ್ಲಿಯೂ ನಿಷ್ಕಾರಣವಾಗಿ ಬೇಟೆಯಂಡಿ ಮೃಗಗಳನ್ನು ಕೊಲ್ಲುವನೋ, ಅವನು ಸತ್ತ ಮೇಲೆ ಪ್ರಾಣನಿರೋಧವೆಂಬ ನರಕದಲ್ಲಿ ತಳ್ಳಲ್ಪಡುವನು. ಅವನನ್ನು ಅಲ್ಲಿ ಯಮಭಟರು ಬಾಣಗಳಿಂದ ಹೊಡೆದು ಪ್ರಾಣವಿಯೋಗವಾಗುವಂತೆ ಪೀಡಿಸುವರು. ಈ ಲೋಕದಲ್ಲಿ ಯಾವನು ಜನಗಳನ್ನು ವಂಚಿಸುವುದಕ್ಕಾಗಿಯೂ, ದಂಭಕ್ಕಾಗಿಯೂ ಯಜ್ಞಗಳನ್ನಾರಂಭಿಸಿ, ಆ ನೆವದಿಂದ ಪಶುಗಳನ್ನು ಗುದ್ದಿ ಕೊಲ್ಲುವನೋ, ಅವನು ಸತ್ತಮೇಲೆ, ವೈಶಸನವೆಂಬ ನರಕದಲ್ಲಿ ಬೀಳುವನು ಅಲ್ಲಿ ಅವನನ್ನು ಯಮಭಟರು ಯಜ್ಞಪಶುಗಳನ್ನು ಗುದ್ದಿ ಕೊಲ್ಲುವಂತೆ ಪೀಡಿಸುತ್ತಿರುವರು. ಈ ಲೋಕದಲ್ಲಿ ಯಾವನು ಕಾಮಾತುರನಾಗಿ, ತನ್ನ ಕೈಹಿಡಿದ ಹೆಂಡತಿಗೆ ತನ್ನ ರೇತಸ್ಸನ್ನು ಕುಡಿಸುವನೋ, ಅವನು ಪರಲೋಕದಲ್ಲಿ ಲಾಲಾಭಕ್ಷವೆಂಬ ನರಕದಲ್ಲಿ ತಳ್ಳಲ್ಪಡುವನು. ಅಲ್ಲಿ ಯಮದೂತರು ಇವನನ್ನು ರೇತಸ್ಸಿನಿಂದ ತುಂಬಿದ ಕಾಲುವೆಯಲ್ಲಿ ನೂಕಿ, ಆ ರೇತಸ್ಸನ್ನೇ ಕುಡಿಸುವರು. ಈ ಲೋಕದಲ್ಲಿ ಯಾವನು ಇತರರ ಮನೆಗೆ ಬೆಂಕಿಯನ್ನಿಡುವನೋ, ಯಾವನು ವಿಷಪ್ರಯೋಗದಿಂದ ಮತ್ತೊಬ್ಬರನ್ನು ಕೊಲ್ಲುವನೋ, ಯಾವನು ತಾನು ರಾಜನ ಕಡೆಯವನೆಂಬ ಅಧಿಕಾರಮದದಿಂದ, ದಯಾಶೂನ್ಯನಾಗಿ, ಪಟ್ಟಣಗಳಲ್ಲಿಯೂ, ಹಳ್ಳಿ ಗಾಡುಗಳಲ್ಲಿಯೂ ವಾಸಮಾಡುವಪ್ರಜೆಗಳನ್ನೂ ಇತರಪ್ರಾಣಿಗಳನ್ನೂ ಪೀಡಿಸುವನೋ, ಇಂತವರೆಲ್ಲರೂ ಸತ್ತಮೇಲೆ, ಸಾರಮೇಯಾದನವೆಂಬನರಕದಲ್ಲಿ ಬೀಳುವರು. ಅಲ್ಲಿ ಅವರನ್ನು ವಜ್ರದಂತೆ ದೃಢವಾದ ಕೋರೆಗಳುಳ್ಳ ಏಳುನೂರಿಪ್ಪತ್ತು ನಾಯಿಗಳು, ಆತುರದಿಂದ ಮೇಲೆಬಿದ್ದು ಕಚ್ಚಿ ತಿನ್ನುವುವು. ಈ ಲೋಕದಲ್ಲಿ ಯಾವನು ಸುಳ್ಳು ಸಾಕ್ಷ್ಯವನ್ನು ಹೇಳುವನೋ, ವರ್ತಕವ್ಯವಹಾರಗಳಲ್ಲಿ ಯಾವನುಸುಳ್ಳಾಡುವನೋ, ಅವನು ಸತ್ತಮೇಲೆ ಅವೀಚಿಯೆಂಬ ನರಕಕ್ಕೆ ತಳ್ಳಲ್ಪಡುವನು ಇದರಲ್ಲಿ ಯಮದೂತರು ಅವನನ್ನು ನೂರುಯೋಜನಗಳ ಎತ್ತರದಿಂದ ಪರ್ವತಶಿಖರದಮೇಲೆ ತಲೆಕೆಳಗಾಗಿ ಬೀಳುವಂತೆ ಎತ್ತಿ ಹಾಕುವರು. ಇಲ್ಲಿನ ನೆಲವೆಲ್ಲವೂ ಕೇವಲಶಿಲಾಮಯವಾಗಿಯೂ,

ನಿರ್ಜಲಪ್ರದೇಶವಾಗಿಯೂ ಇರುವುದು. ಇದಕ್ಕಾಗಿಯೇ ಇದನ್ನು ಅವೀಚಿಯೆಂದು ಹೇಳುವರು. ಹೀಗೆ ಮೇಲಿಂದ ಕೆಳಕ್ಕೆ ಬೀಳುವಪಾಪಿಯ ಶರೀರವು, ಎಳ್ಳುಕಾಳಷ್ಟು ತುಂಡುತುಂಡಾಗಿ ಹರಿಯುತ್ತಬಂದರೂ, ಅವನು ಸಾಯದೆ, ಆಗಾಗ ಇದೇವಿಧವಾದ ಚಿತ್ರಹಿಂಸೆಯನ್ನೇ ಅನುಭವಿಸುತ್ತಿರುವನು. ಈ ಲೋಕದಲ್ಲಿ ಬ್ರಾಹ್ಮಣನಾಗಲೀ ಬ್ರಾಹ್ಮಣಸ್ತ್ರೀಯಾಗಲೀ, ವ್ರತನಿಷ್ಠರಾದ ಇತರ ವರ್ಣದವರಾಗಲೀ, ಮದ್ಯಪಾನವನ್ನು ಮಾಡಿದರೂ, ಕ್ಷತ್ರಿಯನಾಗಲೀ, ವೈಶ್ಯನಾಗಲೀ, ತಮಗೆ ನಿಷಿದ್ಧವಾದ ಸೋಮಪಾನವನ್ನು ಮಾಡಿದರೂ, ಅವರೆಲ್ಲರೂ ಅಯಃಪಾನವೆಂಬ ನರಕದಲ್ಲಿ ಬೀಳುವರು. ಇವರನ್ನು ಯಮಭಟರು, ಕೆಳಕ್ಕೆ ಕೆಡಹಿ, ಅವರ ಎದೆಯ ಮೇಲೆ ಕಾಲೂರಿನಿಂತು, ಕಾಯಿಸಿ ಕರಗಿಸಿದ ಕಬ್ಬಿಣವನ್ನು ಬಾಯಿಗೆ ಹುಯ್ಯುವರು. ಇಲ್ಲಿ ಯಾವನು, ವಿದ್ಯೆಯಲ್ಲಿಯೂ. ಆಚಾರದಲ್ಲಿಯೂ, ವರ್ಣಾಶ್ರಮಗಳಲ್ಲಿಯೂ ತನಗಿಂತಲೂ ಉತ್ತಮರಾದವರನ್ನು ಅವಮಾನಿಸುವನೋ, ಅವನು ಕ್ಷಾರಕರ್ದಮವೆಂಬ ನರಕದಲ್ಲಿ ತಲೆಕೆಳಗಾಗಿಬಿದ್ದು, ಕೊನೆಮೊದಲ್ಲಿದ ಯಾತನೆಗಳನ್ನನುಭವಿಸುವನು. ಈ ಲೋಕದಲ್ಲಿ ಯಾವ ಪುರುಷನಾಗಲೀ ಇಲ್ಲವೇ ಸ್ತ್ರೀಯಾಗಲೀ ದುರ್ಗಿ, ಕಾಳಿ, ಮುಂತಾದ ದೇವತೆಗಳಪೂಜೆಗಾಗಿ, ನರಬಲಿಯನ್ನು ಕೊಡುವರೋ, ಅವರು ರಕ್ಷೋಗಣಭೋಜನವೆಂಬ ನರಕದಲ್ಲಿ ನೂಕಲ್ಪಡುವರು. ಇಲ್ಲಿ ಮೊದಲು ಆ ಪಾಪಿಗಳಿಂದ ಕೊಲ್ಲಲ್ಪಟ್ಟ ನರಪಶುಗಳೇ, ಅಲ್ಲಿ ರಾಕ್ಷಸರಾಗಿ ಬಂದು, ಕೊಲೆಗಾರರಂತೆ ಅವರನ್ನು ಶಸ್ತ್ರಗಳಿಂದ ಕಡಿದು, ಅವರ ರಕ್ತವನ್ನು ಹೀರುತ್ತ, ಹಿಂದೆ ತಮ್ಮನ್ನು ಬಲಿಕೊಡುವಾಗ ಅವರು ಹೇಗೆ ಸಂತೋಷದಿಂದ ಆ ಕಾಳಿಯ ಮುಂದೆ ಕುಣಿದಾಡಿದರೋ, ಅದರಂತೆಯೇ ಅಟ್ಟಹಾಸದಿಂದ ನಗುತ್ತ ಹಾಡಿಹಾಡಿ ಕುಣಿಯುವರು. ಈ ಲೋಕದಲ್ಲಿ ಯಾವನು ಕಾಡುಗಳಲ್ಲಿ ನಿರಪರಾಧಿಗಳಾಗಿ ಜೀವಿಸುತ್ತಿರುವಪ್ರಾಣಿಗಳಿಗೆ ಆಸೆತೋರಿಸಿ ಹಿಡಿದು, ಅವುಗಳನ್ನು ವಿನೋದಕ್ಕಾಗಿ ಸೂಜಿಯಿಂದ ಚುಚ್ಚುವುದು, ದಾರಿದಲ್ಲಿ ಕಟ್ಟುವುದು, ಇದೇ ಮೊದಲಾದ ಚೇಷ್ಟೆಗಳಿಂದ ಹಿಂಸಿಸುವರೋ, ಅವರು ಸತ್ತ ಮೇಲೆ ಶೂಲಪ್ರೋತವೆಂಬ ನರಕದಲ್ಲಿ ಬಿದ್ದು, ಹಿಂದೆ ತಾವು ಇತರಪ್ರಾಣಿಗಳನ್ನು ಹಿಂಸಿಸಿದ ರೀತಿಯಲ್ಲಿಯೇ, ಶೂಲಾದಿಗಳಲ್ಲಿ ಸಿಕ್ಕಿಸಲ್ಪಟ್ಟು ಅನೇಕಯಾತನೆಗಳನ್ನನುಭವಿಸುತ್ತ, ಹಸಿವು ಬಾಯಾರಿಕೆಗಳಿಂದ ತತ್ತಳಿಸುವರು. ಮತ್ತು ಅಲ್ಲಿ ಸೂಜಿಯಂತೆ ತೀಕ್ಷ್ಣವಾದ ಕೊಕ್ಕುಳ್ಳ ಹದ್ದು, ಕಾಗೆ, ಕೊಕ್ಕರೆ, ಮುಂತಾದ ಜಂತುಗಳಿಂದ ಕುಕ್ಕಲ್ಪಡುತ್ತ, ಮೈಯ್ಯೆಲ್ಲವೂ ಹರಿದು, ಆಗ ತಮ್ಮ ಪೂರ್ವದ ಪಾಪಕಾರ್ಯವನ್ನು ನೆನೆಸಿಕೊಂಡು ಕೊರಗುವರು. ಈ ಲೋಕದಲ್ಲಿ ಯಾರು ಸರ್ಪಗಳಂತೆ ಕ್ರೂರಸ್ವಭಾವವುಳ್ಳವರಾಗಿ, ಇತರಪ್ರಾಣಿಗಳಿಗೆ ಭಯವನ್ನುಂಟುಮಾಡುವರೋ, ಅವರುದಂದಶೂಕವೆಂಬ ನರಕದಲ್ಲಿ ಬೀಳುವರು. ಅಲ್ಲಿ ಐದು ಹೆಡೆಯುಳ್ಳ ಸರ್ಪಗಳೂ,ಏಳುಹೆಡೆಯುಳ್ಳಸರ್ಪಗಳೂ

ಇಲಿಗಳನ್ನು ಹಿಡಿಯುವಂತೆ ಮೇಲೆ ಬಿದ್ದುಬಂದು ಅವರನ್ನು ಕಚ್ಚುವುವು. ಈ ಲೋಕದಲ್ಲಿ ಯಾರು, ಕುಂಟರು, ಕುರುಡರು ಎಳಮಕ್ಕಳು ಮುಂತಾದ ಬಲಹೀನ ಪ್ರಾಣಿಗಳನ್ನು, ಹಳ್ಳ,ಪೊದೆ,ಗೂಡು, ಸುಂತಾದುವುಗಳಲ್ಲಿ ನಿರ್ಬಂಧಿಸಿಡುವರೋ, ಅವರನ್ನು ಯಮಭಟರು, ಅವಟನಿರೋಧವೆಂಬ ನರಕದ ಹಳ್ಳದಲ್ಲಿ ನೂಕಿ ವಿಷಾಗ್ನಿಯಿಂದಲೂ, ವಿಷದ ಹೊಗೆಯಿಂದಲೂ ಆದರ ಬಾಗಿಲನ್ನು ತಡೆದು, ಹೊರಕ್ಕೆ ಬಾರದಂತೆ ಮಾಡುವರು. ಇಲ್ಲಿ ಯಾವನು ಪರಿಚಿತರಾಗಿ ಮನೆಗೆ ಬಂದ ಅತಿಥಿಗಳನ್ನಾಗಲೀ, ಅಪರಿಚಿತರಾಗಿ ಬಂದ ಅಭ್ಯಾಗತರನ್ನಾಗಲೀ, ಸಂತೋಷದಿಂದಾದರಿಸದೆ, ಕೋಪದಿಂದುರಿಯುವಕಣ್ಣುಗಳಿಂದ ದುರದುರನೆ ನೋಡುವನೋ, ಅವನು ಸತ್ತಮೇಲೆ ಪರಲೋಕದಲ್ಲಿ ಅಕ್ಷಿಪರ್ಯಾವರ್ತನವೆಂಬ ನರಕದಲ್ಲಿ ಬೀಳುವನು. ಅಲ್ಲಿ ಕಾಗೆ, ಹದ್ದು, ಮೊದಲಾದ ಬಲಿಜಂತುಗಳು, ತಮ್ಮ ತೀಕ್ಷ್ಣವಾದ ಕೊಕ್ಕುಗಳಿಂದ ಅವನಕಣ್ಣುಗಳನ್ನು ಕೀಳುವುವು ಈ ಲೋಕದಲ್ಲಿ ಯಾವನು ತನ್ನಲ್ಲಿರುವ ಅಲ್ಪ ಸ್ವಲ್ಪಹಣದ ಹೆಮ್ಮೆಯಿಂದ ತಾನೇ ಮೇಲೆಂದು ತಿಳಿದು,ಗುರುಹಿರಿಯರನ್ನೂ ಲಕ್ಷ್ಯಮಾಡದೆ, ಎಲ್ಲರಲ್ಲಿಯೂ ಸಂದೇಹಬುದ್ಧಿಯುಳ್ಳವನಾಗಿ, ಅನವರತವೂ ಆ ಹಣದ ಚಿಂತೆಯಿಂದಲೇ ಕೊರಗಿ ಕೃಶನಾಗುತ್ತ, ಪಿಶಾಚದಂತೆ ಆಹಣವನ್ನು ಕಾಯುತ್ತಿರುವನೋ, ಅವನು ಹಿಂದೆತಾನು ಆ ಹಣವನ್ನು ಸಂಪಾದಿಸುವುದಕ್ಕಾಗಿಯೂ, ಅದನ್ನು ವೃದ್ಧಿಪಡಿಸುವುದಕ್ಕಾಗಿಯೂ, ಆಗಾಗ ಮಾಡಿದ ಪಾಪಗಳೆಲ್ಲವನ್ನೂ ಮೂಟೆಕಟ್ಟಿ ಹೊತ್ತುಕೊಂಡು, ಪರಲೋಕದಲ್ಲಿ ಸೂಚೀಮುಖವೆಂಬ ನರಕದಲ್ಲಿ ಬೀಳುವನು. ಅಲ್ಲಿಯಮಭಟರು ಬಟ್ಟೆಯನ್ನು ಹೊಲಿಯುವಂತೆ ಪಾಪಸ್ವರೂಪನಾದ ಇವನ ದೇಹವನ್ನು ಸೂಜಿಯಿಂದ ಚುಚ್ಚಿ, ದಾರವನ್ನೆಳೆಯುವರು. ಈವಿಧವಾದ ಅನೇಕಯಾತನಾಸ್ಥಳಗಳು ಆ ಯಮಪಟ್ಟಣದಲ್ಲಿ ಲಕ್ಷೋಪಲಕ್ಷವಾಗಿರುವುವು. ಈ ನರಕಗಳಲ್ಲಿ, ಮೇಲೆ ಹೇಳಿದ ಪಾಪಿಷ್ಠರಂತೆ ಇನ್ನೂ ಬೇರೆಬೇರೆ ಪಾಪಮಾಡಿದವರಿಗೆ, ಅವರವರ ಪಾಪಕ್ಕೆ ತಕ್ಕ ಶಿಕ್ಷೆಗಳನ್ನು ಹೊಂದುವುದಕ್ಕಾಗಿ, ಬೇರೆಬೇರೆ ಯಾತನಾಸ್ಥಳಗಳುಂಟು. ಇದರಂತೆಯೇ ಪುಣ್ಯಕರ್ಮಗಳನ್ನು ನಡೆಸಿದವರು ಸ್ವರ್ಗಾದಿಲೋಕಗಳಲ್ಲಿ ಪ್ರವೇಶಿಸಿ ಪುಣ್ಯಫಲಗಳಾದ ಸುಖಗಳನ್ನನುಭವಿಸುವರು. ಈ ಮೇಲೆಹೇಳಿದ ಎರಡು ಬಗೆಯವರೂ, ಆಯಾ ಲೋಕಗಳಲ್ಲಿ ಅನುಭವಿಸಿ ಮಿಕ್ಕ ಪುಣ್ಯಪಾಪಶೇಷವನ್ನು ಕಳೆಯುವುದಕ್ಕಾಗಿ, ಈ ಭೂಲೋಕದಲ್ಲಿ ತಿರುಗಿ ಜನ್ಮವನ್ನೆತ್ತುವರು. ಇದೇ ಪ್ರವೃತ್ತಿಧರ್ಮಗಳನ್ನು ನಡೆಸಿದವರು ಸುತ್ತತಕ್ಕ ಗತಿಗಳು. ನಿವೃತ್ತಿಧರ್ಮವನ್ನು ಹಿಡಿದವರಿಗೆ ಪುನರ್ಜನ್ಮವಿಲ್ಲದ ಮುಕ್ತಿಯು ಲಭಿಸುವುದು. ಇದನ್ನು ನೊದಲೇ ತಿಳಿಸಿರುವೆನಷ್ಟೆ ? ರಾಜೇಂದ್ರಾ! ಬಹ್ಮಾಂಡಕೋಶವನ್ನೇ ಪುರಾಣಗಳಲ್ಲಿ ಹದಿನಾಲ್ಕುಲೋಕಗಳಾಗಿ ವಿಭಾಗಿಸಿ ಹೇಳುವುದುಂಟು. ಆದರೆ ಈ ಭೂಮಿಯನ್ನೂ, ಇದರ ಕೆಳಗಿರುವ ಅತಲಾದಿಲೋಕಗಳನ್ನೂ ಸೇರಿಸಿ ಭೂಲೋಕವೆಂದೂ, ಮೇಲಿರುವಮಹರ್ಲೋಕಾದಿಗಳೆಲ್ಲವನ್ನೂ ಸೇರಿಸಿ ದ್ಯುಲೋಕ

ವೆಂದೂ, ಇದರನಡುವೆ ಆರುವುದನ್ನು ಅಂತರಿಕ್ಷಲೋಕವೆಂದೂ, ವಿಭಾಗಿಸಿ, ಈ ಅಂಡಕೋಶವು ಮೂರುಲೋಕಗಳಿಂದ ಆಡಗಿರುವುದಾಗಿ ಇಲ್ಲಿ ನಾನು ವಿವರಿಸಿರುವೆನು. ಇದರಲ್ಲಿರುವ ಒಳಭೇದಗಳನ್ನು ತೋರಿಸುವುದಕ್ಕಾಗಿಯೇ ಪುರಾಣಾಂತರಗಳಲ್ಲಿ ಅಂಡಕೋಶವು ಹದಿನಾಲ್ಕುಲೋಕಗಳುಳ್ಳದಾಗಿ ನಿರೂಪಿಸಲ್ಪಟ್ಟಿರುವುದು. ಪರಮಪುರುಷನಾದ ಶ್ರೀಮನ್ನಾರಾಯಣನಿಗೆ, ಸ್ಥೂಲಸೂಕ್ಷ್ಮಗಳೆಂಬ ಎರಡುರೂಪಗಳುಂಟೆಂದು ಹೇಳಿದ್ದೆನಲ್ಲವೇ! ಈ ಬ್ರಹ್ಮಾಂಡವೇ ಭಗವಂತನ ಸ್ಥೂಲರೂಪವೆಂದು ತಿಳಿ! ಏಕೆಂದರೆ, ಆ ಭಗವಂತನು ತನಗೆ ಶರೀರವಾದ ಪ್ರಕೃತಿಯಲ್ಲಿರುವ ಸತ್ವಾದಿಗುಣಗಳನ್ನು ಹೆಚ್ಚಿಸಿ ತೋರಿಸಿದಾಗ, ಈ ಪ್ರಪಂಚ ಸ್ವರೂಪದಿಂದ ಕಾಣಿಸಿಕೊಳ್ಳುವನು. ಆದುದರಿಂದ ಆ ಭಗವಂತನ ಸ್ಥೂಲರೂಪವನ್ನು ತಿಳಿಸತಕ್ಕ ಈ ಗ್ರಂಥವನ್ನು ಯಾವನು ಆದರಿಸಿ ಕೇಳುವನೋ, ಯಾವನು ಮತ್ತೊಬ್ಬರಿಗೆ ಹೇಳುವನೋ, ಯಾವನು ಇದನ್ನು ಪಠಿಸುವನೋ ಅವನು, ವೇದಾಂತಗಳಿಂದ ಪ್ರತಿಪಾದಿತವಾಗಿಯೂ, ಸರ್ವವ್ಯಾಪಿಯಾಗಿಯೂ, ದಿವ್ಯಮಂಗಳವಿಗ್ರಹವಿಶಿಷ್ಟವಾಗಿಯೂ, ಅತ್ಯಂತ ಸೂಕ್ಷ್ಮವಾಗಿಯೂ ಇರುವ ಆ ಭಗವಂತನ ದಿವ್ಯಾತ್ಮಸ್ವರೂಪವೆಂಬ ಸೂಕ್ಷ್ಮರೂಪವನ್ನೂ ತಿಳಿಯಬಲ್ಲನು. ಏಕೆಂದರೆ ಮೊದಲು ಸ್ಥೂಲರೂಪವನ್ನು ಚೆನ್ನಾಗಿ ತಿಳಿದುಕೊಂಡರೆ, ಆದುಸೂಕ್ಷ್ಮರೂಪವನ್ನು ತಿಳಿಯುವುದಕ್ಕೆ ಸಾಧನವಾಗುವುದು. ಆದುದರಿಂದ ಭಗವಂತನ ಸ್ಥೂಲಸೂಕ್ಷ್ಮರೂಪಗಳೆರಡನ್ನೂ ಗುರುಮುಖವಾಗಿ ಕೇಳಿ ಮೊದಲು ಸ್ಥೂಲರೂಪವನ್ನು ಮನಸ್ಸಿನಲ್ಲಿ ಧಾರಣಮಾಡಿಕೊಂಡು, ಅದರಿಂದಾಚೆಗೆ ಮೆಲ್ಲಮೆಲ್ಲಗೆ ಆ ಮನಸ್ಸನ್ನು ದಿವ್ಯಾತ್ಮಸ್ವರೂಪವೆಂಬ ಸೂಕ್ಷ್ಮರೂಪದಲ್ಲಿ ನೆಲೆಗೊಳಿಸಬಹುದು. ರಾಜೇಂದ್ರಾ! ಇದುವರೆಗೆ ಹೇಳಿದ ವಿಷಯಗಳಿಂದ, ಭೂಮಿ, ಅದರೊಳಗಿನ ದ್ವೀಪಗಳು, ಅದರಲ್ಲಿರುವ ವರ್ಷವಿಭಾಗಗಳು, ಪರ್ವತನದೀನದಗಳು, ಅಂತರಿಕ್ಷ, ಸಮುದ್ರಗಳು, ಪಾತಾಳಾದಿವಿವರಗಳು, ದಿಕ್ಕುಗಳು, ನರಕಗಳು, ನಕ್ಷತ್ರಗಳು, ಮೊದಲಾದ ವಿಭಾಗಗಳಿಂದ ಸಮಸ್ತ ಜೀವರಾಶಿಗಳಿಗೂ ನೆಲೆಯಾದ, ಮತ್ತು ಆಶ್ಚರ್ಯಕರವಾದ ಆ ಭಗವಂತನ ಸ್ಥೂಲರೂಪವನ್ನು ವಿವರಿಸಿದಂತಾಯಿತು.'' ಎಂದು ಶುಕಮುನಿಯು ಪರೀಕ್ಷಿತ್ತಿಗೆ ಹೇಳಿದುದಾಗಿ ಸೂತಪೌರಾಣಿಕನು ಶೌನಕಾದಿಗಳಿಗೆ ತಿಳಿಸಿದನು. ಇದು ಇಪ್ಪತ್ತಾರನೆಯ ಅಧ್ಯಾಯವು.

ಪಂಚಮಸ್ಕಂಧವು ಸಮಾಪ್ತವು.

ಶುಭಮಸ್ತು.

ಶ್ರೀಕೃಷ್ಣಾರ್ಪಣಮಸ್ತು.



ಶ್ರೀ ಕೃಷ್ಣಾಯ ಪರಬ್ರಹ್ಮಣೇನಮಃ

# ಶ್ರೀಮದ್ಭಾಗವತವು

## ಷಷ್ಠ ಸ್ಕಂಧವು

### ಅಜಾಮಿಳನ ಕಥೆ.

ವಿಷ್ಣುದೂತರಿಗೂ, ಯಮದೂತರಿಗೂ ನಡೆದ ಸಂವಾದಗಳು.


ತಿರುಗಿ ಪರೀಕ್ಷಿದ್ರಾಜನು ಶುಕಮುನಿಯನ್ನು ಪ್ರಶ್ನೆಮಾಡುವನು "ಓಮಹಾತ್ಮಾ! ನಿನ್ನಿಂದ ನಾನು ಇದುವರೆಗೆ ಅನೇಕವಿಷಯಗಳನ್ನು ತಿಳಿದಂತಾಯಿತು. ವರ್ಣಾಶ್ರಮಧರ್ಮಗಳನ್ನು ಕ್ರಮವಾಗಿ ನಡೆಸತಕ್ಕ ಕರ್ಮಯೋಗದಿಂದಲೂ, ಆತ್ಮಸ್ವರೂಪವನ್ನು ತಿಳಿಯತಕ್ಕ ಜ್ಞಾನಯೋಗದಿಂದಲೂ ಭಕ್ತಿಯೋಗವನ್ನು ಹೆಚ್ಚಿಸಿಕೊಂಡು, ಅದರಿಂದ ಪರಮಾತ್ಮನ ಅನುಗ್ರಹವನ್ನು ಸಂಪಾದಿಸಿ, ಸಂಸಾರಬಂಧವನ್ನು ನೀಗಿ ಮೋಕ್ಷಹೊಂದತಕ್ಕ ನಿವೃತ್ತಿಮಾರ್ಗವು ನಿನ್ನಿಂದ ಮೊದಲೇ ನಿರೂಪಿಸಲ್ಪಟ್ಟಿತು. ಸತ್ವರಜಸ್ತಮೋಗುಣಗಳಿಂದ ಮೇಲೆಮೇಲೆ ಸುಖದುಃಖಗಳಿಗೆ ಕಾರಣವಾದ ಪ್ರಕೃತಿಸಂಬಂಧವನ್ನು ತಪ್ಪಿಸದೆ, ಆಗಾಗ ದೇಹವನ್ನು ತಗಲುಕಟ್ಟುವ ಪ್ರವೃತ್ತಿಮಾರ್ಗವೂ ನಿನ್ನಿಂದ ತಿಳಿಸಲ್ಪಟ್ಟಿತು. ಮತ್ತು ಅಧರ್ಮದಿಂದ ಪ್ರಾಪ್ತವಾಗತಕ್ಕ ನಾನಾವಿಧನರಕಗಳೂ ನಿನ್ನಿಂದ ವಿವರಿಸಲ್ಪಟ್ಟುವು. ಆದಿಯಲ್ಲಿ ನಡೆದ ಸ್ವಾಯಂಭುವಮನ್ವಂತರವನ್ನೂ, ಆ ಮನುವಿನ ಮಕ್ಕಳಾದ ಪ್ರಿಯವ್ರತೋತ್ತಾನಪಾದರ

ವಂಶವನ್ನೂ, ಅವರ ಚರಿತ್ರೆಗಳನ್ನೂ ನಿನ್ನಿಂದ ನಾನು ತಿಳಿದುದಾಯಿತು. ಮತ್ತು ಈ ಭೂಮಿಯಲ್ಲಿರುವ ದ್ವೀಪಗಳು, ಅವುಗಳಲ್ಲಿರುವ ವರ್ಷವಿಭಾಗಗಳು, ಸಮುದ್ರಗಳು, ಪರ್ವತಗಳು, ಉದ್ಯಾನವನಗಳು, ಆಯಾದ್ವೀಪಗಳಲ್ಲಿ ಪ್ರಸಿದ್ಧವಾದ ವೃಕ್ಷಗಳು, ಈ ಭೂಮಂಡಲದ ಸ್ಥಿತಿ, ಅಳತೆ, ವಿಭಾಗಮುಂತಾದುವು, ಗ್ರಹನಕ್ಷತ್ರಗಳಿಂದ ತುಂಬಿದ ದ್ಯುಲೋಕದ ಸ್ಥಿತಿ. ಅತಲದಿಂದ ಪಾತಾಲದವರೆಗೆ ಭೂಮಿಯಲ್ಲಿರುವ ವಿವರಗಳು, ಇವೆಲ್ಲವೂ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಕ್ರಮದಿಂದಲೇ ನಿನ್ನಿಂದ ಸ್ಪಷ್ಟವಾಗಿ ವಿವರಿಸಲ್ಪಟ್ಟುವು. ಆದರೆ ಇದರಮೇಲೆ ನಾನು ನಿನ್ನಲ್ಲಿ ಕೇಳಿ ತಿಳಿಯಬೇಕಾದ ಮತ್ತೊಂದಂಶವುಂಟು. ಪಾಪಮಾಡಿದವರಿಗೆ ಸಂಭವಿಸತಕ್ಕ ಅನೇಕ ನರಕಯಾತನೆಗಳನ್ನು ತಿಳಿಸಿದೆಯಲ್ಲವೇ? ಅನೇಕಪಾಪಗಳನ್ನು ಮಾಡಿದ ಮನುಷ್ಯನು, ನರಕಯಾತನೆಗಳನ್ನು ತಪ್ಪಿಸಿಕೊಳ್ಳುವುದಕ್ಕೆ ಈ ಜನ್ಮದಲ್ಲಿಯೇ ಮಾಡಬಹುದಾದ ಉಪಾಯಗಳೇನಾದರೂ ಇದ್ದರೆ, ಅವನ್ನೂ ನನಗೆ ತಿಳಿಸಬೇಕು" ಎಂದನು. ಅದಕ್ಕಾ ಶುಕಮುನಿಯು, "ರಾಜೇಂದ್ರಾ ಕೇಳು! ಮನುಷ್ಯನು, ಮನೋವಾಕ್ಕಾಯಗಳೆಂಬ ತ್ರಿಕರಣಗಳಿಂದ ಮಾಡಿದಪಾಪವನ್ನೂ, ಈ ಲೋಕದಲ್ಲಿಯೇ ಪ್ರಾಯಶ್ಚಿತ್ತಾದಿಗಳಿಂದ ಕಳೆದುಕೊಳ್ಳಬಹುದು. ಹಾಗಿಲ್ಲದ್ದಪಕ್ಷದಲ್ಲಿ ಅವನು ಮರಣಹೊಂದಿದಮೇಲೆ ನರಕದಲ್ಲಿ ಬಿದ್ದು, ಆಯಾಪಾಪಕ್ಕೆ ತಕ್ಕ ಯಾತನೆಗಳನ್ನು ಅನುಭವಿಸದೆ ತೀರದು! ಇದು ನಿಶ್ಚಯವು! ಆದುದರಿಂದ ಮನುಷ್ಯನು ತನಗೆ ತಕ್ಕಷ್ಟು ದೇಹಬಲವಿರುವಾಗಲೇ ಪ್ರಾಯಶ್ಚಿತ್ತಾದಿಗಳಿಂದ ತನ್ನ ಪಾಪವನ್ನು ನೀಗಿಸುವುದಕ್ಕೆ ಯತ್ನಿಸಬೇಕು. ರೋಗಗಳ ಮರ್ಮವನ್ನು ತಿಳಿದವೈದ್ಯನು, ಆ ವ್ಯಾಧಿಯ ಬಲಾಬಲವನ್ನನುಸರಿಸಿ ಚಿಕಿತ್ಸೆಮಾಡುವಂತೆ, ಪಾಪಗಳ ಗುರುಲಾಘವಗಳನ್ನು ನೋಡಿ, ತಕ್ಕ ಪ್ರಾಯಶ್ಚಿತ್ತದಿಂದ ಪರಿಹರಿಸಿಕೊಳ್ಳಬೇಕು" ಎಂದನು. ಇದನ್ನು ಕೇಳಿ ಪರೀಕ್ಷಿದ್ರಾಜನು. "ಓ ಮಹರ್ಷೀ! ಲೋಕದಲ್ಲಿ ಮನುಷ್ಯನು, ಪ್ರತ್ಯಕ್ಷದಲ್ಲಿ ನೋಡಿಯಾಗಲೀ, ಹಿರಿಯರಿಂದ ಕೇಳಿಯಾಗಲೀ ಪಾಪವೆಂದು ತನ್ನ ಮನಸ್ಸಿಗೆ ತಿಳಿದಿದ್ದರೂ, ವಿಷಯಾಸಕ್ತನಾಗಿ ಪಾಪವನ್ನು ನಡೆಸಿದರೆ, ಅವನಿಗೆ ಪ್ರಾಯಶ್ಚಿತ್ತವೇನು? ಇದಲ್ಲದೆ, ಒಬ್ಬನು, ಒಂದು ಪಾಪಕಾರ್ಯವನ್ನು ಮಾಡಿ, ಅದಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡ ಮೇಲೆಯೂ ಇಂದ್ರಿಯಚಾಪಲ್ಯದಿಂದ ತಿರುಗಿ ತನ್ನ ಮೈಮೇಲೆ ಮಣ್ಣನ್ನೆರಚಿಕೊಳ್ಳುವ ಆನೆಯ ಸ್ನಾನದಂತೆ ಆ ಪ್ರಾಯಶ್ಚಿತ್ತವು ನಿಷ್ಪ್ರಯೋಜನವಾಗುವುದಲ್ಲವೇ? ಆದುದರಿಂದ ಸಂಪೂರ್ಣವಾದ ಪಾಪನಿವೃತ್ತಿಗೆ ಉಪಾಯವೇನೆಂಬುದನ್ನೂ ತಿಳಿಸಬೇಕು" ಎಂದನು. ಆದಕ್ಕಾ ಶುಕಮುನಿಯು "ರಾಜೇಂದ್ರಾ ಕೇಳು! ಪ್ರಾಯಶ್ಚಿತ್ತವನ್ನು ಮಾಡಿದ

ಗಳಿಂದ ಪಾಪವಿಮೋಚನವನ್ನು ಹೊಂದಲಾರನು. ಆದುದರಿಂದ ಪಾಪವಿಮೋಚನೆಯನ್ನು ಹೊಂದಿ ಪವಿತ್ರನಾಗುವುದಕ್ಕೆ, ಭಕ್ತಿಯೋಗಕ್ಕಿಂತಲೂ ಮೇಲಾದ ಉಪಾಯವಿಲ್ಲ. ಶ್ರೇಯಸ್ಸಾಧನೆಗಳಲ್ಲಿ ಭಕ್ತಿಯೇ ಮೇಲೆನಿಸಿರುವುದು! ಬಹಳ ಸುಲಭಸಾಧ್ಯವಾಗಿಯೂ ಇರುವುದು. ಇದರಿಂದ ಎಂದೆಂದಿಗೂ ನಿರ್ಭಯವಾದ ಮೋಕ್ಷವನ್ನು ಅನಾಯಾಸವಾಗಿ ಸಾಧಿಸಬಹುದು. ಇದನ್ನು ತಿಳಿದ ಮಹಾತ್ಮರು, ಈ ಭಕ್ತಿಯೋಗವನ್ನೇ ಹಿಡಿದು ನಿತ್ಯನಂದರೂಪವಾದ ಮೋಕ್ಷವನ್ನು ಹೊಂದುವರು. ಈ ಭಕ್ತಿಯೋಗವೊಂದೇ ಅನೇಕನರಕಯಾತನೆಗಳಿಗೆ ಕಾರಣವಾದ ಪಾಪಗಳನ್ನೆಲ್ಲಾ ನೀಗಿಸುವುದು. ರಾಜೇಂದ್ರಾ! ಒಮ್ಮೆಯಾದರೂ ಶ್ರೀಮನ್ನಾರಾಯಣನನ್ನು ಮನಸ್ಸಿನಲ್ಲಿ ಸ್ಮರಿಸದಪಾಪಿಷ್ಠರು, ಎಷ್ಟೆಷ್ಟೋ ಪ್ರಾಯಶ್ಚಿತ್ತಗಳನ್ನು ಮಾಡಿಸಿಕೊಂಡರೂ, ಹೆಂಡದ ಗಡಿಗೆಯನ್ನು ಗಂಗೆಯಲ್ಲಿ ಮುಳುಗಿಸಿ ತಂದಂತಾಗುವುದೇ ಹೊರತು, ಅದರಿಂದ ಅವರಿಗೆ ಆತ್ಮಶುದ್ಧಿಯುಂಟಾಗಲಾರದು. ಈ ಲೋಕದಲ್ಲಿ ಎಷ್ಟೇ ಪಾಪಗಳನ್ನು ಮಾಡಿದವನಾಗಿದ್ದರೂ ತಮ್ಮ ಮನಸ್ಸನ್ನು ಶ್ರೀಕೃಷ್ಣನಪಾದಾರವಿಂದದಲ್ಲಿ ಒಂದಾವರ್ತಿಯಾದರೂ ನೆಲೆಗೊಳಿಸಿದರೆ, ಅವರ ಸಮಸ್ತ ಪಾಪಗಳಿಗೂ ಅದೇ ಪ್ರಾಯಶ್ಚಿತ್ತವಾಗುವುದು. ಅಂತವರು ಯಮನನ್ನಾಗಲೀ, ದಂಡಧಾರಿಗಳಾದ ಯಮಭಟರನ್ನಾಗಲೀ ಎಂದಿಗೂ ಕಣ್ಣಿಂದ ನೋಡಲಾರರು. ರಾಜೇಂದ್ರಾ! ಒಂದಾವರ್ತಿ ಭಗವಂತನನ್ನು ಸ್ಮರಿಸಿದಮಾತ್ರಕ್ಕೆ ಇಂತಹ ಫಲವನ್ನು ಹೊಂದುವಾಗ, ದೃಢವಾದ ಭಕ್ತಿಯಿಂದ ಆ ಭಗವಂತನ ಪಾದವನ್ನು ನಂಬಿದವರು ತಮ್ಮ ಪಾಪಗಳನ್ನು ನೀಗಿ ಮುಕ್ತಿಯನ್ನು ಹೊಂದುವರೆಂಬುದಕ್ಕೆ ಸಂದೇಹವೇನಿದೆ? ಈ ವಿಷಯದಲ್ಲಿ ವಿಷ್ಣುದೂತರಿಗೂ, ಯಮದೂತರಿಗೂ ನಡೆದ ಸಂವಾದರೂಪವಾದ ಒಂದು ಹಳೆಯ ಇತಿಹಾಸವುಂಟು. ಅದನ್ನು ವಿವರಿಸುವೆನು ಕೇಳು.

ಕನ್ಯಾಕುಬ್ಜವೆಂಬ ದೇಶದಲ್ಲಿ, ಅಜಾಮಿಳನೆಂಬ ಬ್ರಾಹ್ಮಣನಿದ್ದನು. ಅವನು ತನ್ನ ವರ್ಣಾಶ್ರಮಧರ್ಮಗಳೆಲ್ಲವನ್ನೂ ತೊರೆದು, ಆಚಾರಹೀನನಾಗಿ, ಶೂದ್ರಸ್ತ್ರೀಯನ್ನು ವಿವಾಹಮಾಡಿಕೊಂಡು, ಆಕೆಯ ಸಂಬಂಧದಿಂದ ಕೇವಲಪತಿತನಾಗಿದ್ದನು. ಜೂಜು, ವಂಚನೆ, ಕಳವು, ಮುಂತಾದ ದುರ್ವ್ಯಾಪಾರಗಳಿಂದಲೇ ಕುಟುಂಬಭರಣವನ್ನು ಮಾಡುತ್ತ, ಸಜ್ಜನನಿಂದಿತವಾದ ವೃತ್ತಿಯಲ್ಲಿಯೇ ಇರುತ್ತಿದ್ದನು. ಜೀವನಕ್ಕೆ ಸಾಲದಿದ್ದಾಗ ಪಶುಪಕ್ಷಿ ಮೃಗಾದಿಗಳನ್ನು ಕೊಂದು ತಿನ್ನುತ್ತಿದ್ದನು. ಬ್ರಾಹ್ಮಣನು ತನಗೆ ಶೂದ್ರಸ್ತ್ರೀಯಲ್ಲಿ ಹುಟ್ಟಿದ ಮಕ್ಕಳನ್ನೇ ಮುದ್ದಿಸಿ [illegible]ತ್ತ, ತನ್ನ ಆಯುಃಕಾಲದಲ್ಲಿ ಎಂಭತ್ತೆಂಟುವರ್ಷಗಳನ್ನೂ

ಮಾತ್ರಕ್ಕೆ ಪಾಪವೆಲ್ಲವೂ ನಿಶ್ಶೇಷವಾಗಿ ನೀಗಲಾರದು. ಮುಖ್ಯವಾಗಿ ಕರ್ಮದಿಂದ ಕರ್ಮಕ್ಕೆ ಎಂದಿಗೂ ಪರಿಹಾರವಿಲ್ಲ! ಆ ಪ್ರಾಯಶ್ಚಿತ್ತವೆಂಬುದು ಆಯಾಕಾಲದ ಪಾಪವನ್ನು ನೀಗಿಸುವುದೇ ಹೊರತು, ಹಿಂದುಮುಂದಿನ ಪಾಪಗಳನ್ನು ನಿಶ್ಶೇಷವಾಗಿ ನೀಗಿಸಲಾರದು. ಆದರೆ ಪ್ರಾಯಶ್ಚಿತ್ತವನ್ನು ವ್ಯರ್ಥವೆಂದೂ ಹೇಳುವುದಕ್ಕಿಲ್ಲ! ರೋಗಗಳಿಗೆ ತಾತ್ಕಾಲಿಕವಾದ ಉಪಶಮನಕ್ಕಾಗಿ ತೆಗೆದುಕೊಳ್ಳುವ ಔಷಧಿಯಂತೆ, ಇದು ತಾತ್ಕಾಲಿಕವಾದ ಪಾಪವನ್ನು ಮಾತ್ರ ನಿವೃತ್ತಿಮಾಡುವುದು. ಪರಮಾತ್ಮೋಪಾಸನವನ್ನು ತಿಳಿಯದವರಿಗೆ ತಾತ್ಕಾಲಿಕ ಪಾಪಗಳನ್ನು ನಿವಾರಿಸುವುದಕ್ಕಾಗಿಮಾತ್ರವೇ ಈ ಪ್ರಾಯಶ್ಚಿತ್ತಗಳು ಏರ್ಪಟ್ಟಿರುವುವು. ಪಥ್ಯಾನವನ್ನು ಭುಜಿಸತಕ್ಕವನು ರೋಗಗಳಿಗೇ ಅವಕಾಶವಿಲ್ಲದೆ ಸುಖವಾಗಿ ಜೀವಿಸುವಂತೆ, ಮುಂದೆ ಹೇಳುವ ನಿಯಮಗಳಲ್ಲಿರತಕ್ಕವರು, ಪಾಪ ಸಂಬಂಧವೇ ಇಲ್ಲದೆ ನಿರತಿಶಯವಾದ ಸುಖವನ್ನು ಹೊಂದಬಹುದು. ಆ ನಿಯಮಗಳನ್ನು ತಿಳಿಸುವೆನು ಕೇಳು. ದೇಹಧಾರಣೆಗೆ ತಕ್ಕಷ್ಟೇ ಅನ್ನವನ್ನು ಉಚಿತ ಕಾಲದಲ್ಲಿ ತೆಗೆದುಕೊಳ್ಳುವುದು, ಋತುಕಾಲದಲ್ಲಿ ಹೊರತು ಇತರಕಾಲದಲ್ಲಿ ಸ್ತ್ರೀಯರೊಡನೆ ಸಂಭೋಗಿಸದಿರುವುದು, ಇಂದ್ರಿಯಗಳನ್ನಡಗಿಸಿಡುವುದು, ತನ್ನಲ್ಲಿರುವ ಧನಾದಿಗಳನ್ನು ಸತ್ಪಾತ್ರದಲ್ಲಿ ವಿನಿಯೋಗಿಸುವುದು, ಸಮಸ್ತಪ್ರಾಣಿಗಳಿಗೂ ಹಿತವನ್ನು ಕೋರುವುದು, ಆಚಾರಪರನಾಗಿರುವುದು, ಸುಳ್ಳಾಡದಿರುವುದು, ಕಾಮುವನ್ನಡಗಿಸುವುದು, ಪಂಚಮಹಾಯಜ್ಞಗಳೇ ಮೊದಲಾದ ತಮ್ಮತಮ್ಮ ವರ್ಣಾಶ್ರಮಧರ್ಮಗಳನ್ನು ತಪ್ಪದೆ ನಡೆಸುವುದು, ಇವೇ ಮೊದಲಾದ ನಿಯಮಗಳಿಂದ ನಡೆಯುತ್ತಿದ್ದರೆ,ಎಲ್ಲಮೆಲ್ಲಗೆ ಮಹಾನಂದರೂಪವಾದ ಮೋಕ್ಷವನ್ನು ಸೇರಬಹುದು. ಸುಖದುಃಖಾದಿದ್ವಂದ್ವಗಳನ್ನು ಸಹಿಸಬಲ್ಲವರಾಗಿಯೂ, ಧರ್ಮಜ್ಞರಾಗಿಯೂ ಇರುವ ಪಂಡಿತರು, ಶ್ರದ್ಧೆಯಿಂದ ಈ ನಿಯಮಗಳನ್ನೇ ಅನುಸರಿಸುತ್ತ, ಕಾಡುಗಿಚ್ಚು ಬಿದಿರುಮೆಳೆಯನ್ನು ದಹಿಸುವಂತೆ, ತಮ್ಮ ಮನೋವಾಕ್ಕಾಯಗಳಿಂದುಂಟಾದ ಪಾಪಗಳೆಲ್ಲವನ್ನೂ ದಹಿಸಿಕೊಳ್ಳುವುದುಂಟು! ಬೇರೆ ಕೆಲವು ಮಹಾತ್ಮರು, ತಮ್ಮ ಮನಸ್ಸನ್ನು ವಾಸುದೇವನಲ್ಲಿ ನೆಲೆಗೊಳಿಸಿ, ತಪಸ್ಸುಮೊದಲಾದ ನಿಯಮಗಳಿಂದ ಭಕ್ತಿಯನ್ನು ಹೆಚ್ಚಿಸಿಕೊಂಡು, ಸೂರ್ಯನು ಹಿಮವನ್ನು ನಿಗ್ರಹಿಸುವಂತೆ, ಭಕ್ತಿಮಾರ್ಗದಿಂದಲೇ ಮೋಕ್ಷವಿರೋಧಿಗಳಾದ ಪಾಪಗಳೆಲ್ಲವನ್ನೂ ಸಂಪೂರ್ಣವಾಗಿ ತೊಲಗಿಸಿಕೊಳ್ಳುವರು. ಆದರೆ ಇವುಗಳಲ್ಲಿ ಒಂದು ವಿಶೇಷವುಂಟು:- ಭಗವಂತನಲ್ಲಿಯೇ ಮನಸ್ಸಿಟ್ಟ. ಭಗವದ್ಭಕ್ತರನ್ನು ಸೇವಿಸುವುದರಿಂದಭಕ್ತಿಯನ್ನು ಅಸ್ಮನು ಹೇಗೆ ಪಾಪವಿಮುಕ್ತನಾಗುವನೋ, ಅಷ್ಟು ಸುಲಭವಾಗಿ ನಿಯಮ



155. ಯಮದೂತರು ಅಜಾಮಿಳನನ್ನು ಪಾಶಗಳಿಂದ ಬಿಗಿದು ಎಳೆಯುತ್ತಿರುವಾಗ, ವಿಷ್ಣುದೂತರು ಬಂದು ತಡೆದುದು.

ಹೀಗೆ ಅಶುಚಿಯಾಗಿ ಕಳೆದು ಬಿಟ್ಟನು. ಇಷ್ಟರಲ್ಲಿ ಇವನಿಗೆ ಹತ್ತುಮಂದಿ ಮಕ್ಕಳಾದರು. ಇವರಲ್ಲಿ ಕೊನೆಯ ಮಗನಿಗೆ ನಾರಾಯಣನೆಂದು ಹೆಸರು. ಇವನು ಇನ್ನೂ ಬಾಲನಾಗಿದ್ದುದರಿಂದ, ತಂದೆತಾಯಿಗಳಿಗೆ ಬಹಳ ಪ್ರೇಮಪಾತ್ರನಾಗಿದ್ದನು. ವೃದ್ಧನಾದ ಆ ಅಜಾಮಿಳನು, ಮುದ್ದುನುಡಿಗಳಿಂದ ಮಾತಾಡುತ್ತಿರುವ ಆ ಮಗುವಿನಲ್ಲಿಯೇ ನಟ್ಟನುನಸ್ಸುಳ್ಳವನಾಗಿ, ಆ ಮಗುವಿನ ಬಾಲಕ್ರೀಡೆಗಳನ್ನು ನೋಡಿನೋಡಿ ಸಂತೋಷಿಸುತ್ತಿದ್ದನು. ಈ ಪುತ್ರಪ್ರೇಮದಿಂದ, ತಾನು ಭುಜಿಸುವಾಗಲೆಲ್ಲಾ ಆ ಬಾಲಕನಿಗೂ ಭೋಜನವನ್ನು ಮಾಡಿಸುವನು. ತಾನು ಕುಡಿಯುವುದನ್ನೆಲ್ಲಾ ಅವನಕ್ಕೂ ಕುಡಿಸುವನು. ತಾನು ತಿನ್ನುವುದನ್ನೆಲ್ಲಾ ಅವನಕ್ಕೂ ತಿನ್ನಿಸುವನು. ಹೀಗೆ ಪುತ್ರಮೋಹದಿಂದ ಬುದ್ಧಿ ಹೀನನಾಗಿ, ತನ್ನ ಬೆನ್ನ ಹಿಂದೆ ಕಾದಿರುವ ಮೃತ್ಯುದೇವತೆಯನ್ನೂ ಕಾಣದೆ ಮೈಮರೆತಿದ್ದನು. ಕೊನೆಗೆ ಮೃತ್ಯುಕಾಲವು ಸಮೀಪಿಸಿದಾಗಲೂ ಆ ತನ್ನ ಮುದ್ದುಮಗನನ್ನೇ ಚಿಂತಿಸುತಿದ್ದನು. ಇಷ್ಟರಲ್ಲಿ ಇವನನ್ನು ಯಮಲೋಕಕ್ಕೆ ಸಾಗಿಸುವುದಕ್ಕಾಗಿ, ಭಯಂಕರಸ್ವರೂಪವುಳ್ಳ ಮೂರುಮಂದಿ ಯಮಭಟರು, ಕೈಯಲ್ಲಿ ಪಾಶವನ್ನು ಹಿಡಿದು ಬಂದು, ಇವನ ಮುಂದೆ ನಿಂತರು. ಗಂಟುಮುಖದಿಂದಲೂ, ಊರ್ಧ್ವಮುಖವಾದ ರೋಮಗಳಿಂದಲೂ ಮಹಾಭಯಂಕರಸ್ವರೂಪವುಳ್ಳ ಆ ಯಮದೂತರನ್ನು ಕಂಡೊಡನೆ, ಅಜಾಮಿಳನು ಭಯದಿಂದ ತತ್ತಳಿಸುತ್ತ, ದೂರದಲ್ಲಿ ಆಡುತ್ತನಿಂತಿದ್ದ ತನ್ನ ಮಗನನ್ನು ಸಮೀಪಕ್ಕೆ ಕರೆಯುವುದಕ್ಕಾಗಿ, "ನಾರಾಯಣಾ!" ಎಂದು ಉಚ್ಚಸ್ವರದಿಂದ ಕೂಗಿಕೊಂಡನು. ಓ ಪರೀಕ್ಷಿದ್ರಾಜಾ! ಆಗಿನ ಆಶ್ಚರ್ಯವನ್ನು ಕೇಳಬೇಕೇ! ಮರಣೋನ್ಮುಖನಾಗಿದ್ದ ಆಬ್ರಾಹ್ಮಣನಬಾಯಿಂದ, ಈ ಭಗವನ್ನಾಮವು ಹೊರಕ್ಕೆ ಬಂದೊಡನೆ, ಮಹಾತೇಜಸ್ವಿಗಳಾದ ಮೂರುಮಂದಿ ವಿಷ್ಣುದೂತರು, ತಟ್ಟನೆ ಅಂತರಿಕ್ಷದಿಂದಿಳಿದು ಬಂದು, ಇವನ ಮುಂದೆ ನಿಂತರು. ಮತ್ತು ಅಲ್ಲಿ ದಾಸೀಪತಿಯಾದ ಆ ಅಜಾಮಿಳನೆಂಬ ಪಾಪಿಜೀವನನ್ನು, ಹೃದಯದಿಂದ ಬಲಾತ್ಕಾರಪೂರ್ವಕವಾಗಿ ಎಳೆಯುತ್ತಿರುವ ಯಮದೂತರನ್ನು "ಬೇಡ ಬೇಡ" ವೆಂದು ತಡೆದು ನಿಲ್ಲಿಸಿದರು. ಆಗ ಆ ಯಮದೂತರು, ತಮ್ಮ ಕಾರ್ಯಕ್ಕೆ ಅಡ್ಡಿಯಾಗಿ ಬಂದ ಆ ವಿಷ್ಣುದೂತರನ್ನು ನೋಡಿ, ಆಶ್ಚರ್ಯದಿಂದ ಸ್ತಬ್ಧರಾಗಿ, ಹೀಗೆಂದು ಪ್ರಶ್ನೆಮಾಡುವರು "ಎಲೈ ನೀವು ಯಾರು? ಅಹಾ! ನಿಮಗೆ ಧರ್ಮರಾಜಾಜ್ಞೆಯನ್ನೂ ತಡೆಯುವಷ್ಟು ಧೈರ್ಯವೇ? ನೀವು ಯಾರ ಕಡೆಯವರು? ಎಲ್ಲಿಂದ ಬಂದಿರುವಿರಿ? ನೀವು ಇವನನ್ನು ಬಿಡಿಸುವುದಕ್ಕೆ ಕಾರಣವೇನು? ನೀವೇನು ದೇವತೆಗಳೇ? ಉಪದೇವತೆಗಳೇ? ಅಥವಾ ಸಿದ್ಧರೇ? ನಿಮ್ಮ ಕಣ್ಣುಗಳೋ ಕಮಲದಳ

ಗಳಂತೆ ಶೋಭಿಸುತ್ತಿರುವುವು! ನಿಮ್ಮ ನಡುವಿನಲ್ಲಿ ಪೀತಾಂಬರವೆಂಬ ಪಟ್ಟೆ ಮಡಿಯೂ, ತಲೆಯಲ್ಲಿ ದಿವ್ಯಕಿರೀಟವೂ, ಕಿವಿಯಲ್ಲಿ ಕರ್ಣಕುಂಡಲಗಳೂ ಒಪ್ಪುತ್ತಿರುವುವು! ಕಂಠದಲ್ಲಿ ತುಲಸೀಮಿಶ್ರವಾದ ಪದ್ಮಮಾಲಿಕೆಯು ಪ್ರಕಾಶಿಸುತ್ತಿರುವುದು! ನವಯೌವನದಿಂದ ಸುಂದರರಾದ ನಿಮಗೆ ಈ ನಾಲ್ಕು ಭುಜಗಳೇನು? ಆ ಭುಜಗಳಲ್ಲಿ ಬಾಣಬತ್ತಳಿಕೆಗಳನ್ನೂ, ಶಂಖಚಕ್ರಗದಾಪದ್ಮಗಳನ್ನೂ, ಖಡ್ಗವನ್ನೂ, ಧರಿಸಿ ದೇಹಕಾಂತಿಯಿಂದ ದಿಕ್ಕುಗಳೆಲ್ಲವನ್ನೂ ಬೆಳಗುತ್ತಿರುವಿರಲ್ಲಾ? ಇಂತಹ ಮಹಾಪುರುಷಲಕ್ಷಣವುಳ್ಳವರಾಗಿದ್ದೂ ನೀವು, ಪಾಪಿಗಳನ್ನು ಶಿಕ್ಷಿಸುವುದಕ್ಕಾಗಿ ಬಂದ ಯಮಕಿಂಕರರಾದ ನಮ್ಮನ್ನು ನಿಷೇಧಿಸುವುದು ನ್ಯಾಯವೇ? ಇದರ ಕಾರಣವನ್ನು ತಿಳಿಸಬೇಕು" ಎಂದರು ಆಗ ವಿಷ್ಣುದೂತರು, ಮಂದಹಾಸದಿಂದ ನಗುತ್ತ, ಮೇಘಧ್ವನಿಯಂತೆ ಗಂಭೀರವಾದ ಸ್ವರದಿಂದ ಪ್ರಶ್ನೆ ಮಾಡುವರು. "ಓಹೋ ನೀವು ಯಮಧರ್ಮರಾಜನ ಕಿಂಕರರಷ್ಟೇ? ಹಾಗಿದ್ದರೆ ನೀವು ಧರ್ಮಾಧರ್ಮನಿರ್ಣಯವನ್ನು ಚೆನ್ನಾಗಿ ಬಲ್ಲವರಾಗಿರಬೇಕು! ಹಾಗಿದ್ದರೆ ನಿಮಗೆ ತಿಳಿದ ಧರ್ಮಾಧರ್ಮಗಳನ್ನು ನಮಗೂ ತಿಳಿಸಬಹುದಲ್ಲವೇ? ನೀವು ಪ್ರಾಣಿಗಳನ್ನು ದಂಡಿಸತಕ್ಕವರಾಗಿದ್ದರೆ, ನಿಮ್ಮ ದಂಡನನಿಯಮಗಳೇನು? ಇವನನ್ನು ಏತಕ್ಕೋಸ್ಕರ ದಂಡಿಸಬೇಕಾಗಿರುವುದು? ಇವನ ತಪ್ಪೇನು? ಲೋಕದಲ್ಲಿ ಕರ್ಮವನ್ನು ಮಾಡಿದವರೆಲ್ಲರೂ ದಂಡನಾರ್ಹರೇ? ಅಥವಾ ಅವರಲ್ಲಿ ಕೆಲವರು ಮಾತ್ರವೇ ನಿಮ್ಮ ಶಿಕ್ಷೆಗೆ ಗುರಿಯಾಗುವರೇ? ಈ ರಹಸ್ಯವನ್ನು ತಿಳಿಸಬೇಕು" ಎಂದರು. ಆದಕ್ಕಾಗಿ ಯಮದೂತರು "ಎಲೈ! ಇದಕ್ಕಾಗಿ ಇಷ್ಟು ವಿಚಾರವೇಕೆ? ವೇದವಿಹಿತವಾದುದು ಧರ್ಮವು! ಅದಕ್ಕೆ ವಿರುದ್ಧವಾದುದೆಲ್ಲವೂ ಅಧರ್ಮವು. ಈ ಧರ್ಮಗಳನ್ನು ವಿಧಿಸತಕ್ಕ ವೇದವೆಂಬುದು, ಶ್ರೀಮನ್ನಾರಾಯಣನ ನಿಶ್ವಾಸರೂಪವಾಗಿ ಹೊರಟಿರುವುದು. ಹೀಗೆ ಸಾಕ್ಷಾನ್ನಾರಾಯಣನಿಂದಲೇ, ಆವಿರ್ಭವಿಸಿ, ಭಗವತ್ಸ್ವರೂಪದಿಂದಲೇ ಲೋಕದಲ್ಲಿವ್ಯಾಪಿಸಿರುವುದು. ಅದು ಅನಾದಿಯೆಂದೂ, ಎಂದೆಂದಿಗೂ ನಾಶವಿಲ್ಲದುದೆಂದೂ, ಇದರಲ್ಲಿಯಾವ ದೋಷಗಳನ್ನು ಶಂಕಿಸುವುದಕ್ಕೂ ಅವಕಾಶವಿಲ್ಲವೆಂದೂ ಕೇಳಿರುವೆವು. ಸರ್ವಾತ್ಮಕನಾದ ನಾರಾಯಣನು, ತನ್ನ ಸ್ವರೂಪದಲ್ಲಿಯೇ ಹೀಗೆ ವೇದವೆಂದೂ, ದೇವಮನುಷ್ಯಾದಿಗಳೆಂದೂ, ಕರೆಯಲ್ಪಡುವ ಸತ್ವರಜಸ್ತಮೋಗುಣಮಯಗಳಾದ ಪದಾರ್ಥಗಳೆಲ್ಲವನ್ನೂ, ಆಯಾಗುಣಗಳೊಡನೆಯೂ, ಆಯಾ ನಾಮಗಳೊಡನೆಯೂ, ಆಯಾ ಕ್ರಿಯೆಗಳೊಡನೆಯೂ, ಆಯಾ ರೂಪಗಳೊಡನೆಯೂ ಹೊರಕ್ಕೆ ಕಾಣಿಸುತ್ತಿರುವನು. ಆದುದರಿಂದ ಸಾಕ್ಷಾನ್ನಾರಾಯಣನೇ ವೇದಸ್ವರೂಪದಿಂದ ಧರ್ಮಾಧರ್ಮ

ಗಳನ್ನು ನಿರ್ಣಯಿಸುವನು. ಆದರೆ ಲೋಕದಲ್ಲಿ ಸಂಸಾರಿಗಳು ನಡೆಸತಕ್ಕ ಧರ್ಮಾಧರ್ಮಗಳು, ಅನೇಕವಾಗಿರುವಾಗ, ಅವೊಂದೊಂದನ್ನೂ ಕಂಡು ಹಿಡಿಯುವುದಕ್ಕೆ ನಿಮ್ಮಿಂದ ಸಾಧ್ಯವೇ" ಎಂದು ನೀವು ಕೇಳಬಹುದು. ಮನುಷ್ಯರು ಆಗಾಗ ನಡೆಸತಕ್ಕ ಧರ್ಮಾಧರ್ಮಗಳಿಗೆ ಸೂರ್ಯನೂ, ಅಗ್ನಿಯೂ, ಆಕಾಶವೂ, ದೇವತೆಗಳೂ, ಗೋವುಗಳೂ, ಚಂದ್ರನೂ, ಸಂಧ್ಯಾಕಾಲಗಳೂ, ಜಲವೂ ಭೂಮಿಯೂ, ಕಾಲವೂ ನಮ್ಮ ಪ್ರಭುವಾದ ಧರ್ಮರಾಜನೂ, ಸಾಕ್ಷೀಭೂತರಾಗಿ, ಯಾವಾಗಲೂ ಕಣ್ಣಿಟ್ಟು ಕಾದು ನೋಡುತ್ತಿರುವರು. ಇವರಿಂದ ಅವರವರು ಆಗಾಗನಡೆಸಿದಪಾಪಗಳೆಲ್ಲವೂ ತಿಳಿಯುವುದರಿಂದ ಆಯಾ ಪಾಪಕ್ಕೆ ತಕ್ಕಂತೆ ಅವರವರು ಶಿಕ್ಷೆಗೆ ಪಾತ್ರರಾಗುವರು. ಪಾಪಕ್ಕನುಸಾರವಾಗಿ ಶಿಕ್ಷೆಯೇ ಹೊರತು ಪಾಪವಿಲ್ಲದವರಿಗೆ ಶಿಕ್ಷೆಯೂ ಇರದು. ಆದರೆ ಮನುಷ್ಯನಾಗಿ ಹುಟ್ಟಿದಮೇಲೆ ಪಾಪಪುಣ್ಯಗಳೆರಡನ್ನೂ ನಡೆಸಿಯೇ ನಡಿಸುವನು. ಆದುದರಿಂದ ಆಯಾ ಪಾಪಕ್ಕೆ ತಕ್ಕಂತೆ ಅವರವರು ಆಗಾಗನಡೆಸಿದಪಾಪಗಳೆಲ್ಲವೂ ತಿಳಿಯುವುದರಿಂದ ಆಯಾಪಾಪಕ್ಕೆ ತಕ್ಕಂತೆ ಅವರವರು ಶಿಕ್ಷೆಗೆ ಪಾತ್ರರಾಗುವರು. ಪಾಪಕ್ಕನುಸಾರವಾಗಿ ಶಿಕ್ಷೆಯೇ ಹೊರತು ಪಾಪವಿಲ್ಲದವರಿಗೆ ಶಿಕ್ಷೆಯೂ ಇರದು. ಆದರೆ ಮನುಷ್ಯನಾಗಿ ಹುಟ್ಟಿದಮೇಲೆ ಪಾಪಪುಣ್ಯಗಳೆರಡನ್ನೂ ನಡೆಸಿಯೇ ನಡೆಸುವನು. ಆದುದರಿಂದ ಆಯಾ ಪಾಪಕ್ಕೆ ತಕ್ಕಂತೆ ಎಲ್ಲರೂ ದಂಡಿಸಲ್ಪಡುವರು. ದೇಹವನ್ನು ಹೊತ್ತು ಹುಟ್ಟಿದವನಾವನೂ ಕರ್ಮಗಳನ್ನು ನಡೆಸದೆ ಸುಮ್ಮನಿರಲಾರನು. ಈ ದೇಹಸಂಬಂಧವಿದ್ದಾಗ, ಸತ್ವಾದಿಗುಣಗಳ ತಾರತಮ್ಯವನ್ನನುಸರಿಸಿ, ಆಗಾಗ ಸತ್ಕರ್ಮಗಳನ್ನೂ, ದುಷ್ಕರ್ಮಗಳನ್ನೂ ನಡೆಸುತ್ತಿರುವನು. ಆಯಾ ಕರ್ಮಗಳಿಗೆ ತಕ್ಕಂತೆ ಫಲವನ್ನೂ ಅನುಭವಿಸುವನು. ಧರ್ಮವನ್ನಾಗಲೀ ಅಧರ್ಮವನ್ನಾಗಲೀ ಯಾವನು ಎಷ್ಟು ಮಟ್ಟಿಗೆ ನಡೆಸುವನೋ, ಅದಕ್ಕೆ ತಕ್ಕಂತೆಯೇ ಸುಖದುಃಖಗಳಿಗೆ ಗುರಿಯಾಗುವನೇ ಹೊರತು, ಧರ್ಮದಿಂದ ನರಕವನ್ನಾಗಲೀ, ಅಧರ್ಮದಿಂದ ಸ್ವರ್ಗವನ್ನಾಗಲೀ, ಅಲ್ಪ ಪಾಪಕ್ಕೆ ಅಪಾರ ದುಃಖವನ್ನಾಗಲೀ ಅಲ್ಪಪುಣ್ಯಕ್ಕೆ ಉತ್ತಮಸುಖವನ್ನಾಗಲೀ ಪಡೆಯಲಾರನು. ಎಲೈ ದೇವಶ್ರೇಷ್ಠರೇ! ಅವರವರು ಜನ್ಮಾಂತರದಲ್ಲಿ ನಡೆಸಿದ ಸಾತ್ವಿಕ ತಾಮಸ ರಾಜಸಗಳೆಂಬ ಕರ್ಮಭೇದಗಳನ್ನನುಸರಿಸಿ, ಇಲ್ಲಿ ಪ್ರಾಣಿಗಳು ಸುಖದುಃಖಮೋಹಗಳನ್ನನುಭವಿಸುವಂತೆ ಲೋಕಾಂತರದಲ್ಲಿಯೂ ಉಂಟೆಂದು ನಾವು ಊಹಿಸಬಹುದು. ಮನುಷ್ಯನು ಈ ಜನ್ಮದಲ್ಲಿ ಅನುಭವಿಸುವ ಸುಖದುಃಖ ಮೋಹಾದಿಗಳು ಅವನ ಹಿಂದಿನುಂದಿನ ಜನ್ಮಗಳ ಧರ್ಮಾಧರ್ಮಗಳನ್ನೂ, ಅಕರ್ಮಾಚರಣೆಗೆ

ಕಾರಣಗಳಾದ ಸತ್ವಾದಿಗುಣಗಳ ಹೆಚ್ಚು ಕಡಿಮೆಯನ್ನೂ ಸೂಚಿಸುವಂತೆ, ಈ ಜನ್ಮದಲ್ಲಿ ನಡೆಸತಕ್ಕ ಧರ್ಮಾಧರ್ಮಗಳೂ, ಅವಕ್ಕೆ ಕಾರಣಗಳಾದ ಸತ್ವಾದಿಗುಣಗಳ ಹೆಚ್ಚು ಕಡಿಮೆಯೂ, ಅವನ ಹಿಂದುಮುಂದಿನ ಜನ್ಮಗಳ ಸುಖದುಃಖಾದಿಗಳಿಗೆ ಸೂಚಕವಾಗುವುವು. ಇದಲ್ಲದೆ ಸರ್ವದಾ ಸರ್ವಹೃದಯಾಂತರ್ಯಾಮಿಯೂಗಿಯೂ ಸ್ವಯಂಪ್ರಕಾಶವುಳ್ಳವನಾಗಿಯೂ ಇರುವ ಸರ್ವೇಶ್ವರನು, ಯಾವಾಗಲೂ ಸಂಕೋಚಹೊಂದದ ತನ್ನ ಜ್ಞಾನವಿಕಾಸದಿಂದ, ಆಯಾ ಜೀವರಾಶಿಗಳು ಪೂರ್ವಜನ್ಮದಲ್ಲಿ ಮಾಡಿದ ಧರ್ಮಾಧರ್ಮಗಳೆಲ್ಲವನ್ನೂ ತಿಳಿದಿರುವನು. ಅವರವರ ಪಾಪಪುಣ್ಯಗಳಿಗೆ ತಕ್ಕಂತೆ ಅವರವರಿಗೆ ನಿಗ್ರಹಾನುಗ್ರಹಗಳನ್ನು ತೋರಿಸುತ್ತಿರುವನು. ಜೀವನು ಆಗಾಗ ನಡೆಸತಕ್ಕ ಪುಣ್ಯಪಾಪಕರ್ಮಗಳು ಉತ್ತರಕ್ಷಣದಲ್ಲಿ ನಿಲ್ಲದೆ, ಆಗಾಗಲೇ ತೀರಿಹೋದರೂ, ಆಯಾ ಕರ್ಮಗಳ ವಿಷಯದಲ್ಲಿ ಭಗವಂತನ ನಿಗ್ರಹಾನುಗ್ರಹರೂಪವಾದ ಸಂಕಲ್ಪವೆಂಬುದು, ಬೆನ್ನಟ್ಟಿ ಬರುವುದರಿಂದ, ಜೀವನು ಅದನ್ನನುಸರಿಸಿ ಕಾಲಾಂತರದಲ್ಲಿಯೂ ಸುಖದುಃಖಗಳನ್ನನುಭವಿಸುವನು. "ಹಾಗಿದ್ದರೆ ಮನುಷ್ಯನು ಶುಭಕರ್ಮಗಳನ್ನೇ ಆಚರಿಸಿ, ಭಗವದನುಗ್ರಹವನ್ನು ಸಂಪಾದಿಸಿ, ಯಾವಾಗಲೂ ಸುಖದಲ್ಲಿಯೇ ಇರಬಾರದೇ?" ಎಂದರೆ, ಅದೇನೋ ಯುಕ್ತ ಕಾರ್ಯವೇ! ಆದರೆ ಕರ್ತೃಲೆಯಲ್ಲಿರುವವನು ತನ್ನ ಹಿಂದೆಮುಂದೆ ಇರುವ ವಸ್ತುಗಳೊಂದನ್ನೂ ಕಾಣಲಾರದೆ, ತನ್ನ ಶರೀರವೊಂದನ್ನು ಮಾತ್ರ ತಿಳಿಯಬಲ್ಲನು. ಕನಸನ್ನು ಕಾಣುವವನು ಆ ತನ್ನ ನಿಜವಾದ ಶರೀರವನ್ನೂ ಮರೆತು, ಸ್ವಪ್ನದೇಹವನ್ನೂ, ಸ್ವಪ್ನಪದಾರ್ಥಗಳನ್ನೂ ತಿಳಿಯುತ್ತಿರುವನೇ ಹೊರತು ಬೇರೊಂದನ್ನೂ ಕಾಣಲಾರನು. ಹಾಗೆಯೇ ಜೀವನು ದೇಹಾಭಿಮಾನವೇ ಮೊದಲಾದ ಅಜ್ಞಾನಕ್ಕೆ ವಶನಾಗಿ, ಕರ್ಮದಲ್ಲಿಬಿದ್ದು, ಅದರಿಂದ ಜ್ಞಾನಸಂಕೋಚವನ್ನು ಹೊಂದಿದಾಗ, ಆಗ ತನಗೆ ಪ್ರತ್ಯಕ್ಷವಾಗಿ ಕಾಣುವ ತನ್ನ ದೇಹಾದಿಗಳನ್ನು ಮಾತ್ರವೇ ಚಿಂತಿಸುತ್ತಿರುವನೇ ಹೊರತು, ತನ್ನ ಹಿಂದುಮುಂದಿನ ಜನ್ಮಗಳ ಸ್ಮರಣೆಯೇ ತಪ್ಪಿಹೋಗುವುದು. ಆದುದರಿಂದ ಆಗಿನ ದೇಹದ ಪೋಷಣೆಗೆ ಬೇಕಾದ ಕರ್ಮಗಳನ್ನು ಮಾತ್ರವೇ ನಡೆಸುವನೇ ಹೊರತು, ಪರಮ ಪುರುಷನ ಅನುಗ್ರಹವನ್ನು ಸಂಪಾದಿಸುವುದಕ್ಕೆ ತಕ್ಕ ಕರ್ಮಗಳನ್ನು ನಡೆಸಲಾರನು.

ಹೀಗೆ ಜೀವರಾಶಿಗಳು ಅನಾದಿಯಾದ ಅವಿದ್ಯೆಯಿಂದ ಸ್ವಸ್ವರೂಪವನ್ನು ಮರೆತು, ಸತ್ವಾದಿಗುಣಗಳಿಂದ ಹುಟ್ಟಿದವುಗಳಾಗಿಯೂ, ಮೇಲೆ ಮೇಲೆ ಆಯಾ ಗುಣಗಳನ್ನೇ ಹೆಚ್ಚಿಸತಕ್ಕವುಗಳಾಗಿಯೂ ಇರುವ ಕರ್ಮಗಳಿಂದ ತಿರುಗಿತಿರುಗಿ ಜನ್ಮಗಳನ್ನೆತ್ತುತ್ತಿರುವುವು. ಶರೀರವನ್ನೆತ್ತಿದ ಜೀವನು ಐದು ಕರ್ಮೇಂದ್ರಿಯ

ಗಳಿಂದ ಕರ್ಮಗಳನ್ನು ಮಾಡುವನು. ಐದು ಜ್ಞಾನೇಂದ್ರಿಯಗಳಿಂದ ಶಬ್ದಾದಿ ವಿಷಯಗಳನ್ನು ತಿಳಿಯುತ್ತಿರುವನು. ಪಂಚಭೂತಗಳಿಂದೇರ್ಪಟ್ಟ ದೇಹದಲ್ಲಿ ಒಳ ಹೊಕ್ಕಿರುವನು. ಮೇಲೆಹೇಳಿದ ಐದು ಕರ್ಮೇಂದ್ರಿಯಗಳಿಗಿಂತಲೂ, ಐದು ಜ್ಞಾನೇಂದ್ರಿಯಗಳಿಗಿಂತಲೂ, ಪಂಚಮಹಾಭೂತಗಳಿಗಿಂತಲೂ ಬೇರೆಯಾಗಿ, ಹದಿನಾರನೆಯದೆನಿಸಿಕೊಂಡ ಮನಸ್ಸೆಂಬುದು, ಕರ್ಮೇಂದ್ರಿಯಗಳ ಕಾರ್ಯಕ್ಕೂ ಜ್ಞಾನೇಂದ್ರಿಯಗಳ ತಿಳುವಳಿಕೆಗೂ ಪ್ರೇರಕವಾಗಿರುವುದು. ಮೇಲೆ ಹೇಳಿದ ಈ ಹದಿನಾರು ತತ್ವಗಳಿಂದಲೂ ಬೇರೆಯಾಗಿ, ಹದಿನೇಳನೆಯದೆನಿಸಿಕೊಂಡ ಜೀವವು, ತಾನು ಏಕಾಕಿಯಾಗಿದ್ದರೂ, ಆ ಮನಸ್ಸಂಬಂಧದಿಂದ ಇಂದ್ರಿಯ ವ್ಯಾಪಾರಗಳಲ್ಲಿ ಬಿದ್ದು, ತಾನು ಸುಖದುಃಖಮೋಹಾದಿಗಳಿಗೆ ಗುರಿಯಾಗುವುದು. ಮೇಲೆಹೇಳಿದ ಹತ್ತು ಇಂದ್ರಿಯಗಳು, ಪಂಚಭೂತಗಳು, ಮನಸ್ಸು, ಎಂಬೀ ಹದಿನಾರು ಅವಯವಗಳಿಂದಲೂ, ಅವಿದ್ಯೆ, ಕರ್ಮ, ವಾಸನೆಯೆಂಬ ಮೂರುಬಗೆಯ ಶಕ್ತಿಗಳಿಂದಲೂ ಕೂಡಿದ ಲಿಂಗಶರೀರವೆಂಬುದು. ಜೀವನನ್ನು ಜನ್ಮಜನ್ಮಕ್ಕೂ ಅಂಟಿಬರುತ್ತ, ಕಾರ್ಯದಶೆಯಲ್ಲಿ ಸ್ಥೂಲಾಕಾರವನ್ನು ಹೊಂದಿಕಾಣುವುದು ಈಸೂಕ್ಷ್ಮ ಶರೀರವೇ ಆಗಾಗ ಜೀವನಿಗೆ ಹರ್ಷ ಶೋಕಭಯಾದಿಗಳಿಗೆ ಕಾರಣವಾಗಿಯೂ ಗರ್ಭವಾಸ ಜರಾಮರಣಾದಿಗಳಲ್ಲಿ ಸುತ್ತಿಸತಕ್ಕುದಾಗಿಯೂ ಇರುವ ಸಂಸಾರವನ್ನು ತಗುಲು ಕಟ್ಟುವುದು ಈವಿಧವಾಗಿ ದೇಹಸಂಬಂಧವನ್ನು ಹೊಂದಿದ ಜೀವನು. ಆದೇಹವನ್ನೇ ಆತ್ಮವೆಂದು ಭ್ರಮಿಸಿ, ಇಂದ್ರಿಯಗಳನ್ನೂ ಮನಸ್ಸನ್ನೂ ಜಯಿಸಲಾರದೆ, ತಾನೇ ಅವುಗಳಿಗೆ ವಶನಾಗಿ ಅವು ಎಳೆದಹಾಗೆ ಹೋಗುವನು. ಇವುಗಳ ಸಂಬಂಧದಿಂದ ಬಲಾತ್ಕಾರಪೂರ್ವಕವಾಗಿ, ಪುಣ್ಯಕರ್ಮಗಳನ್ನೂ ಮಾಡುವನು. ಪಟ್ಟೆಯ ಹುಳುವಿನಂತೆ ತಾನಾಗಿ ಮಾಡಿದ ಕರ್ಮಗಳಿಂದ, ತನ್ನ ಸ್ವರೂಪವನ್ನು ತಾನೇ ಮರೆಸಿಕೊಂಡು, ದೇಹವನ್ನೇ ಆತ್ಮನೆಂದು ಭ್ರಮಿಸುವನು. ದೇಹವನ್ನು ಹೊತ್ತ ಯಾವಜೀವನೂ ಕೆಲಸವಾಡದೆ ಸುಮ್ಮನಿರಲಾರನು. ಯಾವುದೂ ಇಲ್ಲದಿದ್ದರೆ ಕೊನೆಗೆ ಕೂದಲನ್ನಾದರೂ ಕೀಳುತ್ತಿರುವನು. ಅನಾದಿಯಾಗಿ ಏರ್ಪಟ್ಟಿರುವ ಸತ್ವಾದಿಗುಣಗಳಿಂದ, ಬಲಾತ್ಕಾರಪೂರ್ವಕವಾಗಿ ಯಾವುದಾದರೂ ಒಂದು ಕಾರ್ಯದಲ್ಲಿ ಪ್ರೇರಿಸಲ್ಪಡುವನು. ಜನನಮರಣಗಳಿಗೆ ಹೇತುವಾದ ಆಯಾ ಕರ್ಮಾನುಸಾರವಾಗಿಯೇ ಪ್ರಕೃತಿಯೆಂಬುದು, ಒಮ್ಮೊಮ್ಮೆ ಮೇಲೆ ಹೇಳಿದ ಹದಿನಾರುತತ್ವಗಳೊಡನೆ ಅವ್ಯಕ್ತವಾಗಿದ್ದು, ಮತ್ತೊಮ್ಮೆ ದೇವಮನುಷ್ಯಾದಿ ದೇಹರೂಪದಿಂದ ಸ್ಥೂಲಾಕಾರವನ್ನು ಹೊಂದಿ ವ್ಯಕ್ತವಾಗಿ ಕಾಣಿಸುವುದು. ಇರುಹೆ ಮೊದಲಾದ ಸೂಕ್ಷ್ಮಶರೀರಗಳಾಗಲೀ, ಆನೆ ಮೊದಲಾದ ಸ್ಥೂಲಶರೀರ

ಗಳಾಗಲೀ, ಕರ್ಮತಾರತಮ್ಯದಿಂದಲೇ ಉಂಟಾಗುವುವು. ಈ ದೇಹಗಳು ಹುಟ್ಟುವಾಗ, ತಮ್ಮ ಉತ್ಪತ್ತಿಗೆ ಕಾರಣಗಳಾದ ತಾಯ್ತಂದೆಗಳ ಆಕಾರವನ್ನನುಸರಿಸಿ ಹುಟ್ಟುವುವು. ಜೀವಾತ್ಮಗಳು, ಸಾತ್ವಿಕ ರಾಜಸ ತಾಮಸಗಳೆಂಬ ಮೂರುಬಗೆಯ ಕರ್ಮವಾಸನೆಯನ್ನು ಬಿಡಲಾರದೆ, ಆಯಾ ಸ್ವಭಾವಕ್ಕೆ ತಕ್ಕ ಕರ್ಮಗಳನ್ನು ನಡೆಸಿ, ಆಯಾ ಕರ್ಮಗಳಿಗೆ ತಕ್ಕ ಶರೀರವನ್ನೂ ಹೊಂದುವುವು. ಎಲೈ ವಿಷ್ಣು ದೂತರೇ! ಜೀವನಿಗೆ ಪ್ರಕೃತಿ ಸಂಬಂಧದಿಂದುಂಟಾಗತಕ್ಕ ಸಂಸಾರವೆಂಬುದು ಈ ವಿಧವಾಗಿರುವುದು. ಹೀಗೆ ಜೀವನಿಗೆ ಸಹಜವಲ್ಲದೆ, ಆಗಂತುಕವಾಗಿ ಬಂದು ತಗುಲು ಕಟ್ಟಿದ ಈ ಸಂಸಾರವೆಂಬುದು, ಭಗವದ್ಭಕ್ತಿಯೊಂದರಿಂದ ನಿರ್ಮೂಲವಾಗಿ ನಾಶ ಹೊಂದಬಹುದು. ನಾವು ಈ ಬ್ರಾಹ್ಮಣನನ್ನು ಹಿಡಿದು ಸಾಗಿಸುವುದಕ್ಕೆ ಕಾರಣ ವೇನೆಂದು ಕೇಳಿದಿರಲ್ಲವೇ ? ಆ ಕಾರಣವನ್ನು ತಿಳಿಸುವೆನು ಕೇಳಿರಿ! ಈ ಅಜಾಮಿಳನು ವೇದಶಾಸ್ತ್ರಗಳನ್ನು ಚೆನ್ನಾಗಿಬಲ್ಲವನು. ಸೌಶೀಲ್ಯದಲ್ಲಿಯೂ, ಸದಾಚಾರದಲ್ಲಿಯೂ, ಶಮದಮಾದಿಗುಣಗಳಲ್ಲಿಯೂ ಪೆಸರುಗೊಂಡವನು. ಸ್ತ್ರೀಯರ ಮುಖವನ್ನು ಕಣ್ಣೆತ್ತಿಯೂನೋಡದೆ, ದೃಢವಾದ ಬ್ರಹ್ಮಚರ್ಯೆಯಲ್ಲಿಯೇ ಇದ್ದವನು. ಯಾವಾಗಲೂ ಪ್ರಿಯವನ್ನೇ ನುಡಿಯುತ್ತಿದ್ದನು. ಎಂತಹ ಸಂದರ್ಭಗಳಲ್ಲಿಯೂ ಸುಳ್ಳಾಡುತಿದ್ದವನಲ್ಲ. ಸಾವಿತ್ರಿಮೊದಲಾದಮಂತ್ರಗಳೆಲ್ಲವನ್ನೂ ಬಲ್ಲವನು. ಗುರುಹಿರಿಯರನ್ನೂ, ಅತಿಥಿಗಳನ್ನೂ, ಅಗ್ನಿಯನ್ನೂ ಆರಾಧಿಸುತ್ತಿದ್ದವನು. ಇಷ್ಟು ಗುಣಾಢ್ಯನಾಗಿದ್ದರೂ ಗರ್ವಹೀನನಾಗಿ ಪರೋಪಕಾರಿಯಾಗಿದ್ದನು. ಹೆಚ್ಚುಮಾತಿಗೆ ಹೋಗುತ್ತಿದ್ದವನಲ್ಲ! ಅಸೂಯೆಯಿಲ್ಲದವನು. ಇಷ್ಟು ಗುಣಾಢ್ಯನಾಗಿದ್ದ ಈ ಬ್ರಾಹ್ಮಣನು, ಒಮ್ಮೆ ತನ್ನ ತಂದೆಯ ನಿಯಮಾನುಸಾರವಾಗಿ ಫಲಪುಷ್ಪಗಳನ್ನೂ, ಸಮಿತ್ತುಗಳನ್ನೂ, ದರ್ಭೆಗಳನ್ನೂ ತರುವುದಕ್ಕಾಗಿ ಕಾಡಿಗೆ ಹೋದನು. ಇವೆಲ್ಲವನ್ನೂ ಸಂಗ್ರಹಿಸಿಕೊಂಡು ಅಲ್ಲಿಂದ ಹಿಂತಿರುಗಿ ಬರುವಷ್ಟರಲ್ಲಿ, ಆಕಾಡಿನಲ್ಲಿ ಶೂದ್ರನೊಬ್ಬನು ತನ್ನ ಪತ್ನಿಯೊಡನೆ ಕಾಮಾಂಧನಾಗಿ ತಿರುಗುತಿದ್ದುದನ್ನು ಕಂಡನು. ಆಹೆಂಗಸೂಕೂಡ ಮದ್ಯಪಾನದಿಂದ ಮತ್ತೇರಿ, ತೊಳಲುವ ಕಣ್ಣುಗಳುಳ್ಳವಳಾಗಿ ಮೈಮೇಲೆ ಪ್ರಜ್ಞೆಯಿಲ್ಲದೆ, ಮೈಮೇಲಿನಬಟ್ಟೆಯು ಜಾರಿಹೋದುದನ್ನೂ, ಕಾಣದೆ, ಮೂನದಮೇಲೆಯೂ ದೃಷ್ಟಿಯಿಲ್ಲದೆ, ಲಜ್ಜಾಹೀನಳಾಗಿ, ಹಾಡುತ್ತಲೂ, ಕುಣಿಯುತ್ತಲೂ, ನಗುತ್ತಲೂ ಬಂದು, ಆಗಾಗ ಆ ಶೂದ್ರನ ಮೇಲೆ ಬೀಳುತ್ತಿದ್ದಳು. ಇವರಿಬ್ಬರೂ ಹೀಗೆ ಆಗಾಗ ಒಬ್ಬರನ್ನೊಬ್ಬರು ಆಲಿಂಗಿಸಿಕೊಳ್ಳುವುದು, ಆಗಾಗ ಮುಖವನ್ನೆತ್ತಿ ಮುತ್ತಿಕ್ಕುವುದು, ಇವೇ ಮೊದಲಾದ ಆಟಗಳಿಂದ ಗ್ರಾಮ್ಯಪಶುಗಳಂತೆ ಕ್ರೀಡಿಸುತ್ತಿದ್ದರು. ಈ ಲೀಲೆಗಳನ್ನು ಕಂಡೊಡನೆ

ಜಾಮಿಳನ ಮನಸ್ಸು ಕದಲಿತು. ದುರದೃಷ್ಟವಶದಿಂದ ವನೂ ಕಾಮುಕನಾಗಿ ಆ ಶೂದ್ರಸ್ತ್ರೀಯಲ್ಲಿ ಕಣ್ಣಿಟ್ಟನು, ಗಲೂ, ಆ ಬ್ರಾಹ್ಮಣಕುಮಾರನು, ಹಿಂದೆ ತಾನು ಗುರುಮುಖನಾಗಿ ಉಪದೇಶಹೊಂದಿದ ಕ್ರಮದಿಂದ ತನ್ನ ಮನಸ್ಸನ್ನು ನಿಗ್ರಹಿಸುವುದಕ್ಕಾಗಿ, ತ್ನಿಂದಾದಮಟ್ಟಿಗೆ ವಿವೇಕದಿಂದ ಮನಸ್ಸನ್ನು ಸ್ಥಿರಪಡಿಸುವುದಕ್ಕೆ ಯತ್ನಿಸಿದರೂ, ಕಾಮುಕೀಡಿತವಾದ ಮನಸ್ಸನ್ನು ತಡೆದಿಡಲಾರದೆ ಹೋದನು. ಇವನಿಗೆ ದಾಸಿಯ ನಿಮಿತ್ತವಾದ ಮನ್ಮಥಪಿಶಾಚದಿಂದ ತನ್ನ ತಪ್ಪು ಪೂರ್ವಸ್ಥಿತಿಯೇ ನುರೆತುಹೋಗುವಂತಾಗಿ, ಅನವರತವೂ ಅವಳನ್ನೇ ಧ್ಯಾನಿಸುತ್ತಿದ್ದನು. ಸಂಧ್ಯಾವಂದನಾದಿಕರ್ಮಗಳೆಲ್ಲವನ್ನೂ ಬಿಟ್ಟುಬಿಟ್ಟನು. ತನ್ನ ತಂದೆಯು ಸಂಪಾದಿಸಿತಂದ ಹಣದಿಂದ, ಅಲ್ಲಲ್ಲಿ ಮನೋಹರಗಳಾದ ವಸ್ತುಗಳನ್ನು ಕೊಂಡುಕೊಂಡು, ಆ ದಾಸಿಗೆ ತಂದುಕೊಟ್ಟು, ಅವಳನ್ನು ನಾನಾವಿಧದಿಂದ ಸಂತೋಷಗೊಳಿಸುತ್ತಿದ್ದನು. ಅವಳು ತನ್ನನ್ನು ಒಂದಾವರ್ತಿ ಕಡೆಗಣ್ಣಿನಿಂದ ನೋಡಿದಮಾತ್ರಕ್ಕೆ ಹಿಗ್ಗುತ್ತಿದ್ದನು. ಇವನ ವಿವೇಕವೆಲ್ಲವೂ ಕೆಟ್ಟಿತು. ಕೇವಲ ಪಾಪಾಚಾರಪರನಾಗಿ, ಸತ್ಕುಲಪ್ರಸೂತೆಯಾಗಿಯೂ ಪರಮಸೌಂದರ್ಯವತಿಯಾಗಿಯೂ ಇದ್ದ ತನ್ನ ಕೈಹಿಡಿದ ಹೆಂಡತಿಯನ್ನು, ಅವಳು ರಜಸ್ವಲೆಯಾಗುವುದಕ್ಕೆ ಮೊದಲೇ ಪರಿತ್ಯಜಿಸಿಬಿಟ್ಟನು. ಕೇವಲಮೂಢಬುದ್ಧಿಯುಳ್ಳವನಾಗಿ, ಇದೇರೀತಿಯಲ್ಲಿ ತನ್ನ ಪಿತ್ರಾರ್ಜಿತವಾದ ಹಣವೆಲ್ಲವನ್ನೂ ಕಳೆದುಕೊಂಡಮೇಲೆ, ದುರ್ವ್ಯಾಪಾರಗಳಿಂದ ಅಲ್ಲಲ್ಲಿ ಹಣವನ್ನು ಸಂಪಾದಿಸಿ ತಂದು, ಆ ದಾಸಿಯನ್ನೂ, ಅವಳಲ್ಲಿ ಹುಟ್ಟಿದ ಮಕ್ಕಳನ್ನೂ ಪೋಷಿಸುತ್ತಬಂದನು. ಹೀಗೆ ಅಜಾಮಿಳನು, ಶಾಸ್ತ್ರಮರ್ಯಾದೆಯನ್ನು ಮೀರಿ ಸ್ವೇಚ್ಛಾಚಾರಿಯಾಗಿ ನಡೆಯುತ್ತ, ಸಜ್ಜನನಿಂದ್ಯವಾದ ದಾರಿಯಲ್ಲಿಯೇ ನಡೆಯುತ್ತಿದ್ದನು. ಈ ಪಾಪಕಾರ್ಯಗಳಿಂದಲೇ ತನ್ನ ಆಯುಃಕಾಲವೆಲ್ಲವನ್ನೂ ಕಳೆದುಬಿಟ್ಟನೇ ಹೊರತು, ಈ ಪಾಪಕ್ಕಾಗಿ ಪ್ರಾಯಶ್ಚಿತ್ತವನ್ನೂ ಮಾಡಿಕೊಂಡವನಲ್ಲ. ಆದುದರಿಂದ ಪಾಪಿಯಾದ ಇವನನ್ನು ನಮ್ಮಪ್ರಭುವಾದ ಯಮನ ಬಳಿಗೆ ಸಾಗಿಸುವುದಕ್ಕಾಗಿಯೇ ನಾವು ಇಲ್ಲಿಗೆಬಂದೆವು. ಅಲ್ಲಿನ ನರಕಯಾತನೆಗಳನ್ನು ಅನುಭವಿಸಿದಹೊರತು ಇವನಿಗೆಶುದ್ಧಿಯಿಲ್ಲ. ಆ ನರಕಶಿಕ್ಷೆಯೇ ಇವನಿಗೆ ಪ್ರಾಯಶ್ಚಿತ್ತವು" ಎಂದರು. ಇದು ಮೊದಲನೆಯ ಅಧ್ಯಾಯವು.

---

ವಿಷ್ಣುದೂತರು ವಿಷ್ಣುನಾಮದ ಮಹಿಮೆಯನ್ನು ಹೇಳಿ ಅಜಾಮಿಳನನ್ನು ಬಿಡಿಸಿದುದು. ಅಜಾಮಿಳನು ತನ್ನ ಪಾಪಕ್ಕಾಗಿ ಪಶ್ಚಾತ್ತಾಪಪಟ್ಟುದು.

ರಾಜೇಂದ್ರಾ! ಕೇಳು! ವಿಷ್ಣುದೂತರು ಧರ್ಮಜ್ಞರಾದುದರಿಂದ, ಈಮಾತನ್ನು ಕೇಳಿ ಆಶ್ಚರ್ಯವನ್ನು ತೋರಿಸುತ್ತ, ಆ ಯಮಭಟರನ್ನು ಕುರಿತು, "ಅಹಾ! ಏನಿದು! ಧರ್ಮರಾಜನ ಸಭೆಯಲ್ಲಿಯೂ ಅಧರ್ಮವು ಕಾಲಿಟ್ಟಿರುವಂತಿದೆ! ಶಿಕ್ಷಾರ್ಹರಲ್ಲದ ನಿರಪರಾಧಿಗಳನ್ನು ಶಿಕ್ಷಿಸುವುದು ನಿಮಗೆ ಧರ್ಮವೇ? ಆಹಾ! ಇದಕ್ಕಿಂತಲೂ ಅನ್ಯಾಯವೇನುಂಟು! ಪ್ರಜೆಗಳನ್ನು ದಂಡಿಸುವ ಅಧಿಕಾರವು ನಿಮ್ಮಲ್ಲಿರುವುದು! ನೀವು ಪಕ್ಷಪಾತವಿಲ್ಲದವರೆಂದು ಹೆಸರುಗೊಂಡವರು! ಮತ್ತು ಪಾಪಿಗಳನ್ನು ಶಿಕ್ಷಿಸಿ ಆ ಮೂಲಕವಾದ ಪ್ರಾಯಶ್ಚಿತ್ತದಿಂದ ಅವರಿಗೆ ಶ್ರೇಯಸ್ಸನ್ನುಂಟುಮಾಡತಕ್ಕವರು! ಸಕಲ ಜೀವಗಳನ್ನೂ ಸಮದೃಷ್ಟಿಯಿಂದ ನೋಡತಕ್ಕ ನೀವೇ ಹೀಗೆ, ಪೂರ್ವೋತ್ತರಗಳನ್ನು ವಿಚಾರಮಾಡದೆ, ನಿರಪರಾಧಿಗಳನ್ನು ದಂಡಿಸಿ ವೈಷಮ್ಯವನ್ನು ತೋರಿಸುವಪಕ್ಷದಲ್ಲಿ. ಪ್ರಾಣಿಗಳು ಬೇರೆ ಯಾರನ್ನು ಶರಣುಹೊಂದುವರು? ಇದಲ್ಲದೆ ನೀವು ಎಲ್ಲವನ್ನೂ ಬಲ್ಲವರು! ಮತ್ತು ಪೂಜ್ಯರು! ಲೋಕದಲ್ಲಿ ವಿವೇಕಿಗಳಾದ ನಿಮ್ಮಂತಹ ಹಿರಿಯರು ಯಾವರೀತಿಯಾಗಿ ನಡೆಯುವರೋ, ಇತರರೂ ಆ ಮಾರ್ಗವನ್ನೇ ಅನುವರ್ತಿಸುವರು. ದೊಡ್ಡವರ ನಡತೆಯೇ ಲೋಕಕ್ಕೆ ಪ್ರಮಾಣವಾಗುವುದು. ಹೀಗೆ ತಮ್ಮ ನಡತೆಯಿಂದಲೇ ಲೋಕಕ್ಕೆ ಧರ್ಮಾಧರ್ಮಗಳನ್ನು ಬೋಧಿಸತಕ್ಕವರಾಗಿಯೂ, ವೇದವಿಧಿಗಳನ್ನು ಮೀರದೆ ನಡೆಯತಕ್ಕವರಾಗಿಯೂ ಇರುವ ನಿಮ್ಮಂತವರು, ನಿರಪರಾಧಿಗಳನ್ನು ದಂಡಿಸುವುದು ಯುಕ್ತವೇ? ನಂಬಿ ಬಂದು ತೊಡೆಯಮೇಲೆ ಮಲಗಿ ನಿದ್ರೆಹೋಗುವವರನ್ನು ಕತ್ತಿಯಿಂದಿರಿದು ಕೊಲ್ಲುವುದು ಯುಕ್ತವೇ? ದಯಾಳುಗಳಾದವರು ನಂಬಿದವರಿಗೆ ಎಂದಿಗೂ ದ್ರೋಹವನ್ನೆಣಿಸಲಾರರು. ನಿಮ್ಮ ಪ್ರಭುವಾದ ಧರ್ಮರಾಜನು, ಸಮವರ್ತಿಯೆನಿಸಿಕೊಂಡಿರುವುದರಿಂದ, ನಿರಪರಾಧಿಗಳನ್ನು ದಂಡಿಸಲಾರನೆಂದು ಲೋಕವೆಲ್ಲವೂ ಅವನಲ್ಲಿ ನಂಬಿಕೆಯನ್ನಿಟ್ಟಿರುವುದು. ಇಂತಹ ಸ್ಥಿತಿಯಲ್ಲಿ ಅವನ ನಿರಪರಾಧಿಗಳನ್ನು ದಂಡಿಸಿದರೆ ವಿಶ್ವಾಸಘಾತುಕನೆನಿಸುವುದಿಲ್ಲವೇ?" "ಪರಮಪಾಪಿಷ್ಠನಾದ ಈ ಅಜಾಮಿಳನನ್ನು ದಂಡಿಸುವುದರಿಂದ ತಪ್ಪೇನು?" ಎಂದು ನೀವು ಕೇಳಬಹುದು ಹಾಗಲ್ಲ! ಇವನು ಎಷ್ಟೇಪಾಪಗಳನ್ನು ನಡೆಸಿದ್ದರೂ ಮೊತ್ತಕ್ಕೆ ಆಪಗಳಿಗೆಲ್ಲಾ ಪ್ರಾಯಶ್ಚಿತ್ತವನ್ನೂ ಮಾಡಿಕೊಂಡಿರುವನು. ಇವನು ಕೋಟಿಜನ್ಮಗಳಲ್ಲಿ ಮಾಡಿದ ಪಾಪಗಳೂ ಅದರಿಂದ ಕಳೆದುಹೋಗಿರುವುವು. ಇವನು ಮರಣ

ಕಾಲದಲ್ಲಿ "ನಾರಾಯಣಾ" ಎಂಬ ನಾಲ್ಕಕ್ಷರಗಳನ್ನು ಬಾಯಿಂದುಚ್ಚರಿಸಿದನಲ್ಲವೇ? ಆ ವಿಷ್ಣು ನಾಮೋಚ್ಚಾರಣವೇ ಇವನ ಸಮಸ್ತಪಾಪಗಳಿಗೂ ಪ್ರಾಯಶ್ಚಿತ್ತವೆಂದೆಣಿಸಿರಿ! ಸ್ವರ್ಣಸ್ತೇಯ, ಸುರಾಪಾನ, ಮಿತ್ರದ್ರೋಹ, ಬ್ರಹ್ಮಹತ್ಯೆ, ಗುರುದಾರ ಪರಿಗ್ರಹ, ಸ್ತ್ರೀಹತ್ಯೆ, ಶಿಶುಹತ್ಯೆ, ರಾಜಹತ್ಯೆ, ತಂದೆತಾಯಿಗಳನ್ನು ಕೊಲ್ಲುವುದು, ಇವೇಮೊದ್ಲಾಗಿ ಇನ್ನೂ ಅನೇಕ ಮಹಾಪಾಪಗಳನ್ನು ಮಾಡಿದವರೂಕೂಡ, ಒಂದಾವರ್ತಿ ಆ ಶ್ರೀಹರಿಯ ನಾಮಾಕ್ಷರಗಳನ್ನು ಚ್ಚರಿಸಿದಮಾತ್ರಕ್ಕೆ ಪಾಪವಿಮುಕ್ತರಾಗುವರು. ಅವರ ಸಮಸ್ತಪಾಪಗಳಿಗೂ ಅದೊಂದೇ ಪ್ರಾಯಶ್ಚಿತ್ತವು. ಯಾವವಿಧದಿಂದಲಾದರೂ ಆ ಹರಿನಾಮವು ಬಾಯಿಂದ ಹೊರಟರೆ, ಅವರಿಗೆ ಆ ಶ್ರೀಹರಿಯನ್ನು ಮನಸ್ಸಿನಲ್ಲಿ ಧ್ಯಾನಿಸಬೇಕೆಂಬ ಬುದ್ಧಿಯೂ ಹುಟ್ಟುವುದು. ಕ್ರಮಕ್ರಮವಾಗಿ ಆ ಹರಿಸ್ಮರಣವೇ ಮೋಕ್ಷಕ್ಕೂ ದಾರಿಯಾಗುವುದು. ಈ ಭಗವನ್ನಾಮೋಚ್ಚಾರಣದಿಂದ ಪಾಪಶುದ್ಧಿಯುಂಟಾಗುವಂತೆ, ವೇದಾಧ್ಯಯನದಿಂದಾಗಲೀ, ಚಾಂದ್ರಾಯಣಾದಿ ವ್ರತಗಳಿಂದಾಗಲೀ, ತಪಸ್ಸಿನಿಂದಾಗಲೀ ಶುದ್ಧಿಯುಂಟಾಗಲಾರದು. ಬ್ರಹ್ಮವಾದಿಗಳು ಹೇಳಿರುವ ಬೇರೆ ಯಾವವಿಧವಾದ ಪ್ರಾಯಶ್ಚಿತ್ತಗಳೂ, ವಿಷ್ಣು ನಾಮೋಚ್ಚಾರಣವೆಂಬ ಪ್ರಾಯಶ್ಚಿತ್ತಕ್ಕೆ ಈಡಾಗಲಾರವು. ಏಕೆಂದರೆ, ಒಂದು ಪಾಪಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡಮೇಲೆಯೂ, ಮನಸ್ಸು ಬೇರೊಂದು ಪಾಪಮಾರ್ಗದಲ್ಲಿ ಪ್ರವರ್ತಿಸಬಹುದು! ಆದುದರಿಂದ ಮನಃಶುದ್ಧಿಯನ್ನು ಹೊಂದಿ, ಪಾಪವನ್ನು ನಿರ್ಮೂಲವಾಗಿ ನಾಶಮಾಡಿಕೊಳ್ಳಬೇಕೆಂಬ ಅಪೇಕ್ಷೆಯುಳ್ಳವರಿಗೆ, ಭಗವಂತನ ಕಲ್ಯಾಣಗುಣಗಳನ್ನು ಪ್ರಕಾಶಗೊಳಿಸತಕ್ಕ ಆತನ ನಾಮಗಳನ್ನು ಉಚ್ಚರಿಸುವುದೇ ಮೇಲಾದ ಪ್ರಾಯಶ್ಚಿತ್ತವು. ಅದು ಸುಜ್ಞಾನಕ್ಕೆ ಮೂಲವಾದ ಸತ್ವಗುಣವನ್ನು ಹೆಚ್ಚಿಸುವುದು. ಆದುದರಿಂದ ಓ ಯಮಭಟರೇ! ಈ ಅಜಾಮಿಳನು ಸಾಯುವ ಸ್ಥಿತಿಯಲ್ಲಿ ಭಗವನ್ನಾಮವನ್ನು ಚ್ಚರಿಸಿದುದನ್ನು ನೀವೂ ಕೇಳಿರುವಿರಲ್ಲವೇ? ಇದರಿಂದ ಅವನ ಸಮಸ್ತಪಾಪಗಳಿಗೂ ಪ್ರಾಯಶ್ಚಿತ್ತವು ನಡೆದು ಹೋಯಿತು! ನೀವು ಅವನನ್ನು ಯಮಲೋಕಕ್ಕೆಳೆಯುವುದು ಯುಕ್ತವಲ್ಲ. "ಆದರೆ ಈ ಅಜಾಮಿಳನು ಸಾಯುವಾಗಲೂ ಪುತ್ರಮೋಹದಿಂದ, ತನ್ನ ಮಗನ ಹೆಸರನ್ನು ಹಿಡಿದು ಕೂಗಿ ಕರೆದಮಾತ್ರಕ್ಕೆ ಭಗವಂತನ ನಾಮೋಚ್ಚಾರಣವನ್ನು ಮಾಡಿದಹಾಗಾಯಿತೇ"? ಎಂದು ನೀವು ಸಂದೇಹಿಸಬಹುದು. ಅದು ಹಾಗಲ್ಲ! ಸಂಕೇತದಿಂದಾಗಲೀ, (ಮತ್ತೊಬ್ಬರ ಹೆಸರನ್ನು ಹಿಡಿದು ಕರೆಯುವುದು) ಪರಿಹಾಸದಿಂದಾಗಲೀ, ನಾಲಗೆ ತೊಡಲುವುದರಿಂದಾದಲೀ, ಕ್ರೋಧಾವೇತದಿಂದಾಗಲೀ, ತಿರಸ್ಕಾರಭಾವದಿಂದಾಗಲೀ, ಭಗ

ವನ್ನಾಮವು ಒಂದಾವರ್ತಿ ಬಾಯಿಂದ ಹೊರಟಮಾತ್ರಕ್ಕೆ ಅದುಸಮಸ್ತಪಾಪಗಳನ್ನೂ ನೀಗಿಸುವುದೆಂದು ಹಿರಿಯರು ಹೇಳುವರು. ಹಾಗೆಯೇ ಈ ಅಜಾಮಿಳನು, ತನ್ನ ಮಗನ ಹೆಸರನ್ನು ಹಿಡಿದು ಕರೆಯುವ ನೆವದಿಂದ, ಆ ಹರಿನಾಮವನ್ನು ಚ್ಚರಿಸಿದ್ದರೂ, ಅದರಿಂದಲೇ ಇವನ ಪಾಪಗಳೆಲ್ಲವೂ ನೀಗಿರುವುವು. ಮತ್ತು ಮೇಲಿಂದ ಬೀಳುವುದು, ಎಡವುದು, ಮೈಮುರಿಯುವುದು, ಸರ್ಪಾದಿಗಳಿಂದ ಕಚ್ಚಲ್ಪಡುವುದು, ಜ್ವರಾದಿಗಳಿಂದ ಸಂಕಟಪಡುವುದು ಇವೇ ಮೊದಲಾದ ಆಪತ್ಕಾಲಗಳಲ್ಲಿ, ಯಾವಾತನು ಮೈಮರೆತಾದರೂ ಒಂದಾವರ್ತಿ "ಹರಿ" ಎಂಬ ಎರಡಕ್ಷರಗಳನ್ನು ಬಾಯಿಂದ ನುಡಿಯುವನೋ, ಅವನು ಅಕ್ಷಣವೇಪಾಪಮಾಡಿದ್ದರೂ, ಯಮಯಾತನೆಗಳಿಗೆ ಗುರಿಯಾಗತಕ್ಕವನಲ್ಲ! ಪುರಾತನಮಹರ್ಷಿಗಳು ಆಯಾ ಪಾಪಗಳ ಹೆಚ್ಚುಕಡಿಮೆಗೆ ತಕ್ಕಂತೆ, ಪ್ರಾಯಶ್ಚಿತ್ತಗಳನ್ನೂ ಸ್ಪಷ್ಟವಾಗಿಯೂ ದೊಡ್ಡದಾಗಿಯೂ ವಿಧಿಸಿರುವರು. ತಪಸ್ಸು, ದಾನ, ಜಪಮೊದಲಾದುವುಗಳಿಂದ ಅನೇಕ ಪಾಪಗಳು ನೀಗುವುವು. ಆದರೆ ಆ ಪ್ರಾಯಶ್ಚಿತ್ತಗಳು ಆಯಾ ಕಾಲದ ಪಾಪಗಳನ್ನುಮಾತ್ರ ನೀಗಿಸುವುವೇಹೊರತು, ಆ ಪಾಪಕ್ಕೆ ಉತ್ಪತ್ತಿಸ್ಥಾನವಾದ ಮನಸ್ಸನ್ನು ಶುದ್ಧಿಗೊಳಿಸಲಾರದು. ಭಗವಂತನ ಪಾದಸೇವೆಯಿಂದಲೇ ಮನಶುದ್ಧಿಯುಂಟಾಗಬೇಕಾಗಿರುವುದು. ಬುದ್ಧಿಪೂರ್ವಕವಾಗಿಯಾಗಲೀ, ಅಬುದ್ಧಿಪೂರ್ವಕವಾಗಿಯಾಗಲೀ ಭಗನ್ನಾಮವನ್ನು ಬಾಯಿಂದನುಡಿದಪಕ್ಷದಲ್ಲಿ, ಅದು ಆವ ಸಮಸ್ತಪಾಪಗಳನ್ನೂ ಭಸ್ಮಮಾಡುವುದು. ಉರಿಯುತ್ತಿರುವ ಬೆಂಕಿಯನು ಬುದ್ಧಿಪೂರ್ವಕವಾಗಿ ಮುಟ್ಟಿದರೂ, ಅಜ್ಞಾನದಿಂದ ಮುಟ್ಟಿದರೂ ಅದು ತನ್ನ ಶಕ್ತಿಯನ್ನು ತೋರಿಸದೆ ಬಿಡದು! ಔಷಧವನ್ನು ಕುಡಿಯುವ ರೋಗಿಯು ಅದ ಶಕ್ತಿಯನ್ನೂ ತಿಳಿದಿದ್ದರೂ, ತಿಳಿಯದಿದ್ದರೂ, ಅದರಿಂದ ಗುಣಹೊಂದುವನು. ತಿ ದಾಗಲೀ, ತಿಳಿಯದೆಯಾಗಲೀ, ಮಾಡಿದ ಭಗವನ್ನಾಮಸ್ಮರಣವೂ, ಹಾಗೆಯೆ ಪಾಪನಿವಾರಣಪೂರ್ವಕವಾಗಿ ಮನಶ್ಶುದ್ಧಿಯನ್ನುಂಟುಮಾಡುವುದರಲ್ಲಿ ಸಂದೇಹವಿಲ್ಲ. ಅದುದರಿಂದ ಎಲೈ ಯಮಭಟರೇ! ಈ ಅಜಾಮಿಳನು ಭಗವನ್ನಾಮವೆಂಮಂತ್ರದ ಪ್ರಭಾವವನ್ನು ತಿಳಿದಿದ್ದರೂ, ಅಥವಾತಿಳಿಯದಿದ್ದರೂ, ಆನಾಮಾಕ್ಷರಗಅವನ ಬಾಯಿಂದ ಹೊರಟುದರಿಂದ ಪಾಪವಿಮುಕ್ತನಾಗಿರುವನು. ಇವನಿಗೆ ಇನ್ಮೇಲೆ ವೈಕುಂಠವೇ ಹೊರತು, ಯಮಲೋಕವಿಲ್ಲ! ಈ ಧರ್ಮಸೂಕ್ಷ್ಮವು ನಿಮಗೇನಾದರೂ ಸಂದೇಹವಿದ್ದರೆ, ನಿಮ್ಮ ಪ್ರಭುವಾದ ಧರ್ಮರಾಜನಲ್ಲಿಕೇಳಿ ತಿಳಿಯಬಹುದು. ಭಗವದಂಶಭೂತನಾದ ಆ ಯಮನು ಧರ್ಮರಹಸ್ಯಗವನ್ನೂ ಚೆನ್ನಾಗಿ ಬಲ್ಲವನು" ಎಂದರು. ಹೀಗೆ ವಿಷ್ಣುದೂತರು, ಅತನಿಗೆ ಭಾಗ

ರ್ಮವನ್ನು ನಿರ್ಣಯಿಸಿ ಹೇಳಿದಮೇಲೆ, ಯಮದೂತರು, ಆ ಅಜಾಮಿಳನಿಗೆ ಕಟ್ಟಿದ್ದ ಯಮಪಾಶವನ್ನು ಕಳೆದು ಬಿಟ್ಟರು. ಅತನಿಗೆ ಪಾಪಾಧಿಕ್ಯದಿಂದ ಅಕಾಲ ದಲ್ಲಿ ಸಮೀಪಿಸಿದ್ದ ಮೃತ್ಯುವೂ ತಪ್ಪಿಹೋಯಿತು ಆಮೇಲೆ ಯಮದೂತರು ತಮ್ಮ ಪ್ರಭುವಾದ ಯಮನ ಬಳಿಗೆ ಹೋಗಿ, ಇಲ್ಲಿ ನಡೆದ ವೃತ್ತಾಂತಗಳೆಲ್ಲವನ್ನೂ ತಿಳಿಸಿ ದರು. ಇತ್ತಲಾಗಿ ಯಮಪಾಶವನ್ನು ತಪ್ಪಿಸಿಕೊಂಡ ಅಜಾಮಿಳನು, ಪುನರ್ಜೀ ವನವನ್ನು ಹೊಂದಿ ನಿರ್ಭಯನಾಗಿ, ಮುಂದೆ ನಿಂತಿದ್ದ ವಿಷ್ಣುದೂತರನ್ನು ನೋಡಿ ಅವರಿಗೆ ಪರಮಾನಂದದಿಂದ ಸಾಷ್ಟಾಂಗಪ್ರಣಾಮವನ್ನು ಮಾಡಿ ದನು. ಅವರ ಮುಂದೆ ಬದ್ಧಾಂಜಲಿಯಾಗಿ ನಿಂತು ಒಂದೆರಡುಮಾತುಗಳನ್ನು ಹೇಳುವುದಕ್ಕಾಗಿ ಬಾಯೆತ್ತುವಷ್ಟರಲ್ಲಿ, ಅವರು ಥಟ್ಟನೆ ಕಣ್ಮರೆಯಾದರು.

ಆದರೆ ಹಿಂದೆ ವಿಷ್ಣುದೂತರಿಗೂ, ಯಮದೂತರಿಗೂ ನಡೆದ ಸಂವಾದ ವೆಲ್ಲವೂ ಅಜಾಮಿಳನ ಕಿವಿಗೂ ಬೀಳುತಿತ್ತು. ಅದರಲ್ಲಿ ಹೇಳಿದ ಭಾಗವತಧರ್ಮ ಗಳನ್ನೂ, ಸತ್ವರಜಸ್ತಮೋಗುಣಗಳಿಗೆ ವಶರಾದ ಜನಗಳು ಮಾಡತಕ್ಕಕರ್ಮ ಯೋಗಗಳನ್ನೂ ಅವನು ಚೆನ್ನಾಗಿ ಕೇಳಿದುದರಿಂದ, ಆದುಮೊದಲು ಭಗವಂತನಲ್ಲಿ ವಿಶೇಷಭಕ್ತಿಯುಳ್ಳವನಾದನು. ಆಗ ಅವನಿಗೆ ಹಿಂದೆ ತಾನು ನಡೆಸಿದ ಪಾಪಕೃತ್ಯ ಗಳೆಲ್ಲವೂ ಸ್ಮರಣೆಗೆ ಬಂದುವು. ಅದಕ್ಕಾಗಿ ಪಶ್ಚಾತ್ತಾಪಪಡುತ್ತ "ಅಯ್ಯೋ! ನಾನು ನನ್ನ ಮನಸ್ಸನ್ನು ನಿಗ್ರಹಿಸಲಾರದೆ ಹೋದುದಕ್ಕಾಗಿ ಎಷ್ಟು ಕಷ್ಟಕ್ಕೆ ಗುರಿಯಾದೆನು! ಈ ಶೂದ್ರಸ್ತ್ರೀಯೊಡನೆ ಸಹವಾಸಮಾಡಿ. ನನ್ನ ಬ್ರಾಹ್ಮಣ್ಯ ವನ್ನೂ ಕಳೆದುಕೊಂಡೆನು! ಛೀ! ಸಮಸ್ತಸಜ್ಜನರಿಗೂ ಹಾಸ್ಯಾಸ್ಪದವಾದ ನನ್ನ ಜನ್ಮವನ್ನು ಸುಡಬೇಕಲ್ಲವೇ? ಪಾಪಿಯಾದ ನನ್ನಿಂದ ಪವಿತ್ರವಾದ ನನ್ನ ಕುಲಕ್ಕೇ ಒಂದು ಕಳಂಕವುಂಟಾಯಿತು. ಉತ್ತಮಕುಲದಲ್ಲಿ ಹುಟ್ಟಿ ಪರಮಪವಿತ್ರೆಯೆನಿಸಿ ಕೊಂಡ ಭಾರ್ಯೆಯನ್ನು ಬಿಟ್ಟು, ಮದ್ಯಮಾಂಸಸೇವನೆಯಿಂದ ಪತಿತೆಯಾದ ಈ ಶೂದ್ರಸ್ತ್ರೀಯಲ್ಲಿ ಮನಸ್ಸಿಟ್ಟೆನು. ನಾನು ವಿವೇಕಹೀನನಾಗಿ, ವೃದ್ಧರಾಗಿಯೂ ಅನಾಥರಾಗಿಯೂ, ದೀನರಾಗಿಯೂ, ಬೇರೆ ಬಂಧುಗಳಿಲ್ಲದೆ ನನ್ನನ್ನೇ ನಂಬಿದವ ರಾಗಿಯೂ ಇದ್ದ ನನ್ನ ತಂದೆತಾಯಿಗಳನ್ನೂ ತೊರೆದೆನು. ನನ್ನಂತೆ ಕೃತಘ್ನನು ಬೇರೊಬ್ಬನುಂಟೇ? ಆಹಾ! ಎಷ್ಟು ನೀಚಕಾರ್ಯವನ್ನು ಮಾಡಿದೆನು! ಎಂದಿ ದ್ದರೂ ನನಗೆ ನರಕಪ್ರಾಪ್ತಿಯು ತಪ್ಪದು. ಅಲ್ಲಿ ನಾನು ಅಧಾರ್ಮಿಕರಾಗಿಯೂ ಕ್ರಾಮುಕರಾಗಿಯೂ ಇರುವ ಪಾಪಿಗಳೊಡನೆ ಅನೇಕ ಘೋರಯಾತನೆಗಳನ್ನೂ ಅನುಭವಿಸದೆ ತೀರದು! ಆಹಾ! ಇದೇನು ಸ್ವಪ್ನವೋ! ಅಥವಾ ನಿಜವಾಗಿ ನಡೆದ ಸಂಗತಿಯೋ! ಈಗಲೇ ನನ್ನನ್ನು ಪಾಶಗಳಿಂದ ಕಟ್ಟಿ ಎಳೆಯುತ್ತಿದ್ದ ಆ ಯಮ

ದೂತರೆಲ್ಲಿ ಹೋದರು? ನನ್ನನ್ನು ಆ ದೂತರು ಯಮಪಾಶದಿಂದೆಳೆಯುತ್ತಿರು ವಾಗ,ಸ್ಫುರದ್ರೂಪಿಗಳಾದ ನಾಲ್ವರು ಸಿದ್ಧರು ಬಂದು, ನನ್ನನ್ನು ಬಿಡಿಸಿದರಲ್ಲವೇ? ಅವರೆಲ್ಲಿ ಹೋದರು? ಅಹಾ! ಕೇವಲ ಮಂದಭಾಗ್ಯನಾದ ನನಗೆ ಆ ಮಹಾತ್ಮರ ದರ್ಶನವು ಹೇಗೆ ಲಭಿಸಿತು! ಇದನ್ನು ನೋಡಿದರೆ, ನನ್ನಲ್ಲಿ ಯಾವುದೋ ಅಲ್ಪ ಸ್ವಲ್ಪ ಸುಕೃತವಿರಬೇಕು! ಅವರ ದರ್ಶನದಿಂದನನ್ನ ಆತ್ಮವು ಯಾವುದೋ ಒಂದು ವಿಧದಿಂದ ಪ್ರಸನ್ನವಾಗಿರುವುದು! ಪರಮಪುರುಷನು ನಿಷ್ಕಾರಣವಾಗಿ ನನ್ನಲ್ಲಿ ಅನುಗ್ರಹವನ್ನು ತೋರಿಸಿದಂತಿದೆ! ಹಾಗಿಲ್ಲದಿದ್ದರೆ,ಶೂದ್ರಸ್ತ್ರೀಸಂಗಮದಿಂದ ಪತಿತ ನಾಗಿ, ಮರಣಾವಸ್ಥೆಯಲ್ಲಿದ್ದ ನನ್ನ ನಾಲಗೆಯಲ್ಲಿ, ಆ ನಾರಾಯಣನಾಮೋಚ್ಚಾ ರಣವು ಹೇಗೆ ತಾನೇ ಹೊರಡುತಿತ್ತು? ಛಿ! ನಾನು ಪತಿತನು! ನಾಚಿಕೆಯಿಲ್ಲದ ವನು! ದುಷ್ಟನು! ಮೂರ್ಖನು! ಜಾತಿಭ್ರಷ್ಟನಾದ ನಾನೆಲ್ಲಿ! ಸಮಸ್ತ ಶ್ರೇಯಸ್ಸುಗಳಿಗೂ ಸಾಧನವಾದ ಆ ಭಗವನ್ನಾಮವೆಲ್ಲಿ! ಪಾಪಿಯಾದ ನನಗೆ ಮರಣಕಾಲದಲ್ಲಿ ಆ ಹರಿನಾಮೋಚ್ಚಾರಣವನ್ನು ಮಾಡಬೇಕೆಂಬ ಬುದ್ಧಿಯುಂಟಾ ದುದು ನನ್ನ ಪುಣ್ಯಶೇಷವಲ್ಲದೆ ಬೇರೆಯಲ್ಲ! ಭಗವನ್ನಾಮೋಚ್ಚಾರಣದಿಂದಲೂ, ಆ ಸಿದ್ಧರ ದರ್ಶನದಿಂದಲೂ ನಾನು ಮಹಾಭಾಗ್ಯಶಾಲಿಯೆಂದೇ ಊಹಿಸಬೇಕಾಗಿದೆ. ಇನ್ನು ಮೇಲಾದರೂ ನಾನು, ಮನಸ್ಸನ್ನೂ, ಇಂದ್ರಿಯಗಳನ್ನೂ, ಪ್ರಾಣವಾಯು ವನ್ನೂ ತಡೆದು, ತಿರುಗಿ ಪಾಪಿಷ್ಠವಾದ ನರಕದಲ್ಲಿ ಬೀಳದಂತೆ ಯತ್ನಿಸಬೇಕು. ದೇಹಾಭಿಮಾನಮೂಲಕವಾದ ಅಜ್ಞಾನದಿಂದಲೂ, ವಿಷಯಾಸಕ್ತಿಯಿಂದಲೂ, ಕರ್ಮಾಚರಣೆಯಿಂದಲೂ ಉಂಟಾದ ಈ ಸಂಸಾರಬಂಧವನ್ನು ತೊರೆದು, ಸಮಸ್ತ ಭೂತಗಳಿಗೂ ಹಿತವನ್ನು ಕೋರುತ್ತ, ಇಂದ್ರಿಯಗಳನ್ನು ನಿಗ್ರಹಿಸಿ, ಮನಶ್ಶುದ್ಧಿ ಯಿಂದ ಆ ಭಗವಂತನಲ್ಲಿ ಭಕ್ತಿಯನ್ನು ಸಂಪಾದಿಸುವೆನು. ಇದುವರೆಗೆ ನಾನು ಜ್ಞಾನಶೂನ್ಯನಾಗಿ, ಯಾವಳ ಕೈಯಲ್ಲಿಸಿಕ್ಕಿ, ಕೈಯಾಟದ ಬೊಂಬೆಯಂತೆ ಆಡು ತ್ತಿದ್ದೆನೋ, ಆ ಸ್ತ್ರೀರೂಪದಿಂದಿರುವ ಭಗವನ್ಮಾಯೆಯನ್ನು ತಪ್ಪಿಸಿಕೊಳ್ಳುವೆನು. ದೇಹದಲ್ಲಿ ನಾನೆಂಬ ಬುದ್ಧಿಯನ್ನೂ, ಆ ದೇಹಾನುಬಂಧಿಗಳಲ್ಲಿ ನನ್ನ ದೆಂಬ ಬುದ್ಧಿ ಯನ್ನೂ ನಿಶ್ಶೇಷವಾಗಿ ತೊರೆದು, ಆ ಭಗವನ್ನಾಮವನ್ನೇ ಬಾರಿಬಾರಿಗೂ ಉಚ್ಚ ರಿಸುತ್ತ, ಆ ಭಗವಂತನಲ್ಲಿಯೇ ಮನಸ್ಸನ್ನು ನೆಲೆಗೊಳಿಸುವೆನು" ಎಂದು ಅಜಾಮಿ ಳನು ಮನಸ್ಸಿನಲ್ಲಿ ಪಶ್ಚಾತ್ತಾಪದಿಂದ ಕೊರಗುತ್ತ, ಆ ಸಜ್ಜನರೊಡನೆ ಕ್ಷಣ ಮಾತ್ರ ಸಹವಾಸದಿಂದ ವಿರಕ್ತಿಯನ್ನು ಹೊಂದಿ, ಆ ಕ್ಷಣವೇ ಗಂಗಾದ್ವಾರಕ್ಕೆ ಹೊರಟನು. ಆಲ್ಲಿ ಭಕ್ತಿಯೋಗವನ್ನು ಹಿಡಿದು, ಮನಸ್ಸನ್ನೂ, ಇಂದ್ರಿಯಗಳನ್ನೂ ಜಯಿಸಿ, ಮೊದಲು ದೇಹಕ್ಕಿಂತಲೂ ಬೇರೆಯಾದ ಆತ್ಮಸ್ವರೂಪದಲ್ಲಿ ಮನಸ್ಸನ್ನು

ರಿಸಿದನು. ಆಮೇಲೆ ಆ ಜೀವಾತ್ಮಕ್ಕೂ ಅಂತರಾತ್ಮನಾದ ಪರಮಾತ್ಮಸ್ವರೂಪವನ್ನು ಧ್ಯಾನಿಸುವುದಕ್ಕೆತೊಡಗಿ, ಕೇವಲ ಜ್ಞಾನಮಯವಾದ ಭಗವಂತನ ತೇಜಸ್ಸಿನಲ್ಲಿ ಬುದ್ಧಿಯನ್ನು ನೆಲೆಗೊಳಿಸಿದನು. ಹೀಗೆ ಶಬ್ದಾದಿವಿಷಯಗಳಿಂದ ಬುದ್ಧಿಯನ್ನು ತಿರುಗಿಸಿ, ಭಗವತ್ಸ್ವರೂಪದಲ್ಲಿ ನೆಲೆಗೊಳಿಸುವಷ್ಟರಲ್ಲಿ, ಹಿಂದೆ ಬಂದಿದ್ದ ನಾಲ್ವರು ವಿಷ್ಣುದೂತರೂ ತಿರುಗಿ ಕಾಣಿಸಿಕೊಂಡರು. ಒಡನೆಯೇ ಅಜಾಮಿಳನು ಅವರಪಾದಗಳನ್ನು ಹಿಡಿದುತಲೆಬಗ್ಗಿ ನಮಸ್ಕರಿಸಿ, ಆ ಕ್ಷಣವೇ ಗಂಗಾದ್ವಾರದಲ್ಲಿ ಶರೀರತ್ಯಾಗವನ್ನೂ ಮಾಡಿದನು. ಒಡನೆಯೇ ಅವನಿಗೆ ವಿಷ್ಣುದೂತರಂಗೆ ಸಮಾನವಾದ ದಿವ್ಯರೂಪವುಂಟಾಯಿತು. ಆ ನಾಲ್ವರೊಡಗೂಡಿ ಸುವರ್ಣಮಯವಾದ ಒಂದಾನೊಂದು ದಿವ್ಯವಿಮಾನದಲ್ಲಿ ಕುಳಿತು, ಅರ್ಚಿರಾದಿಮಾರ್ಗದಿಂದ ಹೊರಟು, ವಿಷ್ಣುಸಾನ್ನಿಧ್ಯವನ್ನೂ ಸೇರಿದನು. ಓ ಪರೀಕ್ಷಿದ್ರಾಜಾ! ಭಗನ್ನಾಮದ ಮಹಿಮೆಯನ್ನು ನೋಡಿದೆಯಲ್ಲವೇ? ಅಜಾಮಿಳನು ಸಮಸ್ತ ಧರ್ಮಗಳನ್ನೂ ಬಿಟ್ಟು ಪಾಪಕರ್ಮಗಳನ್ನೇ ನಡೆಸುತ್ತಿದ್ದವನು! ಇಂತವನು ಯಮಪಾಶದಿಂದ ಬಿಗಿಯಲ್ಪಟ್ಟು ನರಕದಲ್ಲಿ ಬೀಳುತ್ತಿದ್ದಾಗ, ಒಂದಾವರ್ತಿ "ನಾರಾಯಣಾ" ಎಂಬನಾಲ್ಕಕ್ಷರಗಳನ್ನು ಬಾಯಿಂದ ನುಡಿದಮಾತ್ರಕ್ಕೆ, ಮುಕ್ತಿಯನ್ನು ಹೊಂದಿದನಲ್ಲವೇ? ಆದುದರಿಂದ ಮೋಕ್ಷಾಪೇಕ್ಷೆಯುಳ್ಳವನು ಸಂಸಾರಕಾರಣವಾದ ಕರ್ಮಬಂಧವನ್ನು ತಪ್ಪಿಸಿಕೊಳ್ಳುವುದಕ್ಕೆ ಭಗವನ್ನಾಮಸ್ಮರಣಕ್ಕಿಂತಲೂ ಬೇರೆ ಉಪಾಯವಿಲ್ಲ. ರಜಸ್ತಮೋಗುಣಗಳಿಂದ ಕಲುಷಿತವಾದ ಮನಸ್ಸು, ಸಂಸಾರಕಾರಣಗಳಾದ ಕರ್ಮಗಳಲ್ಲಿ ಪ್ರವರ್ತಿಸದಂತೆ ಮಾಡಬೇಕಾದರೂ ಇದಕ್ಕಿಂತಲೂ ಉತ್ತಮವಾದ ಉಪಾಯವಿಲ್ಲ. ರಾಜೇಂದ್ರಾ! ಗೋಪ್ಯವಾಗಿಯೂ, ಪಾಪನಿವಾರಕವಾಗಿಯೂ ಇರುವ ಈ ಇತಿಹಾಸವನ್ನು ಯಾವನು ಶ್ರದ್ಧೆಯಿಂದ ಕೇಳುವನೋ, ಯಾವನು ಹೇಳುವನೋ ಅವನು ಯಮಭಟರ ಕೈಗೆ ಸಿಕ್ಕಲಾರನು. ನರಕದಲ್ಲಿಯೂ ಬೀಳಲಾರನು. ಮಹಾಪಾಪಿಯಾದರೂ ಇದನ್ನು ಕೇಳಿದ ಮೇಲೆ ವಿಷ್ಣುಲೋಕವನ್ನು ಹೊಂದುವನು. ಮರಣಾವಸ್ಥೆಯಲ್ಲಿದ್ದ ಅಜಾಮಿಳನು ತನ್ನ ಮಗನನ್ನು ಕರೆಯುವನೆವದಿಂದ ಒಂದಾವೃತ್ತಿ ಹರಿನಾಮವನ್ನು ಚ್ಚರಿಸಿದಮಾತ್ರಕ್ಕೆ ವಿಷ್ಣುಸಾನ್ನಿಧ್ಯವನ್ನು ಹೊಂದಿದಾಗ, ಯಾವಾಗಲೂ ಆ ಹರಿಗುಣಗಳನ್ನೇ ಶ್ರದ್ಧೆಯಿಂದ ಕೀರ್ತಿಸುತಕ್ಕವರಿಗೆ ಮೋಕ್ಷವುಂಟಾಗುವುದನ್ನು ಕೇಳಬೇಕೇ?" ಎಂದನು. ಇಷ್ಟಕ್ಕೆ ಎರಡನೆಯ ಅಧ್ಯಾಯವು.

---

ಕವಾದ ಸಮಸ್ತ ಪ್ರಪಂಚಕ್ಕೂ ಅವನೇ ಮುಖ್ಯಾಧಿಕಾರಿಯು. ಆ ಭಗವಂತನು ಹಗ್ಗದಿಂದ ಹಸುಗಳನ್ನು ಕಟ್ಟಿಡುವಂತೆ, ತನ್ನ ಮುಖದಿಂದ ಹೊರಟ ವೇದವೆಂಬ ಹಗ್ಗದಿಂದ, ಸಮಸ್ತ ಪ್ರಾಣಿಗಳನ್ನೂ, ಆಯಾವರ್ಣಾಶ್ರಮಧರ್ಮಗಳಲ್ಲಿ ಬಂಧಿಸಿ, ತನಗೆ ವಶಮಾಡಿಕೊಂಡಿರುವನು. ಈ ಪ್ರಪಂಚದ ಜೀವರಾಶಿಗಳೆಲ್ಲವೂ, ನಾಮ ರೂಪಕರ್ಮಗಳಿಂದ ಬದ್ಧರಾಗಿ, ಭಯದಿಂದ ಆತನಿಗೆ ಪೂಜೆಗಳನ್ನೊಪ್ಪಿಸುತ್ತಿರುವರು. ನಾನು, ದೇವೇಂದ್ರನು, ನಿಋತಿ, ವರುಣನು, ಸೋಮನು, ಅಗ್ನಿ, ಶಂಕರನು, ವಾಯು, ಸೂರ್ಯನು, ಬ್ರಹ್ಮನು, ದ್ವಾದಶಾದಿತ್ಯರು, ವಿಶ್ವಾವಸು, ಏಕಾದಶ ರುದ್ರರು, ದಕ್ಷಾದಿನವಬ್ರಹ್ಮರು; ಈ ನಾವೆಲ್ಲರೂ ಕೇವಲಸತ್ವಗುಣಪ್ರಧಾನ ರಾಗಿಯೂ ಅವನ ಮಾಯೆಯಿಂದ ಮೋಹಿತರಾಗಿ ಅವನ ಅಭಿಪ್ರಾಯವನ್ನು ತಿಳಿಯಲಾರದಿರುವೆವು. ಇನ್ನು ಸಾಮಾನ್ಯಜನರ ಸಂಗತಿಯನ್ನು ಕೇಳಬೇಕೇ? ಪ್ರಾಣಿಗಳು ಇಂದ್ರಿಯಗಳಿಂದಲೂ, ಮನಸ್ಸಿನಿಂದಲೂ, ಪ್ರಾಣಾಯಾಮಗಳಿಂ ದಲೂ, ಚಿತ್ತದಿಂದಲೂ, ವಾಕ್ಕಾತುರ್ಯದಿಂದಲೂ, ಎಷ್ಟೇಪ್ರಯತ್ನಪಟ್ಟರೂ ತಮ ಗಿಂತ ವಿಲಕ್ಷಣನಾಗಿಯೂ, ಸಕಲಜೀವಗಳ ಹೃದಯದಲ್ಲಿ ಅಂತರಾತ್ಮನಾಗಿಯೂ ಇರುವ ಆ ಪರಮಪುರುಷನನ್ನು ಕಾಣಲಾರವು. ರೂಪಾದಿಗಳು ತಮಗಿಂತಲೂ ವಿಲಕ್ಷಣವಾಗಿ ತಮ್ಮನ್ನು ಪ್ರಕಾಶಗೊಳಿಸತಕ್ಕ ಚಕ್ಷುರಿಂದ್ರಿಯವನ್ನು ಹೇಗೆ ಕಾಣಲಾರವೋ, ಹಾಗೆ ಆ ಪ್ರಾಣಿಗಳು ತಮಗೆ ಪ್ರೇರಕನಾದ ಭಗವಂತನನ್ನು ಕಾಣಲಾರವು.

ಎಲೈ ಭಟರೆ? ಆ ಭಗವಂತನು ಸರ್ವಜ್ಞತ್ವಾದಿಗುಣಗಳಿಂದ ಎಲ್ಲೆಯಿಲ್ಲದ ವನು! ಸರ್ವಸ್ವತಂತ್ರನು! ಚಿದಚಿದಾತ್ಮಕವಾದ ಈ ಪ್ರಪಂಚಕ್ಕಿಂತಲೂ ವಿಲಕ್ಷ ಣನು! ಮಾಯೆಯೆಂಬ ಪ್ರಕೃತಿಗೆ ಆತನೇ ನಿಯಾಮಕನು. ಎಲ್ಲಕ್ಕೂ ಅವನೇ ಮುಖ್ಯಾಧಿಪತಿಯು! ನಿರತಿಶಯವಾದ ಮಹಾಮಹಿಮೆಯುಳ್ಳವನು. ಆ ಶ್ರೀಮ ನ್ನಾರಾಯಣನ ದೂತರೂಕೂಡ ಗುಣಗಳಲ್ಲಿಯೂ ರೂಪದಲ್ಲಿಯೂ ಅವನನ್ನೆ ಹೋಲುತ್ತ ಸುಂದರಾಕಾರವುಳ್ಳವರಾಗಿ ಲೋಕದಲ್ಲಿ ಸಂಚರಿಸುತ್ತಿರುವರು. ಇವರು ಬ್ರಹ್ಮಾದಿದೇವತೆಗಳಿಗೂ ಪೂಜ್ಯರಾಗಿ, ಅದ್ಭುತಾಕಾರದಿಂದಲೂ, ಅದ್ಭುತರೂಪ ದಿಂದಲೂ ಶೋಭಿಸುತ್ತ, ವಿಷ್ಣುಭಕ್ತರೆನಿಸಿದ ಜನರನ್ನು, ಇತರ ಭೂತಗಳಿಂದಲೂ, ಮೃತ್ಯುವಿನಿಂದಲೂ ರಕ್ಷಿಸುತ್ತಿರುವರು. "ಆದರೆ ಮಹಾಪಾತಕಿಯಾಗಿಯೂ ಭಗವದ್ಭಕ್ತಿಶೂನ್ಯನಾಗಿಯೂ ಇರುವ ಅಜಾಮಿಳನನ್ನು ರಕ್ಷಿಸಿದುದುಯುಕ್ತವೇ?" ಎಂದು ನೀವು ಶಂಕಿಸಬಹುದು. ದೂತರೇ! ಭಗವಂತನಿಂದ ಸಾಕ್ಷಾತ್ತಾಗಿ ವಿಧಿ ಸಲ್ಪಟ್ಟಿರುವ ಭಾಗವತಧರ್ಮವೆಂಬುದು ಬಹಳಸೂಕ್ಷ್ಮವು! ಆ ಧರ್ಮರಹಸ್ಯ

ನ್ನು ಋಷಿಗಳೂ ಚೆನ್ನಾಗಿ ತಿಳಿಯಲಾರರು. ದೇವತೆಗಳಾಗಲೀ, ಅಸುರರಾಗಲೀ, ದ್ಧವಿದ್ಯಾಧರಚಾರಣರಾಗಲೀ ಅದನ್ನು ತಿಳಿಯಲಾರರು! ಅಂತಹ ಧರ್ಮರಹಸ್ಯ ನ್ನು ಸಾಮಾನ್ಯಮನುಷ್ಯರುಹೇಗೆ ತಾನೇ ತಿಳಿಯಬಲ್ಲರು? ಅದಂದರಿಂದ ಅ ಜಾಮಿಳನಲ್ಲಿ ಅತಿಸೂಕ್ಷ್ಮವಾದ ಯಾವುದೋ ಒಂದು ಧರ್ಮವಿದ್ದಿರಬೇಕಲ್ಲವೇ? ಕಾರಣದಿಂದಲೇ ವಿಷ್ಣುದೂತರು ಅವನನ್ನು ಬಂದು ರಕ್ಷಿಸಿರುವರು ಬಹಳ ೂಪ್ಯವಾಗಿಯೂ, ಸತ್ವಗುಣಪ್ರಧಾನವಾಗಿಯೂ ಇರುವ ಆಭಾಗವತಧರ್ಮವು ುಲಭವಾಗಿ ತಿಳಿಯತಕ್ಕುದಲ್ಲ. ಅದನ್ನು ನಾನು, ಚತುರ್ಮುಖಬ್ರಹ್ಮನು, ಾರದನು, ಶಂಕರನು, ಸನತ್ಕುಮಾರನು, ಕಪಿಲನು, ಸ್ವಾಯಂಭುವಮನು, ಪ್ರಹ್ಲಾ ನು, ಜನಕರಾಜನು, ಭೀಷ್ಮನು, ಬಲಿಚಕ್ರವರ್ತಿ, ಶುಕಮುನಿ, ಈ ನಾವು ಹನ್ನೆ ಡುಮಂದಿಮಾತ್ರವೇ ಬಲ್ಲೆವು ಈ ಭಾಗವತಧರ್ಮವನ್ನು ತಿಳಿದವನು ತಪ್ಪದೆ ುಕ್ತಿಯನ್ನು ಹೊಂದುವನು. ಈ ಧರ್ಮರಹಸ್ಯವೇನೆಂದು ಕೇಳುವಿರಾ! ಶ್ರೀಮ ನ್ನಾರಾಯಣನ ನಾಮವನ್ನುಚ್ಚರಿಸುವುದರಮೂಲಕವಾಗಿ, ಆತನಲ್ಲಿ ಭಕ್ತಿಯೋಗ ನ್ನು ಸಂಪಾದಿಸುವುದೇ ಈ ಧರ್ಮದಸಾರವೆಂದು ತಿಳಿಯಿರಿ! ಲೋಕದಲ್ಲಿ ಎಲ್ಲ ್ಕಂತೆಲೂ ಇದೇ ಮೇಲಾದಧರ್ಮವು! ಮನುಷ್ಯನು ಇದನ್ನೇ ಮೊದಲುಸಾಧಿ ಬೇಕು. ಭಕ್ತಿಯೋಗವನ್ನು ಸಾಧಿಸಬೇಕಾದ ಪ್ರಯತ್ನವೂ ಹಾಗಿರಲಿ! ಒಂದಾ ರ್ತಿ ಆತನ ನಾಮೋಚ್ಚಾರಣವನ್ನು ಮಾಡುವುದರಲ್ಲಿಯೇ ಎಷ್ಟೋಫಲವುಂಟು! ದರಿಂದಲ್ಲವೇ ಅಜಾಮಿಳನಿಗೆ ಮೃತ್ಯುಪಾಶವು ಬಿಟ್ಟುಹೋಯಿತು! ಮನುಷ್ಯನು ನ್ನ ಪಾಪದಿಂದ ಮುಕ್ತನಾಗಬೇಕೆಂದರೆ, ಭಗವಂತನ ಗುಣಗಳನ್ನೂ ಪ್ರಕಾಶ ಾಳಿಸತಕ್ಕ ನಾಮಾವಳಿಗಳಲ್ಲಿ ಯಾವುದಾದರೂ ಒಂದನ್ನು ಬಾಯಿಂದ ನುಡಿದ ಾತ್ರಕ್ಕೆ ಸಾಕು! ಪರಮಪಾಪಿಯಾದ ಅಜಾಮಿಳನಾಕೂಡ ಮರಣಕಾಲದಲ್ಲಿ ನ್ನ ಮಗನ ಹೆಸರನ್ನು ಹಿಡಿದು "ನಾರಾಯಣಾ" ಎಂದುಕೂಗಿದ ಮಾತ್ರಕ್ಕೆ ುಕ್ತಿಯನ್ನು ಹೊಂದಿದನು. ಈ ಲೋಕದಲ್ಲಿ ಅನೇಕಶಾಸ್ತ್ರಗಳನ್ನೋದಿದವರೂ ೂಡ ಭಗವಂತನ ಮಾಯೆಯಿಂದ ಮರುಳಾಗುವರು. ಸ್ವರ್ಗಾದಿತುಚ್ಛಸುಖಗಳಲ್ಲಿ ಸೆಯನ್ನು ತೋರಿಸಿ ವಂಚಿಸತಕ್ಕ ವೇದಗಳಲ್ಲಿ ಅಕ್ಕರೆಯಿಟ್ಟು, ಯಾಗಾದಿ ರ್ಮಗಳನ್ನು ನಡೆಸುವುದಕ್ಕೆ ಪ್ರಯತ್ನಿಸುವರು! ಅನೇಕರು ಭಗವನ್ನಾ ಮೋಚ್ಚಾರಣದ ಮಹಿಮೆಯನ್ನು ತಿಳಿಯದೆ ಮೋಸಹೊಗುವರು. ಯಾರು ವಿವೇಕ ುದ್ಧಿಯಿಂದ ಆದರ ಮಹಿಮೆಯನ್ನು ತಿಳಿದು, ಆ ಮೂಲಕವಾಗಿ ಭಕ್ತಿಯೋಗ ನ್ನು ಸಾಧಿಸುವರೋ, ಅವರುನನ್ನ ದಂಡನೆಗೆ ಗುರಿಯಾಗಲಾರರು. ಆ ನಾಮೋ ಚ್ಚಾರಣದಿಂದಲೇ ಅವರ ಪಾಪಗಳೆಲ್ಲವೂ ನೀಗುವುವು. ಎಲ್ಲವನ್ನೂ ಭಗವತ್ಸ್ವ

ರೂಪವೆಂದೇ ತಿಳಿದು, ಸಮಬುದ್ಧಿಯಿಂದ ವರ್ತಿಸುತ್ತ, ಸರ್ವವಿಧದಿಂದಲೂ ಆ ಭಗವಂತನನ್ನೇ ಶರಣುಹೊಂದಿದ ಸಾಧುಗಳೇ ಲೋಕದಲ್ಲಿಮಹಾತ್ಮರು! ಇವರ ಪವಿತ್ರವಾದ ಕೀರ್ತಿಯನ್ನು ಸಿದ್ಧರೂ ದೇವತೆಗಳೂ ಕೊಂಡಾಡುವರು. ಇಂತವರನ್ನು ಭಗವಂತನ ಗದಾಯುಧವು ಯಾವಾಗಲೂ ಎಚ್ಚರದಿಂದ ರಕ್ಷಿಸುತ್ತಿರುವುದು. ಆದುದರಿಂದ ನೀವು ಅಂತವರ ಸಮೀಪಕ್ಕೂ ಹೋಗಬಾರದು! ಅವರಿಗೆ ಸಂಸಾರ ಭಯವಿಲ್ಲ. ಅವರನ್ನು ದಂಡಿಸುವುದಕ್ಕೂ ನಾವು ಸಮರ್ಥರಲ್ಲ! ಕೇವಲ ವಿರಕ್ತರಾದ ಪರಮಹಂಸರಿಗೂ ಆಸೆಹುಟ್ಟಿಸತಕ್ಕ ಆ ಭಗವಂತನ ಪಾದಾರವಿಂದಗಳಲ್ಲಿ ವಿಮುಖರಾಗಿಯೂ, ನರಕಕ್ಕೆ ಬಾಗಿಲೆನಿಸಿಕೊಂಡ ಸಂಸಾರದಲ್ಲಿ ಅಧಿಕಾಸಕ್ತರಾಗಿಯೂ ಇರುವ ಜನರನ್ನು ಮಾತ್ರವೇ ನೀವು ಇಲ್ಲಿಗೆ ಕರೆತರಬೇಕು! ಇದಲ್ಲದೆ ಎಲೈ ದೂತರೇ! ಯಾವನ ನಾಲಗೆಯು ಒಂದಾನರ್ತಿಯಾದರೂ ಭಗವನ್ನಾ[illegible]ನ್ನು ನುಡಿದಿಲ್ಲವೋ, ಯಾವನ ಮನಸ್ಸು ಕ್ಷಣಮಾತ್ರವಾದರೂ ಭಗವ[illegible]ತನ ಪಾದಾರ ವಿಂದವನ್ನು ಧ್ಯಾನಿಸಿಲ್ಲವೋ, ಯಾವನ ಶಿರಸ್ಸು ಒಮ್ಮೆಯಾದರೂ ಶ್ರೀಕೃಷ್ಣನನ್ನು ನಮಿಸಲಿಲ್ಲವೋ, ಅಂತಹ ನೀಚರನ್ನು ಮಾತ್ರವೇ ನೀವು ಇಲ್ಲಿಗೆ ಕರೆತರಬಹುದು" ಎಂದನು. ಯಮನು ಹೀಗೆಂದು ತನ್ನ ದೂತರಿಗೆ ನಿಯಮಿಸಿ, ತನ್ನಲ್ಲಿ ತಾನು ಭಗವಂತನನ್ನು ಧ್ಯಾನಿಸುತ್ತ "ಪುರಾಣಪುರುಷನಾದ ಶ್ರೀಮನ್ನಾರಾಯಣನು, ಈ ನಮ್ಮ ಅಂಜಲಿಯಿಂದ ಪ್ರಸನ್ನನಾಗಿ, ಈ ದೂತರು, ತನ್ನ ಭಕ್ತರಲ್ಲಿ ಅಜ್ಞಾತಿಯಿಂದ ನಡೆಸಿದ ಅಪರಾಧವನ್ನು ಕ್ಷಮಿಸಲಿ! ಆಶ್ರಿತಾಪರಾಧವನ್ನು ಕ್ಷಮಿಸತಕ್ಕ ಅಂತಹ ಪರಮಪುರುಷನಿಗೆ ನಮಸ್ಕಾರವು" ಎಂದು ಮನ್ನಣೆಯನ್ನು ಕೇಳಿಕೊಂಡನು. ಆದುದರಿಂದ ಓ ರಾಜೇಂದ್ರಾ! ಆ ಭಗವನ್ನಾಮೋಚ್ಚಾರಣವೊಂದೇ ಮಹಾಪಾತಕಗಳೆಲ್ಲಕ್ಕೂ ಮೇಲಾದ ಪ್ರಾಯಶ್ಚಿತ್ತವೆನಿಸಿರುವುದು. ಆ ಹರಿನಾಮಕೀರ್ತನವೇ ಸರ್ವವಿಧದಲ್ಲಿಯೂ ಲೋಕಕ್ಕೆ ಮಂಗಳಕರವಾದುದು! ಆ ಭಗವಚ್ಚರಿತ್ರಗಳನ್ನು ಭಕ್ತಿಯಿಂದ ಕೇಳಿದರೂ, ಕೀರ್ತಿಸಿದರೂ ಆತ್ಮಶುದ್ಧಿಯುಂಟಾಗುವಂತೆ ಬೇರೆಯಾವವ್ರತೋಪವಾಸಗಳಿಂದಲೂಶುದ್ಧಿಯುಂಟಾಗದು. ಯಾವನ ಮನಸ್ಸು ಶ್ರೀಕೃಷ್ಣನ ಪಾದಾರವಿಂದದಲ್ಲಿ ನೆಲೆಗೊಳ್ಳುವುದೋ, ಅವನಿಗೆ ಪಾಪ ಹೇತುವಾದ ಸಂಸಾರವೆಂಬುದು ತಿರುಗಿ ತಗುಲುಕಟ್ಟಲಾರದು. ಹಾಗಿಲ್ಲದೆ ಇತರ ಕರ್ಮಗಳಿಂದ ಪಾಪವನ್ನು ಕಳೆದುಕೊಳ್ಳಬೇಕೆಂದು ಪ್ರಯತ್ನಿಸುವವನು, ಆಕರ್ಮಗಳ ಮೂಲಕವಾಗಿ ತಿರುಗಿ ಸಂಸಾರಬಂಧದಲ್ಲಿಯೇ ಸಿಕ್ಕಿ ಬೀಳಬೇಕಾಗುವುದು. ಇದುಹಾಗಿರಲಿ! ಅತ್ತಲಾಗಿ ಯಮದೂತರು, ಹೇಗೆ ತಮ್ಮ ಪ್ರಭುವಾದ ಧರ್ಮರಾಜನಿಂದ ಭಗವನ್ನಾಹಾತ್ಮ್ಯವನ್ನು ಕೇಳಿ, ಆಶ್ಚರ್ಯಗೊಂಡವರಾಗಿ, ಅದುವೊದಲು ವಿಷ್ಣುಭಕ್ತರನ್ನು ಕಣ್ಣೆತ್ತಿ ನೋಡುವುದಕ್ಕೂ ಧೈರ್ಯವಿಲ್ಲದೆ, ಅವರಿದ್ದಕಡೆಗೆ

ತಲೆಯಿಕ್ಕದೆ ಹಿಂಜರಿಯುವರು. ರಾಜಾ! ಹಿಂದೆ ಪೂಜ್ಯನಾದ ಅಗಸ್ತ್ಯಮುನಿಯು ನುಲಯಪರ್ವತದಲ್ಲಿ ಭಗವದಾರಾಧನ ರೂಪವಾದ ತಪಸ್ಸನ್ನು ನಡೆಸುತ್ತಿದ್ದಾಗ, ನನಗೆ ಈ ಉಪಾಖ್ಯಾನವನ್ನು ತಿಳಿಸಿದನು. ಅದನ್ನೇ ನಾನು ನಿನಗೂ ಹೇಳಿರುವೆನು" ಎಂದನು. ಇಲ್ಲಿಗೆ ಮೂರನೆಯ ಅಧ್ಯಾಯವು.

---

ಚಂದ್ರನು ಪ್ರಚೇತಸರಿಗೆ ಹಿತವನ್ನು ಬೋಧಿಸಿ, ಅವರಿಗೆ ಮೂರಿಷೆಯೆಂಬ ಕನ್ಯೆಯನ್ನು ಮದುವೆಮಾಡಿಕೊಟ್ಟುದು. ದಕ್ಷನಿಗೆ ನಾರಾಯಣನು ಪ್ರತ್ಯಕ್ಷನಾದುದು.

ಪರೀಕ್ಷಿದ್ರಾಜನು ತಿರುಗಿ ಶುಕಮುನಿಯನ್ನು ಕುರಿತು, "ಓ ಮುನೀಂದ್ರಾ! ಸ್ವಾಯಂಭುವಮನ್ವಂತರದಲ್ಲಿ ನಡೆದ ದೇವಾಸುರಮನುಷ್ಯಾದಿ ಜಾತಿಗಳ, ಮತ್ತು ಪಶುಪಕ್ಷಿ ಮೊದಲಾದ ತಿರ್ಯಗ್ಜಾತಿಗಳ ಸೃಷ್ಟಿಕ್ರಮವನ್ನು ಹಿಂದೆ ನೀನು ಸಂಗ್ರಹವಾಗಿ ತಿಳಿಸಿದೆಯಲ್ಲವೇ? ಪರಮಪುರುಷನು ಕೊನೆಮೊದಲಿಲ್ಲದ ಈ ವೃಷ್ಟಿಸೃಷ್ಟಿಯನ್ನು ಯಾವ ಶಕ್ತಿಯಿಂದ, ಹೇಗೆ ಸೃಷ್ಟಿಸಿದನೆಂಬುದನ್ನು ನನಗೆ ವಿವರಿಸಿ ತಿಳಿಸಬೇಕು" ಎಂದನು. ಅದಕ್ಕಾಶುಕಮಹರ್ಷಿಯು "ರಾಜಾ! ಕೇಳು! ಹಿಂದೆ ಪ್ರಾಚೀನಬರ್ಹಿಯ ಮಕ್ಕಳಾದ ಪ್ರಚೇತಸರೆಂಬ ಹತ್ತುಮಂದಿ ರಾಜಕುಮಾರರು, ಸಮುದ್ರಮಧ್ಯದಲ್ಲಿ ಮುಳುಗಿ, ಬಹುಕಾಲದವರೆಗೆ ತಪಸ್ಸುಮಾಡುತ್ತಿದ್ದು, ಕೊನೆಗೆ ಮೇಲೆದ್ದುಬಂದಾಗ, ಸಮಸ್ತಭೂಭಾಗವೂ ಮರಗಿಡುಗಳಿಂದ ದಟ್ಟವಾಗಿ ತುಂಬಿ, ಅರಣ್ಯಪ್ರಾಯವಾಗಿದ್ದುದನ್ನು ಕಂಡರಷ್ಟೆ? ಆಗ ಅವರು, ಆ ವೃಕ್ಷಗಳನ್ನು ಕಂಡುಕೋಪಿಸಿ, ಲೋಕದಲ್ಲಿ ಗಿಡಗಳ ಹುಟ್ಟೇ ಇಲ್ಲದಂತೆ ನಿರ್ಮೂಲಮಾಡುವುದಕ್ಕಾಗಿ, ತಮ್ಮ ಬಾಯಿಂದ ಅಗ್ನಿವಾಯುವುಗಳನ್ನು ಸೃಷ್ಟಿಸಿದರು. ಇವುಗಳಿಂದ ಭೂಮಿಯವೇಲಿನ ಗಿಡಗಳೆಲ್ಲವೂ ನಿರ್ಮೂಲವಾಗಿ ದಗ್ಧವಾಗುತ್ತಿರುವುದನ್ನು ಕಂಡು, ಓಷಧೀಶನಾದ ಚಂದ್ರನು ಅವರ ಬಳಿಗೆ ಬಂದು, ಕೋಪಸಮಾಧಾನಮಾಡುವುದಕ್ಕಾಗಿ ಪ್ರಯತ್ನಿಸಿ, ಹೀಗೆಂದು ಹೇಳಿದನು "ಎಲೈ ಮಹಾತ್ಮರೇ! ಈ ಗಿಡಗಳನ್ನು ಕೆಡಿಸುವುದು ನಿಮಗೆ ಯುಕ್ತವಲ್ಲ! ಪ್ರಜೆಗಳಿಗೆ ಕ್ಷೇಮವನ್ನುಂಟುಮಾಡಿ, ಅವರನ್ನು ವೃದ್ಧಿಗೊಳಿಸುವುದಕ್ಕಾಗಿಯೇ ನೀವು ಹುಟ್ಟಿದವರು! ಇದರಿಂದಲೇ ನಿಮಗೆ ಪ್ರಜಾಧಿಪತಿಗಳೆಂದು ಹೆಸರು. ಸರ್ವದೇವಪ್ರಭುವಾಗಿಯೂ, ಸರ್ವಾಂತರಾತ್ಮನಾಗಿಯೂ ಇರುವ ಭಗವಂತನು ಆದಿಯಲ್ಲಿ ಪ್ರಪಂಚವನ್ನು

ಸೃಷ್ಟಿಸುವಾಗ, ದೇವತೆಗಳಿಗೂ, ಪಿತೃದೇವತೆಗಳಿಗೂ ಹವ್ಯಕವ್ಯರೂಪಗಳಾದ ಅನ್ನವನ್ನೊದಗಿಸುವುದಕ್ಕಾಗಿಯೇ, ಈ ಸಸ್ಯವರ್ಗಗಳನ್ನು ಸೃಷ್ಟಿಸಿ, ತಾನೂ ಅವುಗಳಲ್ಲಿ ಅಂತರ್ಯಾಮಿಯಾಗಿ ನೆಲೆಗೊಂಡಿರುವನು. ಪಾದಚಾರಿಗಳಾದ ಜಂಗಮಭೂತಗಳಿಗೆಲ್ಲಾ, ಕಾಲಿಲ್ಲದ ಈ ಸ್ಥಾವರಭೂತಗಳು ಆಹಾರವಾಗಿ ಏರ್ಪಟ್ಟಿರುವುವು. ಅದರಂತೆಯೇ ಕೈಯಿಂದ ಕೆಲಸಮಾಡುವ ಶಕ್ತಿಯುಳ್ಳ ಮನುಷ್ಯರಿಗೆ, ಕೈಯಿಲ್ಲದ ಚತುಷ್ಪಾತ್ತುಗಳು ಆಹಾರಕ್ಕಾಗಿ ಏರ್ಪಟ್ಟಿರುವುವು.

ಹೀಗೆ ಎಲ್ಲಾ ಭೂತಗಳಿಗೂ ಅನ್ನರೂಪವಾಗಿ ಸೃಷ್ಟಿಸಲ್ಪಟ್ಟಿರುವ ಈ ಸಸ್ಯಗಳನ್ನು ನಾಶಮಾಡುವುದು ನಿಮಗೆ ನ್ಯಾಯವಲ್ಲ. ಇದಲ್ಲದೆ ನಿಮ್ಮ ತಂದೆಯು ನಿಮ್ಮನ್ನು ಪ್ರಜಾವೃದ್ಧಿಗಾಗಿಯೇ ನಿಯಮಿಸಿರುವನು. ಹೀಗಿರುವಾಗ ನೀವೇ ಪ್ರಜೆಗಳಿಗೆ ಅನ್ನರೂಪವಾದ ಈ ವೃಕ್ಷಗಳನ್ನು ದಹಿಸುವುದುಂಟೇ! ಆದುದರಿಂದ ಎಲೆ ಕುಮಾರರೇ! ಈ ನಿಮ್ಮ ಕೋಪವನ್ನಡಗಿಸಿರಿ! ನಿಮ್ಮ ಪಿತೃಪಿತಾಮಹ ಪ್ರಪಿತಾಮಹರೇ ಮೊದಲಾದ ಹಿರಿಯರು ಯಾವದಾರಿಯಲ್ಲಿ ನಡೆಯುತ್ತಿದ್ದರೋ, ಅಂತಹ ಸನ್ಮಾರ್ಗವನ್ನೇ ಅನುಸರಿಸಿ ನಡೆಯಿರಿ! ಮಕ್ಕಳಿಗೆ ತಂದೆತಾಯಿಗಳೂ, ಕಣ್ಣುಗಳಿಗೆ ರೆಪ್ಪೆಯೂ, ಸ್ತ್ರೀಯರಿಗೆ ಪತಿಯೂ, ಪ್ರಜೆಗಳಿಗೆ ರಾಜನೂ, ಆತ್ಮ ಪರಮಾತ್ಮರಹಸ್ಯವನ್ನು ತಿಳಿಯಬೇಕೆಂದಿರುವ ಸನ್ಯಾಸಿಗಳಿಗೆ ಜ್ಞಾನಿಯೂ, ರಕ್ಷಕನಾಗಿರುವಂತೆ, ಜಂಗಮಸ್ಥಾವರರೂಪವಾದ ಭೂತವರ್ಗಕ್ಕೆ ಪ್ರಜಾಧಿಪತಿಯೇ ಕ್ಷೇಮವನ್ನುಂಟುಮಾಡಬೇಕು. ಆದುದರಿಂದ ನೀವು ನಿಮ್ಮ ಪೋಷಣೆಗೊಳಪಟ್ಟ ಈ ವೃಕ್ಷಗಳಿಗೆ ದ್ರೋಹವನ್ನೆಣಿಸಬಾರದು. ಇದಲ್ಲದೆ ಭಗವಂತನು ಸಮಸ್ತಭೂತಗಳ ಹೃದಯದಲ್ಲಿಯೂ ಅಂತರ್ಯಾಮಿಯಾಗಿದ್ದು, ಅವುಗಳಿಗೆ ನಿಯಾಮಕನಾಗಿರುವನು. ಆದುದರಿಂದ ನೀವೂ ಎಲ್ಲವನ್ನೂ ಅವನ ಸ್ವರೂಪವೆಂದೇ ಭಾವಿಸಬೇಕು! ಇದರಿಂದ ನೀವು ಭಗವದನುಗ್ರಹಕ್ಕೆ ಪಾತ್ರರಾಗುವಿರಿ! ಮನಸ್ಸಿನಲ್ಲಿ ಅಕಸ್ಮಾತ್ತಾಗಿ ಹುಟ್ಟಿದ ಕೋಪಾವೇಶವನ್ನು ಆತ್ಮವಿಚಾರದಿಂದ ಯಾವನು ಅಡಗಿಸಬಲ್ಲನೋ, ಅವನು ಸತ್ವಾದಿಗುಣಗಳ ಪ್ರಾಬಲ್ಯವನ್ನುಮುರಿದು, ಶೀಘ್ರದಲ್ಲಿಯೇ ಸಂಸಾರ ಬಂಧದಿಂದ ಮುಕ್ತನಾಗುವನು. ನಿರಪರಾಧಿಗಳಾದ ಈ ವೃಕ್ಷಗಳಿಗೆ ನೀವು ದ್ರೋಹ ಮಾಡಬಾರದು. ಕೋಪತ್ಯಾಗದಿಂದ ನಿಮಗೆ ಶ್ರೇಯಸ್ಸುಂಟು. ಇದುವರೆಗೆ ನಿಮ್ಮಿಂದ ದಗ್ಧವಾದ ವೃಕ್ಷಗಳು ಹೋಗಲಿ! ಉಳಿದ ವೃಕ್ಷಗಳನ್ನಾದರೂ ಹಾಗೆಯೇ ನಿಲ್ಲಿಸಿರಿ! ನಿಮ್ಮ ಕೋಪವನ್ನಡಗಿಸಿರಿ! ನಿಮಗೂ ಈ ವೃಕ್ಷವರ್ಗಗಳಿಗೂ ಶುಭವಾಗಲಿ! ಇದೋ! ಈಗ ನಾನು ಈ ನಿಮ್ಮ ಉಪಕಾರಕ್ಕೆ ಪ್ರತ್ಯುಪಕಾರವಾಗಿ, ಈ ವೃಕ್ಷಗಳಿಂದಲೇ ಇದುವರೆಗೆ ಪೋಷಿಸಲ್ಪಡುತ್ತಿದ್ದ ಮಾರಿಷೆಯೆಂಬ ಕನ್ಯಾರತ್ನವನ್ನು

ನಿಮಗೆ ಕೊಡಿಸುವೆನು. ಇವಳನ್ನು ನಿಮ್ಮ ಭಾರ್ಯೆಯನ್ನಾಗಿ ಸ್ವೀಕರಿಸಿ, ಮುಂದೆ ಪ್ರಜಾವೃದ್ಧಿಕಾರ್ಯವನ್ನು ನಡೆಸಿರಿ!" ಎಂದನು. ಚಂದ್ರನು ಈ ಮಾತನ್ನು ಹೇಳಿ, ಅಪ್ಸರಸ್ತ್ರೀಯಗರ್ಭದಲ್ಲಿ ಋಷಿವೀರ್ಯದಿಂದ ಜನಿಸಿದವಳಾಗಿಯೂ, ವಿವಾಹಯೋಗ್ಯವಾದ ವಯಸ್ಸುಳ್ಳವಳಾಗಿಯೂ ಇದ್ದಮಾರಿಷೆಯೆಂಬ ಕನ್ಯೆಯನ್ನು ಅವರಿಗೆ ಕೊಟ್ಟು ಹೊರಟುಹೋದನು. ಅವರು ಹತ್ತುಮಂದಿಯೂ ವಿಧ್ಯುಕ್ತವಾಗಿ ಅವಳನ್ನು ವಿವಾಹಮಾಡಿಕೊಂಡರು. ಪೂರ್ವದಲ್ಲಿ ಬ್ರಹ್ಮದೇವನ ಹೆಬ್ಬೆರಳಿನಿಂದ ಹುಟ್ಟಿ, ರುದ್ರನಲ್ಲಿ ತಾನುಮಾಡಿದ ಅಪರಾಧದಿಂದ ದೇಹವನ್ನು ಪರಿತ್ಯಾಗಮಾಡಿದ ದಕ್ಷನು, ಈ ಮಾರಿಷೆಯಲ್ಲಿ ಹುಟ್ಟಿ ಪ್ರಾಚೇತಸನೆಂಬ ಹೆಸರಿನಿಂದ ಪ್ರಸಿದ್ಧನಾದನು. ಪ್ರಾಯಕವಾಗಿ ಇವನ ಸಂತತಿಯೇ ಮೂರುಲೋಕಗಳಲ್ಲಿಯೂ ಹರಡಿರುವುದು. ಈತನು ತನ್ನ ಹೆಣ್ಣುಮಕ್ಕಳಲ್ಲಿ ವಿಶೇಷಪ್ರೀತಿಯುಳ್ಳವನಾಗಿದ್ದನು. ಈತನು ತನ್ನ ವೀರ್ಯದಿಂದಲೂ, ಮನಸ್ಸಂಕಲ್ಪದಿಂದಲೂ, ಪ್ರಾಣಿಗಳನ್ನು ಸೃಷ್ಟಿಸಿದ ಕ್ರಮವನ್ನು ತಿಳಿಸುವೆನು ಕೇಳಿರಿ! ಈ ಪ್ರಾಚೇತಸನು, ದೇವಾಸುರಮನುಷ್ಯರೇ ಮೊದಲಾದ ಪ್ರಜೆಗಳನ್ನೆಲ್ಲಾ ಮೊದಲು ತನ್ನ ಮನಸ್ಸಂಕಲ್ಪದಿಂದಲೇ ಸೃಷ್ಟಿಸಿದನು. ಇವುಗಳಲ್ಲಿ ಅಂತರಿಕ್ಷಚಾರಿಗಳು ಕೆಲವು! ನೆಲದಲ್ಲಿ ಜೀವಿಸತಕ್ಕವು ಕೆಲವು! ಆದರೆ ಮನಸಂಕಲ್ಪದಿಂದುಂಟಾದ ಈ ಸೃಷ್ಟಿಯು, ಅಷ್ಟಾಗಿ ಮೇಲೆಮೇಲೆ ವೃದ್ಧಿಹೊಂದಲಿಲ್ಲ. ಇದಕ್ಕಾಗಿ ಆ ಪ್ರಾಚೇತಸನು, ವಿಂಧ್ಯಪರ್ವತಪ್ರಾಂತಕ್ಕೆ ಹೋಗಿ, ಅಲ್ಲಿ ದೊಡ್ಡ ತಪಸ್ಸಾನ್ನಾರಂಭಿಸಿದನು. ಆ ಪರ್ವತದ ಬುಡದಲ್ಲಿರುವ ಅಘಮರ್ಷವೆಂಬ ಪುಣ್ಯತೀರ್ಥದಲ್ಲಿ ತ್ರಿಕಾಲಸ್ನಾನಮಾಡುತ್ತ, ತಪಸ್ಸಿನಿಂದ ಭಗವಂತನನ್ನಾರಾಧಿಸುತ್ತ, ಹಂಸಗುಹ್ಯವೆಂಬ ಸ್ತೋತ್ರದಿಂದ ಶ್ರೀಹರಿಯನ್ನು ಹೀಗೆಂದು ಸ್ತುತಿಸಲಾರಂಭಿಸಿದನು.

## ದಕ್ಷಕೃತವಾದ ಹಂಸಗುಹ್ಯವೆಂಬ ಸ್ತೋತ್ರವು.

"ಚೇತನಾಚೇತನಗಳಿಗಿಂತಲೂ ವಿಲಕ್ಷಣನಾಗಿಯೂ, ಸತ್ಯಸಂಕಲ್ಪನಾಗಿಯೂ, ತ್ರಿಗುಣಾತ್ಮವಾದ ಪ್ರಕೃತಿಯನ್ನು ಶರೀರವಾಗಿ ಹೊಂದಿದವನಾಗಿಯೂ ಇರುವ ಪರಮಾತ್ಮನಿಗೆ ನಮಸ್ಕಾರವು! ಯಾವನ ಸ್ವರೂಪವು ಜೀವಾತ್ಮಸ್ವರೂಪದಂತೆ ಗೋಚರಿಸಲಾರದೋ, ಯಾವನು ಸರ್ವಕಾರಣನೋ ಅಂತಹ ಅಪ್ರಮೇಯನಾದ ಪರಮೇಶ್ವರನಿಗೆ ನಮಸ್ಕಾರವು! ಯಾವನು ಜೀವಾಂತರ್ಯಾಮಿಯಾಗಿ ಆಯಾದೇಹದಲ್ಲಿದ್ದು ಆ ಜೀವಗಳಿಗೆ ಮಿತ್ರನಂತೆ ಹಿತವನ್ನೇ ಆಚರಿಸುತ್ತ, ರತ್ನವು ಕಾಂತಿಯನ್ನು ಹೇಗೋ ಹಾಗೆ, ತನ್ನಲ್ಲಿಯೇ ಆವರಿಸಿದ್ದರೂ, ಜೀವಾತ್ಮರು ದೇಹಾತ್ಮಭ್ರಮದಿಂದ ಆತನ ಸ್ವರೂಪವನ್ನು ತಿಳಿಯಲಾರರೋ ಅಂತಹ, ವಿಚಿತ್ರವ್ಯಾಪಾರವುಳ್ಳ ಪರಮಾತ್ಮನಿಗೆ ನಮಸ್ಕಾರವು. ದೇಹ, ಪ್ರಾಣ, ಮನಸ್ಸು, ಇಂದ್ರಿಯಗಳು, ಭೂಮಿ ಮೊದಲಾದ ಪಂಚಭೂತಗಳೂ, ಗಂಧವೇ ಮೊದಲಾದ ಪಂಚತನ್ಮಾತ್ರಗಳೂ, ಇವೆಲ್ಲವೂ ಜೀವನೊಡನೆ ಸಂಬಂಧಿಸಿದ್ದರೂ, ತಮಗಿಂತಲೂ ವಿಲಕ್ಷಣನಾದ ಆ ಜೀವನನ್ನು ಕಾಣಲಾರವು. ಜೀವನಾದರೋ ಆ ದೇಹಾದಿಗಳೆಲ್ಲವನ್ನೂ ತಿಳಿಯಬಲ್ಲನು. ಹೀಗೆಯೇ ಜೀವನು, ಪರಮಾತ್ಮನಿಗೆ ತಾನುಶರೀರಭೂತನಾಗಿದ್ದರೂ, ತನಗಿಂತಲೂವಿಲಕ್ಷಣನಾಗಿ ತನ್ನಲ್ಲಿದ್ದುಕೊಂಡು, ತನ್ನ ಮತ್ತು ತನ್ನ ದೇಹಾದಿಗಳ ಸ್ವರೂಪವನ್ನು ಬಲ್ಲವನಾದ ಪರಮಾತ್ಮನ ಸ್ವರೂಪವನ್ನು ತಾನು ತಿಳಿಯಲಾರನು. ಇಂತಹ ಅಗೋಚರಸ್ವರೂಪನಾದ ಆ ಪರಮಪುರುಷನಿಗೆ ನಮಸ್ಕಾರವು. ಯಾವಾಗ ಜೀವನ ಮನಸ್ಸು ಹೊರಗಿನ ದೇವಮನುಷ್ಯಾದಿನಾಮರೂಪಗಳ ದರ್ಶನಸ್ಮರಣಾದಿಗಳೆಲ್ಲವೂ ಮರೆಹೋಗಿ, ಆ ಮನಸ್ಸು ಸುಷುಪ್ತಿಯಲ್ಲಿರುವಂತೆ ಸ್ವರೂಪಜ್ಞಾನದಲ್ಲಿಮಾತ್ರವೇ ಏಕಾಗ್ರವಾಗಿ ನೆಲೆಗೊಳ್ಳುವುದೋ ಅಂತಹಸ್ಥಿತಿಯಲ್ಲಿ, ರಾಗದ್ವೇಷಾದಿಗಳ ದೋಷಗಳೊಂದೂ ಇಲ್ಲದ ಉಪಾಸನಾರೂಪವಾದ ಜ್ಞಾನಕ್ಕೆ ಮಾತ್ರವೇ ಗೋಚರಿತಕ್ಕವನಾಗಿಯೂ, ಶುದ್ಧಸ್ವರೂಪನಾಗಿಯೂ ಶುದ್ಧಹೃದಯದಲ್ಲಿ ಮಾತ್ರವೇ ನೆಲೆಗೊಂಡವನಾಗಿಯೂ ಇರುವ ಭಗವಂತನಿಗೆ ನಮಸ್ಕಾರವು. ಜ್ಞಾನಿಗಳು, ಒಂಭತ್ತು ಬಗೆಯ * ಸಂಕಲ್ಪಶಕ್ತಿಗಳೊಡನೆ ತಮ್ಮ ಹೃದಯದಲ್ಲಿ ನೆಲೆಗೊಂಡಿರುವ ಯಾಹನನ್ನು, ಅರಣಿಯನ್ನು ಜ್ಞಿ ಬೆಂಕಿಯನ್ನು ತೆಗೆಯುವಂತೆ, ಯೋಗಪರಿಶುದ್ಧವಾದ

* ಇಲ್ಲಿ ಒಂಭತ್ತುಶಕ್ತಿಗಳಾವುವೆಂದರೆ:--"ಶ್ರಿಯಾ ಪುಷ್ಟ್ಯಾಗಿರಾ ಕಾಂತ್ಯಾಕೀರ್ತ್ಯಾ ತುಷ್ಟ್ಯೇಶಯೋರ್ಜಯಾ।ವಿದ್ಯಯಾSವಿದ್ಯಯಾ ಶಕ್ತ್ಯಾಮಾಯಯಾಚ ನಿಷೇವಿತಃ" ಎಂದು ಹೇಳಲ್ಪಟ್ಟನವವಿಧಶಕ್ತಿಗಳೆಂದು ಗ್ರಾಹ್ಯವು.

ನೆನ್ನನ್ನು ಆರಾಧಿಸುತ್ತಿರಲಿ' ಎಂದು ಹೇಳಿ ಭಗವಂತನು, ಆ ಪ್ರಾಚೇತಸನು ನೋಡುತ್ತಿದ್ದಹಾಗೆಯೇ ಕಣ್ಮರೆಯಾದನು. ಪ್ರಾಚೇತಸನಿಗೆ ಕನಸನ್ನು ನೋಡಿ ಕಣ್ಣು ಬಿಟ್ಟಂತೆ, ಕ್ಷಣಕಾಲದೊಳಗಾಗಿ ಏನೂ ಕಾಣಿಸದೆಹೋಯಿತು. ಇದು ನಾಲ್ಕನೆಯ ಅಧ್ಯಾಯವು.

---

## ನಾರದನು ತನ್ನ ಮಕ್ಕಳನ್ನು ಕೆಡಿಸಿದುದಕ್ಕಾಗಿ, ದಕ್ಷನು ಅವನನ್ನು ಶಪಿಸಿದುದು

ಓ ರಾಜೇಂದ್ರಾ! ಇತ್ತಲಾಗಿ ಪ್ರಾಚೇತಸನು, ಭಗವಂತನ ಸಂಕಲ್ಪದಂತೆ ಪುರಂಜನಸ್ತ್ರೀಯನ್ನು ಮದುವೆಯಾಗಿ, ಅವಳಲ್ಲಿ ಹರ್ಯಶ್ವರೆಂದು ಕರೆಯಲ್ಪಡುವ ಹತ್ತು ಸಾವಿರಮಂದಿ ಮಕ್ಕಳನ್ನು ಪಡೆದನು. ಇವರೆಲ್ಲರೂ ಒಂದಾಗಿಯೇ ಕಲೆತು, ಒಂದೇ ಧರ್ಮವನ್ನನುಸರಿಸುವವರಾಗಿದ್ದರು. ಇವರೆಲ್ಲರೂ ಪ್ರಜಾವೃದ್ಧಿಕಾರ್ಯಕ್ಕಾಗಿ ತಂದೆಯಿಂದ ನಿಯಮಿಸಲ್ಪಟ್ಟು ಪಶ್ಚಿಮದಿಕ್ಕಿಗೆ ಹೊರಟರು. ಅಲ್ಲಿ ಸಿಂಧು ನದವು ಸಮುದ್ರದೊಡನೆ ಸೇರುವ ಸ್ಥಳದಲ್ಲಿ, ನಾರಾಯಣಸರಸ್ಸೆಂಬ ಒಂದು ಪುಣ್ಯ ತೀರ್ಥವುಂಟು. ಆ ಸರಸ್ಸು ಮಹಾಮಹಿಮೆಯುಳ್ಳುದಾಗಿ, ಅನೇಕ ಮಹರ್ಷಿಗಳಿಂದಲೂ, ಸಿದ್ಧರಿಂದಲೂ, ಸೇವಿಸಲ್ಪಡುತ್ತಿರುವುದು. ಹರ್ಯಶ್ವರು ಆ ಪುಣ್ಯ ತೀರ್ಥವನ್ನು ಮುಟ್ಟಿದಮಾತ್ರದಿಂದಲೇ ಅವರ ಮನಸ್ಸಿನ ಕಲ್ಮಷಗಳೆಲ್ಲವೂ ಕಳೆದು, ಪರಮಹಂಸರು ನಡೆಸತಕ್ಕ ಸನ್ಯಾಸಧರ್ಮದಲ್ಲಿಯೇ ತಾವೂ ಇರಬೇಕೆಂಬ ಬುದ್ಧಿಯು ಹುಟ್ಟಿತು. ಹಾಗಿದ್ದರೂ ಅವರು ತಂದೆಯಾಜ್ಞೆಯನ್ನು ಮೀರಿ ನಡೆಯಲಾರದೆ, ಪ್ರಜಾವೃದ್ಧಿಗಾಗಿ ದೊಡ್ಡತಪಸ್ಸನ್ನು ಮಾಡತೊಡಗಿದರು. ಅವರು ಸಂತಾನಾಪೇಕ್ಷೆಯಿಂದ ತಪಸ್ಸುಮಾಡುತ್ತಿದ್ದಾಗ, ಆ ಸ್ಥಳಕ್ಕೆ ಅಕಸ್ಮಾತ್ತಾಗಿ ನಾರದ ಮಹರ್ಷಿಯು ಬಂದು, ಅವರನ್ನು ನೋಡಿ "ಅಯ್ಯೋ! ಇದೇನಿದು! ಎಲೈ ಕುಮಾರರೇ! ಅನ್ಯಾಯವಾಗಿ ಕೆಟ್ಟು ಹೋಗುತ್ತಿರುವಿರಲ್ಲಾ! ನೀವು ಇನ್ನೂ ಬಾಲರು! ಏನೂತಿಳಿಯದವರು! ಕೊನೆಗಾಲಕ್ಕೆ ಈ ಪ್ರಪಂಚದ ಪರಿಣಾಮವೇ ನೆಂಬುದನ್ನು ಯೋಚಿಸದೆ, ಸಂತಾನವನ್ನು ಪಡೆಯುವುದಕ್ಕಾಗಿ ಯತ್ನಿಸುವಿರಲ್ಲಾ! ಅದನ್ನು ತಿಳಿದಿದ್ದರೆ ನೀವು ಈ ಕಾರ್ಯಕ್ಕೆ ಪ್ರಯತ್ನಿಸುತ್ತಿರಲಿಲ್ಲ ಈ ಪ್ರಪಂಚಕ್ಕೆಲ್ಲಾ ಈಶ್ವರನೊಬ್ಬನೇ ಪುರುಷನೆಂಬುದನ್ನೂ, ಅವನನ್ನು ಬಿಟ್ಟುನಾವು ಬಯ

ಹೀಗೆಂದು ಹೇಳುವನು. "ಓ ಪ್ರಾಚೇತಸಾ! ನೀನು ಮಹಾಭಾಗ್ಯವಂತನು! ಬಹಳಧೀಮಂತನು! ನೀನು ನನ್ನಲ್ಲಿ ನಿರತಿಶಯವಾದ ಭಕ್ತಿಯನ್ನು ತೋರಿಸಿದು ದಕ್ಕಾಗಿ ನಾನು ಪ್ರಸನ್ನನಾದೆನು. ನಿನ್ನ ತಪಸ್ಸು ಸಿದ್ಧಿಸಿತೆಂದು ತಿಳಿ!, ನಿನ್ನ ಉದ್ದೇಶವು ಲೋಕಾಭಿವೃದ್ಧಿಗೆ ಕಾರಣವಾದುದರಿಂದ ನಾನು ಸಂತೋಷಪಟ್ಟೆನು. ಪ್ರಪಂಚದಲ್ಲಿ ಪ್ರಾಣಿಗಳು ವೃದ್ಧಿಹೊಂದಬೇಕೆಂಬುದೇ ನನಗೂ ಉದ್ದೇಶವು. ನಮ್ಮಿಬ್ಬರ ಕೋರಿಕೆಯೂ ಏಕೀಭವಿಸಿತು. ಬ್ರಹ್ಮರುದ್ರರೂ, ಪ್ರಜಾಧಿಪತಿಗಳಾದ ನೀವೂ ಸ್ವಾಯಂಭುವಾದಿ ಮನುಗಳೂ, ಇಂದ್ರಾದಿದೇವತೆಗಳೂ, ನನ್ನ ಅಂಶ ವಲ್ಲದೆ ಬೇರೆಯಲ್ಲ! ಪ್ರಜಾವೃದ್ಧಿಗಾಗಿಯೇ ನೀವೆಲ್ಲರೂ ಏರ್ಪಟ್ಟಿರುವಿರಿ! ಓ ಬ್ರಾಹ್ಮಣೋತ್ತಮಾ! ತಪಸ್ಸೆಂಬುದು ನನ್ನ ಹೃದಯವು! ವಿದ್ಯೆಯು ನನ್ನ ಶರೀರವು! ಕ್ರಿಯೆಗಳೇ ನನ್ನ ಆಕಾರವು! ಸೋಮಸಹಿತಗಳಾದ ಯಜ್ಞಗಳೂ, ಸೋಮವಿಲ್ಲದ ಕ್ರತುಗಳೂ ನನ್ನ ಅಂಗಗಳು! ದಾನಾದಿಧರ್ಮಗಳೆಲ್ಲವೂ ನನ್ನ ಮನಸ್ಸು! ದೇವತೆಗಳೇ ನನ್ನ ಪ್ರಾಣವು! ಸೃಷ್ಟಿಗೆ ಮೊದಲು ನಾನೊಬ್ಬನೇ ಇದ್ದವನು! ಆಗ ಈ ಚೇತನಾಚೇತನಗಳೊಂದೂ ಕಾಣುತ್ತಿರಲಿಲ್ಲ! ಜೀವಾತ್ಮ ಗಳೆಲ್ಲವೂ ನಾಮರೂಪಗಳೊಂದೂ ಇಲ್ಲದೆ ನನ್ನಲ್ಲಿ ಲೀನವಾಗಿದ್ದುವು. ಹಾಗೆಯೇ ಪ್ರಕೃತಿಯೂ ಸೂಕ್ಷ್ಮದಶೆಯನ್ನು ಹೊಂದಿ ನನ್ನಲ್ಲಿ ಮರೆಸಿಕೊಂಡಿದ್ದಿತು! ನಾನು ಕೊನೆಮೊದಲಿಲ್ಲದ ಕಲ್ಯಾಣಗುಣಗಳುಳ್ಳವನು! ಅಪರಿಚ್ಛಿನ್ನ ಸ್ವರೂಪನು. ಸತ್ವಾದಿ ಗುಣಮಯವಾದ ಪ್ರಕೃತಿಯೆಂಬ ನನ್ನ ಶರೀರವೇ ಈ ಬ್ರಹ್ಮಾಂಡರೂಪವಾಗಿ ಮಾರ್ಪಟ್ಟಿತು! ಅದಕ್ಕೂ ಗುಣಪರಿಣಾಮವೇ ಕಾರಣವು. ಆಗ ಆ ಅಂಡದಿಂದ ಸಮಷ್ಟಿಪುರುಷನಾದ ಬ್ರಹ್ಮದೇವನು ಹುಟ್ಟಿದನು. ದೇವಶ್ರೇಷ್ಠನಾದ ಆ ಚತು ರ್ಮುಖನಿಗೆ ನನ್ನ ಸಂಕಲ್ಪದಿಂದ ಸೃಷ್ಟಿಕಾರ್ಯವನ್ನಾರಂಭಿಸಬೇಕೆಂಬ ಉದ್ದೇಶ ಹುಟ್ಟಿತು. ತನಗೆ ಆ ಸಾಮರ್ಥ್ಯವಿಲ್ಲದುದಕ್ಕಾಗಿ ಚಿಂತಾಕುಲನಾಗಿರುವಾಗ, ನನ್ನಿಂದಲೇ ಪ್ರೇರಿತನಾಗಿ ನನ್ನನ್ನು ಕುರಿತು ಘೋರವಾದ ತಪಸ್ಸನ್ನು ಮಾಡ ತೊಡಗಿದನು. ಆ ತಪಸ್ಸಿದ್ಧಿಯಿಂದ ಸೃಷ್ಟಿಸಾಮರ್ಥ್ಯವನ್ನು ಪಡೆದು, ಮೊದಲು ಪ್ರಜಾಧಿಪತಿಗಳಾದ ನಿಮ್ಮನ್ನು ಸೃಷ್ಟಿಸಿದನು. ಆದುದರಿಂದ ಲೋಕಾಭಿವೃದ್ಧಿಗೆ ತಪಸ್ಸೇ ತಕ್ಕ ಉಪಾಯವು. ಓ ದಕ್ಷಾ! ಪಂಚಜನನೆಂಬ ಪ್ರಜಾಧಿಪತಿಗೆ ಅಸಿಕ್ನಿ ಯೆಂಬ ಪ್ರತ್ರಿಯೊಬ್ಬಳುಂಟು. ಆವಳನ್ನು ನೀನು ಪತ್ನಿಯನ್ನಾಗಿ ಪರಿಗ್ರಹಿಸು. ಅವಳಲ್ಲಿ ನೀನು ಕುಟುಂಬಧರ್ಮದಿಂದ ಪ್ರಜಾವೃದ್ಧಿಯನ್ನೆಂಟುಮಾಡುತ್ತ ಬರ ಬಹುದು. ನಿನ್ನಿಂದಾಚೆಗೆ ಹುಟ್ಟತಕ್ಕವರೂ ಹೀಗೆಯೇ ದಾಂಪತ್ಯಧರ್ಮದಿಂದ ಪ್ರಜೆ ಗಳನ್ನು ಪಡೆಯುವಂತೆ ನಾನು ಸಂಕಲ್ಪಿಸುವೆನು. ಅವರೆಲ್ಲರೂ ಯಜ್ಞಾದಿಕರ್ಮಗಳಿಂದ

ನೆನ್ನನ್ನು ಆರಾಧಿಸುತ್ತಿರಲಿ'' ಎಂದು ಹೇಳಿ ಭಗವಂತನು, ಆ ಪ್ರಾಚೇತಸನು ನೋಡುತ್ತಿದ್ದ ಹಾಗೆಯೇ ಕಣ್ಮರೆಯಾದನು. ಪ್ರಾಚೇತಸನಿಗೆ ಕನಸನ್ನು ನೋಡಿ ಎಣ್ಣು ಬಿಟ್ಟಂತೆ, ಕ್ಷಣಕಾಲದೊಳಗಾಗಿ ಏನೂ ಕಾಣಿಸದೆಹೋಯಿತು. ಇದು ನಾಲ್ಕನೆಯ ಅಧ್ಯಾಯವು.

---

## ನಾರದನು ತನ್ನ ಮಕ್ಕಳನ್ನು ಕೆಡಿಸಿದುದಕ್ಕಾಗಿ, ದಕ್ಷನು ಅವನನ್ನು ಶಪಿಸಿದುದು.

ಓ ರಾಜೇಂದ್ರಾ! ಇತ್ತಲಾಗಿ ಪ್ರಾಚೇತಸನು, ಭಗವಂತನ ಸಂಕಲ್ಪದಂತೆ ಪ್ರರಂಜನಪ್ರತ್ರಿಯನ್ನು ಮದುವೆಯಾಗಿ, ಅವಳಲ್ಲಿ ಹರ್ಯಶ್ವರೆಂದು ಕರೆಯಲ್ಪಡುವ ಹತ್ತು ಸಾವಿರಮಂದಿ ಮಕ್ಕಳನ್ನು ಪಡೆದನು. ಇವರೆಲ್ಲರೂ ಒಂದಾಗಿಯೇ ಕಲೆತು, ಒಂದೇ ಧರ್ಮವನ್ನನುಸರಿಸುವವರಾಗಿದ್ದರು. ಇವರೆಲ್ಲರೂ ಪ್ರಜಾವೃದ್ಧಿಕಾರ್ಯಕ್ಕಾಗಿ ತಂದೆಯಿಂದ ನಿಯಮಿಸಲ್ಪಟ್ಟು ಪಶ್ಚಿಮದಿಕ್ಕಿಗೆ ಹೊರಟರು. ಅಲ್ಲಿ ಸಿಂಧು ನದವು ಸಮುದ್ರದೊಡನೆ ಸೇರುವ ಸ್ಥಳದಲ್ಲಿ. ನಾರಾಯಣಸರಸ್ಸೆಂಬ ಒಂದು ಪುಣ್ಯತೀರ್ಥವುಂಟು. ಆ ಸರಸ್ಸು ಮಹಾಮಹಿಮೆಯುಳ್ಳದಾಗಿ, ಅನೇಕ ಮಹರ್ಷಿಗಳಿಂದಲೂ, ಸಿದ್ಧರಿಂದಲೂ, ಸೇವಿಸಲ್ಪಡುತ್ತಿರುವುದು. ಹರ್ಯಶ್ವರು ಆ ಪುಣ್ಯತೀರ್ಥವನ್ನು ಮುಟ್ಟಿದಮಾತ್ರದಿಂದಲೇ ಅವರ ಮನಸ್ಸಿನ ಕಲ್ಮಷಗಳೆಲ್ಲವೂ ಕಳೆದು, ಪರಮಹಂಸರು ನಡೆಸತಕ್ಕ ಸನ್ಯಾಸಧರ್ಮದಲ್ಲಿಯೇ ತಾವೂ ಇರಬೇಕೆಂಬ ಬುದ್ಧಿಯು ಹುಟ್ಟಿತು. ಹಾಗಿದ್ದರೂ ಅವರು ತಂದೆಯಾಜ್ಞೆಯನ್ನು ಮೀರಿ ನಡೆಯಲಾರದೆ, ಪ್ರಜಾವೃದ್ಧಿಗಾಗಿ ದೊಡ್ಡತಪಸ್ಸನ್ನು ಮಾಡತೊಡಗಿದರು. ಅವರು ಸಂತಾನಾಪೇಕ್ಷೆಯಿಂದ ತಪಸ್ಸುಮಾಡುತ್ತಿದ್ದಾಗ, ಆ ಸ್ಥಳಕ್ಕೆ ಆಕಸ್ಮಾತ್ತಾಗಿ ನಾರದ ಮಹರ್ಷಿಯು ಬಂದು, ಅವರನ್ನು ನೋಡಿ ''ಅಯ್ಯೋ! ಇದೇನಿದು! ಎಲೈ ಕುಮಾರರೇ! ಅನ್ಯಾಯವಾಗಿ ಕೆಟ್ಟು ಹೋಗುತ್ತಿರುವಿರಲ್ಲಾ! ನೀವು ಇನ್ನೂ ಬಾಲರು! ಏನೂ ತಿಳಿಯದವರು! ಕೊನೆಗಾಲಕ್ಕೆ ಈ ಪ್ರಪಂಚದ ಪರಿಣಾಮವೇನೆಂಬುದನ್ನು ಯೋಚಿಸದೆ, ಸಂತಾನವನ್ನು ಪಡೆಯುವುದಕ್ಕಾಗಿ ಯತ್ನಿಸುವಿರಲ್ಲಾ! ಇದನ್ನು ತಿಳಿದಿದ್ದರೆ ನೀವು ಈ ಕಾರ್ಯಕ್ಕೆ ಪ್ರಯತ್ನಿಸುತ್ತಿರಲಿಲ್ಲ. ಈ ಪ್ರಪಂಚಕ್ಕೆಲ್ಲಾ ಈಶ್ವರನೊಬ್ಬನೇ ಪುರುಷನೆಂಬುದನ್ನೂ, ಅವನನ್ನು ಬಿಟ್ಟುನಾವು ಬಯ


ಸಕ್ಕವಸ್ತುವು ಬೇರೊಂದಿಲ್ಲವೆಂಬುದನ್ನೂ ತಿಳಿಯದೆ, ನೀವು ಸಂತಾನವನ್ನ ಪೇಕ್ಷಿಸಿ, ಹೀಗೆ ಕರ್ಮಮಾರ್ಗದಲ್ಲಿ ಪ್ರವರ್ತಿಸುವುದುಂಟೇ! ನಿಮ್ಮ ಬುದ್ಧಿಗೆ ನಾನೇನು ಹೇಳಲಿ! ಈ ಕರ್ಮಮಾರ್ಗದಲ್ಲಿ ಹೋಗತಕ್ಕ ಜೀವನು, ಅಲ್ಲಿನ ಗುಹೆಯಲ್ಲಿ ಪ್ರವೇಶಿಸಿದ ಮೇಲೆ, ಹೊರಗೆ ಬರುವುದಕ್ಕೆ ಉಪಾಯವಿಲ್ಲದೆ ಅಲ್ಲಿಯೇ ನರಳಬೇಕಾದ ಸಂಗತಿಯೂ ನಿಮಗೆ ತಿಳಿದಹಾಗಿಲ್ಲ! ಇದಲ್ಲದೆ ಈ ದಾರಿಯಲ್ಲಿ ಹೊಗತಕ್ಕವನನ್ನು ನಾನಾರೂಪಗಳಿಂದ ವಂಚಿಸತಕ್ಕ ವೇಶ್ಯೆಯೊಬ್ಬಳು ಕಾದಿರುವಳು. ಅವಳ ಕೈಗೆ ಸಿಕ್ಕಿಬಿದ್ದ ಮೇಲೆ ಮನುಷ್ಯನ ಅವಸ್ಥೆಯೇನಾಗುವುದೆಂಬುದನ್ನೂ ನೀವು ಯೋಚಿಸಿದಹಾಗಿಲ್ಲ! ಇದಲ್ಲದೆ ಈ ದಾರಿಯಲ್ಲಿ ಎರಡು ದಡಗಳನ್ನೂ ಮೀರಿ ಹರಿಯುತ್ತಿರುವ ಒಂದು ದೊಡ್ಡನದಿಯು, ಕಾಲುಜಾರಿ ಬಿದ್ದವರನ್ನು ಕೊಚ್ಚಿಸಿಕೊಂಡೇ ಹೋಗುವುದೆಂಬ ಸಂಗತಿಯೂ ನಿಮಗೆ ತಿಳಿದಹಾಗಿಲ್ಲ! ಮತ್ತು ಈ ದಾರಿಯಲ್ಲಿ ಇಪ್ಪತ್ತೈದು ತತ್ವಗಳಿಂದ ಅಶಕ್ಯರ್ಯಕರವಾಗಿ ನಿರ್ಮಿಸಲ್ಪಟ್ಟಿರುವ ಒಂದು ಸೆರೆಮನೆಯುಂಟು. ಅದನ್ನೂ ನೀವು ತಿಳಿದಹಾಗಿಲ್ಲ. ವಿಚಿತ್ರವಾದ ಎರಡು ರೆಕ್ಕೆಗಳೊಡನೆ ಒಂದು ಹಂಸವು ಕಣ್ಣಿಟ್ಟು ಕಾದಿರುವುದು. ಸಣ್ಣ ಕತ್ತಿಗಳಿಂದಲೂ, ವಜ್ರದ ಮುಳ್ಳುಗಳಿಂದಲೂ ನಿರ್ಮಿತವಾಗಿ, ತನಗೆ ತಾನೇ ತಿರುಗುತ್ತಿರುವ ಭಯಂಕರವಾದ ಒಂದು ಚಕ್ರವುಂಟು. ಜನ್ಮಜನ್ಮಕ್ಕೂ ನಿಮಗೆ ತಂದೆಯಂತೆ ಹಿತವನ್ನುಪದೇಶಿಸುತ್ತ ಬರುವ ಸರ್ವಜ್ಞನಾದ ಗುರುವಿನ ಹಿತವಾರ್ತೆಯನ್ನೂ ನೀವು ಗಮನಿಸಿದಹಾಗಿಲ್ಲ. ಇದೊಂದನ್ನೂ ತಿಳಿಯದೆ ನೀವು ಸೃಷ್ಟಿಕಾರ್ಯಕ್ಕಾಗಿ ಯತ್ನಿಸಿ, ಹೀಗೆ ತಪಸ್ಸೆಂಬ ಕರ್ಮವಿಷಮಾರ್ಗದಲ್ಲಿ ಹೋಗುವುದು ಯುಕ್ತವೇ? ಆಹಾ! ಇದೇನು? ನಿಮಗೂ ಈ ಬುದ್ಧಿ ಹುಟ್ಟಿತು?" ಎಂದನು. ಆ ಋಷ್ಯಾಶ್ರಮರು ಬಹಳ ಸೂಕ್ಷ್ಮಬುದ್ಧಿಯುಳ್ಳವರಾಗಿಯೂ, ಸಹಜವಾಗಿಯೇ ವಿಚಾರಪರರಾಗಿಯೂ ಇದ್ದುದರಿಂದ, ಆ ನಾರದನು ಹೇಳಿದ ಮಾತಿನ ಗೂಢಾರ್ಥವನ್ನು ಸ್ವಬುದ್ಧಿಯಿಂದಲೇ ಆಲೋಚಿಸಿ ತಿಳಿದುಕೊಂಡರು! ಅವರಬುದ್ಧಿಯು ಕದಲಿತು! ತಮ್ಮೊಳಗೆ ತಾವು ಹೀಗೆಂದು ಆಲೋಚಿಸುವರು. "ಆಹಾ! ನಾರದನಮಾತು ಸತ್ಯವು! ಮೊದಲೇ ಇದನ್ನಾಲೋಚಿಸದೆ ಮೋಸಹೋದೆವು! ಭೂಮಿ ಮೊದಲಾದ ಪಂಚಭೂತಗಳಿಂದ ಏರ್ಪಟ್ಟುದಾಗಿಯೂ, ಪ್ರಾಣಗಳಿರುವರೆಗೆ ಹೆಸರಿಗೆಮಾತ್ರ ಜೀವನೆಂದು ಕರೆಯಲ್ಪಡತಕ್ಕುದಾಗಿಯೂ ಇರುವ ಈ ದೇಹದ ಪರಿಣಾಮವೇನೆಂಬುದನ್ನು ಯೋಚಿಸದೆ, ಈ ದೇಹಕ್ಕೆ ಕಾರಣವಾದ ಕರ್ಮಬಂಧವನ್ನು ನೀಗಿಸುವುದಕ್ಕೂ ಯತ್ನಿಸದೆ, ನಾವು, ಮೇಲೆಮೇಲೆ ಸಂಸಾರವನ್ನು ತಗಲುಕಟ್ಟುವ ಈ ಕರ್ಮಗಳಲ್ಲಿ ಬಿದ್ದು ಫಲವೇನು? ಮತ್ತು, ಎಚ್ಚರ, ಕನಸು, ನಿದ್ರೆಗಳೆಂಬ ಅವಸ್ಥಾತ್ರಯವನ್ನೂ

ಮೊದಲು, ತನಗೆ ತಾನೇ ಆಧಾರನಾಗಿರುವ ಆ ಭಗವಂತನೊಬ್ಬನೇ ಸಮಸ್ತ ಜಗತ್ತನ್ನೂ ತನ್ನಲ್ಲಿ ಧರಿಸಿ ನಿಯಮಿಸುತ್ತಿರುವನು. ಆ ಪ್ರಧಾನಪುರುಷನೊಬ್ಬನನ್ನು ಪಡೆಯುವುದಕ್ಕೆ ಯತ್ನಿಸದೆ, ಪ್ರಜಾಸೃಷ್ಟಿಗಾಗಿ ಈ ಕರ್ಮಗಳನ್ನಾಚರಿಸಿ ನಮಗಾಗುವ ಪ್ರಯೋಜನವೇನು? ನಾರದನು ಹೇಳಿದಂತೆ ಕರ್ಮಮಾರ್ಗದಲ್ಲಿ ನಡೆಯುವ ಜೀವನು, ಬಲಸ್ಪರ್ಗದಂತಿರುವ ಹೃದಯಬಿಲದಲ್ಲಿ ಸಿಕ್ಕಿಬಿದ್ದನೇಲೆ, ಹೊರಗೆ ಬರುವುದಕ್ಕೆ ದಾರಿಯಿಲ್ಲದೆ ಅಲ್ಲಿಯೇ ನರಳಬೇಕಾಗುವುದು! ಈ ವಿಧವಾಗಿ ಆತ್ಮಸ್ವರೂಪವನ್ನು ಮರೆಸಿ, ಮೇಲೆಮೇಲೆ ಶರೀರಸಂಬಂಧವನ್ನೇ ಉಂಟುಮಾಡುತ್ತಿರುವ ಈ ಕರ್ಮಗಳಿಂದ ಫಲವೇನು? ಇದರಿಂದ ಯಾವ ಸುಖವೂ ಉಂಟಾಗಲಾರದು! ಜಾರಸ್ತ್ರೀಯು ಇತರಪುರುಷರನ್ನು ಮೋಹಗೊಳಿಸುವುದಕ್ಕಾಗಿ, ನಾನಾರೂಪಗಳಿಂದ ಮೆರೆಯುವಂತೆ, ಬುದ್ಧಿಯೆಂಬುದು ರಾಗದ್ವೇಷಾದಿವಿಕಾರಗಳಿಂದ ಜೀವನನ್ನು ಮರುಳುಗೊಳಿಸುವುದಕ್ಕಾಗಿ ಸಿಕ್ಕಿದಹಾಗೆ ತಿರುಗುತ್ತಿರುವುದು. ಹೀಗೆ ಚಪಲಬುದ್ಧಿಯೆಂದುಂಟಾಗತಕ್ಕ ಮೋಹಪಾಶವನ್ನು ತಪ್ಪಿಸಿಕೊಳ್ಳುವುದಕ್ಕೆ ಯತ್ನಿಸದೆ, ಅದಕ್ಕೆ ಮತ್ತಷ್ಟು ಅವಕಾಶವನ್ನುಂಟುಮಾಡತಕ್ಕ ಕರ್ಮಗಳಿಂದ ಪ್ರಯೋಜನವೇನು? ಕೆಟ್ಟ ಹೆಂಗಸನ್ನು ಕೈಹಿಡಿದವನು, ಅವಳ ಮೋಹಕ್ಕೆ ಮರುಳಾಗಿ, ಕೈಯಾಟದಬೊಂಬೆಯಂತೆ ಅವಳು ಹೇಳಿದಹಾಗೆ ನಡೆಯುತ್ತಿರುವನು. ಅವಳು ಕೇಳಿಕೇಳಿದ ವಸ್ತ್ರಾಭರಣಗಳನ್ನು ತಂದುಕೊಡುತ್ತ ತನ್ನ ಸರ್ವೈಶ್ವರ್ಯವನ್ನೂ ಕಳೆದುಕೊಳ್ಳುವನು. ಇದರಂತೆಯೇ ಬುದ್ಧಿಚಾಪಲ್ಯಕ್ಕೆ ವಶನಾದವನು, ತನ್ನ ನಿತ್ಯೈಶ್ವರ್ಯರೂಪವಾದ ಮೋಕ್ಷಮಾರ್ಗವನ್ನೂ, ತನ್ನ ಶುದ್ಧಾತ್ಮಸ್ವರೂಪವನ್ನೂ ಮರೆತು, ಆ ಬುದ್ಧಿಗೆ ವಶನಾಗಿ ಕರ್ಮದಲ್ಲಿ ಬಿದ್ದು ಅಲ್ಪವಾಗಿಯೂ, ಅಸ್ಥಿರಗಳಾಗಿಯೂ ಇರುವ ಸ್ವರ್ಗಾದಿಸುಖಗಳನ್ನೂ, ನರಕದುಃಖಗಳನ್ನೂ ಅನುಭವಿಸುವನು. ಇಂತಹ ಕರ್ಮಗಳಿಂದ ಫಲವೇನು? ಮತ್ತು ಮಾಯೆಯೆಂಬ ನದಿಯು, ಸೃಷ್ಟಿಸಂಹಾರಗಳೆಂಬ ಎರಡು ಕಡೆಯ ಪ್ರವಾಹಗಳಿಂದ, ಇಹಲೋಕ ಪರಲೋಕಗಳೆಂಬ ಎರಡು ತೀರಗಳನ್ನೂ ಆಕ್ರಮಿಸಿ ವೇಗದಿಂದೋಡುತ್ತಿರುವುದು. ಈ ನದಿಯಲ್ಲಿ ಕೊಚ್ಚಿಸಿಕೊಂಡು ಹೋಗತಕ್ಕ ಅಸತ್ಕರ್ಮಗಳಿಂದ ಫಲವೇನು? ಇಪ್ಪತ್ತೈದು ತತ್ವಗಳೆಂಬ ಅಶ್ಚರ್ಯಸಾಮಗ್ರಿಗಳಿಂದ ನಿರ್ಮಿತವಾದ ಈ ಶರೀರವೆಂಬ ಸೆರೆಮನೆಯಲ್ಲಿ ಸಿಕ್ಕಿಸುವುದಕ್ಕೆ ಕರ್ಮಗಳೇ ಮೂಲವು. ಅಂತಹ ಕರ್ಮಗಳಲ್ಲಿ ಬಿದ್ದು ಈ ಅನರ್ಥಗಳನ್ನು ತಂದುಕೊಳ್ಳುವುದೇಕೆ? ಎರಡುರೆಕ್ಕೆಗಳನ್ನೂ ಬಿಚ್ಚಿನಿಂತಿರುವ ಹಂಸದಂತೆ, ಈಶ್ವರನೇ ಸಂಸಾರಬಂಧಕ್ಕೂ, ಮೋಕ್ಷಕ್ಕೂ ಕಾರಣಗಳಾದ ನಿವೃತ್ತಿಮಾರ್ಗವನ್ನೂ ಪ್ರವೃತ್ತಿಮಾರ್ಗವನ್ನೂ ತೋರಿಸತಕ್ಕವನು.

ಮತ್ತು ಅವನು ಸುಲಭವಾಗಿ ಗೋಚರಿಸದೆ ಏಕಾಂತವಾಗಿ ಹೃದಯಗುಹೆಯಲ್ಲಿ ನೆಲೆಗೊಂಡಿರತಕ್ಕವನು. ಇಂತಹ ಸರ್ವೇಶ್ವರನ ಸ್ವರೂಪವನ್ನು ತಿಳಿಯದೆ, ಸಂಸಾರಕಾರಣಗಳಾದ ಅಸತ್ಕರ್ಮಗಳನ್ನು ನಡೆಸಿ ಲಾಭವೇನು? ಕಾಲಚಕ್ರವೆಂಬುದು ಅನವರತವೂ ತಿರುಗುತ್ತ, ಬ್ರಹ್ಮದೇವನು ಮೊದಲುಗೊಂಡು ಸಣ್ಣ ಕ್ರಿಮಿಯವರೆಗೆ ಸಮಸ್ತಜಗತ್ತನ್ನೂ ಕತ್ತರಿಸಿಕೆಡಹುವುದು. ಇದರಲ್ಲಿ ತಲೆಯನ್ನೊಡ್ಡಿಸುವ ಅಸತ್ಕರ್ಮಗಳನ್ನಾಚರಿಸಿ ಫಲವೇನು? ಜನ್ಮಜನ್ಮಕ್ಕೂ ತಂದೆಯಂತೆ ಹಿತವನ್ನು ಬೋಧಿಸುತ್ತಿರುವ ಶಾಸ್ತ್ರಗಳು, ಪ್ರವೃತ್ತಿಧರ್ಮವು ಸಂಸಾರಹೇತುವಾದುದರಿಂದ ಅದನ್ನು ಬಿಟ್ಟು ನಿವೃತ್ತಿಮಾರ್ಗವನ್ನೇ ಹಿಡಿಯಬೇಕೆಂದು ಹೇಳಿರುವಾಗ, ಅದನ್ನು ತಿಳಿಯದೆ, ಈಗಿನ ತಂದೆಯ ಮಾತನ್ನು ಕೇಳಿ, ಸೃಷ್ಟಿಕಾರ್ಯದಲ್ಲಿ ಪ್ರವರ್ತಿಸಿ, ಕರ್ಮಮಾರ್ಗದಲ್ಲಿ ಬೀಳುವುದರಿಂದ ಫಲವೇನು? ನಾರದನ ಮಾತಿನಂತೆ ಈ ಕರ್ಮಮಾರ್ಗವನ್ನು ಬಿಡುವುದೇ ಉತ್ತಮವು" ಎಂದು ಆ ದಕ್ಷಪ್ರಜೆಗಳೆಲ್ಲರೂ ಏಕಮುಖವಾಗಿ ನಿಶ್ಚಯಿಸಿಕೊಂಡರು. ನಾರದನನ್ನು ಪ್ರದಕ್ಷಿಣನಮಸ್ಕಾರಗಳಿಂದ ಪೂಜಿಸಿ ಕಳುಹಿಸಿ, ತಾವು ಕರ್ಮಮಾರ್ಗವನ್ನು ಬಿಟ್ಟು ನಿವೃತ್ತಿಮಾರ್ಗವನ್ನೇ ಹಿಡಿದರು. ಫಲಾಪೇಕ್ಷೆಯಿಲ್ಲದೆ ಪರಮಪುರುಷನನ್ನು ಆರಾಧಿಸತೊಡಗಿ ದೇಹವನ್ನೂ ನೀಗಿದರು. ಅತ್ತಲಾಗಿ ನಾರದಮಹರ್ಷಿಯೂಕೂಡ, ಭಗವಂತನ ಪಾದಾರವಿಂದಗಳಲ್ಲಿ ನಟ್ಟ ಮನಸ್ಸುಳ್ಳವನಾಗಿ, ಭಗವನ್ನಾಮಗಳನ್ನು ನುಡಿಯುತ್ತಿರುವ ವೀಣಾಗಾನದೊಡನೆ ಲೋಕಸಂಚಾರಕ್ಕಾಗಿ ಹೊರಟನು. ಆಮೇಲೆ ದಕ್ಷಪ್ರಜಾಪತಿಯು, ಗುಣಾಢ್ಯರಾದ ತನ್ನ ಮಕ್ಕಳೆಲ್ಲರೂ ನಾರದನ ಪ್ರೇರಣೆಯಿಂದ, ತನ್ನ ಮಾತನ್ನೂ ವಿೂರಿ, ಸೃಷ್ಟಿಕಾರ್ಯದಲ್ಲಿ ಪ್ರಯತ್ನಿಸದೆ, ದೇಹತ್ಯಾಗದಿಂದ ಮುಕ್ತಿಯನ್ನು ಹೊಂದಿದರೆಂಬ ವೃತ್ತಾಂತವನ್ನು ಕೇಳಿ ಬಹಳವಾಗಿ ದುಃಖಿಸಿದನು. ರಾಜೇಂದ್ರಾ! "ಸುಪ್ರಶ್ನರನ್ನು ಪಡೆಯುವುದು ಶೋಕಕ್ಕೆ ಕಾರಣ" ವೆಂಬ ಲೋಕೋಕ್ತಿಯು ಸತ್ಯವಾಯಿತು ನೋಡು! ದಕ್ಷನು ತನ್ನ ಮಕ್ಕಳ ಸ್ಥಿತಿಯನ್ನು ಕರಿತು ಬಹಳ ದುಃಖಿತನಾಗಿದ್ದರೂ, ತನ್ನ ತಾತನಾದ ಬ್ರಹ್ಮನ ಉಪದೇಶದಿಂದ ಮನಸ್ಸವಾಧಾನವನ್ನು ತಂದುಕೊಂಡು, ತಿರುಗಿ ತನ್ನ ಪತ್ನಿಯಾದ ಪಾಂಚಜನಿಯಲ್ಲಿ ಶಬಲಾಶ್ವರೆಂಬ ಸಾವಿರಮಂದಿಮಕ್ಕಳನ್ನು ಪಡೆದನು. ಈ ಮಕ್ಕಳೂಕೂಡ ತಂದೆಯಾದ ದಕ್ಷನಿಂದ ಪ್ರಜಾಸೃಷ್ಟಿಕಾರ್ಯಕ್ಕಾಗಿ ನಿಯಮಿಸಲ್ಪಟ್ಟು, ನಿಯಮನಿಷ್ಠರಾಗಿ, ಹಿಂದೆ ತಮ್ಮ ಅಣ್ಣಂದಿರಾದ ಹರ್ಯಶ್ವರು ತಪಸ್ಸಿದ್ಧಿಗಾಗಿ ಹೋಗಿದ್ದ ನಾರಾಯಣಸರೋವರಕ್ಕೇ ಬಂದು ಸೇರಿದರು. ಇವರೂ ಆ ತೀರ್ಥಸ್ಪರ್ಶದಿಂದ ಶುದ್ಧಮನಸ್ಕರಾಗಿ, ಪ್ರಣವಮಂತ್ರವನ್ನು ಜಪಿಸುತ್ತ ಉಗ್ರತಪಸ್ಸನ್ನು ಮಾಡ

ತೊಡಗಿದರು. ಕೆಲವು ತಿಂಗಳುಗಳವರೆಗೆ ಕೇವಲಜಲಪಾನದಿಂದಲೂ, ಆಮೇಲೆ ಕೆಲವು ದಿನಗಳವರೆಗೆ ಕೇವಲವಾಯುಭಕ್ಷಣದಿಂದಲೂ, ''ಓಂ ನಮೋನಾರಾಯಣಾಯ'' ಎಂಬೀ ಮಂತ್ರದೊಡನೆ ಮಂತ್ರಾಧಿದೇವತೆಯಾದ ಶ್ರೀಹರಿಯನ್ನಾರಾಧಿಸುತ್ತ ಹೀಗೆಂದು ಸ್ತೋತ್ರಮಾಡುವರು. 'ಓ ದೇವಾ! ಸಮಸ್ತಜೀವರಾಶಿಗಳಿಗೂ ನೀನೇ ಸದ್ಗತಿಯನ್ನು ಹೊಂದಿಸತಕ್ಕವನು. ಆವರು ಆ ನಿನ್ನ ಅನುಗ್ರಹದಿಂದ ಪಡೆಯಬೇಕಾದ ಸದ್ಗತಿಯೂ ನೀನೇ! ಅವೆಲ್ಲಕ್ಕೂ ನೀನೇ ಆಧಾರನು! ಜೀವಾತ್ಮರ ಹೃದಯಕಮಲದಲ್ಲಿ ನೆಲೆಗೊಂಡು, ಅವರನ್ನು ಆ ಕಾರ್ಯದಲ್ಲಿ ನಿಯಮಿಸತಕ್ಕವನೂ ನೀನೇ! ರಜಸ್ತಮೋಗುಣಗಳ ಸಂಪರ್ಕವೇ ಇಲ್ಲದೆ ಶುದ್ಧ ಸತ್ವಮಯವಾದ ಸ್ಥಾನದಲ್ಲಿ, ಸಮಸ್ತಕಲ್ಯಾಣಗುಣವಿಶಿಷ್ಟನಾಗಿ, ದೋಷರಹಿತನಾಗಿ ನೆಲೆಗೊಂಡಿರುವ ನಿನಗೆ ನಮಸ್ಕಾರವು. ಸರ್ವೇಶ್ವರನಾದ ನಿನ್ನನ್ನು ಧ್ಯಾನಿಸುವೆವು'' ಎಂದು ಹೇಳಿ ಬಾರಿಬಾರಿಗೂ ನಾರಾಯಣಮಂತ್ರವನ್ನು ಜಪಿಸುತ್ತ, ಸಂತಾನಾಪೇಕ್ಷೆಯಿಂದ ಭಗವಂತನನ್ನು ಪ್ರಾರ್ಥಿಸುತ್ತಿದ್ದರು. ಇವನ್ನು ತಿಳಿದು ನಾರದ ಮಹರ್ಷಿಯು, ತಿರುಗಿ ಅಲ್ಲಿಗೆ ಬಂದು, ಮೊದಲಿನಂತೆಯೇ ಅವರಿಗೂ ನಿವೃತ್ತಿಮಾರ್ಗವನ್ನು ಬೋಧಿಸತೊಡಗಿ ಹೀಗೆಂದು ಹೇಳುವನು. ''ಎಲೈ ಕುಮಾರರೇ! ಇದೇನಿದು! ನಾನು ಹೇಳತಕ್ಕ ಮಾತುಗಳನ್ನು ಸಾವಧಾನವಾಗಿ ಕೇಳಿರಿ! ನೀವು ನಿಮ್ಮ ಸಹೋದರರಲ್ಲಿ ವಿಶೇಷವಾತ್ಸಲ್ಯವುಳ್ಳವರಲ್ಲವೇ? ಆದುದರಿಂದ ನಿಮ್ಮ ಸಹೋದರರ ಮಾರ್ಗವನ್ನೇ ನೀವೂ ಅನುಸರಿಸಿ ಹೋಗಬೇಕಾದುದು ಯುಕ್ತವು! ಅದೇ ನಿಮಗೆ ಶ್ರೇಯಸ್ಕರವಾದ ದಾರಿಯು! ಲೋಕದಲ್ಲಿ ಯಾವನು ಧರ್ಮಸೂಕ್ಷ್ಮವನ್ನು ತಿಳಿದು ತನ್ನ ಜ್ಯೇಷ್ಠಸಹೋದರರು ನಡೆದ ಧರ್ಮಮಾರ್ಗವನ್ನೇ ಅನುವರ್ತಿಸುವನೋ ಅವನು ತನ್ನ ಪುಣ್ಯಬಲದಿಂದ ಉತ್ತಮಗತಿಯನ್ನು ಹೊಂದಿ ದೇವತೆಗಳೊಡನೆ ಸೇರಿ ಸುಖಿಸುವನು.'' ಮಹಾತ್ಮನಾದ ನಾರದನು ಇಷ್ಟುಮಾತ್ರವನ್ನು ಹೇಳಿ ಹೊರಟುಹೋದನು. ಶಬಲಾಶ್ವರಿಗೆ ನಾರದನ ಮಾತಿನಲ್ಲಿ ನಂಬಿಕೆಯು ಹುಟ್ಟಿ, ಅವರೂ ತಮ್ಮ ಅಣ್ಣಂದಿರಂತೆ ಪ್ರಜಾಭಿಲಾಷೆಯನ್ನು ಬಿಟ್ಟು, ವಿರಕ್ತಿಮಾರ್ಗದಿಂದ ನಿವೃತ್ತಿಧರ್ಮವನ್ನೇ ಹಿಡಿದರು. ಮೊದಲು ಅವರು ಬ್ರಹ್ಮಾತ್ಮಕವಾದ ಆತ್ಮಸ್ವರೂಪವನ್ನು ಜ್ಞಾನಯೋಗದಿಂದ ತಿಳಿದು, ದೇಹಸಂಬಂಧವನ್ನು ನೀಗಿದರು. ಸ್ವಯಂಪ್ರಕಾಶರಾದ ಜೀವರು ಅತಿವಾಹಿಕರೊಡನೆ ಪ್ರಯಾಣಮಾಡತಕ್ಕುದಾಗಿಯೂ, ಪರಮಪುರುಷನ ಸಾನ್ನಿಧ್ಯವನ್ನು ಸೇರಿಸತಕ್ಕುದಾಗಿಯೂ ಇರುವ ಅರ್ಚಿರಾದಿಮಾರ್ಗದಿಂದ ಹೊರಟು, ಕಳೆದು ಹೋದರಾತ್ರಿಗಳಂತೆ ಪುನರಾವೃತ್ತಿಯಿಲ್ಲದ ಮೋಕ್ಷದಲ್ಲಿರುವರು.

ಇತ್ತಲಾಗಿ ದಕ್ಷನಿಗೆ ಅನೇಕದುಶ್ಶಕುನಗಳು ಕಂಡುಬಂದುವು. ಇದರಕಾರಣವನ್ನು ವಿಚಾರಿಸುವಾಗ, ತನ್ನ ಹಿಂದಿನ ಮಕ್ಕಳಂತೆಯೇ ಶಬಲಾಶ್ವರೂ ನಾರದನ ಉಪದೇಶದಿಂದ ದೇಹತ್ಯಾಗವನ್ನು ಮಾಡಿದುದಾಗಿ ತಿಳಿಯಬಂದಿತು. ಆ ದಕ್ಷನು ಪುತ್ರಶೋಕದಿಂದ ತಪಿಸುತ್ತಿದ್ದಾಗ, ದೈವಿಕವಾಗಿ ನಾರದನೂ ಬಂದು ಸೇರಿದನು. ಇವನನ್ನು ಕಂಡೊಡನೆ ದಕ್ಷನು, ಅತ್ಯಾಗ್ರಹದಿಂದುರಿಯುತ್ತ, "ನಾರದಾ! ನೀನು ಹೊರಕ್ಕೆಮಾತ್ರ ಸಾಧುವೇಷದಿಂದ ತಿರುಗುತ್ತಿರುವೆಯೇ ಹೊರತು, ನಿನ್ನಲ್ಲಿ ಸ್ವಲ್ಪಮಾತ್ರವೂ ಸಾಧುಗುಣವಿಲ್ಲ. ನೀನು ಕೇವಲ ಕಪಟಿ! ನನ್ನ ಮಕ್ಕಳಿಗೆ ದುರ್ಬೋಧನೆಗಳನ್ನು ಮಾಡಿ ಅನ್ಯಾಯವಾಗಿ ಅವರನ್ನು ಕೆಡಿಸಿದೆಯಲ್ಲಾ! ಸ್ವಧರ್ಮದಲ್ಲಿದ್ದವರಿಗೆ ದುರುಪದೇಶವನ್ನು ಮಾಡಿ ಸನ್ಯಾಸಿಗಳ ಮಾರ್ಗದಲ್ಲಿ ತಳ್ಳಿದೆಯಲ್ಲವೇ? ಅಯ್ಯೋ! ನಿನ್ನಿಂದ ನನ್ನ ಮಕ್ಕಳು ಎಲ್ಲಾ ವಿಧದಿಂದಲೂ ಕೆಟ್ಟು ಹೋದರು! ಅವರು ಕರ್ಮಪ್ರತಿಪಾದಕಗಳಾದ ವೇದಶಾಸ್ತ್ರಾಭ್ಯಾಸಗಳಿಂದ ಋಷಿಗಳ ಸಾಲವನ್ನೂ ತೀರಿಸಲಿಲ್ಲ! ಸಂತಾನವನ್ನು ಪಡೆದು ಪಿತೃಋಣವನ್ನೂ ತೀರಿಸಲಿಲ್ಲ! ಯಜ್ಞಯಾಗಾದಿಗಳಿಂದ ದೇವತೆಗಳ ಋಣವನ್ನೂ ತೀರಿಸಲಿಲ್ಲ! ಲೋಕದಲ್ಲಿ ಮನುಷ್ಯಜನ್ಮವನ್ನೆತ್ತಿದಮೇಲೆ, ಅವಶ್ಯವಾಗಿ ತೀರಿಸಬೇಕಾದ ದೇವರ್ಷಿ ಪಿತೃಋಣಗಳೆಂಬ ಈ ಮೂರುಸಾಲಗಳನ್ನೂ ತೀರಿಸುವುದಕ್ಕೆ ಮೊದಲೇ ನನ್ನ ಮಕ್ಕಳನ್ನು ನೀನು ಹಾಳುಮಾಡಿದೆ! ಎಲೆಪಾಪೀ! ಅವರಿಗೆ ಇಹಲೋಕ ಪರಲೋಕಗಳೆರಡರಲ್ಲಿಯೂ ಕ್ಷೇಮವಿಲ್ಲದಂತೆ ಮಾಡಿದೆಯಲ್ಲಾ! ಲೋಕದಲ್ಲಿನಿನ್ನಂತೆ ನಿರ್ಘೃಣರಾರುಂಟು! ಅರಿಯದ ಮಕ್ಕಳನ್ನು ಅನ್ಯಾಯವಾಗಿ ಕೆಡಿಸಿದ ನೀನು, ಆ ಭಗವಂತನ ಕೀರ್ತಿಯನ್ನು ಕೆಡಿಸುವುದಕ್ಕಾಗಿಯೇ, ಭಗವದ್ಭಕ್ತನೆಂಬ ವೇಷದಿಂದ ತಿರುಗುವಂತಿದೆ! ಆಯ್ಯೋ! ನೀನು ನಾಚಿಕೆಯಿಲ್ಲದೆ ಭಗವದ್ಭಕ್ತರಾದ ಸಾಧುಗಳ ಗುಂಪಿನಲ್ಲಿ ಹೇಗೆ ನಿಲ್ಲುವೆ? ನಿನಗೆ ಕಲಹಪ್ರಿಯನೆಂಬ ಹೆಸರು ಉಚಿತವಾಗಿಯೇ ಇರುವುದು! ಭಗವದ್ಭಕ್ತರಲ್ಲಿ ಬೇರೆಯಾರೂನಿನ್ನಂತೆ ದಯಾಶೂನ್ಯರಾಗಿಲ್ಲ! ಅವರೆಲ್ಲರೂ ಯಾವಾಗಲೂ ಇತರಭೂತಗಳಿಗೆ ಹಿತವನ್ನೇ ಕೋರತಕ್ಕವರು. ಪ್ರಾಣಿಗಳಿಗೆ ಕೇಡನ್ನೇ ಹುಡುಕುತ್ತಿರುವ ನೀನು, ಅಂತಹ ಮಹಾತ್ಮರ ಗುಂಪಿನಲ್ಲಿ ನಾಚಿಕೆಯಿಲ್ಲದೆ ಹೇಗೆ ತಾನೇ ತಿರುಗುವೆ? ಆದರೆ ಪ್ರಾಣಿಗಳಿಗೆ ಶಬ್ದಾದಿವಿಷಯಗಳಲ್ಲಿರತಕ್ಕ ದುಃಖವನ್ನು ತಿಳಿಸಿ, ವೈರಾಗ್ಯವನ್ನು ಹುಟ್ಟಿಸುವುದಾಗಿ ನೀನು ತಿಳಿದಿರಬಹುದು. ಸಾಧುಗಳಂತೆ ವೇಷಧಾರಿಯಾಗಿ ತಿರುಗುತ್ತ ಅರಿಯದ ಮಕ್ಕಳ ಬುದ್ಧಿಯನ್ನು ಕೆಡಿಸಿದಮಾತ್ರಕ್ಕೆ ಅವರು ವಿರಕ್ತರಾಗುವರೇ? ಎಂದಿಗೂ ಇಲ್ಲ! ಇದರಿಂದ ಅವರಿಗೆ ಸರಿಯಾದ ಜ್ಞಾನೋದಯವೂ ಆಗಲಾರದು. ತಾವಾಗಿಯೇ



187. ದಕ್ಷನ ಮಕ್ಕಳಾದ ಶಬಲಾಶ್ವರು ತಪಸ್ಸು ಮಾಡುತ್ತಿದ್ದಾಗ, ನಾರದನು ಅವರಿಗೆ ನಿವೃತ್ತಿಮಾರ್ಗವನ್ನು ಬೋಧಿಸಿದುದು. ದಕ್ಷನು ಅದಕ್ಕಾಗಿ ಕೋಪಗೊಂಡು ನಾರದನನ್ನು ಶಪಿಸಿದುದು.

ಅನುಭವಿಸಿ ತಿಳಿಯುವುದರಿಂದ ಹುಟ್ಟುವಷ್ಟು ಜ್ಞಾನವು, ಬೇರೆಯವರ ಉಪದೇಶದಿಂದ ಹುಟ್ಟಲಾರದು. ಮನುಷ್ಯನು ವಿಷಯೋಪಭೋಗಗಳಲ್ಲಿ ಬಿದ್ದು, ಅದರಲ್ಲಿರುವ ದುಃಖಗಳನ್ನು ಚೆನ್ನಾಗಿ ತಿಳಿದು, ತಾನಾಗಿಯೇ ವಿರಕ್ತಿಹೊಂದಿದರೆ, ಆ ವೈರಾಗ್ಯವು ಸ್ಥಿರವಾಗಿ ನಿಲ್ಲುವಂತೆ, ಮತ್ತೊಬ್ಬರ ದುರ್ಬೋಧನೆಯಿಂದ ಬುದ್ಧಿಯು ಕದಲಿದಮಾತ್ರಕ್ಕೆ ಸ್ಥಿರವಾದ ವೈರಾಗ್ಯವು ಹುಟ್ಟಲಾರದು! ಆದುದರಿಂದ ನಾರದಾ! ಬೇರೊಬ್ಬರಿಗೆಕೇಡನ್ನು ಬಯಸದೆ, ಗೃಹಸ್ಥಧರ್ಮದಲ್ಲಿ ಕರ್ಮನಿರತರಾಗಿರುವ ನಮಗೆ ಅನ್ಯಾಯವಾಗಿ ಮಹಾಪಕಾರವನ್ನು ಮಾಡಿದೆಯಲ್ಲಾ! ನಾವು ಇದನ್ನು ಸಹಿಸಲಾರೆವು. ಎಲೆ ಮೂಢಾ! ಅನ್ಯಾಯವಾಗಿ ನಮ್ಮ ಸಂತತಿಯನ್ನು ಕೆಡಿಸಿದ ನೀನು, ಕ್ಷಣಮಾತ್ರವೂ ಒಂದು ಸ್ಥಳದಲ್ಲಿ ನೆಲೆಯಾಗಿ ನಿಲ್ಲದೆ ಪರದೇಶಿಯಂತೆ ಸುತ್ತುತ್ತಿರು" ಎಂದು ಶಪಿಸಿದನು. ಓ ಪರೀಕ್ಷಿದ್ರಾಜಾ! ದಕ್ಷನು ಹೀಗೆ ಕೋಪದಿಂದ ಶಪಿಸಿದರೂ, ಸಾಧುಸಮ್ಮತನಾದ ನಾರದನು ಆಶಾಪವನ್ನು ಗೌರವಪೂರ್ವಕವಾಗಿ ಸ್ವೀಕರಿಸಿದನೇಹೊರತು ಕೋಪಿಸಲಿಲ್ಲ. ಆಗಲೇ ಅವನು ಪ್ರತಿಶಾಪವನ್ನು ಕೊಡುವುದಕ್ಕೆ ಸಮರ್ಥನಾಗಿದ್ದರೂ ಬಾಯಿತ್ತದೆ ತಾಳ್ಮೆಯಿಂದಿದ್ದನು. ಹೀಗೆ ಲೋಕದಲ್ಲಿ ಯಾವನು ತನಗೆ ಶಕ್ತಿಯಿದ್ದರೂ ತಾಳ್ಮೆಯನ್ನು ತಂದುಕೊಳ್ಳುವನೋ ಅವನೇ ಸಾಧುವೆನಿಸುವನು! ನಾರದನ ಸಾಧುತ್ವವು ಇದರಿಂದ ವ್ಯಕ್ತವಾಗುವುದು. ಇಲ್ಲಿಗೆ ಐದನೆಯ ಅಧ್ಯಾಯವು.

---

## ಶುಕಮುನಿಯು ದಕ್ಷನ ಮತ್ತು ಕಶ್ಯಪನ ಸಂತತಿಕ್ರಮವನ್ನು ತಿಳಿಸಿದುದು.

ರಾಜಾ! ಕೇಳು! ದಕ್ಷನು ಪುತ್ರಮರಣದಿಂದ ದುಃಖಿಸುತ್ತಿರುವುದನ್ನು ತಿಳಿದು, ಚತುರ್ಮುಖನು ಅವನಬಳಿಗೆಬಂದು, ಅವನಿಗೆ ದುಃಖಸಮಾಧಾನವನ್ನು ಮಾಡಿ, ಮುಂದೆ ಪ್ರಜಾಸೃಷ್ಟಿಗೆ ಉಪಾಯವನ್ನು ತಿಳಿಸಿದನು. ಅದರಂತೆ ದಕ್ಷನು ಮನಶ್ಯಾಂತಿಯನ್ನು ಹೊಂದಿ, ಅಸಿಕ್ನಿಯೆಂಬ ಪತ್ನಿಯಲ್ಲಿ ಪಿತೃವತ್ಸಲೆಯರಾದ ಅರುವತ್ತುಮಂದಿ ಕನ್ಯೆಯರನ್ನು ಪಡೆದನು. ಅವರಲ್ಲಿ ಹತ್ತುಮಂದಿಯನ್ನು ಧರ್ಮನಿಗೆ ವಿವಾಹಮಾಡಿಕೊಟ್ಟನು. ಬೇರೆ ಹದಿಮೂರುಮಂದಿ ಕನ್ಯೆಯರನ್ನು ಕಶ್ಯಪನಿಗೂ, ಇಪ್ಪತ್ತೇಳುಮಂದಿ ಕನ್ಯೆಯರನ್ನು ಚಂದ್ರನಿಗೂ ಕೊಟ್ಟು ವಿವಾಹಮಾಡಿದನು. ಉಳಿದ ಹತ್ತುಕುವಾರಿಯರಲ್ಲಿ ರುದ್ರನಿಗೆ ಇಬ್ಬರನ್ನೂ, ಅಂಗಿರಸ್ಸಿಗೆ ಇಬ್ಬರನ್ನೂ,

ಕೃಶಾಶ್ವನಿಗೆ ಇಬ್ಬರನ್ನೂ ಕೊಟ್ಟನು. ಈ ದಕ್ಷಕನ್ಯೆಯರಿಂದ ಹುಟ್ಟಿದ ಸಂತಾನವೇ ಮೂರುಲೋಕವನ್ನೂ ವ್ಯಾಪಿಸಿರುವುದು. ಈ ದಕ್ಷಕನ್ಯೆಯರಲ್ಲಿ ಒಬ್ಬೊಬ್ಬರ ಹೆಸರನ್ನೂ, ಅವರಿಂದುಂಟಾದ ಸಂತತಿಯನ್ನೂ, ಆಯಾ ಸಂತತಿಯಲ್ಲಿ ಪ್ರಮುಖರಾದವರ ಹೆಸರನ್ನೂ ತಿಳಿಸುವೆನು ಕೇಳು! ಧರ್ಮನಿಗೆ ವಿವಾಹಮಾಡಿಕೊಟ್ಟ ಹತ್ತುಮಂದಿ ದಕ್ಷಕನ್ಯೆಯರಿಗೂ ಕ್ರಮವಾಗಿ, ಭಾನು, ಲಂಬೆ, ಕಕುಭೆ, ಜಾಮಿ, ವಿಶ್ವೆ, ಸಾಧ್ಯೆ, ಮರುತ್ವತಿ ವಸು, ಮುಹೂರ್ತೆ, ಸಂಕಲ್ಪೆಯೆಂದು ಹೆಸರು. ಇವರಲ್ಲಿ ಭಾನುವೆಂಬವಳಿಂದ, ವೇದನೆಂದೂ, ಋಷಭನೆಂದೂ ಇಬ್ಬರು ಕುಮಾರರು ಹುಟ್ಟಿದರು. ಆ ಋಷಭನಿಗೆ ಇಂದ್ರಸೇನನೆಂಬ ಮಗನುಹುಟ್ಟಿದನು. ಧರ್ಮನ ಎರಡನೆಯ ಪತ್ನಿಯಾದ ಲಂಬೆಯಲ್ಲಿ ವಿದ್ಯೋತನೆಂಬ ಪುತ್ರನು ಜನಿಸಿದನು. ಈ ವಿದ್ಯೋತನಿಗೆ ಸ್ತನಯಿತ್ನುಗಳೆಂಬ ಕೆಲವು ಪುತ್ರರು ಹುಟ್ಟಿದರು. ಮೂರನೆಯ ಪತ್ನಿಯಾದ ಕಕುಭೆಯೆಂಬವಳಲ್ಲಿ ಕೀಕಟನೆಂಬ ಪುತ್ರನು ಜನಿಸಿದನು. ಈ ಕೀಕಟನಿಗೆ ಸಂಕಟನೆಂಬ ಪುತ್ರನು ಹುಟ್ಟಿದನು. ನಾಲ್ಕನೆಯ ಪತ್ನಿಯಾದ ಜಾಮಿಯಲ್ಲಿ ದುರ್ಗಾಭಿಮಾನಿದೇವತೆಗಳೆಂಬ ಕೆಲವರು ಹುಟ್ಟಿದರು. ಇವರಿಂದ ಸ್ವರ್ಗನೆಂದೂ, ನಂದಿಯೆಂದೂ ಇಬ್ಬರು ಕುಮಾರರು ಜನಿಸಿದರು. ಐದನೆಯ ಭಾರ್ಯೆಯಾದ ವಿಶ್ವೆಯೆಂಬವಳಲ್ಲಿ ವಿಶ್ವೇದೇವತೆಗಳು ಹುಟ್ಟಿದರು. ಇವರಿಗೆ ಸಂತಾನವಿಲ್ಲವೆಂದು ಹೇಳುವರು. ಸಾಧ್ಯೆಯೆಂಬ ಐದನೆಯವಳಲ್ಲಿ ಸಾಧ್ಯರೆಂಬ ದೇವತೆಗಳು ಹುಟ್ಟಿ, ಅವರಿಂದ ಅರ್ಥಸಿದ್ಧನೆಂಬಮಗನುಜನಿಸಿದನು. ಮರುದ್ವತಿಯೆಂಬ ಎಂಟನೆಯ ಭಾರ್ಯೆಯಲ್ಲಿ ಮರುದ್ವಂತನೆಂದೂ, ಜಯಂತನೆಂದೂಇಬ್ಬರು ಮಕ್ಕಳು ಜನಿಸಿದರು ಈ ಜಯಂತನು ಭಗವಂತನ ಅಂಶದಿಂದ ಹುಟ್ಟಿದನನು ಇವನನ್ನು ಉಪೇಂದ್ರನೆಂದೂ ಹೇಳುವರು. ಮುಹೂರ್ತೆಯಲ್ಲಿ ಮೌಹೂರ್ತಿಕರೆಂಬ ಕೆಲವು ದೇವಗಣಗಳು ಹುಟ್ಟಿದುವು ಇವರೇ ಮುಹೂರ್ತಾಭಿಮಾನಿ ದೇವತೆಗಳು. ಪ್ರಾಣಿಗಳಿಗೆ ಆಯಾ ಮುಹೂರ್ತಸಂಬಂಧದಿಂದುಂಟಾಗತಕ್ಕ ಸುಖದುಃಖಗಳನ್ನು ಇವರೇ ಕೊಡತಕ್ಕವರು. ಸಂಕಲ್ಪೆಯೆಂಬವಳ ಗರ್ಭದಲ್ಲಿ ಸಂಕಲ್ಪನೆಂಬವನು ಜನಿಸಿ, ಕಾಮನೆಂಬ ಕುಮಾರನನ್ನು ಪಡೆದನು. ವಸುವೆಂಬವಳಗರ್ಭದಲ್ಲಿ ಅಷ್ಟವಸುಗಳು ಜನಿಸಿದರು. ಇವರಿಗೆ ಕ್ರಮವಾಗಿ ದ್ರೋಣ, ಪ್ರಾಣ, ಧ್ರುವ, ಅರ್ಕ, ಅಗ್ನಿ, ದೋಷ, ವಸು, ವಿಭಾವಸುಗಳೆಂದು ಹೆಸರು ಇವರಲ್ಲಿ ದ್ರೋಣಪತ್ನಿಯಾದ ಅಭಿಮತಿಯೆಂಬವಳಿಗೆ ಹರ್ಷಶೋಕಭಯ ಮೊದಲಾದ ಮಕ್ಕಳು ಹುಟ್ಟಿದರು. ಪ್ರಾಣನ ಪತ್ನಿಯಾದ ಊರ್ಜಸ್ವತಿಯಲ್ಲಿ ಸಹನೆಂದೂ, ಆಯುವೆಂದೂ, ಪುರೋಜವನೆಂದೂ ಮೂವರು ಮಕ್ಕಳಾದರು. ಧ್ರುವಪತ್ನಿಯಾದ ಧರಣಿಯೆಂಬವಳುಹಲವು ಮಂದಿ

ಪುರಾಭಿಮಾನಿದೇವತೆಗಳನ್ನು ಪಡೆದಳು. ಅರ್ಕಭಾರ್ಯೆಯಾದ ಅಶನಿಯೆಂಬವಳು ದರ್ಶನೇ ಮೊದಲಾದ ಕೆಲವು ಮಕ್ಕಳನ್ನು ಹಡೆದಳು. ಅಗ್ನಿಪತ್ನಿಯಾದ ವಸುಧಾರೆಯೆಂಬನಳಿಗೆ ದ್ರವಿಣನೇ ಮೊದಲಾದ ಕೆಲವು ಮಕ್ಕಳು ಹುಟ್ಟಿದರು. ಈ ಅಗ್ನಿಗೆ ಕೃತ್ತಿಕೆಯೆಂಬ ಭಾರ್ಯೆಯಲ್ಲಿ ಸ್ಕಂದನು ಹುಟ್ಟಿದನು. ವಿಶಾಖ ಮೊದಲಾದವರು ಈ ಸ್ಕಂದನ ಮಕ್ಕಳು. ದೋಷನ ಪತ್ನಿಯಾದ ಶರ್ವರಿಯೆಂಬವಳಲ್ಲಿ ಶಿಂಶುಮಾರನು ಹುಟ್ಟಿದನು. ಇವನೂ ಭಗವಂತನ ಅಂಶಭೂತನು. ವಸುಪತ್ನಿಯಾದ ಅಂಗಿರಸಿಯಲ್ಲಿ ವಿಶ್ವಕರ್ಮನು ಹುಟ್ಟಿದನು. ಇವನೇ ದೇವತೆಗಳಿಗೆ ಶಿಲ್ಪಿ. ಇವನ ಮಗನು ಚಾಕ್ಷುಷಮನುವು. ಈ ಮನುವಿನಿಂದ ವಿಶ್ವರೆಂದೂ ಸಾಧ್ಯರೆಂದೂ ಕರೆಯಲ್ಪಡುವ ಕೆಲವು ಮಕ್ಕಳು ಹುಟ್ಟಿದರು. ವಿಭಾವಸುಪತ್ನಿಯಾದ ಉಷೆಯೆಂಬವಳಲ್ಲಿ ವ್ಯುಷ್ಟನೆಂದೂ, ರೋಚಿಷನೆಂದೂ, ಆತಪನೆಂದೂ ಮೂವರುಮಕ್ಕಳು ಹುಟ್ಟಿದರು. ಇವರಲ್ಲಿ ಆತಪನೆಂಬವನ ಮಗನು ಪಂಚಯಾಮನು. ಇವನು ಹಗಲಿಗೆ ಅಭಿಮಾನಿದೇವತೆಯೆನಿಸಿಕೊಂಡನು ಇವನಿಂದಲೇ ಪ್ರಜೆಗಳು ತಮ್ಮ ತಮ್ಮ ಕಾರ್ಯಗಳಲ್ಲಿ ಎಚ್ಚರಗೊಳ್ಳುತ್ತಿರುವರು. ಓ ರಾಜೇಂದ್ರಾ! ಧರ್ಮನಿಗೆ ಕೊಟ್ಟ ಹತ್ತುಮಂದಿ ದಕ್ಷಪುತ್ರಿಯರಿಂದ ಹುಟ್ಟಿದ ಸಂತಾನವನ್ನು ತಿಳಿದೆಯಷ್ಟೆ? ಕಶ್ಯಪನಿಗೂ, ಚಂದ್ರನಿಗೂ ವಿವಾಹಿತರಾದ ದಕ್ಷಕನ್ಯೆಯರ ಸಂತಾನವನ್ನು ಮುಂದೆ ವಿವರಿಸುವೆನು. ರುದ್ರನಿಗೆ ವಿವಾಹಿತರಾದ ಇಬ್ಬರು ದಕ್ಷಪುತ್ರಿಯರಲ್ಲಿ, ಒಬ್ಬಳಿಗೆ ಸರೂಪೆಯೆಂದು ಹೆಸರು ಇವಳು ರುದ್ರಗಣಗಳೆಂಬ ಕೋಟಿಪುತ್ರರನ್ನು ಹಡೆದಳು. ಆ ರುದ್ರಗಣಗಳಲ್ಲಿ ಹನ್ನೊಂದುಮಂದಿ ಪ್ರಧಾನನಾಯಕರಾದರು ಅವರಿಗೆ ಕ್ರಮವಾಗಿ, ರೈವತ, ಅಜ, ಭವ, ಭೀಮ, ವಾಮ, ಉಗ್ರ, ವೃಷಾಕಪಿ, ಅಜೈಕಪಾದ, ಅಹಿರ್ಬುಧ್ನ್ಯ, ಬಹುರೂಪ, ಮಹಾಂತರೆಂರು ಹೆಸರು. ಇವರೇ ಏಕಾದಶ ರುದ್ರರೆಂದು ಕರೆಯಲ್ಪಡುವರು. ಇವರಲ್ಲದೆ ರುದ್ರನ ಪಾರ್ಷದಗಣಗಳಲ್ಲಿ ಪ್ರೇತರೆಂದೂ, ವಿನಾಯಕರೆಂದೂ, ಕರೆಯಲ್ಪಡುವ ಭಯಂಕರರೂಪಿಗಳಾದ ಕೆಲವು ಗಣಗಳುಂಟು. ಇವರೆಲ್ಲರೂ ಆ ರುದ್ರನ ಮತ್ತೊಬ್ಬಪತ್ನಿಯಲ್ಲಿ ಹುಟ್ಟಿದರು. ಅಂಗಿರಸ್ಸನ್ನು ಮದುವೆಯಾದ ದಕ್ಷಪುತ್ರಿಯರಿಬ್ಬರಿಗೆ ಸ್ವಧೆಯಂದೂ, ಸತಿಯೆಂದೂ ಹೆಸರು. ಸ್ವಧೆಯೆಂಬವಳಲ್ಲಿ ಪಿತೃದೇವತೆಗಳೂ, ಸತಿಯೆಂಬವಳಲ್ಲಿ ಅಥರ್ವಾಂಗಿರಸರೆಂಬ ವೇದಾಭಿಮಾನಿದೇವತೆಗಳೂ ಹುಟ್ಟಿದರು. ಕೃಶಾಶ್ವನಿಗೆ ಅರ್ಚಿಸ್ಸೆಂದೂ, ಧೀಷಣೆಯೆಂದೂ ಇಬ್ಬರು ಪತ್ನಿಯರು ಇವರಲ್ಲಿ ಅರ್ಚಿಸ್ಸಿಗೆ ಧೂಮ್ರಕೇಶನೆಂಬ ಮಗನೂ, ಧೀಷಣೆಯೆಂಬವಳಿಗೆ ವೇದಶಿರಸ್ಸು, ದೇವಲ, ವೈನ, ಮನುವೆಂಬ ನಾಲ್ಕು ಮಕ್ಕಳೂ ಹುಟ್ಟಿದರು. ದಕ್ಷನು ತಾರ್ಕ್ಷ್ಯನಿಗೆ ಕೊಟ್ಟು ವಿವಾಹಮಾಡಿದ ನಾಲ್ವರು ಕುಮಾರಿಯರಿಗೆ, ಕ್ರಮವಾಗಿ ಪತಂಗಿಯೆಂದೂ, ಯಾಮಿನಿಯೆಂದೂ

ಸುಪರ್ಣೆ (ಅಥವಾ ವಿನತೆ) ಯೆಂದೂ, ಕದ್ರುವೆಂದೂ ಹೆಸರು. ಈ ನಾಲ್ವರಲ್ಲಿ ಪತಂಗಿಯಿಂದ ಪಕ್ಷಿಜಾತಿಗಳೂ, ಯಾಮಿನಿಯಿಂದ ಶಲಭಗಳೂ, ವಿನತೆಯಿಂದ ವಿಷ್ಣುವಾಹನನಾದ ಗರುಡನೂ, ಮತ್ತು ಸೂರ್ಯಸಾರಥಿಯಾದ ಅರುಣನೂ, ಕದ್ರುವಿನಿಂದ ನಾನಾಜಾತಿಯ ಸರ್ಪಗಳೂ ಉದ್ಭವಿಸಿದುವು ಓ ಪರೀಕ್ಷಿದ್ರಾಜಾ! ಕೃತ್ತಿಕೆಮೊದಲಾದಇಪ್ಪತ್ತೈಳುನಕ್ಷತ್ರಗಳೂಚಂದ್ರನಪತ್ನಿಯರು. ದಕ್ಷನು ಚಂದ್ರನಿಗೆ ಈ ಮಕ್ಕಳನ್ನು ವಿವಾಹಮಾಡಿಕೊಡುವಾಗ, ಎಲ್ಲರಲ್ಲಿಯೂ ಸಮಾನ ಪ್ರೇಮವನ್ನು ತೋರಿಸಬೇಕೆಂದು ಚಂದ್ರನಿಂದ ವಾಗ್ದಾನವನ್ನು ಪಡೆದಿದ್ದನು. ಹೀಗಿದ್ದರೂ ಚಂದ್ರನು ಆಡಿದಮಾತಿಗೆ ತಪ್ಪಿ, ರೋಹಿಣಿಯೆಂಬವಳಲ್ಲಿ ಹೆಚ್ಚುಪಕ್ಷಪಾತವನ್ನು ತೋರಿಸುತ್ತಿದ್ದನು. ಇದಕ್ಕಾಗಿ ದಕ್ಷನು ಕೋಪಿಸಿ, ಆ ಚಂದ್ರನಿಗೆ ಕ್ಷಯರೋಗವುಂಟಾಗುವಂತೆ ಶಪಿಸಿದನು. ಇದಕ್ಕಾಗಿಯೇ ಚಂದ್ರನು ಕೃಷ್ಣಪಕ್ಷದಲ್ಲಿ ಕಳೆಗುಂದುವುದಲ್ಲದೆ, ಕೃತ್ತಿಕೆ ಮೊದಲಾದನರಲ್ಲಿ ಸಂತಾನವನ್ನೂ ಪಡೆಯಲಾರದೆ ಹೋದನು. ಆಮೇಲೆ ಚಂದ್ರನು ದಕ್ಷನಲ್ಲಿ ಮನ್ನಣೆಯನ್ನು ಬೇಡಿ, ಆವನನ್ನು ಪ್ರಸನ್ನನನ್ನಾಗಿ ಮಾಡಿಕೊಂಡು, ಕೃಷ್ಣಪಕ್ಷದಲ್ಲಿ ಕುಂದಿಹೋದ ಕಳೆಗಳನ್ನು ತಿರುಗಿ ಪಡೆಯುವಂತೆ ವರವನ್ನು ಪಡೆದನು ರಾಜೇಂದ್ರಾ! ಕಶ್ಯಪನ ಭಾರ್ಯೆಯರಿಂದ ಹುಟ್ಟಿದ ಸಂತಾನದಿಂದ, ಪ್ರಾಯಕವಾಗಿ ಈ ಜಗತ್ತೆಲ್ಲವೂ ತುಂಬಿ ಪೋಗಿರುವುದು. ಆ ಕಶ್ಯಪಪತ್ನಿಯರಿಗೆ ಕ್ರಮವಾಗಿ ಅದಿತಿ, ದಿತಿ, ದನು, ಕಾಷ್ಠೆ, ಅರಿಷ್ಟೆ, ಸುರಸೆ, ಇಳೆ, ಮುನಿ, ಕ್ರೋಧವಶೆ, ತಾಮ್ರೆ, ಸುರಭಿ ಸರಮೆ, ತಿಮಿ, ಎಂದುಹೆಸರು ಇವರಲ್ಲಿ ತಿಮಿಯಿಂದ ಜಲಜಂತುಗಳೆಲ್ಲವೂ ಹುಟ್ಟಿದುವು. ಸರಮೆಯಿಂದ ನಾಯಿ, ಹುಲಿ, ಬೆಕ್ಕು ಮುಂತಾದುವು ಹುಟ್ಟಿದುವು. ಸುರಭಿಯಿಂದ ಎಮ್ಮೆ ಹಸು ಮತ್ತು ಸೀಳಿದ ಗೊರಸಲುಳ್ಳ ಇನ್ನೂ ಅನೇಕ ಮೃಗಗಳೂ ಹುಟ್ಟಿದುವು. ತಾಮ್ರೆಯಿಂದ ಹದ್ದು, ಗಿಡುಗ, ಮುಂತಾದುವೂ, ಮುನಿಯಿಂದ ಅಪ್ಸರಸ್ಸುಗಳೂ, ಕ್ರೋಧವಶೆಯಿಂದ ಕಚ್ಚುವಸ್ವಭಾವವುಳ್ಳ ಸರ್ಪಾದಿಗಳೂ, ಇಳೆಯಿಂದ ವೃಕ್ಷಜಾತಿಗಳೂ, ಸುರಸೆಯಿಂದ ಯಾತುಧಾನರೂ, ಅರಿಷ್ಟೆಯಿಂದ ಗಂಧರ್ವರೂ, ಕಾಷ್ಠೆಯಿಂದ ಕುದುರೆ, ಕತ್ತೆ, ಮುಂತಾದುವೂ ಹುಟ್ಟಿದುವು. ದನುವಿಗೆ ಅರುವತ್ತೊಂದುಮಂದಿ ಕುಮಾರರು ಹುಟ್ಟಿ, ಅವರಲ್ಲಿ ಹದಿನೆಂಟುಮಂದಿ ಪ್ರಧಾನರೆನಿಸಿಕೊಂಡರು. ಅವರಿಗೆ ಕ್ರಮವಾಗಿ, ದ್ವಿಮೂರ್ಧ, ಶಂಬರ, ಅರಿಷ್ಟೆ, ಹಯಗ್ರೀವ, ವಿಭಾವಸು, ಅಯೋಮುಖ, ಶಂಕುಶಿರಸ್ಸು, ಸ್ವರ್ಭಾನು, ಕಪಿಲ, ಅರುಣ, ಪುಲೋಮ, ವೃಷಪರ್ವ, ಏಕನ್ಯಕ್ಷ, ಸುತಾಪನ, ಧೂಮ್ರಕೇಶ, ವಿರೂಪಾಕ್ಷ, ವಿಪ್ರಚಿತ್ತಿ, ದುರ್ಜಯರೆಂದು ಹೆಸರು. ಇವರಲ್ಲಿ ಸ್ವರ್ಭಾನುವಿನ ಮಗಳಾದ

ಸುಪ್ರಭೆಯನ್ನು ನಮುಚಿಯೆಂಬವನೂ, ವೃಷಪರ್ವನ ಮಗಳಾದ ಶರ್ಮಿಷ್ಠೆಯನ್ನು ನಹುಷಪುತ್ರನಾದ ಯಯಾತಿಯೂ ವಿವಾಹಮಾಡಿಕೊಂಡರು ವಸುಪುತ್ರನಾದ ವೈಶ್ವಾನರನಿಗೆ, ಉಷದಾನವಿ, ಹಯಶಿರಸ್ಸು, ಪಲೋಮೆ, ಕಾಲಕೆಯೆಂದು ನಾಲ್ವರು ಕುಮಾರಿಯರಾದರು. ಇವರೆಲ್ಲರೂ ಬಹಳ ರೂಪವತಿಯರು. ಇವರಲ್ಲಿ ಉಷದಾನವಿಯನ್ನು ಹಿರಣ್ಯಾಕ್ಷನೂ, ಹಯಶಿರಸ್ಸನ್ನು ಕ್ರತುವೂ, ಪಲೋಮೆ, ಕಾಲಕೆಯೆಂಬಿಬ್ಬರನ್ನೂ ಬ್ರಹ್ಮಾಜ್ಞೆಯಿಂದ ಕಶ್ಯಪನೂ ವಿವಾಹಮಾಡಿಕೊಂಡರು. ಈ ಇಬ್ಬರು ಕಶ್ಯಪಪತ್ನಿಯರಲ್ಲಿ ಪೌಲೋಮ ಕಾಲಕೇಯರೆಂಬ ಅರುವತ್ತು ಸಾವಿರಮಂದಿ ದಾನವರು ಹುಟ್ಟಿದರು. ಇವರೆಲ್ಲರೂ ಯುದ್ಧಪ್ರಿಯರಾಗಿ, ಎಲ್ಲಿಯೂ ತಡೆಯಿಲ್ಲದೆ ತಿರುಗುತ್ತ, ಯಜ್ಞಯಾಗಾದಿಗಳನ್ನು ಕೆಡಿಸುತ್ತಿದ್ದರು. ಓ ಪರೀಕ್ಷಿದ್ರಾಜಾ! ಹಿಂದೊಮ್ಮೆ ನಿನ್ನ ಅಜ್ಜನಾದ ಅರ್ಜುನನು, ಕಾರ್ಯವಶದಿಂದ ಸ್ವರ್ಗಕ್ಕೆ ಹೋಗಿದ್ದಾಗ, ಇಂದ್ರನ ಅನುಮತಿಯಿಂದ ಅವರೆಲ್ಲರನ್ನೂ ನಿರ್ಮೂಲಮಾಡಿದನು. ವಿಪ್ರಚಿತ್ತಿಯು ಸಿಂಹಿಕೆಯನ್ನು ಮದುವೆಯಾಗಿ ನೂರುಮಂದಿರಾಕ್ಷಸರನ್ನು ಪಡೆದನು. ಅವರಲ್ಲಿ ರಾಹುನೆಂಬವನೇ ಜ್ಯೇಷ್ಠನು. ಇವನು ದಾನವನಾಗಿದ್ದರೂ ಭಗವದನುಗ್ರಹದಿಂದ ನವಗ್ರಹಗಳಲ್ಲಿ ಒಬ್ಬನಾದನು. ರಾಜಾ! ಇನ್ನು ಮೇಲೆ ಲೋಕಪ್ರಸಿದ್ಧವಾದ ಅದಿತಿವಂಶವನ್ನು ವಿವರಿಸುವೆನು ಕೇಳು. ಇದರಲ್ಲಿ ಸಾಕ್ಷಾನ್ನಾರಾಯಣನೇ ಅವತರಿಸಿದುದರಿಂದ ಇದು ಬಹಳ ಪವಿತ್ರವೆನಿಸಿರುವುದು. ಈ ಅದಿತಿಗೆ, ವಿವಸ್ವಂತ ಅರ್ಯಮ, ಪೂಷ, ತ್ವಷ್ಟೃ, ಸವಿತೃ, ಭಗ, ಧಾತೃ, ವಿಧಾತೃ, ವರುಣ, ಮಿತ್ರ, ಶುಕ್ರ, ಉರುಕ್ರಮರೆಂಬ ಹನ್ನೆರಡುಮಕ್ಕಳು ಹುಟ್ಟಿದರು. ಇವರಲ್ಲಿ ವಿವಸ್ವಂತನ ಭಾರ್ಯೆಯಾದ ಸಂಜ್ಞೆಯೆಂಬನಳು ಶ್ರಾದ್ಧದೇವನೆಂದೂ, ಮನುವೆಂದೂ ಇಬ್ಬರು ಕುಮಾರರನ್ನೂ, ಯಮಯಮಿಗಳೆಂಬ (ಗಂಡುಹೆಣ್ಣು) ಅವಳಿಮಕ್ಕಳನ್ನೂ ಹಡೆದಳು ಈಸಂಜ್ಞೆಯೇ ಸಮುದ್ರದಲ್ಲಿ ಬಡಬೆಯೆಂಬ ಹೆಣ್ಣುಕುದುರೆಯಾಗಿದ್ದು ಅಶ್ವಿನೀದೇವತೆಗಳನ್ನು ಹಡೆದಳು. ಇವಳೇ ಛಾಯೆಯಾಗಿ ಹುಟ್ಟಿ, ಶನೈಶ್ಚರನೆಂದೂ, ಸಾವರ್ಣಿಮನುವೆಂದೂ ಇಬ್ಬರು ಕುಮಾರರನ್ನೂ, ತಪತಿಯೆಂಬ ಕುಮಾರಿಯನ್ನೂ ಪಡೆದಳು. ಈ ತಪತಿಯೆಂಬವಳು ಸಂವರಣನನ್ನು ವರಿಸಿದಳು. ಅರ್ಯಮನಿಗೆ ಮಾತೃಕೆಯೆಂಬವಳು ಪತ್ನಿಯು. ಈ ದಂಪತಿಗಳಮೂಲಕವಾಗಿಯೇ ಬ್ರಹ್ಮನಿಂದ ಭೂಲೋಕದಲ್ಲಿ ಮನುಷ್ಯಜಾತಿಯು ಹರಡಲ್ಪಟ್ಟಿತು. ಈ ಮನುಷ್ಯಜಾತಿಯು ಕೆಲಸಮಾಡತಕ್ಕ ಸ್ವಭಾವವುಳ್ಳದು. ಪೂಷನಿಗೆ ಸಂತತಿಯೇ ಇಲ್ಲವು. ಪೂರ್ವದಲ್ಲಿ ದಕ್ಷನು ರುದ್ರನನ್ನು ಅವಮಾನಪಡಿಸಿದಾಗ, ಅದನ್ನು ನೋಡಿ ಇವನು ದೊಡ್ಡದಾಗಿ ಹಲ್ಲುಬಿಟ್ಟು ನಕ್ಕುದರಿಂದ ರುದ್ರಗಣಗಳು ಕೋಪದಿಂದ ಅವನ ಹಲ್ಲುಗಳನ್ನು ದುರುಸಿ

ಬಿಟ್ಟುವು. ಆದುದರಿಂದ ಅವನಿಗೆ ಹಲ್ಲುಗಳಿಲ್ಲವು. ಬೊಚ್ಚುಬಾಯುಳ್ಳ ಈತನು ಹುಟ್ಟನ್ನು ಹೊರತು ಬೇರೊಂದನ್ನೂ ತಿನ್ನಲಾರನು. ತ್ವಷ್ಟನಿಗೆ ದೈತ್ಯಸಹೋದರಿಯಾದ ರಚನೆಯೆಂಬವಳುಪತ್ನಿಯು. ಇವರಿಬ್ಬರಿಗೂವೀರ್ಯವಂತನಾದ ವಿಶ್ವರೂಪನು ಹುಟ್ಟಿದನು. ಹಿಂದೊಮ್ಮೆ ಬೃಹಸ್ಪತಿಯು, ಇಂದ್ರನಿಂದ ಅವಮಾನಿತನಾಗಿ ಸ್ವರ್ಗಲೋಕವನ್ನು ಬಿಟ್ಟುಹೋದಾಗ, ದೇವತೆಗಳೆಲ್ಲರೂ ಸೇರಿ ದಾನವರಿಗೆ ಸೋದರಳಿಯನಾಗಿದ್ದ ಈ ವಿಶ್ವರೂಪನನ್ನೇ ತಮಗೆ ಪುರೋಹಿತನನ್ನಾಗಿ ಮಾಡಿಕೊಂಡಿದ್ದರು. ಇಲ್ಲಿಗೆ ಆರನೆಯ ಅಧ್ಯಾಯವು.

---

## ಇಂದ್ರನು ಬೃಹಸ್ಪತ್ಯಾಚಾರ್ಯರನ್ನು ತಿರಸ್ಕರಿಸಿದುದು ದೇವತೆಗಳ ಪ್ರಾರ್ಥನೆಯಮೇಲೆ ವಿಶ್ವರೂಪನು ಅವರಿಗೆ ಪುರೋಹಿತನಾದುದು

ಈ ನಡುವೆ ಪರೀಕ್ಷಿದ್ರಾಜನು ಶುಕಮುನಿಯನ್ನು ಕುರಿತು "ಓ ಮಹರ್ಷೀ! ಬೃಹಸ್ಪತಿಯು ದೇವತೆಗಳನ್ನು ಬಿಟ್ಟು ಹೋದುದೇಕೆ? ಅವನು ತನ್ನ ಶಿಷ್ಯರಾದ ದೇವತೆಗಳಲ್ಲಿ ಬಹಳಪ್ರೇಮವುಳ್ಳವನಾಗಿದ್ದವನಲ್ಲವೇ? ಆದೇವತೆಗಳಿಂದ ಯಾವುದೋ ಒಂದು ದೊಡ್ಡ ತಪ್ಪು ನಡೆದಿರಬೇಕು. ಅವರ ತಪ್ಪೇನೆಂಬುದನ್ನು ನನಗೆ ತಿಳಿಸು" ಎಂದನು. ಆದಕ್ಕಾ ಶುಕಮುನಿಯು "ರಾಜೇಂದ್ರಾ ಕೇಳು! ಇಂದ್ರನು ತ್ರೈಲೋಕ್ಯವನ್ನೂ ಏಕಾಧಿಪತ್ಯದಿಂದ ಆಳುತ್ತಿದ್ದಾಗ, ಅವನಿಗೆ ಮಿತಿಮೀರಿದ ಹೆಮ್ಮೆಯುಂಟಾಯಿತು. ಈ ಐಶ್ವರ್ಯಮದದಿಂದ ಹಿಂದುಮುಂದುತಿಳಿಯದೆ ಉನ್ಮಾರ್ಗದಲ್ಲಿ ಪ್ರವರ್ತಿಸುವುದಕ್ಕೆ ತೊಡಗಿದನು. ಒಮ್ಮೆ ಆ ದೇವೇಂದ್ರನು ಸಭೆಯಲ್ಲಿ ಕುಳಿತಿದ್ದಾಗ, ಏಕಾದಶರುದ್ರರೂ, ಅಷ್ಟವಸುಗಳೂ, ದ್ವಾದಶಾದಿತ್ಯರೂ, ಅನೇಕಮಹರ್ಷಿಗಳೂ, ವಿಶ್ವೇದೇವತೆಗಳೂ, ಸಾಧ್ಯರೂ, ಅಶ್ವಿನೀದೇವತೆಗಳೂ ಅವನನ್ನು ಸುತ್ತಿ ಸೇವಿಸುತ್ತಿದ್ದರು. ಮತ್ತು ಸಿದ್ಧಚಾರಣಗಂಧರ್ವಾದಿಗಳೂ, ಬ್ರಹ್ಮವಾದಿಗಳೂ, ವಿದ್ಯಾಧರರೂ, ಅಪ್ಸರಸ್ತ್ರೀಯರೂ, ಕಿನ್ನರರೂ, ಪತಗರೂ, ನಾಗರೂ, ಅವನನ್ನು ಮನೋಹರವಾದ ಗಾನಗಳಿಂದ ಸ್ತುತಿಸುತ್ತಿದ್ದರು. ದೇವೇಂದ್ರನು ಇಂತಹ ಮಹಾಸಭೆಯನಡುವೆ ರಾಜಸಿಂಹಾಸನದಮೇಲೆ ಬಹಳ ವೈಭವದಿಂದ ಕುಳಿತು, ತ್ರೈಲೋಕ್ಯರಾಜ್ಯಾಧಿಪತ್ಯಕ್ಕೆ ಸೂಚಕಗಳಾದ ಛತ್ರಚಾಮರಗಳೊಡನೆ, ತನ್ನ ಅರ್ಧಾಸನದಲ್ಲಿ ಶಚೀದೇವಿಯನ್ನೂ ಕುಳ್ಳಿರಿಸಿಕೊಂಡು, ಸಭೆಯನ್ನಲಂಕರಿಸಿದ್ದ

ಕಾಲದಲ್ಲಿ, ಸಮಸ್ತದೇವತೆಗಳಿಗೂ ಗುರುವಾಗಿಯೂ, ಪರಮಪೂಜ್ಯನಾಗಿಯೂ ಇರುವ ಬೃಹಸ್ಪತಿಯು ಆ ಸಭಾಸ್ಥಾನವನ್ನು ಪ್ರವೇಶಿಸಿದನು. ಇವನನ್ನು ನೋಡಿಯೂ ಇಂದ್ರನು ಮೇಲೆದ್ದುನಿಲ್ಲದೆ, ತಲೆಬಗ್ಗಿ ನಮಸ್ಕರಿಸದೆ, ಮದಾಂಧನಾಗಿ ಕುಳಿತಿದ್ದನು! ಇದನ್ನು ಕಂಡು ಬೃಹಸ್ಪತಿಗೆ ಮನಸ್ಸಿನಲ್ಲಿ ಕೋಪವು ಹುಟ್ಟಿತು. ಆದರೆ ಅವನು ಬಹಳ ವಿವೇಕಿಯಾದುದರಿಂದ, ಯಾವ ಮಾತನ್ನೂ ಆಡದೆ ಹಿಂತಿರುಗಿ ಹೊರಟುಹೋದನು. ಇದನ್ನು ನೋಡಿದಮೇಲೆ ಇಂದ್ರನಿಗೆ ತಾನು ಮಾಡಿದುದು ತಪ್ಪೆಂದು ತೋರಿತು. ಈ ಆಚಾರ್ಯತಿರಸ್ಕಾರಕ್ಕಾಗಿ ತನ್ನಲ್ಲಿ ತಾನು ಕೊರಗುತ್ತ, ಆ ಸಭೆಯವರೆಲ್ಲರೂ ಕೇಳುತ್ತಿರುವಹಾಗೆ, ತನ್ನನ್ನೇ ತಾನುಹೀಗೆಂದು ನಿಂದಿಸಿ ಕೊಳ್ಳುವನು. "ಅಯ್ಯೋ! ನಾನು ಎಂತಹ ಅನರ್ಥಕ್ಕೆ ಗುರಿಯಾದೆನು! ನಾನು ಮಾಡಿದುದು ಬಹಳತಪ್ಪು! ಐಶ್ವರ್ಯಮದದಿಂದ ಮೈಮರೆತು ಆಚಾರ್ಯನನ್ನೇ ಅವಮಾನಿಸಿದೆನು. ನನ್ನಂತೆ ಅಲ್ಪಬುದ್ಧಿಯುಳ್ಳವನು ಲೋಕದಲ್ಲಿ ಬೇರೊಬ್ಬನುಂಟೇ? ಕೇವಲ ಸ್ವಾತಿಕಸ್ವಭಾವವುಳ್ಳ ದೇವತೆಗಳೆಲ್ಲರಿಗೂ ನಾನೇ ಪ್ರಭುವಾಗಿದ್ದರೂ, ರಾಕ್ಷಸಸ್ವಭಾವವನ್ನು ತೋರಿಸಿಬಿಟ್ಟೆನು. ಛೆ! ನನಗೆ ಈ ಅನರ್ಥವನ್ನು ತಂದಿಡುವುದಕ್ಕೆ ಈ ಐಶ್ವರ್ಯವಲ್ಲವೇ ಕಾರಣವು! ಆದುದರಿಂದ ಎಲ್ಲಾ ಅನರ್ಥಗಳಿಗೂ ಐಶ್ವರ್ಯವೇ ಮೂಲವು. ಇದಕ್ಕಾಗಿಯೇ ವಿವೇಕಿಗಳಾದವರು ಬ್ರಹ್ಮಲೋಕಾಧಿಪತ್ಯಕ್ಕೂ ಆಸೆಪಡಲಾರರು. ಆದರೆ ಮಹಾರಾಜನು ರಾಜಸಿಂಹಾಸನದಲ್ಲಿ ಕುಳ್ಳಿರುವಾಗ ಸಭೆಗೆ ಬಂದ ಮಹಾತ್ಮರನ್ನು ಪ್ರತ್ಯುತ್ಥಾನಾದಿಗಳಿಂದ ಗೌರವಿಸಬೇಕಾದ ಅವಶ್ಯವಿಲ್ಲವೆಂದು ಕೆಲವರು ಸಮಾಧಾನವನ್ನು ಹೇಳುವುದುಂಟು. ಹಾಗೆ ಹೇಳುವವರು ಧರ್ಮಜ್ಞರಲ್ಲವೆಂದೇ ನನ್ನ ಮತವು! ಇವರ ಮಾತನ್ನು ನಂಬಿ ನಡೆಯತಕ್ಕವನು, ಕಲ್ಲುಬೋಣಿಯನ್ನೇರಿ ಹೊಳೆಯನ್ನು ದಾಟುವವರಂತೆ ಅಧೋಗತಿಯನ್ನೇ ಹೊಂದುವರು. ಆದುದಾಯಿತು! ಈಗಲಾದರೂ ನಾನೂ ಐಶ್ವರ್ಯಮದವನ್ನು ಬಿಟ್ಟು, ಆತನ ಪಾದಗಳಿಗೆ ನಮಸ್ಕರಿಸಿ, ಅವನನ್ನು ಪ್ರಸನ್ನನಾಗುವಂತೆ ಮಾಡುವೆನು" ಎಂದು ದೇವೇಂದ್ರನು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು ಹೊರಟು ಬರುವಷ್ಟರಲ್ಲಿ, ಬೃಹಸ್ಪತಿಯು ಯೋಗಮಹಿಮೆಯಿಂದ ತನ್ನ ಮನೆಯಲ್ಲಿಯೇ ಇಂದ್ರನ ಕಣ್ಣಿಗೆ ಬೀಳದಂತೆ ಅದೃಶ್ಯನಾದನು. ಇಂದ್ರನು! ಅವನನ್ನು ಕಂಡು ಹಿಡಿಯುವುದಕ್ಕಾಗಿ ಎಷ್ಟೆಷ್ಟೋ ಉಪಾಯಗಳನ್ನು ಹುಡುಕಿದರೂ ಕಾಣಲಾರದೆ, ಬಹಳ ಚಿಂತಾಕ್ರಾಂತನಾಗಿ ಸಂಕಟದಿಂದ ತಪಿಸುತ್ತಿದ್ದನು. ಇವನ ಮನಸ್ಸಿಗೆ ಸ್ವಲ್ಪವೂ ನೆಮ್ಮದಿಯಿರಲಿಲ್ಲ. ಈ ಹುಳುಕನ್ನು ತಿಳಿದು ದೇವಶತ್ರುಗಳಾದ ದಾನ

ವರು ಅಮರಾವತಿಯನ್ನು ಮುತ್ತುವುದಕ್ಕೆ ಇದೇಸಮಯವೆಂದೆಣಿಸಿ, ಶುಕ್ರಾಚಾರ್ಯನ ಪ್ರೋತ್ಸಾಹದಿಂದ ಮತ್ತಷ್ಟು ಮದಾಂಧರಾಗಿ ದಂಡೆತ್ತಿಬಂದರು ದೇವಾಸುರರಿಗೆ ಯುದ್ಧಾರಂಭವಾಯಿತು. ದೇವತೆಗಳೆಲ್ಲರೂ ರಾಕ್ಷಸರ ಬಾಣಪ್ರಹಾರದಿಂದ ಮೈಮುರಿದು, ನಾಚಿಕೆಯಿಂದ ತಲೆಯೆತ್ತದೆ, ಇಂದ್ರನನ್ನು ಮುಂದಿಟ್ಟುಕೊಂಡು ಬ್ರಹ್ಮನ ಬಳಿಗೆ ಬಂದು ಮೊರೆಯಿಟ್ಟರು. ಬ್ರಹ್ಮನು ಅವರ ದುರವಸ್ಥೆಯನ್ನು ನೋಡಿ ಕನಿಕರಗೊಂಡು ಅವರನ್ನು ಸಮಾಧಾನಪಡಿಸುತ್ತ, "ಓ ದೇವತೆಗಳಿರಾ! ನೀವು ಬಹಳ ತಪ್ಪನ್ನು ಮಾಡಿದಿರಿ! ನಿಮ್ಮ ತಪ್ಪಿನಿಂದಲೇ ನಿಮಗೆ ಈ ವಿಧವಾದಕಷ್ಟವು ಪ್ರಾಪ್ತವಾಯಿತು. ಪಾಪಕ್ಕೆ ತಕ್ಕ ಫಲವನ್ನನುಭವಿಸದೆ ತೀರದು! ಬ್ರಹ್ಮಜ್ಞಾನಸಂಪನ್ನನಾಗಿಯೂ ಜಿತೇಂದ್ರಿಯನಾಗಿಯೂ ಇರುವ ಆಚಾರ್ಯನನ್ನೇ ನೀವು ನಿಮ್ಮ ಐಶ್ವರ್ಯಮದದಿಂದ ಅವಮಾನಪಡಿಸಿದಿರಿ, ಆ ಅಪರಾಧಕ್ಕೆ ತಕ್ಕ ಫಲವು ಈಗಲೇ ನಿಮಗೆ ಕಂಡುಬಂದಿತು. ನೋಡಿದಿರಾ! ಆ ಪಾಪವೇ ನಿಮಗೆ ದೊಡ್ಡ ಶತ್ರುವೆಂದು ತಿಳಿಯಿರಿ! ಹಾಗಿಲ್ಲದಪಕ್ಷದಲ್ಲಿ ಐಶ್ವರ್ಯರಹಿತರರಾಗಿ ದುರ್ಬಲರಾದ ನಿಮ್ಮ ಶತ್ರುಗಳು, ಐಶ್ವರ್ಯದಿಂದ ಪ್ರಬಲರಾದ ನಿಮ್ಮನ್ನು ಜಯಿಸುವುದೆಂದರೇನು" ದೇವೇಂದ್ರಾ! ಮೊದಲು ನಿನ್ನ ಶತ್ರುಗಳೂ ಗುರುತಿರಸ್ಕಾರದಿಂದಲೇ ತಮ್ಮ ರಾಜ್ಯಸಂಪತ್ತನ್ನು ಕಳೆದುಕೊಂಡು ದುರ್ಬಲರಾಗಿದ್ದರು. ಅವರೇ ಈಗ ತಮ್ಮಗುರುವಾದ ಶುಕ್ರಾಚಾರ್ಯನನ್ನು ಭಕ್ತಿಯಿಂದಾರಾಧಿಸಿ ಆ ಆಚಾರ್ಯಾನುಗ್ರಹದಿಂದ ಬಲಶಾಲಿಗಳಾದರು! ಗುರುವಾದ ಶುಕ್ರಾಚಾರ್ಯನನ್ನೇ ಪರದೈವವೆಂದು ಭಾವಿಸಿಕೊಂಡಿರುವ ಆ ದೈತ್ಯರು, ತಮಗೆ, ಮೇಲೆ ಮೇಲೆ ಹೆಚ್ಚುತ್ತಿರುವ ವೀರ್ಯೋತ್ಸ್ರೇಕದಿಂದ ಈಗಲೋ ನಾಳೆಯೋ ಆ ಥವಾ ನಾಡಿದೋ ಈ ನಿನ್ನ ಲೋಕಕ್ಕೂ ದಂಡೆತ್ತದೆ ಬಿಡರು. ಆ ಶುಕ್ರಾಚಾರ್ಯನ ಮಂತ್ರಬಲದಿಂದ ಬಹಳ ಗೂಢಾಲೋಚನೆಯುಳ್ಳ ಆ ದಾನವರು, ಈಗ ತ್ರೈಲೋಕ್ಯವನ್ನೂ ಲಕ್ಷ್ಯಮಾಡಲಾರರು. ಆದರೆ ಅವರಿಗೆ ಐಶ್ವರ್ಯವೆಂಬುದು ಸ್ಥಿರವಲ್ಲ. ಅವರು ಸಹಜವಾಗಿಯೇ ಕ್ರೂರರಾದುದರಿಂದ ಬ್ರಾಹ್ಮಣರನ್ನೂ, ಗೋವುಗಳನ್ನೂ, ಭಗವಂತನನ್ನೂ, ಮಹಾತ್ಮರನ್ನೂ ತಿರಸ್ಕರಿಸುವ ಸ್ವಭಾವವುಳ್ಳವರು. ಆದುದರಿಂದ ಇವರಿಗೆ ಎಂದಿದ್ದರೂ ದುಃಖವು ತಪ್ಪದು. ಆಂತಹ ಗೋಬ್ರಾಹ್ಮಣಾದಿಗಳಲ್ಲಿ ಯಾರು ಪೂಜ್ಯಭಾವದಿಂದಿರುವರೋ ಅವರಿಗೆ ಎಂದಿದ್ದರೂ ಸುಖವುಂಟು. ಮಹಾತ್ಮರನ್ನು ಅವಮಾನಪಡಿಸತಕ್ಕವರು ಎಂತಹ ಪ್ರಭುಗಳಾಗಿದ್ದರೂ ಅವರಿಗೆ ಕೇಡು ತಪ್ಪದು. ಆದುದರಿಂದ ನೀವು ಸ್ವಲ್ಪಕಾಲದವರೆಗೆ ತಾಳ್ಮೆಯಿಂದಿದ್ದರೆ, ನಿಮಗೆ ಕ್ಷೇಮವುಂಟು. ಆದರೆ ನೀವು ಈಗಲೇ ನಡೆಸಬೇಕಾದ ಕೆಲಸವೊಂದುಂಟು!

ತ್ವಷ್ಟೃಕುಮಾರನಾದ ವಿಶ್ವರೂಪನೆಂಬ ಬ್ರಾಹ್ಮಣನಿರುವನು. ಅವನು ಮಹಾ ತಪಸ್ವಿಯು! ಜಿತೇಂದ್ರಿಯನು! ಅವನನ್ನು ನೀವು ಪುರೋಹಿತನನ್ನಾಗಿ ವರಿಸಬೇಕು! ನೀವು ತಕ್ಕ ರೀತಿಯಿಂದ ಅವನನ್ನು ಅನುವರ್ತಿಸುತ್ತಿದರೆ, ನಿಮ್ಮ ಕೋರಿಕೆಯನ್ನು ತಪ್ಪದೆ ನೆರವೇರಿಸುವನು. ಒಂದೊಂದುವೇಳೆ ಅತನು ದಾನವರಲ್ಲಿ ಪಕ್ಷಪಾತವನ್ನು ತೋರಿಸಬಹುದು. ಇದನ್ನೂ ನೀವು ಸಹಿಸಿಕೊಂಡಿರಬೇಕು' ಎಂದನು. ಬ್ರಹ್ಮನವಾಕ್ಯವನ್ನು ಕೇಳಿ ದೇವತೆಗಳೆಲ್ಲರೂ ಸಂತುಷ್ಟರಾಗಿ, ವಿಶ್ವರೂಪನ ಬಳಿಗೆ ಬಂದರು. ಅವನನ್ನು ಪ್ರೇಮದಿಂದಾಲಿಂಗಿಸಿಕೊಂಡು 'ಓ ಮುನೀಂದ್ರಾ! ನಾವು ನಿನ್ನಾಶ್ರಮಕ್ಕೆ ಅತಿಥಿಗಳಾಗಿ ಬಂದಿರುವೆವು. ನಿನಗೆ ಕ್ಷೇಮವುಂಟಾಗಲಿ! ನೀನುನಿನ್ನ ಪಿತೃಗಳಾದ ನಮಗೆ ಕಾಲೋಚಿತವಾದ ಉಪಕಾರವನ್ನು ಮಾಡಬೇಕು. ಸತ್ಪುತ್ರರಿಗೆ ಪಿತೃಶುಶ್ರೂಷೆಯೇ ಮೇಲಾದ ಧರ್ಮವು. ಒಂದೆರಡುಮಕ್ಕಳನ್ನು ಹೆತ್ತವರೂಕೂಡ ತಮ್ಮ ಪಿತೃಗಳಲ್ಲಿಗೌರವವನ್ನು ತೋರಿಸಬೇಕಾದುದುಧರ್ಮವು. ಹೀಗಿರುವಾಗ ನಿಮ್ಮಂತಹ ಬ್ರಹ್ಮಚಾರಿಗಳಿಗೆ ಇದು ಉತ್ತಮಧರ್ಮವೆಂಬುದನ್ನು ಹೇಳಬೇಕಾದುದೇನು? ಆಚಾರ್ಯನನ್ನು ಪರಬ್ರಹ್ಮನೆಂಬ ಭಾವದಿಂದಲೇ ಆರಾಧಿಸಬೇಕು. ತಂದೆಯನ್ನು ಲೋಕಪಿತಾಮಹನಾದ ಬ್ರಹ್ಮನೆಂದಾರಾಧಿಸಬೇಕು. ಸಹೋದರನನ್ನು ದೇವೇಂದ್ರನ ಸ್ವರೂಪದಿಂದ ಭಾವಿಸಿ ಪೂಜಿಸಬೇಕು. ತಾಯಿಯನ್ನು ಭೂದೇವಿಯಂತೆ ಭಾವಿಸಿ ಪೂಜಿಸಬೇಕು. ಹಾಗೆಯೇ ಸಹೋದರಿಯನ್ನು ದಯಾಸ್ವರೂಪದಿಂದಲೂ, ಅತಿಥಿಯನ್ನು ಧರ್ಮಸ್ವರೂಪದಿಂದಲೂ, ಅಭ್ಯಾಗತನನ್ನು ಅಗ್ನಿಸ್ವರೂಪದಿಂದಲೂ, ಸಮಸ್ತಭೂತಗಳನ್ನೂ ತನ್ನ ಸ್ವರೂಪದಿಂದಲೂ ಭಾವಿಸಬೇಕು. ಆದುದರಿಂದ ಓ ಬ್ರಾಹ್ಮಣೋತ್ತಮಾ! ನಿನ್ನ ಪಿತೃಗಳಾದ ನಾವು ಯಾವುದೋ ಒಂದು ಕಷ್ಟದಲ್ಲಿ ಸಿಕ್ಕಿ ನಿನ್ನಲ್ಲಿಗೆ ಬಂದಿರುವೆವು. ನಮಗೆ ನಮ್ಮ ಶತ್ರುಗಳಿಂದುಂಟಾದ ತಿರಸ್ಕಾರವನ್ನೂ, ಅದರಿಂದ ನಮಗುಂಟಾದ ಕಷ್ಟವನ್ನೂ ನೀಗಿಸುವ ಭಾರವು ನಿನ್ನದು. ನಮ್ಮ ಕೋರಿಕೆಯನ್ನು ನೀನು ನಿನ್ನ ತಪೋಮಹಿಮೆಯಿಂದಲೇ ನೆರವೇರಿಸಬಹುದು. ನೀನು ಬ್ರಾಹ್ಮಣೋತ್ತಮನು! ಬ್ರಹ್ಮಜ್ಞಾನಸಂಪನ್ನನು! ಮಹಾತಪಸ್ವಿಯು! ಸಮಸ್ತವರ್ಣಗಳಿಗೂ ಗುರುವೆನಿಸಿಕೊಂಡವನು. ಆದುದರಿಂದ ನೀನು ನಮಗೆ ಪುರೋಹಿತನಾಗಿರಬೇಕು. ನಿನ್ನ ತೇಜೋಬಲದಿಂದ ನಾವು ಅನಾಯಾಸವಾಗಿ ಶತ್ರುಗಳನ್ನು ಜಯಿಸಬಹುದು! ನಮ್ಮಲ್ಲಿ ಅನುಗ್ರಹವನ್ನು ತೋರಿಸು! ನಮಗಿಂತಲೂ ನೀನು ವಯಸ್ಸಿನಲ್ಲಿ ಚಿಕ್ಕವನಾದರೂ, ನಿನ್ನ ಪಾದಗಳನ್ನು ಹಿಡಿದು ನಮಸ್ಕರಿಸುವೆವು. ಕಾರ್ಯಾರ್ಥಿಗಳು ಸ್ವಪ್ರಯೋಜನಕ್ಕಾಗಿ ತಮಗಿಂತಲೂ

ಚಿಕ್ಕವರನ್ನು ನಮಸ್ಕರಿಸಿದರೂ ದೋಷವಿಲ್ಲ. ಇದಲ್ಲ
ನಿನ್ನಂತೆ ವೇದಾಧ್ಯಯನಸಂಪನ್ನರಾದವರು ವಯಸ್ಸಿನಲ್ಲಿ ಚಿಕ್ಕವರಾಗಿದ್ದರ
ಮಹಿಮೆಯಲ್ಲಿ ದೊಡ್ಡವರು. ವಯಸ್ಸಿನಿಂದಲೇ ಮನುಷ್ಯನುದೊಡ್ಡವನಾಗಲಾರನ
ಆದುದರಿಂದ ನೀನು ನಮಗೆ ಸರ್ವವಿಧದಲ್ಲಿಯೂ ಪೂಜ್ಯನು" ಎಂದರು. ಈದೇವ
ಗಳ ಪ್ರಾರ್ಥನೆಯನ್ನು ಕೇಳಿ ಮಹಾತಪಸ್ವಿಯಾದ ವಿಶ್ವರೂಪನು, ಮುಂದಹಾ
ಪೂರ್ವಕವಾಗಿ ಅವರನ್ನು ಕುರಿತು ಮೃದುವಾಕ್ಯದಿಂದ ಹೀಗೆಂದು ಹೇಳುವನ
"ಎಲೈ ಪೂಜ್ಯರೇ! ಲೋಕದಲ್ಲಿ ಪೌರೋಹಿತ್ಯವೆಂಬುದು ಬಹಳ ನಿಂದ್ಯಕಾರ್ಯವ
ಅದು ಬ್ರಹ್ಮತೇಜಸ್ಸನ್ನು ಕೆಡಿಸಿಬಿಡುವುದು. ಹಾಗಿದ್ದರೂ ಲೋಕಪಾಲಕರಾ
ನೀವೆಲ್ಲರೂ ಬಂದು ಪ್ರಾರ್ಥಿಸುವುದರಿಂದ ನಿಮ್ಮ ಕೋರಿಕೆಯನ್ನು ನಿರಾಕರಿಸಲ
ರೆನು. ಪಿತೃಗಳಾದ ನೀವು ಬಂದುಕೇಳುವಾಗ ಪಿತೃಭಕ್ತಿಯುಳ್ಳ ನಾನು ಹೇ
ತಾನೇ ನಿರಾಕರಿಸಲಿ. ಇದಲ್ಲದೆ ನಿಮಗೆ ನಾನು ಶಿಷ್ಯನು. ನಿಮ್ಮನ್ನು ಗುರುವಿನಂ
ಭಾವಿಸಿರುವೆನು. ನಿಮ್ಮ ಆಜ್ಞೆಯನ್ನು ನಡೆಸಬೇಕಾದುದೇ ನನ್ನ ಅವಶ್ಯಕಾರ್ಯವ
ಶಿಷ್ಯರಿಗೆ ಗುರುವಾಕ್ಯವನ್ನು ನಡೆಸುವುದೇ ಉತ್ತಮಪುರುಷಾರ್ಥವೆಂದು ಹಿ
ಯರು ಹೇಳಿರುವರು. ಹಾಗಿದ್ದರೂ, ಈಗ ಧನಾರ್ಜನೆಗಾಗಿ ನಾನು ಪೌರೋಹಿತ
ವನ್ನೊಪ್ಪಿಕೊಳ್ಳತಕ್ಕವನಲ್ಲ. ಶಬ್ದಾದಿವಿಷಯಗಳಲ್ಲಿ ಆಸೆಯನ್ನು ಬಿಟ್ಟ ವಿರಕ್ತರ
ತಮ್ಮ ದೇಹಧಾರಣೆಗೆ ಬೇಕಾದುದನ್ನು ಮಾತ್ರವೇ ಬಯಸುವರು. ಅಂತವರ
ಹೊಲಗದ್ದೆಗಳಲ್ಲಿ ಉದುರಿದಧಾನ್ಯಗಳನ್ನಾಗಲೀ, ಕಾಳುಗಳನ್ನಾಗಲೀ ತಿಂದು ತೃಪ್ತಿ
ಪಡುವರು. ಅವರಿಗೆ ಅದೇ ಸಾಕಾದಧನವು. ಅವುಗಳಿಂದಲೇ ಅವರು ಪಂಚಮ
ಹಾಯಜ್ಞಾದಿಕರ್ಮಗಳೆಲ್ಲವನ್ನೂ ಲೋಪವಿಲ್ಲದೆ ನಡೆಸುತ್ತಬರುವರು. ಹೀಗಿರು
ವಾಗ ನಿಮ್ಮಲ್ಲಿ ಪೌರೋಹಿತ್ಯದಿಂದ ನಾನು ಹೊಂದಬೇಕಾದ ಲಾಭವೇನು? ನಿಂ
ಪಾಸ್ಪದವಾದ ಈ ಕಾರ್ಯಕ್ಕೆ ನಾನು ಹೇಗೆತಾನೇ ಆಸೆಪಡಲಿ! ಪೌರೋಹಿತ್ಯವು
ಸಿಕ್ಕಿದುದಕ್ಕಾಗಿ ಸಂತೋಷಿಸತಕ್ಕವರು ಮೂಢರೇ ಹೊರತು, ವಿರಕ್ತರು ಅದಕ್ಕೆ
ಆಸೆಪಡಲಾರರು. ಆ ವಿರಕ್ತರಿಗೆ ಉಂಛವೃತ್ತಿಯೇ (ಭಿಕ್ಷಾಟನವೇ) ಉತ್ತಮ
ಜೀವನವು. ಹಾಗಿದ್ದರೂ ತಂದೆಗಳಾದ ನೀವು ಕೇಳಿಕೊಳ್ಳುವುದರಿಂದ, ನಿಮ್ಮ
ಮಾತಿಗೆ ನಾನು ಪ್ರತ್ಯುತ್ತರವನ್ನು ಹೇಳಲಾರೆನು. ನಿಮ್ಮ ಮಾತಿಗಾಗಿ ನಾನು
ಈ ಅಲ್ಪಕಾರ್ಯವನ್ನು ನಡೆಸುವುದೇನೂ ಅತಿಶಯವಲ್ಲ. ಆದುದರಿಂದ ನಿಮ್ಮ
ಕೋರಿಕೆಯನ್ನು ನಾನು. ನನ್ನ ಸಮಸ್ತ ಧರ್ಮಗಳಿಂದಲೂ, ಕೊನೆಗೆ ನನ್ನ
ಪ್ರಾಣಗಳಿಂದಲೂ ಸಾಧಿಸಿಕೊಡಬೇಕು" ಎಂದನು. ಹೀಗೆ ಮಹಾತಪಸ್ವಿಯಾದ
ವಿಶ್ವರೂಪನು, ದೇವತೆಗಳ ಪ್ರಾರ್ಥನೆಯಂತೆ ಅವರಿಗೆ ತಾನು ಪುರೋಹಿತನಾಗಿ

ತೆ ವಾಗ್ದಾನವಮಾಡಿ, ಅವರಿಗೆ ಪುರೋಹಿತನಾಗಿದ್ದು ಬಹಳಶ್ರದ್ಧೆಯಿಂದ ಕಾದ ಕಾರ್ಯಗಳೆಲ್ಲವನ್ನೂ ನಡೆಸಿಕೊಡುತ್ತಿದ್ದನು. ಅತ್ತಲಾಗಿ ದಾನವರಿಗೆ ಕ್ರಾಚಾರ್ಯನ ನೀತಿಚಾತುರ್ಯದಿಂದ, ಬೇರೊಬ್ಬರಿಗೂ ಕದಲಿಸುವುದಕ್ಕಾಗದಂತೆ ಜ್ಯಸಂಪತ್ತು ಸ್ಥಿರಪಟ್ಟಿದ್ದರೂ, ಈ ವಿಶ್ವರೂಪನು ತನ್ನಲ್ಲಿದ್ದ ನಾರಾಯಣ ಕವಚವೆಂಬ ಮಂತ್ರವಿದ್ಯೆಯಿಂದ, ಅದನ್ನಾಕರ್ಷಿಸಿ ಇಂದ್ರನಿಗೆ ಕೊಟ್ಟನು. ಮಹಾಧೀಮಂತನಾದ ಈ ವಿಶ್ವರೂಪನು, ಆದೇಮಂತ್ರವನ್ನು ಇಂದ್ರನಿಗೂ ಉಪದೇಶಿಸಿದನು. ಈ ಮಂತ್ರಬಲದಿಂದ ಸುರಕ್ಷಿತನಾಗಿದ್ದ ದೇವೇಂದ್ರನು, ಅಸುರಸೈನ್ಯವನ್ನೆಲ್ಲವನ್ನೂ ನಿರ್ಮೂಲವಾಡಿ ಸ್ವರ್ಗಸಾಮ್ರಾಜ್ಯವನ್ನನುಭವಿಸುತ್ತಿದ್ದನು" ಎಂದನು. ಇಲ್ಲಿಗೆ ಏಳನೆಯ ಅಧ್ಯಾಯವು.

---

## ವಿಶ್ವರೂಪನು ದೇವೇಂದ್ರನಿಗೆ ನಾರಾಯಣಕವಚವೆಂಬ ಮಂತ್ರವನ್ನುಪದೇಶಿಸಿದುದು.

ಇದನ್ನು ಕೇಳಿ ಪರೀಕ್ಷಿದ್ರಾಜನು, ತಿರುಗಿ ಶುಕಮುನಿಯನ್ನು ಕುರಿತು 'ಓ ಮಹರ್ಷೀ! ಸಹಸ್ರಾಕ್ಷನಾದ ದೇವೇಂದ್ರನು, ಯಾವ ಮಂತ್ರಬಲದಿಂದ ಶತ್ರುಸೈನ್ಯಗಳೆಲ್ಲವನ್ನೂ ಲೀಲೆಯಿಂದಲೇ ಜಯಿಸಿ, ತ್ರೈಲೋಕ್ಯಾಧಿಪತ್ಯವನ್ನು ಭವಿಸಿದನೋ, ಆ ನಾರಾಯಣಕವಚವೆಂಬ ಮಂತ್ರವಿದ್ಯೆಯನ್ನು ನನಗೂ ದಯವಿಟ್ಟು ಉಪದೇಶಿಸಬೇಕು." ಎಂದನು. ಅದಕ್ಕಾಶುಕನು, "ರಾಜೇಂದ್ರಾ ಕೇಳು! ತ್ವಷ್ಟೃಪುತ್ರನಾದ ವಿಶ್ವರೂಪನು, ದೇವತೆಗಳಿಗೆ ಪುರೋಹಿತನಾಗಿ ಬಂದಮೇಲೆ, ಶತ್ರುಜಯಕ್ಕೆ ಉಪಾಯವೇನೆಂದು ಪ್ರಶ್ನೆಮಾಡಿದ ದೇವೇಂದ್ರನಿಗೆ ಈ ನಾರಾಯಣಕವಚವೆಂಬ ಮಂತ್ರವನ್ನು ಪದೇಶಿಸಿದನು. ಅದನ್ನೇ ನಿನಗೆ ಹೇಳುವೆನು, ಸಾವಧಾನವಾಗಿ ಕೇಳು. ವಿಶ್ವರೂಪನು ಈ ಮಂತ್ರೋಪದೇಶವನ್ನು ಮಾಡುವಾಗ ಇಂದ್ರನನ್ನು ಕುರಿತು, "ಇಂದ್ರಾ! ಮನುಷ್ಯನಿಗೆ ತನ್ನ ದೇಹದಲ್ಲಿಯಾಗಲೀ, ಇತರಭೂತಗಳಿಂದಾಗಲೀ, ದೈವಿಕವಾಗಿಯಾಗಲೀ ಯಾವುದಾದರೂ ವಿಪತ್ತು ಸಂಭವಿಸಿದಾಗ, ಶ್ರೀಹರಿಧ್ಯಾನವನ್ನುಮಾಡುತ್ತ ಈ ನಾರಾಯಣಕವಚವೆಂಬ ಮಂತ್ರವನ್ನು ಜಪಿಸಬೇಕು. ಈ ಮಂತ್ರಜಪವನ್ನಾರಂಭಿಸುವುದಕ್ಕೆ ಮೊದಲು, ಕೈಕಾಲುಗಳನ್ನು ತೊಳೆದು, ಆಚಮನವನ್ನು ಮಾಡಿ ಶುಚಿಯಾಗಿ ಬಂದು, ಬೆರಳಿಗೆ

ಚಿಕ್ಕವರನ್ನು ನಮಸ್ಕರಿಸಿದರೂ ದೋಷವಿಲ್ಲ. ಇದಲ್ಲ
ನಿನ್ನಂತೆ ವೇದಾಧ್ಯಯನಸಂಪನ್ನರಾದವರು ವಯಸ್ಸಿನಲ್ಲಿ ಚಿಕ್ಕವರಾಗಿದ್ದರ
ಮಹಿಮೆಯಲ್ಲಿ ದೊಡ್ಡವರು. ವಯಸ್ಸಿನಿಂದಲೇ ಮನುಷ್ಯನುದೊಡ್ಡವನಾಗಲಾರನ
ಆದುದರಿಂದ ನೀನು ನಮಗೆ ಸರ್ವವಿಧದಲ್ಲಿಯೂ ಪೂಜ್ಯನು" ಎಂದರು. ಈದೇವ
ಗಳ ಪ್ರಾರ್ಥನೆಯನ್ನು ಕೇಳಿ ಮಹಾತಪಸ್ವಿಯಾದ ವಿಶ್ವರೂಪನು, ಮುಂದಹಾ
ಪೂರ್ವಕವಾಗಿ ಅವರನ್ನು ಕುರಿತು ಮೃದುವಾಕ್ಯದಿಂದ ಹೀಗೆಂದು ಹೇಳುವನ
"ಎಲೈ ಪೂಜ್ಯರೇ! ಲೋಕದಲ್ಲಿ ಪೌರೋಹಿತ್ಯವೆಂಬುದು ಬಹಳ ನಿಂದ್ಯಕಾರ್ಯನ
ಆದು ಬ್ರಹ್ಮತೇಜಸ್ಸನ್ನು ಕೆಡಿಸಿಬಿಡುವುದು. ಹಾಗಿದ್ದರೂ ಲೋಕಪಾಲಕರಾ
ನೀವೆಲ್ಲರೂ ಬಂದು ಪ್ರಾರ್ಥಿಸುವುದರಿಂದ ನಿಮ್ಮ ಕೋರಿಕೆಯನ್ನು ನಿರಾಕರಿಸಲ
ರೆನು. ಪಿತೃಗಳಾದ ನೀವು ಬಂದುಕೇಳುವಾಗ ಪಿತೃಭಕ್ತಿಯುಳ್ಳ ನಾನು ಹೇ
ತಾನೇ ನಿರಾಕರಿಸಲಿ. ಇದಲ್ಲದೆ ನಿಮಗೆ ನಾನು ಶಿಷ್ಯನು. ನಿಮ್ಮನ್ನು ಗುರುವಿನಂ
ಭಾವಿಸಿರುವೆನು. ನಿಮ್ಮ ಆಜ್ಞೆಯನ್ನು ನಡೆಸಬೇಕಾದುದೇ ನನ್ನ ಅವಶ್ಯಕಾರ್ಯವ
ಶಿಷ್ಯರಿಗೆ ಗುರುವಾಕ್ಯವನ್ನು ನಡೆಸುವುದೇ ಉತ್ತಮಪುರುಷಾರ್ಥವೆಂದು ಹಿ
ಯರು ಹೇಳಿರುವರು. ಹಾಗಿದ್ದರೂ, ಈಗ ಧನಾರ್ಜನೆಗಾಗಿ ನಾನು ಪೌರೋಹಿತ
ವನ್ನೊಪ್ಪಿಕೊಳ್ಳತಕ್ಕವನಲ್ಲ. ಶಬ್ದಾದಿವಿಷಯಗಳಲ್ಲಿ ಆಸೆಯನ್ನು ಬಿಟ್ಟ ವಿರಕ್ತರು
ತಮ್ಮ ದೇಹಧಾರಣೆಗೆ ಬೇಕಾದುದನ್ನು ಮಾತ್ರವೇ ಬಯಸುವರು. ಅಂತವರ
ಹೊಲಗದ್ದೆಗಳಲ್ಲಿ ಉದುರಿದಧಾನ್ಯಗಳನ್ನಾಗಲೀ, ಕಾಳುಗಳನ್ನಾಗಲೀ ತಿಂದು ತೃಪ್ತಿ
ಪಡುವರು. ಅವರಿಗೆ ಅದೇ ಸಾಕಾದಧನವು. ಅವುಗಳಿಂದಲೇ ಅವರು ಪಂಚಮ
ಹಾಯಜ್ಞಾದಿಕರ್ಮಗಳೆಲ್ಲವನ್ನೂ ಲೋಪವಿಲ್ಲದೆ ನಡೆಸುತ್ತಬರುವರು. ಹೀಗಿರ
ನಾಗ ನಿಮ್ಮಲ್ಲಿ ಪೌರೋಹಿತ್ಯದಿಂದ ನಾನು ಹೊಂದಬೇಕಾದ ಲಾಭವೇನು? ನಿಂ
ಪಾಸ್ಪದವಾದ ಈ ಕಾರ್ಯಕ್ಕೆ ನಾನು ಹೇಗೆತಾನೇ ಆಸೆಪಡಲಿ! ಪೌರೋಹಿತ್ಯವು
ಸಿಕ್ಕಿದುದಕ್ಕಾಗಿ ಸಂತೋಷಿಸತಕ್ಕವರು ಮೂಢರೇ ಹೊರತು, ವಿರಕ್ತರು ಅದಕ್ಕೆ
ಆಸೆಪಡಲಾರರು. ಆ ವಿರಕ್ತರಿಗೆ ಉಂಛವೃತ್ತಿಯೇ (ಭಿಕ್ಷಾಟನವೇ) ಉತ್ತಮ
ಜೀವನವು. ಹಾಗಿದ್ದರೂ ತಂದೆಗಳಾದ ನೀವು ಕೇಳಿಕೊಳ್ಳುವುದರಿಂದ, ನಿಮ್ಮ
ಮಾತಿಗೆ ನಾನು ಪ್ರತ್ಯುತ್ತರವನ್ನು ಹೇಳಲಾರೆನು. ನಿಮ್ಮ ಮಾತಿಗಾಗಿ ನಾನು
ಈ ಅಲ್ಪಕಾರ್ಯವನ್ನು ನಡೆಸುವುದೇನೂ ಅತಿಶಯವಲ್ಲ. ಆದುದರಿಂದ ನಿಮ್ಮ
ಕೋರಿಕೆಯನ್ನು ನಾನು. ನನ್ನ ಸಮಸ್ತ ಧರ್ಮಗಳಿಂದಲೂ, ಕೊನೆಗೆ ನನ್ನ
ಪ್ರಾಣಗಳಿಂದಲೂ ಸಾಧಿಸಿಕೊಡಬೇಕು" ಎಂದನು. ಹೀಗೆ ಮಹಾತಪಸ್ವಿಯಾದ
ವಿಶ್ವರೂಪನು, ದೇವತೆಗಳ ಪ್ರಾರ್ಥನೆಯಂತೆ ಅವರಿಗೆ ತಾನು ಪುರೋಹಿತನಾಗಿರು

ತೆ ವಾಗ್ದಾನವಮಾಡಿ, ಅವರಿಗೆ ಪುರೋಹಿತನಾಗಿದ್ದು ಬಹಳಶ್ರದ್ಧೆಯಿಂದ
ಕಾದ ಕಾರ್ಯಗಳೆಲ್ಲವನ್ನೂ ನಡೆಸಿಕೊಡುತ್ತಿದ್ದನು. ಆತ್ತಲಾಗಿ ದಾನವರಿಗೆ
ಕ್ರಾಚಾರ್ಯನ ನೀತಿಚಾತುರ್ಯದಿಂದ, ಬೇರೊಬ್ಬರಿಗೂ ಕದಲಿಸುವುದಕ್ಕಾಗದಂತೆ
ಜ್ಯಸಂಪತ್ತು ಸ್ಥಿರಪಟ್ಟಿದ್ದರೂ, ಈ ವಿಶ್ವರೂಪನು ತನ್ನಲ್ಲಿದ್ದ ನಾರಾಯಣ
ಕವಚವೆಂಬ ಮಂತ್ರವಿದ್ಯೆಯಿಂದ, ಅದನ್ನಾಕರ್ಷಿಸಿ ಇಂದ್ರನಿಗೆ ಕೊಟ್ಟನು.
ಹಾಧೀಮಂತನಾದ ಈ ವಿಶ್ವರೂಪನು, ಆದೇಮಂತ್ರವನ್ನು ಇಂದ್ರನಿಗೂ ಉಪ
ಶಿಸಿದನು. ಈ ಮಂತ್ರಬಲದಿಂದ ಸುರಕ್ಷಿತನಾಗಿದ್ದ ದೇವೇಂದ್ರನು, ಅಸುರಸೈನ್ಯ
ಲ್ಲವನ್ನೂ ನಿರ್ಮೂಲವಮಾಡಿ ಸ್ವರ್ಗಸಾವ್ರಾಜ್ಯವನ್ನನುಭವಿಸುತ್ತಿದ್ದನು"
ದನು. ಇಲ್ಲಿಗೆ ಎಳನೆಯ ಅಧ್ಯಾಯವು.

---

## ವಿಶ್ವರೂಪನು ದೇವೇಂದ್ರನಿಗೆ ನಾರಾಯಣಕವಚ ವೆಂಬ ಮಂತ್ರವನ್ನುಪದೇಶಿಸಿದುದು.

ಇದನ್ನು ಕೇಳಿ ಪರೀಕ್ಷಿದ್ರಾಜನು, ತಿರುಗಿ ಶುಕಮುನಿಯನ್ನು ಕುರಿತು "ಓ
ಮಹರ್ಷೀ! ಸಹಸ್ರಾಕ್ಷನಾದ ದೇವೇಂದ್ರನು, ಯಾವ ಮಂತ್ರಬಲದಿಂದ ಶತ್ರು
ಸೈನ್ಯಗಳೆಲ್ಲವನ್ನೂ ಲೀಲೆಯಿಂದಲೇ ಜಯಿಸಿ, ತ್ರೈಲೋಕ್ಯಾಧಿಪತ್ಯವನ್ನನು
ಭವಿಸಿದನೋ, ಆ ನಾರಾಯಣಕವಚವೆಂಬ ಮಂತ್ರವಿದ್ಯೆಯನ್ನು ನನಗೂ ದಯ
ಟ್ಟು ಉಪದೇಶಿಸಬೇಕು." ಎಂದನು. ಆದಕ್ಕಾಶುಕನು, "ರಾಜೇಂದ್ರಾ ಕೇಳು!
ತ್ವಷ್ಟೃಪುತ್ರನಾದ ವಿಶ್ವರೂಪನು, ದೇವತೆಗಳಿಗೆ ಪುರೋಹಿತನಾಗಿ ಬಂದಮೇಲೆ,
ತ್ರುಜಯಕ್ಕೆ ಉಪಾಯವೇನೆಂದು ಪ್ರಶ್ನೆಮಾಡಿದ ದೇವೇಂದ್ರನಿಗೆ ಈ ನಾರಾಯ
ಕವಚವೆಂಬ ಮಂತ್ರವನ್ನುಪದೇಶಿಸಿದನು. ಆದನ್ನೇ ನಿನಗೆ ಹೇಳುವೆನು, ಸಾವ
ನವಾಗಿ ಕೇಳು. ವಿಶ್ವರೂಪನು ಈ ಮಂತ್ರೋಪದೇಶವನ್ನು ಮಾಡುವಾಗ
ಇಂದ್ರನನ್ನು ಕುರಿತು, "ಇಂದ್ರಾ! ಮನುಷ್ಯನಿಗೆ ತನ್ನ ದೇಹದಲ್ಲಿಯಾಗಲೀ,
ಇತರಭೂತಗಳಿಂದಾಗಲೀ, ದೈವಿಕವಾಗಿಯಾಗಲೀ ಯಾವುದಾದರೂ ವಿಪತ್ತು
ರಂಭವಿಸಿದಾಗ, ಶ್ರೀಹರಿಧ್ಯಾನವನ್ನು ಮಾಡುತ್ತ ಈ ನಾರಾಯಣಕವಚವೆಂಬ
ಮಂತ್ರವನ್ನು ಜಪಿಸಬೇಕು. ಈ ಮಂತ್ರಜಪವನ್ನಾರಂಭಿಸುವುದಕ್ಕೆ ಮೊದಲು,
ಕೈಕಾಲುಗಳನ್ನು ತೊಳೆದು, ಆಚಮನವನ್ನು ಮಾಡಿ ಶುಚಿಯಾಗಿ ಬಂದು, ಬೆರಳಿಗೆ

ದರ್ಭಪವಿತ್ರವನ್ನಿಟ್ಟುಕೊಂಡು, ಉತ್ತರಾಭಿಮುಖವಾಗಿ ಕುಳ್ಳಿರಬೇಕು. ಮತ್ತು ಮೌನವ್ರತವನ್ನು ಹಿಡಿದು, ಅಷ್ಟಾಕ್ಷರಮಂತ್ರದಿಂದಲೂ, ದ್ವಾದಶಾಕ್ಷರಮಂತ್ರದಿಂದಲೂ, ವಿಷ್ಣು ಷಡಕ್ಷರಿಯೆಂಬ ಮಂತ್ರದಿಂದಲೂ, ಅಂಗನ್ಯಾಸಕರನ್ಯಾಸಗಳನ್ನು ಮಾಡಿದಮೇಲೆ ಭಯನಿವಾರಣಾರ್ಥವಾಗಿ, ಭಗವನ್ಮಯನಾದ ಆ ನಾರಾಯಣಕವಚಮಂತ್ರವನ್ನು ಜಪಿಸಬೇಕು. ಜಪಕ್ಕೆ ಮೊದಲು ಅಂಗನ್ಯಾಸಕರನ್ಯಾಸಕ್ರಮಗಳನ್ನು ವಿವರಿಸುವೆನು ಕೇಳು! ಮೊದಲು, ಕಾಲುಗಳು, ಅಮೇಲೆ ಮೊಣಕಾಲುಗಳು, ಅದರಮೇಲೆ ತೊಡೆಗಳು, ಹಾಗೆಯೇ ಹೊಟ್ಟೆ, ಹೃದಯ, ಎದೆ, ಮುಖ, ತಲೆ, ಎಂಬೀ ಕ್ರಮದಿಂದಾಗಲೀ, ತಲೆಯಿಂದಾರಂಭಿಸಿ ಪಾದಗಳವರೆಗೆ ವಿಲೋಮವಾಗಿಯಾಗಲೀ ಈ ಎಂಟಂಗಗಳಲ್ಲಿಯೂ "ಓಂ ನಮೋನಾರಾಯಣಾಯ" ಎಂಬಿ ಅಷ್ಟಾಕ್ಷರಮಂತ್ರದೊಳಗಿನ ಒಂದೊಂದಕ್ಷರವನ್ನೂ, ಮೊದಲು ಪ್ರಣವಾಕ್ಷರದೊಡನೆಯೂ, ಕೊನೆಯಲ್ಲಿ ನಮಶ್ಶಬ್ದದೊಡನೆಯೂ ಸೇರಿಸಿ, ವಿನ್ಯಾಸಮಾಡಬೇಕು, ಆಮೇಲೆ "ಓಂ ನಮೋಭಗವತೇ ವಾಸುದೇವಾಯ" ಎಂಬೀ ದ್ವಾದಶಾಕ್ಷರೀಮಂತ್ರದಿಂದ ಕರನ್ಯಾಸವನ್ನು ಮಾಡಬೇಕು. ಈ ಮಂತ್ರದೊಳಗಿನ ಹನ್ನೆರಡಕ್ಷರಗಳನ್ನೂ ಕ್ರಮವಾಗಿ ಎರಡು ಕೈಗಳಲ್ಲಿಯೂ, ತೋರುಬೆರಳಿನಿಂದ ಕಿರುಬೆರಳಿನವರೆಗೆ ನಾಲ್ಕುಬೆರಳುಗಳು, ಮತ್ತು ಹೆಬ್ಬೆರಳುಗಳ ಎರಡೆರಡು ಗಿಣ್ಣುಗಳು, ಈ ಹನ್ನೆರಡುಸ್ಥಾನಗಳಲ್ಲಿ ನ್ಯಾಸಮಾಡಬೇಕು. ಆಮೇಲೆ "ಓಂ ವಿಷ್ಣವೇ ನಮಃ" ಎಂಬೀ ವಿಷ್ಣು ಷಡಕ್ಷರೀ ಮಂತ್ರದಲ್ಲಿ, ಮೊದಲಿಂದ ಕ್ರಮವಾಗಿ, ಓಂಕಾರವನ್ನು ಹೃದಯದಲ್ಲಿಯೂ, ವಿವರ್ಣವನ್ನು ತಲೆಯಲ್ಲಿಯೂ, ಷಕಾರವನ್ನು ಭ್ರೂಮಧ್ಯದಲ್ಲಿಯೂ, ಣಕಾರವನ್ನು ಶಿಖೆಯಲ್ಲಿಯೂ, ವೇಕಾರವನ್ನು ಕಣ್ಣುಗಳಲ್ಲಿಯೂ, ನಕಾರವನ್ನು ಎಲ್ಲಾ ಕೀಲುಗಳಲ್ಲಿಯೂ ವಿನ್ಯಾಸಮಾಡಿ, ಉಳಿದ ಮಕಾರವಿಸರ್ಗಗಳಿಗೆ "ಫಟ್" ಎಂಬುದನ್ನೂ ಸೇರಿಸಿ, ಚುಟಿಕೆಹಾಕುತ್ತ ದಿಗ್ಬಂಧನವನ್ನು ಮಾಡಬೇಕು. ಇವು ಅಸ್ತ್ರವನ್ನುದ್ದೇಶಿಸಿ ಹೇಳತಕ್ಕ ಮಂತ್ರಾಕ್ಷರಗಳು. ಈ ನ್ಯಾಸಗಳಿಂದ ಉಪಾಸಕನು ಮಂತ್ರಪುನಶ್ಚರಣೆಗೆ ಯೋಗ್ಯವಾದ ಶುದ್ಧದೇಹವುಳ್ಳವನಾಗುವನು. ಈ ಅಂಗನ್ಯಾಸಕರನ್ಯಾಸಗಳು ಮುಗಿದಮೇಲೆ, ಧ್ಯಾನಯೋಗ್ಯನಾಗಿಯೂ, ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸುಗಳೆಂಬ ಷಡ್ಗುಣಗಳಿಂದ ಪರಿಪೂರ್ಣನಾಗಿಯೂ, ಇರುವ ಪರಮಾತ್ಮನನ್ನು ಧ್ಯಾನಿಸುತ್ತ, ಜ್ಞಾನ, ತೇಜಸ್ಸು, ತಪಸ್ಸುಮುಂತಾದುವುಗಳಿಗೆಲ್ಲಾ ಆಶ್ರಯವಾದ ನಾರಾಯಣಕವಚವೆಂಬ ಈ ಕೆಳಗಿನ ಮಂತ್ರವನ್ನು ಜಪಿಸುವುದಕ್ಕೆ ತೊಡಗಬೇಕು

## ನಾರಾಯಣಕವಚವೆಂಬ ಮಂತ್ರವು.

"ಗರುತ್ಮಂತನ ಬೆನ್ನ ಮೇಲೆ ಪಾದಕಮಲಗಳನ್ನೂರಿ ಕುಳಿತವನಾಗಿಯೂ ಶಂಖ, ಚಕ್ರ, ಗದಾ, ಖಡ್ಗ, ಚರ್ಮ, ಬೇಟಕ, ಧನುಸ್ಸು, ಬಾಣ, ಪಾಶಗಳೆಂಬ ಈ ಎಂಟುದಿವ್ಯಾಯುಧಗಳಿಂದೊಪ್ಪುತ್ತಿರುವ ಅಷ್ಟಭುಜಗಳುಳ್ಳವನಾಗಿಯೂ, ಅಣಿಮಾದ್ಯಷ್ಟಸಿದ್ಧಿಗಳುಳ್ಳವನಾಗಿಯೂ (ಸ್ವತಸ್ಸಿದ್ಧವಾಗಿರುವ ಅಪಹತಪಾಪ್ಮತ್ವವೇ ಮೊದಲಾದ ಅಷ್ಟಗುಣಗಳುಳ್ಳವನಾಗಿಯೂ) ಇರುವ ಸರ್ವೇಶ್ವರನು, ನನ್ನನ್ನು ಸರ್ವಾವಸ್ಥೆಗಳಲ್ಲಿಯೂ ರಕ್ಷಿಸುತ್ತಿರಲಿ! ಜಲದಲ್ಲಿರುವ ಮತ್ಸ್ಯಮೂರ್ತಿಯು, ಜಲಜಂತುಗಳಿಂದಲೂ ವರುಣಪಾಶದಿಂದಲೂ ನನ್ನನ್ನು ರಕ್ಷಿಸಲಿ! ಮಾಯಾವಟು (ಕಪಟಬ್ರಹ್ಮಚಾರಿ) ವಾದ ವಾಮನಮೂರ್ತಿಯು, ನೆಲದಲ್ಲಿ ನನ್ನನ್ನು ಅಪಾಯಗಳಿಂದ ರಕ್ಷಿಸಲಿ! ಮೂರಡಿಗಳಿಂದ ಮೂರುಲೋಕಗಳನ್ನೂ ಅಳೆದ ತ್ರಿವಿಕ್ರಮಮೂರ್ತಿಯೂ, ಆಕಾಶದಲ್ಲಿ ನನಗೆ ರಕ್ಷಕನಾಗಿರಲಿ! ಯಾವನು ಅಟ್ಟಹಾಸಮಾಡುವಾಗ ದಿಕ್ಕುಗಳೆಲ್ಲವೂ ಮೊಳುಗುತ್ತಿದ್ದುವೋ, ಅಂತಹ ಅದ್ಭುತ ಶಕ್ತಿಯುಳ್ಳವನಾಗಿಯೂ, ರಾಕ್ಷಸವೈರಿಯಾಗಿಯೂ ಇರುವ ನೃಸಿಂಹಮೂರ್ತಿಯು, ದುರ್ಗಗಳಲ್ಲಿಯೂ ಅರಣ್ಯಪ್ರದೇಶಗಳಲ್ಲಿಯೂ, ರಣರಂಗಗಳಲ್ಲಿಯೂ ನನಗೆ ರಕ್ಷಕನಾಗಿರಲಿ! ಯಜ್ಞಸ್ವರೂಪಿಯಾಗಿಯೂ, ಹಿರಣ್ಯಾಕ್ಷಸಂಹಾರಿಯಾಗಿಯೂ, ತನ್ನ ಕೋರೆಹಲ್ಲುಗಳಿಂದ, ಪಾತಾಳದಲ್ಲಿ ಹುದುಗಿದ್ದ ಭೂಮಿಯನ್ನುದ್ಧರಿಸಿದವನಾಗಿಯೂ ಇರುವ ವಾರಾಹಮೂರ್ತಿಯು, ಮಾರ್ಗಗಳಲ್ಲಿ ನನ್ನನ್ನು ರಕ್ಷಿಸಲಿ! ಪರಶುರಾಮಮೂರ್ತಿಯು ಪರ್ವತಶಿಖರಗಳಲ್ಲಿ ನನ್ನನ್ನು ರಕ್ಷಿಸಲಿ! ಭರತಾಗ್ರಜನಾಗಿಯೂ, ಲಕ್ಷ್ಮಣಸಹೋದರನಾಗಿಯೂ ಇರುವ ಶ್ರೀದಾಶರಥಿರಾಮನು, ದೇಶಾಂತರಗಳಲ್ಲಿ ನನ್ನನ್ನು ರಕ್ಷಿಸಲಿ! ಶ್ರೀಮನ್ನಾರಾಯಣನು, ಅಭಿಚಾರ (ಶೂನ್ಯ) ವೊದಲಾದ ಕ್ರೂರಕರ್ಮಗಳಿಂದಲೂ, ಬೇರೆ ಎಲ್ಲಾ ಅಪಾಯಗಳಿಂದಲೂ ನನ್ನನ್ನು ಕಾಪಾಡಲಿ! ನರಾವತಾರವನ್ನೆತ್ತಿದ ಸರ್ವೇಶ್ವರನು, ಗರ್ವದಿಂದಲೂ, ದತ್ತಾತ್ರೇಯಮೂರ್ತಿಯು, ಯೋಗವಿರೋಧಿಗಳಿಂದಲೂ ನನ್ನನ್ನು ರಕ್ಷಿಸಲಿ! ಯೋಗರಹಸ್ಯವನ್ನು ಪ್ರಚಾರಗೊಳಿಸಿದವನಾಗಿಯೂ, ಸಿದ್ಧೇಶ್ವರನಾಗಿಯೂ, ಪ್ರಾಣಿಗಳಿಗೆ ಜ್ಞಾನಪ್ರದಾನವನ್ನು ಮಾಡಿ, ಅವರ ಕರ್ಮಬಂಧನವನ್ನು ನೀಗಿಸಿದವನಾಗಿಯೂ ಇರುವ ಕಪಿಲಮೂರ್ತಿಯು, ಕರ್ಮಬಂಧದಿಂದ ನನ್ನನ್ನು ಕಾಪಾಡಲಿ! ಸನತ್ಕುಮಾರಭಗವಂತನು ಕಾಮದಿಂದ ನನ್ನನ್ನು ಕಾಪಾಡಲಿ! ಮಧುಕೈಟಭರನ್ನು ಕೊಂದ ಹಯಗ್ರೀವಮೂರ್ತಿಯು, ನಾನು ಆಗಾಗ ದೇವತೆಗಳ ವಿಷಯದಲ್ಲಿ ನಡೆಸಬಹುದಾದ ಅಪರಾಧಗಳನ್ನು ಮನ್ನಿಸಿ, ಹೊರಗೆಲ್ಲಾ ನನ್ನನ್ನು ರಕ್ಷಿಸುತ್ತಿರಲಿ! ಭಗ

ವಂತನನ್ನು ಎಡೆಬಿಡದೆ ಆರಾಧಿಸತಕ್ಕ ನಾರದಮಹರ್ಷಿಯು, ಭಗವದಾರಾಧನಕ್ಕೆ ಸಂಭವಿಸಬಹುದಾದ ವಿಘ್ನಗಳಿಂದ ನನ್ನನ್ನು ರಕ್ಷಿಸಲಿ! ಕೂರ್ಮರೂಪಿಯಾದ ಭಗವಂತನು ನನ್ನನ್ನು ಎಲ್ಲಾನರಕಗಳಿಂದಲೂ ತಪ್ಪಿಸಲಿ! ಧನ್ವಂತರಿಸ್ವರೂಪಿಯಾದ ಭಗವಂತನು ಅಪಥ್ಯದಿಂದ ನನ್ನನ್ನು ರಕ್ಷಿಸಲಿ! ಋಷಭರೂಪಿಯಾಗಿ ಜಿತೇಂದ್ರಿಯನಾದ ಭಗವಂತನು, ಮಳೆ, ಗಾಳಿ, ಬಿಸಿಲು ಮುಂತಾದ್ವಂದ್ವಭಯದಿಂದ ನನ್ನನ್ನು ಕಾಪಾಡಲಿ! ಯಜ್ಞರೂಪಿಯಾದ ಭಗವಂತನು, ಲೋಕಾಪವಾದದಿಂದ ನನ್ನನ್ನು ಕಾಪಾಡಲಿ! ಬಲರಾಮಮೂರ್ತಿಯು ದುರ್ಜನರ ಕೆಡುಕುಗಳಿಂದಲೂ, ಮೃತ್ಯುಭಯದಿಂದಲೂ ನನ್ನನ್ನು ಕಾಪಾಡಲಿ! ಆದಿಶೇಷಸ್ವರೂಪಿಯಾದ ಭಗವಂತನು, ಕೋಪಸ್ವಭಾವವುಳ್ಳ ಕ್ರೂರಸರ್ಪಗಳಿಂದ ನನ್ನನ್ನು ಕಾಪಾಡಲಿ! ವ್ಯಾಸರೂಪಿಯಾದ ಭಗವಂತನು, ಅಜ್ಞಾನದಿಂದ ನನ್ನನ್ನು ರಕ್ಷಿಸಲಿ! ಬುದ್ಧಿರೂಪಿಯಾದ ಭಗವಂತನು ಬುದ್ಧಿಮೋಹಕ್ಕೆ ಕಾರಣರಾದ ಪಾಷಂಡಗಣಗಳಿಂದ ನನ್ನನ್ನು ಕಾಪಾಡಲಿ! ಧರ್ಮರಕ್ಷಣೆಗಾಗಿ ಅವತಾರವನ್ನೆತ್ತಿದ ಕಲಿಮೂರ್ತಿಯು ಕಾಲಮಲವೆನಿಸಿದ ಕಲಿದೋಷದಿಂದ ನನ್ನನ್ನು ರಕ್ಷಿಸಲಿ! ಕೇಶವಮೂರ್ತಿಯು ಗದಾಪಾಣಿಯಾಗಿ ಪ್ರಾತಃಕಾಲದಲ್ಲಿ ನನ್ನನ್ನು ರಕ್ಷಿಸಲಿ! ವೇಣುಹಸ್ತನಾದ ಗೋವಿಂದನು ಸಂಗವಕಾಲದಲ್ಲಿ ನನ್ನನ್ನು ರಕ್ಷಿಸಲಿ! ಶಕ್ತಿಧರನಾದ ನಾರಾಯಣನು ಪೂರ್ವಾಹ್ಣದಲ್ಲಿ ನನ್ನನ್ನು ರಕ್ಷಿಸಲಿ! ವಿಷ್ಣುವು ಚಕ್ರಧಾರಿಯಾಗಿ ಮಧ್ಯಾಹ್ನದಲ್ಲಿ ನನ್ನನ್ನು ರಕ್ಷಿಸಲಿ! ಧನುರ್ಧಾರಿಯಾಗಿ ತೇಜಸ್ಸಿನಿಂದ ಜ್ವಲಿಸುತ್ತಿರುವ ಮಾಧವನು, ಅಪರಾಹ್ಣದಲ್ಲಿ ನನ್ನನ್ನು ರಕ್ಷಿಸಲಿ! ಯೋಗಿಗಳಲ್ಲಿಯೂ, ಜೀವಾತ್ಮರ ಹೃದಯದಲ್ಲಿಯೂ, ಕ್ಷೀರಾಬ್ಧಿಯಲ್ಲಿಯೂ ನೆಲೆಗೊಂಡ ಮಾಧವನು ಸಾಯಂಕಾಲದಲ್ಲಿ ನನ್ನನ್ನು ರಕ್ಷಿಸಲಿ! ಹೃಷೀಕೇಶನು ಪ್ರದೋಷಕಾಲದಲ್ಲಿ ನನ್ನನ್ನು ರಕ್ಷಿಸಲಿ! ಪ್ರದೋಷದಿಂದಾಚೆಗೆ ಅರ್ಧರಾತ್ರಿಯವರೆಗಿನಕಾಲದಲ್ಲಿಯೂ, ನಡುರಾತ್ರಿಯಲ್ಲಿಯೂ ಅಸಹಾಯಶೂರನಾದ ಪದ್ಮನಾಭನು ನನ್ನನ್ನು ರಕ್ಷಿಸಲಿ! ಶ್ರೀವತ್ಸಚಿಹ್ನವುಳ್ಳ ಶ್ರೀಧರನು, ಅಪರರಾತ್ರಿಯಲ್ಲಿ ನನ್ನನ್ನು ಕಾಪಾಡಲಿ! ಖಡ್ಗಧಾರಿಯಾದ ಜನಾರ್ದನನು ಉಷಃಕಾಲದಲ್ಲಿ ನನ್ನನ್ನು ಕಾಪಾಡಲಿ! ದಾಮೋದರನು ಸಂಧ್ಯಾಕಾಲಗಳಲ್ಲಿ, ನನ್ನನ್ನು ಕಾಪಾಡಲಿ! ಕಾಲಸ್ವರೂಪಿಯಾದ ಸರ್ವೇಶ್ವರನು, ಬೆಳಗಿನ ಜಾವದಲ್ಲಿ ನನ್ನನ್ನು ರಕ್ಷಿಸಲಿ! ಭಗವಂತನ ಹಸ್ತದಿಂದ ಪ್ರೇರಿತವಾಗಿ ಸಮಸ್ತಲೋಕವನ್ನೂ ಸುತ್ತುತ್ತ, ಪ್ರಳಯಕಾಲದ ಸಿಡಿಲಿನಂತೆತೀಕ್ಷ್ಣವಾದ ಹಲ್ಲುಗಳುಳ್ಳಯಾವ ಸುದರ್ಶನಚಕ್ರವು, ವಾಯುಪ್ರೇರಿತವಾದ ಅಗ್ನಿಯು, ಒಣಗಿದ ಪೊದೆಯನ್ನು ಸುಡುವಂತೆ, ಶತ್ರುಸೈನ್ಯವನ್ನು ದಹಿಸಿದದಹಿಸಿ ನಿರ್ಮೂಲ

ಮಾಡುತ್ತಿರುವುದೋ, ಆ ಚಕ್ರಾಯುಧವು ನಮ್ಮನ್ನು ರಕ್ಷಿಸಲಿ! ಸಿಡಿಲಿನಂತೆ ಅಗ್ನಿಕಣಗಳನ್ನೆ ರಚುತ್ತಿರುವ ಓ ಗದಾಯುಧವೇ! ಭಗವಂತನಿಗೆ ಅತ್ಯಂತಪ್ರಿಯವಾದ ಆಯುಧವೆನಿಸಿಕೊಂಡಿರುವ ನೀನು ನಿನ್ನ ಪಾದಾಶ್ರಿತನಾದ ನನಗೆ ಉಪದ್ರವಕಾರಿಗಳಾದ ಕೂಶ್ಮಾಂಡ, ವೈನಾಯಕ, ಯಕ್ಷ, ರಾಕ್ಷಸ, ಭೂತ, ಗ್ರಹಾದಿಗಳೆಲ್ಲವನ್ನೂ ಇತರ ಶತ್ರುಗಳನ್ನೂ ನಿರ್ಮೂಲಮಾಡು! ಅವರ ರಕ್ತವನ್ನು ಹಿಂಡು! ಪಾಂಚಜನ್ಯವೆಂಬ ಓ ಶಂಖರಾಜಾ! ಸಾಕ್ಷಾದ್ಭಗವಂತನ ಮುಖದ ಗಾಳಿಯಿಂದ ಪೂರಿತನಾಗಿ, ಭಯಂಕರಧ್ವನಿಯಿಂದಲೇ ಶತ್ರುಗಳ ಹೃದಯವನ್ನು ನಡುಗಿಸತಕ್ಕ ನೀನು, ಯಾತುಧಾನರು, ಪ್ರಮಥರು, ಮಾತೃಗಣಗಳು, ಭೂತಪ್ರೇತಪಿಶಾಚಗಳು, ಮುಂತಾಗಿ ಭಯಂಕರದೃಷ್ಟಿಯುಳ್ಳ ಗ್ರಹಗಳೆಲ್ಲವನ್ನೂ, ಓಡಿಸು. ತೀಕ್ಷ್ಣಧಾರೆಯುಳ್ಳ ಓ ಖಡ್ಗಾಯುಧವೇ! ನೀನು ಭಗವಂತನಿಂದ ಪ್ರೇರಿತನಾಗಿ ನಮ್ಮ ಶತ್ರುಗಳೆಲ್ಲರನ್ನೂ ಖಂಡಬಂಡವಾಗಿ ಕತ್ತರಿಸು! ಚಂದ್ರಬಿಂಬದಂತೆ ನೂರಾರು ಕಣ್ಣುಗಳುಳ್ಳ ಓ ಫೇಟಕವೇ! ನೀನು ಪಾಪದೃಷ್ಟಿಯುಳ್ಳ ನಮ್ಮ ಶತ್ರುಗಳ ಕಣ್ಣುಗಳನ್ನು ಮುಚ್ಚಿಸು! ದುಷ್ಟಗ್ರಹಗಳಿಂದಲೂ, ಧೂಮಕೇತುಗಳಿಂದಲೂ, ದುಷ್ಟಮನುಷ್ಯರಿಂದಲೂ, ಸರ್ಪಾದಿಗಳಿಂದಲೂ ಕೋರೆಹಲ್ಲುಳ್ಳ ಇತರ ಪ್ರಾಣಿಗಳಿಂದಲೂ, ಭೂತಗಳಿಂದಲೂ, ನಮಗುಂಟಾಗತಕ್ಕ ಸಮಸ್ತಭಯವೂ ಆ ಭಗವಂತನ ನಾಮಗಳನ್ನೂ, ಅವನ ರೂಪಗಳನ್ನೂ, ಅವನ ದಿವ್ಯಾಯುಧಗಳನ್ನೂ ಸ್ಮರಿಸುವುದರಿಂದ, ಆಯಾಕ್ಷಣವೇ ನಿವೃತ್ತಿಹೊಂದಲಿ! ನಮ್ಮ ಶ್ರೇಯಸ್ಸಿಗೆ ಪ್ರತಿಬಂಧಕಗಳಾದುವೆಲ್ಲವೂ ನಿರ್ಮೂಲವಾಗಲಿ! ರಥಂತರಾದಿಭೇದಗಳುಳ್ಳ ಸಾಮವೇದದಿಂದ ಸ್ತುತಿಸಲ್ಪಡತಕ್ಕವನಾಗಿಯೂ, ಭೂಮೋಮಯನಾಗಿಯೂ ಇರುವ ಗರುಡದೇವನು ನಮ್ಮನ್ನು ಸಮಸ್ತಕಷ್ಟಗಳಿಂದಲೂ ತಪ್ಪಿಸಲಿ! ವಿಷ್ವಕ್ಸೇನನು ತನ್ನ ನಾಮಗಳಿಂದ ನಮ್ಮನ್ನು ರಕ್ಷಿಸಲಿ! ಆ ಭಗವಂತನ ಮೂರ್ತಿಗಳೂ, ಅವನ ನಾಮಗಳೂ, ಅವನ ವಾಹನಗಳೂ, ಅವನ ದಿವ್ಯಾಯುಧಗಳೂ ನಮ್ಮ ಬುದ್ಧಿ, ಇಂದ್ರಿಯಗಳು, ಮನಸ್ಸುಗಳು. ಇವನ್ನೆಲ್ಲಾ ವಿಪತ್ತಿನಿಂದ ರಕ್ಷಿಸಲಿ! ಚೇತನಾಚೇತನರೂಪವಾದ ಪ್ರಪಂಚವೆಲ್ಲವೂ ಪರಮಾತ್ಮ ಸ್ವರೂಪವೆಂಬ ನಮ್ಮ ದೃಢವಾದ ನಂಬಿಕೆಯು ಸತ್ಯವಾಗಿದ್ದರೆ, ಅದರಿಂದ ನಮ್ಮ ಬಾಧೆಗಳೆಲ್ಲವೂ ನೀಗಲಿ! "ಪರಮಪುರುಷನು ಜಗತ್ತಿಗೆಲ್ಲಾ ಅಂತರಾತ್ಮನಾಗಿರುವಾಗಲೂ, ಪ್ರಾಕೃತಗಳಾದ ಆಯಾ ನಾಮರೂಪಗಳಿಂದುಂಟಾಗುವ ಭೇದವಿಲ್ಲದವನಾಗಿ, ಆಗಾಗ ತನ್ನ ಸಂಕಲ್ಪಜ್ಞಾನದಿಂದ ತಾನಾಗಿಯೇ ಅಪ್ರಾಕೃತವಾದ ರಾಮಕೃಷ್ಣಾದಿರೂಪಗಳನ್ನೂ, ಆಯಾನಾಮಗಳನ್ನೂ ಆದಕ್ಕೆ ತಕ್ಕ ಆಯುಧಗಳನ್ನೂ ಧರಿಸುವನು." ಎಂಬೀ

ನಮ್ಮ ನಂಬಿಕೆಯು ಸತ್ಯವಾಗಿದ್ದರೆ, ಅವನು ನಮ್ಮ ಕೋರಿಕೆಗಳೆಲ್ಲವನ್ನೂ ಕೈಗೂಡಿಸಿ, ಸರ್ವದೇಶ ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ ನಮ್ಮನ್ನು ಸಮಸ್ತಭೂತಗಳಿಂದಲೂ ಭಯವಿಲ್ಲದಂತೆ ರಕ್ಷಿಸಲಿ! ತನ್ನ ಆಟ್ಟಹಾಸಧ್ವನಿಯಿಂದಲೇ ಭಕ್ತರ ಭಯವನ್ನು ನೀಗಿಸತಕ್ಕವನಾಗಿಯೂ, ತನ್ನ ತೇಜಸ್ಸಿನಿಂದಲೇ ಸೂರ್ಯಾದಿಗಳಿಗೂ ತೇಜಸ್ಸನ್ನು ಕೊಡತಕ್ಕವನಾಗಿಯೂ ಇರುವ ನಾರಸಿಂಹಮೂರ್ತಿಯು, ದಿಕ್ಕುಗಳಲ್ಲಿಯೂ, ವಿದಿಕ್ಕುಗಳಲ್ಲಿಯೂ, ಮೇಲೆಯೂ, ಕೆಳಗೂ, ಹೊರಗೂ ಇನ್ನೂ ನಾನಾಕಡೆಗಳಲ್ಲಿಯೂ ನಮ್ಮನ್ನು ರಕ್ಷಿಸುತ್ತಿರಲಿ!" ಎಂದು ವಿಶ್ವರೂಪನು ದೇವೇಂದ್ರನಿಗೆ ನಾರಾಯಣಕವಚವೆಂಬ ಈ ಮಂತ್ರವನ್ನು ಉಪದೇಶಿಸಿದಮೇಲೆ, ಆ ಇಂದ್ರನನ್ನು ಕುರಿತು 'ಓ ದೇವೇಂದ್ರಾ! ಈ ಮಂತ್ರಜಪದಿಂದ ನೀನು ಅನಾಯಾಸವಾಗಿ ಅಸುರಸೇನೆಗಳನ್ನು ಜಯಿಸಬಹುದು. ಅಷ್ಟೇಕೆ? ಈ ಮಂತ್ರವನ್ನು ಅನುಸಂಧಾನಮಾಡತಕ್ಕ ಪುರುಷನು, ಮತ್ತೊಬ್ಬರನ್ನು ಕಣ್ಣಿಂದ ನೋಡಿದರೂ ಕಾಲಿಂದ ಮುಟ್ಟಿದರೂ, ಅಂತವರ ಪಾಪಗಳೆಲ್ಲವೂ ನೀಗುವುವು. ಈ ಮಂತ್ರವಿದ್ಯೆಯನ್ನು ಧರಿಸಿದ ಪುರುಷನಿಗೆ, ರಾಜರಿಂದಾಗಲೀ, ಕಳ್ಳರಿಂದಾಗಲೀ ವೈರಿಗಳಿಂದಾಗಲೀ ಕ್ರೂರಗ್ರಹಗಳಿಂದಾಗಲೀ ಯಾವುದರಿಂದಲೂ, ಯಾತಾಗಲೂ, ಎಳ್ಳಷ್ಟಾದರೂ ಭಯವಿರದು! ಹಿಂದೊಮ್ಮೆ ಕೌಶಿಕಗೋತ್ರದಲ್ಲಿ ಹುಟ್ಟಿದ ಬ್ರಾಹ್ಮಣನೊಬ್ಬನು, ಈ ಮಂತ್ರವನ್ನು ಉಪದೇಶಹೊಂದಿ, ಇದನ್ನು ಮರೆಯದೆ ಅನುಸಂಧಿಸುತ್ತಿದ್ದು, ಕೊನೆಗೆ ಯೋಗಧಾರಣೆಯಿಂದ ಒಂದು ಮರುಭೂಮಿಯಲ್ಲಿ ಶರೀರತ್ಯಾಗಮಾಡಿಬಿಟ್ಟನು. ಆಮೇಲೆ ಚಿತ್ರರಥನೆಂಬ ಗಂಧರ್ವನೊಬ್ಬನು, ತನ್ನ ಸ್ತ್ರೀಯರೊಡನೆ ವಿಮಾನವನ್ನೇರಿ ಬರುತ್ತ, ಆ ಬ್ರಾಹ್ಮಣನು ಶರೀರವನ್ನು ಬಿಟ್ಟು ಹೋದ ಸ್ಥಲಕ್ಕೆ ನೇರವಾಗಿ ಆಕಾಶದಲ್ಲಿ ಹೋಗುತ್ತಿದ್ದನು. ಹೀಗೆ ಪಾಟಹೋಗುವಾಗ ಆ ವಿಮಾನದ ನೆಳಲು ಆಮೃತದೇಹದಮೇಲೆ ಬಿದ್ದೊಡನೆ, ಆ ಗಂಧರ್ವನೂ ಅವನ ಪತ್ನಿಯರೂ ವಿಮಾನಸಹಿತವಾಗಿ ತಲೆಕೆಳಗಾಗಿ ಬಿದ್ದುಬಿಟ್ಟರು. ಆ ಗಂಧರ್ವನು ದುಃಖಿಸುತ್ತಿರುವಾಗ ವಾಲಖಿಲ್ಯನೆಂಬ ಮಹರ್ಷಿಯೂ ಬಂದು, ಆ ಗಂಧರ್ವನಿಗೆ ಕೌಶಿಕನ ಪ್ರಭಾವವನ್ನೂ, ಅವನಲ್ಲಿದ್ದ ಮಂತ್ರವಿದ್ಯೆಯ ಮಹಿಮೆಯನ್ನೂ ತಿಳಿಸಿ 'ಓ ಗಂಧರ್ವರಾಜಾ! ನೀನು ಈ ಮಹಾತ್ಮನ ಅಸ್ಥಿಯನ್ನು ತೆಗೆದುಕೊಂಡು ಹೋಗಿಒಂದು ಪುಣ್ಯನದಿಯಲ್ಲಿಡು! ಇದರಿಂದನಿನಗೆ ಕ್ಷೇಮವುಂಟು" ಎಂದನು. ಅದರಂತೆ ಗಂಧರ್ವನು ಆ ಅಸ್ಥಿಗಳನ್ನು ಸರಸ್ವತೀನದಿಯಲ್ಲಿಟ್ಟು, ಸ್ನಾನಮಾಡಿ ಸುಖದಿಂದ ತನ್ನ ಲೋಕಕ್ಕೆ ಹೋದನು. ದೇವೇಂದ್ರಾ! ಇದರಿಂದ ಆ ಮಂತ್ರದ ಪ್ರಭಾವವೆಷ್ಟೆಂಬುದು ವ್ಯಕ್ತವಾಗುವುದು! ಭಯಕಾಲಗಳಲ್ಲಿ ಯಾವನು ಈ

ಮಂತ್ರವನ್ನು ಕೇಳುವನೋ, ಅಥವಾ ಧ್ಯಾನಮಾಡುವನೋ, ಅವನು ಎಲ್ಲಾ ಭಯದಿಂದಲೂಬಿಡಲ್ಪಡುವನು. ಕ್ರೂರಭೂತಗಳ ಕಣ್ಣಿಗೆ ಬೀಳಲಾರನು'ಎಂದನು. ರಾಜೇಂದ್ರಾ! ದೇವೇಂದ್ರನು ವಿಶ್ವರೂಪನಿಂದ ಈ ಮಂತ್ರವನ್ನು ಪದೇಶಹೊಂದಿದ ಮೇಲೆ, ದಾನವರನ್ನು ಜಯಿಸಿ, ತ್ರೈಲೋಕ್ಯಾಧಿಪತ್ಯವನ್ನು ಹೊಂದಿ ಸುಖದಿಂ ದಿದ್ದನು. ಇಲ್ಲಿಗೆ ಎಂಟನೆಯ ಅಧ್ಯಾಯವು.

---

ವಿಶ್ವರೂಪನು ದಾನವರಲ್ಲಿ ಪಕ್ಷಪಾತವನ್ನು ತೋರಿಸಿದುದಕ್ಕಾಗಿ ಇಂದ್ರನು ಅವನ ತಲೆಗಳನ್ನು ಕತ್ತರಿಸಿದುದು. ಇಂದ್ರನಮೇಲೆ ಕೋಪದಿಂದ ತ್ವಷ್ಟನು ವೃತ್ರಾಸುರನನ್ನು ಹುಟ್ಟಿಸಿದುದು. ಇವನಿಗೆ ಭಯಪಟ್ಟು ದೇವತೆಗಳು ವಿಷ್ಣುವನ್ನು ಸ್ತುತಿಸಿದುದು

ಓ ಪರೀಕ್ಷಿದ್ರಾಜಾ! ಕೇಳು! ದೇವಪುರೋಹಿತನಾದ ವಿಶ್ವರೂಪನಿಗೆಸೋಮ ಪೀಥವೆಂದೂ, ಸುರಾಪೀಥವೆಂದೂ ಅನ್ನಾದವೆಂದೂಮೂರುತಲೆಗಳಿದ್ದುದಾಗಿ ಶ್ರುತಿಗ ಳಿಂದತಿಳಿದುಬರುವುದು. ಈವಿಶ್ವರೂಪನಿಗೆ ದೇವತೆಗಳು ತಂದೆಯಕುಲದವರು. ದಾನ ವರು ತಾಯಿಯ ಕುಲದವರು. ಇವನು ತನ್ನ ಪಿತೃಗಳಾದ ದೇವತೆಗಳಲ್ಲಿ ಪ್ರೇಮೋ ಹತ್ಕರ್ಷಕ್ಕಾಗಿ ಒಪ್ಪಿಕೊಂಡಿದ್ದುದರಿಂದ, ಯಜ್ಞಕಾಲಗಳಲ್ಲಿ ಅವರಿಗೆಹವಿರ್ಭಾಗಗಳನ್ನು ಕೊಡುವಾಗ, ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಆಯಾದೇವತೆಗಳ ಹೆಸರನ್ನು ಹಿಡಿದು, ಗಟ್ಟಿಯಾಗಿಕೂಗಿ ಕರೆಯುತ್ತ, ಬಹಳ ವಿನಯದಿಂದಲೇ ಅವರವರಿಗೆ ಸಲ್ಲಿ ಸುತ್ತಿದ್ದನು. ಆದರೆ ಇವನಿಗೆ ಮಾತೃಪಕ್ಷದವರಾದ ದಾನವರಲ್ಲಿ ಸ್ನೇಹವುತಪ್ಪಲಿಲ್ಲ. ಆದುದರಿಂದ ದೇವತೆಗಳಿಗೆ ತಿಳಿಯದಂತೆ ಏಕಾಂತವಾಗಿ ಆಗಾಗ ದಾನವರಿಗೂ ಹವಿರ್ಭಾಗವನ್ನು ಸಲ್ಲಿಸುತ್ತಿದ್ದನು. ಹೀಗೆ ವಿಶ್ವರೂಪನು ದೇವತೆಗಳನ್ನು ವಂಚಿಸಿ, ದಾನವರಿಗೆ ಯಜ್ಞಭಾಗಗಳನ್ನು ಸಲ್ಲಿಸುವುದನ್ನು ತಿಳಿದು, ಇಂದ್ರನು, ಅವನ ಕಪಟಸ್ವಭಾವಕ್ಕೆ ಹೆದರಿ, ಆ ಕ್ಷಣವೇ ಅವನ ತಲೆಗಳನ್ನ ಕತ್ತರಿಸಿಬಿಟ್ಟನು. ಹೀಗೆ ಕತ್ತರಿಸಿಬಿದ್ದ ತಲೆಗಳಲ್ಲಿ ಸೋಮಪೀಥವೆಂಬುದು ಕಪಿಂಜಲಪಕ್ಷಿಯಾಯಿತು. ಸುರಾಪೀಥವೆಂಬುದು ಕಲವಿಂಕಪಕ್ಷಿಯಾಯಿತು. ಅನ್ನಾದವೆಂಬುದು ತಿತ್ತಿರಿಪಕ್ಷಿ ಯಾಯಿತು ಇಂದ್ರನು ಆ ಬ್ರಾಹ್ಮಣನ ತಲೆಯನ್ನು ಕಡಿದುದರಿಂದ, ಬ್ರಹ್ಮಹತ್ಯಾ ಪಾತಕವು ಆಕಾರಸಹಿತವಾಗಿ ಇವನ ಮುಂದೆ ಬಂದುನಿಂತಿತು. ಇಂದ್ರನು ಅದನ್ನು

ನೀಗಿಸಿ ಕೊಳ್ಳುವುದಕ್ಕೆ ಶಕ್ತನಾಗಿದ್ದರೂ, ಬೊಗಸೆಯೊಡ್ಡಿ ಅದನ್ನು ಸ್ವೀಕರಿಸಿದನು. ಒಂದು ಸಂವತ್ಸರದವರೆಗೆ ಹಾಗೆಯೇ ಇದ್ದು, ಕೊನೆಗೆ ಜನಾಪವಾದವನ್ನು ತಪ್ಪಿಸಿ ಕೊಳ್ಳುವುದಕ್ಕಾಗಿ, ಆ ಪಾಪವನ್ನು ನಾಲ್ಕು ಭಾಗಗಳಾಗಿ ವಿಭಾಗಿಸಿ, ಭೂಮಿ, ನೀರು, ವೃಕ್ಷಗಳು, ಹೆಂಗಸರು, ಈ ನಾಲ್ಕುಸ್ಥಳಗಳಿಗೂ ಒಂದೊಂದು ಭಾಗವನ್ನು ಹಂಚಿಬಿಟ್ಟನು. ಈ ನಾಲ್ವರಲ್ಲಿ ಭೂಮಿಯು, ತನ್ನಲ್ಲಿ ಬಿದ್ದಹಳ್ಳಗಳು ತಾವಾಗಿಯೇ ಮುಚ್ಚಿ ಕೊಳ್ಳಬೇಕೆಂಬ ವರವನ್ನು ಪಡೆದು, ಆ ಬ್ರಹ್ಮಹತ್ಯೆಯ ಒಂದುಭಾಗವನ್ನು ಧರಿಸುವುದಕ್ಕೆ ಒಪ್ಪಿದಳು. ಆ ಪಾಪವೇ ಈಗಲೆಲದಲ್ಲಿ ಚೌಳುಪ್ಪಾಗಿ ಕಾಣಿಸುವುದು. ವೃಕ್ಷಗಳು ತಮ್ಮನ್ನು ಎಷ್ಟಾವೃತ್ತಿ ಕತ್ತರಿಸಿದರೂ ತಿರುಗಿ ಚಿಗುರುವಹಾಗೆ ವರವನ್ನು ಪಡೆದು, ಆ ಪಾಪದ ಎರಡನೆಯ ಭಾಗವನ್ನು ಗ್ರಹಿಸಿದುವು. ಆ ಪಾಪವೇ ಈಗ ಮರದ ರಸವಾಗಿ (ಅಂಟು) ಹೊರಡುತ್ತಿರುವುದು. ಸ್ತ್ರೀಯರು ಪ್ರಸವಕಾಲದವರೆಗೆ ತಮಗೆ ಸಂಭೋಗಸಾಮರ್ಥ್ಯ ವಿರಬೇಕೆಂಬ ವರವನ್ನು ಪಡೆದು, ಆ ಪಾಪದ ಮೂರನೆಯ ಭಾಗವನ್ನು ಪರಿಗ್ರಹಿಸಿದರು ಆ ಪಾಪವೇ ಈಗ ಹೆಂಗಸರಲ್ಲಿ ತಿಂಗಳು ತಿಂಗಳಿಗೂ ರಜೋರೂಪವಾಗಿ ಕಾಣಿಸುತ್ತಿರುವುದು. ಜಲವು ತಾನು ಎಲ್ಲಾ ಕಡೆಗೂ ಹರಡಿಕೊಳ್ಳ ತಕ್ಕವರವನ್ನು ಪಡೆದು, ಆ ಪಾಪವನ್ನು ಪರಿಗ್ರಹಿಸಿತು. ಈ ಪಾಪವೇ ಈಗ ನೀರಿನಲ್ಲಿ ಗುಳ್ಳೆಗಳಾಗಿಯೂ, ನೊರೆಗಳಾಗಿಯೂ, ಕಾಣುತ್ತಿರುವುದು. ಆ ಮೇಲೆ, ಆತ್ತಲಾಗಿ ವಿಶ್ವರೂಪನ ತಂದೆಯಾದ ತ್ವಷ್ಟನು, ಪುತ್ರಮರಣವಾರ್ತೆಯನ್ನು ಕೇಳಿ, ಇಂದ್ರನ ಮೇಲೆ ಅತ್ಯಾಗ್ರಹಗೊಂಡು, ಆ ಇಂದ್ರನನ್ನು ಕೊಲ್ಲುವುದಕ್ಕಾಗಿ ಒಬ್ಬ ಪುತ್ರನನ್ನು ಪಡೆಯಬೇಕೆಂದು ಒಂದು ಯಾಗವನ್ನಾರಂಭಿಸಿದನು. ಹೋಮವನ್ನು ಮಾಡುವಾಗ "ಓ ಇಂದ್ರಶತ್ರೋ! ಬೆಳೆದುಬಾ ಬೆಳೆದುಬಾ! ಶೀಘ್ರದಲ್ಲಿ ನಿನ್ನ ಶತ್ರುವನ್ನು ಕೊಲ್ಲು!" ಎಂದು ಹೇಳುತ್ತ, ಅಗ್ನಿಯಲ್ಲಿ ಹವಿಸ್ಸನ್ನು ಬಿಟ್ಟನು. ಆ ಹವಿಸ್ಸು ಅಗ್ನಿಯಲ್ಲಿ ಬಿದ್ದೊಡನೆಯೇ ದಕ್ಷಿಣಾಗ್ನಿ ಕುಂಡದಿಂದ ಭಯಂಕರಸ್ವರೂಪವುಳ್ಳ ಒಂದು ರಾಕ್ಷಸಾಕೃತಿಯು ಮೇಲಕ್ಕೆದ್ದುಬಂದು, ಲೋಕನಾಶಕ್ಕಾಗಿ ಹೊರಟಿರುವ ಪ್ರಳಯಕಾಲದಮೃತ್ಯುವೋ ಎಂಬಂತೆ ಕಾಣಿಸಿತು. ಅದರ ದೇಹವು ದಿನದಿನಕ್ಕೂ ಒಂದೊಂದು ಬಾಣಪಾತದಷ್ಟು ಪ್ರಮಾಣಕ್ಕೆ ಸುತ್ತಲೂ ಉಬ್ಬಿಬರುತ್ತಿತ್ತು. ಆ ರಾಕ್ಷಸನ ಮೈಬಣ್ಣವು ಕಾಡುಗಿಚ್ಚಿನಿಂದ ಉರಿಯುವ ಬೆಟ್ಟದಂತೆಯೂ, ಸಂಧ್ಯಾಕಾಲದ ಮೇಘದಂತೆಯೂ ಕ್ರೂರತೇಜಸ್ಸಿನಿಂದ ಜ್ವಲಿಸುತ್ತಿತ್ತು. ಆವನ ಗಡ್ಡ ಮೀಸೆಗಳು, ಕೆಂಪಗೆ ಕಾಯಿಸಿದ ತಾಮ್ರದ ಬಣ್ಣವನ್ನು ಹೋಲುತ್ತಿದ್ದುವು. ಅವನ ಕಣ್ಣಾಲಿಗಳು ಮಧ್ಯಾಹ್ನಕಾಲದ ಸೂರ್ಯಬಿಂಬದಂತೆ ಭಯಂಕರವಾಗಿ ಜ್ವಲಿಸು

ತ್ತಿದ್ದುವು. ಆಗಾಗ ಅವನು, ತೀಕ್ಷ್ಣವಾದ ಅಲಗುಗಳಿಂದ ಜ್ವಲಿಸುತ್ತಿರುವ ತನ್ನ ತ್ರಿಶೂಲಾಗ್ರದಲ್ಲಿ, ಭೂಮ್ಯಾಕಾಶಗಳನಡುವೆ ಸಿಕ್ಕಿದ ವಸ್ತುಗಳನ್ನೆಲ್ಲಾ ಪೋಣಿಸಿ ಕೊಂಡು, ಸಂತೋಷದಿಂದಕುಣಿದಾಡುವುದು, ಆಗಾಗಭಯಂಕರವಾಗಿ ಅಟ್ಟಹಾಸ ದಿಂದ ನಗುವುದು, ಭೂಮಿಯೆಲ್ಲವೂ ನಡುಗುವಂತೆ ಕಾಲಿಂದ ನೆಲವನ್ನೊದೆ ಯುವುದು, ಈ ವಿಧವಾದ ವಿನೋದಗಳಿಂದಬೀಗಿ ಬೆರೆಯುತ್ತಿದ್ದನು. ಮತ್ತು ಅವನಿಗೆ ಬೆಟ್ಟದ ತಪ್ಪಲಂತೆ ಆಗಲವಾದ ಮೋರೆ! ಪರ್ವತಗುಹೆಯಂತೆ ಆಳವಾದಬಾಯಿ! ಆಕಾಶವನ್ನು ಭೇದಿಸುವಂತೆ ಉಬ್ಬಿದ ತಲೆ! ನಕ್ಷತ್ರಗಳನ್ನು ನೆಕ್ಕುವಂತೆ ನೀಡಿದ ನಾಲಗೆ! ಮೂರುಲೋಕಗಳನ್ನೂ ಒಟ್ಟಾಗಿ ನುಂಗಿ ಬಿಡುವಂತೆ ಆಗಲಿಸಿದ ಬಾಯಿ! ನೋಡಿದವರನ್ನು ನಡುಗಿಸುವಂತೆ ನೀಡಿದ ಕೋರೆದಾಡೆಗಳು! ಅಂತಹ ಭಯಂಕರ ಸ್ವರೂಪದಿಂದ ಕಾಲಮೃತ್ಯುವಿನಂತೆ ಕಾಣಿಸುತ್ತಿದ್ದನು. ಆಗಾಗ ಆ ರಾಕ್ಷಸನು ಭಯಂಕರವಾದ ಮುಖವನ್ನು ತೆರೆದು ಆಕಳಿಸುವುದನ್ನು ನೋಡಿ, ಸಮಸ್ತಭೂತ ಗಳೂ ಭಯದಿಂದಚದರಿ ನಾನಾದಿಕ್ಕುಗಳಿಗೆ ಓಡಿದುವು. ರಾಜೇಂದ್ರಾ! ಆ ತ್ವಷ್ಟನ ತಪೋಬಲವೇ ಹೀಗೆ ರಾಕ್ಷಸಾಕೃತಿಯಿಂದ ಬಂದು ಲೋಕವೆಲ್ಲವನ್ನೂ ನುಂಗುವು ದಕ್ಕೆ ತೊಡಗಿತಲ್ಲದೆ ಬೇರೆಯಲ್ಲ! ಹೀಗೆ ಅವನ ದೇಹವು ಲೋಕವೆಲ್ಲವನ್ನೂ ಆಕ್ರ ಮಿಸುತ್ತ ಬಂದುದರಿಂದ ಅವನಿಗೆ ವೃತ್ರನೆಂದು ಹೆಸರಾಯಿತು. ಈತನು ಪರಮ ಪಾಪಿಷ್ಠನು! ಇಂದ್ರಾದಿಲೋಕಪಾಲಕರಿಗೆಲ್ಲಾ ವಿರೋಧಿಯಾಗಿ, ಲೋಕದಲ್ಲಿ ಯಾರಿಗೂ ತಡೆಯಲಸಾಧ್ಯವಾದ ಕ್ರೂರಸ್ವಭಾವವುಳ್ಳವನಾಗಿದ್ದನು ಇವನನ್ನು ನಿಗ್ರಹಿಸುವುದಕ್ಕಾಗಿ ಇಂದ್ರಾದಿಲೋಕಪಾಲಕರೆಲ್ಲರೂ ತಮ್ಮತಮ್ಮ ಸೈನ್ಯಗ ಳೊಡನೆ ಬಂದು, ದಿವ್ಯಾಯುಧಗಳಿಂದಲೂ, ಅಸ್ತ್ರಶಸ್ತ್ರಗಳಿಂದಲೂ ಅವನನ್ನು ಕೊಲ್ಲುವುದಕ್ಕೆ ಯತ್ನಿಸಿದರು. ದೇವತೆಗಳು ಅವನಮೇಲೆ ಯಾವಯಾವ ಶಸ್ತ್ರಾಸ್ತ್ರ ಗಳನ್ನು ಪ್ರಯೋಗಿಸಿದರೂ, ಆ ರಾಕ್ಷಸನು ಅವೆಲ್ಲವನ್ನೂ ಒಂದೇ ಆಪೋಶನವಾಗಿ ನುಂಗುತ್ತಬಂದನು. ಅವನ ಅಸಾಧಾರಣಶಕ್ತಿಯನ್ನು ನೋಡಿ ದೇವತೆಗಳಿಗೆ ಆಶ್ಚರ್ಯವುಂಟಾಯಿತು! ದೇವತೆಗಳ ವೀರ್ಯವೆಲ್ಲವೂ ಅಡಗಿಹೋಯಿತು! ಅವರೆಲ್ಲರೂ ದುಃಖದಿಂದ ಕೊರಗುತ್ತ ಆದಿಪೂರುಷನಾದ ಭಗವಂತನನ್ನು ಸ್ಮರಿಸಿ, ತಮ್ಮೊಳಗೆ ತಾವುಚಿಂತಿಸುವರು. "ಅಯ್ಯೋ! ಇನ್ನು ನಮಗೆ ಆ ಭಗವಂತನ ಪಾದಾಶ್ರಯ ವೊಂದಲ್ಲದೆ ಬೇರೆ ಗತಿಯಿಲ್ಲ! ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶಗಳೆಂಬ ಪಂಚಮಹಾಭೂತಗಳೂ, ಮೂರುಲೋಕಗಳೂ, ಬ್ರಹ್ಮದೇವನೇ ಮೊದಲಾಗಿ ನಾವೆಲ್ಲರೂ ಯಾವನ ನಿಯಮಕ್ಕೊಳಪಟ್ಟು, ಭಯಭಕ್ತಿಗಳಿಂದ ಪೂಜೆಯನ್ನೊ ಪ್ಪಿಸುವೆವೋ, ಮೃತ್ಯುವುಕೂಡ ಯಾವನಿಗೆ ಭಯಪಡುವುದೋ, ಅಂತಹ ಪರಮ

ಪುರುಷನು ಹೊರತು ನಮಗೆ ಬೇರೆ ದಿಕ್ಕಾರು! ಆ ಭಗವಂತನಲ್ಲಿ ಯಾವ ಮಹಾ ಮಹಿಮೆಯಿದ್ದರೂ ಅದು ಅವನಿಗೆ ಸಹಜವೇ ಹೊರತು ಆಶ್ಚರ್ಯಕರವಲ್ಲ! ಅವನು ಪೂರ್ಣಕಾಮನು! ಮಹಾನಂದಮಯನಾದುದರಿಂದ ಆತ್ಮಾನುಭವದಲ್ಲಿ ನೆಲೆಗೊಂಡವನು! ರಾಗದ್ವೇಷಾದಿದೋಷಗಳಿಲ್ಲದವನು. ಸರ್ವೇಶ್ವರನು. ಅಂತಹ ಪರಮ ಪುರುಷನನ್ನು ಬಿಟ್ಟು ಬೇರೆಯವರನ್ನು ಆಶ್ರಯಿಸತಕ್ಕವನು, ನಾಯಿಯಬಾಲವನ್ನು ಹಿಡಿದು ಸಮುದ್ರವನ್ನು ದಾಟುವುದಕ್ಕೆ ಪ್ರಯತ್ನಿಸುವ ಮೂಢನಂತೆಯೇ ಹೊರತು ಬೇರೆಯಲ್ಲ ಮೊದಲು ಸತ್ಯವ್ರತನೆಂಬ ಮನುವು, ತನಗೆ ನಾವೆಯಂತಿದ್ದ ಭೂಮಿಯು ಪ್ರಳಯಸಮುದ್ರದಲ್ಲಿ ಮುಳುಗಿಹೋಗುತ್ತಿದ್ದಾಗ, ಅದನ್ನು, ಆಲ್ಲಿ ಮತ್ಸ್ಯಮೂರ್ತಿಯಾಗಿದ್ದ ಯಾವನ ಕೋರೆಹಲ್ಲುಗಳಲ್ಲಿ ಕಟ್ಟಿ, ಮಹಾವಿಪತ್ತನ್ನು ತಪ್ಪಿಸಿಕೊಂಡನೋ, ಆ ಭಗವಂತನೇ ಈಗನಮಗೂ ವೃತ್ರಾಸುರನಿಂದುಂಟಾದ ಭಯವನ್ನು ತಪ್ಪಿಸಬೇಕಲ್ಲದೆ ಬೇರೆಯಲ್ಲ. ಹಿಂದೆ ಪ್ರಳಯಕಾಲದಲ್ಲಿ ಯಾವನ ನಾಭಿಕಮಲದಿಂದ ಮೊದಲು ಹುಟ್ಟಿದ ಚತುರ್ಮುಖನೂಕೂಡ, ತನ್ನ ಸುತ್ತಲೂ ಬಿರುಗಾಳಿಯಿಂದೆದ್ದ ಭಯಂಕರವಾದ ಅಲೆಗಳಿಂದ ಮೊರೆಯುತ್ತಿರುವ ಸಮುದ್ರ ಜಲವನ್ನು ಹೊರತು ಬೇರೊಂದನ್ನೂ ಕಾಣದೆ, ತನ್ನ ಉತ್ಪತ್ತಿಗೆ ಕಾರಣವಸ್ತು ವಾವುದೆಂದೂ ತಿಳಿಯಲಾರದೆ, ಬೇರೆಯಾವುದೂ ದಿಕ್ಕಿಲ್ಲದೆಕಳವಳಿಸುತ್ತಿದ್ದು, ಕೊನೆಗೆ ಯಾವನ ಅನುಗ್ರಹದಿಂದಲೇ ಆ ಭಯವನ್ನು ದಾಟಿದನೋ ಆ ಪರಮಪುರುಷನೇ ಈಗ ನಮಗೂ ದಿಕ್ಕಾಗಲಿ! ಯಾವನು ಎಣೆಯಿಲ್ಲದವನಾಗಿ ಸರ್ವಸ್ವತಂತ್ರನಾಗಿದ್ದು, ತನ್ನ ಮಾಯೆಯಿಂದ ನಮ್ಮೆಲ್ಲರನ್ನೂ ಸೃಷ್ಟಿಸಿದನೋ, ಯಾವನ ಅನುಗ್ರಹದಿಂದಲೇ ನಾವು ಈ ವ್ಯಷ್ಟಿರೂಪವಾದ ಜಗತ್ತನ್ನು ಸೃಷ್ಟಿಸಿದೆವೋ, ಯಾವನು ನಮ್ಮ ಹೃದಯದಲ್ಲಿಯೇ ಇದ್ದು ನಮ್ಮನ್ನು ಪ್ರೇರಿಸುತ್ತಿದ್ದರೂ, ಅವನ ದಿವ್ಯಸ್ವರೂಪವನ್ನು ಕಾಣಲಾರದೆ ನಮಗೆ ನಾವೇ ಸ್ವತಂತ್ರರೆಂದು ಭ್ರಮಿಸುತ್ತಿರುವೆವೋ, ಅಂತಹ ವಿಚಿತ್ರಶಕ್ತಿಯುಳ್ಳ ಭಗವಂತನೇ ನಮಗೆ ರಕ್ಷಕನು! ಯಾವನು, ನಮ್ಮಲ್ಲಿ ತನ್ನವರೆಂಬ ಅಭಿಮಾನವಿಟ್ಟು ರಕ್ಷಿಸುವುದಕ್ಕಾಗಿ, ಒಂದೊಂದುಯುಗದಲ್ಲಿಯೂ ತನ್ನ ಸಂಕಲ್ಪದಿಂದ ದೇವತಿರ್ಯಙ್ಮನುಷ್ಯಜನ್ಮಗಳಲ್ಲಿ ಬೇರೆಬೇರೆ ರೂಪಗಳಿಂದ ಅವತಾರವನ್ನೆತ್ತಿ, ನಮಗಿರುವ ಶತ್ರುಬಾಧೆಯನ್ನು ನೀಗಿಸುತ್ತಿರುವನೋ ಆ ಪರಮ ಪುರುಷನೇ ಈಗಲೂ ನಮ್ಮನ್ನು ರಕ್ಷಿಸಬೇಕಲ್ಲದೆ ಬೇರೆಯಲ್ಲ! ಆದುದರಿಂದ ನಾವೆಲ್ಲರೂ ಈಗ ಭಕ್ತವತ್ಸಲನಾಗಿಯೂ, ನಮಗೆ ಪರದೈವವಾಗಿಯೂ, ಪ್ರಕೃತಿ ಪುರುಷಶರೀರಕನಾಗಿಯೂ, ಸಮಸ್ತಪ್ರಪಂಚಕ್ಕೂ ಅಂತರಾತ್ಮನಾಗಿಯೂ ಆ ಪ್ರಕೃತಿಪುರುಷರಿಗಿಂತಲೂ ವಿಲಕ್ಷಣನಾಗಿಯೂ ಇರುವ ಆ ಭಗವಂತನನ್ನೇ ಶರಣು

ಹೊಂದಬೇಕು. ಅವನು ತಪ್ಪದೆ ನನಗೆ ಕ್ಷೇಮವನ್ನುಂಟುಮಾಡುವನು. ಈಗ ನಾವು ಮಾಡಬೇಕಾದ ಕಾರ್ಯವು ಇದೊಂದೇ ಹೊರತು ಬೇರೆಗತಿಯಿಲ್ಲ!" ಎಂದು ನಿಶ್ಚಯಿಸಿಕೊಂಡರು. ಹೀಗೆ ದೇವತೆಗಳೆಲ್ಲರೂ ಭಗವಂತನ ಗುಣಗಳನ್ನು ಕೊಂಡಾಡುತ್ತಿರುವಷ್ಟರಲ್ಲಿಯೇ, ಅವರ ಪಶ್ಚಿಮದಿಕ್ಕಿನಲ್ಲಿ ಶ್ರೀಮಹಾವಿಷ್ಣುವು ಶಂಖಚಕ್ರ ಗದಾಧಾರಿಯಾಗಿ ಅವರಕಣ್ಣಿಗೆಗೋಚರಿಸಿದನು. ಸುನಂದರೇ ಮೊದಲಾದ ಹದಿನಾರುಮಂದಿ ಮಹಾಪುರುಷರು ಅವನನ್ನು ಹಿಂಬಾಲಿಸಿ ಬರುತ್ತಿದ್ದರು. ಶ್ರೀವತ್ಸವೆಂಬ ಮಚ್ಚೆ, ಕೌಸ್ತುಭಮಣಿ, ಇವೆರಡುಹೊರತು ಬೇರೆಎಲ್ಲಾ ಭಾಗಗಳಲ್ಲಿಯೂ ಇವರೂ ಆ ಭಗವಂತನನ್ನೇ ಹೋಲುತ್ತಿದ್ದರು. ಹೀಗೆ ಭಕ್ತವರ್ಗದಿಂದ ಪರಿವೃತನಾದ ಭಗವಂತನ ಸ್ವರೂಪವನ್ನು ಕಂಡೊಡನೆ, ಇಂದ್ರಾದಿದೇವತೆಗಳೆಲ್ಲರೂ, ಆನಂದಿಂದ ಮೈಮರೆತು, ನೆಲದಮೇಲೆ ದಂಡಾಕಾರವಾಗಿ ಬಿದ್ದು ನಮಸ್ಕರಿಸಿದರು. ಸ್ವಲ್ಪ ಕಾಲದವರೆಗೆ ಮೈಮೇಲೆ ಪ್ರಜ್ಞೆಯಿಲ್ಲದಂತೆ ಹಾಗೆಯೇ ಬಿದ್ದಿದ್ದು, ಕೊನೆಗೆ ಎಲ್ಲರೂ ಮೆಲ್ಲಗೆ ಮೇಲೆದ್ದುನಿಂತು, ಅವನಮುಂದೆ ಕೈಜೋಡಿಸಿ ಹೀಗೆಂದು ಸ್ತೋತ್ರಮಾಡುವರು. "ಓ ದೇವಾ! ಯಜ್ಞಾದಿಕರ್ಮಗಳು ಮೋಕ್ಷವಿರೋಧಿಗಳೆನಿಸಿದ್ದರೂ ಅವುಗಳನ್ನು ನಿನ್ನ ಆರಾಧನರೂಪನಾಗಿ ನಡೆಸಿದಾಗ, ಅವೇ ಉತ್ತಮಪುರುಷಾರ್ಥವಾದ ಮೋಕ್ಷಕ್ಕೆ ಕಾರಣವಾಗುವುವು. ಯಜ್ಞವೇ ನಿನ್ನ ಸೃಷ್ಟಿಸಾಮರ್ಥ್ಯವು! ಆ ಯಜ್ಞಾದಿಗಳನ್ನು ಮುಗಿಸುವುದಕ್ಕೆ ಬೇಕಾದಷ್ಟು ಆಯುಸ್ಸನ್ನು ಕೊಡತಕ್ಕವನೂ ನೀನೇ! ಆ ಯಜ್ಞಗಳಿಗೆ ಫಲವನ್ನು ಕೊಟ್ಟು ಅನಿಷ್ಟನಿವಾರಣವನ್ನುಮಾಡಿ ರಕ್ಷಿಸತಕ್ಕವನೂ ನೀನೇ! ಅಶ್ರಿತರಕ್ಷಣಕ್ಕಾಗಿ ಸದಾಕಾಲದಲ್ಲಿಯೂಸುದರ್ಶನಚಕ್ರವನ್ನು ಕೈಯಲ್ಲಿ ಧರಿಸಿರತಕ್ಕ ನಿನಗೆ ನಮಸ್ಕಾರವು. ನಿನ್ನ ನಾಮಸ್ಮರಣಮಾತ್ರವೇ ಸಮಸ್ತವಿಪತ್ತುಗಳನ್ನೂ ನೀಗಿಸುವುದು. ಸ್ವರ್ಗ, ನರಕ, ಮೋಕ್ಷಗಳೆಂಬ ಮೂರು ಬಗೆಯ ಗತಿಗಳನ್ನೂ, ನೀನೇ ನಡೆಸತಕ್ಕವನು. ನೀನು ಜಗತ್ಕಾರಣನು ಪ್ರಕೃತಿಪುರುಷರಿಗಿಂತಲೂ ವಿಲಕ್ಷಣನು. ನಿನ್ನಿಂದ ಸೃಷ್ಟಿಸಲ್ಪಟ್ಟವರಾಗಿ, ನಿನ್ನ ನಿಯಮಕ್ಕೊಳಪಟ್ಟಿರುವ ನಾವೊಬ್ಬರೂ ಅಂತಹ ನಿನ್ನ ಸ್ವರೂಪವನ್ನು, ಕಾಣಲಾರೆವು. ಓ ಷಾಡ್ಗುಣ್ಯಪರಿಪೂರ್ಣಾ! ನಿನಗೆ ನಮಸ್ಕಾರವು! ಓ ನಾರಾಯಣಾ! ವಾಸುದೇವಾ! ಆದಿಪುರುಷಾ! ಮಹಾನುಭಾವಾ! ಪರಮಮಂಗಳ ಸ್ವರೂಪಾ! ಪರಮಕಲ್ಯಾಣಗುಣಾಕರಾ! ಪರಮಕಾರುಣಿಕಾ! ಜಗದಾಧಾರಾ! ಲೋಕೈಕನಾಥಾ! ಸರ್ವೇಶ್ವರಾ! ಓ ಲಕ್ಷ್ಮೀನಾಥಾ! ನಿನಗೆ ನಮಸ್ಕಾರವು. ದೇವಾ! ಜ್ಞಾನಿಗಳಾದ ಪರಮಹಂಸರು, ಸನ್ನ್ಯಾಸಧರ್ಮದಲ್ಲಿರುವ ಪರಿವ್ರಾಜಕರು, ಇವರೇಮೊದಲಾಗಿ ಯೋಗಿಗಳೆಲ್ಲರೂ ಉತ್ತಮವಾದ ಸಮಾಧಿಯೋಗದಿಂದ

ನಿನ್ನನ್ನು ಸಾಕ್ಷಾತ್ಕರಿಸಿರುವರು. ಅವರೆಲ್ಲರೂ ಆ ಕರ್ಮಜ್ಞಾನಬಲದಿಂದುಂಟಾ-
ಭಕ್ತಿಯೋಗದಿಂದ ಅಜ್ಞಾನವೆಂಬ ಆವರಣವನ್ನು ಭೇದಿಸಿ, ಮನಶ್ಶುದ್ಧಿಯನ್ನುಂ
ಟುಮಾಡಿಕೊಂಡು ಆತ್ಮಸ್ವರೂಪವನ್ನು ತಿಳಿದಮೇಲೆ ಆ ಜೀವಾತ್ಮನಿಗೂ ಅಂತ
ರ್ಯಾಮಿಯಾಗಿಯೂ, ಮಹಾನಂದಸ್ವರೂಪನಾಗಿಯೂ ಇರುವ ನಿನ್ನನ್ನು ಕಾಣು
ವರು. ಲೋಕದ ಸೃಷ್ಟಿಸ್ಥಿತಿಸಂಹಾರಗಳಿಗೆ ನೀನೇ ಕರ್ತನು. ಈ ಸೃಷ್ಟ್ಯಾದಿ ಕಾರ್ಯ
ಗಳೆಲ್ಲವೂ ನಿನ್ನ ಲೀಲೆಗಳಲ್ಲದೆ ಬೇರೆಯಲ್ಲ. ಈನಿನ್ನ ವ್ಯಾಪಾರಗಳು ಪ್ರಾಕೃತಜನರ
ವ್ಯಾಪಾರಗಳಂತಲ್ಲ. ಅವುಗಳನ್ನು ಯಾರೂ ತಿಳಿಯಲಾರರು. ನಮ್ಮಂತೆ ನೀನು
ಬೇರೆ ಆಧಾರವನ್ನಾಗಲೀ, ಸಹಾಯವನ್ನಾಗಲೀ ಅಪೇಕ್ಷಿಸತಕ್ಕವನಲ್ಲ. ಸತ್ವಾದಿ
ಗುಣಗಳೊಂದೂ ನಿನ್ನನ್ನು ಕದಲಿಸಲಾರವು. ಯಾವ ವಿಕಾರಗಳಿಗೂ ನೀನು ಈಡಾ
ಗತಕ್ಕವನಲ್ಲ. ಸೂಕ್ಷ್ಮದಶೆಯಲ್ಲಿ ನಿನ್ನಲ್ಲಿಯೇ ಒಂದಾಗಿ ಸೇರಿರುವ ಚೇತನಾಚೇತನ
ಗಳೊಡನೆ, ನೀನೇ ಈ ಪ್ರಪಂಚರೂಪವಾಗಿ ಹರಡಿಕೊಳ್ಳುವೆ. ಈ ಜಗತ್ತಿಗೆ ನೀನ
ಲ್ಲದೆ ಬೇರೊಬ್ಬರೂ ಆಶ್ರಯವಿಲ್ಲ. ನೀನೇ ಸೃಷ್ಟಿ, ಸ್ಥಿತಿ, ಲಯಕಾರ್ಯಗಳನ್ನು
ನಡೆಸತಕ್ಕವನು. ಆದರೆ ಕರ್ಮವಶರಾದ ಬದ್ಧಜೀವರಂತೆ, ಆ ಕಾರ್ಯಗಳಿಂದ ನೀನೂ
ಸತ್ವಾದಿಗುಣಗಳಿಗೆ ವಶನಾಗಿ, ಪ್ರಪಂಚದಲ್ಲಿಬಿದ್ದು, ಆ ಕರ್ಮಫಲವನ್ನೂ ಸ್ವೀಕ
ರಿಸಿಕೊಳ್ಳುತ್ತಿರುವೆಯೋ, ಅಥವಾ ! ತತ್ವಜ್ಞಾನಾಗಿ ಆತ್ಮಾನುಭವದಲ್ಲಿ ನೆಲೆಗೊಂಡ
ಜ್ಞಾನಿಯಂತೆ ಆ ಕರ್ಮಫಲಗಳನ್ನು ಅಂಟಿಸಿಕೊಳ್ಳದೆ ಉದಾಸೀನನಾಗಿಯೇ ಇರು
ವೆಯೋ, ಈ ವಿಷಯವನ್ನು ನಾವು ಯಾರೂ ತಿಳಿಯಲಾರೆವು. ಆದರೆ ನಿನ್ನನ್ನು
ಸಂಸಾರಿಜೀವನಂತೆ ಕೇವಲ ಕರ್ತೃವೆಂದಾಗಲೀ, ಜ್ಞಾನಿಯಂತೆ ಕೇವಲ ಉದಾಸೀನ
ನೆಂದಾಗಲೀ ಹೇಳುವುದಕ್ಕಿಲ್ಲ. ನಿನ್ನಲ್ಲಿ ಕರ್ತೃತ್ವವೂ, ಔದಾಸೀನ್ಯವೂ ಎರಡೂ
ಕಾಣುತ್ತಿರುವುವು. ಈ ಎರಡುಸ್ವಭಾವಗಳೂ ಪರಸ್ಪರವಿರುದ್ಧಗಳಾಗಿದ್ದರೂ
ನಿನ್ನಲ್ಲಿ ಮಾತ್ರ ಇವು ವಿರೋಧವಿಲ್ಲದೆಯೇ ಸಂಘಟಿಸುವುವು. ನೀನು ಸಮಸ್ತ
ಚೇತನಾಚೇತನಗಳಿಗೂ ಅಂತರ್ಯಾಮಿಯಾಗಿ ಅವುಗಳನ್ನು ನಿಯಮಿಸತಕ್ಕವ
ನಾದುದರಿಂದ, ಕರ್ಮನಿಷ್ಠರಲ್ಲಿಯೂ ಅಂತರಾತ್ಮನಾಗಿ ಅವರಿಬ್ಬರಿಗಿಂತಲೂ
ವಿಲಕ್ಷಣನಾಗಿರುವೆ! ವಿಚಿತ್ರಶಕ್ತಿಯುಳ್ಳ ನಿನ್ನಲ್ಲಿ ಎಂತಹ ವಿರುದ್ಧಗುಣಗಳೂ
ಅನುಕೂಲಿಸಿಬರುವುವು. ನೀನು ಸರ್ವಜೀವಾಂತರ್ಯಾಮಿಯಾಗಿದ್ದರೂ ನಿನ್ನ ಮಹಿಮೆ
ಯನ್ನು ಯಾರೂ ಕಾಣಲಾರರು, ನಿನ್ನ ಅನುಗ್ರಹಕ್ಕೆ ಪಾತ್ರರಲ್ಲದ ಅನೇಕ
ದುರ್ಮತವಾದಿಗಳು, ನಿನ್ನ ಸ್ವರೂಪವನ್ನು ತಿಳಿಯುವುದಕ್ಕೆಯತ್ನಿಸಿ, ನಿಶ್ಚ
ಯಜ್ಞಾನವನ್ನು ಪಡೆಯಲಾರದೆ ಸಂದೇಹದಿಂದ ನಾನಾವಿಧವಾಗಿ ತರ್ಕಿಸುವರು.
ಅಲ್ಲಲ್ಲಿ ಹುಡುಕಿ ತೆಗೆದ ಪ್ರಮಾಣಾಭಾಸಗಳ ಆಧಾರದಮೇಲೆ, ಆಗಾಗ ಅವರವರಿಗೆ

ತೋರಿದಂತೆ ಬರೆದಿಟ್ಟ ಸುಳ್ಳುಶಾಸ್ತ್ರಗಳಲ್ಲಿನಂಬಿಕೆಯಿಂದ ಮನಸ್ಸುಕಲಗಿ, ತಮ್ಮ ನಿಶ್ಚಯವೇ ಸಿದ್ಧಾಂತವೆಂಬ ದುರಾಗ್ರಹದಿಂದ ವಾದಿಸುವರು. ಆದರೇನು! ಈ ವಾದಪ್ರತಿವಾದಗಳೊಂದೂ ನಿನಗೆ ಸಂಬಂಧಿಸಲಾರವು. ಪ್ರಕೃತಿಸಂಬಂಧವಾದ ದೋಷಗಳಾವುವೂ ನಿನ್ನನ್ನು ಮುಟ್ಟಲಾರವು. ಪ್ರಳಯದಶೆಯಲ್ಲಿ ಸಮಸ್ತ ಪ್ರಪಂಚವನ್ನೂ ನಿನ್ನಲ್ಲಿಯೇ ಸೇರಿಸಿಕೊಂಡು ನೀನೊಬ್ಬನೇ ಇದ್ದವನು. ನಿನ್ನ ಮಾಯೆಗೂ ನೀನು ಒಳಪಡದವನು. ಇಂತಹ ವಿಚಿತ್ರಶಕ್ತಿಯುಳ್ಳ ನಿನ್ನಲ್ಲಿ ಎಂತಹ ವಿರುದ್ಧಧರ್ಮಗಳಾದರೂ ಹೊಂದಿಕೊಳ್ಳುವುವು. ಒಂದು ಹಗ್ಗದ ತುಂಡನ್ನು ನೋಡಿ ಕೆಲವರು ಹಾವೆಂದು ಭ್ರಮಿಸಬಹುದು. ಕೆಲವರು ನಿಜವಾದ ಬುದ್ಧಿಯಿಂದ ಹಗ್ಗವೆಂದೇ ತಿಳಿದುಕೊಳ್ಳಬಹುದು. ಯಾರು ಯಾವವಿಧವಾಗಿ ತಿಳಿದುಕೊಂಡರೂ ಆ ಹಗ್ಗದ ಸ್ವರೂಪಕ್ಕೇನೂ ಹಾನಿಯಿಲ್ಲವಷ್ಟೆ? ಹಾಗೆಯೇ ನೀನೂ ಕೂಡ, ಸಮಬುದ್ಧಿಯುಳ್ಳವರಿಗಾಗಲೀ, ವಿಷಮಬುದ್ಧಿಯುಳ್ಳವರಿಗಾಗಲೀ ಅವರವರ ಬುದ್ಧಿಗೆ ತಕ್ಕಂತೆ ತೋರುತ್ತ ಏಕರೂಪವಾಗಿರತಕ್ಕವನು. ನೀನು ಸೃಷ್ಟ್ಯಾದಿಕಾರ್ಯಗಳಲ್ಲಿ ಸ್ವತಂತ್ರನಾದುದರಿಂದ ನೀನು ಕರ್ತೃವೆನಿಸಿಕೊಳ್ಳುವೆ. ಜೀವನನ್ನು ಆಯಾಕರ್ಮಗಳಲ್ಲಿ ನಿಯಮಿಸಿ ಸುಖದುಃಖಗಳನ್ನು ತಗುಲಿಸಕಟ್ಟುವುದರಿಂದ ಪ್ರೇರಕತ್ವವೂ ನಿನ್ನಲ್ಲಿ ಹೊಂದುವುದು. ಆ ಜೀವಾತ್ಮಗಳ ಸುಖದುಃಖಗಳನ್ನು ಉದಾಸೀನನಾಗಿ ನೋಡುತ್ತಿರುವುದರಿಂದ ಉದಾಸೀನನೆಂದರೂ ನಿನಗೆ ಸಲ್ಲುವುದು. ಓ ದೇವಾ! ಜಗತ್ತಿಗೆಲ್ಲಾ ನಿಮಿತ್ತಕಾರಣವಾದ ನೀನೇ ಅದಕ್ಕೆ ಉಪಾದಾನಕಾರಣವಾಗಿಯೂ ಇದ್ದು, ಸಮಸ್ತವಸ್ತುಗಳಲ್ಲಿಯೂ ಸೇರಿದ್ದರೂ, ನಿನಗೆ ಆ ವಿಕಾರಗಳೊಂದೂ ಅಂಟವು. ಅಚೇತನಗಳೊಡಗೂಡಿದ ಸಮಸ್ತಜೀವಗಳೂ ನಿನಗೆ ಶರೀರವಾಗಿರುವುದರಿಂದ ಆ ವಿಕಾರಗಳೆಲ್ಲವೂ ಆ ಚೇತನಾಚೇತನಗಳಲ್ಲಿಯೇ ನಿಂತು ಹೋಗುವುವೇಹೊರತು ನಿನ್ನವರೆಗೆ ಮುಟ್ಟಲಾರವು ನೀನು ಸರ್ವೇಶ್ವರನು. ಸರ್ವಜಗತ್ಕಾರಣನು. ನೀನೊಬ್ಬನೇ ಈ ಸಮಸ್ತ ಜಗದ್ರೂಪವಾಗಿ ತೋರಕ್ಕವನಾದುದರಿಂದ, ನಿನ್ನನ್ನು ಬಿಟ್ಟ ಬೇರೆವಸ್ತುವಿಲ್ಲ. ನಿನಗಿಂತ ಉತ್ತಮವಾಗಲೀ, ನಿನಗೆ ಸಮಾನವಾಗಲೀ ಬೇರೊಂದಿಲ್ಲ ಓ ಭಗವಂತಾ! ಓ ಮಧುಸೂಧನಾ! ಯಾವ ಪ್ರಯೋಜನವನ್ನೂ ಇದಿರುನೋಡದೆ, ನಿನ್ನಲ್ಲಿ ಭಕ್ತಿಯನ್ನು ಮಾಡುತ್ತಿರುವ ಹಿರಿಯರು, ನಿನ್ನ ಅಸಾಧಾರಣಗುಣಗಳನ್ನು ನೋಡಿಯೇ ನಿನ್ನನ್ನು ಹೊರತು ಬೇರೊಂದನ್ನೂ ಕಣ್ಣೆತ್ತಿಯೂ ನೋಡುವವರಲ್ಲ. ಅವರು ಪುರುಷಾರ್ಥಗಳಲ್ಲಿ ಯಾವುದು ಮೇಲೆಂಬುದನ್ನು ಚೆನ್ನಾಗಿಬಲ್ಲರು! ಅಂತಹ ಭಾಗವತೋತ್ತಮ

ರೆಲ್ಲರೂ ನಿನ್ನ ಗುಣಗಳೆಂಬ ಅಮೃತಸಮುದ್ರದಲ್ಲಿ ಒಂದೆರಡು ಬಿಂದುಗಳನ್ನು ರುಚಿನೋಡಿ, ಆದರಿಂದಲೇ ನಿರತಿಶಯಾನಂದವನ್ನನುಭವಿಸುತ್ತ ಪ್ರತ್ಯಕ್ಷವಾಗಿಯೂ, ಶಾಸ್ತ್ರಗಳಿಂದಲೂ ತಿಳಿಯತಕ್ಕ ಇಹಲೋಕ ಪರಲೋಕ ಸುಖಗಳೆಲ್ಲವನ್ನೂ ಮರೆತು ನಿನ್ನ ಪಾದಸೇವೆಯನ್ನು ಮಾಡುತ್ತಿರುವರು. ಓ ದೇವಾ! ನೀನು ಸಮಸ್ತ ವಸ್ತುಗಳಲ್ಲಿಯೂ ಪ್ರವೇಶಿಸಿ, ಸಮಸ್ತಕ್ಕೂ ನಿಯಾಮಕನಾಗಿರುವೆ. ಇವೆಲ್ಲಕ್ಕೂ ನೀನೇ ಆಧಾರನು! ಮೂರಡಿಗಳಿಂದ ಮೂರುಲೋಕವನ್ನಳೆದ ನಿನಗೆ ಸಾಧ್ಯವಲ್ಲದ ಕಾರ್ಯವೇನುಂಟು? ಸೂರ್ಯಚಂದ್ರಾಗ್ನಿಗಳು ಮೂವರೂ ನಿನ್ನ ನೇತ್ರಗಳು! ನೀನು ಮೂರುಲೋಕವನ್ನೂ ಆಕರ್ಷಿಸತಕ್ಕ ಮಹಿಮೆಯುಳ್ಳವನು! ದೈತ್ಯದಾನವ ದೇವಮನುಷ್ಯಾದಿಗಳೆಲ್ಲರೂ ನಿನ್ನ ವಿಭೂತಿಗಳೇ ಆದುದರಿಂದ ಅವರಲ್ಲಿ ಕೆಲವರನ್ನು ಮಾತ್ರಕೊಲ್ಲುವುದಕ್ಕೆ ಉಪಾಯವನ್ನು ಚಿಂತಿಸುವುದೇನೋ ನಿನಗೆ ಯುಕ್ತವಲ್ಲ ಹಾಗಿದ್ದರೂ ಹಿಂದೆ ನೀನು ಸ್ವೇಚ್ಛೆಯಿಂದಲೇ, ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನಾದ್ಯಾಕಾರಗಳಿಂದ, ಜಲಜಂತುಗಳಂತೆಯೂ, ದೇವತೆಗಳಂತೆಯೂ ಮನುಷ್ಯರಂತೆಯೂ ಆಕಾರವನ್ನು ತಾಳಿ, ಶತ್ರುಗಳನ್ನು ಅವರವರ ಅಪರಾಧಕ್ಕೆ ತಕ್ಕಂತೆ ದಂಡಿಸಿದೆಯಲ್ಲವೇ? ಹೀಗೆ ದಾರಿತಪ್ಪಿ ನಡೆಯುವವರನ್ನು ದಂಡಿಸುವುದೇ ನಿನ್ನ ಧರ್ಮವಾದುದರಿಂದ, ನಿನಗೆ ಸಮ್ಮತವಾಗಿದ್ದ ಪಕ್ಷದಲ್ಲಿ ಈಗ ವೃತ್ರನನ್ನು ಕೊಲ್ಲಬೇಕು. ಪ್ರಭೂ! ಇದೋ! ನಾವೆಲ್ಲರೂ ನಿನ್ನವರು! ನಿನ್ನ ಪಾದಾರವಿಂದದಲ್ಲಿ ನಟ್ಟಮನಸ್ಸುಳ್ಳವರು! ಈಗ ನಿನ್ನ ದಿವ್ಯಮಂಗಳ ವಿಗ್ರಹವನ್ನು ಪ್ರತ್ಯಕ್ಷವಾಗಿ ತೋರಿಸಿದುದರಿಂದ ನಮ್ಮೆಲ್ಲರನ್ನೂ ನೀನು ಅನುಗ್ರಹಿಸಿ ಪರಿಗ್ರಹಿಸಿದಂತಾಯಿತು! ದೇವಾ! ನಿನ್ನ ಕೃಪಾಪೂರ್ವಕವಾದ ಕಟಾಕ್ಷವೀಕ್ಷಣದಿಂದಲೇ ಅಮೃತಧಾರೆಯಂತಿರುವ ನಿನ್ನ ಮಧುರವಾಕ್ಯದಿಂದಲೂ ನಮ್ಮ ಹೃದಯಸಂತಾಪವನ್ನು ನೀಗಿಸು! ಓ ಮಹಾತ್ಮಾ! ನೀನು ಸಮಸ್ತಜಗತ್ತಿನ ಸೃಷ್ಟಿಸ್ಥಿತಿಲಯಗಳ ಕಾರಣವಾದ ಆತ್ಮಮಾಯೆಯಿಂದ ವಿನೋದಿಸತಕ್ಕವನು. ಸಮಸ್ತ ಜೀವರಾಶಿಗಳ ಹೃದಯದಲ್ಲಿ ಜೀವಶರೀರಕನಾಗಿಯೂ ಇದ್ದು, ಆಯಾದೇಶಕ್ಕೂ, ಆಯಾ ಕಾಲಕ್ಕೂ, ಆಯಾ ದೇಹಗಳಿಗೂ, ಆಯಾ ಆವಸ್ಥೆಗಳಿಗೂ ತಕ್ಕಂತೆ, ಸುಖದುಃಖಾದಿಗಳನ್ನೊದಗಿಸುತ್ತ ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿರತಕ್ಕವನು. ಸಮಸ್ತ ಜೀವಗಳ ಚಿತ್ತವೃತ್ತಿಗೂ ನೀನು ಸಾಕ್ಷೀಭೂತನಾಗಿ ನಿಂತಿರತಕ್ಕವನು. ಬೆಂಕಿಯಿಂದ ಹೊರಟ ಕಿಡಿಗಳಂತೆ ನಾವೆಲ್ಲರೂ ನಿನ್ನ ಅಂಶಭೂತರಾಗಿ ನಿನ್ನಿಂದ ಹುಟ್ಟಿದವರು. ನಾವು ಕೇಳಿಕೊಳ್ಳತಕ್ಕ ಕೋರಿಕೆಯನ್ನು ನೆರವೇರಿಸುವುದು ನಿನಗೆಷ್ಟುಮಾತ್ರವೂ ದೊಡ್ಡದಲ್ಲ. ನಿನ್ನಿಂದ ನಾವು ಸಮಸ್ತ ಪ್ರಯೋಜನಗಳನ್

ಪಡೆಯತಕ್ಕವರೇ ಹೊರತು, ನಮ್ಮಿಂದ ನಿನಗೆ ಆಗಬೇಕಾದ ಪ್ರಯೋಜನವೇನೂ ಇರುವುದಿಲ್ಲ. ನಾವು ಇಲ್ಲಿಗೆ ಬಂದಕಾರ್ಯವನ್ನು ನಡೆಸಿಕೊಡಬೇಕು. ದೈತ್ಯದಾನವರೂ ನಮ್ಮಂತೆಯೇ ನಿನಗೆ ಸಮಾನರಾಗಿದ್ದರೂ, ನಾವು ಪರಮಗುರುವಾದ ನಿನ್ನ ಸಂಸಾರತಾರಕವಾದ ಪಾದಾರವಿಂದಗಳನ್ನೇ ಶರಣುಹೊಂದಿರುವೆವಾದುದರಿಂದ ನಮ್ಮ ಪ್ರಾರ್ಥನೆಯನ್ನು ನೀನು ನಡೆಸಿಕೊಡಬೇಕು. ಹೇಜಗದೀಶಾ! ತ್ವಷ್ಟೃಪುತ್ರನಾದ ವೃತ್ರನು, ಮೂರುಲೋಕವನ್ನು ನುಂಗುತ್ತಿರುವನು. ಇವನು ನಮ್ಮೆಲ್ಲರ ತೇಜಸ್ಸನ್ನೂ, ನಮ್ಮ ಶಸ್ತ್ರಾಸ್ತ್ರಗಳೆಲ್ಲವನ್ನೂ ಅಡಗಿಸಿಬಿಟ್ಟಿರುವನು. ಅವನನ್ನು ನೀನು ವಧಿಸಬೇಕು. ಹೇ ಕೃಷ್ಣಾ! ನೀನು ದೋಷರಹಿತನು ನಿತ್ಯಶುದ್ಧನು! ಸಮಸ್ತಜೀವಗಳ ಹೃದಯಪುಂಡರೀಕದಲ್ಲಿ ವಾಸವಾಡತಕ್ಕವನು! ಮನೋವ್ಯಾಪಾರಗಳಿಗೂ ಸಾಕ್ಷೀಭೂತನಾಗಿ ನೋಡತಕ್ಕವನು. ಆದುದರಿಂದ ನಿನಗೆ ತಿಳಿಯದ ವಿಷಯವಿಲ್ಲ. ನೀನು ಭೂಭಾರವನ್ನು ಪರಿಹರಿಸತಕ್ಕವನು. ಪರಿಶುದ್ಧವಾದ ಕೀರ್ತಿಯುಳ್ಳವನು. ನಾವು, ಬೇರೆ ಎಲ್ಲಾ ಪ್ರಯತ್ನಗಳನ್ನೂ ಬಿಟ್ಟು ನಿನ್ನಲ್ಲಿ ಮರೆಹೊಕ್ಕಿರುವೆವು. ಆಶ್ರಿತರಲ್ಲಿ ವಾತ್ಸಲ್ಯವನ್ನು ತೋರಿಸುವುದೇ ನಿನ್ನ ಸ್ವಭಾವವು. ಸಂಸಾರಮಾರ್ಗದಲ್ಲಿ ತೊಳಲುವ ಜೀವಿಗಳಿಗೆ ನಿನ್ನ ಪಾದಚ್ಛಾಯೆಯೇ ಆಶ್ರಯವು. ನೀನೇ ಪುರುಷಾರ್ಥಸ್ವರೂಪನು. ದುಃಖಪರಿಹಾರಕನಾದುದರಿಂದಲೇ ನೀನು ಹರಿಯೆಂದು ಕೀರ್ತಿಸಲ್ಪಡುವೆ. ಇಂತಹ ಮಹಾಮಹಿಮೆಯುಳ್ಳ ನಿನಗೆ ನಮಸ್ಕಾರವು" ಎಂದರು. ರಾಜೇಂದ್ರಾ! ಹೀಗೆ ದೇವತೆಗಳಿಂದ ಸ್ತುತಿಸಲ್ಪಟ್ಟ ಭಗವಂತನು ಅವರಲ್ಲಿ ಪ್ರಸನ್ನನಾಗಿ ಹೀಗೆಂದು ಹೇಳುವನು, "ಎಲೈ ದೇವಶ್ರೇಷ್ಠರೇ! ನಿಮ್ಮ ಸ್ತೋತ್ರಕ್ಕಾಗಿ ನಾನು ಬಹಳ ಸಂತೋಷಿಸಿದೆನು. ಈ ಸ್ತೋತ್ರವಿದ್ಯೆಯಿಂದಲೇ ಮನುಷ್ಯರು ನನ್ನಲ್ಲಿ ಭಕ್ತಿಯನ್ನು ಬೆಳೆಸಿ, ದೇಹಕ್ಕಿಂತಲೂ ವಿಲಕ್ಷಣವಾದ ಆತ್ಮಸ್ವರೂಪವನ್ನು ತಿಳಿಯಬಲ್ಲರು. ಎಲ್ಲೆ ದೇವತೆಗಳಿರಾ! ನಾನು ಪ್ರಸನ್ನನಾದಮೇಲೆ ಯಾವುದೂ ದುರ್ಲಭವಲ್ಲ. ನನ್ನನ್ನು ಸಂತೋಷಗೊಳಿಸಿದವನು ತನಗೆ ಬೇಕಾದ ಕೋರಿಕೆಗಳೆಲ್ಲವನ್ನೂ ಅನಾಯಾಸವಾಗಿ ಹೊಂದಬಹುದು. ಹಾಗಿದ್ದರೂ ನನ್ನಲ್ಲಿ ನಟ್ಟಮನಸುಳ್ಳ ತತ್ವಜ್ಞಾನಿಯು, ನನ್ನನ್ನು ಹೊರತು ಬೇರೊಂದನ್ನೂ ಆಶಿಸಲಾರನು. ಶಬ್ದಾದಿವಿಷಯಗಳನ್ನೇ ಪುರುಷಾರ್ಥವೆಂದು ನೆನೆಸತಕ್ಕ ಕೆಲವು ಮೂಢರು, ಇಂದ್ರಿಯಗಳಿಗೆ ವಶರಾಗಿ ತಮ್ಮ ಕ್ಷೇಮಕ್ಕೆ ತಾವು ದಾರಿಯನ್ನು ಕಾಣದೆ ಅಲ್ಪಫಲಗಳಿಗೆ ಆಸೆಪಟ್ಟು ಕೆಟ್ಟುಹೋಗುವುದುಂಟು. ಅಂತವರಿಗೆ ಅವರ ಕೋರಿಕೆಗಿಂತಲೂ ಉತ್ತಮವಾದ ಶ್ರೇಯಸ್ಸನ್ನು ಕೊಡಬಲ್ಲವನೊಬ್ಬನು, ಅವರವರು ಕೇಳಿದುದನ್ನುಮಾತ್ರ ಕೊಟ್ಟುಬಿಟ್ಟರೆ,

ಅವನನ್ನೂ ಅದೇವಿಧವಾದ ಮಂದಬುದ್ಧಿಯುಳ್ಳವನೆಂದೇ ಹೇಳಬೇಕು. ಪುರುಷಾರ್ಥ
ಗಳಲ್ಲಿ ಯಾವುದು ಮೇಲೆಂಬುದನ್ನೂ, ಅದನ್ನು ಸಾಧಿಸುವುದಕ್ಕೆ ತಕ್ಕ ಉಪಾಯ
ವನ್ನೂ ತಿಳಿದವನು, ಅದನ್ನು ತಿಳಿಯದೆ ಕರ್ಮಮಾರ್ಗದಲ್ಲಿ ತೊಳಲತಕ್ಕವರನ್ನು
ಕಂಡಾಗ ಅವರನ್ನು ಅಮಾರ್ಗದಿಂದ ತಪ್ಪಿಸಬೇಕೇಹೊರತು, ಅದರಲ್ಲಿಯೇ ಪ್ರೇರಿಸ
ಬಾರದು. ರೋಗಿಗಳು ಅಪಥ್ಯಕ್ಕಾಸೆಪಟ್ಟರೂ ಉತ್ತಮವೈದ್ಯರು ಅದನ್ನ ಅವ
ರಿಗೆ ಕೊಡದಿರುವಂತೆ, ಅಜ್ಞರಾದವರು ಕರ್ಮಮಾರ್ಗದಲ್ಲಿ ಹೋಗುವುದನ್ನು
ನೋಡಿದಾಗ ತಿಳಿದವರು ಅವರನ್ನು ತಡೆಯದೆ ಬಿಡಲಾರರು, ಆದುದರಿಂದ ಈಗ
ನೀವು ಮೋಕ್ಷಪ್ರದನಾದ ನನ್ನನ್ನು ಪ್ರಸನ್ನನನ್ನಾಗಿ ಮಾಡಿಕೊಂಡು, ಶತ್ರು
ಜಯಕ್ಕಾಗಿ ನನ್ನಲ್ಲಿ ಪ್ರಾರ್ಥಿಸುವುದು ನಿಮ್ಮ ಬುದ್ಧಿಮಾಂದ್ಯವನ್ನು ಚೆನ್ನಾಗಿ
ತೋರಿಸುವುದು. ಆದರೆ ನೀವು ಕೇಳಿದ ಮಾತ್ರಕ್ಕೆ ಮೋಕ್ಷವನ್ನು ಕೊಡಬಲ್ಲ
ನಾನು ನಿಮ್ಮ ಕೋರಿಕೆಯಂತೆ ನಡೆಸುವುದೂ ಸರಿಯಲ್ಲ. ಆದುದರಿಂದ ನಾನು
ಸಾಕ್ಷಾತ್ತಾಗಿ ಈ ವಿಷಯದಲ್ಲಿ ಪ್ರವರ್ತಿಸಲಾರೆನು. ಆದರೆ ನಿಮ್ಮ ಕೋರಿಕೆಯು
ನೆರವೇರುವುದಕ್ಕೆ ಬೇರೆ ಉಪಾಯಾಂತರವನ್ನು ತಿಳಿಸುವೆನು ಕೇಳಿರಿ! ದಧೀಚ
ಯೆಂಬ ಮಹರ್ಷಿಯೊಬ್ಬನುಂಟು. ಅವನು ಮಹಾತಪಸ್ವಿಯು. ಬಹಳ ಜ್ಞಾನಿಯು.
ಪರಮಾತ್ಮೋಪಾಸಕನು! ನೀವೆಲ್ಲರೂ ಈಗಲೇ ಅವನಲ್ಲಿ ಹೋಗಿ ಮರೆಹೊಕ್ಕರೆ
ನಿಮ್ಮ ಕೋರಿಕೆಯು ಕೈಗೂಡುವುದು. ನೀವು ಅವನಲ್ಲಿಗೆ ಹೋಗಿ ವಿದ್ಯೆಯಿಂದಲೂ
ವ್ರತದಿಂದಲೂ, ತಪಸ್ಸಿಂದಲೂ, ಸಾರವತ್ತಾದ ಅವನ ಶರೀರವನ್ನು ಕೊಡುವಂತೆ
ಯಾಚಿಸಿರಿ! ಆ ಮಹರ್ಷಿಯು, ಪರಿಶುದ್ಧವಾದ ಬ್ರಹ್ಮವಿದ್ಯೆಯಲ್ಲಿ ಪಾರಂಗತನು.
ಅವನು ತನ್ನಲ್ಲಿದ್ದ ಆ ಬ್ರಹ್ಮವಿದ್ಯೆಯನ್ನು ಮೊದಲು ಅಶ್ವಿನೀದೇವತೆಗಳಿಗೆ ಉಪದೇ
ಸಿರುವನು. ಆ ವಿದ್ಯೆಯು ಅಶ್ವಶಿರಸ್ಸೆಂದು ಪ್ರಸಿದ್ಧಿಗೊಂಡಿರುವುದು. ಆ ವಿದ್ಯೋಪ
ದೇಶದಿಂದಲೇ ಅಶ್ವಿನೀದೇವತೆಗಳಿಗೆ ಮರಣವಿಲ್ಲದಂತಾಯಿತು. ಆ ದಧೀಚಿಮು
ನಿಯು ತನ್ನ ತಂದೆಯಾದ ಅಥರ್ವಮುನಿಯಿಂದ, ಸಾಕ್ಷಾತ್ತಾಗಿನನ್ನನ್ನೇ ಅಧಿದೇವ
ತೆಯಾಗಿ ಉಳ್ಳ ನಾರಾಯಣಕವಚವೆಂಬ ಮಂತ್ರವನ್ನು ಮೊದಲು ತಾನು ಉಪ
ದೇಶಹೊಂದಿ, ಆಮೇಲೆ ಅದನ್ನು ತ್ವಷ್ಟೃವಿಗೆ ಉಪದೇಶಿಸಿದನು. ಆ ತ್ವಷ್ಟನು
ಅದೇ ಮಂತ್ರವನ್ನು ತನ್ನ ಮಗನಾದ ವಿಶ್ವರೂಪನಿಗೆ ಉಪದೇಶಮಾಡಿದನು.
ಆವಿಶ್ವರೂಪನಿಂದ ನಿನಗೆ ಉಪದೇಶಿಸಲ್ಪಟ್ಟಿತು. ಹೀಗೆ ನಾರಾಯಣಕವಚವೆಂ
ಮಂತ್ರಕ್ಕೆ, ಆ ದಧೀಚಿಯ ದೇಹವುಮೊದಲು ಆಶ್ರಯವಾಗಿದ್ದುದರಿಂದ, ಆಶರೀ
ದಲ್ಲಿ ಬಹಳ ಶಕ್ತಿಯುಂಟು. ಎಲೈ ಅಶ್ವಿನೀದೇವತೆಗಳಿರಾ! ನೀವಿಬ್ಬರೂ ನಿಮ್ಮ
ಗುರುವಾದ ದಧೀಚಿಯಲ್ಲಿ ಹೋಗಿ, ಅವನ ದೇಹವನ್ನು ಯಾಚಿಸಿದಪಕ್ಷದಲ್ಲಿ

ಶರಣಾಗತರಕ್ಷಣಧರ್ಮವನ್ನು ಬಲ್ಲವನಾದ ಆ ಮಹರ್ಷಿಯು, ನಿಮಗೆ ತನ್ನ ದೇಹವನ್ನು ಕೊಡುವುದರಲ್ಲಿ ಸಂದೇಹವಿಲ್ಲ. ಆ ಶರೀರವನ್ನು ತಂದು ವಿಶ್ವಕರ್ಮನ ವಶಕ್ಕೆ ಕೊಟ್ಟರೆ, ಅವನು ಅವುಗಳಿಂದ ಒಂದು ದಿವ್ಯಾಯುಧವನ್ನು ನಿರ್ಮಿಸಿ ಕೊಡುವನು. ಆ ಆಯುಧವನ್ನು ಗ್ರಹಿಸಿ ದೇವೇಂದ್ರನು ನನ್ನ ತೇಜಸ್ಸನ್ನು ಅದರಲ್ಲಿ ಆವಾಹಿಸಿ, ವೃತ್ರಾಸುರನತಲೆಯನ್ನು ಭೇದಿಸಿಬಹುದು. ಹೀಗೆ ವೃತ್ರಾಸುರನನ್ನು ಸಂಹರಿಸಿದಮೇಲೆ ಪೂರ್ವದಂತೆ ನೀವು ರಾಜ್ಯಸಂಪತ್ತನ್ನೂ, ನಿಮ್ಮ ಶಸ್ತ್ರಾಸ್ತ್ರಗಳನ್ನೂ, ನಿಮ್ಮ ಆಯುಧಗಳನ್ನೂ, ನಿಮ್ಮ ತೇಜಸ್ಸನ್ನೂ ಪಡೆಯಬಹುದು. ಎಲೈ ದೇವತೆಗಳಿರಾ! ಇನ್ನು ಭಯಪಡಬೇಡಿರಿ! ನಿಮಗೆ ಕ್ಷೇಮವಾಗಲಿ! ನನ್ನನ್ನು ನಂಬಿದವರಿಗೆ ಯಾವವಿಧದಲ್ಲಿಯೂ ದುಃಖವುಂಟಾಗದು. ಇನ್ನು ನೀವು ಹೋಗಿಬನ್ನಿರಿ" ಎಂದನು. ಇದು ಒಂಭತ್ತನೆಯ ಅಧ್ಯಾಯವು.

---

## ಇಂದನು ದಧೀಚಿಮುನಿಯ ಅಸ್ಥಿಯಿಂದ ವಜ್ರಾಯುಧವನ್ನು ಮಾಡಿಸಿ ವೃತನೊಡನೆ ಯುದ್ಧಕ್ಕೆ ಹೊರಟುದು.

ರಾಜೇಂದ್ರಾ! ಕೇಳು! ಲೋಕರಕ್ಷಕನಾದ ಭಗವಂತನು ಇಂದ್ರಾದಿದೇವತೆಗಳಿಗೆ ಹೀಗೆಂದು ನಿಯಮಿಸಿ, ಅವರೆಲ್ಲರೂ ನೋಡುತ್ತಿದ್ದಹಾಗೆಯೇ ಕಣ್ಮರೆಯಾದನು. ದೇವತೆಗಳೆಲ್ಲರೂ ಭಗವದಾಜ್ಞೆಯಂತೆ ಅಥರ್ವಪುತ್ರನಾದ ದಧೀಚಿಯ ಬಳಿಗೆ ಬಂದು, ಅವನ ದೇಹವನ್ನು ಯಾಚಿಸಿದರು. ಮಹಾನುಭಾವನಾದ ಆ ದಧೀಚಿಯು ಲೋಕಕ್ಷೇಮಕ್ಕಾಗಿ ತನ್ನ ದೇಹವು ಉಪಯೋಗಪಡುವುದೆಂದು ಮನಸ್ಸಿನಲ್ಲಿ ಸಂತೋಷಗೊಂಡಿದ್ದರೂ, ಮೇಲೆವಾತ್ರ ಹಾಸ್ಯಪೂರ್ವಕವಾಗಿ ಹೀಗೆಂದು ಹೇಳುವನು "ಎಲೈ ದೇವತೆಗಳಿರಾ! ನೀವಾದರೋ ಮರಣವಿಲ್ಲದವರು! ಆದುದರಿಂದ ಪ್ರಾಣಿಗಳಿಗೆ ಮರಣಕಾಲದಲ್ಲಿ ಶರೀರವನ್ನು ಬಿಟ್ಟುಹೋಗುವಾಗ, ಎಷ್ಟು ದುಸ್ಸಹವಾದ ಸಂಕಟವೆಂಬುದು ನಿಮಗೆ ತಿಳಿದಿರಲಾರದು! ಬದುಕಿರಬೇಕೆಂಬ ಆಸೆಯು ಪ್ರಾಣಿಸಾಮಾನ್ಯಕ್ಕೆ ತಪ್ಪಿದುದಲ್ಲ! ದೇಹವುಳ್ಳವರಿಗೆ ದೇಹವೇ ಎಲ್ಲಕ್ಕಿಂತಲೂ ಪ್ರಿಯತಮವಾಗಿರುವುದು. ಸಾಕ್ಷಾನ್ನಾರಾಯಣನೇ ಬಂದು ಯಾಚಿಸಿದರೂ ಆ ದೇಹವನ್ನು ಕೊಡುವುದಕ್ಕೆ ಯಾವನೂ ಇಷ್ಟಪಡಲಾರನು? ಈ ವಿಚಾರವನ್ನು ತಿಳಿಯದೆ ನೀವು ನನ್ನ ದೇಹವನ್ನು ಕೇಳುವಿರಲ್ಲಾ! ಇದು ನ್ಯಾಯವೇ?" ಎಂದನು.

ಅದಕ್ಕಾ ದೇವತೆಗಳು "ಓ ಮುನೀಂದ್ರಾ! ನೀನು ಹೇಳುವ ದೇನೋ ನಿಜವೇ! ಆದರೆ, ನಿನ್ನ ಚರಿತ್ರವು ಲೋಕಸ್ತುತ್ಯವಾದುದು! ನೀನು ಭೂತಗಳಲ್ಲಿ ದಯೆಯನ್ನು ತೋರಿಸತಕ್ಕ ಸ್ವಭಾವವುಳ್ಳವನು. ನಿನ್ನಂತಹ ಮಹಾತ್ಮರಿಗೆ ಪರೋಪಕಾರಕ್ಕಾಗಿ ತ್ಯಜಿಸಬಾರದ ವಸ್ತುವೆಂದಾದರೂ ಇರುವುದಿಲ್ಲ. ಪ್ರಾಣಿಗಳಿಗೆ ದೇಹವನ್ನು ಬಿಡುವುದು ಬಹಳ ಕಷ್ಟವೆಂಬುದೇನೋ ವಾಸ್ತವವಾಗಿದ್ದರೂ, ನಿನ್ನಂತಹ ಮಹಾತ್ಮರು ಆ ಕಷ್ಟವನ್ನೆಣಿಸಲಾರರು! ನಮ್ಮಂತೆ ಸ್ವಪ್ರಯೋಜನದಲ್ಲಿಯೇ ದೃಷ್ಟಿಯಿಟ್ಟವರಾದರೋ, ಬೇರೊಬ್ಬರ ಕಷ್ಟಸುಖಗಳನ್ನು ಯೋಚಿಸದೆ ತಮಗೆ ಬೇಕಾದುದನ್ನು ಇತರರಲ್ಲಿ ಸಂಕೋಚವಿಲ್ಲದೆ ಯಾಚಿಸುವುದೇನೋ ಸಹಜವು. ಇತರರ ಕಷ್ಟಸುಖಗಳನ್ನು ತಿಳಿದವರು ಹೀಗೆ ಯಾಚಿಸುವುದಕ್ಕೇ ಹೋಗಲಾರರು. ಹಾಗೆಯೇ ಯಾಚಿಸಲ್ಪಡತಕ್ಕವನೂ ಕೂಡ ಉದಾರಿಯಾಗಿದ್ದಪಕ್ಷದಲ್ಲಿ, ತನ್ನಲ್ಲಿ ಬಂದು ಯಾಚಿಸಿದವರಿಗೆ ಇಲ್ಲವೆಂದು ಹೇಳಲಾರೆನು. ತಾನು ದಾನಸಮರ್ಥನಾಗಿರುವಾಗಲೂ ಯಾವನು ಯಾಚಕರನ್ನು ನಿರಾಕರಿಸುವನೋ, ಅವನೂ ಇತರರ ಕಷ್ಟವನ್ನು ತಿಳಿಯದಂತೆಯೇ ಆಗುವುದಲ್ಲವೇ? ಆಗ ಯಾಚಕನಿಗೂ, ಯಾಚಿಸಲ್ಪಡತಕ್ಕವನಿಗೂ ತಾರತಮ್ಯವೇ ಇಲ್ಲದಂತಾಗುವುದಲ್ಲವೇ? ಆದರಂತೆ ಈಗ ನಾವೇನೋ ನಿನ್ನ ಕಷ್ಟಸುಖಗಳನ್ನು ಯೋಚಿಸದೆ, ಕೇವಲ ಸ್ವಪ್ರಯೋಜನಪರರಾಗಿ ನಿನ್ನಲ್ಲಿ ಬಂದು ಯಾಚಿಸುತ್ತಿರುವೆವು. ಈಗ ನೀನೂ ದೇಹಾಭಿಮಾನದಿಂದ ನಮ್ಮ ಪ್ರಾರ್ಥನೆಯನ್ನು ನಡೆಸಿಕೊಡದಿದ್ದ ಪಕ್ಷದಲ್ಲಿ, ನೀನೂ ಕೇವಲ ಸ್ವಾರ್ಥಪರನಾಗಿ ನಮ್ಮ ಕಷ್ಟವನ್ನು ಯೋಚಿಸದೆ ಹೋದಂತೆಯೇ ಆಗುವುದಲ್ಲವೇ? ಆಗ ಮೂಢರಾದ ನಮಗೂ, ಮಹಾಜ್ಞಾನಿಯಾದ ನಿನಗೂ ವ್ಯತ್ಯಾಸವೇನಾಯಿತು? ನೀನೂ ನಮ್ಮಂತೆಯೇ ಆದೆಯಲ್ಲವೇ" ಎಂದರು. ಅವರ ಮಾತಿಗೆ ದಧೀಚಿಯು ಸಂತೋಷಿಸಿ "ಎಲೈ ದೇವತೆಗಳಿರಾ! ನಿಮ್ಮ ಧರ್ಮಬುದ್ಧಿಯನ್ನು ತಿಳಿಯಬೇಕೆಂಬುದಕ್ಕಾಗಿಯೇ ನಾನೂ ಮೊದಲು ನಿಮ್ಮನ್ನು ತಿರಸ್ಕರಿಸಿದೆನೇ ಹೊರತು ಬೇರೆಯಲ್ಲ. ಪ್ರಾರಬ್ಧಕರ್ಮವು ತೀರಿದಮೇಲೆ ತಾನಾಗಿಯೇ ಬಿದ್ದುಹೋಗತಕ್ಕ ಈ ನನ್ನ ದೇಹದಿಂದ ನಿಮಗೆ ಉಪಕಾರವಾಗುವಪಕ್ಷದಲ್ಲಿ, ಇದನ್ನು ಕೊಡುವುದರಲ್ಲಿ ಆಡ್ಡಿಯೇನಿದೆ? ಮನಃಪೂರ್ವಕವಾಗಿ ಕೊಡುವೆನು. ಲೋಕದಲ್ಲಿ ಯಾವ ಪುರುಷನು ಭೂತದಯಾಪರನಾಗಿ, ಅಸ್ಥಿರವಾದ ತನ್ನ ದೇಹದಿಂದ ಸ್ಥಿರವಾದ ಕೀರ್ತಿಯನ್ನೂ, ಧರ್ಮವನ್ನೂ ಗಳಿಸಿಡುವನೋ, ಅವನ ಜನ್ಮವೇ ಉತ್ತಮವೆನಿಸುವುದು. ಈ ಉಪಕಾರಬುದ್ಧಿಯಿಲ್ಲದವನ ಜನ್ಮವು ಸ್ಥಾವರಪರ್ಯಂತಗಳಿಗೂ ಹಾಸ್ಯಾಸ್ಪದವಾಗುವುದು. ಏಕೆಂದರೆ ಅಚೇತನಗಳಾದ ವೃಕ್ಷಾದಿಗಳೂಕೂಡ ತಮ್ಮ ದೇಹವನ್ನೊಪ್ಪಿಸಿ ಇತರರಿಗೆ ಉಪ

ಕಾರವನ್ನು ಮಾಡುವುವು. ಮುಖ್ಯವಾಗಿ ಇತರಪ್ರಾಣಿಗಳ ದುಃಖವನ್ನು ನೋಡಿ ದುಃಖಿಸುವುದು, ಅವುಗಳ ಸಂತೋಷವನ್ನು ಕಂಡು ಸಂತೋಷಿಸುವುದು, ಇದೇ ಅಕ್ಷಯವಾದ ಧರ್ಮವೆಂದು ಹಿರಿಯರು ನಿರ್ಣಯಿಸಿರುವರು. ಅಯ್ಯೋ! ಇದ ಲ್ಲವೇ ಕಷ್ಟವು. ಲೋಕದಲ್ಲಿ ನಾಯಿನರಿಗಳು ತಿನ್ನತಕ್ಕುದಾಗಿಯೂ, ತಮಗೆ ಯಾವ ವಿಧದಲ್ಲಿಯೂ ಉಪಯೋಗವಿಲ್ಲದುದಾಗಿಯೂ, ಕ್ಷಣಕಾಲವಿದ್ದು ಹೋಗತಕ್ಕು ದಾಗಿಯೂ, ಜಾತಿಗಳಲ್ಲಿ ಕಲಹಕ್ಕೆ ಕಾರಣವಾಗಿಯೂ ಇರುವ ಶರೀರವನ್ನು, ಯಾವನು ಪರೋಪಕಾರಕ್ಕಾಗಿ ಉಪಯೋಗಿಸುವುದಿಲ್ಲವೋ ಆ ಮನುಷ್ಯನ ಜನ್ಮವು ಕೇವಲ ನಿರರ್ಥಕವಾದುದು. ಅಂತವನ ಸ್ಥಿತಿಗಿಂತಲೂ ಲೋಕದಲ್ಲಿ ಶೋಚನೀಯ ವಾದುದು ಬೇರೆಯಾವುದೂ ಇಲ್ಲ" ಎಂದು ನಿಶ್ಚಯಿಸಿ, ದಧೀಚಿಯು ತನ್ನ ಆತ್ಮ ವನ್ನು ಪರಬ್ರಹ್ಮನಲ್ಲಿ ಸೇರಿಸಿ, ದೇಹವನ್ನು ಬಿಟ್ಟುಹೋಗುವುದಕ್ಕೆ ಸಿದ್ಧನಾದನು. ಪರಮಾತ್ಮನಲ್ಲಿಯೇ ನಟ್ಟ ಮನಸ್ಸುಳ್ಳವನಾಗಿ, ಇಂದ್ರಿಯಗಳನ್ನು ಜಯಿಸಿ, ವಾಸನೆಯನ್ನೂ ಬುದ್ಧಿಯನ್ನೂ, ಹೊರಗಿನ ವ್ಯಾಪಾರಗಳಿಂದ ಹಿಂತಿರುಗಿಸಿ, ಪ್ರಾಣ ಗಳನ್ನು ತಡೆದು, ಆತ್ಮತತ್ವವನ್ನೇ ಧ್ಯಾನಿಸುತ್ತ, ಸಮಾಧಿಯೋಗದಲ್ಲಿದ್ದು, ತನ್ನ ಹೊರಗಿನ ದೇಹವನ್ನು ಮರೆತುಬಿಟ್ಟನು. ಆತ್ಮವು ದೇಹವನ್ನು ಬಿಟ್ಟುಹೋಗಿ ಪರ ಬ್ರಹ್ಮನಲ್ಲಿ ಲಯಹೊಂದಿತು. ದೇಹವು ಕೆಳಗೆ ಬಿದ್ದುಹೋಯಿತು. ಆಮೇಲೆ ಇಂದ್ರನು ಆ ದೇಹದಲ್ಲಿದ್ದ ಎಲುಬುಗಳನ್ನು ತೆಗೆದು ವಿಶ್ವಕರ್ಮನಿಗೆ ಕೊಡಲು, ವಿಶ್ವಕರ್ಮನು ಆ ಅಸ್ಥಿಗಳಿಂದಲೇ ಒಂದು ವಜ್ರಾಯುಧವನ್ನು ನಿರ್ಮಿಸಿಕೊಟ್ಟನು. ದೇವೇಂದ್ರನು ಆ ವಜ್ರವನ್ನು ಗ್ರಹಿಸಿದೊಡನೆ, ಭಗವಂತನ ದಿವ್ಯತೇಜಸ್ಸು ಅವನಲ್ಲಿನೆಲೆಗೊಂಡಿತು, ಸಕಲದೇವಗಣಗಳೊಡಗೂಡಿ ಐರಾವತನನ್ನೇರಿಯುದ್ಧಕ್ಕಾಗಿ ಹೊರಟನು. ಅನೇಕದೇವ ರ್ಷಿಗಳಿಂದ ಸ್ತುತಿಸಲ್ಪಡುತ್ತ, ತ್ರೈಲೋಕ್ಯವನ್ನೂ ಸಂತೋಷಗೊಳಿಸುವಂತೆ ಸಮಸ್ತದೇವಸೈನ್ಯಗಳನ್ನೂ ಕಟ್ಟಿಕೊಂಡು, ವೃತ್ರಾಸುರನಮೇಲೆದಂಡೆತ್ತಿ ಪ್ರಳಯ ಕಾಲದರುದ್ರನಂತೆ ತೋರುತ್ತ, ಅನೇಕ ರಾಕ್ಷಸಸೈನ್ಯಗಳನಡುವೆವೀರ್ಯದಿಂದ ಕೊಬ್ಬಿ ನಿಂತಿರುವ ವೃತ್ರಾಸುರನನ್ನು ತಿರುಗೊಂಡನು. ರಾಜೇಂದ್ರಾ! ಕೃತತ್ರೇತಾಯುಗಗಳ ಸಂಧಿಕಾಲದಲ್ಲಿ ನರ್ಮದಾನದಿಯತೀರದಲ್ಲಿ ದೇವಾಸುರಸೈನ್ಯಗಳೆರಡಕ್ಕೂ ಅತಿ ಭಯಂಕರವಾದ ಯುದ್ಧವು ಪ್ರವರ್ತಿಸಿತು. ಏಕಾದಶರುದ್ರರು, ಅಷ್ಟವಸುಗಳು, ದ್ವಾದಶಾದಿತ್ಯರು, ಅಶ್ವಿನೀದೇವತೆಗಳಿಬ್ಬರು, ಪಿತೃದೇವತೆಗಳು, ಅಗ್ನಿದೇವತೆಗಳು, ಸಪ್ತಮರುತ್ತ್ತಗಳು, ಋಭುಗಳು, ಸಾಧ್ಯರು, ವಿಶ್ವೇದೇವತೆಗಳು, ಮೊದಲಾದ ಸಮಸ್ತದೇವಗಣಗಳಿಂದಲೂ ಪರಿವೃತನಾದ ದೇವೇಂದ್ರನು, ತನ್ನ ತೇಜಸ್ಸಿನಿಂದ ದಿಕ್ಕುಗಳೆಲ್ಲವನ್ನೂ ಬೆಳಗುತ್ತ, ವಜ್ರಧಾರಿಯಾಗಿ ಬರುತ್ತಿರುವುದನ್ನು ನೋಡಿ

ಅತ್ತಲಾಗಿರಾಕ್ಷಸರೆಲ್ಲರಿಗೂ ಸಹಿಸಲಾರದ ಕೋಪಾವೇಶವುಂಟಾಯಿತು. ಆಗ ವೃತ್ರನಕಡೆಯ ಸೇನಾಧಿಪತಿಗಳಾದ ನಮುಚಿ, ಶಂಬರ, ಅನರ್ವ, ದ್ವಿಮೂರ್ಧ, ವೃಷಭ, ಅಂಬರ, ಹಯಗ್ರೀವ, ಶಂಕುಶಿರಸ್ಸು, ವಿಪ್ರಚಿತ್ತಿ, ಅಯೋಮುಖ, ಪುಲೋಮ, ವೃಷಪರ್ವ, ಪ್ರಹೇತಿ, ಹೇತಿ, ಉತ್ಕಟ, ಧೂಮ್ರಕೇಶ, ವಿರೂಪಾಕ್ಷ; ಕಪಿಲ, ವಿಭಾವಸು, ಮುಂತಾದ ದೈತ್ಯ ದಾನವರೂ, ಯಕ್ಷರಾಕ್ಷಸರೂ ಯುದ್ಧಕ್ಕೆ, ಸಿದ್ಧರಾಗಿ ನಿಂತರು. ಇದಲ್ಲನೆ ಇಲ್ವಲ, ವಾತಾಪಿ, ಇಲ್ವಲ, ದಂದಶೂಕ, ವೃಷಧ್ವಜ, ಕಾಲನಾಭ, ಮಹಾನಾಭ, ಭೂತಸಂತಾಪನ, ವೃಕ, ಮಾಲಿ, ಸುಮಾಲಿ, ಮೊದಲಾದ ವೀರಾಗ್ರೇಸರರೆಲ್ಲರೂ ಸಾವಿರಾರು ಸಂಖ್ಯೆಯಿಂದ ಗುಂಪುಕೂಡಿದರು. ಸುವರ್ಣಮಯವಾದ ಯುದ್ಧಭೂಷಣಗಳನ್ನು ತೊಟ್ಟು, ಮೃತ್ಯುದೇವತೆಗೂ ತಡೆಯಲಾರದ ದೇವಸೈನ್ಯವನ್ನು ದಿಟಿಸಿ, ಸ್ವಲ್ಪಮಾತ್ರವೂ ಭಯವಿಲ್ಲದೆ ಮಹಾಮದದಿಂದ ಸಿಂಹನಾದವನ್ನು ಮಾಡುತ್ತ ಗದೆಗಳಿಂದಲೂ, ಶಸ್ತ್ರಾಸ್ತ್ರಗಳಿಂದಲೂ, ಪರಿಘಗಳಿಂದಲೂ, ಬಾಣಗಳಿಂದಲೂ, ನಾನಾದಿಕ್ಕುಗಳಲ್ಲಿ ಹೊಡೆಯುವುದಕ್ಕೆ ತೊಡಗಿದರು. ಕೆಲವರು ಪ್ರಾಸಗಳನ್ನೂ, ಕೆಲವರು ಮುದ್ಗರಗಳನ್ನೂ ಕೆಲಪರು ತೋಮರಗಳನ್ನೂ ಪ್ರಯೋಗಿಸಿದರು. ಹಾಗೆಯೇ ಅವರವರು ತಮ್ಮತಮ್ಮ ಕೈಗೆ ಸಿಕ್ಕಿದಂತೆ ಶೂಲಗಳಿಂದಲೂ ಗುಂಡುಗೊಡಲಿಗಳಿಂದಲೂ, ಕತ್ತಿಗಳಿಂದಲೂ, ಈಟಿಗಳಿಂದಲೂ, ಮುಸುಂಡಿಗಳಿಂದಲೂ, ದೇವಸೈನ್ಯವನ್ನು ನಾನಾಕಡೆಯಿಂದ ಪ್ರಹರಿಸುತ್ತಿದ್ದರು. ಹೀಗೆ ಮೇಲೆಮೇಲೆ ಹೊರಟು ಬರುತ್ತಿರುವ ರಾಕ್ಷಸರಬಾಣ ಪರಂಪರೆಗಳಲ್ಲಿ ಮೇಘಪರಂಪರೆಗಳಿಂದ ಮರೆಸಲ್ಪಟ್ಟ ನಕ್ಷತ್ರಗಳಂತೆ ದೇವಸೈನ್ಯವೆಲ್ಲವೂ ಮರೆಸಿಹೋಯಿತು. ಆದರೆ ಇದರಿಂದ ದೇವತೆಗಳಿಗೆ ಯಾವವಿಧವಾದ ಅಪಾಯವೂ ಉಂಟಾಗಲಿಲ್ಲ! ರಾಕ್ಷಸರಿಂದ ಪ್ರಯೋಗಿಸಲ್ಪಟ್ಟ ಆಯುಧವೆಲ್ಲವನ್ನೂ, ದೇವತೆಗಳು ತಮ್ಮ ಹಸ್ತಲಾಘವದಿಂದ ನಡದಾರಿಯಲ್ಲಿಯೇ ಕತ್ತರಿಸಿ, ಕೆಡಹುತ್ತಿದ್ದರು. ಆಗ ತಮ್ಮ ಆಯುಧಗಳೆಲ್ಲವೂ ದೇವತೆಗಳ ಮೈಯನ್ನು ಸೋಕದೆ ನಡುದಾರಿಯಲ್ಲಿಯೇ ಕತ್ತರಿಸಿ ಬೀಳುವುದನ್ನು ನೋಡಿ ರಾಕ್ಷಸರಿಗೆ ಮತ್ತಷ್ಟು ಕೋಪವು ಹೆಚ್ಚಿತು. ಆ ಕೋಪದಿಂದ ಅನೇಕರಾಕ್ಷಸವೀರರು, ಬೆಟ್ಟದ ಶಿಖರಗಳನ್ನೂ ದೊಡ್ಡ ಮರಗಳನ್ನೂ, ಕಲ್ಲುಬಂಡೆಗಳನ್ನೂ ಕಿತ್ತುತಂದು, ದೇವಸೈನ್ಯದ ಮೇಲೆ ವರ್ಷಿಸುತ್ತಿದ್ದರು. ಅವುಗಳನ್ನೂ ದೇವತೆಗಳು ನಡುದಾರಿಯಲ್ಲಿಯೇ ಕತ್ತರಿಸುತ್ತಿದ್ದರು. ಆಗ ರಾಕ್ಷಸರಿಗೆ ತಮ್ಮ ಪ್ರಯತ್ನವೆಲ್ಲವೂ ವಿಫಲವಾದುದನ್ನು ನೋಡಿ ಮನಸ್ಸಿನಲ್ಲಿ ಸ್ವಲ್ಪವಾಗಿ ಭಯವು ಹುಟ್ಟಿತು. ರಾಜೇಂದ್ರಾ! ಇದೆಲ್ಲವೂ ಭಗವದನುಗ್ರಹದ ಫಲವೆಂದು ತಿಳಿ! ಕ್ಷುದ್ರಜನಗಳ ನಿಂದಾವಾಕ್ಯಗಳು ಮಹಾತ್ಮರನ್ನು ಹೇಗೆ ಕಲ

ಗಿಸಲಾರವೋ, ಅದರಂತೆಯೇ ಭಗವದನುಗ್ರಹಕ್ಕೆ ಪಾತ್ರರಾದ ದೇವತೆಗಳಲ್ಲಿ ದೈತ್ಯ ದಾನವರ ಸಾಹಸಗಳೆಲ್ಲವೂ ನಿರರ್ಥಕಗಳಾದುವು. ವಿಷ್ಣುಭಕ್ತಿ ಹೀನರಾದ ಆ ರಾಕ್ಷಸರ ವೀರ್ಯವೂ, ಹೆಮ್ಮೆಯೂ ಕ್ರಮಕ್ರಮವಾಗಿ ತಗ್ಗುತ್ತ ಬಂದಿತು. ಕೊನೆಗೆ ಅಲ್ಲಿದ್ದ ರಾಕ್ಷಸಸೈನ್ಯಗಳೆಲ್ಲವೂ ತಮ್ಮ ಪ್ರಯತ್ನವು ವಿಫಲವಾಗುತ್ತಿರುವುದನ್ನು ನೋಡಿ ಭಯಪಟ್ಟು, ತಮ್ಮ ಪ್ರಭುವಾದ ವೃತ್ರನನ್ನೂ ಲಕ್ಷ್ಯಮಾಡದೆ ಆ ಯುದ್ಧರಂಗದಿಂದ ಒಬ್ಬೊಬ್ಬರಾಗಿ ಪಲಾಯನ ಮಾಡುವುದಕ್ಕೆ ತೊಡಗಿದರು. ಆಗ ವೃತ್ರನು ತನ್ನ ಸೈನ್ಯಗಳೆಲ್ಲವೂ ತನ್ನನ್ನು ಮಾತ್ರಬಿಟ್ಟು ನಾಚಿಕೆಯಿಲ್ಲದೆ ಭಯದಿಂದ ಓಡಿ ಹೋಗುವ ಪ್ರಯತ್ನದಲ್ಲಿರುವುದನ್ನು ತಿಳಿದು, ಅವರ ಹೇಡಿತನಕ್ಕಾಗಿ ನಗುತ್ತ, ಅವರನ್ನು ತಡೆದು ನಿಲ್ಲಿಸಿ, ಕಾಲೋಚಿತವಾಗಿಯೂ ಇಂಪಾಗಿಯೂ ಇರುವ ಮಾತಿನಿಂದ ಹೀಗೆಂದು ಹೇಳುವನು: "ಓ ವಿಪ್ರಚಿತ್ತೀ! ಓ ನಮುಚೀ! ಓ ಪುಲೋಮಾ! ಮಾಯಾ! ಅನರ್ವಾ! ಇದೇನಿದು? ಬಹಳ ಚೆನ್ನಾಯಿತು. ನನ್ನ ಮಾತನ್ನು ಕೇಳಿರಿ! ನೀವು ರಾಕ್ಷಸವೀರರೆನಿಸಿಕೊಂಡಿದ್ದೂ ಹೀಗೆ ಯುದ್ಧಕ್ಕೆ ಭಯಪಟ್ಟು ಓಡಿ ಹೋಗುವುದೆಂದರೇನು! ಹುಟ್ಟಿದವರಿಗೆ ಎಂದಿದ್ದರೂ ಸಾವುತಪ್ಪದು! ಮರಣವನ್ನು ತಪ್ಪಿಸಿಕೊಳ್ಳುವುದಕ್ಕೆ ಲೋಕದಲ್ಲಿ, ಯಾರಿಗೂ ಯಾವ ಉಪಾಯದಿಂದಲೂ ಸಾಧ್ಯವಿಲ್ಲ. ಹೇಗಿದ್ದರೂ ಮರಣವನ್ನು ಹೊಂದಬೇಕಾಗಿರುವಾಗ, ಅದನ್ನು ಉತ್ತಮವಾದ ಮಾರ್ಗದಿಂದ ತಂದುಕೊಳ್ಳುವುದು ಮೇಲಲ್ಲವೇ? ಅನೇಕವಿಧವಾದ ಮರಣಗಳಲ್ಲಿ ಈ ಎರಡು ಬಗೆಯ ಮರಣಗಳೇ ಸಾರ್ಥಕಗಳೆಂದು ಹಿರಿಯರು ಹೇಳಿರುವರು. ಇವು ಬಹಳ ಭಾಗ್ಯಶಾಲಿಗಳಿಗಲ್ಲದೆ ಸಾಮಾನ್ಯರಿಗೆ ಸಿಕ್ಕಲಾರವು. ಬ್ರಹ್ಮಧ್ಯಾನರೂಪವಾದ ಧಾರಣಾಯೋಗದಿಂದ ಪ್ರಾಣಗಳನ್ನು ಹಿಡಿಸಿ ಶರೀರವನ್ನೂ ಬಿಡುವುದೊಂದು! ಯುದ್ಧದಲ್ಲಿ ಧೈರ್ಯದಿಂದ ನಿಂತು ಶತ್ರುಗಳಕೈಯಿಂದ ಸಾಯುವುದೊಂದು! ಇವೆರಡೇ ದೇಹತ್ಯಾಗಕ್ಕೆ ಮೇಲಾದ ಉಪಾಯಗಳು. ಇದು ಸಾಮಾನ್ಯಜನರಿಗೆ ಲಭ್ಯವಲ್ಲ. ಆದುದರಿಂದ ನೀವು ಧೈರ್ಯದಿಂದ ನಿಂತು ಯುದ್ಧಮಾಡಿರಿ! ನಾವು ಜಯಿಸಿದರೆ ನಮ್ಮ ಉದ್ದೇಶವು ಕೈಗೂಡುವುದು! ಸತ್ತರೆ ನಮಗೆ ಕೀರ್ತಿಯೂ ವೀರಸ್ವರ್ಗವೂ ಲಭಿಸುವುದು. ಇಂತಹ ಮರಣಕ್ಕೆ ನಾವೆಲ್ಲರೂ ಆಸೆಪಡಬೇಕೇ ಹೊರತು ಭಯಪಡಬಾರದು! ನಿಂತು ಯುದ್ಧಮಾಡಿರಿ" ಎಂದನು. ಇದು ಹತ್ತನೆಯ ಅಧ್ಯಾಯವು.

---

### ವೃತ್ರನು ಇಂದ್ರನಿಗೆ ತತ್ವವನ್ನು ತಿಳಿಸಿದುದು.

ಹೀಗೆ ವೃತ್ರನು ತನ್ನ ಸೈನಿಕರಿಗೆ ಧರ್ಮಯುಕ್ತವಾದ ಬುದ್ಧಿವಾದವನ್ನು ಹೇಳಿ ತಡೆಯುತ್ತಿದ್ದರೂ, ಆ ಸೈನಿಕರು, ಕೇವಲಭಯಗ್ರಸ್ತರಾಗಿ ತಮ್ಮ ಪ್ರಭುವಿನ ಮಾತನ್ನೂ ಕೇಳದೆ, ಪಲಾಯನಮಾಡುತ್ತಲೇ ಇದ್ದರು. ರಾಕ್ಷಸಸೈನ್ಯಗಳೆಲ್ಲವೂ ನಾನಾಕಡೆಗೆ ಚದರಿದುವು. ಇದನ್ನು ನೋಡಿದೇವತೆಗಳು "ಇದೇ ತಮಗೆ ಅನುಕೂಲ ಕಾಲವೆಂದು ತಿಳಿದು" ಓಡಿ ಹೋಗುತಿದ್ದ ರಾಕ್ಷಸರನ್ನು ವೇಲೆಮೇಲೆ ಬೆನ್ನಟ್ಟಿ ಹೋಗುತ್ತಿದ್ದರು. ದಿಕ್ಕಿಲ್ಲದೆ ಓಡುತ್ತಿರುವ ತನ್ನ ಸೈನ್ಯವನ್ನೂ, ಅದನ್ನು ಬೆನ್ನಟ್ಟಿ ಹೋಗುತ್ತಿದ್ದ ದೇವತೆಗಳ ಉತ್ಸಾಹವನ್ನೂ ನೋಡಿ ವೃತ್ರಾಸುರನಿಗೆ ತಡೆಯಲಾರದ ಕೋಪವುಂಟಾಯಿತು. ಆಗ ಆ ವೃತ್ರನೊಬ್ಬನೇ ಆ ದೇವತೆಗಳೆಲ್ಲರನ್ನೂ ತನ್ನ ಶಕ್ತಿಯಿಂದ ಅಡ್ಡಗಟ್ಟಿನಿಂತು, ಹುಂಕಾರದಿಂದ ಹೆದರಿಸುತ್ತ, ನಿಂದಾಪೂರ್ವಕವಾಗಿ ಹೀಗೆಂದು ಹೇಳುವನು. "ಎಲ್ಲೆ ದೇವತೆಗಳಿರಾ! ಮಲವಿಸರ್ಜನದಂತೆ ತಾಯಿಯ ಹೊಟ್ಟೆಯಿಂದಬಿದ್ದು, ಕೆಲಸಕ್ಕೆ ಬಾರದೆಭಯದಿಂದ ಪಲಾಯನಮಾಡುತ್ತಿರುವ ಈ ರಾಕ್ಷಸರನ್ನು ಬೆನ್ನಟ್ಟಿಹೋಗಿ ಹೊಡೆದುದರಿಂದನಿಮಗೆ ಕೀರ್ತಿಯೇನು! ಹೇಡಿಗಳನ್ನು ಕೊಲ್ಲುವುದು ಶೂರರಿಗೆ ಧರ್ಮವಲ್ಲ! ಅದರಿಂದ ಸದ್ಗತಿಯೂ ಉಂಟಾಗಲಾರದು! ನಿನುಗೆ ಅಲ್ಪಸುಖದಲ್ಲಿ ಆಸೆಯಿಲ್ಲದೆ, ಯುದ್ಧಮಾಡಬೇಕೆಂಬ ಉತ್ಸಾಹವಾಗಲೀ, ಯುದ್ಧಮಾಡತಕ್ಕ ಶಕ್ತಿಯಾಗಲೀ ಇದ್ದರೆ, ನನ್ನಮುಂದೆ ಕ್ಷಣಮಾತ್ರದವರೆಗೆ ನಿಲ್ಲಿರಿ" ಎಂದು ಹೇಳಿ, ಸಮಸ್ತಲೋಕವೂ ಭಯದಿಂದ ಪ್ರಜ್ಞೆತಪ್ಪಿ ಬೀಳುವಂತೆ ಕೋಪದಿಂದ ಗರ್ಜಿಸಿದನು. ಈ ಗರ್ಜನಧ್ವನಿಯನ್ನು ಕೇಳಿ ಅನೇಕದೇವತೆಗಳು ಸಿಡಿಲುಬಡಿದಂತೆ ಮೂರ್ಛಿತರಾಗಿ ಬಿದ್ದರು. ಆಗ ವೃತ್ರನು ಶೂಲವನ್ನು ಹಿಡಿದು ಮದೋನ್ಮತ್ತನಾಗಿ, ಮದದಿಂದಕೊಬ್ಬಿದ ಕಾಡಾನೆಯು ವನವನ್ನು ಮರ್ದಿಸುವಂತೆ, ಆ ದೇವಸೈನ್ಯದಲ್ಲಿ ಪ್ರವೇಶಿಸಿ, ಮೂರ್ಛಿತರಾಗಿದ್ದ ದೇವಸೈನ್ಯವೆಲ್ಲವನ್ನೂ ತನ್ನ ಕಾಲಿನಿಂದ ತಿಕ್ಕಿ ಕೊಲ್ಲುತ್ತ ಬಂದನು. ಇದನ್ನು ನೋಡಿ ದೇವೇಂದ್ರನಿಗೆ ಸಹಿಸಲಾರದ ಕೋಪವುಂಟಾಯಿತು. ಆ ವೃತ್ರನಮೇಲೆ ಭಯಂಕರವಾದ ಒಂದು ಗದೆಯನ್ನು ಪ್ರಯೋಗಿಸಿದನು. ಇದಿರಾಗಿ ಬರುತಿದ್ದ ದುಸ್ಸಹವಾದ ಆಗದೆಯನ್ನು, ವೃತ್ರನು ತನ್ನ ಎಡಗೈಯಿಂದಲೇ ಅನಾಯಾಸವಾಗಿ ಹಿಡಿದು, ಮುಂದೆ ಬಂದು, ಇಂದ್ರನವಾಹನವಾದ ಐರಾವತದಕುಂಭಸ್ಥಳದಮೇಲೆ ವೇಗದಿಂದ ಅಪ್ಪಳಿಸಿದನು. ಈ ಅದ್ಭುತಪರಾಕ್ರಮವನ್ನು ನೋಡಿ ಎಲ್ಲರೂ ಆಶ್ಚರ್ಯಪಟ್ಟರು. ಈ ಗದಾದಂಡದಿಂದ ತಾಡಿತವಾದ ಐರಾವತವು, ವಜ್ರಭಿನ್ನವಾದ ಪರ್ವತದಂತೆ ತಲೆಯೊಡೆದು ರಕ್ತವನ್ನು ಸುರಿಸುತ್ತ, ಆ ಪ್ರಹಾರವೇಗವನ್ನು ತಡೆಯಲಾರದೆ ಬಹಳವಾಗಿ ನೊಂದು, ತನ್ನ ಮೇಲೆ ಕುಳಿತಿದ್ದ ಇಂದ್ರನೊಡನೆ ಏಳು ಬಿಲ್ಲಳತೆಯ

ದೂರಕ್ಕೆ ಹಿಂದೆ ಸರಿಯಿತು. ಐರಾವತವು ಹೀಗೆ ಇಂದ್ರಸಹಿತವಾಗಿ ಯುದ್ಧ ಭೂಮಿಯಿಂದ ಹಿಂಜರಿಯುತ್ತಿರುವುದನ್ನು ನೋಡಿ ವೃತ್ರನಿಗೆ ಮತ್ತಷ್ಟು ಉತ್ಸಾಹವು ಹುಟ್ಟಿತು. ಇಂದ್ರನನ್ನು ಕೊಲ್ಲುವುದಕ್ಕೆ ತಕ್ಕ ಸಮಯವು ಸಿಕ್ಕಿದ್ದರೂ, ವೃತ್ರನು. ದುರ್ಬಲರಾದವರನ್ನು ಕೊಲ್ಲುವುದು ಅಧರ್ಮವೆಂದೆಣಿಸಿ, ತಿರುಗಿ ಗದೆಯನ್ನು ಪ್ರಯೋಗಿಸದೆ ಸುಮ್ಮನಿದ್ದನು. ಸ್ವಲ್ಪಕಾಲದೊಳಗಾಗಿಯೇ ದೇವೇಂದ್ರನು ಚೇತರಿಸಿಕೊಂಡು, ಅಮೃತವನ್ನು ತೊಟ್ಟಿಕ್ಕುತ್ತಿರುವ ತನ್ನ ಹಸ್ತದಿಂದ ಐರಾವತದ ಮೈಯನ್ನು ಸವರಿ, ಅದರ ಬಾಧೆಯನ್ನು ನೀಗಿಸಿ, ತಿರುಗಿ ಯುದ್ಧಾಭಿಮುಖನಾಗಿ ಬಂದನು ಇಂದ್ರನು ವಜ್ರಾಯುಧವನ್ನು ಹಿಡಿದು. ತಿರುಗಿ ಯುದ್ಧಸನ್ನದ್ಧನಾಗಿ ಬರುತ್ತಿರುವುದನ್ನು ನೋಡಿದೊಡನೆ, ವೃತ್ರನಿಗೆ ಹಿಂದೆ ಆ ದೇವೇಂದ್ರನು ಶಿರ್ದಯನಾಗಿ ತನ್ನಣ್ಣನಾದ ವಿಶ್ವರೂಪನನ್ನು ಕೊಂದ ಘೋರಕೃತ್ಯವು ನೆನಪಿಗೆಬಂದಿತು. ದುಃಖದಿಂದಲೂ ಮೋಹದಿಂದಲೂ ಕೂದಿಯುತ್ತ ಆ ಇಂದ್ರನನ್ನು ಹಾಸ್ಯಮಾಡಿ ಹೀಗೆಂದು ಹೇಳುವನು. 'ಎಲೆ ನೀಚಾ! ನೀನು ನನ್ನಣ್ಣನಾದ ವಿಶ್ವರೂಪನನ್ನು ಕೊಂದು ಬ್ರಹ್ಮಹತ್ಯೆಗೂ, ಗುರುಹತ್ಯೆಗೂ ಪಾತ್ರನಾದ ಪರಮ ಪಾಪಿಯು! ಈಗ ನೀನು ದೈವವಶದಿಂದ ನನ್ನ ಕಣ್ಣಿಗೆ ಬಿದ್ದಿರುವೆ. ಕಲ್ಲಿನಂತೆ ಕಠಿನವಾದ ಈ ನಿನ್ನ ಹೃದಯವನ್ನು ಈಗಲೇ ನಾನು ಈ ಶೂಲದಿಂದ ಭೇದಿಸಿ, ನನ್ನಣ್ಣನ ಸಾಲವನ್ನು ತೀರಿಸುವೆನು ನೊಡು. ಅಯ್ಯೋ ಪಾಪೀ! ನನ್ನಣ್ಣನಾದರೋ ಬ್ರಾಹ್ಮಣನು! ವೇದಾಧ್ಯಯನಸಂಪನ್ನನು! ನಿನಗೆ ಆಚಾರ್ಯನು! ಆತ್ಮಜ್ಞನು! ಯಜ್ಞದೀಕ್ಷೆಯನ್ನು ಪಡೆದವನು. ಹೀಗೆ ಪರಮಸಾಧುವೆನಿಸಿದ ಆ ನನ್ನ ಸಹೋದರನು, ನಿರಪರಾಧಿಯಾಗಿದ್ದಾಗಲೂ, ನಿಷ್ಕರುಣನಾಗಿ ನೀನು ಅವನನ್ನು ನಂಬಿಸಿ, ಸ್ವರ್ಗಕಾಮನು ಯಜ್ಞಪಶುವನ್ನು ಕೊಲ್ಲುವಂತೆ ಅವನ ತಲೆಯನ್ನು ಕಡಿದೆಯಲ್ಲವೇ! ಅಯ್ಯೋ ನೀಚಾ! ನಿನ್ನಂತಹ ಪಾಪಾತ್ಮರು ಲೋಕದಲ್ಲಿ ಯಾರುಂಟು? ನೀನು ನಾಚಿಕೆಯಿಲ್ಲದವನು! ಭಾಗ್ಯಹೀನನು! ಲೋಕಾಪವಾದಕ್ಕೆ ಹೆದರದವನು! ದಯಾಶೂನ್ಯನು. ಗುರುಹತ್ಯಾರೂಪವಾದ ನಿನ್ನ ಕ್ರೂರಕೃತ್ಯಕ್ಕಾಗಿ ಭೂತಪ್ರೇತಪಿಶಾಚಗಳೂ ನಿನ್ನನ್ನು ನಿಂದಿಸದೆ ಬಿಡಲಾರವು! ಅಂತಹ ಪಾಪಿಯಾದ ನಿನ್ನನ್ನು ಇದೋ ಈ ಶೂಲದಿಂದ ಕತ್ತರಿಸಿ ಕೆಡಹುವೆನು ನೋಡು! ಎಲೆ ಪಾಪಿ! ಪವಿತ್ರವಾದ ಅಗ್ನಿಯೂಕೂಡ ನಿನ್ನ ಶರೀರವನ್ನು ಸುಡಲಾರದು. ಇದು ಹದ್ದು ಕಾಗೆಗಳಿಗೆ ಆಹಾರವಾಗಬೇಕಲ್ಲದೆ ಬೇರೆಯಲ್ಲ! ಕ್ರೂರನಾದ ನಿನ್ನನ್ನು ಹಿಂಬಾಲಿಸುವ ಈ ದೇವತೆಗಳೆಲ್ಲರನ್ನೂ ಇತ್ತಲಾಗಿ ಬರಹೇಳು! ಅವರು ಎಷ್ಟೇ ಶಸ್ತ್ರಾಸ್ತ್ರಗಳನ್ನು ಹೊತ್ತುಬಂದರೂ ಬರಲಿ! ಇದೋ ತೀಕ್ಷ್ಣವಾದ ಈ ಶೂಲ

ದಿಂದ ಅವರ ತಲೆಗಳನ್ನು ಕತ್ತರಿಸಿ, ಭೂತಗಳಿಗೆ ಬಲಿಯಿಕ್ಕುವೆನು. ಎಲೆ ದೇವೇಂದ್ರಾ! ನನ್ನ ಸಾವಿಗಾಗಿ ನಾನು ಹೆದರುವುದಿಲ್ಲ! ನೀನು ನಿನ್ನ ವಜ್ರಾಯುಧದಿಂದ ನನ್ನ ತಲೆಯನ್ನು ಭೇದಿಸಿದರೂ ನನಗೆ ಸಮ್ಮತವೇ! ಆಗ ನಾನು ನನ್ನ ದೇಹದಿಂದ ಭೂತಬಲಿಯನ್ನು ಮಾಡಿ, ಅದರಿಂದ ಕರ್ಮಬಂಧವನ್ನು ನೀಗಿ ಜ್ಞಾನಿಗಳು ಹೋಗತಕ್ಕ ಮಾರ್ಗವನ್ನನುಸರಿಸುವೆನು. ಇಂದ್ರಾ! ಏಕೆ ಸುಮ್ಮನಿರುವೆ! ನಿನ್ನ ವಜ್ರಾಯುಧವನ್ನು ಮುಂದೆ ನಿಂತಿರುವ ನನ್ನ ಮೇಲೆ ಏತಕ್ಕೋ ಸ್ಮರಿಸಿ ಪ್ರಯೋಗಿಸದಿರುವೆ? ಲೋಭಿಗಳಲ್ಲಿ ಮಾಡಿದ ಯಾಚನೆಯಂತೆ, ಹಿಂದೆ ನೀನು ಪ್ರಯೋಗಿಸಿದ ಗದೆಯು ವ್ಯರ್ಥವಾದುದಕ್ಕಾಗಿ, ವಜ್ರಾಯುಧವೂ ನಿಷ್ಫಲವಾಗುವುದೆಂದು ಸಂದೇಹ ಪಡುವೆಯೇನು! ಹಾಗೆ ಸಂದೇಹಪಡಬೇಡ! ಈ ನಿನ್ನ ವಜ್ರವು ಎಂದಿಗೂ ವ್ಯರ್ಥವಾಗಲಾರದು. ಇದು ಭಗವಂತನ ತೇಜಸ್ಸಿನಿಂದಲೂ, ದಧೀಚಿ ಮಹರ್ಷಿಯ ತಪೋಬಲದಿಂದಲೂ ಆವೇಶವನ್ನಿಸಿಕೊಂಡಿರುವುದು ಆದುದರಿಂದ ಧೈರ್ಯವಾಗಿ ಪ್ರಯೋಗಿಸು! ಸಾಕ್ಷಾನ್ನಾರಾಯಣನೇ ನಿನಗೆ ಆಜ್ಞಾಪಿಸಿಕಳುಹಿಸಿರುವನಲ್ಲವೇ? ಅದನ್ನು ನೆನೆಸಿಕೊಂಡು ನಿನ್ನ ಸಂದೇಹವನ್ನು ಬಿಟ್ಟು, ಆಯುಧವನ್ನು ನನ್ನ ಮೇಲೆ ಪ್ರಯೋಗಿಸು! ಆ ಭಗವಂತನುಯಾರಲ್ಲಿ ಅನುಗ್ರಹವನ್ನಿಡುವನೋ, ಅಲ್ಲಿ ಜಯವೂ, ರಾಜ್ಯಸಂಪತ್ತೂ, ಪ್ರಭುತ್ವಾದಿಗುಣಗಳೂ ತಪ್ಪದೆ ಉಂಟಾಗುವುವು. ಆದುದರಿಂದ ಇವೆಲ್ಲವೂ ಈಗ ನಿನಗೆ ಕೈಗೂಡಿಬರುವುದರಲ್ಲಿ ಸಂದೇಹವಿಲ್ಲ. ಇದಲ್ಲದೆ ಹಿಂದೆ ನನ್ನ ಗುರುವಾದ ಸಂಕರ್ಷಣಭಗವಂತನು ಈಗ ತನ್ನ ಪಾದಾರವಿಂದಗಳಲ್ಲಿ ಮನಸ್ಸನ್ನು ನೆಲೆಗೊಳಿಸುವಂತೆ ನನಗೂ ಉಪದೇಶಿಸಿರುವನು. ಅದರಂತೆ ಈಗ ನಾನು ವಿಷಯಾಭಿಲಾಷೆಯನ್ನು ಬಿಟ್ಟು ಆತನ ಪಾದಪದ್ಮಗಳನ್ನು ಧ್ಯಾನಿಸುತ್ತಿರುವೆನು. ಈಗ ನೀನು ನಿನ್ನ ವಜ್ರಾಯುಧದಿಂದ ನನ್ನನ್ನು ಭೇದಿಸಿದ ಪಕ್ಷದಲ್ಲಿ, ಇದರಿಂದ ನನ್ನ ಸಂಸಾರಬಂಧವು ನೀಗಿಹೋಗುವುದು! ನಾನು ರಾಕ್ಷಸನಾದರೂ ಮಹಾಯೋಗಿಗಳು ಹೊಂದತಕ್ಕ ಮೋಕ್ಷವನ್ನು ಹೊಂದುವೆನೇಹೊರತು ನರಕವನ್ನು ಹೊಂದಲಾರೆನು. ನನ್ನ ಪ್ರಭುವಾದ ಸಂಕರ್ಷಣ ಮೂರ್ತಿಯು, ಅನನ್ಯ ಪ್ರಯೋಜನರಾಗಿ ತನ್ನನ್ನು ಭಜಿಸತಕ್ಕ ಭಕ್ತರಿಗೆ, ಭೂಲೋಕದಲ್ಲಿ ಯಾಗಲೀ, ಸ್ವರ್ಗದಲ್ಲಿಯಾಗಲೀ, ಪಾತಾಳಾದಿಲೋಕಗಳಲ್ಲಿಯೂ ಆಗಲೀ ಅನುಭವಿಸತಕ್ಕ ಅಲ್ಪಭಾಗ್ಯಗಳೊಂದನ್ನೂ ಕೊಡದೆ ಮೋಕ್ಷವನ್ನೇ ಕೊಡುವನು. ಈ ಸಂಪತ್ತುಗಳೆಲ್ಲವೂ ನಶ್ವರಗಳಾದುದರಿಂದ, ಆಗಾಗ ಮನಸ್ಸಿಗೆ ಭಯವನ್ನೂ, ದುಃಖವನ್ನೂ, ಮದವನ್ನೂ, ದ್ವೇಷವನ್ನೂ, ರಾಗಾದಿಗಳನ್ನೂ ಉಂಟುಮಾಡುವುವು. ಇವೆಲ್ಲವೂ ಮೋಕ್ಷವಿರೋಧಿಗಳು!

ಆದುದರಿಂದ ಭಗವಂತನು, ತಾನು ಅನುಗ್ರಹಿಸಬೇಕೆಂದಿರುವ ಭಕ್ತರಿಗೆ ಮೊದಲು ಧರ್ಮಕಾಮಾರ್ಥಗಳೆಂಬ ತ್ರಿವರ್ಗಗಳ ಸಿಕ್ಕನ್ನು ತಪ್ಪಿಸುವನು.

ಆದುದರಿಂದ ಇಂದ್ರಾ! ಮೋಕ್ಷಕಾರಣವಾದ ಅಂತಹ ಭಗವದನುಗ್ರಹವು, ನಿಷ್ಕಾಮರಾದ ನನ್ನಂತಹ ಭಕ್ತರಿಗೆ ಲಭಿಸುವುದೇಹೊರತು ನಿನ್ನಂತವರಿಗೆ ಲಭಿಸಲಾರದು. ನಮ್ಮಂತವರಲ್ಲಿಯೇ ಭಗವಂತನು ಪ್ರಸನ್ನನಾಗುವನೇಹೊರತು, ಸ್ವರ್ಗಾಧಿವಿಷಯಸುಖಗಳಲ್ಲಿ ಆಸೆಯಿಟ್ಟಿರುವ ನಿನ್ನಂತವರಿಗೆ, ಎಂದಿಗೂ ಪ್ರಸನ್ನನಾಗಲಾರನು. ಆ ಭಗವದನುಗ್ರಹವನ್ನು ಸಂಪಾದಿಸಲಾರದವರಿಗೆ; ಸ್ಥಿರವಾದ ಮೋಕ್ಷವೂ ಲಭಿಸದು.” ಎಂದು ಹೇಳಿ, ತನ್ನಲ್ಲಿ ತಾನು ಆ ಭಗವಂತನನ್ನು ಭಕ್ತಿಯಿಂದ ಹೀಗೆಂದು ಧ್ಯಾನಿಸುವನು. “ಹೇ ನಾರಾಯಣಾ! ನಿನ್ನ ಪಾದಾಶ್ರಿತರಾದ ಭಕ್ತರಿಗೆ ನಾನು ದಾಸಾನುದಾಸನು. ನನ್ನ ಮನಸ್ಸು ಯಾವಾಗಲೂ ನಿನ್ನ ಗುಣಗಳನ್ನೇ ಸ್ಮರಿಸುತ್ತಿರಲಿ! ನನ್ನ ವಾಗಿಂದ್ರಿಯವು ಯಾವಾಗಲೂ ನಿನ್ನ ಗುಣಗಳನ್ನೇ ಕೊಂಡಾಡುತ್ತಿರಲಿ! ಈ ನನ್ನ ದೇಹವು ಯಾವಾಗಲೂ ನಿನ್ನ ಪಾದಸೇವೆಯಲ್ಲಿಯೇ ನಿರತವಾಗಿರಲಿ! ಓ ಪರಮಪುರುಷಾ! ಸಕಲಸೌಭಾಗ್ಯನಿಧಿಯಾದ ನಿನ್ನ ಪಾದಸಾನ್ನಿಧ್ಯವನ್ನು ಬಿಟ್ಟು, ನಾನು ವೈಕುಂಠವನ್ನಾಗಲೀ, ಬ್ರಹ್ಮಲೋಕವನ್ನಾಗಲೀ, ಚಕ್ರವರ್ತಿಪದವಿಯನ್ನಾಗಲೀ, ಪಾತಾಳಾದಿಲೋಕಾಧಿಪತ್ಯವನ್ನಾಗಲೀ, ಅಣಿಮಾದ್ಯಷ್ಟಸಿದ್ಧಿಗಳನ್ನಾಗಲೀ, ಪುನರ್ಜನ್ಮವಿಲ್ಲದಕೈವಲ್ಯವನ್ನಾಗಲೀ, ಅಪೇಕ್ಷಿಸತಕ್ಕವನಲ್ಲ. ಇನ್ನೂ ರೆಕ್ಕೆಹುಟ್ಟದ ಹಕ್ಕಿಯಮರಿಗಳು ತಮ್ಮ ತಾಯಿಯನ್ನೂ, ಹಸಿದಮಕ್ಕಳು ತಾಯಿಯ ಮೊಲೆಹಾಲನ್ನೂ, ವಿರಹಾತುರೆಯಾದ ನಾಯಿಕೆಯು ತನ್ನ ನಾಯಕನನ್ನೂ ಅತ್ಯಾತುರದಿಂದ ಇದಿರುನೋಡುವಂತೆ, ನನ್ನ ಮನಸ್ಸು ನಿನ್ನ ರೂಪವನ್ನು ನೋಡುವುದಕ್ಕಾಗಿ ತವಕಿಸುತ್ತಿರುವುದು. ಓ ವಾಸುದೇವಾ! ಇದುವರೆಗೆ ನಿನ್ನ ಮಾಯೆಯಿಂದ ಮೋಹಿತನಾಗಿ, ಕರ್ಮಗಳಲ್ಲಿ ಬಿದ್ದು, ಸಂಸಾರಚಕ್ರದಲ್ಲಿ ತೊಳಲುತ್ತ, ಹೆಂಡಿರು ಮಕ್ಕಳಲ್ಲಿಯೂ, ಮನೆಮಠಗಳಲ್ಲಿಯೂ, ಆಸೆಯಿಟ್ಟಿದ್ದ ನನಗೆ, ಇನ್ನು ಮೇಲಾದರೂ ಆ ವಿಷಯಾಸಕ್ತಿಯು ನೀಗಿ ನಿನ್ನ ಭಕ್ತರೊಡನೆ ಸಹವಾಸವು ಲಭಿಸುವಂತೆ ಅನುಗ್ರಹಿಸು.” ಎಂದು ಕೈಮುಗಿದು ಪ್ರಾರ್ಥಿಸುತ್ತಿದ್ದನು. ಇಲ್ಲಿಗೆ ಹನ್ನೊಂದನೆಯ ಅಧ್ಯಾಯವು.


———

## ವೃತ್ರವಧವು.

ಹೀಗೆ ವೃತ್ರಾಸುರನು ತನ್ನ ದೇಹವನ್ನು ತೊರೆಯುವುದಕ್ಕಾಗಿ ನಿಶ್ಚಯಿಸಿ ಕೊಂಡು, ಆ ಯುದ್ಧದಲ್ಲಿ ತನಗೆ ಜಯಕ್ಕಿಂತಲೂ ಮರಣವೇ ಮೇಲೆಂದು ಭಾವಿಸಿ, ಕೈಯಲ್ಲಿ ಶೂಲವನ್ನು ಗ್ರಹಿಸಿ, ಹಿಂದೆ ಪ್ರಳಯಕಾಲದಲ್ಲಿ ಕೈಟಭಾಸುರನು ಮಹಾ ವಿಷ್ಣುವನ್ನು ದಿರಿಸಿದಂತೆ ಇಂದ್ರನನ್ನಿದಿರಿಸಿ ಬಂದನು ಪ್ರಳಯಕಾಲಾಗ್ನಿಯ ಜ್ವಾಲೆಯಂತೆ ತೀಕ್ಷ್ಣವಾದ ಅಲಗುಳ್ಳ ಆ ಶೂಲವನ್ನು ಗಿರುಗಿರನೆ ತಿರುಗಿಸಿ, ಸಿಂಹನಾದವನ್ನು ಮಾಡುತ್ತ, "ಎಲಾ ಪಾಪಿ ಇದೋ ಇದರಿಂದ ನೀನು ಸತ್ತೆ" ಎಂದು ಆ ಇಂದ್ರನಮೇಲೆ ಬೀಸಿದನು. ಆಕಾಶದಲ್ಲಿ ತಿರುಗುತ್ತಿರುವ ಕೊಳ್ಳಿಯಂತೆ, ಕಣ್ಣಿಂದ ನೋಡಲಸಾಧ್ಯವಾದ ತೇಜಸ್ಸಿನಿಂದ ಜ್ವಲಿಸುತ್ತ, ತನಗಿದಿರಾಗಿ ಬರುತ್ತಿರುವ ಆ ಶೂಲವನ್ನು ನೋಡಿದಾಗಲೂ ಇಂದ್ರನು ಧೈರ್ಯಗುಂದದೆ, ನೂರಲಗುಳ್ಳ ತನ್ನ ವಜ್ರದಿಂದ ಆ ಶೂಲವನ್ನು ನಡುದಾರಿಯಲ್ಲಿಯೇ ಕತ್ತರಿಸಿ ಕೆಡಹಿದನು. ಮತ್ತು ಅದೇ ವಜ್ರಪ್ರಯೋಗದಿಂದ ಸರ್ಪದೇಹದಂತಿದ್ದ ಆ ವೃತ್ರನ ಬಲಭುಜವೂ ಕತ್ತರಿಸಿಬಿದ್ದಿತು. ಒಂದು ಭುಜವು ಕತ್ತರಿಸಿಬಿದ್ದರೂ ವೃತ್ರನು ಹಿಂತೆಗೆಯದೆ, ಅತಿಕ್ರುದ್ಧನಾಗಿ, ಬೇರೊಂದು ಪರಿಘವನ್ನು ಕೈಗೆತ್ತಿಕೊಂಡು, ವಜ್ರಧಾರಿಯಾಗಿ ನಿಂತಿದ್ದ ಇಂದ್ರನ ಸಮೀಪಕ್ಕೆ ಹೋಗಿ ಇಂದ್ರನ ಕಪಾಲಕ್ಕೂ ಆ ಐರಾವತದ ಕುಂಭಸ್ಥಳಕ್ಕೂ ಗುರಿಯಿಟ್ಟು ಬೀಸಿದನು. ಈ ಪ್ರಹಾರವೇಗದಿಂದ ಇಂದ್ರನ ಕೈಯಲ್ಲಿದ್ದ ವಜ್ರಾಯುಧವು ಜಾರಿಬಿತ್ತು. ಈ ಅದ್ಭುತಸಾಹಸವನ್ನು ನೋಡಿ ದೇವಾಸುರಸಿದ್ಧಚಾರಣರೆಲ್ಲರೂ ಆ ವೃತ್ರಾಸುರನ ವೀರ್ಯವನ್ನು ಶ್ಲಾಘಿಸುತ್ತ, ಇತ್ತಲಾಗಿ ಇಂದ್ರನ ದುಃಸ್ಥಿತಿಯನ್ನು ನೋಡಿ "ಹಾಹಾ" ಎಂದು ಕೂಗುತ್ತಿದ್ದರು. ಆಗ ದೇವೇಂದ್ರನು ತನ್ನ ಕೈಯಿಂದ ಜಾರಿಬಿದ್ದ ಆ ಆಯುಧವನ್ನು ತಿರುಗಿ ಕೈಗೆತ್ತಿಕೊಳ್ಳುವುದಕ್ಕೆ ನಾಚಿಕೆಪಟ್ಟು, ಶತ್ರುವಿನ ಮುಂದೆ ಸ್ವಲ್ಪಕಾಲದವರೆಗೆ ಸುಮ್ಮನೆ ನಿಂತಿದ್ದನು. ಆಗ ವೃತ್ರನು ಇಂದ್ರನನ್ನು ಕುರಿತು "ಇಂದ್ರಾ! ಇದು ವಿಷಾದಕ್ಕೆ ಕಾಲವಲ್ಲ! ಆಯುಧವನ್ನು ಕೈಗೆತ್ತಿಕೊಂಡು ಶತ್ರುವಾದ ನನ್ನನ್ನು ಕೊಲ್ಲು. ಯುದ್ಧಕ್ಕೆ ಬಂದು ನಿಂತಮೇಲೆ, ಯಾವಾಗಲೂ ಜಯವಾಗುವುದೆಂಬ ನಿಶ್ಚಯವಿಲ್ಲ. ಎಷ್ಟೇ ಪರಾಕ್ರಮಶಾಲಿಗಳಿಗೂ ಒಮ್ಮೊಮ್ಮೆ ಪರಾಜಯವುಂಟು. ಸಮಸ್ತ ಪ್ರಪಂಚವೂ ಪರಮಾತ್ಮನಿಗೆ ಸ್ವಾಧೀನವಾಗಿರುವುದು. ಆ ಭಗವಂತನೇ ಎಲ್ಲರಲ್ಲಿಯೂ ಅಂತರಾತ್ಮನಾಗಿದ್ದು, ಅವರವರ ಕರ್ಮಾನುಸಾರವಾಗಿ ಜಯಪರಾಜಯಗಳನ್ನುಂಟುಮಾಡುವನು. ಹೀಗಿರುವಾಗ ಯಾರೇನು ಮಾಡಬಲ್ಲರು? ಈಶ್ವರಾಧೀನವಾಗಿ ನಡೆಯತಕ್ಕ ಕಾರ್ಯಗಳಿಗೆ ನಾವು ಲಜ್ಜೆಪಡುವುದೇಕೆ? ಸೃಷ್ಟಿಸ್ಥಿತಿ

ಯಗಳಿಗೆ ಕಾರಣನಾಗಿಯೂ, ಸರ್ವಜ್ಞನಾಗಿಯೂ, ಇರುವ ಆ ಭಗವಂತನಿಗೊಬ್ಬನಿಗೆ ಹೊರತು, ಬೇರೆ ಯಾರಿಗೂ ಜಯವೆಂಬುದು ಸ್ಥಿರವಲ್ಲ. ಲೋಕಪಾಲರೊಡಗೂಡಿದ ಸಮಸ್ತಲೋಕಗಳೂ, ಹಗ್ಗದಲ್ಲಿ ಬಿಗಿದ ಹಕ್ಕಿಗಳಂತೆ, ಆತನ ವಶದಲ್ಲಿರುವುವು. ಆದುದರಿಂದ ಜಯಪರಾಜಯಗಳಿಗೆಲ್ಲಾ ಆತನೇ ಕಾರಣನು! ಜಯಾಪಜಯಗಳಿಗೆಮಾತ್ರವೇನು? ಯಾವುದಾದರೂ ಒಂದು ಕಾರ್ಯದಲ್ಲಿ ಪ್ರವೃತ್ತಿ, ಸಾಮರ್ಥ್ಯನಾಗಲೀ, ವೇಗವಾಗಲೀ, ಬಲವಾಗಲೀ, ಪ್ರಾಣವಾಗಲೀ ಮೋಕ್ಷವಾಗಲೀ, ಸಂಸಾರವಾಗಲೀ, ಯಾವುದು ಲಭಿಸಬೇಕಾದರೂ ಈಶ್ವರಾಜ್ಞೆಯಿಂದಲೇ ಲಭಿಸಬೇಕು. ಈ ತತ್ವವನ್ನು ತಿಳಿಯದ ಅನೇಕಮೂಢರು, ಜಯಾಪಜಯಗಳಿಗೆ ತಮ್ಮನ್ನೇ ಕಾರಣವೆಂದು ತಿಳಿಯುವರು. ಈ ಭ್ರಾಂತಿಗೆ ಅಜ್ಞತೆಯೇ ಕಾರಣವಲ್ಲದೆ ಬೇರೆಯಲ್ಲ. ಓ ಇಂದ್ರಾ! ಸಮಸ್ತಭೂತಗಳೂ ಮರದ ಬೊಂಬೆಯಂತೆಯೂ ಯಂತ್ರದಮೃಗಗಳಂತೆಯೂ ಆ ಈಶ್ವರನಿಗಧೀನವಾಗಿ ನಡೆಯುವುವು. ಪ್ರಕೃತಿ, ಪುರುಷ, ಮಹತ್ತು, ಅಹಂಕಾರ, ಪಂಚಭೂತಗಳು ಇಂದ್ರಿಯಗಳು, ಅಂತಃಕರಣ, ಈ ಮೊದಲಾದುವೆಲ್ಲವೂ ಪ್ರಪಂಚಕ್ಕೆ ಕಾರಣಗಳಂತೆ ತೋರಿದರೂ, ಆ ಒಂದೊಂದರಲ್ಲಿಯೂ ಭಗವಂತನು ಅಂತರ್ಯಾಮಿಯಾಗಿದ್ದು ಅನುಗ್ರಹಿಸಿದಹೊರತು, ಅವು ಸೃಷ್ಟ್ಯಾದಿಗಳನ್ನು ನಡೆಸುವುದಕ್ಕೆ ಸಮರ್ಥಗಳಲ್ಲ! ಹೆಚ್ಚೇಕೆ? ಚತುರ್ಮುಖನಾದರೂ ಭಗವದನುಗ್ರಹವಿಲ್ಲದೆ ಸೃಷ್ಟಿಕಾರ್ಯಕ್ಕೆ ಸಮರ್ಥನಾಗಲಿಲ್ಲ. ಹೀಗಿರುವಾಗಲೂ ಅಜ್ಞನಾದವನು, ತಾನು ಯಾವ ಕಾರ್ಯಕ್ಕೂ ಅಸಮರ್ಥನಾಗಿದ್ದರೂ, ತನ್ನನ್ನು ಸಮರ್ಥನೆಂದೇ ಭಾವಿಸುವನು. ಆ ಭಗವಂತನೇ ಭೂತಗಳ ಮೂಲಕವಾಗಿ ಭೂತಗಳನ್ನು ಸೃಷ್ಟಿಸುವನು. ಕೊನೆಗೆ ಅವುಗಳಿಂದಲೇ ಅವುಗಳನ್ನು ಕೊಲ್ಲಿಸುವನು. ಆಯುಸ್ಸು, ಲಕ್ಷ್ಮಿ, ಪ್ರಭುತ್ವ, ಕೀರ್ತಿ, ಮುಂತಾದುವೆಲ್ಲವೂ ಆ ಪರಮಪುರುಷನಿಗಧೀನವಾಗಿಯೇ ನಡೆಯುವುವು. ಇವೆಲ್ಲವೂ, ಆಯಾ ಕರ್ಮಗಳಿಗೆ ಫಲವಾಗಿ ಒಂದೊಂದು ಕಾಲದಲ್ಲಿ ಸಂಭವಿಸುವುವು. ದಾರಿದ್ರ್ಯ, ವ್ಯಾಧಿ, ಮರಣ, ಮುಂತಾದುವುಗಳು ಅಪೇಕ್ಷಿಸದಿದ್ದರೂ ಪ್ರಾಣಿಗಳಿಗೆ ಆಯಾ ಕಾಲದಲ್ಲಿ, ತಪ್ಪದೆ ಬರುವಂತೆ, ಈ ಆಯುಸ್ಸು ಮೊದಲಾದುವುಗಳೂ ಮನುಷ್ಯನ ಇಷ್ಟಾನಿಷ್ಟಗಳನ್ನು ನಿರೀಕ್ಷಿಸದೆ ಬಂದು ಸೇರುವುವು. ಆದುದರಿಂದ ಕೀರ್ತ್ಯಪಕೀರ್ತಿಗಳಿಗಾಗಲೀ, ಜಯಾಪಜಯಗಳಿಗಾಗಲೀ, ಭಗವದನುಗ್ರಹವೇ ಕಾರಣವು. ಆದುದರಿಂದ ಮನುಷ್ಯನು ಆಗಾಗ ಸಂಭವಿಸುವ ಸುಖದುಃಖಗಳಲ್ಲಿಯಾಗಲೀ, ಜೀವಿತಮರಣಗಳಲ್ಲಿಯಾಗಲೀ, ಮನಸ್ಸು ಕಲಗದೆ, ಸಮಬುದ್ಧಿಯಿಂದಿರಬೇಕು. ಸತ್ವ, ರಜಸ್ಸು, ತಮಸ್ಸುಗಳೆಂಬೀಮೂರು ಗುಣಗಳೂ ಪ್ರಕೃತಿಯಲ್ಲಿರತಕ್ಕವುಗಳೇ

ಹೊರತು, ಜೀವನಲ್ಲಿರತಕ್ಕವುಗಳಲ್ಲ. ಈ ಸತ್ವಾದಿಗಳ ಪರಿಣಾಮದಿಂದುಂಟಾದ ದೇಹದಲ್ಲಿ ತಾನು ಕೇವಲಸಾಕ್ಷೀಭೂತನಾಗಿರುವೆನೆಂದು ಯಾವನು ತಿಳಿದುಕೊಳ್ಳುವನೋ, ಅತನು ಸಂಸಾರದಲ್ಲಿ ಕಟ್ಟು ಬೀಳಲಾರನು. ಆದುದರಿಂದ ಇಂದ್ರಾ! ನೀನು ಲಜ್ಜೆಯನ್ನು ಬಿಟ್ಟು ವಿವೇಕವನ್ನು ತಂದುಕೊಂಡು ಯುದ್ಧಮಾಡು. ಯುದ್ಧಕ್ಕೆ ಭಯಪಡಬಾರದು. ಇದೋ ನನ್ನನ್ನು ನೋಡು! ನೀನು ಈಗ ಯುದ್ಧದಲ್ಲಿ ನನ್ನ ಒಂದು ತೋಳನ್ನು ಕತ್ತರಿಸಿರುವಾಗಲೂ, ನಾನು ಹಿಂಜರಿಯದೆ, ನಿನ್ನ ಪ್ರಾಣಗಳನ್ನು ತೆಗೆಯಬೇಕೆಂಬ ಹಟದಿಂದ ಶಕ್ತಿಯಿದ್ದಷ್ಟು ಹೋರಾಡುತ್ತಿರುವನಲ್ಲವೇ? ದೇವೇಂದ್ರಾ! ಈ ಯುದ್ಧವೆಂಬುದನ್ನೂ ಒಂದು ಜೂಜಾಟವೆಂದು ತಿಳಿ! ಈ ಜೂಜಿನಲ್ಲಿ ನಮ್ಮ ಪ್ರಾಣಗಳೇ ಒತ್ತೆಯಿಟ್ಟ ಹಣವು! ಆನೆ ಕುದುರೆ ಮುಂತಾದ ಚತುರಂಗಸೈನ್ಯಗಳೇ ಆಟದ ಹಲಗೆ! ಬಾಣಗಳೇ! ದಾಳಗಳು! ಈ ಜೂಜಿನಲ್ಲಿ ಯಾರಿಗೆ ಜಯವೋ ಯಾರಿಗೆ ಪರಾಜಯವೋ ಇದನ್ನು ಯಾರೂ ನಿರ್ಣಯಿಸಿ ತಿಳಿಯಲಾರರು! ಆದರೆ ಒಂದನ್ನು ಮಾತ್ರ ಹೇಳಬಹುದು. ನಿನಗೆ ಭಗವತ್ಸಾಹಾಯವಿರುವುದರಿಂದ, ಕೊನೆಗೆ ನೀನೇ ಜಯಿಸಬಹುದೆಂದು ನನ್ನ ಮನಸ್ಸಿಗೆ ನಿಶ್ಚಯವಿರುವುದು. ಆದುದರಿಂದ ಹೆದರದೆ ಯುದ್ಧಮಾಡು" ಎಂದನು. ವೃತ್ರನ ನಿಷ್ಕಪಟವಾದ ಈ ಮಾತನ್ನು ಕೇಳಿ ದೇವೇಂದ್ರನು, ಮನಸ್ಸಿನಲ್ಲಿ ಮೆಚ್ಚಿ ನಗುತ್ತ ಕೆಳಗೆಬಿದ್ದ ವಜ್ರಾಯುಧವನ್ನು ಕೈಗೆತ್ತಿಕೊಂಡು "ಓ ದಾನವೇಂದ್ರಾ! ನಿನಗೆ ಈ ವಿಧವಾದ ಸದ್ಬುದ್ಧಿಯು ಹುಟ್ಟಿರುವುದನ್ನು ನೋಡಿದರೆ ನೀನೇ ಧನ್ಯನೆಂದೆಣಿಸುವೆನು. ಈಗ ನಿನ್ನ ಪುಣ್ಯವು ಸಿದ್ಧಿಸಿತು. ಸರ್ವವಿಧದಿಂದಲೂ ನಿನಗೆ ಪ್ರಿಯನಾಗಿಯೂ, ಅಂತರಾತ್ಮನಾಗಿಯೂ ಇರುವ ಭಗವಂತನನ್ನು ಸೇವಿಸಿ ಲೋಕಮೋಹಕವಾದ ವಿಷ್ಣುಮಾಯೆಯನ್ನೂ ನೀನು ಜಯಿಸಿದೆ! ನಿನಗಿದ್ದ ರಾಕ್ಷಸಸ್ವಭಾವವು ಬಿಟ್ಟುಹೋಗಿ ಈಗ ನೀನು ಕೇವಲ ಸಾತ್ವಿಕನಾದ ಮಹಾಪುರುಷನೆನಿಸಿಕೊಂಡೆ! ಕೇವಲ ರಾಜಸಸ್ವಭಾವವುಳ್ಳ ನಿನಗೆ ಆ ವಾಸುದೇವನಲ್ಲಿ ದೃಢಭಕ್ತಿಯುಂಟಾದುದಲ್ಲವೇ ಆಶ್ಚರ್ಯವು! ಮೋಕ್ಷಾಧೀಶ್ವರನಾದ ಆ ಭಗವಂತನಲ್ಲಿ ಭಕ್ತಿಯಿಟ್ಟು, ಆದರಿಂದ ಬ್ರಹ್ಮಾನಂದಸಮುದ್ರದಲ್ಲಿ ವಿಹರಿಸುವ ನಿನ್ನಂತವರು, ಕಾಲುವೆಯ ನೀರಿನಂತೆ ಅತ್ಯಲ್ಪವಾದ ಇತರಸುಖಗಳನ್ನು ಕಣ್ಣೆತ್ತಿಯೂ ನೋಡಲಾರರು" ಎಂದನು. ಓ ಪರೀಕ್ಷಿದ್ರಾಜಾ! ಹೀಗೆ ಇಂದ್ರವೃತ್ರರಿಬ್ಬರೂ ಧರ್ಮವಿಚಾರವನ್ನು ಮಾಡುತ್ತಿದ್ದು, ಕೊನೆಗೆ ತಮ್ಮ ವೀರ್ಯವನ್ನು ತೋರಿಸಿ ಯುದ್ಧಮಾಡತೊಡಗಿದರು. ವೃತ್ರನು ಭಯಂಕರವಾದ ಒಂದು ಉಕ್ಕಿನ ಪರಿಘವನ್ನು ತೆಗೆದು, ಎಡಗೈಯಿಂದಲೇ ಅದನ್ನು ಇಂದ್ರನಮೇಲೆ ಬೀಸಿದನು. ಆ ಕ್ಷಣವೇ ಇಂದ್ರನು ಆ ಪರಿಘವನ್ನೂ, ವೃತ್ರಾಸುರನ ಎಡದ ಭುಜವನ್ನೂ



225. ಇಂದ್ರನು ವೃತ್ರಾಸುರನನ್ನು ವಧಿಸಿದುದು.

ಏಕಕಾಲದಲ್ಲಿ ತನ್ನ ವಜ್ರಾಯುಧದಿಂದ ಕತ್ತರಿಸಿ ಕೆಡಹಿದನು. ವೃತ್ರನ ಎರಡು ತೋಳುಗಳೂ ಬಿದ್ದುಹೋದುವು. ಉಭಯಪಾರ್ಶ್ವಗಳಲ್ಲಿಯೂ ಆತನ ಬಾಹುಮೂಲದಿಂದ ರಕ್ತವು ಸ್ರವಿಸುತಿತ್ತು. ವಜ್ರಪ್ರಹಾರದಿಂದ ರೆಕ್ಕೆಮುರಿದು ಬಿದ್ದ ಪರ್ವತದಂತೆ ನಿಂತಿದ್ದನು. ಆಗಲೂ ಹೆದರದೆ, ಆ ರಾಕ್ಷಸನು, ಕೆಳಗೆ ಭೂಮಿಯನ್ನೂ, ಮೇಲೆ ಅಂತರಿಕ್ಷವನ್ನೂ ಮುಟ್ಟುವಂತೆ ದೊಡ್ಡದಾಗಿ ಬಾಯನ್ನಗಲಿಸಿ, ಸರ್ಪದಂತಿರುವ ಭಯಂಕರವಾದ ನಾಲಗೆಯನ್ನು ನೀಡಿ, ಮೃತ್ಯುಸಮೂನಗಳಾದ ಕೋರೆಹಲ್ಲುಗಳನ್ನು ತೋರಿಸುತ್ತ ಮೂರುಲೋಕವನ್ನೂ ನುಂಗುವಂತೆ ಮುಂದೆ ಬಂದನು. ಜಂಗಮ ಪರ್ವತದಂತೆ ಮಹಾಕಾಯವುಳ್ಳ ಆ ರಾಕ್ಷಸನು, ನಡೆದುಬರುವಾಗ ತನ್ನ ನಡೆಯಿಂದ ಭೂಮಿಯನ್ನು ಭೇದಿಸಿ ಚೂರ್ಣಮಾಡುತ್ತ, ಅತ್ತಿತ್ತ ಕಾಣುವ ಪರ್ವತಗಳನ್ನೆತ್ತಿ ಬೀಸುತ್ತ ಬಂದು, ವಾಹನವಾದ ಐರಾವತದೊಡನೆ ಇಂದ್ರನನ್ನು ಹಿಡಿದೆತ್ತಿ, ಒಂದೇ ತುತ್ತಾಗಿ ನುಂಗಿಬಿಟ್ಟನು. ಮಹಾಸರ್ಪದಿಂದ ನುಂಗಲ್ಪಟ್ಟ ಆನೆಯಂತೆ ದೇವೇಂದ್ರನು ವೃತ್ರನ ಬಾಯಿಗೆತುತ್ತಾದುದನ್ನು ಕಂಡು ಅಲ್ಲಿದ್ದ ದೇವತೆಗಳೂ, ಮಹರ್ಷಿಗಳೂ, ಪ್ರಜಾಪತಿಗಳೂ "ಅಯ್ಯೋ ಇದೇನ ನರ್ಥವು!" ಎಂದು ಕೂಗಿ ಹಾಹಾಕಾರವನ್ನು ಮಾಡುತ್ತಿದ್ದರು. ಇಂದ್ರನುವೃತ್ರನ ಗರ್ಭದಲ್ಲಿ ಪ್ರವೇಶಿಸಿದ್ದರೂ, ಭಗವಂತನ ಮಾಯಾಬಲದಿಂದಲೂ, ನಾರಾಯಣ ಕವಚವೆಂಬ ಮಂತ್ರದ ಸಿದ್ಧಿಯಿಂದಲೂ ರಕ್ಷಿತನಾಗಿ ತನ್ನ ವಜ್ರದಿಂದ ಆ ವೃತ್ರನ ಹೊಟ್ಟೆಯನ್ನು ಸೀಳಿಕೊಂಡು, ಹೊರಗೆಬಂದು, ಅದೇ ವಜ್ರದಿಂದ ಪರ್ವತ ಶಿಖರವನ್ನು ಭೇದಿಸುವಂತೆ ವೃತ್ರನ ಕಲೆಯನ್ನೂ ಕತ್ತರಿಸಿ ಕೆಡಹಿದನು. ಓ ಪರೀಕ್ಷಿದ್ರಾಜಾ! ತೀಕ್ಷ್ಣವಾದ ಅಲಗುಳ್ಳ ಆ ವಜ್ರವು ವೃತ್ರನ ಕಂಠಭಾಗವನ್ನು ಸುತ್ತಿ ಸುತ್ತಿ ಕತ್ತರಿಸುತ್ತ ಬಂದರೂ, ಅವನ ತಲೆಯು ಕೆಳಗೆ ಬೀಳುವುದಕ್ಕೆ ಒಂದು ಸಂವತ್ಸರಕಾಲವು ಹಿಡಿಯಿತು. ವೃತ್ರನ ತಲೆಯು ಕೆಳಗೆ ಬಿದ್ದೊಡನೆ, ಆಕಾಶದಿಂದ ಪುಷ್ಪವೃಷ್ಟಿಯು ಸುರಿಯಿತು! ದೇವದುಂದುಭಿಗಳು ಮೊಳಗಿದುವು! ಸಿದ್ಧಗಂಧರ್ವಾದಿಗಳೆಲ್ಲರೂ ಸಂತೋಷಧ್ವನಿಗಳನ್ನು ಮಾಡುತ್ತಿದ್ದರು. ಮಹರ್ಷಿಗಳೆಲ್ಲರೂ ವೃತ್ರಸಂಹಾರಿಯಾದ ದೇವೇಂದ್ರನ ವೀರ್ಯವನ್ನು ಪ್ರಕಾಶಗೊಳಿಸತಕ್ಕ ಮಂತ್ರಗಳಿಂದ ಆತನನ್ನು ಸ್ತುತಿಸುತ್ತಿದ್ದರು. ವೃತ್ರನ ಶರೀರವು ಕೆಳಗೆ ಬಿದ್ದೊಡನೆ, ಅದರಿಂದ ಒಂದು ತೇಜಸ್ಸು, ಹೊರಟು, ಎಲ್ಲರೂ ನೋಡುತ್ತಿದ್ದ ಹಾಗೆಯೇ ಅಂತರಿಕ್ಷಮಾರ್ಗವಾಗಿ ವೈಕುಂಠವನ್ನು ಸೇರಿತು. ಇಲ್ಲಿಗೆ ಹನ್ನೆರಡನೆಯ ಅಧ್ಯಾಯವು.

---

ಕೊಂದ ಪಾಪವು ಬಿಟ್ಟುಹೋಗುವುದರಲ್ಲಿ ಸಂದೇಹವೇನಿದೆ ?" ಎಂದರು. ಹೀಗೆ ಬ್ರಾಹ್ಮಣರೆಲ್ಲರೂ ಪ್ರೋತ್ಸಾಹಿಸಿದುದರಿಂದ ಇಂದ್ರನು ಮನಸ್ಸಿನ ಶಂಕೆಯನ್ನು ಬಿಟ್ಟು ವೃತ್ರನನ್ನು ಸಂಹರಿಸಿದನು. ಒಡನೆಯೇ ಬ್ರಹ್ಮಹತ್ಯಾಪಾತಕವು ಇಂದ್ರನನ್ನು ಸುತ್ತಿಕೊಂಡಿತು. ಅದರ ತಾಪವನ್ನು ಸಹಿಸಲಾರದೆ ದೇವೇಂದ್ರನು ಬಹಳವಾಗಿ ದುಃಖಿಸುತ್ತಿದ್ದನು. ಲಜ್ಜೆಗೂ, ಲೋಕಾಪವಾದಕ್ಕೂ ಒಳಗಾದವನು, ಎಷ್ಟೇ ಧೈರ್ಯಶಾಲಿಯಾಗಿದ್ದರೂ, ಅವನಲ್ಲಿ ಎಷ್ಟೇ ಗುಣಗಳಿದ್ದರೂ ಅವ್ಯೋಂದೂ ಅವನ ಮನಸ್ಸಿಗೆ ನೆಮ್ಮದಿಯನ್ನುಂಟುಮಾಡಲಾರವು. ಬ್ರಹ್ಮಹತ್ಯೆಯು ಚಂಡಾಲಸ್ತ್ರೀಯಂತೆ ಇಂದ್ರನಮುಂದೆ ಬಂದು ನಿಂತಿತು. ಆಕೆಗಾದರೋ ಮುಪ್ಪಿನಿಂದ ನಡುಗುವ ಮೈ! ಕ್ಷಯರೋಗವುಳ್ಳವಳಂತೆ ಕೃಶವಾದ ಅಂಗಗಳು! ರಕ್ತದಂತೆ ಕೆಂಪಾದ ಜಟೆಗಳು! ಕೊಳೆತ ಮೀನಿನಂತೆ ದುರ್ಗಂಧವನ್ನು ಹೊರಡಿಸುವ ಉಸುರಿನ ಗಾಳಿ! ಇದರಿಂದ ಅವಳು ಸಂಚಾರಮಾಡತಕ್ಕ ಮಾರ್ಗಗಳೆಲ್ಲವೂ ಅಸಹ್ಯವಾದ ದುರ್ಗಂಧದಿಂದ ತುಂಬಿ ಹೋಗುತ್ತಿತ್ತು. ಇಂತಹ ಘೋರರೂಪವುಳ್ಳ ಸ್ತ್ರೀವ್ಯಕ್ತಿಯು ಕೆದರಿದ ತಲೆಯೊಡನೆ ಇಂದ್ರನನ್ನಡ್ಡಗಟ್ಟಿ 'ಎಲಾನಿಲ್ಲು! ನಿಲ್ಲು!" ಎಂದುಕೂಗಿಹೇಳುತ್ತಿತ್ತು. ಆ ಘೋರಾಕೃತಿಯನ್ನು ನೋಡಿದೊಡನೆ, ಇಂದ್ರನು ನಾನಾದಿಕ್ಕುಗಳಿಗೂ ಓಡಲಾರಂಭಿಸಿದನು. ಎಲ್ಲಿ ಹೋದರೂ ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ಹೋಯಿತು. ಕೊನೆಗೆ ಈಶಾನ್ಯ ದಿಕ್ಕಿಗೆತಿರುಗಿ, ಅಲ್ಲಿ ಮಾನಸಸರೋವರದಲ್ಲಿ ಪ್ರವೇಶಿಸಿ, ಅದರಲ್ಲಿದ್ದ ಒಂದಾನೊಂದು ತಾವರೆಯ ದಂಟಿನಲ್ಲಿ ಸೂಕ್ಷ್ಮರೂಪದಿಂದ ಮರೆಯಿಕೊಂಡನು. ತನಗೆ ಆಗಾಗ ಹವಿಸ್ಸನ್ನು ತಂದುಕೊಡುತ್ತಿದ್ದ ಅಗ್ನಿಗೆ ನೀರಿನಲ್ಲಿ ಪ್ರವೇಶವಿಲ್ಲದುದರಿಂದ, ಸಹಸ್ರಸಂವತ್ಸರಗಳವರೆಗೆ ಅನ್ನಾಹಾರಗಳೂ ಇಲ್ಲದೆ ತಲ್ಲಿಯೇ ಅವಿತುಕೊಂಡಿದ್ದು, ಅನವರತವೂ ತನ್ನ ಪಾಪನಿವೃತ್ತಿಗೆ ಉಪಾಯವೇನೆಂದು ಚಿಂತಿಸುತ್ತಿದ್ದನು. ಈ ಸಮಯದಲ್ಲಿ ಇತ್ತಲಾಗಿ ಸ್ವರ್ಗಲೋಕವು ಅನಾಯಕವಾದುದರಿಂದ, ವಿಸ್ಮೃ, ತಪಸ್ಸು, ಯೋಗ, ಮುಂತಾದುವುಗಳಲ್ಲಿ ನಿಪ್ರಣನಾದ ನಹುಷನು ಆ ಸ್ವರ್ಗಾಧಿಪತ್ಯವನ್ನು ನಡೆಸುತ್ತಿದ್ದನು. ಇದರಲ್ಲಿ ನಹುಷನಿಗೆ ಬೇಕಾದ ಭೋಗ್ಯವಸ್ತುಗಳೂ, ಭೋಗೋಪಕರಣಗಳೂ, ಸಮೃದ್ಧವಾಗಿ ಸಿಕ್ಕುತ್ತಿದ್ದುದರಿಂದ, ಅವನಿಗೂ ಕ್ರಮಕ್ರಮವಾಗಿ ಅಹಂಕಾರವೂ, ಮದವೂ, ಹೆಮ್ಮೆಯೂ ಹೆಚ್ಚಿ ಹೋಯಿತು. ಈ ಐಶ್ವರ್ಯಮದದಿಂದ ನಹುಷನು ವಿವೇಕಶೂನ್ಯನಾಗಿ, ಇಂದ್ರಪತ್ನಿಯಾದ ಶಚೀದೇವಿಯಲ್ಲಿ ಕಣ್ಣಿಟ್ಟನು. ಈ ಅಕೃತ್ಯದಿಂದ ಅವನ ಐಶ್ವರ್ಯವೆಲ್ಲವೂ ನಷ್ಟವಾಗಿ, ಋಷಿಗಳ ಶಾಪದಿಂದ ಸರ್ಪಜನ್ಮವನ್ನು ಹೊಂದಿ ಭೂಮಿಯಲ್ಲಿ ಜನಿಸಿ

## ಬ್ರಹ್ಮಹತ್ಯೆಗೆ ಭಯಪಟ್ಟು, ಇಂದ್ರನು ಮಾನಸಸರೋವರದಲ್ಲಿ ಅವಿತುಕೊಂಡುದು.

"ರಾಜೇಂದ್ರಾ! ಕೇಳು! ವೃತ್ರನು ಹತನಾದುದರಿಂದ, ಸಮಸ್ತಲೋಕಗಳೂ, ಲೋಕಪಾಲಕರೂ, ಮನೋವ್ಯಥೆಯನ್ನು ಬಿಟ್ಟು ನಿರ್ಭಯರಾಗಿ ಸಂತೋಷದಿಂದಿದ್ದರು. ಇಂದ್ರನಿಗೆಮಾತ್ರ ಮನಸ್ಸಿನಲ್ಲಿ ಸಂತೋಷವಿರಲಿಲ್ಲ. ಈ ವೃತ್ರವಧವಾದವೇಲೆ, ದೇವತೆಗಳು, ಋಷಿಗಳು, ಪಿತೃಗಳು, ಭೂತಗಳು ದೈತ್ಯರು ಮೊದಲಾಗಿ ಬ್ರಹ್ಮರುದ್ರೇಂದ್ರಾದಿಗಳೆಲ್ಲರೂ ತಮ್ಮತಮ್ಮ ಸ್ಥಾನಕ್ಕೆ ಸೇರಿ ಸುಖದಿಂದಿದ್ದರು" ಎಂದನು. ಈ ನಡುವೆ ಪರೀಕ್ಷಿದ್ರಾಜನು ಶುಕಮುನಿಯನ್ನು ಕುರಿತು "ಓ ಮಹರ್ಷೀ! ಸಮಸ್ತದೇವತೆಗಳಿಗೂ ವೃತ್ರವಧದಿಂದ ಸಂತೋಷವುಂಟಾದಾಗ, ಇಂದ್ರನಿಗೆಮಾತ್ರ ಸಂತೋಷವಿಲ್ಲದಿದಕ್ಕೆ ಕಾರಣವೇನು?" ಎಂದನು. ಅದಕ್ಕಾ ಶುಕಮುನಿಗಳು "ರಾಜೇಂದ್ರಾ ಕೇಳು! ಮೊದಲು ವೃತ್ರಾಸುರನ ಬಾಧೆಗೆ ಭಯಪಟ್ಟು ಮಹರ್ಷಿಗಳೂದೇವತೆಗಳೂಇಂದ್ರನಬಳಿಗೆ ಬಂದ ಆವೃತ್ರನನ್ನು ಹೇಗಾದರೂ ಕೊಲ್ಲಬೇಕೆಂದು ಪ್ರೇರಿಸಿದರು. ಇಂದ್ರನಾದರೋ ಬ್ರಹ್ಮಹತ್ಯೆಗಾಗಿ ಭಯಪಟ್ಟು, "ಎಲ್ಲ ದೇವರ್ಷಿಗಳಿರಾ! ಮೊದಲು ವಿಶ್ವರೂಪನನ್ನು ಕೊಂದಾಗಲೇ ಬ್ರಹ್ಮಹತ್ಯೆಯು ನನ್ನನ್ನು ಬಹಳವಾಗಿ ಬಾಧಿಸಿತು. ಆ ಪಾಪವನ್ನು ಸ್ತ್ರೀಯರಿಗೂ, ಭೂಮಿಗೂ, ಜಲಕ್ಕೂ, ವೃಕ್ಷಗಳಿಗೂ ಹಂಚಿಕೊಟ್ಟು ಆದರಿಂದ ನಿವೃತ್ತನಾದೆನು. ತಿರುಗಿ ಮತ್ತೊಂದು ಬ್ರಹ್ಮಹತ್ಯೆಯನ್ನು ಕಟ್ಟಿಕೊಂಡರೆ, ಆ ಪಾಪದಿಂದ ನಾನು ಮುಕ್ತನಾಗುವುದು ಹೇಗೆ" ಎಂದನು. ಅದಕ್ಕಾ ಋಷಿಗಳು "ಎಲ್ಲೆ ದೇವೇಂದ್ರನೇ! ಭಯಪಡಬೇಡ! ನಿನ್ನಿಂದ ಅಶ್ವಮೇಧವನ್ನು ಮಾಡಿಸಿ ಆ ಪಾಪವನ್ನು ನೀಗಿಸಬಲ್ಲೆವು. ಆದರಿಂದ ನಿನಗೆ ಕ್ಷೇಮವುಂಟು. ಆ ಅಶ್ವಮೇಧಯಾಗದಿಂದ ಪರಮಪುರುಷನಾದ ಶ್ರೀಮನ್ನಾರಾಯಣನನ್ನು ಆರಾಧಿಸಿದಪಕ್ಷದಲ್ಲಿ, ನೀನು ಪಾಪವಿಮುಕ್ತನಾಗುವೆ? ಬ್ರಹ್ಮಹತ್ಯೆಯೊಂದುಮಾತ್ರವೇ ಅಲ್ಲ! ತ್ರಿಲೋಕ್ಯವನ್ನು ಕೊಂದ ಪಾಪವೂಕೂಡ ಅದರಿಂದ ನೀಗುವುದು. ಆ ಭಗವಂತನನ್ನು ಭಕ್ತಿಯಿಂದ ಕೀರ್ತಿಸಿದಮಾತ್ರಕ್ಕೆ, ಬ್ರಹ್ಮಹತ್ಯೆ, ಗೋಹತ್ಯೆ, ಮಾತೃಹತ್ಯೆ, ಗುರುಹತ್ಯೆ, ಮುಂತಾದ ಘೋರಪಾತಕಗಳನ್ನು ಮಾಡಿದ್ದರೂ, ಶ್ವಪಚನಾಗಿದ್ದರೂ, ಪುಲ್ಕಸವೆಂಬ ಪಾಪಜಾತಿಯಲ್ಲಿ ಹುಟ್ಟಿದರೂಕೂಡ, ಅಯಾಪಾಪಗಳಿಂದ ಮುಕ್ತನಾಗಿಶುದ್ಧಿಯನ್ನು ಹೊಂದುವನು. ನಾವು ಹೇಳುವಕ್ರಮದಲ್ಲಿ ನೀನು ಶ್ರದ್ಧೆಯಿಂದ ಅಶ್ವಮೇಧವೆಂಬ ಮಹಾಯಜ್ಞವನ್ನು ನಡೆಸಿದಪಕ್ಷದಲ್ಲಿ, ಬ್ರಹ್ಮಾತ್ಮಕವಾದ ಸಮಸ್ತಪ್ರಪಂಚವನ್ನೂ ಕೊಂದ ಪಾಪವೇ ನೀಗುವಾಗ, ಲೋಕಕಂಟಕನಾದ ಆ ವೃತ್ರನನ್ನು

ದನು. ಇತ್ತಲಾಗಿ ಇಂದ್ರನು ಬಹುಕಾಲದವರೆಗೆ ಕಮಲನಾಳದಲ್ಲಿಯೇ ಅಡಗಿದ್ದು, ಕೊನೆಗೆ ಬ್ರಾಹ್ಮಣರಮಾತನ್ನು ಸ್ಮರಿಸಿಕೊಂಡು, ಭಗವಂತನನ್ನು ಧ್ಯಾನಿಸತೊಡಗಿದನು. ಹೀಗೆ ಬಹುಕಾಲದವರೆಗೆ ಧ್ಯಾನಮಾಡಿದಮೇಲೆ, ಆ ಮಾನಸಸರೋವರದ ಕಮಲದಲ್ಲಿ ವಿಹರಿಸುತ್ತಿದ್ದ ಲಕ್ಷ್ಮೀದೇವಿಯು, ಇಂದ್ರನ ಭಕ್ತಿಗೆ ಮೆಚ್ಚಿ, ಅವನಿಗೆ ಬ್ರಹ್ಮಹತ್ಯೆಯಿಂದುಂಟಾದ ಭಯವನ್ನು ತಪ್ಪಿಸಿದಳು. ಈ ಲಕ್ಷ್ಮಿಯ ಅನುಗ್ರಹದಿಂದ ದೇವೇಂದ್ರನು, ನಿರ್ಭಯನಾಗಿ ತಿರುಗಿ ತನ್ನ ಲೋಕಕ್ಕೆ ಬಂದು ಸೇರಿದನು. ಆಮೇಲೆ ಋಷಿಗಳೆಲ್ಲರೂ ಅವನಿಗೆ ದೀಕ್ಷೆಯನ್ನು ಕೊಟ್ಟು, ಅಶ್ವಮೇಧಯಾಗವನ್ನು ಯಥೋಕ್ತವಾಗಿ ನಡೆಸಿದರು. ಮಹರ್ಷಿಗಳೇ ಋತ್ವಿಕ್ಕುಗಳಾಗಿ ಕಾರ್ಯಗಳನ್ನು ನಡೆಸುತ್ತಿದ್ದರು. ಇಂದ್ರನು ಆ ಯಾಗದಲ್ಲಿ ಬಹಳ ಶ್ರದ್ಧಾಪೂರ್ವಕವಾಗಿ ಪರಮಪುರುಷನನ್ನಾರಾಧಿಸಿದನು. ಅವನ ಪಾಪವು ಮುಹೂರ್ತಾಗಿದ್ದರೂ, ಸೂರ್ಯೋದಯದಿಂದ ಮಂಜು ಹೇಗೋಹಾಗೆ ಅದರಿಂದ ನಿಶ್ಶೇಷವಾಗಿ ನೀಗಿತು. ಇಂದ್ರನು ಸ್ವರ್ಗರಾಜ್ಯವನ್ನು ಹೊಂದಿ ಸುಖದಿಂದಿದ್ದನು. ಓ ರಾಜೇಂದ್ರಾ! ಸಮಸ್ತಪಾಪನಿವಾರಕವಾಗಿಯೂ, ಭಗವಚ್ಚರಿತ್ರವನ್ನೊಳಕೊಂಡುದಾಗಿಯೂ, ಭಕ್ತಿವರ್ಧಕವಾಗಿಯೂ, ಭಗವದ್ಭಕ್ತರ ಗುಣಗಳನ್ನು ಸೂಚಿಸತಕ್ಕುದಾಗಿಯೂ, ಇರುವ ಈ ಉಪಾಖ್ಯಾನವು ಬಹಳಮಹಿಮೆಯುಳ್ಳದು. ಇಂದ್ರನ ಜಯವನ್ನೂ, ಅತನ ಪಾಪವಿಮೋಚನವನ್ನೂ ತಿಳಿಸತಕ್ಕ ಈ ಕಥೆಯನ್ನು ಒಂದೊಂದು ಪರ್ವಕಾಲದಲ್ಲಿಯೂ, ಯಾರು ಪಠಿಸುವರೋ ಅಂತವರಿಗೆ ಐಶ್ವರ್ಯವೂ, ಯಶಸ್ಸೂ, ಜಯವೂ, ಆಯುಸ್ಸೂ ಸಮಸ್ತಮಂಗಳಗಳೂ ಕೈಗೂಡಿಬರುವುವು. ಅಂತವರು ಸರ್ವಪಾಪಗಳಿಂದಲೂ ಮುಕ್ತರಾಗುವರು'' ಎಂದನು. ಇದು ಹದಿಮೂರನೆಯ ಅಧ್ಯಾಯವು.

---

## ಚಿತ್ರಕೇತೂಪಾಖ್ಯಾನವು.

ತಿರುಗಿ ರಾಜನು ಶುಕನನ್ನು ಕುರಿತು. "ಓ ಮುನೀಂದ್ರಾ! ಈನಡುವೆ ನಾನೊಂದು ಸಂದೇಹವನ್ನು ಕೇಳಬೇಕಾಗಿರುವುದು. ವೃತ್ರಾಸುರನಾದರೋ ಮಹಾಪಾಪಿಯು! ಕೇವಲ ತಮೋಗುಣದಿಂದಲೂ, ರಜೋಗುಣದಿಂದಲೂ ತುಂಬಿದ ಸ್ವಭಾವವುಳ್ಳವನು! ಇಂತವನು ಇಂದ್ರನೊಡನೆ ಯುದ್ಧಕ್ಕೆ ನಿಂತಿದ್ದಾಗ, ಆವನಿಗೆ ಏಕಸ್ಮಾತ್ತಾಗಿ ಶ್ರೀಮನ್ನಾರಾಯಣನಲ್ಲಿ ಭಕ್ತಿಯು ಹುಟ್ಟಿದುದು ಹೇಗೆ? ಕೇವಲ ಸತ್ವಗುಣವುಳ್ಳ ದೇವತೆಗಳಿಗಾಗಲೀ. ಶುದ್ಧಮನಸ್ಸುಳ್ಳ ಮಹರ್ಷಿಗಳಿಗಾಗಲೀ, ಪ್ರಾಯಕವಾಗಿ ಭಗವಂತನಲ್ಲಿ ಭಕ್ತಿಯು ಹುಟ್ಟುವುದೇ ಕಷ್ಟವು. ನೆಲದಲ್ಲಿರುವ ರೇಣುಗಳಂತೆ ಈ ಪ್ರಪಂಚದಲ್ಲಿ ಲೆಕ್ಕವಿಲ್ಲದಷ್ಟು ಪ್ರಾಣಿವರ್ಗಗಳುಂಟು. ಈ ಪ್ರಾಣಿವರ್ಗಗಳಲ್ಲಿ ಎಲ್ಲಿಯೋ ಕೆಲವರುಮಾತ್ರವೇ ಮನುಷ್ಯಜನ್ಮವನ್ನೆತ್ತಿ, ಶಾಸ್ತ್ರೋಕ್ತವಾದ ಧರ್ಮಾನುಷ್ಠಾನದಲ್ಲಿ ಸಾಮರ್ಥ್ಯವುಳ್ಳವರಾಗುವರು. ಈ ಕರ್ಮಾಧಿಕಾರವಿದ್ದವರಲ್ಲಿಯೂ ಅನೇಕರು, ಧರ್ಮಾರ್ಥಕಾಮಗಳೆಂಬ ತ್ರಿವರ್ಗರೂಪವಾದ ಶ್ರೇಯಸ್ಸನ್ನು ಕೋರುವರೇಹೊರತು, ಶಾಶ್ವತಸುಖವಾದ ಮುಕ್ತಿಯನ್ನು ಬಯಸತಕ್ಕವರು ಬಹಳಕಡಿಮೆ! ಮೋಕ್ಷಾಭಿಲಾಷೆಯಿದ್ದವರಲ್ಲಿಯೂಕೂಡ, ಸಾವಿರಕ್ಕೊಬ್ಬನುಮಾತ್ರ ರಾಗಾದಿದೋಷದಿಂದ ಬಿಡಲ್ಪಟ್ಟು, ಯೋಗದಲ್ಲಿ ನಿಲ್ಲುವನು. ಹೀಗೆ ದೋಷವಿಮುಕ್ತರಾಗಿ ಯೋಗಸಾಧನೆಗೆ ನಿಂತವರಲ್ಲಿಯೂಕೂಡ, ಶಾಂತಚಿತ್ತನಾಗಿ, ಭಗವಂತನೊಬ್ಬನಲ್ಲಿಯೇ ಭಕ್ತಿಯನ್ನಿಟ್ಟು, ನಡುವೆ ಆಗಂತುಕಗಳಾಗಿ ಬಂದ ಇತರ ಶ್ರೇಯಸ್ಸುಗಳನ್ನೆಲ್ಲಾ ಅನಾದರಿಸತಕ್ಕವನು ಕೋಟಿಗೊಬ್ಬನಂತೆ ಸಿಕ್ಕುವುದೂ ಕಷ್ಟವು! ಹೀಗಿರುವಾಗ ಪರಮಪಾಪಿಯಾಗಿಯೂ, ಲೋಕಕಂಟಕನಾಗಿಯೂ ಇದ್ದ ಆವೃತ್ರನು, ಬಲಾತ್ಕಾರದಿಂದ ಮನಸ್ಸನ್ನೆಳೆಯತಕ್ಕ ಶಬ್ದಾದಿವಿಷಯಗಳೊಂದರಲ್ಲಿಯೂ ಆಸೆಯನ್ನಿಡದೆ ಹೋದುದು ಹೇಗೆ? ಆವನಿಗೆ ಭಗವಂತನಲ್ಲಿ ಭಕ್ತಿಯು ಹೇಗೆ ಹುಟ್ಟಿತು? ತನ್ನ ಪರಾಕ್ರಮದಿಂದ ಇಂದ್ರನನ್ನೇ ಮೆಚ್ಚಿಸಿದ ಆ ವೃತ್ರಾಸುರನು, ಆಯುದ್ಧದಲ್ಲಿ ಭಯಪಟ್ಟು, ಭಗವಂತನಲ್ಲಿ ಮರೆಹೊಕ್ಕನೆಂದೂ ಎಣಿಸುವುದಕ್ಕಿಲ್ಲ. ಈ ನನ್ನ ಸಂದೇಹವನ್ನು ಪರಿಹರಿಸಬೇಕು." ಎಂದನು. ಹೀಗೆ ಶ್ರದ್ಧೆಯಿಂದ ಕೇಳುತ್ತಿರುವ ಪರೀಕ್ಷಿದ್ರಾಜನ ಪ್ರಶ್ನೆಗಳಿಗಾಗಿ ಶುಕಮಹರ್ಷಿಯು ಸಂತೋಷಗೊಂಡು, ಹೀಗೆಂದು ಹೇಳುವನು. 'ರಾಜೇಂದ್ರಾ! ಇದೇ ವಿಷಯದಲ್ಲಿ ಒಂದುಪಾಖ್ಯಾನವನ್ನು ಹೇಳುವೆನು. ಕೇಳು! ಈ ಚರಿತ್ರವನ್ನು ನಾನು ನಮ್ಮ ತಂದೆಯಾದ ವ್ಯಾಸರ ಮುಖದಿಂದಲೂ, ನಾರದರಿಂದಲೂ, ದೇವಲರಿಂದಲೂ ಮೂರಾವರ್ತಿ ಕೇಳಿರುವೆನು. ಅದನ್ನೇ ನಿನಗೆ ತಿಳಿಸುವೆನು. ಹಿಂದೆ

ಶೂರಸೇನದೇಶದಲ್ಲಿ ಚಿತ್ರಕೇತುವೆಂಬ ಪ್ರಸಿದ್ಧನಾದ ಚಕ್ರವರ್ತಿಯು ಆಳುತ್ತಿದ್ದನು. ಅವನ ರಾಜ್ಯದಲ್ಲಿ ಭೂಮಿಯು ಇಷ್ಟವಸ್ತುಗಳೆಲ್ಲವನ್ನೂ ಸಮೃದ್ಧವಾಗಿ ಕರೆಯುತಿತ್ತು. ಅವನಿಗೆ ಕೋಟಿಪತ್ನಿಯರಿದ್ದರೂ, ಒಬ್ಬಳಲ್ಲಿಯೂ ಒಂದು ಸಂತಾನವಾದರೂ ಆಗಲಿಲ್ಲ. ಅವನು, ಕುಲ, ರೂಪ, ವಯಸ್ಸು, ವಿದ್ಯೆ, ತೇಜಸ್ಸು, ಐಶ್ವರ್ಯ ಔದಾರ್ಯ, ಮುಂತಾದ ಸಕಲಭಾಗ್ಯಸಮೃದ್ಧಿಗಳಿಂದ ಕೂಡಿದ್ದರೂ, ಬಹಳ ಗುಣಾಢ್ಯನೆಂಬ ಕೀರ್ತಿಯನ್ನು ಪಡೆದಿದ್ದರೂ, ಸಂತಾನವಿಲ್ಲವೆಂಬ ವ್ಯಸನದಿಂದ ಮನಸ್ಸಿನಲ್ಲಿ ಸ್ವಲ್ಪಮಾತ್ರವೂ ಸಂತೋಷವಿಲ್ಲದೆ ಕೊರಗುತ್ತಿದ್ದನು. ನಿರತಿಶಯವಾದ ಭೋಗಸಮೃದ್ಧಿಯಾಗಲೀ, ಸಾರ್ವಭೌಮಪದವಿಯಾಗಲೀ, ಕಳತ್ರಸುಖವಾಗಲೀ ಯಾವುದೂ ಅವನ ಮನಸ್ಸಿಗೆ ಹಿತವಾಗಿ ತೋರಲಿಲ್ಲ. ಹೀಗೆ ಅವನು ಸಂತಾನವ್ಯಸನದಿಂದ ಅನವರತವೂ ದುಃಖಿಸುತ್ತಿದ್ದಾಗ, ಒಮ್ಮೆ ಮಹಾಜ್ಞಾನಿಯಾಗಿಯೂ, ಲೋಕಸಂಚಾರಿಯಾಗಿಯೂ, ಪೂಜ್ಯನಾಗಿಯೂ ಇದ್ದ ಅಂಗಿರಸನೆಂಬ ಮಹರ್ಷಿಯು, ಆ ರಾಜನ ಅರಮನೆಗೆ ಬಂದನು. ಚಿತ್ರಕೇತುವು ಅತಿಥಿಯಾಗಿ ಬಂದ ಆ ಮಹರ್ಷಿಯನ್ನು ಯಥೋಚಿತವಾಗಿ ಸತ್ಕರಿಸಿ, ಆಸನವನ್ನು ಕೊಟ್ಟು ಕುಳ್ಳಿರಿಸಿ, ತಾನೂ ಅವನ ಪಕ್ಕದಲ್ಲಿ ವಿನಯದಿಂದ ಕುಳಿತಿದ್ದನು. ಸುಖಾಸೀನನಾದ ಆ ಮಹರ್ಷಿಯು, ತನ್ನ ಸಮೀಪದಲ್ಲಿ ವಿನಯದಿಂದ ನಲದಮೇಲೆ ಕುಳಿತಿದ್ದ ಆರಾಜನನ್ನು ಕುಶಲಪ್ರಶ್ನಾದಿಗಳಿಂದ ಮನ್ನಿಸಿ, ಹೀಗೆಂದು ಪ್ರಶ್ನೆಮಾಡುವನು. "ರಾಜೇಂದ್ರಾ! ಇದೇನು? ನೀನು ಚಿಂತಾಕುಲನಾಗಿರುವಂತೆ ಕಾಣುವೆ? ನಿನಗೆ ಆರೋಗ್ಯವಷ್ಟೆ? ನಿನ್ನ ಬಂಧುವರ್ಗದವರೆಲ್ಲರೂ ಕ್ಷೇಮದಿಂದಿರುವರಷ್ಟೆ? ನಿನ್ನ ಸೈನ್ಯ, ಭಂಡಾರ, ಮೊದಲಾದ ರಾಜ್ಯಾಂಗಗಳೆಲ್ಲವೂ ಸುರಕ್ಷಿತವಾಗಿರುವುವಷ್ಟೇ? ಜೀವನು ಮಹತ್ತು, ಅಹಂಕಾರ, ಪಂಚತನ್ಮಾತ್ರಗಳೆಂಬ ಏಳುಪ್ರಕೃತಿವಿಕಾರಗಳಿಂದ ರಕ್ಷಿತನಾಗಿ, ಅವುಗಳಮೂಲಕವಾಗಿಯೇ ಸುಖವನ್ನನುಭವಿಸುವಂತೆ, ರಾಜನೂಕೂಡ ತನ್ನ ಸಪ್ತರಾಜ್ಯಾಂಗಗಳಲ್ಲಿ ಪ್ರಜಾಭಾರವನ್ನಿಟ್ಟು, ಆದರಿಂದ ತಾನೂ ಸುಖವನ್ನು ಹೊಂದಬಹುದು. ಈ ರಾಜ್ಯಾಂಗಗಳೇ ರಾಜನಿಗೆ ವಿಶೇಷಸುಖಕಾರಣಗಳಾಗಿರುವುವು. ಈ ರಾಜ್ಯಾಂಗಗಳಿಂದ ರಾಜನು ಸುಖವನ್ನು ಹೊಂದುವಂತೆ, ರಾಜನ ಮೂಲಕವಾಗಿಯೇ ರಾಜ್ಯಾಂಗಗಳೂ ಹಿತವನ್ನು ಹೊಂದುವುವು. ಆದುದರಿಂದ ರಾಜನ ಮತ್ತು ಪ್ರಜೆಗಳ ಕ್ಷೇಮವು ಅನ್ಯೋನ್ಯಾಧೀನವಾಗಿರುವುವು. ಆದರೆ ರಾಜನ ಕ್ಷೇಮವು ಪ್ರಜೆಗಳ ಅಧೀನವಾಗಿದ್ದರೂ, ಪ್ರಜೆಗಳು ಆಪ್ತುಮಾತ್ರಕ್ಕೆ ಸ್ವಾತಂತ್ರ್ಯವನ್ನು ವಹಿಸಬಾರದು. ಯಾವ ರಾಜ್ಯದಲ್ಲಿ ರಾಜನಿಗೆ ಪುತ್ರಕಳತ್ರಾದಿ ಬಂಧುಗಳೂ, ಅಧಿಕಾರಗಳೂ, ಮಂತ್ರಿಗಳೂ, ಪ್ರಜೆಗಳೂ, ಮಿತ್ರರೂ, ಪರಿಜನರೂ, ಪುರವಾಸಿಗಳೂ, ದೇಶವಾಸಿಗಳೂ, ಸಾಮಂತರಾಜರೂ

ಆಜ್ಞಾಧೀನರಾಗಿ ನಡೆಯುವರೋ, ಅಲ್ಲಿ ಮಾತ್ರವೇ ರಾಜನಿಗೂ, ಪ್ರಜೆಗಳಿಗೂ, ರಾಜ್ಯಕ್ಕೂ ಮೇಲಾದ ಕ್ಷೇಮವುಂಟು! ಯಾವ ರಾಜನು ವಿಷಯಾಸಕ್ತನಾಗದೆ, ಮೊದಲು ತನ್ನ ಮನಸ್ಸನ್ನು ತಾನು ಸ್ವಾಧೀನವಾಗಿಟ್ಟುಕೊಳ್ಳಬಲ್ಲನೋ, ಅವನಿಗೆ ಪ್ರಜೆಗಳೆಲ್ಲರೂ ತಾವಾಗಿಯೇ ವಶವರ್ತಿಗಳಾಗುವರು. ಮನಸ್ಸನ್ನು ಜಯಿಸಲಾರದ ರಾಜನಿಗೆ ಯಾರೂ ಅಧೀನವಾಗಿರಲಾರರು ಮನೋಜಯವುಳ್ಳ ರಾಜನಿಗೆ ಅತನ ಪ್ರಜೆಗಳು ವಶವರ್ತಿಗಳಾಗಿರುವುದುಮಾತ್ರವಲ್ಲದೆ, ಅವನಿಗೆ ಲೋಕಪಾಲರೊಡ ಗೂಡಿದ ಸಮಸ್ತಲೋಕಗಳೂ ತಾವಾಗಿ ಬಂದು ಪೂಜೆಯನ್ನೊಪ್ಪಿಸುವುವು. ಅಂತಹ ರಾಜರು ನಿತ್ಯಸಂತುಷ್ಟರಾಗಿರುವರು. ರಾಜೇಂದ್ರಾ! ನಿನ್ನಲ್ಲಿ ಈ ಎಲ್ಲಾ ಅನುಕೂಲ್ಯಗಳೂ ಸೇರಿರುವವಷ್ಟೇ! ಅದುದರಿಂದ ನೀನು ಸದಾ ಸಂತೋಷಿಯಾಗಿ ರಬೇಕಾದುದು ಯುಕ್ತವು ಆದರೆ ಈಗ ಕಳೆಗುಂದಿದ ನಿನ್ನ ಮುಖವು ನಿನ್ನ ಮನೋದುಃಖವನ್ನು ಸೂಚಿಸುತ್ತಿರುವುದು. ದುಃಖಕಾರಣವೇನು? ನಿನಗೆ ನೀನೇ ಚಿಂತೆಯನ್ನು ತಂದುಕೊಂಡು ಕೊರಗುವೆಯಾ? ಇಲ್ಲವೇ ಬೇರೆಯವರಿಂದ ನಿನಗೇ ನಾದರೂ ಕೇಡಾಯಿತೇ? ಆಲೋಚಿಸಿದರೆ, ಯಾವುದೋ ಇಷ್ಟವಸ್ತುವು ನಿನಗೆ ಕೈಸೇರದುದರಿಂದ, ನೀನು ಚಿಂತಾಕುಲನಾಗಿರುವಂತೆ ಕಾಣುತ್ತಿದೆ. ಅದರ ಕಾರಣ ವೇನೆಂದು ತಿಳಿಸು" ಎಂದನು. ಹೀಗೆ ಅಂಗಿರಸನು ರಾಜನ ದುಃಖಕಾರಣವನ್ನು ಚೆನ್ನಾಗಿ ಬಲ್ಲವನಾಗಿದ್ದರೂ, ನಾನಾವಿಧವಿಕಲ್ಪಗಳಿಂದ ಪ್ರಶ್ನೆಮಾಡುತ್ತಿರುವುದನ್ನು ಕೇಳಿ ರಾಜನು ವಿನಯಪೂರ್ವಕವಾಗಿ ಹೀಗೆಂದು ವಿಜ್ಞಾಪಿಸುವನು "ಓ ಮಹಾತ್ಮಾ! ಕರ್ಮಜ್ಞಾನ ಭಕ್ತಿಯೋಗಗಳಿಂದ ಸಮಸ್ತಪಾಪಗಳನ್ನೂ ನೀಗಿ, ಶುದ್ಧಮನಸ್ಸುಳ್ಳ ನಿಮ್ಮಂತವರಿಗೆ, ತಿಳಿಯದ ಸಂಗತಿಯಾವುದುಂಟು? ಪ್ರತ್ಯಕ್ಷದಲ್ಲಿಯೂ, ಪರೋಕ್ಷದಲ್ಲಿಯೂ ನಡೆಯತಕ್ಕ ವಿಷಯಗಳೆಲ್ಲವೂ ನಿಮ್ಮ ಮನಸ್ಸಿಗೆ ಗೋಚರಿಸುವುವು. ಆಯಾ ಪ್ರಾಣಿಗಳ ಮನಸ್ಸಿನಲ್ಲಿರುವುದನ್ನೂ ನೀವು ತಿಳಿಯಬಲ್ಲಿರಿ! ಹಾಗಿದ್ದರೂ ನೀವು ಪ್ರಶ್ನೆಮಾಡಿದುದರಿಂದ, ನಿಮ್ಮಲ್ಲಿ ವಿಜ್ಞಾಪಿಸ ಬೇಕಾದುದು ನನ್ನ ಕೃತ್ಯವೆಂಬುದಕ್ಕಾಗಿ ತಿಳಿಸುವೆನು. ಮಹೇಂದ್ರಾ! ಲೋಕ ಪಾಲಕರಿಗೂ ಆಶ್ಚರ್ಯವುಟ್ಟಿಸತಕ್ಕ ಸಮಸ್ತ ಸಂಪತ್ತುಗಳೂ ನನ್ನ ಕೈವಶನಾಗಿದ್ದರೂ, ಸಂತತಿಯಿಲ್ಲದುದರಿದ ಅವೊಂದೂ ನನ್ನ ಮನಸ್ಸಿಗೆ ಸಂತೋಷವನ್ನುಂಟುಮಾಡು ವುದಿಲ್ಲ. ಹಸಿವು ಬಾಯಾರಿಕೆಗಳಿಂದ ಪೀಡಿತನಾಗಿ, ಅನ್ನ ಪಾನಗಳಲ್ಲಿ ಆತುರವುಳ್ಳವನಿಗೆ, ಹೂಗಂಧ, ಸ್ತ್ರೀಯರು ಮುಂತಾದ ಇತರ ಭೋಗಸಾಮಗ್ರಿಗಳಿಟ್ಟಿದ್ದರೂ ಮನಸ್ಸಿಗೆ ಸೇರದಂತೆ, ಸಂತಾನವಿಲ್ಲದ ನನಗೆ ಬೇರೆ ಐಶ್ವರ್ಯವೊಂದೂ ಮನಸ್ಸಿಗೆ ತೃಪ್ತಿಯನ್ನುಂಟುಮಾಡುವುದಿಲ್ಲ. ಆದುದರಿಂದ ಓ ಮಹಾತ್ಮಾ! ನನ್ನ ಪಿತೃ

ಗಳನ್ನೂ, ನನ್ನನ್ನೂ ಕ್ರೂರನರಕದಿಂದ ದಾಟಿಸತಕ್ಕ ಪುತ್ರಸಂತಾನವು ನನಗೆ ಲಭಿಸುವಂತೆ ಅನುಗ್ರಹಿಸಬೇಕು" ಎಂದನು. ಹೀಗೆ ರಾಜನು ದೈನ್ಯದಿಂದ ಯಾಚಿಸುತ್ತಿರುವುದನ್ನು ನೋಡಿ, ಬ್ರಹ್ಮಪುತ್ರನಾದ ಆ ಅಂಗಿರಸನು, ಅವನಲ್ಲಿ ಕನಿಕರಗೊಂಡು, ಅವನಿಂದ ಪುತ್ರಕಾಮೇಷ್ಟಿಯನ್ನು ಮಾಡಿಸತೊಡಗಿದನು. ಅದರಲ್ಲಿ ತಾನೇ ಋತ್ವಿಕ್ಕಾಗಿ ನಿಂತು, ತ್ವಷ್ಟೃದೇವತಾಪ್ರೀತ್ಯರ್ಥವಾದ ಚರುವನ್ನು ಮಾಡಿಸಿ, ಹೋಮಮಾಡಿದನು. ಆ ಯಾಗಶೇಷವನ್ನು ಚಿತ್ರಕೇತುವಿನ ಪತ್ನಿಯರಲ್ಲಿ ಹಿರಿಯವಳಾಗಿಯೂ, ಉತ್ತಮಳಾಗಿಯೂ ಇದ್ದ ಕೃತದ್ಯುತಿಯೆಂಬವಳಿಗೆ ಕೊಟ್ಟು ಭೋಜನಮಾಡಿಸಿ. ರಾಜನನ್ನು ಕುರಿತು "ರಾಜೇಂದ್ರಾ! ಇದರಿಂದ ನಿನಗೆ ಪುತ್ರಸಂತಾನವಾಗುವುದು. ಆದರೆ ಆ ಪುತ್ರನು ನಿನಗೆ ಹರ್ಷಶೋಕಗಳೆರಡಕ್ಕೂ ಕಾರಣನಾಗುವನು" ಎಂದು ಹೇಳಿ ಹೊರಟುಹೋದನು. ಇತ್ತಲಾಗಿ ರಾಜಮಹಿಷಿಯಾದ ಕೃತದ್ಯುತಿಯು, ಆಯಜ್ಞಶೇಷವನ್ನು ಭುಜಿಸಿದೊಡನೆ ಗರ್ಭವನ್ನು ಧರಿಸಿದಳು. ಆ ಗರ್ಭವು ಶುಕ್ಲಪಕ್ಷದ ಚಂದ್ರನಂತೆ ಕ್ರಮಕ್ರಮವಾಗಿ ವೃದ್ಧಿಹೊಂದುತ್ತ ಬಂದಿತು. ಸ್ವಲ್ಪಕಾಲದಲ್ಲಿಯೇ ಆ ದೇಶದ ಪ್ರಜೆಗಳೆಲ್ಲರಿಗೂ ಸಂತೋಷವುಂಟಾಗುವಂತೆ ರಾಜಕುಮಾರನು ಜನಿಸಿದನು. ರಾಜನು ತನಗೆ ಪುತ್ರಜನನವಾದುದನ್ನು ಕೇಳಿ, ಪರಮಾನಂದಭರಿತನಾಗಿ, ಸ್ನಾನಮಾಡಿ ಶುದ್ಧನಾಗಿ ಬಂದು, ವಸ್ತ್ರಾಲಂಕಾರಗಳನ್ನು ಧರಿಸಿ ಕುಮಾರನಿಗೆ ಜಾತಕರ್ಮವನ್ನು ನಡೆಸಿ, ಬ್ರಾಹ್ಮಣರಿಂದ ಸ್ವಸ್ತಿವಾಚನಗಳನ್ನೂ ಮಾಡಿಸಿದನು. ಆ ಬ್ರಾಹ್ಮಣರಿಗೆಲ್ಲಾ ಚಿನ್ನ ಬೆಳ್ಳಿ ಧಾನ್ಯಗಳನ್ನೂ, ವಸ್ತ್ರಾಭರಣಗಳನ್ನೂ, ಗ್ರಾಮಗಳನ್ನೂ, ಆನೆ ಕುದುರೆಗಳನ್ನೂ, ಹಸುಗಳನ್ನೂ ಯಥೇಷ್ಟವಾಗಿ ದಾನಮಾಡಿದನು. ಹೀಗೆ ಆರರ್ಬುದಸಂಖ್ಯೆಯುಳ್ಳ ಬ್ರಾಹ್ಮಣರನ್ನು ದಾನಾದಿಗಳಿಂದ ತೃಪ್ತಿಪಡಿಸಿದನು. ಮತ್ತು ತನ್ನ ಕುಮಾರನ ಆಯುರಾರೋಗ್ಯಾದಿಗಳ ಅಭ್ಯುದಯಕ್ಕಾಗಿ, ಮೇಘವು ಮಳೆಯನ್ನು ಕರೆಯವಂತೆ ಇನ್ನೂ ಅನೇಕರಿಗೆ ಬೇಕುಬೇಕಾದ ಕೋರಿಕೆಗಳನ್ನೆಲ್ಲಾ ಈಡೇರಿಸಿ ಸಂತೋಷಗೊಳಿಸಿದನು. ಕಷ್ಟಪಟ್ಟು ಸಂಪಾದಿಸಿದ ಹಣದಲ್ಲಿ ಬಡವನಿಗೆ ಹೇಗೋಹಾಗೆ, ಬಹಳ ಪ್ರಯಾಸದಿಂದ ಲಭಿಸಿದ ತನ್ನ ಕುಮಾರನಲ್ಲಿ ಚಿತ್ರಕೇತುವಿಗೆ ದಿನದಿನಕ್ಕೆ ಪ್ರೇಮವು ಹೆಚ್ಚುತ್ತ ಬಂದಿತು. ಹೀಗೆಯೇ ಅವನ ಪತ್ನಿಯಾದ ಕೃತದ್ಯುತಿಗಾಕೂಡ ತನ್ನ ಮಗನಲ್ಲಿ ನಿರತಿಶಯವಾದ ಪ್ರೇಮವು ಹೆಚ್ಚುತ್ತ ಬಂದಿತು. ಅದನ್ನು ನೋಡಿ ಆಕೆಯ ಸವತಿಯರಿಗೆಲ್ಲಾ ಅವಳಲ್ಲಿ ಅಸೂಯೆ ಹುಟ್ಟಿತು. ಆ ರಾಜಪತ್ನಿಯರೆಲ್ಲರೂ ತಮಗೆ ಸಂತಾನವಿಲ್ಲದುದಕ್ಕಾಗಿ ಕೊರಗುತ್ತಿದ್ದರು. ಇದಲ್ಲದೆ ಚಿತ್ರಕೇತುವಿಗೆ ಇತರ ಪತ್ನಿಯರಲ್ಲಿರುವುದಕ್ಕಿಂತಲೂ, ಪುತ್ರವತಿ

ಯಾದ ಕೃತದ್ಯುತಿಯಲ್ಲಿ ಪ್ರೇಮವು ಹೆಚ್ಚುತ್ತ ಬಂದಿತು. ಅನವರತವೂ ಆ ಪುತ್ರನನ್ನು ಲಾಲಿಸುತ್ತ ಇತರಪತ್ನಿಯರನ್ನು ಔದಾಸೀನ್ಯದಿಂದ ಕಾಣುತ್ತಿದ್ದನು. ಇದರಿಂದ ಆ ರಾಜಪತ್ನಿಯರೆಲ್ಲರೂ, ಪತಿಯು ತಮ್ಮನ್ನು ತಿರಸ್ಕರಿಸುವುದೊಂದು, ತಮಗೆ ಸಂತಾನವಿಲ್ಲದುದೊಂದು, ಈ ಎರಡುಬಗೆಯ ವ್ಯಸನಗಳಿಂದ ಬಹಳವಾಗಿ ಕೊರಗುತ್ತಿದ್ದರು. ಅವರಿಗೆ ತಮ್ಮ ಸವತಿಯಾದ ಕೃತದ್ಯುತಿಯಲ್ಲಿ ಮೇಲೆಮೇಲೆ ಅಸೂಯೆಯೂ ಹೆಚ್ಚುತ್ತ ಬರಲು, ತಮ್ಮೊಳಗೆ ತಾವು ಹೀಗೆಂದು ದುಃಖಿಸುವರು- "ಅಯ್ಯೋ! ಸಂತಾನವಿಲ್ಲದ ನಮ್ಮಂತಹ ಪಾಪಿಗಳ ಬಾಳೇಕೆ! ನಮ್ಮ ಜನ್ಮವನ್ನು ಸುಡಬೇಕಲ್ಲವೇ? ನಮಗೆ ಸಂತಾನವಿಲ್ಲದುದರಿಂದಲ್ಲವೇ ಪತಿಯೂ ನಮ್ಮನ್ನು ತಿರಸ್ಕರಿಸುತ್ತಿರುವನು. ಸವತಿಯರಲ್ಲಿ ಒಬ್ಬಳಿಗೆ ಮಕ್ಕಳಾಗಿ, ಇತರರಿಗೆ ಸಂತಾನವಿಲ್ಲದಪಕ್ಷದಲ್ಲಿ, ಅವಳು ಮಕ್ಕಳಿಲ್ಲದ ನಮ್ಮಂತಹ ಬಂಜೆಯರನ್ನು ತನ್ನ ದಾಸಿಯರಿಗಿಂತಲೂ ಹೀನವಾಗಿ ಕಾಣುವಳು. ಅಥವಾ ಮಕ್ಕಳಿಲ್ಲದ ಬಂಜೆಯಾಗಿರುವುದಕ್ಕಿಂತಲೂ ದಾಸಿಯಾಗಿರುವುದೇ ಮೇಲು! ಏಕೆಂದರೆ, ದಾಸಿಯರು ತಮ್ಮ ಪ್ರಭುವನ್ನು ತಕ್ಕ ಉಪಚಾರಗಳಿಂದ ಸಂತೋಷಪಡಿಸಿದರೆ, ಅವನಿಂದ ಬೇಕುಬೇಕಾದ ಪದಾರ್ಥಗಳನ್ನು ಪಡೆದು, ಬೇರೆ ಚಿಂತೆಯೇ ಇಲ್ಲದೇ ಸಂತೋಷದಿಂದಿರುವರು. ರಾಜಪತ್ನಿಯರೆನಿಸಿಕೊಂಡಿದ್ದರೂ ನಮ್ಮಂತಹ ಗೊಡ್ಡಿಯರಿಗೆ ಯಾವವಿಧದಲ್ಲಿಯೂ ಸುಖವಿಲ್ಲ. ಆದುದರಿಂದ ನಾವು ಗೌಡಿಯರಿಗಿಂತಲೂ ಭಾಗ್ಯಹೀನರಲ್ಲವೇ?" ಹೀಗೆಂದು ರಾಜಪತ್ನಿಯರೆಲ್ಲರೂ ತಮ್ಮ ಸವತಿಯ ಮಗನನ್ನು ನೋಡಿನೋಡಿ ಅಸೂಯೆಯಿಂದ ಕುದಿಯುತ್ತಿದ್ದರು. ಅವರಿಗೆ ತಮ್ಮ ಸವತಿಯಾದ ಕೃತದ್ಯುತಿಯಲ್ಲಿಯೂ, ಅವಳ ಮಗನಲ್ಲಿಯೂ ಬಹಳವಾಗಿ ದ್ವೇಷವು ಬೆಳೆಯುತ್ತ ಬಂದಿತು. ಈ ದ್ವೇಷದಿಂದ ವಿವೇಕಹೀನರಾಗಿ, ಮನಸ್ಸಿನಲ್ಲಿ ಮರುಕವನ್ನು ಬಿಟ್ಟು, ಅವರೆಲ್ಲರೂ ಸೇರಿ ರಹಸ್ಯವಾಗಿ ಆ ಬಾಲಕನಿಗೆ ವಿಷವನ್ನು ಕೊಟ್ಟರು. ಆ ವಿಷವೇಗದಿಂದ ರಾಜಕುಮಾರನು ಮೂರ್ಛಿತನಾಗಿ, ಪ್ರಜ್ಞೆಯಿಲ್ಲದೆ ಬಿದ್ದಿದ್ದನು. ತಾಯಿಯಾದ ಕೃತದ್ಯುತಿಗೆ ಈ ಸಂಗತಿಯೊಂದೂ ತಿಳಿಯದುದರಿಂದ, ತನ್ನ ಮಗನು ನಿದ್ರೆಮಾಡುತ್ತಿರುವುದಾಗಿ ತಿಳಿದು ತಾನು ಕಾರ್ಯಾಂತರದಲ್ಲಿದ್ದು ಬಿಟ್ಟಳು. ಬಹಳ ಹೊತ್ತಿನಮೇಲೆ ಅವಳಿಗೆ ತನ್ನ ಬಾಲಕನ ಸ್ಮರಣವುಂಟಾಗಿ ದಾದಿಯನ್ನು ಕರೆದು "ಭದ್ರೆ! ಮಗುವು ಮಲಗಿ ಬಹಳ ಹೊತ್ತಾಯಿತು! ಇಷ್ಟು ದೀರ್ಘಕಾಲದವರೆಗೆ ಎಚ್ಚರವಿಲ್ಲದೆ ನಿದ್ರೆಮಾಡುವುದನ್ನು ನೋಡಿದರೆ ಆಶ್ಚರ್ಯವಾಗುವುದು! ನೀನು ಈಗಲೇ ಹೋಗಿ ಆ ಕುಮಾರನನ್ನು ಎಚ್ಚರಗೊಳಿಸಿ ಕರೆದುಕೊಂಡುಬಾ" ಎಂದು ಕಳುಹಿಸಿದಳು. ಆ ದಾದಿಯು ಬಂದು ನೋಡುವಷ್ಟರಲ್ಲಿ, ಅಮಗುವಿಗೆ ಕಣ್ಣಾಲಿಗಳೆರಡೂ

ಮೇಲೆ ನಾಟಕೊಂಡಿದ್ದುವು. ಅವನಲ್ಲಿ ಪ್ರಾಣಗಳ ಮತ್ತು ಇಂದ್ರಿಯಗಳ ವ್ಯಾಪಾರವೆಲ್ಲವೂ ನಿಂತು ಹೋಗಿದ್ದುವು ನಿರ್ಜೀವವಾಗಿ ಶವದಂತೆ ಬಿದ್ದಿದ್ದನು. ಇದನ್ನು ನೋಡಿ ದಾದಿಯು ಬೆಚ್ಚರುಬಿದ್ದು "ಅಯ್ಯೋ ಕೆಟ್ಟೆನು! ಕೆಟ್ಟೆನು! ಇನ್ನೇನುಗತಿ!" ಎಂದು ಕೂಗುತ್ತ ಮೂರ್ಛಿತಳಾಗಿ ಕೆಳಗೆಬಿದ್ದಳು. ಈ ದಾದಿಯ ಆಕ್ರಂದನವನ್ನು ಕೇಳಿ ರಾಣಿಯು ಬಹಳವಾಗಿ ಭಯಪಟ್ಟು, ತನ್ನ ಮಗನಿಗೆ ಏನೋ ಅಪಾಯವುಂಟಾಗಿರಬಹುದೆಂದು ತಿಳಿದು, ಎದೆಯನ್ನು ಬಡಿದುಕೊಂಡು, ಉಚ್ಚಧ್ವನಿಯಿಂದ ಗೋಳಿಡುತ್ತ ಬಾಲಕನಿದ್ದ ಸ್ಥಳಕ್ಕೆ ಓಡಿಬಂದಳು. ಅಲ್ಲಿ ಸತ್ತುಬಿದ್ದಿದ್ದ ಬಾಲಕನನ್ನು ನೋಡಿದೊಡನೆ, ಆವಳಿಗೂ ಪ್ರಜ್ಞೆತಪ್ಪಿತು. ಉಟ್ಟ ಬಟ್ಟೆಯು ಸಡಿಲಿ, ಕೆದರಿದ ಕೇಶಪಾಶಗಳೊಡನೆ ಕೆಳಗೆ ಬಿದ್ದು ಬಿಟ್ಟಳು. ಇವಳ ರೋದನಧ್ವನಿಯನ್ನು ಕೇಳಿ ಅಂತಃಪುರದಲ್ಲಿದ್ದ ಹೆಂಗಸರು, ಗಂಡಸರು ಮೊದಲಾದ ಎಲ್ಲರೂ ಓಡಿಬಂದರು. ಮಗುವಿಗೆ ವಿಷಪ್ರಯೋಗವನ್ನು ಮಾಡಿದ ಇತರರಾಜ ಪತ್ನಿಯರೂ ಗುಂಪಾಗಿ ಬಂದು, ಎಲ್ಲರಂತೆ ತಾವೂ ಮಹಾವ್ಯಸನವನ್ನು ನಟಿಸುತ್ತ ಗಟ್ಟಿಯಾಗಿ ಅಳುವದಕ್ಕೆ ತೊಡಗಿದರು. ಈ ವೃತ್ತಾಂತವು ರಾಜನ ಕಿವಿಗೂ ಮುಟ್ಟಿತು. ತನ್ನ ಪುತ್ರನು ಅಕಸ್ಮಾತ್ತಾಗಿ ಮೃತಿಹೊಂದಿದುದನ್ನು ಕೇಳಿ ಅವನಿಗೂ ದುಃಖದಿಂದ ಪ್ರಜ್ಞೆತಪ್ಪಿ. ಕಣ್ಣು ಕತ್ತಲಿಸಿತು. ಆಗಾಗ ದಾರಿಯಲ್ಲಿ ಮೂರ್ಛೆಬಿದ್ದೆ ಳುತ್ತ, ತನ್ನಮಂತ್ರಿಪುರೋಹಿತಾದಿಗಳೊಡನೆ ಆ ಸ್ಥಳಕ್ಕೆಬಂದನು.ಮಗನು ಮೃತ ನಾಗಿರುವುದನ್ನುಕಂಡು ಪ್ರಜ್ಞೆತಪ್ಪಿ ಆ ಕುಮಾರನ ಕಾಲಕೆಳಗೆ ಬಿದ್ದುಬಿಟ್ಟನು. ಉಟ್ಟಬಟ್ಟೆಯು ಸಡಿಲಿ, ತಲೆಕೆದರಿ, ಕೆಳಗೆಬಿದ್ದು ಉದ್ದವಾಗಿನಿಟ್ಟುಸಿರನ್ನು ಬಿಡು ತ್ತಿದ್ದನು. ದುಃಖಬಾಷ್ಪವುಬಂದು ಕಂಠದಲ್ಲಿತಡೆದುಕೊಳ್ಳುತ್ತಿದ್ದುದರಿಂದ,ಮಾತಾಡ ವುದಕ್ಕೂ ಶಕ್ತಿಯಿಲ್ಲದೆ ಹೊರಳುತ್ತಿದ್ದನು. ಸ್ವಲ್ಪಕಾಲದಮೇಲೆ ಅವನ ಪತ್ನಿಯಾದ ಕೃತದ್ಯುತಿಯು, ಮೆಲ್ಲಗೆ ಚೇತರಿಸಿಕೊಂಡು ಕಣ್ಣು ತೆರೆದಳು. ಇತ್ತಲಾಗಿ ಪತಿಯ ಸಂಕಟದಿಂದ ಗೋಳಿಡುವುದನ್ನೂ, ಅತ್ತಲಾಗೆ ತನ್ನ ಒಬ್ಬನೇ ಮಗನು ಮೃತ ಹೊಂದಿರುವುದನ್ನೂ ಕಂಡು ದುಃಖವನ್ನು ತಡೆಯಲಾರದೆ, ಅಲ್ಲಿ ನೆರೆದಿದ್ದ ಜನರನ್ನೂ, ಮಂತ್ರಿಗಳನ್ನೂ, ತನ್ನ ಪತಿಯನ್ನೂ ಮತ್ತಷ್ಟು ವ್ಯಸನಪೀಡಿತರನ್ನಾ ಮಾಡುವಂತೆ, ವಿಲಪಿಸುವುದಕ್ಕೆ ತೊಡಗಿದಳು. ಧಾರೆಧಾರೆಯಾಗಿ ಸುರಿಯುವ ಅಂಜನಮಿಶ್ರವಾದ ಕಣ್ಣೀರುಗಳಿಂದ ಆಕೆಯಸ್ತನದ ಮೇಲಿನ ಕುಂಕುಮವೆಲ್ಲವು ಕಲಗಿಬೀಳುತ್ತಿದ್ದುವು. ಮುಡಿದ ಹೂಗಳೊಡನೆತಲೆಕೂದಲುಕೆದರಿಹೋಗುತ್ತಿದ್ದಿತು. ತನ್ನ ಮಗನ ಮರಣವನ್ನು ಕುರಿತು ಕುರರಪಕ್ಷಿಯಂತೆ ಹೀಗೆಂದು ರೋದಿಸುವಳು: "ಅಕಟಾ! ಅಯ್ಯೋ! ದೈವವೇ! ನಿನಗೆ ಸ್ವಲ್ಪವಾದರೂ ಕರುಣವಿಲ್ಲವೇ? ಪ್ರಾ

ಗಳನ್ನು ಸೃಷ್ಟಿಸಿದಂತೆ ಕೊಲ್ಲದೆ, ಸೃಷ್ಟಿಗೆ ವಿರುದ್ಧವಾಗಿ ಕಾರ್ಯವನ್ನು ನಡೆಸುವೆಯಲ್ಲಾ! ಪಿತ್ರಾದಿಗಳ ಮೂಲಕವಾಗಿ ಮಕ್ಕಳನ್ನು ಸೃಷ್ಟಿಸಿದನೀನು, ಮೊದಲು ಹುಟ್ಟಿದವರನ್ನು ಕೊಲ್ಲುವದಕ್ಕೆ ಮುಂಚೆ, ಅವರಕಣ್ಣಿದಿರಿಗೆ ಹಿಂದೆ ಹುಟ್ಟಿದ ಮಕ್ಕಳನ್ನು ಕೊಲ್ಲುವುದು ಯುಕ್ತವೇ? ಇದು ನಿನ್ನ ಸೃಷ್ಟಿಕಾರ್ಯಕ್ಕೆ ಕೇವಲ ವಿಪರೀತವಲ್ಲವೆ? ನೀನು ವಿವೇಕಿಯಾಗಿದ್ದರೆ ಹೀಗೆ ವಿಪರೀತಕಾರ್ಯವನ್ನು ನಡೆಸುತ್ತಿರಲಿಲ್ಲ! ಅದೂ ಹೋಗಲಿ! ಈ ಪ್ರಕೃತಿಮಂಡಲದಲ್ಲಿ ಜನನಮರಣಗಳಿಗಾದರೂ ಒಂದು ಕ್ರಮವನ್ನು ಕಲ್ಪಿಸದಿದ್ದಪಕ್ಷದಲ್ಲಿ, ನೀನು ಮಾಡಬೇಕಾದುದೇನಿದೆ? ಉತ್ಪತ್ತಿಮರಣಗಳೆಲ್ಲವೂ ಅವರವರ ಪುಣ್ಯಪಾಪಗಳನ್ನನುಸರಿಸಿಯೇ ನಡೆದು ಹೋಗುವವು. ಅದಕ್ಕೆ ಯಾವಕ್ರಮವೂ ಬೇಕಾದುದಿಲ್ಲ. ಆಗ ನೀನು ಮಾಡಬೇಕಾದ ಕೆಲಸವೂ ಇರುವುದಿಲ್ಲ! ನೀನು ಈಶ್ವರನಾಗಿದ್ದು ನಡೆಸಬೇಕಾದುದೇನು? ಅದರೆ "ಆಯಾಪ್ರಾಣಿಗಳಿಗೆ ಕರ್ಮಾನುಸಾರವಾಗಿ ನಾನೇ ಫಲವನ್ನು ಕೊಡುವೆನು" ಎಂದು ಹೇಳುವೆಯಾ? ಹಾಗಿದ್ದರೆ, ನೀನು, ಸೃಷ್ಟಿಕಾರ್ಯವನ್ನು ವೃದ್ಧಿಪಡಿಸುವುದಕ್ಕಾಗಿ ಪ್ರಾಣಿಗಳಿಗೆ ಹೆಂಡಿರು, ಮಕ್ಕಳು ಮೊದಲಾದ ಸ್ನೇಹಪಾಶವನ್ನೇಕೆ ಕಲ್ಪಿಸಿರುವೆ? ಆ ಸ್ನೇಹಪಾಶವನ್ನಾದರೂ ಕೆತ್ತುಹಾಕಬಾರದೇ? ಅಯ್ಯೋ! ನೀನು ಎಷ್ಟುಕ್ರೂರನು" ಎಂದು ದೈವವನ್ನು ನಿಂದಿಸುತ್ತ, ಮೃತನಾದ ತನ್ನ ಕುಮಾರನನ್ನು ನೋಡಿ 'ಓ ಕುಮಾರಾ! ದಿಕ್ಕಿಲ್ಲದ ನನ್ನನ್ನು ಈ ದುಃಖಸಾಗರದಲ್ಲಿ ಮುಳುಗಿಸಿಹೋಗುವೆಯಾ? ಇದು ನಿನಗೆ ಯುಕ್ತವೇ? ನಿನಗಾಗಿ ದುಃಖದಿಂದ ಕುದಿಯುತ್ತಿರುವ ನಿನ್ನ ತಂದೆಯನ್ನು ಕಣ್ಣುಬಿಟ್ಟುನೋಡು! ಅಯ್ಯೋ! ಸಂತತಿಯಿಲ್ಲದ ದುಃಖವನ್ನಾದರೂ ಸಹಿಸಬಹುದು! ಈ ಪ್ರತ್ಯಕ್ಷೋಕವೆಂಬುದು ಸಹಿಸಬಾರದ ಸಂಕಟವನ್ನುಂಟುಮಾಡುವುದು. ಬಾಲಕಾ! ದುಃಖಿತರಾದ ನಮ್ಮನ್ನು ನೋಡಬಾರದೇ? ಅಥವಾ ನಮ್ಮನ್ನೂ ನಿನ್ನೊಡನೆಯೇ ಯಮನಸಮೀಪಕ್ಕೆ ಕರೆದುಕೊಂಡುಹೋಗು! ಪತ್ಸಾ! ಇದೋ! ಇಲ್ಲಿ ನಿನ್ನ ಸಂಗಡಿಗರಾದ ಬಾಲಕರು ಕ್ರೀಡಾರ್ಥವಾಗಿ ನಿನ್ನನ್ನು ಕರೆಯುತ್ತಿರುವರು. ಇದೇಕೆ ಇನ್ನೂ ಮಲಗಿರುವೆ! ಹಸಿವನ್ನು ತಡೆಯಲಾರದೆ ಮಲಗಿರುವೆಯೇನು? ಮುದ್ದುಕಂದಾ! ಏಳು ಸ್ತನ್ಯವನ್ನು ಕೊಡುವೆನು! ಮೇಲೆದ್ದುನಮ್ಮ ಸಂಕಟವನ್ನು ನೀಗಿಸು! ಓ ಪುತ್ರಾ! ದೃಷ್ಟಿದೋಷವು ತಾಕುವುದೆಂಬ ಭಯದಿಂದ ಇದುವರೆಗೆ ನಾನು, ಕನ್ನೈದಿಲೆಯಂತೆ ಕಣ್ಣುಳ್ಳ ಮಂದಹಾಸ ಸುಂದರವಾದ ನಿನ್ನ ಮುಖಬಿಂಬವನ್ನು ಚೆನ್ನಾಗಿ ಕಣ್ಣಿತ್ತಿನೋಡುವುದಕ್ಕೂ ಹೆದರುತ್ತಿದ್ದೆನಲ್ಲಾ! ಮಂದಭಾಗ್ಯೆಯಾದ ನನಗೆ ನಿನ್ನ ಮುಖದರ್ಶನದಿಂದುಂಟಾದ ಸಂತೋಷವನ್ನೂ ಅನುಭವಿಸುವುದಕ್ಕಿಲ್ಲದೆಹೋಯಿತು. ಅವ್ಯಕ್ತಮಧುರವಾದ ನಿನ್ನ

ಮುದ್ದುಮಾತುಗಳನ್ನೂ ಕೇಳದೆ ಹೋದೆನು ಅಯ್ಯೋ ಈಗ ನಿನ್ನ ಮುಖವನ್ನು ನೋಡುತ್ತಿರುವೆನಲ್ಲಾ ! ಕುಮಾರಾ ! ದಯಾಶೂನ್ಯವಾದ ದೈವವು ನಿನ್ನನ್ನು ಪುನರ್ಜನ್ಮವಿಲ್ಲದ ಪರಲೋಕಕ್ಕೆ ಸಾಗಿಸಿತೇನು ?" ಎಂದು ನಾನಾವಿಧವಾಗಿ ವಿಲಪಿಸುತ್ತಿದ್ದಳು ಪತ್ನಿಯ ರೋದನವನ್ನು ನೋಡಿ ಚಿತ್ರಕೇತುವು ಮತ್ತಷ್ಟು ದುಃಖಿತನಾಗಿ, ಅವಳಿಗಿಂತಲೂ ಗಟ್ಟಿಯಾಗಿ ರೋದಿಸತೊಡಗಿದನು. ಇವರಿಬ್ಬರ ರೋದನವನ್ನು ನೋಡಿ ಗಂಡಸರು, ಹೆಂಗಸರು ಮೊದಲಾಗಿ ಅಲ್ಲಿದ್ದ ಅನುಚರರೆಲ್ಲರೂ ದುಃಖದಿಂದ ನಿಶ್ಚೇಷ್ಟರಾಗಿ ನಿಂತುಬಿಟ್ಟರು. ಹೀಗೆ ಚಿತ್ರಕೇತುವು ವಿವೇಕವಿಲ್ಲದೆ ದುಃಖಿಸುತ್ತಿರುವುದನ್ನು ತಿಳಿದು, ಅಂಗಿರಸನು ನಾರದನೊಡಗೂಡಿ ಅಲ್ಲಿಗೆ ಬಂದು ಸೇರಿದನು. ಇದು ಹದಿನಾಲ್ಕನೆಯ ಅಧ್ಯಾಯವು.

---

**ನಾರದಾಂಗಿರಸರಿಬ್ಬರೂ ಚಿತ್ರಕೇತುವಿಗೆ ಹಿತವನ್ನು ಹೇಳಿ ಸಮಾಧಾನಪಡಿಸಿದುದು.**

ರಾಜೇಂದ್ರಾ ಕೇಳು ! ಸತ್ತುಬಿದ್ದ ಮಗನ ಸಮೀಪದಲ್ಲಿ ತಾನೂ ಶವದಂತೆ ಬಿದ್ದು ದುಃಖದಿಂದ ಮೈಮರೆತು ಗೋಳಿಡುತ್ತಿದ್ದ ಚಿತ್ರಕೇತುವನ್ನು ನೋಡಿ ನಾರದನೂ, ಅಂಗಿರಸನೂ ಮುಂದೆಬಂದು, ತತ್ವಜ್ಞಾನಬೋಧಕಗಳಾದ ಮಾತುಗಳಿಂದ ಒಬ್ಬರಾದಮೇಲೊಬ್ಬರು ಸಮಾಧಾನಮಾಡುವರು. "ರಾಜೇಂದ್ರಾ ! ಈ ನೀನು ಯಾವುದಕ್ಕಾಗಿ ದುಃಖಿಸುತ್ತಿರುವೆ ? ಈತನುಯಾವನು ? ಒಂದುವೇಳೆ ನಾವಿಬ್ಬರೂ ತಂದೆ ಮಕ್ಕಳೆಂದೂ ಆ ಸಂಬಂಧವು ತಪ್ಪಿ ಹೋದುದಕ್ಕಾಗಿ ದುಃಖಿಸುವೆನೆಂದೂ ನೀನು ಹೇಳುವೆಯೇನು ? ನೀನು ಯಾರು ? ಅವನು ಯಾರು ? ನನಗೂ ಬೇರೆ ನಿಮ್ಮಿಬ್ಬರಿಗೂ ಯಾವ ಸಂಬಂಧವೂ ಇರುವಂತೆ ತೋರಲಿಲ್ಲ. ಪ್ರವಾಹರೂಪವಾಗಿ ನಡೆಯುತ್ತಿರುವ ಸೃಷ್ಟಿಯಲ್ಲಿ ಹಿಂದೆಯಾಗಲೀ, ಮುಂದೆಯಾಗಲೀ, ತತ್ಕಾಲದಲ್ಲಿಯಾಗಲೀ ನಿನ್ನಿಬ್ಬರಿಗೆ ಇರಬಹುದಾದ ಸಂಬಂಧವೇನು ? ಪ್ರವಾಹವೇಗದಲ್ಲಿ ಕೊಚ್ಚಿಬಂದ ರೇಣುಗಳೆಲ್ಲವೂ ಅಲ್ಲಲ್ಲಿ ಒಂದಾಗಿ ಕಲೆತಿದ್ದು, ಕ್ಷಣಕಾಲದಮೇಲೆ ಅವು ಪ್ರವಾಹವೇಗದಿಂದಲೇ ಚದರಿಹೋಗುವಂತೆ, ಪ್ರಾಣಿಗಳೂ ಕಾಲವೆಂಬ ಪ್ರವಾಹವೇಗದಲ್ಲಿ, ತಂದೆಮಕ್ಕಳು, ಗಂಡಹೆಂಡಂದಿರೆಂಬ ಕ್ಷಣಕಾಲ ಸಂಬಂಧದಿಂದ ಒಂದಾಗಿ ಕಲೆತಿದ್ದು, ಕಾಲವು ಬಂದಾಗ ಅಗಲಿಹೋಗುವರು. ಮತ್ತು ಬೀಜಗಳಿಂ

ಬೀಜಗಳು ಹುಟ್ಟಿ, ಹಾಗೆಯೇ ನಶಿಸುವಂತೆ, ಈಶ್ವರಸಂಕಲ್ಪದಿಂದ ಭೂತಗಳಲ್ಲಿ ಭೂತಗಳು ಹುಟ್ಟಿ ಕಾಲಕ್ರಮದಿಂದ ನಾಶಹೊಂದಬೇಕಾದುದೇ ಸಹಜವು. ಈ ನಮ್ಮ ಪಿತೃಪುತ್ರಭಾವ ಸಂಬಂಧವು ದೇಹದಮೂಲಕವಾಗಿ ಪ್ರಾಪ್ತವಾದುದರಿಂದ ಔಪಾಧಿಕವೆನಿಸುವುದೇ ಹೊರತು ಸಹಜವಾದುದಲ್ಲ. ಉಪಾಧಿಯೆನಿಸಿದ ದೇಹವು ಯಾವಾಗ ನಷ್ಟವಾಗುವುದೋ ಆಗ ಆ ಸಂಬಂಧವೂ ತಪ್ಪಿ ಹೋಗುವುದು. ಜೀವನಿಗೆ ದೇಹಸಂಬಂಧವೇ ಉತ್ಪತ್ತಿಯೆನಿಸುವುದು! ಆ ದೇಹವಿಯೋಗವೇ ಮರಣವೆನಿಸುವುದು. ಈ ವಿಧವಾದ ಉತ್ಪತ್ತಿವಿನಾಶಗಳು ಈಶ್ವರಸಂಕಲ್ಪಾಧೀನವಾಗಿ ನಡೆಯುವುದರಿಂದ, ಅದಕ್ಕಾಗಿ ನಾವು ದುಃಖಿಸಬಾರದು. "ಈ ದೇಹವಿಯೋಗಕ್ಕಾಗಿಯೇ ದುಃಖಿಸುವೆ" ನೆಂದು ಹೇಳುವೆಯೇನು? ಅದೂಯುಕ್ತವಲ್ಲ. ಏಕೆಂದರೆ ದೇಹವೆಂಬುದು ಎಂದಿಗೂ ಶಾಶ್ವತವಲ್ಲ. ಇದೋ! ಇಲ್ಲಿ ಕಾಣುವ ನಿನ್ನ ದೇಹವಾಗಲೀ, ಇತರ ಚರಾಚರಗಳದೇಹವಾಗಲೀ, ತತ್ಕಾಲಕ್ಕೆ ಕಾಣಿಸುತ್ತಿದ್ದರೂ, ಇವು ಈ ಜನ್ಮಕ್ಕೆ ಮೊದಲಿದ್ದುವಲ್ಲ! ಮರಣಾನಂತರದಲ್ಲಿಯೂ ಇರತಕ್ಕವುಗಳಲ್ಲ! ಆದುದರಿಂದ ಪ್ರಕೃತದಲ್ಲಿ ಸ್ವಲ್ಪಕಾಲದವರೆಗೆ ಕಣ್ಣಿಗೆ ಕಾಣಿಸುತ್ತಿದ್ದರೂ, ಇವುಗಳನ್ನು ಇಲ್ಲದಂತೆಯೇ ಎಣಿಸಬೇಕು. ಹೀಗೆ ಅಶಾಶ್ವತವಾದ ಈ ದೇಹವನ್ನು ಕುರಿತು ದುಃಖಿಸುವುದೇಕೆ? ಮತ್ತು ಸರ್ವೇಶ್ವರನೊಬ್ಬನೇ ಸಮಸ್ತ ಭೂತಗಳಲ್ಲಿಯೂ ಅಂತರಾತ್ಮನಾಗಿದ್ದು, ಆಯಾಜೀವಗಳನ್ನು ಅವರವರ ಕರ್ಮಾನುಸಾರವಾಗಿ ನಡೆಸುತ್ತಿರುವನು. ಆದುದರಿಂದ ಯಾವಭೂತಗಳೂ ಸ್ವತಂತ್ರಗಳಲ್ಲ ಆ ಭಗವಂತನು ಭೂತಗಳಮೂಲಕವಾಗಿಯೇ ಭೂತಗಳನ್ನು ಸೃಷ್ಟಿಸಿ, ಅವುಗಳಮೂಲಕವಾಗಿಯೇ ಅವುಗಳನ್ನು ಪಾಲಿಸುತ್ತಿದ್ದು, ಕೊನೆಗೆ ಅವುಗಳಿಂದಲೇ ಅವುಗಳನ್ನು ಕೊಲ್ಲಿಸುವನು. ಈ ಕಾರ್ಯಗಳಿಲ್ಲವೂ ಅವನಿಗೆ ಮುಕ್ಕಳಾಟದಂತೆ ಲೀಲಾರ್ಥವಾದುದೇ ಹೊರತು, ಇದರಿಂದ ಅವನು ಪಡೆಯಬೇಕಾದ ಪ್ರಯೋಜನವೇನೂ ಇರುವುದಿಲ್ಲ. ನೆಲದಲ್ಲಿ ಬಿತ್ತಿದ ಒಂದು ಬೀಜದಿಂದ ಮತ್ತೊಂದು ಬೀಜವು ಹುಟ್ಟುವಂತೆ, ಒಂದು ದೇಹಸಂಬಂಧದಿಂದ ಮತ್ತೊಂದುದೇಹದಲ್ಲಿ ಅದೇವಿಧವಾದ ಮತ್ತೊಂದುದೇಹವು ಹುಟ್ಟುವುದು. ಹುಟ್ಟು ಸಾವು ಎಂಬಿವೆರಡೂ ದೇಹಕ್ಕೆ ಸಹಜವಾದ ಗುಣವು. ಹೀಗೆ ದೇಹಕ್ಕೆ ಸ್ವಭಾವಸಿದ್ಧವಾದ ನಾಶವನ್ನು ಕುರಿತು ದುಃಖಿಸತಕ್ಕವನು, ಬೆಂಕಿಯಲ್ಲಿರುವ ಉಷ್ಣವನ್ನುನೋಡಿ ದುಃಖಿಸುವ ಮೂಢನಂತೆಯೇ ಹೊರತು ಬೇರೆಯಲ್ಲ. ಆದುದರಿಂದ ಈ ದೇಹವಿಯೋಗಕ್ಕಾಗಿ ದುಃಖಿಸಲೇಬಾರದು. ಇನ್ನು ಜೀವನನ್ನು ಕುರಿತು ದುಃಖಿಸುವುದಾಗಿ ಹೇಳುವೆಯೇನು? ಅದೂಯುಕ್ತವಲ್ಲ. ಜೀವನಿಗೆ ಎಂದಿಗೂ ಸಾವಿಲ್ಲ. ಅವನಿಗೆ ಯಾವವಿಧವಾದ ರೂಪಾಂತರವೂ ಇರುವು

ದಿಲ್ಲ. ಯಾವಾಗಲೂ ಒಂದೇರೂಪದಿಂದ ಶಾಶ್ವತನಾಗಿರತಕ್ಕವನು. ಆ ಆತ್ಮನನ್ನು ಕುರಿತು ದುಃಖಿಸುವುದಕ್ಕೆ ಕಾರಣವೇನಿರುವುದು? ದೇಹವಿಮುಕ್ತವಾದ ಆತ್ಮವೇ ನಿತ್ಯಾನಂದಸ್ವರೂಪವಾದ ಪುರುಷಾರ್ಥವೆನಿಸುವುದು. ಮುಕ್ತುಚಿಪ್ಪನ್ನು ನೋಡಿ ಬೆಳ್ಳಿಯೆಂದು ಭ್ರಮಿಸುವಂತೆ, ದೇಹವನ್ನೇ ಆತ್ಮವೆಂದು ಯಾರು ಭ್ರಮಿಸುವರೋ ಅಂತಹ ಅವಿವೇಕಿಗಳು ಇದಕ್ಕಾಗಿ ದುಃಖಿಸಬೇಕೇಹೊರತು ತತ್ವವನ್ನು ತಿಳಿದವರು ಎಂದಿಗೂ ದುಃಖಿಸಲಾರರು." ಎಂದರು. ಹೀಗೆ ಆ ಮಹರ್ಷಿಗಳಿಬ್ಬರೂ ತತ್ವವನ್ನು ಹೇಳಿದಮೇಲೆ, ಚಿತ್ರಕೇತುವು ದುಃಖದಿಂದ ಬಾಡಿದ ತನ್ನ ಮುಖವನ್ನು ಕೈಯಿಂದೊರೆಸಿಕೊಂಡು ದುಃಖಸಮಾಧಾನದಿಂದ ಹೀಗೆಂದು ಹೇಳುವನು. "ಎಲೈ ಮಹಾತ್ಮರೇ! ಸ್ತಬ್ಧರಿಸಿಸಿಕೊಂಡ ನೀವು ಯಾರು? ನಿಮ್ಮ ತೇಜಸ್ಸನ್ನು ಮರೆಸಿಕೊಂಡು ಹೀಗೆ ಕ್ಷುದ್ರವೇಷದಿಂದ ಸಂಚರಿಸುತ್ತಿರುವ ಕಾರಣವೇನು? ನೀವು ಇಲ್ಲಿಗೆ ಬಂದುದೇಕೆ? ಅಥವಾ ಭಗವದ್ಭಕ್ತರಾದ ಅನೇಕಬ್ರಾಹ್ಮಣೋತ್ತಮರು, ಗ್ರಾಮ್ಯ ಬುದ್ಧಿಯುಳ್ಳ ನನ್ನಂತಹ ಮೂಢರನ್ನು ಜ್ಞಾನೋಪದೇಶದಿಂದ ಉದ್ಧರಿಸುವುದಕ್ಕಾಗಿಯೇ, ಹುಚ್ಚರಂತೆ ವೇಷಧಾರಿಗಳಾಗಿ ವಿಶೇಷವಾಗಿ ಭೂಮಿಯಮೇಲೆ ತಿರುಗುವುದುಂಟಂತೆ. ಸನತ್ಕುಮಾರ, ನಾರದ, ಋಭು, ಅಂಗಿರಸ, ದೇವಲ, ಅಸಿತ, ವ್ಯಾಸ, ಮಾರ್ಕಂಡೇಯ, ಗೌತಮ, ವಸಿಷ್ಠ, ಪರಶುರಾಮ, ಕಪಿಲ, ಪರಾಶರ, ಶುಕ ದುರ್ವಾಸ, ಯಾಜ್ಞವಲ್ಕ್ಯ, ಜಾತುಕರ್ಣಿ, ಆರುಣಿ, ವೇದಶಿರಸ್ಸು, ರೋಮಶ, ಚ್ಯವನ, ದತ್ತಾತ್ರೇಯ, ಆಸುರಿ, ಸಪಂಜಲಿ ಪರಾಶರ, ಮೈತ್ರೇಯ, ಭರದ್ವಾಜ, ವಾರುಣಿ, ಬೌದ್ಧ, ಪಂಚಶಿಖ, ಹಿರಣ್ಯನಾಭ, ಕೌಸಲ್ಯ ಶ್ರುತದೇವ, ಋತಧ್ವಜ ಇವರೇ ಮೊದಲಾಗಿ ಇನ್ನೂ ಅನೇಕಮಹಾತ್ಮರು, ಜ್ಞಾನೋಪದೇಶದಿಂದ ಲೋಕಾನುಗ್ರಹಾರ್ಥವಾಗಿ ನಿಮ್ಮಂತೆಯೇ ಉನ್ಮತ್ತವೇಷದಿಂದ ಸಂಚರಿಸುತ್ತಿರುವರೆಂದಾಗಿ ಕೇಳಿರುವೆನು. ಆದರೆ ನೀವು ಯಾರೆಂದು ಕಾಣೆನು. ಯಾರಾದರೂ ಆಗಲಿ ಮಹಾಜ್ಞಾನಿಗಳಾದ ನೀವು, ಗ್ರಾಮ್ಯಪಶುವಿನಂತೆ ಮೂಢಬುದ್ಧಿಯಿಂದ ಅಜ್ಞಾನಾಂಧಕಾರದಲ್ಲಿ ಮುಳುಗಿ ಹೋಗುತ್ತಿರುವ ನನಗೆ ಜ್ಞಾನದೀಪವನ್ನು ತೋರಿ ಉದ್ಧರಿಸಬೇಕು" ಎಂದು ಬೇಡಿದನು. ಅದಕ್ಕಾಅಂಗಿರಸನು "ರಾಜೇಂದ್ರಾ ನನ್ನನ್ನು ನೀನು ಮರೆತೆಯೇನು? ನೀನು ಸಂತಾನವಿಲ್ಲದೆ ದುಃಖಿಸುತ್ತಿರುವಾಗ ನಿನಗೆ ನಾನೇ ಸಂತಾನವನ್ನು ಕೊಡಿಸಿದವನು. ನನಗೆ ಅಂಗಿರಸನೆಂದು ಹೆಸರು. ಈತನು ಬ್ರಹ್ಮಪುತ್ರನಾದ ನಾರದಮಹರ್ಷಿಯು. ನೀನು ಪುತ್ರಶೋಕದಿಂದ ವಿವೇಕವಿಲ್ಲದೆ ದುಃಖಿಸುತ್ತಿರುವುದನ್ನು ನೋಡಿ ನಿನ್ನನ್ನು ಅನುಗ್ರಹಿಸುವುದಕ್ಕಾಗಿ ನಾವಿಬ್ಬರೂ ಬಂದೆವು. ಭಗವದನುಗ್ರಹಕ್ಕೆ ಪಾತ್ರನಾದ ನೀನು, ಹೀಗೆ ದುಃ

ವುದು ಸರಿಯಲ್ಲ. ಆಗಲೂ ನಾನು ನಿನಗೆ ಜ್ಞಾನೋಪದೇಶವನ್ನು ಮಾಡಬೇಕೆಂಬ ಉದ್ದೇಶದಿಂದಲೇ ಬಂದಿದ್ದೆನು. ಆದರೆ ನಿನ್ನ ಉದ್ದೇಶವು ಆ ಜ್ಞಾನಾಭಿವೃದ್ಧಿಗೆ ಪ್ರತಿಬಂಧಕವಾಗಿದ್ದುದರಿಂದ, ನಿನ್ನ ಕೋರಿಕೆಯಂತೆ ನಿನಗೆ ಪುತ್ರನನ್ನೇ ಕೊಟ್ಟು ಹೊರಟುಹೋದೆನು. ನಾನು ಬಂದಕಾರ್ಯವನ್ನು ನಡೆಸುವುದಕ್ಕೆ ಅವಕಾಶವಿಲ್ಲದೆ ಹೋಯಿತು. ರಾಜೇಂದ್ರಾ! ಮಕ್ಕಳನ್ನು ಪಡೆಯುವುದರಿಂದಾಗುವ ದುಃಖವು ಎಷ್ಟೆಂಬುದು ನಿನ್ನ ಅನುಭವಕ್ಕೆ ಬಂದಿತಲ್ಲವೇ? ಇದರಂತೆಯೇ ಪತ್ನಿಯರೂ ಮನೆಗಳೂ, ಧನವೂ, ಇತರಸಂಪತ್ತುಗಳೂ, ವಿಷಯಸುಖಗಳೂ, ರಾಜ್ಯಸಂಪತ್ತುಗಳೂ ಚತುರಂಗಬಲವೂ, ರಾಜ್ಯಕೋಶಗಳೂ, ಪರಿಜನಸಮೃದ್ಧಿಯೂ, ಮಂತ್ರಿಗಳೂ, ಭೃತ್ಯರೂ, ಮಿತ್ರರೂ ಕ್ಷಣಕಾಲವಿದ್ದು ಅಗಲಿಹೋಗತಕ್ಕವರೆಂದು ತಿಳಿ! ಇವೆಲ್ಲವೂ ಆದಿಯಲ್ಲಿ ಸುಖಭ್ರಾಂತಿಯನ್ನು ಹುಟ್ಟಿಸಿದರೂ, ಕೊನೆಗೆ ದುಃಖ ಹೇತುಗಳಾಗಿಯೇ ಪರಿಣಮಿಸುವುವು. ಓ ರಾಜಾ! ಈ ನಿನ್ನ ಸಮಸ್ತಭಾಗ್ಯಗಳನ್ನೂ ಸ್ವಪ್ನಪದಾರ್ಥಗಳಂತೆ ತಿಳಿ! ಕನಸಿನಲ್ಲಿ ಒಮ್ಮೆ ರಾಜ್ಯಾಭಿಷಿಕ್ತನಾದಂತೆ ಕಂಡರೂ, ಉತ್ತರಕ್ಷಣದಲ್ಲಿಯೇ ಕಾಣದೆ ಹೋಗುವುದು. ಅದರಂತೆಯೇ ನಿನ್ನ ಸಂಪತ್ತುಗಳೆಲ್ಲವೂ ಶಾಶ್ವತಗಳಲ್ಲ! ಸ್ವಪ್ನಪದಾರ್ಥಗಳಿಗಿಂತಲೂ ಇವು ಸ್ವಲ್ಪ ಹೆಚ್ಚು ಕಾಲದವರೆಗೆ ಅನುಭವಕ್ಕೆ ಬಂದರೂ, ಇವೂ ನಶ್ವರಗಳೆಂದೇ ತಿಳಿ. ಅನಾದಿಯಾದ ಕರ್ಮವಾಸನೆಯೆಂಬುದು ಮನಸ್ಸಿನಲ್ಲಿ ಅಂಟಿಬರುತ್ತಿರುವುದು. ಆ ಮನಸ್ಸಿನಿಂದ ಪ್ರೇರಿಸಲ್ಪಟ್ಟ ಇಂದ್ರಿಯಗಳು ವಿಷಯಗಳನ್ನೇ ಬಯಸುತ್ತಿರುವುದರಿಂದ, ಕರ್ಮಗಳಲ್ಲಿ ಪ್ರವೃತ್ತಿಯುಂಟಾಗುವುದು. ಆ ಕರ್ಮಫಲಗಳನ್ನನುಭವಿಸುವುದಕ್ಕಾಗಿ ಪಂಚಭೂತಗಳಿಂದಲೂ, ಜ್ಞಾನಕರ್ಮೇಂದ್ರಿಯಗಳಿಂದಲೂ, ಏರ್ಪಟ್ಟಿರುವ ಈ ದೇಹವು ಪ್ರಾಪ್ತವಾಗುವುದು. ಈ ದೇಹವು ಜೀವನಿಗೆ ನಾನಾವಿಧಗಳಾದ ಕಷ್ಟಗಳನ್ನುಂಟುಮಾಡಿ ಕೊನೆಗೆ ನಾಶಹೊಂದುವುದು. ಆದುದರಿಂದ ನೀನು ಈ ತತ್ವವನ್ನು ಯೋಚಿಸಿ, ಹೆಂಡಿರುಮಕ್ಕಳಲ್ಲಿರುವ ಮೋಹವನ್ನು ಬಿಟ್ಟು ಶಾಂತಚಿತ್ತನಾಗಿರು! ನಿನ್ನ ಆತ್ಮವು ಬುದ್ಧೀಂದ್ರಿಯಾದಿಗಳಿಗಿಂತಲೂ, ಈ ಶರೀರಕ್ಕಿಂತಲೂ ಬೇರೆಯಾಗಿ, ಪರಮಾತ್ಮನಿಗೆ ಶರೀರವಾಗಿರುವುದೆಂದು ತಿಳಿ! ಆದುದರಿಂದ ನೀನು ಈ ಶರೀರಾದಿಗಳಲ್ಲಿ ಅಭಿಮಾನವನ್ನು ಬಿಟ್ಟು ವಿರಕ್ತನಾಗಿರು" ಎಂದನು. ಆ ಮೇಲೆ ನಾರದನೂ ಅದೇವಾಕ್ಯವನ್ನನುಮೋದಿಸುತ್ತ "ರಾಜೇಂದ್ರಾ! ನಾನು ನಿನಗೆ ಅತಿರಹಸ್ಯವಾದ ಒಂದು ಮಂತ್ರವನ್ನು ಉಪದೇಶಿಸುವೆನು. ಶ್ರದ್ಧೆಯಿಂದ ಅದನ್ನು ಸ್ವೀಕರಿಸು. ಈ ಮಂತ್ರವನ್ನು ನೀನು ಭಕ್ತಿಯಿಂದ ಧಾರಣಮಾಡಿಕೊಂಡರೆ, ಏಳು ರಾತ್ರಿಗಳೊಳಗಾಗಿ ಸಂಕರ್ಷಣರೂಪಿಯಾದ ಭಗವಂತನನ್ನು ನಿನ್ನ ಕಣ್ಣಿದಿರಿಗೆ

ನೋಡಬಹುದು. ರುದ್ರಾದಿದೇವತೆಗಳೆಲ್ಲರೂ ಯಾವನ ಪಾದಮೂಲವನ್ನಾಶ್ರಯಿಸಿ ದೇಹಾತ್ಮಭ್ರಮವನ್ನೂ, ತಾವೇ ಸ್ವತಂತ್ರರೆಂಬ ಭ್ರಾಂತಿಯನ್ನೂ, ತಾವು ಬ್ರಹ್ಮಾತ್ಮಕರಲ್ಲವೆಂಬ ಭ್ರಮವನ್ನೂ ಬಿಟ್ಟು, ಎಣೆಯಿಲ್ಲದೆಯೂ, ಎಲ್ಲೆಯಿಲ್ಲದೆಯೂ ಇರುವ ಆ ಭಗವಂತನ ಮಹಾಮಹಿಮೆಯನ್ನು ಹೊಂದಿದರೋ,, ಅದೇ ಮಹಿಮೆಯನ್ನು ನೀನೂ ಶೀಘ್ರದಲ್ಲಿ ಪಡೆಯಬಹುದು" ಎಂದನು. ಇದುಹದಿನೈದನೆಯ ಅಧ್ಯಾಯವು.

---

ನಾರದನು ಚಿತ್ರಕೇತುವಿಗೆ ಮಂತ್ರರೂಪವಾದ ಉಪನಿಷತ್ತನ್ನು ಉಪದೇಶಿಸಿದುದು. ಚಿತ್ರಕೇತುವು ಸಂಕರ್ಷಣನನ್ನು ಸ್ತುತಿಸಿದುದು.

ರಾಜೇಂದ್ರಾ! ಕೇಳು! ಆ ಮೇಲೆ ನಾರದನು ತನ್ನ ಯೋಗಮಹಿಮೆಯಿಂದ ಆ ರಾಜಕುಮಾರನ ಮೃತಶರೀರಕ್ಕೆ ಜೀವನನ್ನು ಕೂಡಿಸಿ, ಅವನಿಗಾಗಿ ಸುತ್ತಮುತ್ತಲೂ ದುಃಖಿತರಾಗಿ ನಿಂತಿದ್ದ ಬಂಧುವರ್ಗದವರೆಲ್ಲರಿಗೂ ತೋರಿಸಿದನು. ಅವರೆಲ್ಲರೂ ಆಶ್ಚರ್ಯದಿಂದ ನೋಡುತ್ತಿರುವಾಗ ಆ ಜೀವಾತ್ಮನನ್ನು ಕುರಿತು ಹೀಗೆಂದು ಹೇಳುವನು. "ಓ ಜೀವಾತ್ಮಾ! ಇದೋ! ನಿನಗಾಗಿ ದುಃಖಿಸುತ್ತಿರುವ ನಿನ್ನ ತಾಯಿ ತಂದೆಗಳನ್ನೂ, ಮಿತ್ರರನ್ನೂ, ಬಾಂಧವರನ್ನೂ ನೋಡಿ ನಿನಗೆ ಕ್ಷೇಮವಾಗಲಿ! ನೀನು ಅಪಮೃತ್ಯುವಿನಿಂದ ಈ ಶರೀರವನ್ನು ಬಿಟ್ಟಿದ್ದಿಯೇ ಹೊರತು, ನಿನಗೆ ಆಯುಸ್ಸು ಇನ್ನೂ ತೀರಲಿಲ್ಲ! ನೀನು ತಿರುಗಿ ಈ ಶರೀರದಲ್ಲಿ ಸೇರಿದ್ದು, ನಿನ್ನ ಮಿತ್ರರೊಡನೆ ಆನಿನ್ನ ಉಳಿದ ಆಯುಸ್ಸನ್ನು ಕಳೆಯುವವನಾಗು! ನಿನ್ನ ರಾಜ್ಯಸಿಂಹಾಸನವನ್ನೇರಿ, ನಿನ್ನ ತಂದೆಯು ಕೊಡತಕ್ಕ ಭೋಗ್ಯವಸ್ತುಗಳೆಲ್ಲವನ್ನೂ ಅನುಭವಿಸು" ಎಂದನು. ಅದಕ್ಕಾ ಜೀವನು ಚಿತ್ರಕೇತು ಮೊದಲಾದ ತನ್ನ ಬಂಧುಗಳೆಲ್ಲರೂ ಕೇಳುತ್ತಿರುವಹಾಗೆ ನಾರದನನ್ನು ಕುರಿತು 'ಓ ಮುನೀಂದ್ರಾ! ಪುಣ್ಯಪಾಪಕರ್ಮಗಳನ್ನನುಸರಿಸಿ, ದೇವತಿರ್ಯಙ್ಮನುಷ್ಯಾದಿಯೋನಿಗಳಲ್ಲಿ ತೊಳಲುತ್ತಲೇ ಇರುವ ನನಗೆ, ಈಗ ಹೊರತು ಬೇರೆ ಯಾವ ಜನ್ಮದಲ್ಲಿ ತಾನೇ ಈ ತಂದೆತಾಯಿಗಳೊಡನೆ ಸಂಬಂಧವುಂಟು? ಜನ್ಮಜನ್ಮಕ್ಕೂ ಹೀಗೆ ಬೇರೆಬೇರೆ ಅನೇಕರೊಡನೆ ಬಂಧುತ್ವವುಂಟಾಗುವುದರಿಂದ, ಈ ಚಿತ್ರಕೇತುಕೃತದ್ಯುತಿಗಳಿಬ್ಬರೇ ನನಗೆ ಒಂದೊಂದು ಜನ್ಮದಲ್ಲಿಯೂ ಬಂಧುಗಳೆಂಬ ನಿಶ್ಚಯವಿಲ್ಲ. ಹೀಗೆಯೇ ಸಮಸ್ತಜೀವಗಳೂ,

ಅನೇಕ ಜನ್ಮಗಳನ್ನೆತ್ತ ಬೇಕಾದುದರಿಂದ, ಜನ್ಮ ಜನ್ಮಕ್ಕೆ ಬೇರೆಬೇರೆ ಬಂಧುಗಳೂ, ಜ್ಞಾತಿಗಳೂ, ಮಿತ್ರರೂ, ಶತ್ರುಗಳೂ, ಉದಾಸೀನರೂ ಸಂಭವಿಸುವರು. ಹೀಗೆ ಜನ್ಮ ಪರಂಪರೆಗಳಿಂದ ಬಂಧುತ್ವವೂ ಮಾರ್ಪಡುತ್ತ ಬರುವುದು. ಚಿನ್ನ, ಬೆಳ್ಳಿ ಮೊದ ಲಾದ ವಿಕ್ರಯವಸ್ತುಗಳು, ಆಗಾಗ ಬೆಲೆಕೊಟ್ಟವನಿಗೆ ಅಧೀನವಾಗಿ, ಒಬ್ಬನಿಂದ ಮತ್ತೊಬ್ಬನಿಗೆ ಹೋಗಿಸೇರುವಂತೆ, ಜೀವಗಳೂಕೂಡ, ಕರ್ಮಾನುಸಾರವಾಗಿ ದೇವ ಮನುಷ್ಯಾದಿಯೋನಿಗಳಲ್ಲಿ ತೊಳಲುತ್ತ, ಒಬ್ಬನ ಸಂಬಂಧವನ್ನು ಬಿಟ್ಟು ಮತ್ತೊಬ್ಬನ ಸಂಬಂಧವನ್ನು ಹೊಂದುವುವು. ಜೀವನು ನಿತ್ಯನಾಗಿದ್ದರೂ ಅವನಿಂದ ಸಂಪಾದಿಸಲ್ಪಟ್ಟ ವಸ್ತುಗಳಿಗೂ, ಅವನಿಗೂ ಇರತಕ್ಕ ಸಂಬಂಧವು ನಿತ್ಯವಲ್ಲ. ಮತ್ತು ಮನುಷ್ಯನಿಗೆ ಆಯಾವಸ್ತುಗಳ ಸಂಬಂಧವಿರುವವರೆಗೆ ಮಾತ್ರ ಅವುಗ ಳಲ್ಲಿ ತನ್ನದೆಂಬ ಬುದ್ಧಿಯೂ ಹುಟ್ಟುವುದು. ಕ್ರಯವಿಕ್ರಯಾದಿಗಳಿಂದ ಆ ಸಂಬಂ ಧವು ತಪ್ಪಿಹೋದೊಡನೆ ಅದರಲ್ಲಿ ಮಮತೆಯೂ ತಪ್ಪಿಹೋಗುವುದು. ಜೀವನು ಸಹಜಸ್ಥಿತಿಯಲ್ಲಿ ದೇಹಾತ್ಮಾಭಿಮಾನವಿಲ್ಲದವನಾಗಿದ್ದರೂ, ಕರ್ಮಸಂಬಂಧದಿಂದ ದೇವಾದಿಶರೀರಗಳಲ್ಲಿ ಪ್ರವೇಶಿಸಿದಾಗ, ಆ ದೇಹದಲ್ಲಿಯೂ, ದೇಹಸಂಬಂಧಿಗ ಳಲ್ಲಿಯೂ ತನ್ನದೆಂಬ ಅಭಿಮಾನವನ್ನಿಟ್ಟಿರುವನು. ಆ ದೇಹವೇ ಬಿಟ್ಟು ಹೋದ ಮೇಲೆ, ಆ ದೇಹದಮೂಲಕವಾಗಿ ಏರ್ಪಟ್ಟತಂದೆ, ಮಕ್ಕಳು ಮುಂತಾದ ಸಂಬಂಧವು ಹೇಗೆ ನಿಲ್ಲುವುವು? ಜೀವನಿಗೆ ಮೊದಲು ಕೊನೆಯೆಂಬುದೊಂದೂ ಇಲ್ಲ. ಜೀವನು ಅತಿಸೂಕ್ಷ್ಮನಾದುದರಿಂದ ಆಯುಧಗಳಿಂದಿರಿಯುವುದಕ್ಕಾಗಲೀ, ಬೆಂಕಿಯಿಂದ ಸುಡುವುದಕ್ಕಾಗಲೀ ಸಾಧ್ಯವಲ್ಲ. ಒಂದೇವಿಧವಾದ ಜ್ಞಾನಾಕಾರದಿಂದಿರತಕ್ಕ ಬುದ್ಧಿ, ಇಂದ್ರಿಯಗಳು, ಮನಸ್ಸು, ಪ್ರಾಣಗಳು, ಇವೆಲ್ಲಕ್ಕೂ ಆಧಾರನಾಗಿರತಕ್ಕ ವನು. ಸ್ವಯಂಪ್ರಕಾಶನು. ಇಂತಹ ಜೀವಾತ್ಮನನ್ನು ಪರುಮಪುರುಷನು, ಸತ್ವ, ರಜಸ್ಸು, ತಮಸ್ಸುಗಳೆಂಬ ತನ್ನ ಮಾಯೆಯಗುಣಗಳಿಂದ, ದೇವಮನುಷ್ಯಾದಿರೂಪ ಗಳಲ್ಲಿ ಸೇರಿಸಿ, ಈ ಪ್ರಪಂಚರೂಪವಾಗಿ ಹರಡುವನು. ಆ ಪರಮಪುರುಷನು ಯಾರಲ್ಲಿಯೂ ತನ್ನವನೆಂದೂ, ಶತ್ರುವೆಂದೂ, ಮಿತ್ರನೆಂದೂ ಭೇದಬುದ್ಧಿಯೇ ಇಲ್ಲದೆ, ಸರ್ವಸಮನಾಗಿರುವನು. ಆಯಾ ಜೀವಗಳು ನಡೆಸಿದ ಪುಣ್ಯಪಾಪಕರ್ಮ ಗಳನ್ನು ವಿಮರ್ಶಿಸಿ, ಅವರವರಿಗೆ ಆಯಾ ಕರ್ಮಫಲಕ್ಕನುಸಾರವಾದ ಸ್ಥಿತಿಯನ್ನು ಕೊಟ್ಟು, ತಾನೂ ಅವರಲ್ಲಿ ಒಳಹೊಕ್ಕು ಸಾಕ್ಷಿಯಾಗಿ ನೋಡುತ್ತಿರುವನು. ಜೀವಾತ್ಮರೇ ಕರ್ಮವಶವಾಗಿ ತಮ್ಮ ಕರ್ಮಾನುಸಾರವಾದ ದೇವಾದಿರೂಪಗಳನ್ನು ಹೊಂದುವುದರಿಂದ ಸೃಷ್ಟಿಯಲ್ಲಿ ಅನೇಕವ್ಯತ್ಯಾಸಗಳು ಕಾಣಬರುವುವು. ಭಗವಂ

ತನು ಸರ್ವಸಮನೆಂಬುದಕ್ಕೆ ಆದೇನೂ ಪ್ರತಿಬಂಧಕವಾಗಲಾರದು. ಮತ್ತು ಆ ವಸ್ತುಗಳ ಗುಣದೋಷಗಳಾಗಲೀ, ಸುಖದುಃಖಾದಿಫಲಗಳಾಗಲೀ, ಆ ಪರಮಪುರುಷನಿಗೆ ಸೇರಲಾರವು. ಅವನು ಕೇವಲತಟಸ್ಥನಾಗಿಯೇ ನೋಡುತ್ತಿರುವನು. ಆದರೆ ಜೀವನೂ ಹೀಗೆಯೇ ಸಹಜವಾಗಿ ಕರ್ಮರಹಿತನು. ಅವನು ನಡೆಸತಕ್ಕ ಪುಣ್ಯಪಾಪಗಳಿಗೆ ಅವನ ದೇಹವಲ್ಲದೆ ಅವನು ಕರ್ತನಲ್ಲ. ದೇಹೇಂದ್ರಿಯಾದಿಗಳನ್ನು ಕರ್ಮಗಳಲ್ಲಿ ನಿಯಮಿಸುವುದುಮಾತ್ರ ಜೀವನ ಕಾರ್ಯವು. ಆದರೆ "ಜೀವನೂ, ಪರಮಪುರುಷನೂ ಇಬ್ಬರೂ ಕರ್ಮರಹಿತರಾಗಿರುವಾಗ, ಜೀವನುಮಾತ್ರ ಕರ್ಮಫಲಗಳನ್ನನುಭವಿಸುವುದೇಕೆ? ಪರಮಪುರುಷನಿಗೆ ಈ ಫಲಾನುಭವವಿಲ್ಲದಿರುವುದೇಕೆ?" ಎಂದರೆ, ಈ ವಿಚಾರದಲ್ಲಿ ಜೀವನಿಗೂ ಪರಮಪುರುಷನಿಗೂ ಒಹಳ ತಾರತಮ್ಯವುಂಟು. ಪರಮಪುರುಷನು ಪ್ರಕೃತಿಪುರುಷರಿಬ್ಬರಿಗೂ ನಿಯಾಮಕನು. ಅವೆರಡಕ್ಕಿಂತಲೂ ವಿಲಕ್ಷಣನು. ಯಾವಾಗಲೂ ಕಂದಿಕುಂದದಜ್ಞಾನಾತಿಶಯದಿಂದ, ತನಗೂ, ಆ ಪ್ರಕೃತಿಪುರುಷರಿಗೂ ಇರುವ ಭೇದವನ್ನು ಚೆನ್ನಾಗಿ ತಿಳಿದವನು. ಆದುದರಿಂದ ಪರನು ಪುರುಷನಿಗೆ ಶರೀರಗತದೋಷವಾಗಲೀ, ಕರ್ಮಫಲಗಳಾಗಲೀ ಯಾವುದೂ ತಗುಲಲಾರವು. ಜೀವನಾದರೋ, ಕರ್ಮವಶನಾಗಿ ಮಾಯಾಗುಣಗಳಿಂದುಂಟಾದ ದೇಹವನ್ನೇ ತಾನೆಂದು ಭ್ರಮಿಸುವನು. ತಾನೇ ಕರ್ತೃವೆಂದೂ ಅಭಿಮಾನಿಸುವನು. ಆ ಭ್ರಾಂತಿಗೆ ತಕ್ಕಂತೆ ಆ ಕರ್ಮಫಲಗಳನ್ನೂ ಅನುಭವಿಸುವನು. ಹೀಗೆ ಕರ್ಮಾನುಸಾರವಾಗಿ ತಗುಲುಕಟ್ಟಿದ ಈ ಬಂಧುಗಳಿಂದಲೂ ಈ ರಾಜ್ಯಕೋಶಾದಿಗಳಿಂದಲೂ ಇನ್ನು ನನಗೇನು" ಎಂದು ಹೇಳಿ ಜೀವನು ತಿರುಗಿ ಆ ದೇಹವನ್ನು ಬಿಟ್ಟು ಹೊರಟು ಹೋದನು. ಇದನ್ನು ಕಂಡು ಅಲ್ಲಿದ್ದ ಬಂಧುವರ್ಗದವರೆಲ್ಲರೂ ಆಶ್ಚರ್ಯಭರಿತರಾದರು. ಅವರಿಗೆ ಅವನಲ್ಲಿದ್ದ ಮೋಹಪಾಶವೂ ಬಿಟ್ಟುಹೋಯಿತು. ಅವರೆಲ್ಲರೂ ಬಂಧುಸ್ನೇಹದಿಂದುಂಟಾದ ದುಃಖವನ್ನು ಬಿಟ್ಟು, ಆ ರಾಜಕುಮಾರನ ಮೃತದೇಹಕ್ಕೆ ದಹನಾದಿ ಸಂಸ್ಕಾರಗಳೆಲ್ಲವನ್ನೂ ನಡೆಸಿದರು. ವಿಷಪ್ರಯೋಗದಿಂದ ಆ ಬಾಲಕವನ್ನು ಕೊಂದ ರಾಜಪತ್ನಿಯರೆಲ್ಲರೂ, ಈ ತತ್ತ್ವೋಪದೇಶವನ್ನು ಕೇಳಿದ ಮೇಲೆ ತಮ್ಮ ನೀಚಕೃತ್ಯಕ್ಕಾಗಿ ಬಹಳ ಲಜ್ಜೆಪಟ್ಟು, ಮುಖದಲ್ಲಿ ಸ್ವಲ್ಪವಾದರೂ ಕಳೆಯಿಲ್ಲದೆ, ಅಶಿಶುಹತ್ಯಾಪಾತಕವನ್ನು ತೊಲಗಿಸಿಕೊಳ್ಳುವುದಕ್ಕಾಗಿ ಬ್ರಾಹ್ಮಣರ ಮಾತಿನಿಂದ ಯಮುನಾನದಿಗೆ ಹೋಗಿ, ಅಲ್ಲಿ ಪ್ರಾಯಶ್ಚಿತ್ತವನ್ನು ನಡೆಸಿಕೊಂಡರು. ಇತ್ತಲಾಗಿ ಚಿತ್ರಕೇತುವೂ ಕೂಡ ನಾರದನ ಉಪದೇಶದಿಂದಲೂ, ಅಂಗಿರಸರ ಹಿತೋಕ್ತಿಗಳಿಂದಲೂ, ಆ ಜೀವನ ತತ್ವಬೋಧನೆಯಿಂದಲೂ ವಿವೇಕವನ್ನು ತಂದುಕೊಂಡು, ಕೊಳದ ಕೆಸರಿನಿಂದ ಮೇಲೆದ್ದುಬಂದ ಮದದಾನೆಯಂತೆ, ತನ್ನ ಆ

ಮನೆಬೊಕ್ಕಸಗಳೆಂಬ ಮಹಾಂಧಕಾರದಿಂದ ತಪ್ಪಿಸಿಕೊಂಡು, ಯಮುನೆಯಲ್ಲಿ ಸ್ನಾನಮಾಡಿ, ತನ್ನ ಪಿತೃಗಳಿಗೆ ತರ್ಪಣಾದಿಗಳನ್ನು ಬಿಟ್ಟು, ಮೌನವನ್ನು ಹಿಡಿದು ಇಂದ್ರಿಯಗಳನ್ನು ಜಯಿಸಿ ನಾರದನಬಳಿಗೆ ಬಂದು ನಮಸ್ಕರಿಸಿದನು. ಭಗವಂತನಾದ ನಾರದನು ಗುರುಭಕ್ತಿಯಿಂದ ನಮಸ್ಕರಿಸುತ್ತಿರುವ ಆ ಚಿತ್ರಕೇತುವನ್ನು ನೋಡಿ ಅವನ ವಿನಯಾದಿಗುಣಗಳಿಗೆ ಸಂತೋಷಪಟ್ಟು ಈ ಕೆಳಗೆ ಹೇಳುವ ಮಂತ್ರೋಪನಿಷತ್ತೆಂಬ ವಿದ್ಯೆಯನ್ನು ಉಪದೇಶಿಸಿದನು

"ಓ ದೇವಾ! ವಾಸುದೇವ ಪ್ರದ್ಯುಮ್ನ ಅನಿರುದ್ಧ ಸಂಕರ್ಷಣರೆಂಬ ನಾಲ್ಕು ವ್ಯೂಹಗಳಿಂದ ಪ್ರಕಾಶಿಸುವ ನಿನಗೆ ನಮಸ್ಕಾರವು! ಕೇವಲ ಜ್ಞಾನಾನಂದ ಸ್ವರೂಪಿನಾದ ನಿನಗೆ ನಮಸ್ಕಾರವು. ಹಸಿವು, ಬಾಯಾರಿಕೆ, ಶೋಕ, ಮೋಹ, ಜರೆ, ಮರಣಗಳೆಂಬ ಷಡೂರ್ಮಿಗಳಿಲ್ಲದೆ, ಆತ್ಮಾನುಭವದಿಂದಲೇ ಆನಂದಿಸುತ್ತಿರುವ ನಿನಗೆ ನಮಸ್ಕಾರವು. ಇಂದ್ರಿಯಗಳಿಗೂ, ಇಂದ್ರಿಯಾಧಿದೇವತೆಗಳಿಗೂ ನಿಯಾಮಕನಾದ ನಿನಗೆ ನಮಸ್ಕಾರವು. ಸ್ವರೂಪದಿಂದಲೂ, ಗುಣದಿಂದಲೂ ಮೇಲೆನಿಸಿದ ನಿನಗೆ ನಮಸ್ಕಾರವು. ಅನಂತಶಕ್ತಿಯುಳ್ಳ ನಿನಗೆ ನಮಸ್ಕಾರವು. ಓ ಮಹಾತ್ಮಾ! ವೇದಗಳಾಗಲೀ, ಯೋಗಿಗಳ ಮನಸ್ಸಾಗಲೀ, ನಿನ್ನ ಸ್ವರೂಪವನ್ನು ತಿಳಿಯಬೇಕೆಂದು ಎಷ್ಟೆಷ್ಟು ಪ್ರಯತ್ನಪಟ್ಟರೂ ತಿಳಿಯಲಾರದೆ ಹಿಂತಿರುಗುವುವು. ಅಂತಹ ಅಪರಿಚ್ಛಿನ್ನ ಸ್ವರೂಪನಾದ ನಿನ್ನನ್ನು ಯಾರುತಾನೇ ತಿಳಿಯಬಲ್ಲರು? ನೀನು ಕೇವಲ ಜ್ಞಾನಸ್ವರೂಪನು. ನಿನಗಿಂತಲೂ ಉತ್ತಮರಾಗಲೀ, ನಿನಗೆ ಸಮಾನರಾಗಲೀ ಬೇರೊಬ್ಬರಿಲ್ಲವು. ಚೇತನಾಚೇತನಗಳಿಗಿಂತಲೂ ನೀನು ವಿಲಕ್ಷಣನು. ಅಂತಹ ನೀನು ನಮ್ಮನ್ನು ರಕ್ಷಿಸುತ್ತಿರಬೇಕು. ಮಣ್ಣಿನಿಂದ ಗಡಿಗೆಯು ಹೇಗೋಹಾಗೆ ಚೇತನಾಚೇತನರೂಪನಾದ ಈ ಪ್ರಪಂಚವೆಲ್ಲವೂ ನಿನಗೆ ಶರೀರವಾದ ಸೂಕ್ಷ್ಮ ಚಿದಚಿತ್ತುಗಳಿಂದಲೇ ಉಂಟಾಗಿ, ನಿನ್ನ ರೂಪದಿಂದಲೇ ಇದ್ದು, ಕೊನೆಗಾಲಕ್ಕೂ ನಿನ್ನ ರೂಪದಿಂದಲೇ ಉಳಿಯುವುದು. ಹೀಗೆ ಸೃಷ್ಟಿ ಸ್ಥಿತಿ ಸಂಹಾರಗಳಲ್ಲಿ ಮೂರು ಬಗೆಯಾಗಿ ತೋರುವ ಸ್ವರೂಪವುಳ್ಳ ನಿನಗೆ ನಮಸ್ಕಾರವು. ಲೋಕದ ಒಳಹೊರಗೆಲ್ಲಾ ನೀನು ವ್ಯಾಪಿಸಿದ್ದರೂ, ಆಕಾಶಶರೀರಕನಾಗಿ ಹರಡಿರುವ ನಿನ್ನನ್ನು, ಮನಸ್ಸಾಗಲೀ, ಬುದ್ಧಿಯಾಗಲೀ, ಇಂದ್ರಿಯಗಳಾಗಲೀ ಕಂಡುಕೊಳ್ಳಲಾರವು. ಅಂತಹ ಆದ್ಭುತಶಕ್ತಿಯುಳ್ಳ ನಿನಗೆ ನಮಸ್ಕಾರವು. ಅಗ್ನಿಸಂಬಂಧವಿಲ್ಲದಿದ್ದಾಗ ದಹನಶಕ್ತಿಯೂ ಇಲ್ಲದಿರುವಂತೆಯೇ, ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ ಇವೆಲ್ಲವೂ, ನಿನ್ನ ಅಂಶವಿದ್ದಾಗಲೇ ಜ್ಞಾನಕ್ರಿಯಾಶಕ್ತಿಗಳನ್ನು ಹೊಂದಿ, ಕರ್ಮಗಳಲ್ಲಿ ಪ್ರವರ್ತಿಸುವುವು. ಆ ಶಕ್ತಿಯಿಲ್ಲದಿದ್ದಾಗ, ತಾವೂ ಕೆಲಸಮಾಡುವುದಕ್ಕೆ

ಅಸಮರ್ಥಗಳಾಗುವುವು. ಮತ್ತು ಅಗ್ನಿಸಂಬಂಧದಿಂದ ಲೋಹಗಳಿಗೆ ದಹನಶಕ್ತಿಯುಂಟಾದಾಗಲೂಕೂಡ, ಅದು ಇತರಪದಾರ್ಥಗಳನ್ನು ದಹಿಸಬಲ್ಲುದೇಹೊರತು ಆ ಬೆಂಕಿಯನ್ನು ಸುಡಲಾರದಲ್ಲವೇ ? ಅದರಂತೆಯೇ ದೇಹೇಂದ್ರಿಯಾದಿಗಳೂಕೂಡ ನಿನ್ನಿಂದ ಜ್ಞಾನಕ್ರಿಯಾಸಾಮರ್ಥ್ಯವನ್ನು ಪಡೆದಿದ್ದರೂ, ಇತರ ಪದಾರ್ಥಗಳಲ್ಲಿ ಆ ಶಕ್ತಿಯನ್ನು ನಡೆಸುವಂತೆ ನಿನ್ನಲ್ಲಿ ನಡೆಸಲಾರವು. ಆದಕ್ಕಾಗಿಯೇ ಬುದ್ಧೀಂದ್ರಿಯಾದಿಗಳು ನಿನ್ನನ್ನು ಸಾಕ್ಷಾತ್ಕರಿಸಲಾರವು. ಆದರೆ ಜೀವನುಮಾತ್ರ ಸ್ವತಸ್ಸಿದ್ಧವಾದ ಜ್ಞಾನಶಕ್ತಿಯುಳ್ಳವನಾದುದರಿಂದ, ನಿನ್ನ ಅನುಗ್ರಹಕ್ಕೆ ಪಾತ್ರನಾದಾಗ, ನಿನ್ನನ್ನು ಸಾಕ್ಷಾತ್ಕರಿಸಬಲ್ಲನು. ಓ ದೇವಾ ! ಜ್ಞಾನಾದಿಷಡ್ಗುಣಗಳಿಂದ ತುಂಬಿ, ಮಹಾಪುರುಷನೆಂದೂ, ಮಹಾನುಭಾವನೆಂದೂ, ಮಹಾವಿಭೂತಿಯುಳ್ಳವನೆಂದೂ ಕೀರ್ತಿಸಲ್ಪಡುವ ನಿನಗೆ ನಮಸ್ಕಾರವು ! ಅನೇಕಭಕ್ತರ ಕೈಗಳಿಂದ ಪೂಜಿಸಲ್ಪಟ್ಟ ಪಾದಾರವಿಂದಗಳುಳ್ಳವನಾಗಿ, ಎಲ್ಲಕ್ಕಿಂತಲೂ ಮೇಲಾದ ಸ್ಥಾನದಲ್ಲಿ, ಎಣೆಯಿಲ್ಲದ ಮಹಿಮೆಯಿಂದ ಬೆಳಗುತ್ತಿರುವ ನಿನಗೆ ನಮಸ್ಕಾರವು.''

ಓ ಪರೀಕ್ಷಿದ್ರಾಜಾ ! ನಾರದಮಹರ್ಷಿಯು ಭಕ್ತನಾದ ಚಿತ್ರಕೇತುವಿಗೆ, ಭಗವಂತನಸ್ತುತಿರೂಪವಾದ ಈ ಮಂತ್ರವಿದ್ಯೆಯನ್ನು ಪದೇಶಿಸಿ, ಅಂಗಿರಸನೊಡನೆ ಹಿಂತಿರುಗಿ ಸತ್ಯಲೋಕಕ್ಕೆ ಹೊರಟುಹೋದನು. ಇತ್ತಲಾಗಿ ಚಿತ್ರಕೇತುವು, ನಾರದನು ಹೊರಟುಹೋದಮೇಲೆ, ಏಳು ದಿನಗಳಪರೆಗೆ ಕೇವಲಜಲಾಹಾರದಿಂದ್ಕಾಲವನ್ನು ಕಳೆಯುತ್ತ ಆ ಮಂತ್ರವಿದ್ಯೆಯನ್ನು ಎಚ್ಚರದಿಂದ ಜಪಿಸುತ್ತಿದ್ದನು. ಏಳುದಿನಗಳು ಕಳೆದನಂತರ ಆ ಮಂತ್ರಮಹಿಮೆಯಿಂದ, ಅವನು ವಿದ್ಯಾಧರಪತಿತ್ವವನ್ನು ಹೊಂದಿದನು. ಆಮೇಲೆ ಇನ್ನೂ ಕೆಲವು ದಿನಗಳವರೆಗೆ ಆದೇಮಂತ್ರವನ್ನು ಬಿಡದೆ ಜಪಿಸುತ್ತಿದ್ದನು. ಆದರ ಮಹಿಮೆಯಿಂದ ಅವನಿಗೆ ಇಷ್ಟಬಂದ ಲೋಕಕ್ಕೆ ಹೋಗಬಹುದಾದ ಶಕ್ತಿಯುಂಟಾಯಿತು. ಒಡನೆಯೇ ಪಾತಾಳದಕಡೆಗೆ ಹೊರಟು, ಅಲ್ಲಿ ತಾವರೆದಂಟಿನಂತೆ ಶುಭ್ರವಾದ ದೇಹಕಾಂತಿಯುಳ್ಳವನಾಗಿಯೂ, ನೀಲವಸ್ತ್ರವನ್ನು ಧರಿಸಿದವನಾಗಿಯೂ, ಕಿರೀಟ, ಕೇಯೂರ, ಕಟಿಸೂತ್ರ, ಕಂಕಣಗಳೇ ಮೊದಲಾದ ದಿವ್ಯಭೂಷಣಗಳನ್ನು ತೊಟ್ಟವನಾಗಿಯೂ ಪ್ರಸನ್ನಮುಖದಿಂದಲೂ, ರಕ್ತಾಂತವಾದ ನೇತ್ರದಿಂದಲೂ ಶೋಭಿತನಾಗಿಯೂ ಅನೇಕ ಸಿದ್ಧಗಣಗಳಿಂದ ಪರಿವೃತನಾಗಿಯೂ ಇದ್ದ, ದೇವದೇವನಾದ ಸಂಕರ್ಷಣಮೂರ್ತಿಯನ್ನು ಕಂಡನು. ಆದಿಪುರುಷನಾದ ಆ ಭಗವಂತನ ಸ್ವರೂಪವನ್ನು ಕಂಡಮಾತ್ರಕ್ಕೆ, ಅವನ ಪಾಪಗಳೆಲ್ಲವೂ ನೀಗಿ, ಅವನ ಮನಸ್ಸು ನಿರ್ಮಲವಾಯಿತು. ಆ ಭಗವದ್ದರ್ಶನದಿಂದುಂಟಾದ ಭಕ್ತಿವಿಶೇಷದಿಂದ, ಅವನ ಕಣ್ಣುಗಳಲ್ಲಿ

ಆನಂದಬಾಷ್ಪವು ತುಳುಕುತ್ತಿತ್ತು. ಅವನ ಮೈಯೆಲ್ಲವೂ ಪುಳಕಿತವಾಯಿತು. ತನ್ನ ಆನಂದಬಾಷ್ಪಗಳಿಂದಲೇ ಭಗವಂತನ ಪಾದಪೀಠವನ್ನು ತೊಳೆಯುವಂತೆ, ಬಾರಿಬಾರಿಗೂ ಆತನ ಪಾದಾರವಿಂದಗಳಿಗೆ ತಲೆಯನ್ನು ಸೋಕಿಸಿ ನಮಸ್ಕರಿಸುತ್ತಿದ್ದನು. ಆ ಭಗವಂತನನ್ನು ಸ್ತೋತ್ರಮಾಡುವುದಕ್ಕಾಗಿ ಬಾಯೆತ್ತುವಷ್ಟರಲ್ಲಿ, ಆನಂದಾತಿಶಯದಿಂದ ಬಾಯಲ್ಲಿ ಅಕ್ಷರಗಳೇ ಹೊರಡದಂತಾಯಿತು. ಕೊನೆಗೆ ಚಿತ್ರಕೇತುವು ತನ್ನ ಬುದ್ಧಿಬಲದಿಂದ ಮನಸ್ಸನ್ನು ಸಮಾಧಾನಸ್ಥಿತಿಗೆ ತಂದು ಕೊಂಡು, ವಚನಸಾಮರ್ಥ್ಯವನ್ನು ಪಡೆದು, ಇಂದ್ರಿಯಗಳಿಗೆ ಹೊರಗಿನ ವ್ಯಾಪಾರಗಳೆಲ್ಲವನ್ನೂ ತಪ್ಪಿಸಿ, ಲೋಕಗುರುವಾಗಿಯೂ, ಪಾಂಚರಾತ್ರಪ್ರತಿಪಾದ್ಯನಾಗಿಯೂ ಇರುವ ಆ ಭಗವಂತನನ್ನು ಹೀಗೆಂದು ಸ್ತುತಿಸುವನು.

"ಓ ದೇವಾ! ನೀನು ಬೇರೊಬ್ಬರಿಗೆ ದುರ್ಜಯನಾಗಿದ್ದರೂ, ಸಮಸ್ತವನ್ನೂ ಬ್ರಹ್ಮಾತ್ಮಕವೆಂದು ಅನುಸಂಧಾನಮಾಡತಕ್ಕ ಜಿತೇಂದ್ರಿಯರಾದ ಸಾಧುಗಳಿಗೆ ನೀನಾಗಿಯೇ ಅಧೀನನಾಗಿ ನಿಲ್ಲುವೆ! ಅನನ್ಯಪ್ರಯೋಜನರಾಗಿ ನಿನ್ನನ್ನು ಭಜಿಸತಕ್ಕವರಿಗೆ, ನಿನ್ನನ್ನೇ ನೀನು ಕೊಡತಕ್ಕವನು. ಜ್ಞಾನಿಗಳು ಭಕ್ತಿಯಿಂದ ನಿನ್ನೆನ್ನು ವಶಪಡಿಸಿಕೊಳ್ಳುವಂತೆ, ನೀನೂ ನಿನ್ನ ಅಸಾಧಾರಣವಾತ್ಸಲ್ಯದಿಂದ ಅವರನ್ನು ವಶಪಡಿಸಿಕೊಳ್ಳುವೆ. ಓ ಪರಮಪುರುಷಾ! ಜಗತ್ತಿನ ಸೃಷ್ಟಿಸ್ಥಿತಿಲಯಗಳೆಲ್ಲವೂ ನಿನ್ನ ಲೀಲೆಗಳು! ಸೃಷ್ಟಿಕರ್ತರೆಂದು ಕರೆಯಲ್ಪಡುವ ಬ್ರಹ್ಮರುದ್ರಾದಿಗಳೆಲ್ಲರೂ ಬೆಂಕಿಯಿಂದ ಹೊರಡುವ ಕಿಡಿಗಳಂತೆ, ನಿನ್ನ ಅಂಶಾಂತದಿಂದ ಹುಟ್ಟಿದವರು! ಇಷ್ಟುಮಾತ್ರಕ್ಕೆ ಅವರು ನಿನ್ನ ಮಾಯೆಯಿಂದ ಮೋಹಿತರಾಗಿ, ತಾವೇ ಆ ಕಾರ್ಯವನ್ನು ನಡೆಸುವೆನೆಂಬ ಹೆಮ್ಮೆಯಿಂದ ಹೋರಾಡುವುದೊಂದೇಹೊರತು, ಅವರಿಗೆ ಸರ್ವೇಶ್ವರತ್ವವು ಎಂದಿಗೂ ಸಿದ್ಧಿಸಲಾರದು. ಎಲ್ಲಕ್ಕಿಂತಲೂ ಸಣ್ಣದಾದ ಪರಮಾಣುವೊದಲುಗೊಂಡು, ಎಲ್ಲಕ್ಕಿಂತಲೂ ಮಹತ್ತಾದ ಪರಮಮಹತ್ತಿನ ವರೆಗೆ ನಡೆಯತಕ್ಕ ಎಲ್ಲಾ ವಿಕಾರಗಳಲ್ಲಿಯೂ, ಆಯಾ ವಿಕಾರದಿಂದುಂಟಾದ ವಸ್ತುಗಳ ಉತ್ಪತ್ತಿ, ಸ್ಥಿತಿ, ವಿನಾಶಾವಸ್ಥೆಗಳಲ್ಲಿಯೂ, ನೀನು ಅಂತರಾತ್ಮನಾಗಿರತಕ್ಕವನು. ನೀನುಮಾತ್ರ ಆದಿಮಧ್ಯಾಂತಗಳಿಲ್ಲದವನು. ಕಾರ್ಯರೂಪವಾಗಿ ಕಾಣತಕ್ಕ ಈ ಸಮಸ್ತಪ್ರಪಂಚಕ್ಕೂ ಆದಿಯಲ್ಲಿಯೂ, ಕೊನೆಯಲ್ಲಿಯೂ ಇರತಕ್ಕ ಸ್ವರೂಪವು ಯಾವುದುಂಟೋ ಅದೇಸ್ಥಿರವಾದುದು. ಎಂದರೆ, ನಿನ್ನ ರೂಪವೇ ಮೊದಲು ಕಾರಣವಾಗಿದ್ದು, ನಡುವೆ ಕಾರ್ಯರೂಪವಾಗಿ ಪರಿಣಮಿಸಿ, ತಿರುಗಿ ಮೊದಲಿದ್ದಂತೆಯೇ ಕಾರಣರೂಪವಾಗಿ ಉಳಿಯುವುದು. ಹೊನ್ನು, ಮಣ್ಣು ಮುಂತಾದುವು ಮೊದಲು ನಿಜಸ್ವರೂಪದಿಂದ ಕಾರಣವಾಗಿದ್ದು, ನಡುವೆ ಗಡಿಗೆ,

ಆಭರಣ, ಮುಂತಾದ ಆಕಾರಗಳನ್ನು ಹೊಂದಿದ್ದು, ಕೊನೆಗೆ ತನ್ನ ರೂಪದಿಂದಲೇ ಹೊನ್ನಾಗಿಯೂ, ಮಣ್ಣಾಗಿಯೂ ಉಳಿಯುವುದಲ್ಲವೇ? ಹೀಗೆಮೊದಲು ನೀನೇ ಕಾರಣವಸ್ತುವಾಗಿಯೂ, ನಡುವೆ ಬಂದಕಾರ್ಯರೂಪವು ಹೋದಮೇಲೆ ನಿಲ್ಲತಕ್ಕ ವಸ್ತುವಾಗಿಯೂ ಇರುವುದರಿಂದ, ಇವುಗಳ ನಡುವೆ ನಡೆಯತಕ್ಕ ಸೃಷ್ಟ್ಯಾದಿ ಗಳೂ ನಿನ್ನ ವೈಭವಗಳೆಂಬುದರಲ್ಲಿ ಸಂದೇಹವೇನಿದೆ? ಬ್ರಹ್ಮರುದ್ರಾದಿಗಳೂ ಹೀಗೆ ಕಾರ್ಯರೂಪವಾಗಿ ನಡುವೆ ಬಂದವರು! ಕೊನೆಗೆ ನಿಲ್ಲತಕ್ಕವರಲ್ಲ! ಕಾಲಪರಿಚ್ಛೇದವಿಲ್ಲದೆ ಆದಿಮಧ್ಯಾಂತಗಳಲ್ಲಿಯೂ ಒಂದೇವಿಧವಾಗಿರತಕ್ಕ ನೀನಲ್ಲದೆ, ಬೇರೊಬ್ಬರಿಗೆ ಈ ಸೃಷ್ಟ್ಯಾದಿಗಳ ಅಧಿಕಾರವಿಲ್ಲ. ಮೇಲೆಮೇಲೆ ನಡೆಯುವ ವಿಕಾರಗಳಿಂದ ಹತ್ತುಪಾಲು ಹೆಚ್ಚುತ್ತಹೋಗುವ ಭೂಮಿ, ನೀರು, ಅಗ್ನಿ, ವಾಯು, ಆಕಾಶ, ಅಹಂಕಾರ, ಮಹತ್ತುಗಳೆಂಬ ಏಳುತತ್ವಗಳಿಂದ ಆವರಿಸಲ್ಪಟ್ಟ ಇಂತಹ ಅಂಡಕೋಶಗಳು, ಅನೇಕ ಕೋಟಿಗಳುಂಟು! ಇವೆಲ್ಲವೂ ನಿನ್ನಲ್ಲಿ ಪರಮಾಣುಪ್ರಾಯವಾಗಿ ಕಾಣುತ್ತಿರುವುವು. ಆದುದರಿಂದ ಚೇತನಾಚೇತನರೂಪವಾದ ಈ ಎಲ್ಲಾ ಬ್ರಹ್ಮಾಂಡಗಳಲ್ಲಿಯೂ ನೀನು ದೇಶನಿಯಮವಿಲ್ಲದೆ ವ್ಯಾಪಿಸಿರತಕ್ಕವನು. ಹೀಗೆ ನಿನಗೆ ದೇಶಕಾಲಪರಿಚ್ಛೇದಗಳಿಲ್ಲದಿರುವುದರಿಂದಲೇ ನೀನು ಅನಂತನೆಂದು ಕರೆಯಲ್ಪಡುವೆ. ಹೀಗೆ ಸರ್ವೋತ್ತಮನಾದ ನೀನು, ಆಶ್ರಿತರಿಗೆ ಉತ್ತಮಪುರುಷಾರ್ಥವನ್ನು ಕೊಡುವುದಕ್ಕೆ ಸಿದ್ಧನಾಗಿರುವಾಗಲೂ, ಪಶುಪ್ರಾಯರಾದ ಮನುಷ್ಯರು, ಶಬ್ದಾದಿ ವಿಷಯಗಳಲ್ಲಿ ಆಸೆಪಟ್ಟು, ನಿನ್ನ ಪರಿವಾರಗಳೆನಿಸಿಕೊಂಡ ಇಂದ್ರಾದಿದೇವತೆಗಳನ್ನು ಪೂಜಿಸಿ, ನಶ್ವರಗಳಾದ ಸ್ವರ್ಗಾದಿಫಲಗಳನ್ನಪೇಕ್ಷಿಸುವರು. ಅರಮನೆಯು ಸುಟ್ಟುಹೋದಮೇಲೆ ಅದನ್ನು ನಂಬಿ ಬದುಕುತ್ತಿದ್ದ ಸೇವಕರೆಲ್ಲರೂ ದಿಕ್ಕಿಲ್ಲದೆ ಆಲೆಯುವಂತೆ, ಇಂದ್ರಾದಿದೇವತೆಗಳು ನಾಶಹೊಂದಿದಮೇಲೆ, ಅವರನ್ನು ನಂಬಿದ್ದವರೂ ನಿರಾಧಾರವಾಗಿಕೆಟ್ಟುಹೋಗುವರು. ಆದುದರಿಂದ ಅಸ್ವರ್ಗಾದಿಸುಖಗಳೆಲ್ಲವೂ ತಿರುಗಿ ಸಂಸಾರಬಂಧಕ್ಕೇ ಕಾರಣವಾಗುವುವು. ಯಾವಾಗಲೂಕಂದು ಕುಂದಿಲ್ಲದಜ್ಞಾನವೇ ಸ್ವರೂಪವಾಗಿ ಉಳ್ಳುದಾಗಿಯೂ, ಸತ್ವಾದಿಗುಣಗಳಿಂದುಂಟಾದ ವಿಕಾರವಿಲ್ಲದವನಾಗಿಯೂ ಇರುವ ನಿನ್ನನ್ನೇ ಉತ್ತಮಪುರುಷಾರ್ಥವೆಂದುನಂಬಿ ನಿನ್ನನ್ನು ಕುರಿತು ಮಾಡತಕ್ಕ ಉಪಾಸನಗಳುಮಾತ್ರವೇ ನಿತ್ಯಾನಂದವನ್ನುಂಟುಮಾಡುವುವು. ಬೆಂದ ಬೀಜಗಳು ಹೇಗೆ ಮೊಳೆಯನ್ನು ಹೊರಡಿಸಲಾರವೋ, ಹಾಗೆ ನಿನ್ನ ಉಪಾಸನದಿಂದುಂಟಾದ ತೇಜಸ್ಸು ಪುನರ್ಜನ್ಮಕ್ಕೆ ಕಾರಣವಾಗಲಾರದು. ಚತುರ್ಮುಖನು ಮೊದಲುಗೊಂಡು ಸಾಮಾನ್ಯಜಂತುವಿನವರೆಗಿರತಕ್ಕ ಇತರಜೀವವರ್ಗಗಳೆಲ್ಲವೂ ಸತ್ವಾದಿಗುಣಗಳ ಪರಿಣಾಮದಿಂದಲೇ ಉಂಟಾದುವು

ಗಳು. ಇವರೆಲ್ಲರೂ ಕರ್ಮವಶ್ಯರಾಗಿರುವರು. ಹೀಗಿರುವಾಗಲೂ ನಿನ್ನನ್ನು ಬಿಟ್ಟು ಇತರದೇವತೆಗಳನ್ನು ಭಜಿಸಿದರೆ, ತನ್ನಂತೆಯೇ ಕರ್ಮವಶರಾದ ಬೇರೆಯವರನ್ನು ಭಜಿಸಿದಂತಾಗುವುದೇ ಹೊರತು, ಅದರಲ್ಲಿ ವಿಶೇಷವೇನೂ ಇಲ್ಲ. ಈ ವಿಧವಾದ ಉಪಾಸನದಿಂದ ತಿರುಗಿ ಸುಖದುಃಖಾದಿದ್ವಂದ್ವಗಳಲ್ಲಿಯೇ ಸಿಕ್ಕಿಬೀಳ ಬೇಕಾಗುವುದಲ್ಲದೆ, ಶಾಶ್ವತಸುಖವು ಲಭಿಸಲಾರದು. ಆದುದರಿಂದ ಲೋಕಕ್ಕೆಲ್ಲಕ್ಕೂ ನೀನೊಬ್ಬನೇ ಉಪಾಸ್ಯದೇವತೆಯು. ದೇವಾ! ನೀನು ಸಮಸ್ತವನ್ನೂ ಸ್ವಾಧೀನ ಮಾಡಿಕೊಂಡು, ಸರ್ವೋತ್ತಮನೆನಿಸಿರುವುದರಿಂದಲೇ ಅಜಿತನೆಂಬ ಹೆಸರಿನಿಂದ ಕೀರ್ತಿಸಲ್ಪಡುವೆ. ಅದರಂತೆಯೇ ನಿನ್ನಿಂದ ಪಾಂಚರಾತ್ರಾದಿಶಾಸ್ತ್ರಗಳ ಮೂಲಕವಾಗಿ ನಿರೂಪಿಸಲ್ಪಟ್ಟ ಧರ್ಮವೇ ನಿರ್ದುಷ್ಟವಾದ ಉತ್ತಮಧರ್ಮವೆನಿಸುವುದು. ಬೇರೆ ಪ್ರಯೋಜನಾಪೇಕ್ಷೆಯಿಲ್ಲದೆ ಮೋಕ್ಷದಲ್ಲಿಯೇ ದೃಷ್ಟಿಯಿಟ್ಟು, ಬ್ರಹ್ಮಾನುಭವದಲ್ಲಿ ನಿರತರಾದ ಯಾವಯೋಗಿಗಳು, ಈ ಧರ್ಮವನ್ನೇ ಅವಲಂಬಿಸುವರೋ, ಅವರೇ ಉಪಾಸಕರಲ್ಲಿಯೂ ಮೇಲೆನಿಸುವರು. ಆದುದರಿಂದ ಲೋಕದಲ್ಲಿ ನೀನೇ ಉತ್ತಮಪುರುಷನು! ನಿನ್ನಿಂದುಪದೇಶಿಸಲ್ಪಟ್ಟ ಭಾಗವತಧರ್ಮವೇ ಧರ್ಮಗಳಲ್ಲಿ ಸರ್ವೋತ್ತಮವಾದುದು! ಆ ಧರ್ಮವನ್ನನುಸರಿಸತಕ್ಕವರೇ ಉಪಾಸಕರಲ್ಲಿ ಮೇಲೆನಿಸುವರು. ಮತ್ತು ನಿನ್ನಿಂದುಪದೇಶಿಸಲ್ಪಟ್ಟ ಭಾಗವತಧರ್ಮದಲ್ಲಿ ನೀನೊಬ್ಬನೇ ಉದ್ದೇಶ್ಯವಸ್ತುವಾದುದರಿಂದ, "ನೀನು, ತಾನು, ನಿನ್ನದು, ತನ್ನದು" ಎಂಬ ಅಹಂಕಾರಮಮಕಾರಗಳು ಹುಟ್ಟುವುದಕ್ಕೆ ಎಳ್ಳಷ್ಟಾದರೂ ಅವಕಾಶವಿಲ್ಲ. ಇಂದ್ರಾದಿದೇವತಾಂತರಗಳನ್ನಾರಾಧಿಸತಕ್ಕ ಯಜ್ಞಯಾಗಾದಿಧರ್ಮಗಳು ರಾಗದ್ವೇಷಾದಿಗಳಿಂದ ತುಂಬಿರುವುದು. ಆ ಅಹಂಕಾರಮಮಕಾರಗಳಿಂದ ನಡೆಸತಕ್ಕ ಉಪಾಸನವು ಅಶುದ್ಧವಾಗಿಯೂ, ಅಸ್ಥಿರವಾಗಿಯೂ, ಅಧರ್ಮಪ್ರಚುರವಾಗಿಯೂ ಇರುವುದು. ಯಜ್ಞಾದಿಧರ್ಮಗಳನ್ನು ನಡೆಸುವುದರಲ್ಲಿ ಬರೀದೇಹಶ್ರಮವಲ್ಲದೆ, ಶ್ರಮಪಟ್ಟೂ ಕೊನೆಗೆ ಆ ಕರ್ಮಬಂಧದಿಂದ ಸಂಸಾರರೂಪವಾದ ಮತ್ತೊಂದ ನರ್ಥವನ್ನು ತಂದುಕೊಳ್ಳಬೇಕಾಗುವುದರಿಂದ, ಆತ್ಮದ್ರೋಹವನ್ನು ಮಾಡಿದಂತಾಗುವುದು. ಶತ್ರುಹಿಂಸೆ ಮೊದಲಾದುವುಗಳನ್ನು ಬಯಸಿ ನಡೆಸುವುದರಿಂದ ಪರರಿಗೂ ದ್ರೋಹಮಾಡಿದಂತಾಗುವುದು. ಹೀಗೆ ತನಗೂ, ಪರರಿಗೂ ದ್ರೋಹಕರವಾದ ಕರ್ಮಗಳನ್ನು ನಡೆಸುವುದರಿಂದ ಯಾವವಿಧದಲ್ಲಿ ಕ್ಷೇಮವುಂಟು? ಇದರಿಂದ ಸಂಪಾದಿಸತಕ್ಕ ಈ ಸುಖದುಃಖಗಳೆಲ್ಲವೂ ಅಸ್ಥಿರಗಳು. ಆತ್ಮದ್ರೋಹದಿಂದ ನಿನ್ನ ಕೋಪಕ್ಕೂ, ಪರದ್ರೋಹದಿಂದ ಅಧರ್ಮಕ್ಕೂ ಗುರಿಯಾಗುವುದು ಹೊರತು ಬೇರೆ ಫಲವಿಲ್ಲ. ದೇವಾ! ಸತ್ಯಸಂಕಲ್ಪನಾದ ನೀನು ಆಶ್ರಿತರಕ್ಷಣವಿಷಯದಲ್ಲಿ ಮಾಡಿ

ರುವ ಪ್ರತಿಜ್ಞೆಯು ಎಂದಿಗೂ ತಪ್ಪಲಾರದು. ಆ ಉದ್ದೇಶದಿಂದಲೇ ಪಾಂಚರಾತ್ರ ಮೂಲಕವಾಗಿ ನೀನು ನಿನ್ನ ಪಾದಾಶ್ರಯಕ್ಕೆ ದಾರಿಯನ್ನು ತೋರಿಸತಕ್ಕ ಭಾಗವತಧರ್ಮಗಳನ್ನು ಪದೇಶಿಸಿರುವೆ? ಅದರಂತೆ ನಡೆಸತಕ್ಕವರಿಗೆ ಇಷ್ಟಪ್ರಾಪ್ತಿಯನ್ನೂ, ಅನಿಷ್ಟಪರಿಹಾರವನ್ನೂ ಉಂಟುಮಾಡುವೆ! ಈ ನಿನ್ನ ಸಂಕಲ್ಪವನ್ನು ತಿಳಿದೇ ಮಹಾತ್ಮರು ಚರಾಚರಾತ್ಮಕವಾದ ಸಮಸ್ತಭೂತಗಳನ್ನೂ ನಿನ್ನ ಶರೀರವನ್ನಾಗಿಯೇ ಭಾವಿಸಿ, ನಿನ್ನನ್ನು ಭಜಿಸುವರು. ಓ ದೇವಾ! ನಿನ್ನ ಸಂದರ್ಶನವು ಸಮಸ್ತಪಾಪನಿವಾರಕವೆಂಬುದೇನೂ ಆಶ್ಚರ್ಯವಲ್ಲ! ಒಂದಾವರ್ತಿ ನಿನ್ನ ನಾಮಾಕ್ಷರವನ್ನು ಕಿವಿಯಿಂದ ಕೇಳಿದಮಾತ್ರಕ್ಕೆ, ಚಂಡಾಲನಾದರೂ ಸಂಸಾರದಿಂದ ಬಿಡಲ್ಪಟ್ಟು ಮೋಕ್ಷವನ್ನು ಹೊಂದುವನು. ಹೀಗಿರುವಾಗ ನಿನ್ನ ಸಾಕ್ಷಾದ್ದರ್ಶನದಿಂದ ಪಾಪಕ್ಷಯವೆಂಬುದನ್ನು ಕೇಳಬೇಕೇ? ಓ ಪರಮಪುರುಷಾ! ಈಗ ನಿನ್ನ ದರ್ಶನದಿಂದ ನನ್ನ ಮನಸ್ಸು ನಿರ್ಮಲವಾಯಿತು! ನಾನು ಕೃತಾರ್ಥನಾದೆನು! ನಿನ್ನ ಭಕ್ತನಾದ ನಾರದಮಹರ್ಷಿಯು ಹೇಳಿದಮಾತಿನಂತೆ, ಅವನ ಮಂತ್ರೋಪದೇಶದಿಂದಲೇ ನನಗೆ ಈ ಭಾಗ್ಯವು ಲಭಿಸಿತು. ಓ ದೇವಾ! ಸರ್ವಾಂತರ್ಯಾಮಿಯಾದ ನಿನಗೆ ನಮ್ಮಂತಹ ಸಾಮಾನ್ಯಜನರ ಉದ್ದೇಶಗಳೂ, ಕಾರ್ಯಗಳೂ ತಿಳಿದೇ ಇರುವುವು. ಯಾವ ವಿಷಯದಲ್ಲಿಯೂ ಅಸಮರ್ಥರಾದ ನಾವು, ಅನಂತಕಲ್ಯಾಣಗುಣಾಕರನಾದ ನಿನ್ನ ಗುಣಗಳಲ್ಲಿ ಲೇಶಮಾತ್ರವನ್ನಾದರೂ, ಕಂಡಕೊಳ್ಳಲಾರೆವೆಂಬುದೂ ನಿನಗೆ ವಿದಿತವೇ? ನೀನು ಜ್ಞಾನಪ್ರದರಾದ ನಾರದಾದಿಗಳಿಗೂ ಜ್ಞಾನಪ್ರದಾನ ಮಾಡತಕ್ಕವನು. ಇಂತಹ ನಿನ್ನಲ್ಲಿ ನಾವು ಬಾಯೆತ್ತಿ ನುಡಿಯುವುದು, ತ್ರೈಲೋಕ್ಯವನ್ನೂ ಬೆಳಗುತ್ತಿರುವ ಸೂರ್ಯನಿಗೆ ಮಿಂಚುಹುಳುಗಳು ಬೆಳಕನ್ನು ತೋರಿಸುವಂತೆ. ಅತ್ಯಲ್ಪವೆಂಬುದನ್ನು ಹೇಳಬೇಕಾದುದೇ ಇಲ್ಲ. ದೇವಾ! ಸಮಸ್ತಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಪ್ರಭುವಾಗಿಯೂ, ಷಾಡ್ಗುಣ್ಯಪರಿಪೂರ್ಣನಾಗಿಯೂ, ಭೇದಬುದ್ಧಿಯುಳ್ಳಕುತ್ಸಿತಯೋಗಿಗಳಿಗೆ ಗೋಚರಿಸದ ಸ್ವರೂಪವುಳ್ಳವನಾಗಿಯೂ, ಪರಮಪರಿಶುದ್ಧನಾಗಿಯೂ ಇರುವ ನಿನಗೆ ನಮಸ್ಕಾರವು ಬ್ರಹ್ಮಾದಿಗಳೆಲ್ಲರೂ ನಿನ್ನನ್ನು ಅನುಸರಿಸಿಯೇ ಜೀವಿಸುತ್ತಿರುವರು. ಚಿತ್ತವೃತ್ತಿಗಳೆಲ್ಲವೂ ಸರ್ವಸಾಕ್ಷಿಯಾದ ನಿನ್ನನ್ನು ಕುರಿತೇ ಪ್ರಸರಿಸುವುವು. ಈ ಸಮಸ್ತ ಭೂಮಂಡಲವೂ ನಿನ್ನ ತಲೆಯಮೇಲೆ ಒಂದು ಸಾಸಿವೆಯಕಾಳಿನಂತೆ ಅಂಟಿಕೊಂಡಿರುವುದು. ಸಹಸ್ರ ಶಿರಸ್ಸುಳ್ಳ ಅಂತಹ ನಿನಗೆ ನಮಸ್ಕಾರವು' ಎಂದನು.

ಹೀಗೆ ಚಿತ್ರಕೇತುವು ಸ್ತೋತ್ರಮಾಡುವುದನ್ನು ಕೇಳಿ, ಭಗವಂತನು ಸಂತುಷ್ಟನಾಗಿ, ಅವನನ್ನು ಕುರಿತು, "ರಾಜೇಂದ್ರಾ! ನಾರದಾಂಗಿರಸರಿಬ್ಬರೂ ನಿನಗೆ

ಪ್ರಕೃತಿಪುರುಷೇಶ್ವರವಿಭಾಗವನ್ನು ಸ್ಪಷ್ಟವಾಗಿ ಉಪದೇಶಿಸಿದರಲ್ಲವೇ? ಅದನ್ನೇ ನನ್ನ ಉಪದೇಶವೆಂದು ತಿಳಿ! ನನ್ನ ಸಂಕಲ್ಪಾನುಸಾರವಾಗಿಯೇ ಅವರು ನಿನಗೆ ಆ ತತ್ವವನ್ನು ಪದೇಶಿಸಿರುವರು! ನನ್ನ ಅನುಗ್ರಹವಿಲ್ಲದಿದ್ದರೆ, ನಿನಗೆ ಅಂತಹ ಆಚಾರ್ಯರೂ ಲಭಿಸುತ್ತಿರಲಿಲ್ಲ. ಅವರು ಉಪದೇಶಿಸಿದ ಮಂತ್ರವಿದ್ಯೆಯಿಂದಲೂ ನನ್ನ ಸಂದರ್ಶನದಿಂದಲೂ ನೀನು ಸಿದ್ಧಿಯನ್ನು ಹೊಂದಿದೆ. ರಾಜಾ! ಆ ನಿನ್ನ ಆಚಾರ್ಯರನ್ನೂ ನನ್ನನ್ನೂ ಬೇರೆಯೆಂದು ಭಾವಿಸಬೇಡ! ಸಮಸ್ತಭೂತಗಳೂ ನಾನೇ ಎಂದು ತಿಳಿ! ಈ ಪ್ರಪಂಚವೆಲ್ಲವೂ ನನ್ನ ಶರೀರವು. ನನ್ನ ಶರೀರದಿಂದಲೇ ನಾನು ಈ ಪ್ರಪಂಚರೂಪವಾಗಿ ಕಾಣುವೆನು. ಆದುದರಿಂದ ಸಮಸ್ತಭೂತಗಳಿಗೂ, ನನಗೂ ಶರೀರ ಶರೀರಿಭಾವದಿಂದಲೂ, ಕಾರ್ಯಕಾರಣಭಾವದಿಂದಲೂ ಅಭೇದವು ಸ್ಪಷ್ಟವು. ಆದರೆ "ಆ ಮಹರ್ಷಿಗಳ ಬಾಯಿಂದ ಹೊರಟಮಾತ್ರಕ್ಕೆ, ಸಾಕ್ಷಾತ್ತಾಗಿ ನಿನ್ನ ಬಾಯಿಂದ ನಾನು ಕೇಳಿದ ಹಾಗಾಯಿತೇ" ಎಂದು ನೀನು ಸಂದೇಹಿಸಬೇಡ! ಶಬ್ದಗಳೂ, ಅದರಿಂದ ವಾಚ್ಯವಾದ ವಸ್ತುಗಳೂ, ಇವೆರಡೂ ನನ್ನ ಶರೀರವಾಗಿರುವುವು. ಆ ನಾರದಾಂಗಿರಸರಿಬ್ಬರೂ ಅರ್ಥಾತ್ಮಕವಾದ ನನ್ನ ಶರೀರದಲ್ಲಿ ಅಂತರ್ಭೂತರಾಗಿರುವಾಗ, ಅವರ ಬಾಯಿಂದ ಹೊರಟ ವಾಕ್ಯಗಳೂ ಶಬ್ದಬ್ರಹ್ಮರೂಪವಾದ ನನ್ನ ಶರೀರದಲ್ಲಿಯೇ ಅಂತರ್ಗತವೆಂಬುದನ್ನು ಕೇಳಬೇಕೆ? ಓ ರಾಜೇಂದ್ರಾ! ದೇವಾದಿಶರೀರಗಳಲ್ಲಿ ಪ್ರವೇಶಿಸಿ, ಅವುಗಳಿಗೆ ಧಾರಕನಾಗಿರುವ ಜೀವಾತ್ಮನಲ್ಲಿಯೂ, ಆ ಜೀವಾತ್ಮನಿಂದ ಧರಿಸಲ್ಪಡುವ ಶರೀರದಲ್ಲಿಯೂ, ನಾನು ಅಂತರ್ಯಾಮಿಯಾಗಿ ಪ್ರವೇಶಿಸಿ, ಅವೆರಡಕ್ಕೂ ನಾನು ಧಾರಕನಾಗಿರುವೆನು. ಇವೆಲ್ಲವೂ ನನ್ನ ಆಧಾರದಿಂದಲೇ ಇರುವುವು. ಮಲಗಿದವನು ಸ್ವಪ್ನಾವಸ್ಥೆಯಲ್ಲಿ ತನ್ನ ಒಂದೇ ಆತ್ಮಕ್ಕೆ ಬೇರೆಬೇರೆ ಬಗೆಯ ಶರೀರಗಳನ್ನೂ, ಅವುಗಳಿಂದ, ಒಮ್ಮೆ ಪಟ್ಟದಲ್ಲಿ ಕುಳ್ಳಿರುವದು, ಮತ್ತೊಮ್ಮೆ ತಲೆಯನ್ನು ಕಡಿಸಿಕೊಳ್ಳುವುದು, ಇನ್ನೊಮ್ಮೆ ಅನೆಯನ್ನೇರುವುದು, ಮತ್ತೊಮ್ಮೆ ದೇಶಭ್ರಷ್ಟನಾಗಿ ಹೊಗುವುದು, ಇವೇ ಮೊದಲಾದ ಸುಖದುಃಖಗಳನ್ನೆಲ್ಲಾ ಕಾಣುವನು. ಆ ಮನುಷ್ಯನೇ ಎಚ್ಚರಗೊಂಡು ನೋಡಿದಾಗ, ತನ್ನ ಆತ್ಮವು ಒಂದೇಶರೀರದಲ್ಲಿ ಒಂದೇ ಸ್ಥಿತಿಯಲ್ಲಿರುವಂತೆ ತಿಳಿಯುವನು. ಈ ದೃಷ್ಟಾಂತದಿಂದ, ಸ್ವಪ್ನಾವಸ್ಥೆಯಲ್ಲಿ ಕಾಣುವ ನಾನಾಬಗೆಯ ಶರೀರಗಳೂ, ಜೀವನಿಗೆ ಅಲ್ಪಕರ್ಮಸಂಬಂಧದಿಂದ ಉಂಟಾದುದೇಹೊರತು ಸಹಜವಲ್ಲವೆಂದು ಸ್ಪಷ್ಟವಾಗುವುದು. ಹಾಗೆಯೇ ಜಾಗರಾವಸ್ಥೆಯೂಕೂಡ ಪ್ರಬಲಕರ್ಮಸಂಬಂಧವಾದುದೇಹೊರತು ಸ್ವರೂಪಪ್ರಯುಕ್ತವಾದುದಲ್ಲ. ಪ್ರಕೃತಿಗಿಂತಲೂ ವಿಲಕ್ಷಣನಾಗಿ, ಮೇಲೆ ಹೇಳಿದ ಸ್ವಪ್ನಾದ್ಯವಸ್ಥೆಗಳಿಗೆ ಸಾಕ್ಷಿಯಾಗಿರುವವನೇ

ಜೀವನೆಂದು ತಿಳಿಯಬೇಕು. ಈ ಅವಸ್ಥೆಗಳೆಲ್ಲವೂ ಪರಮಾತ್ಮನಾದ ನನ್ನ ಮಾಯೆಯಿಂದಲೇ ಉಂಟಾಗುವುವು. ಇನ್ನು ಈಪ್ರಕೃತಿಪುರುಷರಿಬ್ಬರಿಗಿಂತಲೂ ವಿಲಕ್ಷಣವಾದ ನನ್ನ ಸ್ವರೂಪವನ್ನು ತಿಳಿಸುವೆನು ಕೇಳು!

ನನ್ನ ಸ್ವರೂಪವು, ಎಚ್ಚರ, ಕನಸು, ಇವೆರಡನ್ನೂ ಮೀರಿದ ಸುಷುಪ್ತಿಯಲ್ಲಿಮಾತ್ರವೇ ತಿಳಿಯುವುದು. ಸುಷುಪ್ತಿಯಲ್ಲಿರುವಾಗ ಜೀವನಿಗೆ ಮನೋವ್ಯಾಪಾರವಾಗಲೀ, ಇಂದ್ರಿಯಗಳ ವ್ಯಾಪಾರವಾಗಲೀ, ತನ್ನ ಶರೀರವಾಗಲೀ, ತನ್ನ ಜಾತಿ, ಕುಲ, ಗೋತ್ರಗಳಾಗಲೀ ಯಾವುದೂ ತಿಳಿಯಲಾರದು. ಆಗ ನಾನೆಂಬ ಭಾವನೆಯೊಂದು, ನಿಶ್ಚಿಂತವಾದ ಸುಖವೊಂದು, ಇವೆರಡೇ ತೋರುವುದು. ಆಗ ಯಾರೂಡನೆ ಸೇರಿ ಜೀವನು ಈ ಸುಖವನ್ನನುಭವಿಸುವನೋ ಅದೇ ಬ್ರಹ್ಮವೆಂದೂ, ಆ ಬ್ರಹ್ಮವೇ ನಾನೆಂದೂ ತಿಳಿ! ಜೀವನಿಗೆ ಆ ಅವಸ್ಥೆಯನ್ನು ಕಲ್ಪಿಸಿ, ಸುಖವನ್ನು ತೋರಿಸತಕ್ಕವನೂ ನಾನೇ! ಶರೀರವನ್ನು ಹೊತ್ತಿರುವ ಜೀವನಿಗೂ ನಾನು ಅಂತರ್ಯಾಮಿಯಾಗಿ, ಆವನನ್ನು ಧರಿಸಿರುವುದರಿಂದ, ಜೀವಪ್ರಕೃತಿಗಳೆರಡಕ್ಕೂ ನಾನೇ ಆಧಾರನು. ಶರೀರಭೇದದಿಂದ ಜೀವಭೇದವಿದ್ದರೂ, ಎಚ್ಚರ, ಕನಸು, ಮುಂತಾದ ಅವಸ್ಥಾಭೇದಗಳು ಒಂದೇ ಜೀವನಲ್ಲಿ ಕಾಣುವುವು. ಜ್ಞಾನಮಯವಾದ ಜೀವಸ್ವರೂಪವು ಎಲ್ಲಾ ಅವಸ್ಥೆಗಳಲ್ಲಿಯೂ ಒಂದೇವಿಧವಾಗಿ, ಅವಕ್ಕಿಂತಲೂ ವಿಲಕ್ಷಣವಾಗಿರುವುದು. ಈ ಜೀವಸ್ವರೂಪಕ್ಕಿಂತಲೂ ವಿಲಕ್ಷಣವಾಗಿದ್ದು, ಅದನ್ನು ಧರಿಸಿರತಕ್ಕುದೇ ಬ್ರಹ್ಮಸ್ವರೂಪವೆಂದು ತಿಳಿ! ಹೀಗೆ ಕನಸು, ಎಚ್ಚರ, ಮುಂತಾದ ಸರ್ವಾವಸ್ಥೆಗಳಲ್ಲಿಯೂ ಒಂದೇ ವಿಧವಾಗಿ ಅನುಸರಿಸಿಬಂದು, ಆ ಅವಸ್ಥೆಗಳಿಗೆ ಸಾಕ್ಷಿಯಾಗಿ ನೋಡುತ್ತಿರುವುದೂ, ನಾನೆಂಬ ಭಾವನೆಯೂ, ಜ್ಞಾನಾನಂದಮಯವಾಗಿರುವುದೂ ಜೀವನಿಗೆ ಸಹಜಧರ್ಮವಾಗಿರುವಂತೆ, ನನಗೆ ಶರೀರವೆನಿಸಿಕೊಂಡಿರುವುದೂ ಆವನಿಗೆ ಸ್ವರೂಪಸಿದ್ಧವು. ಈ ವಿಧವಾದ ತನ್ನ ಸ್ವರೂಪವನ್ನು ಮರೆತು, ಜೀವನು ನನಗಿಂತಲೂ ತನ್ನನ್ನು ಬೇರೆಯಾಗಿ ಭಾವಿಸುವನರೆಗೂ, ಅವನಿಗೆ ಜನನಮರಣರೂಪವಾದ ಸಂಸಾರವು ಬಿಟ್ಟು ಹೋಗದು. ಎಚ್ಚರ, ಕನಸು, ಮೊದಲಾದ ಸರ್ವಾವಸ್ಥೆಗಳಲ್ಲಿಯೂ, ಜೀವನಿಗೆ ಅಂತರ್ಯಾಮಿಯಾಗಿಯೂ, ನಿಯಾಮಕನಾಗಿಯೂ, ಧಾರಕನಾಗಿಯೂ, ಸಾಕ್ಷಿಯಾಗಿಯೂ ಇದ್ದು ಅವನಿಗೆ ಬಂದು ಸೇರುವ ಸುಖದುಃಖಾದಿಗಳಿಗೆಮಾತ್ರ ಗುರಿಯಾಗದೆ, ಅವನಿಗಿಂತಲೂ ವಿಲಕ್ಷಣವಾಗಿರುವುದೇನನ್ನ ಸ್ವರೂಪವೆಂದುತಿಳಿ! ಆದುದರಿಂದರಾಜೇಂದ್ರಾ! ಕೇಳು ಲೋಕದಲ್ಲಿ ಶಾಸ್ತ್ರಜ್ಞಾನವನ್ನಾಗಲೀ, ಉಪಾಸನಾರೂಪವಾದ ಜ್ಞಾನವನ್ನಾಗಲಿ

ಸಂಪಾದಿಸುವುದಕ್ಕೆ ಮನುಷ್ಯಜನ್ಮವೇ ಮೇಲಾದುದು. ಈ ಮನುಷ್ಯಜನ್ಮವಿದ್ದಾಗಲೇ ಜೀವನು ಸಂಸಾರರೂಪವಾದ ಅನರ್ಥವನ್ನು ಪರಿಹರಿಸಿಕೊಳ್ಳುವುದಕ್ಕೆ ಪ್ರಯತ್ನಿಸಬೇಕು. ಪಶುಪಕ್ಷ್ಯಾದಿಜನ್ಮಗಳಲ್ಲಿ ಹುಟ್ಟಿದ ಜೀವಗಳಿಗೆ ಇದು ಸಾಧ್ಯವಲ್ಲ. ಆದುದರಿಂದ ಮನುಷ್ಯಜನ್ಮವನ್ನು ಹೊಂದಿಯೂ ಈ ಅನರ್ಥವನ್ನು ತಪ್ಪಿಸಿಕೊಳ್ಳಲಾರದ ಜೀವನಿಗೆ ಎಂದಿಗೂ ಕ್ಷೇಮವಿಲ್ಲ! ಅವನು ಯಾವಾಗಲೂ ಸಂಸಾರಕೂಪದಲ್ಲಿಯೇ ಬಿದ್ದಿರಬೇಕಾಗುವುದು. ಪ್ರವೃತ್ತಿಧರ್ಮವನ್ನು ನಡೆಸುವುದರಿಂದ ತಾತ್ಕಾಲಿಕವಾದ ಶರೀರಾಯಾಸವೂ, ಕೊನೆಗೆ ದುಃಖಪ್ರಾಪ್ತಿಯೂ ಉಂಟಾಗುವುದು! ನಿವೃತ್ತಿಧರ್ಮವನ್ನು ಹಿಡಿಯುವುದರಿಂದ ನಿರ್ಭಯವಾದ ಮೋಕ್ಷವನ್ನು ಪಡೆಯಬಹುದು. ಮನುಷ್ಯನು ಈ ತಾರತಮ್ಯವನ್ನು ತಿಳಿದು ಪ್ರವೃತ್ತಿಧರ್ಮವನ್ನು ಬಿಟ್ಟುಬಿಡಬೇಕು. ಲೋಕದಲ್ಲಿ ಪ್ರತಿಯೊಬ್ಬರೂ ದುಃಖನಿವೃತ್ತಿಗಾಗಿಯೋ ಸುಖಪ್ರಾಪ್ತಿಗಾಗಿಯೋ ಕೆಲಸಮಾಡಬೇಕಲ್ಲವೇ? ಹೀಗಿರುವಾಗ ಪ್ರವೃತ್ತಿಧರ್ಮವನ್ನು ನಡೆಸುವುದರಿಂದ ಅವೆರಡೂ ಇಲ್ಲದೆಹೋಗುವುದು ಮಾತ್ರವಲ್ಲದೆ, ಸುಖವನ್ನು ದೂರಮಾಡಿ, ಮೇಲೆಮೇಲೆ ದುಃಖವನ್ನೇ ತಂದು ಕೊಂಡಂತಾಗುವುದು. ಹೀಗೆ ಪ್ರವೃತ್ತಿಧರ್ಮದಿಂದುಂಟಾಗುವ ವಿಪರೀತ ಫಲವನ್ನು ತಿಳಿದುಕೊಂಡು, ಜಾಗರ, ಸ್ವಪ್ನ, ಸುಷುಪ್ತಿಯೆಂಬ ಮೂರವಸ್ಥೆಗಳಿಂತಲೂ ವಿಲಕ್ಷಣವಾಗಿಯೂ, ವಿಷಯಾಸಕ್ತಿಯುಳ್ಳವರಿಗೆ ತಿಳಿಯಲಸಾಧ್ಯವಾಗಿಯೂ ಇರುವ ಪ್ರತ್ಯಗಾತ್ಮಸ್ವರೂಪವನ್ನು ತಿಳಿದ ಮನುಷ್ಯನು, ಕಣ್ಣಿಂದಕಾಣತಕ್ಕವುಗಳಾಗಿಯೂ, ಕಿವಿಯಿಂದಕೇಳತಕ್ಕವುಗಳಾಗಿಯೂ ಇರುವ ಎಲ್ಲಾ ವಿಷಯಸುಖಗಳಲ್ಲಿಯೂ ವಿರಕ್ತಿಯನ್ನು ತಂದುಕೊಂಡು, ಶಾಸ್ತ್ರಜ್ಞಾನದಿಂದಲೂ. ಉಪಾಸನಾಜ್ಞಾನದಿಂದಲೂ ಸಂತುಷ್ಟನಾಗಿ, ನನ್ನಲ್ಲಿಭಕ್ತಿಯನ್ನು ಬೆಳೆಸಬೇಕು. ಮನುಷ್ಯರಿಗೆ, ಪರಮಾತ್ಮನಾದ ನನಗೂ, ತಮಗೂ, ಎಡೆಬಿಡದ ಸಂಬಂಧವುಂಟೆಂಬುದನ್ನು ಯೋಗನಿಪ್ರಣವಾದ ಬುದ್ಧಿಯಿಂದ ತಿಳಿಯಬೇಕಾದುದೇಂದೇ ಮುಖ್ಯವು. ಓ ಚಿತ್ರಕೇತೂ! ನೀನು ಶ್ರದ್ಧೆಯಿಂದ ಕೇಳಿದ ಈ ಶಾಸ್ತ್ರಜ್ಞಾನವನ್ನೂ, ಆತ್ಮಜ್ಞಾನವನ್ನೂ ಪ್ರಮಾದರಹಿತನಾಗಿ ಅನುಸಂಧಾನಮಾಡುತ್ತಿರು! ಇದರಿಂದ ನೀನು ತಪ್ಪದೆ ಸಿದ್ಧಿಯನ್ನು ಹೊಂದುವೆ'' ಎಂದನು. ಲೋಕಗುರುವಾದ ಭಗವಂತನು ಹೀಗೆ ಚಿತ್ರಕೇತುವನ್ನು ಸಮಾಧಾನಪಡಿಸಿ, ಅವನು ನೋಡುತ್ತಿರುವ ಹಾಗೆಯೇ ಕಣ್ಮರೆಯಾದನು. ಇಲ್ಲಿಗೆ ಹದಿನಾರನೆಯ ಅಧ್ಯಾಯವು.

## ಚಿತ್ರಕೇತುವಿಗೆ ಪಾರ್ವತೀದೇವಿಯ ಶಾಪವು

ವಿದ್ಯಾಧರಶ್ರೇಷ್ಠನಾದ ಚಿತ್ರಕೇತುವು, ಭಗವಂತನು ಅಂತರ್ಧಾನವನ್ನು ಹೊಂದಿದಮೇಲೆ, ಆ ದಿಕ್ಕಿಗೆನಮಸ್ಕರಿಸಿ, ಗಗನಸಂಚಾರಿಯಾಗಿ ಹೊರಟು ಹೋದನು. ಮಹಾಯೋಗಿಯೆನಿಸಿಕೊಂಡ ಆ ಚಿತ್ರಕೇತುವು. ಅಪ್ರತಿಹತವಾದ ಇಂದ್ರಿಯಪಟುತ್ವವುಳ್ಳವನಾಗಿ, ತನ್ನ ಮನಸ್ಸಿಗೆ ತೋರಿದ ಭೋಗ್ಯವಸ್ತುಗಳೆಲ್ಲವನ್ನೂ ಅನುಭವಿಸುತ್ತ, ಮಹರ್ಷಿಗಳಿಂದಲೂ, ಸಿದ್ಧಚಾರಣರಿಂದಲೂ ಸ್ತುತಿಸಲ್ಪಡುವ ಮಹಾಮಹಿಮೆಯುಳ್ಳವನಾಗಿ, ಲಕ್ಷೋಲಪಕ್ಷವರುಷಗಳವರೆಗೆ, ನೇರುಮೊದಲಾದ ಕುಲಪರ್ವತಗಳ ತಪ್ಪಲುಗಳಲ್ಲಿ ಸಂಚರಿಸುತ್ತಿದ್ದನು. ಅನವರತವೂ ತನ್ನನ್ನು ಸುತ್ತಿಮುತ್ತಿರುವ ವಿದ್ಯಾಧರಸ್ತ್ರೀಯರಿಂದ ಹರಿಕೀರ್ತನೆಗಳನ್ನು ಮಾಡಿಸುತ್ತ, ಅದನ್ನು ಕೇಳಿ ಆನಂದಿಸುತ್ತಿದ್ದನು. ಹೀಗೆಯೇ ಬಹುಕಾಲದವರೆಗೆ ಸುಖದಿಂದ ಕಾಲವನ್ನು ಕಳೆಯುತ್ತಿದ್ದು, ಒಮ್ಮೆ ತನಗೆ ಭಗವದನುಗ್ರಹದಿಂದ ಸಿಕ್ಕಿದ ವಿಮಾನವನ್ನೇರಿ, ಅಲ್ಲಲ್ಲಿ ಸಂಚರಿಸುತ್ತಿರುವಾಗ, ಒಂದಾನೊಂದುಕಡೆಯಲ್ಲಿ ಸಿದ್ಧಚಾರಣಸಮೂಹಗಳಿಂದ ಪರಿವೃತನಾದ ರುದ್ರನನ್ನು ಕಂಡನು. ಆಗ ರುದ್ರನು ಅನೇಕಮಹರ್ಷಿಗಳನಡುವೆ ತನ್ನ ಪತ್ನಿಯಾದ ಪಾರ್ವತಿಯನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು, ತನ್ನ ತೋಳಿನಿಂದ ಆಕೆಯ ಕಂಠವನ್ನಾಲಿಂಗಿಸಿ ಕುಳಿತಿದ್ದನು. ಈ ಸ್ಥಿತಿಯನ್ನು ಕಂಡೊಡನೆ ಚಿತ್ರಕೇತುವು, ಆ ಪಾರ್ವತಿಯ ಕಿವಿಗೂಬೀಳುವಂತೆ ಅಟ್ಟಹಾಸದಿಂದ ನಕ್ಕುಗಟ್ಟಿಯಾಗಿ ಹೀಗೆಂದು ಕೂಗುವನು. "ಅಯ್ಯೋ! ಲೋಕದಲ್ಲಿ ಇಂತವರೂ ಉಂಟೇ? ಈ ರುದ್ರನಾದರೋ ಲೋಕಗುರುವೆನಿಸಿಕೊಂಡು ಇತರಪ್ರಾಣಿಗಳೆಲ್ಲಕ್ಕೂ ಧರ್ಮವನ್ನು ಬೋಧಿಸತಕ್ಕವನು. ಈ ಮಹರ್ಷಿಗಳ ಸಭೆಯಲ್ಲಿ ಅಗ್ರಾಸನವನ್ನೂ ವಹಿಸಿ ಕುಳಿತಿರುವನು. ಈ ಕಾಲದಲ್ಲಿಯಾ ಹೆಂಡತಿಯನ್ನು ಬಿಟ್ಟಿರಲಾರದೆ, ಈ ಮಹಾಸಭೆಯ ಮಧ್ಯದಲ್ಲಿ ಅವಳ ಕಂಠವನ್ನಪ್ಪಿಕುಳಿತಿರುವನಲ್ಲಾ! ಅಹಾ! ತಲೆಯಲ್ಲಿ ಅಷ್ಟು ದೊಡ್ಡ ಜಡೆಯನ್ನು ಬೆಳೆಬೆಟ್ಟಿರುವನು! ತೀವ್ರವಾದ ತಪಸ್ಸುಗಳನ್ನು ನಡೆಸಿರುವನು. ಎಷ್ಟೋಜನಗಳಿಗೆ ಬ್ರಹ್ಮಜ್ಞಾನವನ್ನುಪದೇಶಿಸತಕ್ಕವನು! ಸತ್ಪುರುಷರಿಗೆ ತಾನೇ ಪ್ರಭುವೆನಿಸಿಕೊಂಡಿರುವನು ಇಂತವನು ಕೇವಲಪ್ರಾಕೃತಮನುಷ್ಯನಂತೆ ನಾಚಿಕೆಯಿಲ್ಲದೆ ಈ ಮಹಾಸಭೆಯಲ್ಲಿ ಪತ್ನಿಯನ್ನಪ್ಪಿಕೊಂಡು ಕುಳಿತಿರುವನಲ್ಲಾ! ಇದಕ್ಕಿಂತಲೂ ಆಶ್ಚರ್ಯವೇನುಂಟು? ಲೋಕದಲ್ಲಿ ಪ್ರಾಯಕವಾಗಿ ಏನೂತಿಳಿಯದ ಮೂಢಜನರೂಕೂಡ, ರಹಸ್ಯದಲ್ಲಿಯೇ ತಮ್ಮಸ್ತ್ರೀಯರೊಡನೆ ಸರಸಸಲ್ಲಾಪಗಳನ್ನು ಮಾಡುವುದುಂಟು! ಮಹಾತಪಸ್ವಿಯೆನಿಸಿಕೊಂಡ ಈ ರುದ್ರನು, ದೊಡ್ಡ ಸಭೆಯನಡುವೆ ಹೆಂಡತಿ

ಯನ್ನು ತೊಡೆಯಮೇಲಿಕುಳ್ಳಿರಿಸಿ, ಅವಳ ಕಂಠವನ್ನಪ್ಪಿಕೊಂಡಿರುವನಲ್ಲಾ! ಸ್ವಲ್ಪವಾದರೂ ನಾಚಿಕೆಯೇ ಬೇಡವೇ" ಎಂದನು. ಹೀಗೆ ತಡಬಡೆಯಿಲ್ಲದೆ ಕೊಗುತ್ತಿರುವ ಚಿತ್ರಕೇತುವಿನ ವಾಕ್ಯವನ್ನು ಕೇಳಿಯೂ, ರುದ್ರನು ಗಂಭೀರಸ್ವಭಾವವುಳ್ಳವನಾದುದರಿಂದ, ಬಾಯಿತ್ತಡೆ ಸುಮ್ಮನೆ ಒಂದಾವರ್ತಿ ಮಂದಹಾಸದಿಂದ ನಕ್ಕು ಮೌನದಿಂದಿದ್ದನು. ಆತನ ಅನುಚರರಾದ ಭೂತಗಣಗಳೂ, ಇತರಸಭೆಯವರೂ, ಈ ರುದ್ರನ ಅಭಿಪ್ರಾಯವನ್ನು ತಿಳಿದು, ತಾವೂ ಕೋಪವನ್ನಡಗಿಸಿಕೊಂಡು ಬಾಯಿತ್ತಡೆ ಸುಮ್ಮನಿದ್ದರು. ಆದರೆ ಪಾರ್ವತೀದೇವಿಗೆ ತಡೆಯಲಾರದ ಕೋಪವುಂಟಾಯಿತು. ಚಿತ್ರಕೇತುವು, ತನ್ನ ಪತಿಯಾದ ರುದ್ರನ ಪ್ರಭಾವವನ್ನು ತಿಳಿಯದೆ, ತಾನೇ ಜಿತೇಂದ್ರಿಯನೆಂಬ ಗರ್ವದಿಂದ ಹೇಳಿದಮಾತಿಗಾಗಿ ಅತ್ಯಾಕ್ರೋಶಗೊಂಡು, ಚಿತ್ರಕೇತುವನ್ನು ನೋಡಿ, ಆ ಸಭೆಯವರೆಲ್ಲರೂ ಕೇಳುವಂತೆ ಹೀಗೆಂದು ಹೇಳುವಳು! "ಆಹಾ! ಲೋಕದಲ್ಲಿ ನಾಚಿಕೆಯಿಲ್ಲದ ನಮ್ಮಂತವರಿಗೆ ಯುಕ್ತಾಯುಕ್ತವನ್ನು ಬೋಧಿಸುವುದಕ್ಕಾಗಿಯೇ ಇವನು ಅವತರಿಸಿದಂತಿದೆ! ತನ್ನ ಉಪದೇಶವನ್ನು ಅತಿಕ್ರಮಿಸಿ ನಡೆದವರನ್ನು ದಂಡಿಸುವುದಕ್ಕೂ ತಾನೇ ಸಮರ್ಥನೆಂದು ತಿಳಿದಂತಿದೆ! ಆಹಾ! ಈ ದುಷ್ಟನನ್ನು ಇಲ್ಲಿಗೆ ಬಿಟ್ಟವರಾರು? ನಮನ್ನು ದಂಡಿಸುವುದಕ್ಕಾಗಿಯೇ ಇಲ್ಲಿಗೆ ಬಂದನೇನು? ಈ ಸಭೆಯಲ್ಲಿ ಅನೇಕಮಹಾತ್ಮರು ನೆರದಿರುವರು. ಅವರೆಲ್ಲರೂ ನಮ್ಮನ್ನು ನೋಡಿ ಬಾಯಿತ್ತಡೆ ಸುಮ್ಮನಿರುವರು. ಇಲ್ಲಿ ಸಾಕ್ಷಾಚ್ಛತುರ್ಮುಖಬ್ರಹ್ಮನು ಕುಳಿತಿರುವನು! ಆತನ ಕುಮಾರರಾದ ಭೃಗು, ನಾರದರೇ ಮೊದಲಾದವರೆಲ್ಲರೂ ಕುಳಿತಿರುವರು! ಸನತ್ಕುಮಾರನಿರುವನು! ಕಪಿಲ ಮಹರ್ಷಿಯಿರುವನು! ಇವರಲ್ಲಿ ಒಬ್ಬರಾದರೂ ನನ್ನ ಪತಿಯಾದ ರುದ್ರನನ್ನು ಧರ್ಮವನ್ನತಿಕ್ರಮಿಸಿದುದಾಗಿ ನಿಷೇಧಿಸಲಿಲ್ಲ. ಅವರೊಬ್ಬರೂ ಧರ್ಮಾಧರ್ಮಗಳನ್ನು ತಿಳಿದವರಲ್ಲವೇನು? ಇವರೊಬ್ಬೊಬ್ಬರೂ ಧರ್ಮವನ್ನು ಬಲ್ಲವರಾಗಿದ್ದರೂ ಲೋಕಗುರುವಾದ ನನ್ನ ಪತಿಯಲ್ಲಿ ಗೌರವವನ್ನಿಟ್ಟು ಬಾಯಿತ್ತಡೆ ಸುಮ್ಮನಿರುವರು. ಬ್ರಹ್ಮಾದಿಗಳೆಲ್ಲರೂ ಈ ನನ್ನ ಪತಿಯಪಾದಪದ್ಮವನ್ನು ಪೂಜಿಸುವರು. ಈತನು ಸಮಸ್ತ ಮಂಗಳಗಳಿಗೂ ತಾನೇ ಮಂಗಳಸ್ವರೂಪವೆನಿಸಿಕೊಂಡಿರುವನು. ಇಂತಹ ಮಹಾತ್ಮನಾದ ಈಶ್ವರನನ್ನು, ಈ ಕ್ಷತ್ರಿಯಾಧಮನು, ಇಲ್ಲಿನ ಮಹರ್ಷಿಗಳನ್ನೂ ಲಕ್ಷ್ಯಮಾಡದೆ ನಿಂದಿಸುತ್ತಿರುವನಲ್ಲಾ! ಈ ದುರಾತ್ಮನನ್ನು ಶಿಕ್ಷಿಸದೆ ತೀರದು! ಈತನು ಮೋಕ್ಷವನ್ನು ತನ್ನ ಹಸ್ತಗತವಾಗಿರುವಂತೆ ತಿಳಿದು ಗರ್ವಪಡುವನು. ಪರಮಸಾಧುಗಳಿಗೆಮಾತ್ರ ಲಭಿಸತಕ್ಕ ಭಗವಂತನ ಪಾದಾರವಿಂದವನ್ನು ಸೇರುವುದಕ್ಕೆ ಈ ದುರಾತ್ಮನಿಗೆ ಎಂದಿಗೂ ಯೋಗ್ಯತೆಯಿಲ್ಲ" ಎಂದು ಹೇಳಿ ಆ ಚಿತ್ರಕೇತು

ವಿನ ಕಡೆಗೆ ತಿರುಗಿ, "ಎಲ! ಅವಿವೇಕೀ! ನೀನು ಪಾಪಿಷ್ಠವಾದ ರಾಕ್ಷಸಯೋನಿಯಲ್ಲಿ ಜನಿಸು! ಅದರಿಂದಲಾದರೂ ಇನ್ನು ಮೇಲೆ ನಿನಗೆ ಇಂತಹ ಮಹಾತ್ಮರ ವಿಷಯದಲ್ಲಿ ತಿರಸ್ಕಾರಬುದ್ಧಿಯಿಲ್ಲದಂತಾಗಲಿ" ಎಂದಳು. ಪಾರ್ವತಿಯ ಶಾಪವಾಕ್ಯವನ್ನು ಕೇಳಿದೊಡನೆ ಚಿತ್ರಕೇತುವು, ಥಟ್ಟನೆ ವಿಮಾನದಿಂದ ಕೆಳಗಿಳಿದು, ಪಾರ್ವತಿಯ ಪಾದಗಳನ್ನು ಹಿಡಿದು ನಮಸ್ಕರಿಸಿ, ಅವಳ ಮನ್ನಣೆಯನ್ನು, ಬೇಡುವುದಕ್ಕಾಗಿ ಹೀಗೆಂದು ಪ್ರಾರ್ಥಿಸುವನು. "ದೇವಿ! ನಿನ್ನ ಶಾಪವನ್ನು ನಾನು ಇದೋ! ಅಂಜಲಿ ಪೂರ್ವಕವಾಗಿ ಸ್ವೀಕರಿಸುವೆನು! ನಿನ್ನ ಶಾಪಕ್ಕಾಗಿ ನಾನು ದುಃಖಿಸುವವನಲ್ಲ! ನಿನ್ನ ಮೇಲೆ ಕೋಪಿಸುವವನೂ ಅಲ್ಲ! ಇದನ್ನು ನಿನ್ನ ಅನುಗ್ರಹವೆಂದೇ ಭಾವಿಸುವೆನು! ನಿಮ್ಮಂತಹ ದೇವತೆಗಳು ಭೂತವರ್ಗಗಳಲ್ಲಿ ಯಾವಾಗಲೂ ಕರುಣೆಯುಳ್ಳವರು! ನಿಮ್ಮಿಂದ ಪ್ರಾಣಿಗಳಿಗೆ ತೋರಿಸಲ್ಪಟ್ಟ ನಿಗ್ರಹವೂ ಅನುಗ್ರಹವೇ! ಅವರವರ ಪೂರ್ವಕರ್ಮಾನುಸಾರವಾಗಿ ಸುಖದುಃಖಿಗಳುಂಟಾಗುವುವು. ವಿಷ್ಣುಭಕ್ತನಾದ ನನಗೆ ಇದುವರೆಗೆ ನನ್ನ ಪ್ರಾಚೀನಕರ್ಮವು ಮೋಕ್ಷಪ್ರಾಪ್ತಿಗೆ ಪ್ರತಿಬಂಧಕವಾಗಿದ್ದಿತು! ಈಗ ನೀನು ಕೊಟ್ಟ ಶಾಪದಿಂದ ಆ ನನ್ನ ಕರ್ಮಶೇಷವು ಕಳೆದು, ಮೋಕ್ಷವು ಲಭಿಸುವುದರಲ್ಲಿ ಸಂದೇಹವಿಲ್ಲ. ಆದುದರಿಂದ ನಿನ್ನ ಶಾಪವನ್ನು ನಾನು ಅನುಗ್ರಹವೆಂದೇ ತಿಳಿದು ಸಂತೋಷಿಸುವೆನು! ಪ್ರಾಣಿಗಳು ಚಕ್ರದಂತೆ ತಿರುಗುತ್ತಿರುವ ಜನನಮರಣರೂಪವಾದ ಸಂಸಾರದಲ್ಲಿ ಸಿಕ್ಕಿ, ಅನಾದಿಯಾಗಿ ಬಂದ ಕರ್ಮವಾಸನೆಯಿಂದ ಆತ್ಮಸ್ವರೂಪವನ್ನು ತಿಳಿಯಲಾರದೆ, ಕರ್ಮಾನುಗುಣವಾದ ಸುಖದುಃಖಗಳನ್ನನುಭವಿಸುತ್ತಿರುವರು. ಹೀಗೆ ಅನುಭವಿಸುತ್ತಿರುವಾಗಲೇ ಮುಂದೆಮುಂದೆ ಆದೇವಿಧವಾದ ಸುಖದುಃಖಗಳಿಗೆ ಕಾರಣಗಳಾದ ಕರ್ಮಗಳನ್ನೂ ನಡೆಸುವರು. ದೇಹಾಭಿಮಾನದಿಂದ ಹೀಗೆನಡೆಯುತ್ತಿರುವುದು, ನಿನಗೂ, ನನಗೂ ಇತರರಿಗೂ ಸಮಾನವಾದುದೇ? ಈಗ ನಾನುಮಾಡಿದ ಹಾಸ್ಯದಿಂದ ನಿನಗುಂಟಾದ ಕಿಂಕೃತಿಯೂ, ಕೋಪವೂ, ನಿನಗೂ ಪೂರ್ವಕರ್ಮಾನುಸಾರವಾಗಿ ಬಂದುದೇ ಹೊರತು ಬೇರೆಯಲ್ಲ. ಇದರಿಂದ ನಮ್ಮಂತೆ ನೀನೂ ದೇಹಾತ್ಮಾಭಿಮಾನವುಳ್ಳವಳೆಂಬುದು ಸ್ಪಷ್ಟವಾಗುವುದು. ಪ್ರಾಣಿಗಳು ತಮಗೆತಾವಾಗಿ ಸುಖದುಃಖಗಳನ್ನು ತಂದುಕೊಳ್ಳಲಾರವು. ಇತರರನ್ನೂ ಅದಕ್ಕೆ ಕಾರಣವೆಂದು ತಿಳಿಯಬಾರದು. ಇವೆಲ್ಲವೂ ಅವರವರ ಪೂರ್ವಕರ್ಮಗಳಿಂದಲೇ ಸಂಭವಿಸುವುವು. ಆಯಾ ಪ್ರಾಣಿಗಳ ಪಾಪಪುಣ್ಯಕರ್ಮಗಳನ್ನು ಪರಿಶೀಲಿಸಿ, ಭಗವಂತನು ತೋರಿಸತಕ್ಕ ನಿಗ್ರಹಾನುಗ್ರಹಗಳೇ ಸುಖದುಃಖಗಳನ್ನುಂಟುಮಾಡುವುವು. ಆದುದರಿಂದ ಪ್ರಾಜ್ಞನಾದವನು, ತನಗುಂಟಾದ ಸುಖದುಃಖಗಳಿಗೆ ತನ್ನ ಕರ್ಮಗಳನ್ನೇ ಮುಖ್ಯಕಾರಣವೆಂದು

ತಿಳಿಯಬೇಕು. ಸತ್ವಾದಿಗುಣಗಳ ಪ್ರವಾಹರೂಪವಾದ ಈ ಪ್ರಕೃತಿಮಂಡಲದಲ್ಲಿ ಸಿಕ್ಕಿದಮೇಲೆ ಶಾಪವಾದರೇನು? ಅನುಗ್ರಹವಾದರೇನು? ಸ್ವರ್ಗವಾದರೇನು? ನರಕವಾದರೇನು? ಸುಖವೇನು? ದುಃಖವೇನು? ಎಲ್ಲವೂ ಒಂದೇ! ಇವುಗಳ ತಾರತಮ್ಯವನ್ನು ನಿರ್ಣಯಿಸಿ ಹೇಳುವದು ಕಷ್ಟವು! ಏಕೆಂದರೆ, ಸ್ವರ್ಗವುಮೊದಲು ಸುಖಕರವಾಗಿದ್ದರೂ ಕೊನೆಗೆದುಃಖವನ್ನೀತಂದಿಡುವುದು. ನರಕವು ದುಃಖಪ್ರಚುರವಾಗಿದ್ದರೂ ಅದರಿಂದ ಪಾಶಶೇಷವುಕಳೆದು ಕೊನೆಗೆ ಸುಖಕ್ಕೂ ಕಾರಣವಾಗುವುದು. ಆದುದರಿಂದ ಇವುಗಳ ಭೇದವನ್ನು ನಿರ್ಣಯಿಸುವುದಕ್ಕೆ ಸಾಧ್ಯವಿಲ್ಲ. ಭಗವಂತನು ತನ್ನ ಮಾಯೆಯಿಂದಲೇ ಸಮಸ್ತಭೂತಗಳನ್ನೂ ಸೃಷ್ಟಿಸುವನು. ಹೀಗೆ ಸೃಷ್ಟಿಕಾರ್ಯವನ್ನು ನಡೆಸುತ್ತಿದ್ದರೂ, ತಾನು ಕರ್ಮಾಧೀನವಾದ ದೇಹವಿಲ್ಲದಂತಿರುವನು. ಆಯಾಪ್ರಾಣಿಗಳ ಕರ್ಮಾನುಗುಣವಾಗಿ ಸಂಸಾರವನ್ನೂ, ಮೋಕ್ಷವನ್ನೂ, ಸುಖವನ್ನೂ ದುಃಖವನ್ನೂ ಕಾಣಿಸುತ್ತಿರುವನು. ಜೀವನು ಯಾವಾಗಲೂ ಜ್ಞಾನಸ್ವರೂಪನಾಗಿ ಒಂದೇ ವಿಧನಾಗಿರುವನು. ಅವನು ಎಲ್ಲಾ ಶರೀರಗಳಲ್ಲಿಯೂ ಸಮನಾಗಿರತಕ್ಕವನು. ಅವನಿಗೆ ಒಬ್ಬನು ಶತ್ರುವೆಂದೂ, ಒಬ್ಬನು ಮಿತ್ರನೆಂದೂ, ಇವನು ಜ್ಞಾತಿಯೆಂದೂ, ಇವನು ಬಂಧುವೆಂದೂ, ಇವನು ತನ್ನವನೆಂದೂ, ಇವನು ಇತರನೆಂದೂ ಭೇದವೇ ಇಲ್ಲ. ಹೀಗೆ ನಿರಂಜನನಾಗಿ (ರೂಪಾಂತರವಿಲ್ಲದೆ) ಸಮನಾಗಿ ವರ್ತಿಸುವ ಆ ಜೀವನಿಗೆ, ರಾಗದ್ವೇಷಗಳು ಹುಟ್ಟುವುದಕ್ಕೆ ಅವಕಾಶವೆಲ್ಲಿ? ಜೀವನು ಸಹಜಸ್ಥಿತಿಯಲ್ಲಿ ಈ ವಿಕಾರಗಳೊಂದೂ ಇಲ್ಲದವನಾಗಿದ್ದರೂ, ಅನಾದಿಯಾದ ಕರ್ಮವಾಸನೆಯು ಅವನಿಗೆ ತಗುಲುಕಟ್ಟಿಬರುವುದು. ಅದರ ಪ್ರೇರಣೆಯಿಂದ ಕರ್ಮಗಳನ್ನು ನಡೆಸುವನು. ಮೇಲೆಮೇಲೆ ನಡೆಸತಕ್ಕ ಆ ಕರ್ಮಗಳೇ ಜೀವನಿಗೆ ಸುಖದುಃಖಗಳನ್ನೂ, ಹಿತಾಹಿತಗಳನ್ನೂ, ಬಂಧಮೋಕ್ಷಗಳನ್ನೂ, ಜನನಮರಣಗಳನ್ನೂ ಉಂಟುಮಾಡುವುವು. (ಮೋಕ್ಷವೆಂಬುದೂಕೂಡ ಈಶ್ವರಾನುಗ್ರಹವನ್ನು ಸಂಪಾದಿಸುವುದಕ್ಕೆ ತಕ್ಕ ಪುಣ್ಯಕರ್ಮವಿಶೇಷದಿಂದಲೇ ಲಭಿಸುವುದು!) ದೇವಿ! ನಾನು ಮೊದಲು ನಿನ್ನಲ್ಲಿ ನುಡಿದ ನಿಂದಾವಾಕ್ಯವನ್ನು ಕ್ಷಮಿಸಬೇಕೆಂದು ಈಗ ಪ್ರಾರ್ಥಿಸುವೆನೇಹೊರತು, ಈಗಲೂ ನಾನು ಶಾಪವಿಮೋಚನಕ್ಕಾಗಿ ನಿನ್ನಲ್ಲಿ ಪ್ರಾರ್ಥಿಸತಕ್ಕವನಲ್ಲ!" ಎಂದನು. ಹೀಗೆ ಚಿತ್ರಕೇತುವು ಪಾರ್ವತೀಪರಮೇಶ್ವರರನ್ನು ಪ್ರಸನ್ನರನ್ನಾಗಿ ಮಾಡಿ ಅವರೆಲ್ಲರೂ ಆಶ್ಚರ್ಯದಿಂದ ನೋಡುತ್ತಿರುವಾಗ, ತನ್ನ ವಿಮಾನವನ್ನೇರಿ ಹೊರಟುಹೋದನು, ಆಮೇಲೆ ಇತ್ತಲಾಗಿ ಪರಮೇಶ್ವರನು, ದೇವರ್ಷಿಗಳೂ, ದೈತ್ಯರೂ, ಸಿದ್ಧರೂ ಪ್ರಮಥಗಣಗಳೂ ಕೇಳುತ್ತಿರುವಹಾಗೆಯೇ ಪಾರ್ವತಿಯನ್ನು ಕುರಿತು "ದೇವಿ! ಆಶ್ಚರ್ಯಚರಿತ್ರೆಯುಳ್ಳ ಆ

ಶ್ರೀಮಹಾವಿಷ್ಣುವಿನಭಕ್ತರ ಮಹಾಮಹಿಮೆಯನ್ನು ನೋಡಿದೆಯಾ? ಅವರು ಅಪಕಾರಿಗಳಿಗೂ ಉಪಕಾರವನ್ನೆಣಿಸತಕ್ಕವರು! ಆ ಭಗವದ್ಭಕ್ತರು ಯಾರ ಕೋಪಕ್ಕೂ ಎಳ್ಳಷ್ಟಾದರೂ ಭಯಪಡತಕ್ಕವರಲ್ಲ. ಸ್ವರ್ಗವನ್ನಾಗಲೀ, ಮೋಕ್ಷವನ್ನಾಗಲೀ, ನರಕವನ್ನಾಗಲೀ, ಸಮವಾಗಿಯೇ ಭಾವಿಸತಕ್ಕವರು. ಭಗವಂತನಲ್ಲಿ ದಾಸ್ಯವೊಂದನ್ನು ಹೊರತು ಬೇರೊಂದನ್ನೂ ಅಪೇಕ್ಷಿಸತಕ್ಕವರಲ್ಲ. ಯಾವ ವಿಷಯದಲ್ಲಿಯೂ ಆಸೆಯಿಲ್ಲದವರು! ಮಹಾಪ್ರಭಾವವುಳ್ಳವರು! ಈಶ್ವರನ ಲೀಲೆಯಾದ ಜಗತ್ಸೃಷ್ಟಿಯಿಂದಲೇ, ಜೀವಗಳಿಗೆ ದೇಹಸಂಬಂಧವುಂಟಾಗಿ, ಆ ದೇಹದಮೂಲಕವಾಗಿ ಸುಖದುಃಖಗಳು, ಜನನಮರಣಗಳು, ಶಾಪಾನುಗ್ರಹಗಳು, ಮೊದಲಾದ ದ್ವಂದ್ವಗಳೆಲ್ಲವೂ ಸಂಭವಿಸುವುವೇಹೊರತು, ಅವು ಸ್ವರೂಪಪ್ರಯುಕ್ತಗಳಾದುವಲ್ಲ. ಜ್ಞಾನವೆಂಬ ಒಂದೇ ಆಕಾರವುಳ್ಳ ಜೀವನಲ್ಲಿ, ದೇವಮನುಷ್ಯಾದಿಭೇದಗಳನ್ನಾಗಲೀ, ಸುಖದುಃಖಾದಿಗುಣದೋಷಗಳನ್ನಾಗಲೀ ವಿಕಲ್ಪಿಸುವುದು ಅವಿವೇಕದಿಂದುಂಟಾದ ಭ್ರಮವೇ ಹೊರತು ಬೇರೆಯಲ್ಲ. ಈವಿಧವಾದ ಭ್ರಾಂತಿಗಳೆಲ್ಲವೂ ಕನಸನ್ನು ಕಾಣುವವನಿಗೆ ತೋರುವ ವಿಕಾರಗಳಂತೆಯೇ ಇರುವುವು. ತತ್ವಜ್ಞಾನದಿಂದ ವೈರಾಗ್ಯವನ್ನವಲಂಬಿಸಿ, ಭಗವಂತನಲ್ಲಿ ಭಕ್ತಿಯನ್ನು ಮಾಡತಕ್ಕವರಿಗೆ ಎಂದಿಗೂ ಈ ವಿಧವಾದ ಭೇದಬುದ್ಧಿಯೇ ಹುಟ್ಟದು. ಎಲೆ ಪ್ರಾಣಕಾಂತೆ! ಮುಖ್ಯವಾಗಿ ಒಂದಂಶವನ್ನು ತಿಳಿಸುವೆನು ಕೇಳು. ನಾನು, ಈ ಚತುರ್ಮುಖನು, ಸನತ್ಕುಮಾರನು, ನಾರದನು, ಬ್ರಹ್ಮಪುತ್ರರಾದ ಇನ್ನೂ ಅನೇಕಮಹರ್ಷಿಗಳು, ಇಂದ್ರಾದಿಗಳು, ಈನಾವೆಲ್ಲರೂ ಆ ಭಗವಂತನ ಅಂಶಾಂಶದಿಂದಲೇ ಹುಟ್ಟಿ, ಅವನಿಂದ ಅನುಗ್ರಹಿಸಲ್ಪಟ್ಟು ಅಲ್ಪಜ್ಞಾನವನ್ನು ಪಡೆದಿದ್ದರೂ ಅವನವ್ಯಾಪಾರವನ್ನಾಗಲೀ, ಸ್ವರೂಪವನ್ನಾಗಲೀ ನಾವೂ ಚೆನ್ನಾಗಿ ತಿಳಿಯಲಾರೆವು. ಏಕೆಂದರೆ, ನಾವೂ ಆ ಭಗವಂತನ ಮಾಯೆಯಿಂದ ಮೋಹಿತರಾಗಿ 'ನಾವೇ ಪ್ರಭುಗಳೆಂಬ'' ಅಭಿಮಾನವನ್ನು ವಹಿಸಿರುವೆವು. ಈ ಅಹಂಭಾವದಿಂದಲೇ ನಾವೂ ಅವನನ್ನು ತಿಳಿಯಲಾರೆವು. ಆ ಭಗವಂತನಿಗೆ ಶತ್ರುವೆಂದೂ, ಮಿತ್ರನೆಂದೂ, ತನ್ನವನೇದೂ, ಇತರನೆಂದೂ ಭೇದಬುದ್ಧಿಯೇ ಇಲ್ಲವು. ಅವನು ಸಮಸ್ತಭೂತಗಳಲ್ಲಿಯೂ ಸಮವಾಗಿ ನೆಲೆಸಿರುವುದರಿಂದ, ಅವನಿಗೆ ಎಲ್ಲವೂ ಪ್ರಿಯವಸ್ತುಗಳೇ! ಅಂತಹ ಭಗವಂತನಿಗೆ ಸಮದೃಷ್ಟಿಯುಳ್ಳವನೂ ಶಾಂತನೂ ಆದ ಈ ಚಿತ್ರಕೇತುವು ಕೇವಲಭಕ್ತನು. ನಾನೂ ಅವನಂತೆಯೇ ಆ ಭಗವಂತನಿಗೆ ಭಕ್ತನೇ ಹೊರತು ನನ್ನನ್ನು ಪ್ರಭುವೆಂದೆಣಿಸಬೇಡ! ಆದುದರಿಂದ ಭಗವದ್ಭಕ್ತರಾದ ಮಹಾತ್ಮರವಿಷಯದಲ್ಲಿ ನಾವು ಗರ್ವಪಡಬಾರದು." ಎಂದನು. ಇದನ್ನು ಕೇಳಿ ಪಾರ್ವತಿಯು ತನ್ನ ಮನಸ್ಸಿನಲ್ಲಿದ್ದ ಕೋಪಾಶ್ಚರ್ಯಗಳೆಲ್ಲವನ್ನೂ ಬಿಟ್ಟು

ಶಾಂತಚಿತ್ತಳಾದಳು. ಓ ಪರೀಕ್ಷಿದ್ರಾಜಾ! ಹರಿಭಕ್ತೋತ್ತಮನಾದ ಚಿತ್ರಕೇತುವು, ಪಾರ್ವತಿಯ ಶಾಪಕ್ಕೆ ಪ್ರತಿಶಾಪವನ್ನು ಕೊಡಲು ಸಮರ್ಥನಾಗಿದ್ದರೂ, ಅದನ್ನು ಶಿರಸಾವಹಿಸಿ ಪ್ರತಿಗ್ರಹಿಸಿದನಲ್ಲವೇ! ಇದೇ ಸಾಧುಗಳ ಲಕ್ಷಣವೆಂದುತಿಳಿ! ಅದು ಹಾಗಿರಲಿ! ವೃತ್ರಾಸುರನಿಗೆ ತತ್ವಜ್ಞಾನವು ಹೇಗೆ ಹುಟ್ಟಿತೆಂದು ಕೇಳಿದೆಯಷ್ಟೇ? ತ್ವಷ್ಟನು ಹೋಮಮಾಡಿದಾಗ ಈ ಚಿತ್ರಕೇತುವೇ ದಕ್ಷಿಣಾಗ್ನಿಯಲ್ಲಿ ವೃತ್ರಾಸುರನಾಗಿ ಉದ್ಭವಿಸಿದನು. ಪೂರ್ವಜನ್ಮದಲ್ಲಿ ಅವನು ವಿಷ್ಣುಭಕ್ತೋತ್ತಮನಾಗಿದ್ದು, ಸಂಕರ್ಷಣನಿಂದ ತತ್ತ್ವೋಪದೇಶವನ್ನು ಪಡೆದಿದ್ದುದರಿಂದಲೇ, ರಾಕ್ಷಸನಾಗಿಹುಟ್ಟಿದಾಗಲೂ ಅಸುಟ್ಟಜ್ಞಾನಿಯಾಗಿದ್ದನು. ಅವನಿಗೆ ವಿಷ್ಣುಭಕ್ತಿ ಹುಟ್ಟುವುದಕ್ಕೂ ಅದೇ ಕಾರಣವು! ರಾಜೇಂದ್ರಾ! ನಿನಗೆ ವೃತ್ರನ ಪೂರ್ವೋತ್ತರವೃತ್ತಾಂತಗಳೆಲ್ಲವನ್ನೂ ತಿಳಿಸಿದುದಾಯಿತು. ವಿಷ್ಣುಭಕ್ತರ ಮಹಿಮೆಯನ್ನು ಸೂಚಿಸತಕ್ಕ ಪರಿಶುದ್ಧವಾದ ಈ ಚಿತ್ರಕೇತೂಪಾಖ್ಯಾನವನ್ನು ತಿವಿಯಿಂಡ ಕೇಳಿದ ಮಾತ್ರಕ್ಕೆ ಮನುಷ್ಯನು ಸಂಸಾರದಿಂದ ವಿಮುಕ್ತನಾಗುವನು. ಪ್ರಾತಃಕಾಲದಲ್ಲಿ ನಿಯಮನಿಷ್ಠನಾಗಿ ಭಗವಂತನನ್ನು ಸ್ಮರಿಸಿ, ಈ ಚರಿತ್ರವನ್ನು ಪಠಿಸಮಾಡತಕ್ಕವನು, ಸರ್ವೋತ್ತಮವಾದ ವಿಷ್ಣುಸಾನ್ನಿಧ್ಯವನ್ನೂ ಹೊಂದುವನು. ಇದು ಹದಿನೇಳನೆಯ ಅಧ್ಯಾಯವು.

---

## ಸವಿತೃ ಮೊದಲಾದ ದಿತಿಪುತ್ರರ ವಂಶಾನುಕ್ರಮವು ಇಂದ್ರನು ದಿತಿಯ ಗರ್ಭವನ್ನು ಖಂಡಿಸಿದುದು

"ರಾಜೇಂದ್ರಾ! ಅದಿತಿಯ ಮಕ್ಕಳಲ್ಲಿ ನಾಲ್ಕನೆಯನವನಾದ ತ್ವಷ್ಟೃವಿನ ಸಂತತಿಯು ಹೀಗಾಯಿತಷ್ಟೆ? ಇತರಪುತ್ರರರ ಸಂತಾನಕ್ರಮವನ್ನು ತಿಳಿಸುವೆನು ಕೇಳು! ಸವಿತೃವೆಂಬವನಿಗೆ ಪೃಶ್ನಿಯೆಂಬ ಭಾರ್ಯೆಯಲ್ಲಿ ಸಾವಿತ್ರೀಮಂತ್ರದ ಮತ್ತು ವ್ಯಾಹೃತಿಮಂತ್ರಗಳ ಅಭಿಮಾನಿದೇವತೆಗಳೂ, ಸೋಮಯಾಗ, ಪಶುಯಾಗ, ಅಗ್ನಿಹೋತ್ರ, ಚಾತುರ್ಮಾಸ್ಯ, ಪಂಚಮಹಾಯಜ್ಞಗಳೆಂಬ ಕರ್ಮಗಳ ಅಭಿಮಾನಿದೇವತೆಗಳೂ ಹುಟ್ಟಿದರು. ಭಗನಪತ್ನಿಯಾದ ಸಿದ್ಧಿಯೆಂಬವಳಲ್ಲಿ, ಅಂಗ, ಮಹಿಮ, ವಿಭು, ಪ್ರಭುವೆಂಬ ನಾಲ್ಕುಮಕ್ಕಳೂ ಬಹಳ ಸುಶೀಲೆಯಾಗಿಯೂ, ಅತ್ಯಂತಸುಂದರಿಯಾಗಿಯೂ ಇರುವ ಆಶಿಷೆಯೆಂಬ ಕನ್ಯೆಯೊಬ್ಬಳೂ ಹುಟ್ಟಿದರು.

ಧಾತೃವೆಂಬವನಿಗೆ ಕುಹು, ಸಿನೀವಾಲಿ, ರಾಕೆ, ಅನುಮತಿಯೆಂದು ನಾಲ್ವರು ಪತ್ನಿಯರಿದ್ದರು. ಈ ನಾಲ್ವರಲ್ಲಿಯೂ ಕ್ರಮವಾಗಿ, ಸಾಯಂ, ದರ್ಶ, ಪ್ರಾತಃ, ಪೂರ್ಣಿಮರೆಂಬ ನಾಲ್ವರು ಮಕ್ಕಳು ಹುಟ್ಟಿದರು. ವಿಧಾತೃವೆಂಬವನಿಗೆ ಕ್ರಿಯೆಯೆಂಬ ಭಾರ್ಯೆಯಲ್ಲಿ ಪುರೀಷ್ಯರೆಂದು ಕರೆಯಲ್ಪಡುವ ಅಗ್ನಿದೇವತೆಗಳು ಹುಟ್ಟಿದರು. ವರುಣನಿಗೆ ಚರ್ಷಣಿಯೆಂಬ ಪತ್ನಿಯಿದ್ದಳು. ಮೊದಲು ಬ್ರಹ್ಮಪುತ್ರನಾಗಿದ್ದ ಭೃಗು ಮಹರ್ಷಿಯೂ, ಮತ್ತು ಹುತ್ತದಿಂದ ಹುಟ್ಟಿದ ವಾಲ್ಮೀಕಿಯೆಂಬ ಮಹಾಯೋಗಿಯೂ ಈ ವರುಣಪುತ್ರರಾಗಿ ಜನಿಸಿದರು. ಮಿತ್ರನಿಗೆ ರೇವತಿಯೆಂಬ ಭಾರ್ಯೆಯಲ್ಲಿ ಉತ್ಸರ್ಗನೆಂದೂ, ಅರಿಷ್ಟನೆಂದೂ, ಪಿಪ್ಪಲನೆಂದೂ ಮೂವರುಮಕ್ಕಳು ಹುಟ್ಟಿದರು. ಮೇಲೆ ಹೇಳಿದಂತೆ ಮಿತ್ರನಿಗೂ, ವರುಣನಿಗೂ, ಆವರವರ ಪತ್ನಿಯರಲ್ಲಿ ಬೇರೆಬೇರೆಮಕ್ಕಳು ಹುಟ್ಟಿದುದಲ್ಲದೆ, ಇವರಿಬ್ಬರಿಗೂ ಸೇರಿ ಅಗಸ್ತ್ಯವಸಿಷ್ಠರೆಂಬ ಬೇರೆ ಇಬ್ಬರು ಮಕ್ಕಳು ಜನಿಸಿದರು. ಇದಕ್ಕಾಗಿಯೇ ಇವರಿಬ್ಬರೂ ಮಿತ್ರವರುಣರಿಬ್ಬರಿಗೂ ಸಮಾನಪುತ್ರರೆನಿಸಿಕೊಂಡರು. ಇವರ ಕಾರಣವನ್ನು ತಿಳಿಸುವೆನು ಕೇಳು. ಹಿಂದೊಮ್ಮೆ ಮಿತ್ರವರುಣರಿಬ್ಬರೂ ಏಕಕಾಲದಲ್ಲಿ ಊರ್ವಶಿಯನ್ನು ನೋಡಿ ಮೋಹಿಸಿದರು. ಕಾಮಾತಿಶಯದಿಂದ ಅವರಿಬ್ಬರಿಗೂ ಏಕಕಾಲದಲ್ಲಿ ವೀರ್ಯಸ್ಖಲನವಾಯಿತು. ಆ ವೀರ್ಯವನ್ನು ಒಂದು ಗಡಿಗೆಯಲ್ಲಿ ತುಂಬಿಡಲು, ಅದರಿಂದ ಈ ಅಗಸ್ತ್ಯವಸಿಷ್ಠರಿಬ್ಬರೂ ಉದಿಸಿದರು.

ಅದರಿಂದಾಚೆಗೆ ಅದಿತಿಪುತ್ರನಾದ ಇಂದ್ರನು, ಶಚೀದೇವಿಯಲ್ಲಿ, ಜಯಂತ, ಋಷಭ, ಮಿಥುಷರೆಂಬ ಮೂವರು ಮಕ್ಕಳನ್ನು ಪಡೆದನು, ಈ ಇಂದ್ರನತಮ್ಮನೇ ಅದಿತಿಯ ಗರ್ಭದಲ್ಲಿ ವಾಮನರೂಪದಿಂದವತರಿಸಿದ ಭಗವಂತನು! ಮಾಯಾವಾಮನನಾಗಿ ಬಂದು, ಮೂರಡಿಗಳಿಂದಲೇ ಮೂರುಲೋಕಗಳನ್ನೂ ಅಳೆದ ಮಹಾಮಹಿಮೆಯುಳ್ಳ ಈ ತ್ರಿವಿಕ್ರಮನಿಗೆ, ಕೀರ್ತಿಯೆಂಬ ಭಾರ್ಯೆಯಲ್ಲಿ ಬೃಹಚ್ಛ್ಲೋಕನೆಂಬ ಪುತ್ರನು ಜನಿಸಿದನು. ಈ ಬೃಹಚ್ಛ್ಲೋಕನಿಗೆ ಸೌಭಗರೇ ಮೊದಲಾದ ಅನೇಕ ಪುತ್ರರು ಜನಿಸಿದರು. ರಾಜೇಂದ್ರಾ! ಶ್ರೀಮಹಾವಿಷ್ಣುವು ಅದಿತಿದೇವಿಯಲ್ಲಿ ವಾಮನರೂಪದಿಂದವತರಿಸಿ ನಡೆಸಿದ ಅದ್ಭುತಕಾರ್ಯಗಳನ್ನೂ, ಅತನ ಗುಣವೀರ್ಯಾದಿಗಳನ್ನೂ, ಆ ಅವತಾರಕಾರಣವನ್ನೂ ಮುಂದೆ ಎಂಟನೆಯ ಸ್ಕಂಧದಲ್ಲಿ ನಿನಗೆ ವಿವರಿಸಿ ತಿಳಿಸುವೆನು. ಇನ್ನು ದಿತಿವಂಶವನ್ನು ತಿಳಿಸುವೆನು ಕೇಳು. ಈ ದಿತಿವಂಶದಲ್ಲಿ ಹುಟ್ಟಿದವರೆಲ್ಲರೂ ವಿಷ್ಣುದ್ವೇಷಿಗಳೆಂದೂ, ಇವರ ವೃತ್ತಾಂತವನ್ನು ಕೇಳುವುದು ಪಾಪಹೇತುವೆಂದೂ ತಿಳಿಯಬೇಡ! ಪರಮಭಾಗವತೋತ್ತಮರಾದ ಪ್ರಹ್ಲಾದನೂ, ಬಲಿಚಕ್ರವರ್ತಿಯೂ ಈ ವಂಶದಲ್ಲಿಯೇ ಹುಟ್ಟಿದವರು! ಇವ

ಬ್ಬರ ಚರಿತ್ರಗಳಿಂದ ಆ ದೈತ್ಯಕುಲವೇ ಪವಿತ್ರವೆನಿಸಿಕೊಂಡು ಲೋಕವಿಖ್ಯಾತವಾಗಿರುವುದು. ಮೊದಲು ದಿತಿಯ ಗರ್ಭದಲ್ಲಿ ಹಿರಣ್ಯಾಕ್ಷ ಹಿರಣ್ಯಕಶಿಪುಗಳೆಂದು ಹೆಸರುಗೊಂಡ ಇಬ್ಬರೇ ಮಕ್ಕಳು ಜನಿಸಿದರು. ಇವರಲ್ಲಿ ಹಿರಣ್ಯಕಶಿಪುವಿನ ಹೆಂಡತಿಗೆ ಕಯಾಧುವೆಂದು ಹೆಸರು. ಇವಳು ದನುವಂಶದವಳು. ಜಂಭನೆಂಬ ದೈತ್ಯನ ಪುತ್ರಮಗಳು. ಇವಳಿಗೆ ಪ್ರಹ್ಲಾದನೆಂದೂ, ಅನುಹ್ಲಾದನೆಂದೂ, ಸಂಹ್ಲಾದನೆಂದೂ, ಹ್ಲಾದನೆಂದೂ ಕ್ರಮವಾಗಿ ನಾಲ್ಕುಮಂದಿಪುತ್ರರು ಜನಿಸಿದರು. ಇವರೆಲ್ಲರಿಗೂ ಕಿರಿಯಳಾಗಿ ಸಿಂಹಿಕೆಯೆಂಬ ಕನ್ಯೆಯೊಬ್ಬಳು ಹುಟ್ಟಿದಳು. ಈ ಸಿಂಹಿಕೆಯು ವಿಪ್ರಚಿತ್ತಿಯೆಂಬ ರಾಕ್ಷಸನನ್ನು ವರಿಸಿರಾಹುವೆಂಬ ಮಗನನ್ನು ಪಡೆದಳು. ಈ ರಾಹುವು ಅಮೃತಮಥನಕಾಲದಲ್ಲಿ ಮೋಸದಿಂದ ದೇವತೆಗಳ ಗುಂಪಿನಲ್ಲಿ ಸೇರಿ ಅಮೃತವನ್ನು ಕುಡಿಯುತ್ತಿದ್ದಾಗ, ಭಗವಂತನು ಇವನ ತಲೆಯನ್ನು ಚಕ್ರಾಯುಧದಿಂದ ಕತ್ತರಿಸಿಬಿಟ್ಟನು. ಕಯಾಧುವಿನ ನಾಲ್ವರು ಪುತ್ರರಲ್ಲಿ ಸಂಹ್ಲಾದನಿಗೆ ಮತಿಯೆಂಬ ಭಾರ್ಯೆಯಲ್ಲಿ ಪಂಚಜನನೂ, ಹ್ಲಾದನಿಗೆ ಧಮನಿನಿಯೆಂಬ ಭಾರ್ಯೆಯಲ್ಲಿ ಇಲ್ವಲವಾತಾಪಿಗಳೆಂಬ ಇಬ್ಬರು ಪುತ್ರರೂ ಜನಿಸಿದರು. ಈ ಇಲ್ವಲವಾತಾಪಿಗಳೆಂಬ ಮಕ್ಕಳಿಬ್ಬರೂ ಬಹಳ ಮಾಯಾವಿಗಳು. ಇಲ್ವಲನು ಅಗಸ್ತ್ಯನಿಗೆ ಆತಿಥ್ಯವನ್ನು ಮಾಡುವ ನೆವದಿಂದ ತಮ್ಮನಾದ ವಾತಾಪಿಯನ್ನು ಮೇಕೆಯನ್ನಾಗಿ ಮಾಡಿ, ಅವನ ಮಾಂಸವನ್ನು ಅಗಸ್ತ್ಯನಿಗೆಕೊಡಿಸಿ, ಅವನನ್ನು ಕೊಲ್ಲುವುದಕ್ಕೆ ಯತ್ನಿಸಿದನು. ಅಗಸ್ತ್ಯನು ಈ ಮೋಸವನ್ನು ತಿಳಿದು, ಆ ವಾತಾಪಿಯನ್ನು ತನ್ನ ಹೊಟ್ಟೆಯಲ್ಲಿಯೇ ಜೀರ್ಣಮಾಡಿದನು. ಅನುಹ್ಲಾದನ ಪತ್ನಿಯಾದ ಸೂರ್ಮಿಯೆಂಬವಳಲ್ಲಿ, ಬಾಷ್ಕಲನೆಂದೂ, ಮಹಿಷನೆಂದೂ ಇಬ್ಬರು ಮಕ್ಕಳು ಹುಟ್ಟಿದರು. ಭಾಗವತೋತ್ತಮನಾದ ಪ್ರಹ್ಲಾದನಿಗೆ ಧುರಿಯೆಂಬ ಪತ್ನಿಯಲ್ಲಿ, ವಿರೋಚನನನೆಂಬ ದೈತ್ಯನು ಹುಟ್ಟಿದನು. ಆ ವಿರೋಚನನ ಮಗನೇ ಬಲಿಚಕ್ರವರ್ತಿಯು. ಆ ಬಲಿಚಕ್ರವರ್ತಿಗೆ ಶಮನೆಯೆಂಬ ಭಾರ್ಯೆಯಲ್ಲಿ ನೂರುಮಂದಿಮಕ್ಕಳು ಹುಟ್ಟಿದರು! ರಾಜೇಂದ್ರಾ! ಈ ಬಲಿಚಕ್ರವರ್ತಿಯ ಚರಿತ್ರವು ಬಹಳ ಪವಿತ್ರವಾದುದು. ಆ ಚರಿತ್ರವನ್ನು ನುಂಪೆ ತಿಳಿಸುವೆನು. ಬಲಿಯ ಮಕ್ಕಳಲ್ಲಿ ಬಾಣಾಸುರನೇ ಜ್ಯೇಷ್ಠಪುತ್ರನು. ಈತನು ರುದ್ರನನ್ನಾರಾಧಿಸಿ ಶಿವಗಣಗಳಲ್ಲಿ ಮೊದಲನೆಯವನೆನಿಸಿಕೊಂಡನು. ಇದಕ್ಕಾಗಿಯೇ ಈಗಲೂ ರುದ್ರನು ಆ ಬಾಣಾಸುರನ ಪಟ್ಟಣವನ್ನು ಕಾಯುತ್ತಿರುವನು. ರಾಜೇಂದ್ರಾ! ದಿತಿಗೆ ಮರುತ್ತುಗಳೆಂಬ ಬೇಡಿ ನಾಲ್ವತ್ತೊಂಭತ್ತು ಮಕ್ಕಳುಂಟು. ಅವಂಗೆ ಸಂತತಿಯಿಲ್ಲ. ಈ ಮರುತ್ತುಗಳಿಗೆ ಇಂದ್ರನು ದೇವತ್ವವನ್ನು ಕೊಟ್ಟುದರಿಂದ, ಅವರೂ ದೇವಗಣಗಳಲ್ಲಿ ಸೇರಿಬಿಟ್ಟರೇ ಹೊರತು ದೇವಶತ್ರುಗಳೆನಿಸಿಕೊಳ್ಳ

ಲಿಲ್ಲ" ಎಂದನು. ಆಗ ಪರೀಕ್ಷಿದ್ರಾಜನು "ಓ ಗುರುವರ್ಯಾ! ದೇವೇಂದ್ರನು ಮರುತ್ತು ಗಳಿಗೆಜನ್ಮಸಿದ್ಧವಾದ ರಾಕ್ಷಸತ್ವವನ್ನು ತಪ್ಪಿಸಿ, ಅವರನ್ನು ದೇವತೆಗಳನ್ನಾಗಿ ಮಾಡಿದುದೇಕೆ? ಅವರು ಇಂದ್ರನಿಗೆ ಮಾಡಿದ ಉಪಕಾರವೇನು? ಆ ವೃತ್ತಾಂತವನ್ನು ನನಗೆ ತಿಳಿಸಬೇಕು. ಈ ಚರಿತ್ರವನ್ನು ಕೇಳುವುದಕ್ಕಾಗಿ, ಈ ಮಹರ್ಷಿಗಳೂ ಬಹಳಕುತೂಹಲಗೊಂಡಿರುವರು" ಎಂದನು. ಹೀಗೆ ಪರೀಕ್ಷಿದ್ರಾಜನು ಆತ್ಯಾದರ ಪೂರ್ವಕವಾಗಿ ಪ್ರಶ್ನೆಮಾಡುತ್ತಿರುವುದನ್ನು ಕೇಳಿ, ಸರ್ವಜ್ಞನಾದ ಶುಕ ಮಹರ್ಷಿಯು ಸಂತೋಷಪಟ್ಟು ಹೀಗೆಂದು ಹೇಳುವನು "ರಾಜೇಂದ್ರಾ! ಕೇಳು! ಶ್ರೀಮಹಾವಿಷ್ಣುವು ಇಂದ್ರನ ಪಕ್ಷವನ್ನು ವಹಿಸಿ, ದಿತಿಯ ಮಕ್ಕಳಾದ ಹಿರಣ್ಯಾಕ್ಷ" ಹಿರಣ್ಯಕಶಿಪುಗಳಿಬ್ಬರನ್ನೂ ವರಾಹನರಸಿಂಹಾವತಾರಗಳಲ್ಲಿ ಸಂಹರಿಸಿದನು. ದಿತಿಯು ಪುತ್ರಶೋಕವನ್ನು ಸಹಿಸಲಾರದೆ, ಇಂದ್ರನಮೇಲೆ ಕೋಪಾವೇಶದಿಂದುರಿಯುತ್ತ ಹೀಗೆಂದು ಚಿಂತಿಸುವಳು. "ಅಯ್ಯೋ! ನೀಚನಾದ ಇಂದ್ರನು, ಕೇವಲವಿಷಯಸುಖಕ್ಕಾಗಿ ಆಸೆಪಟ್ಟು, ವಿಷ್ಣುವಿನ ಸಹಾಯದಿಂದನನ್ನ ಮಕ್ಕಳಿಬ್ಬರನ್ನೂ ಕೊಲ್ಲಿಸಿದನಲ್ಲವೇ? ಆತನು ಪರಮಪಾಪಿಯು! ದುರಾತ್ಮನು! ಕಠಿನ ಹೃದಯನು! ಇವನನ್ನು ಕೊಂದಹೊರತು ನನಗೆ ಸುಖವಾಗಿ ನಿದ್ರೆಬಾರದು! ಯಾವ ಉಪಾಯದಿಂದ ಈತನನ್ನು ಕೊಲ್ಲಿಸಲಿ! ಆ ದುರಾತ್ಮನು! ಲೋಕಕ್ಷೇಮಕ್ಕಾಗಿಯೇ ನನ್ನ ಮಕ್ಕಳನ್ನು ಕೊಲ್ಲಿಸಿದನೆಂದು ಕೆಲವರು ಹೇಳುವರು. ಇದು ಸುಳ್ಳು! ತಾನೇ ತ್ರೈಲೋಕ್ಯಕ್ಕೂ ಪ್ರಭುವಾಗಿರಬೇಕೆಂಬ ಅಭಿಮಾನದಿಂದಲೇ ಅವನು ಈ ಅಕೃತ್ಯವನ್ನು ಮಾಡಿಸಿರುವನು. ಆದರೇನು? ತಾನೇ ಈಶ್ವರನೆಂದು ಅಭಿಮಾನಿಸುವವನ ದೇಹವೂ ಕೊನೆಗೆ ಭಸ್ಮವಾಗಿ ನಿಲ್ಲುವುದು. ಇಲ್ಲನೇಕ್ರಿಮಿಕೀಟಾದಿಗಳಿಗೆ ಆಹಾರವಾಗುವುದು. ಇಂತಹ ಅನಿತ್ಯವಾದ ಶರೀರಸುಖವನ್ನು ಬಯಸಿ, ಭೂತದ್ರೋಹವನ್ನು ಮಾಡುವವರು ಕೇವಲಮೂಢರೇ ಹೊರತು ಪುರುಷಾರ್ಥವನ್ನು ತಿಳಿದವರಲ್ಲ. ನೀಚವಾದ ಇಂದ್ರನು, ಆ ಉದ್ದೇಶದಿಂದಲೇ ಈ ಅಕೃತ್ಯವನ್ನು ನಡೆಸಿರುವನು. ಪುರುಷಾರ್ಥಗಳಲ್ಲಿ ಯಾವುದು ಮೇಲೆಂಬುದನ್ನು ತಿಳಿದಿದ್ದಪಕ್ಷದಲ್ಲಿ ಅವನು ಹೀಗೆ ಭೂತದ್ರೋಹವನ್ನು ಮಾಡುತ್ತಿದ್ದನೇ? ತನ್ನ ನೀಚವಾದ ಶರೀರವನ್ನೇ ಆತ್ಮವೆಂದು ತಿಳಿದು ಉನ್ಮಾರ್ಗದಲ್ಲಿ ಪ್ರವರ್ತಿಸುತ್ತಿರುವ ಆ ದೇವೇಂದ್ರನ ಕೊಬ್ಬನ್ನು ಮುರಿದು, ಅವನನ್ನು ಕೊಲ್ಲತಕ್ಕ ಪುತ್ರನು ನನಗೆ ಲಭಿಸುವನೇ? ಅಂತಹ ಪುತ್ರನನ್ನು ಪಡೆಯುವುದಕ್ಕೆ ನಾನು ಯಾವ ಉಪಾಯವನ್ನು ಮಾಡಲಿ" ಎಂದು ಚಿಂತಿಸುತ್ತ, ತನ್ನ ಪತಿಯಿಂದಲೇ ಈ ಅನುಗ್ರಹವನ್ನು ಪಡೆಯಬೇಕೆಂದು ನಿಶ್ಚಯಿಸಿ, ಕಶ್ಯಪನ ಬಳಿಗೆ ಬಂದಳು. ಅವನನ್ನು ನಾನಾವಿಧವಾದ ಉಪಾಚಾರಗ

ಳಿಂದಲೂ, ಅನುರಾಗದಿಂದಲೂ, ನಿನಯದಿಂದಲೂ ಸಂತೋಷಪಡಿಸುತ್ತಿದ್ದಳು. ಮತ್ತು ಸ್ಥಿರಮನಸ್ಸಿನಿಂದಲೂ, ಉತ್ಕೃಷ್ಟವಾದ ಭಕ್ತಿಯಿಂದಲೂ, ಮೃದುವಾಕ್ಯದಿಂದಲೂ, ಕಡೆಗಣ್ಣಿನ ನೋಟಗಳಿಂದಲೂ ಅವನ ಮನಸ್ಸನ್ನು ಆಕರ್ಷಿಸುತ್ತಿದ್ದಳು. ರಾಜೇಂದ್ರಾ! ಪುರುಷನು ಎಷ್ಟೇ ಜಿತೇಂದ್ರಿಯನಾಗಿದ್ದರೂ, ಸ್ತ್ರೀಯರಿಗೆ ಅವರನ್ನು ಮರುಳುಮಾಡತಕ್ಕ ಬುದ್ಧಿಚಾತುರ್ಯವುಂಟು. ಎಂಥವನನ್ನಾದರೂ ಮೋಹಗೊಳಿಸಿ, ಕಾಮ ಪರವಶರನ್ನಾಗಿ ಮಾಡಿ, ತಮ್ಮ ಇಷ್ಟಾನುಸಾರನಾಗಿ ಬರುವಂತೆ ಸೆಳೆದೊಯ್ಯುವರು. ಕಶ್ಯಪಪ್ರಜಾಪತಿಯು ಜಿತೇಂದ್ರಿಯನಾಗಿ ನಿಯಮನಿಷ್ಠೆಯಲ್ಲಿದ್ದರೂ, "ಸ್ತ್ರೀಪುರುಷರೂಪದಿಂದ ಕಾಣುವ ಸಮಸ್ತಭೂತಗಳೂ ಮೊದಲು ಒಂದಾಗಿಯೇ ಕಲೆತಿದ್ದುವೆಂದೂ ಮುಂದೆಯೂ ಏಕಶರೀರದಂತೆ ಒಂದಾಗಿಯೇ ಕಲೆಯತಕ್ಕವುಗ" ಳೆಂದೂ, ತನ್ನ ಮನಸ್ಸಿನಲ್ಲಿ ಮೊದಲು ನಿಶ್ಚಯಿಸಿ, ಭೋಗಾಪೇಕ್ಷೆಯಿಂದ ಬಂದ ಅದಿತಿಯ ಕೋರಿಕೆಯಂತೆ, ಅವಳನ್ನು ತನ್ನ ಅರ್ಧದೇಹದಂತೆ ಸ್ವೀಕರಿಸಿ ಸಂಭೋಗಿಸಿದನು. ರಾಜೇಂದ್ರಾ! ಹೀಗೆಯೇ ಲೋಕದಲ್ಲಿ ಸ್ತ್ರೀಯರು, ಪುರುಷರ ಬುದ್ಧಿಯನ್ನು ಅಪಹರಿಸಿಬಿಡುವರು. ದಾಕ್ಷಾಯಣಿಯಾದ ಶಕ್ಯಸನು ರತಿದೇವಿಯ ರತಿಚಾತುರ್ಯಕ್ಕಾಗಿ ಬಹಳ ಸಂತೋಷಪಟ್ಟು, ಅವಳನ್ನು ಕುರಿತು, ವಂದಹಾಸಪೂರ್ವಕವಾಗಿ ಹೀಗೆಂದು ಹೇಳುವನು. "ದೇವಿ! ನಾನು ಬಹಳ ಸಂತೋಷಪಟ್ಟೆನು. ನಿನಗೆ ಬೇಕಾದ ವರವನ್ನು ಕೇಳು! ಕೊಡುವೆನು. ಸ್ತ್ರೀಯರಿಗೆ ಪತಿಯು ಅನುಕೂಲನಾಗಿ ಅನುಗ್ರಹಿಸಿದಪಕ್ಷದಲ್ಲಿ, ಅವರಿಗೆ ಇಹಲೋಕದಲ್ಲಿಯಾಗಲೀ, ಪರಲೋಕದಲ್ಲಿಯಾಗಲೀ ದುರ್ಲಭವಾದುದೊಂದೂ ಇಲ್ಲ. ಸ್ತ್ರೀಯರಿಗೆ ಪತಿಯೇ ಪರದೈವವು. ಆದರೆ "ಶ್ರಿಯಃಪತಿಯಾದ ಶ್ರೀಮನ್ನಾರಾಯಣನೇ ಸಮಸ್ತ ಲೋಕಕ್ಕೂ ಉತ್ತಮದೈವವೆನಿಸಿಕೊಂಡಿರುವಾಗ, ಪ್ರಾಕೃತಜನ್ಮವನ್ನೆತ್ತಿದ ಪತಿಯನ್ನು ದೈವವೆಂದು ನಂಬಬಹುದೇ?" ಎಂದು ನೀನು ಶಂಕಿಸಬೇಡ! ಆ ವಾಸುದೇವನೇ ಸರ್ವಾಂತರ್ಯಾಮಿಯಾಗಿ, ಎಲ್ಲರ ಹೃದಯದಲ್ಲಿಯೂ ಸಾಕ್ಷೀಭೂತನಾಗಿದ್ದು, ಅವರವರು ನಡೆಸತಕ್ಕ ಪೂಜೆಗಳನ್ನು ಪರಿಗ್ರಹಿಸುವನು. ಬೇರೆಬೇರೆ ನಾಮರೂಪಗಳಿಂದ ಕಾಣುತ್ತಿರುವ ಇಂದ್ರದೇವತಾಸ್ವರೂಪದಿಂದಲೂ ಅತನೇ ಆರಾಧಿಸಲ್ಪಡುವನು. ಪತಿರೂಪದಿಂದಿದ್ದು ಸ್ತ್ರೀಯರಿಂದ ಆರಾಧಿಸಲ್ಪಡತಕ್ಕವನೂ ಆ ಶ್ರೀಹರಿಯಲ್ಲದೆ ಬೇರೆಯಲ್ಲ. ಆದುದರಿಂದ ಈಗ ನೀನು ನನ್ನನ್ನು ಉಪಚರಿಸಿ ಸಂತೋಷಗೊಳಿಸಿದುದರಿಂದ, ನನ್ನಲ್ಲಿ ಪ್ರೀತನಾಗಿ ನಿನ್ನ ಕೋರಿಕೆಯನ್ನೀಡೇರಿಸುವನೆಂದು ತಿಳಿ| ಎಲೆ ಸುಂದರಾಂಗಿ! ಆದುದರಿಂದ ಶ್ರೇಯಸ್ಸನ್ನು ಕೋರತಕ್ಕ ಪತಿವ್ರತಾಸ್ತ್ರೀಯರು, ತಮ್ಮ ಪತಿಯನ್ನು ಪರದೈವವೆಂದೇ ಭಾವಿಸಿ ಪೂಜಿಸಬೇಕು.

ನೀನೂ ಅದೇವಿಧವಾದ ದೃಢಭಕ್ತಿಯಿಂದ ನನ್ನನ್ನು ಪೂಜಿಸಿದುದಕ್ಕಾಗಿ ನಾನು ಬಹಳ ಸಂತೋಷಪಟ್ಟಿನು. ನಿನಗೆ ಬೇಕಾದ ವರವನ್ನು ಕೇಳು! ನಿನ್ನ ಕೋರಿಕೆಯು ಎಷ್ಟೇ ದುರ್ಲಭವಾಗಿದ್ದರೂ ಸಂಕೋಚಪಡಬೇಡ! ತಪ್ಪದೆ ನೆರವೇರಿಸುವೆನು! ಈ ಭಾಗ್ಯವು ಪತಿವ್ರತೆಯರಲ್ಲಿಗೆ ಅಸತಿಯರಿಗೆ ಲಭಿಸಲಾರದು" ಎಂದನು. ಕಶ್ಯಪನ ಬಾಯಿಂದ ಪ್ರತಿಜ್ಞಾಪೂರ್ವಕವಾದ ಈ ವಾಕ್ಯವು ಹೊರಟಕೂಡಲೇ ದಿತಿಯು ಸಂತೋಷದಿಂದ ಆತನನ್ನು ಕುರಿತು "ನಾಥಾ! ನೀನುನನ್ನಲ್ಲಿ ಪ್ರಸನ್ನನಾಗಿ ವರವನ್ನು ಕೊಡುವುದಾಗಿದ್ದರೆ, ಇಂದ್ರನನ್ನು ಕೊಲ್ಲತಕ್ಕ ಪುತ್ರನೊಬ್ಬನು ನನ್ನ ಗರ್ಭದಲ್ಲಿ ಜನಿಸುವಂತೆ ಅನುಗ್ರಹಿಸು. ಇಂದ್ರನು ನನ್ನ ಮಕ್ಕಳಿಬ್ಬರನ್ನೂ ಕೊಲ್ಲಿಸಿರುವದರಿಂದ, ಪುತ್ರಘಾತಿಯಾದ ಆ ಇಂದ್ರನಮೇಲೆ ನಾನು ಹಗೆತೀರಿಸಿಕೊಳ್ಳಬೇಕೆಂದಿರುವೆನು" ಎಂದಳು. ಪರಮಸಾಧುವಾದ ಕಶ್ಯಪನು, ಈ ಕ್ರೂರವಾಕ್ಯವನ್ನು ಕೇಳಿದೊಡನೆ ಬೆಚ್ಚಿಬಿದ್ದು, ತನ್ನಲ್ಲಿ ತಾನು ದುಃಖಿಸುತ್ತ "ಅಯ್ಯೋ! ಏನನರ್ಥವು! ನನಗೆ ನಾನೇ ದೊಡ್ಡಕಷ್ಟವನ್ನು ತಂದು ಕೊಂಡತಾಯಿತು! ಇಂದ್ರಿಯಗಳಿಗೆ ವಶನಾದ ನಾನು, ಸ್ತ್ರೀರೂಪದಿಂದಿರುವ ಈ ಭಗನ್ಮಾಯೆಗೆ ಮರುಳಾದೆನು. ಬುದ್ಧಿಗೆಟ್ಟ ನಾನು ಎಂತಹ ಪಾಪಕಾರ್ಯಕ್ಕೆ ಗುರಿಯಾದೆನು? ನಾನುನರಕದಲ್ಲಿ ಬೀಳುವುದರಲ್ಲಿ ಸಂದೇಹವಿಲ್ಲ. ಅಕಟಾ! ಈ ದಿತಿಯು ನನ್ನನ್ನು ಹೇಗೆ ವಂಚಿಸಿಬಿಟ್ಟಳು! ಛಿ! ಇಂದ್ರಿಯಚಾಪಲ್ಯದಿಂದ ನಿಜವಾದ ಪುರುಷಾರ್ಥವನ್ನು ಮರೆತು, ಮೋಹಪಾಶಕ್ಕೆ ಬಿದ್ದ ನನ್ನ ಜನ್ಮವನ್ನು ಸುಡಬೇಕಲ್ಲದೆ ಇವಳನ್ನು ನಿಂದಿಸುವುದು ತಪ್ಪು! ಸ್ತ್ರೀಸ್ವಭಾವಕ್ಕೆ ತಕ್ಕಂತೆ ನಡೆಯುತ್ತಿರುವ ಇವಳನ್ನು ನಾನೇಕೆ ನಿಂದಿಸಲಿ! ಪುರುಷರನ್ನು ವಂಚಿಸುವುದೇ ಹೆಂಗಸರ ಸ್ವಭಾವವು. ಆಹಾ! ಸ್ತ್ರೀಯರ ಮುಖವು ಶರತ್ಕಾಲಚಂದ್ರನಂತೆ ಮನೋಹರವಾಗಿ, ನೋಡುವವರ ಕಣ್ಣುಗಳನ್ನೆಳೆಯುವುದು! ಅವರಬಾಯಿಂದ ಹೊರಡತಕ್ಕ ಒಂದೊಂದು ಮಾತೂ, ಅಮೃತಧಾರೆಯಂತೆ ಇಂಪಾಗಿರುವುದು! ಅವರ ಮನಸ್ಸಾದರೋ ಕತ್ತಿಯಲಗಿನಂತೆ ಕ್ರೂರವಾಗಿರುವುದು! ಇಂತಹ ಸ್ತ್ರೀಯರ ವ್ಯಾಪಾರವನ್ನು ಯಾರು ತಾನೇನಂಬಬಹುದು. ಕೇವಲಸ್ವಾರ್ಥಪರರಾಗಿಯೇಇರುವಈಸ್ತ್ರೀಯರಿಗೆಯಾರನ್ನು ತಾನೇ ಪ್ರಿಯರೆಂದು ಹೇಳಬಹುದು! ಸಾಮಾನ್ಯವಾಗಿ ಸ್ತ್ರೀಯರು, ತಮ್ಮ ಕೋರಿಕೆಯನ್ನು ತೀರಿಸಿಕೊಳ್ಳಬೇಕಾದಾಗ, ಪತಿಯನ್ನಾಗಲೀ, ಮಗನನ್ನಾಗಲೀ, ಒಡಹುಟ್ಟಿದವರನ್ನಾಗಲೀ, ಕರುಣವಿಲ್ಲದೆ ಕೊಲ್ಲಿಸುವರು. ತಮ್ಮ ಕೈಯಿಂದ ತಾವೇಯಾದರೂ ಕೊಲ್ಲುವರು. ಅಯ್ಯೋ! ಇವಳಿಗೆ ನಾನು ಭಾಷೆಯನ್ನು ಕೊಟ್ಟು ಕೆಟ್ಟೆನಲ್ಲಾ! ಇನ್ನೇನುಮಾಡಲಿ! ನಾನು ಆಡಿದ ಮಾತು ಎಂದಿಗೂ, ಸುಳ್ಳಾಗ

ಲಾರದು! ಇಂದ್ರನನ್ನು ಕೊಲ್ಲಿಸುವುದೂ ನನಗೆ ಸಮ್ಮತವಲ್ಲ! ಈ ಧರ್ಮಸಂಕಟಕ್ಕೆ ನಾನೇನುಮಾಡಲಿ? ಇರಲಿ! ಇದಕ್ಕೊಂದುಪಾಯವನ್ನು ಮಾಡುವೆನು ಎಂದು ನಿಶ್ಚಯಿಸಿ, ದಿತಿಯನ್ನು ನೋಡಿ ಕೋಪವನ್ನು ತೋರಿಸುತ್ತ ಹೀಗೆಂದು ಹೇಳುವನು. "ಎಲೆ ಸುಂದರಿ! ಮುಖ್ಯವಾಗಿ ಮೂಢನಾದ ನಾನು ನಿನ್ನಿಂದ ವಂಚಿಸಲ್ಪಟ್ಟೆನು. ಚಿಂತೆಯಿಲ್ಲ! ನಾನು ಆಡಿದ ಮಾತಿಗೆ ತಪ್ಪಲಾರೆನು. ನೀನು ಕೋರಿದಂತೆಯೇ ಇಂದ್ರನನ್ನು ಕೊಲ್ಲತಕ್ಕ ಪುತ್ರನೊಬ್ಬನು ನಿನಗೆ ಹುಟ್ಟುವನು ಆದರೆ ನಾನೊಂದು ವ್ರತವನ್ನು ಹೇಳುವೆನು. ಅದನ್ನು ಮಾತ್ರ ನೀನು ಒಂದು ಸಂವತ್ಸರದವರೆಗೆ ಲೋಪವಿಲ್ಲದೆ ನಡೆಸುತ್ತಿರಬೇಕು ಹಾಗೆ ನಡೆಸಿದರೆಮಾತ್ರವೇ ನಿನ್ನ ಕೋರಿಕೆಯು ಸಿದ್ಧಿಸುವುದು ಹಾಗಿಲ್ಲದಪಕ್ಷದಲ್ಲಿ ನಿನಗೆ ಹುಟ್ಟತಕ್ಕವನಿಗನೂ ದೇವತೆಗಳ ಪಕ್ಷಕ್ಕೇ ಸೇರಿಬಿಡುವನು ಎಂದನು. ಅದಕ್ಕಾ ದಿತಿಯು "ನಾಥಾ! ಆ ವ್ರತವನ್ನು ನಾನು ತಪ್ಪದೆ ನಡೆಸುವೆನು. ಅದನ್ನು ಪದೇಶಿಸಬೇಕು. ಆ ವ್ರತಕ್ಕೆ ಭಂಗವು ಬಾರದಂತೆ ಯಜ್ಞಯಾನಕಾರ್ಯವನ್ನು ನಡೆಸಬೇಕಾದರೂ ನಾನು ಸಿದ್ಧಳಾಗಿ ನಡೆಸುವೆನು. ಆದರೆ ನೀನೂ ಆ ವ್ರತಕ್ಕೆ ಭಂಗಕರವಾದ ಕಾರ್ಯಗಳನ್ನು ಆಜ್ಞಾಪಿಸಕೂಡದೆಂದು ಕೇಳಿಕೊಳ್ಳುವೆನು, ಎಂದಳು. ಅದಕ್ಕಾ ಕಶ್ಯಪನು. "ಪ್ರಿಯೇ ಕೇಳು! ಈ ಒಂದುಸಂವತ್ಸರಕಾಲದವರೆಗೆ, ಬೇರೆಯಾವ ಭೂತಗಳನ್ನೂ ಹಿಂಸಿಸಬಾರದು! ಕೋಪದಿಂದ ಮತ್ತೊಬ್ಬರನ್ನು ಶಪಿಸಬಾರದು! ಎಂತಹ ಸಂದರ್ಭದಲ್ಲಿಯೂ ಸುಳ್ಳಾಡಬಾರದು. ಉಗುರುಗಳನ್ನಾಗಲಿ, ಕೂದಲುಗಳನ್ನಾಗಲೀ ಕತ್ತರಿಸಬಾರದು! ಅಶುದ್ಧವಸ್ತುಗಳನ್ನು ಮುಟ್ಟಬಾರದು. ನೀರಿನಲ್ಲಿಳಿದು ಸ್ನಾನಮಾಡಬಾರದು. ಎಂತಹ ಸಂದರ್ಭಗಳಲ್ಲಿಯೂ ಯಾರಮೇಲೆಯೂ ಕೋಪಿಸಬಾರದು! ದುರ್ಜನರೊಡನೆ ಮಾತಾಡಬಾರದು. ಮೈಲಿಗೆಯಬಟ್ಟೆಯನ್ನುಡಬಾರದು! ಒಂಬಾವಲಿ ಮುಡಿದಹೂವನ್ನು ತಿರುಗಿ ಧರಿಸಬಾರದು ಮತ್ತೊಬ್ಬರುತಿಂದು ಮಿಗಿಸಿದ ಎಂಜಲನ್ನಾಗಲೀ, ಕಾಳಿ, ದುರ್ಗಿ, ಚಂಡಿ ಮುಂತಾದ ದೇವತೆಗಳಿಗೆ ನಿವೇದಿತವಾದ ಅನ್ನವನ್ನಾಗಲೀ, ಇರುವೆ, ನೊಣ ಮುಂತಾದ ಜಂತುಗಳು ಸೇರಿದ ಆಹಾರವನ್ನಾಗಲೀ, ನೀಚಜಾತಿಯವರು ಮುಟ್ಟಿದ ಆಹಾರವನ್ನಾಗಲೀ ತಿನ್ನಕೂಡದು! ಬೊಗಸೆಯಿಂದ ನೀರನ್ನು ಕುಡಿಯಕೂಡದು. ಎಂಜಲಾದಕೈಯನ್ನು ತೊಳೆಯದಿರಬಾರದು. ಪ್ರಾತಃ ಸಾಯಂಕಾಲಗಳಲ್ಲಿ ತಲೆಕೂದಲನ್ನು ಬಿಡಿಸಬಾರದು! ಹಚ್ಚುಮಾತುಗಳನ್ನಾಡಬಾರದು! ಮೈಮುಚ್ಚುವಂತೆ ಬಟ್ಟೆಯಿಲ್ಲದೆ ಬೀದಿಯಲ್ಲಿ ತಿರುಗಬಾರದು! ಕಾಲನ್ನು ತೊಳೆಯದೆಯಾಗಲಿ, ಎಚ್ಚರತಪ್ಪಿಯಾಗಲೀ! ಒದ್ದೆಯಬಟ್ಟೆಯೊಡನೆಯಾಗಲೀ, ಉತ್ತರಪಶ್ಚಿಮದಿಕ್ಕುಗಳಕಡೆಗೆತಲೆಯಿಟ್ಟಾಗಲೀ ಮೈಮೇಲೆಬಟ್ಟೆಯಿಲ್ಲದೆಯಾಗಲೀ

ಮಲಗಬಾರದು! ಸಂಧ್ಯಾಕಾಲಗಳಲ್ಲಿ ನಿದ್ರಿಸಬಾರದು. ಯಾವಾಗಲೂ ಮಡಿಬಟ್ಟೆಯನ್ನುಟ್ಟು ಶುಚಿಯಾಗಿರಬೇಕು! ಯಾವಾಗಲೂ ಅರಿಸಿನ, ಶ್ರೀ ಗಂಧಕುಂಕುಮ ಮೊದಲಾದ ಮಂಗಳವಸ್ತುಗಳನ್ನು ಧರಿಸಿರಬೇಕು. ಈ ನಿಯಮಗಳೊಡನೆ ಪ್ರಾತಃಕಾಲದ ಭೋಜನಕ್ಕೆ ಮೊದಲು, ಗೋವುಗಳನ್ನೂ, ಬ್ರಾಹ್ಮಣರನ್ನೂ, ಲಕ್ಷ್ಮೀನಾರಾಯಣರನ್ನೂ ಆರಾಧಿಸಿ, ಪುಕ್ಕವತಿಯರಾದ ಮುತ್ತೈದೆಯರನ್ನು ಗಂಧ ಪುಷ್ಪ ತಾಂಬೂಲಾದಿಗಳಿಂದಲೂ, ಕಾಣಿಕೆ ಗಳಿಂದಲೂ, ಆಲಂಕಾರಗಳಿಂದಲೂ ಪೂಜಿಸಬೇಕು. ಈ ಅಂದಗಳೊಡಗೂಡಿದ ಪ್ರಂಸವನವೆಂಬ ವ್ರತವನ್ನು ಒಂದು ಸಂವತ್ಸರಕಾಲದವರೆಗೆ ತಪ್ಪದೆ ನೀನು ನಡೆಸುತ್ತಬಂದರೆ, ಇಂದ್ರಸಂಹಾರಿಯಾದ ಪುತ್ರನನ್ನು ಪಡೆಯಬಹುದು." ಎಂದನು. ದಿತಿಯು. ಆ ವ್ರತವನ್ನು ಹಾಗೆಯೇ ನಡೆಸುತ್ತಬರುವುದಾಗಿ ಸಮ್ಮತಿಸಿದಳು. ಪತಿಯ ಆನುಗ್ರಹದಿಂದ ಗರ್ಭವತಿಯಾಗಿ, ಅವನು ಹೇಳಿದ ಕ್ರಮದಿಂದಲೇ ದೃಢಮನಸ್ಕಳಾಗಿ ವ್ರತವನ್ನು ನಡೆಸುತ್ತಬಂದಳು. ಇಂದ್ರನಿಗೆ ಈ ವೃತ್ತಾಂತವು ತಿಳಿದು ಅವನಮನಸ್ಸಿಲ್ಲಿ ಭಯವು ಹುಟ್ಟಿತು. ಏನಾದರೂ ಉಪಾಯದಿಂದ ಅವಳ ಉದ್ದೇಶವನ್ನು ಕೆಡಿಸಬೇಕೆಂದು ಯೋಚಿಸಿ, ಕಶ್ಯಪಾಶ್ರಮಕ್ಕೆ ಬಂದನು. ಅಲ್ಲಿ ವ್ರತನಿಷ್ಠಳಾಗಿದ್ದ ತನ್ನ ಚಿಕ್ಕತಾಯಿಯನ್ನು ನಾನಾವಿಧವಾದ ಉಪಚಾರಗಳಿಂದ ಶುಶ್ರೂಷೆಮಾಡತೊಡಗಿದನು. ಪ್ರತಿದಿನವೂ ಕಾಡಿಗೆ ಹೋಗಿ ಅವಳಿಗೆ ಬೇಕಾದ ಫಲಪುಷ್ಪಗಳನ್ನೂ, ಸಮಿತ್ತು, ದರ್ಭೆ, ಎಲೆ, ಚಿಗುರು, ಗರಿಕೆ, ಗೆಡ್ಡೆಗೆಣಸು, ಮೃತ್ತಿಕೆ ಮುಂತಾದ ಪೂಜಾಸಾಮಗ್ರಿಗಳೆಲ್ಲವನ್ನೂ ಕಾಲಕಾಲಕ್ಕೆ ತಂದೊದಗಿಸುತ್ತಿದ್ದನು. ಬೇಟೆಕಾರರು ಕಾಡಿನಲ್ಲಿ ಮೃಗಗಳನ್ನು ಹಿಡಿಯುವುದಕ್ಕಾಗಿ, ಮೃಗರೂಪದಿಂದಲೇ ಹೋಗಿ ಅವುಗಳನ್ನು ವಂಚಿಸುವಂತೆ ಇಂದ್ರನು, ದಿತಿಯ ವ್ರತವನ್ನು ಕೆಡಿಸಬೇಕೆಂಬ ಉದ್ದೇಶದಿಂದ, ಕಪಟಬುದ್ಧಿಯುಳ್ಳವನಾಗಿ ಅವಳನ್ನನುವರ್ತಿಸುತ್ತ, ಅವಳ ವ್ರತಭಂಗಕ್ಕೆ ಸಮಯವನ್ನು ಕಾಯುತ್ತಿದ್ದನು. ಬಹಳ ದಿನಗಳವರೆಗೆ ಅವನಿಗೆ ತಕ್ಕ ಅವಕಾಶವು ಸಿಕ್ಕದೆಚಿಂತಿಸುತ್ತಿದ್ದಾಗ, ಕೊನೆಗೆ ಒಂದಾನೊಂದು ದಿನದಲ್ಲಿ ದಿತಿಯು, ವ್ರತಾಚರಣೆಯಿಂದ ಬಹಳವಾಗಿ ಶ್ರಮಪಟ್ಟು ಬಳಲಿದ್ದುದರಿಂದ, ನೀರನ್ನು ತಂದು ಕೈಕಾಲುತೊಳೆಯುವುದಕ್ಕೂ ಬೇಸರಿಸಿ, ಶರೀರಾಯಾಸದಿಂದ ಹಾಗೆಯೇ ಅಶುಚಿಯಾಗಿ ಸಂಧ್ಯಾಕಾಲದಲ್ಲಿ ಮಲಗಿಬಿಟ್ಟಳು. ಅಷ್ಟುದಿನಗಳವರೆಗೆ ನಿಯಮನಿಷ್ಠಳಾಗಿದ್ದ ದಿತಿಯು, ಕೊನೆಗೆ ದೈವದಿಂದ ವಂಚಿತೆಯಾಗಿ ಮೈಮರೆತು ಮಲಗಿರುವುದನ್ನು ದೇವೇಂದ್ರನು ನೋಡಿದನು. ಅವಳ ವ್ರತಭಂಗವನ್ನೇ ಕಾಯುತ್ತಿದ್ದ ದೇವೇಂದ್ರನಿಗೆ ತಕ್ಕ ಅವಕಾಶವು ಸಿಕ್ಕಿತು. ಯೋಗಸಿದ್ಧಿಯಿಂದ ಪರಕಾಯಪ್ರವೇಶವೇ ಮೊದಲಾದ ಶಕ್ತಿಯುಳ್ಳ

ಇಂದ್ರನು, ಆಗಲೇ ತನ್ನ ಯೋಗಬಲದಿಂದ ದಿತಿಯು ಗರ್ಭದೊಳಗೆ ಪ್ರವೇಶಿಸಿ, ಅಲ್ಲಿಬಂಗಾರದ ಗಟ್ಟಿಯಂತಿದ್ದ ಗರ್ಭಪಿಂಡವನ್ನು ತನ್ನ ವಜ್ರಾಯುಧದಿಂದ ಏಳು ತುಂಡಾಗಿ ಕತ್ತರಿಸಿದನು. ತುಂಡಾಗಿಬಿದ್ದನೇಲೆಯೂ ಆಗರ್ಭವು ಅಳುತ್ತಿರುವುದನ್ನು ನೋಡಿ "ಎಲ್ಲೆ ಅಳಬೇಡ! ಅಳಬೇಡ!" "ಮಾರುದ್ಮಾರುದ್ಗಣ" ಎಂದುಕೂಗುತ್ತ, ತಿರುಗಿ ಒಂದೊಂದುತುಂಡನ್ನೂ ಏಳೇಳು ಭಾಗಗಳಾಗಿ ಕತ್ತರಿಸುತ್ತಬಂದನು. ಇಂದ್ರನುಹೀಗೆ"ಮಾರುದ್ಗಣ" ಎಂದು ಕೂಗುತ್ತಿದ್ದುದರಿಂದಲೇ ಅವರಿಗೆ ಮಾರುತರೆಂಬ ಹೆಸರಾಯಿತು. ಆಗ ಇಂದ್ರನಿಂದ ಕತ್ತರಿಸಲ್ಪಟ್ಟ ಆ ಖಂಡಗಳೆಲ್ಲವೂ ಕೈಕಾಲು ಮುಂತಾದ ಅವಯವಗಳನ್ನು ಹೊಂದಿ, ಪುರುಷಾಕಾರದಿಂದ ಇಂದ್ರನ ಮುಂದೆ ಕೈಜೋಡಿಸಿ ನಿಂತು "ಓ ಇಂದ್ರಾ! ನಾವು ನಿನ್ನ ಒಡಹುಟ್ಟಿದವರಲ್ಲವೇ? ನಮ್ಮನ್ನೇಕೆ ಕೊಲ್ಲುವೇ?" ಎಂದು ಮೊರೆಯಿಟ್ಟರು. ಆಗ ಇಂದ್ರನು ಅವರಲ್ಲಿ ಕನಿಕರಗೊಂಡು, "ಎಲೈ ಭಯಪಡಬೇಡಿರಿ! ನಿಮ್ಮನ್ನು ನಾನು ನನ್ನ ಸಹೋದರರೆಂದೇ ಭಾವಿಸುವೆನು. ಇನ್ನು ಮೇಲೆ ನೀವು ನನ್ನ ಅನುಚರರಾಗಿ, ಭಕ್ತಿಯಿಂದ ನನ್ನನ್ನು ಸೇವಿಸುತ್ತಿರಿ!" ಎಂದನು. ಓ ಪರೀಕ್ಷಿದ್ರಾಜಾ! ಹಿಂದೆ ಉತ್ತರೆಯಗರ್ಭದಲ್ಲಿ, ಅಶ್ವತ್ಥಾಮನ ಬ್ರಹ್ಮಾಸ್ತ್ರವು ನಿನ್ನನ್ನು ದಹಿಸುವುದಕ್ಕೆ ಬಂದಾಗ, ಶ್ರೀಕೃಷ್ಣನ ಕೃಪೆಯಿಂದ ನೀನು ಬದುಕಿಬಂದಂತೆ, ಈಗಲೂ ಇಂದ್ರನು ತನ್ನ ವಜ್ರಾಯುಧದಿಂದ ಅನೇಕವಿಧವಾಗಿ ಛೇದಿಸುತ್ತಿದ್ದರೂ, ದಿತಿಗರ್ಭವು ಭಗವಂತನ ಕೃಪೆಯಿಂದ ಸಾಯದೆ ಬದುಕಿತೆಂದು ತಿಳಿ! ರಾಜೇಂದ್ರಾ! ಇದೇನೂ ಆಶ್ಚರ್ಯವಲ್ಲ! ಮನುಷ್ಯನು ಪರಮಪುರುಷನನ್ನು ಒಂದಾವರ್ತಿ ಆರಾಧಿಸಿದರೂ, ಆ ಭಗವಂತನೊಡನೆ ಸಾರೂಪ್ಯವನ್ನು ಹೊಂದುವನು. ಹೀಗಿರುವಾಗ ಸ್ವಲ್ಪ ಹೆಚ್ಚುಕಡಿಮೆಯಾಗಿ ಒಂದು ಸಂವತ್ಸರಕಾಲದವರೆಗೆ ದಿತಿಯು ಎಡೆಬಿಡದೆ ಭಗವದಾರಾಧನವನ್ನು ನಿಯಮದಿಂದ ನಡೆಸಿರುವಾಗ, ಅವಳ ಮಕ್ಕಳಿಗೆ ಹಾನಿಯಾಗುವುದುಂಟೇ? ಆದುದರಿಂದ ಆಗ ಉಪೇಂದ್ರನಾದ ಭಗವಂತನೂ ಇಂದ್ರ ಸಹಿತನಾಗಿಯೇ ಗರ್ಭದಲ್ಲಿ ಪ್ರವೇಶಿಸಿ, ಇಂದ್ರನು ಛೇದಿಸಿದ ಗರ್ಭವನ್ನು ಅನಾಯವಿಲ್ಲದೆ ರಕ್ಷಿಸಿದನಲ್ಲದೆ ಬೇರೆಯಲ್ಲ. ಈ ನಾಲ್ವತ್ತೊಂಭತ್ತು ಖಂಡಗಳೂ, ಮರುತ್ತು ಗಳೆಂದು ಹೆಸರುಗೊಂಡು, ತಮಗೆ ಜನ್ಮಸಿದ್ಧವಾದ ರಾಕ್ಷಸತ್ವವನ್ನು ಬಿಟ್ಟು, ದೇವತೆಗಳಾಗಿ, ಯಜ್ಞಭಾಗಗಳನ್ನು ಹೊಂದುವುದಕ್ಕೂ ಅರ್ಹರಾಗಿ ಮಾಡಲ್ಪಟ್ಟರು. ಇಷ್ಟರಲ್ಲಿ ದಿತಿಯು ನಿದ್ರೆಯಿಂದೆಚ್ಚತ್ತು ನೋಡುವಾಗ, ಅಗ್ನಿಯಂತೆ ತೇಜಸ್ಸುಗಳಾದ ನಾಲ್ವತ್ತೊಂಭತ್ತುಮಂದಿ ದೇವಕುಮಾರರು ದೇವೇಂದ್ರನೊಡನೆ ಮುಂದೆ ನಿಂತಿದ್ದರು. ಆಕೆಯು ಸುಸ್ವಭಾವವುಳ್ಳವಳಾದುದರಿಂದ, ತಟ್ಟನೆಕೋಪಿಸಿಕೊಳ್ಳದೆ, ಸಂತೋಷವನ್ನೇ ತೋರಿಸುತ್ತ,

ಮೃದುವಾಕ್ಯದಿಂದ ಇಂದ್ರನನ್ನು ಕುರಿತು ಹೀಗೆಂದು ಹೇಳುವಳು. "ವತ್ಸ ದೇವೇಂದ್ರಾ! ನಾನು ಅದಿತಿಪುತ್ರರಾದ ನಿಮ್ಮೆಲ್ಲರಿಗೂ ಭಯವನ್ನು ಹುಟ್ಟಿಸುವಂತೆ, ಒಬ್ಬ ಕುಮಾರನನ್ನು ಪಡೆಯಬೇಕೆಂಬ ಉದ್ದೇಶದಿಂದ ದುಷ್ಕರವಾದ ಪುಂಸವನವೆಂಬ ವ್ರತವನ್ನು ನಡೆಸುತ್ತಿದ್ದೆನು. ನಾನು ಒಬ್ಬ ಪುತ್ರನನ್ನೇ ಕೋರಿದ್ದಾಗ ಈ ನಾಲ್ವತ್ತೊಂಭತ್ತು ಕುಮಾರರು ಹುಟ್ಟಿದುದೇಕೆ? ಇದರ ನಿಜಾಂಶವು ನಿನಗೆ ತಿಳಿದಿದ್ದರೆ ಸತ್ಯವನ್ನು ಹೇಳು! ಸುಳ್ಳಾಡಬೇಡ!" ಎಂದಳು. ಆದಕ್ಕಾ ಇಂದ್ರನು ವಿನಯದಿಂದ "ಅಮ್ಮಾ! ಕೇಳು! ನಿನ್ನ ಉದ್ದೇಶವನ್ನು ತಿಳಿದು ನಾನೂ ಇಲ್ಲಿಗೆ ಬಂದೆನು. ನಿನಗೆ ಶುಶ್ರೂಷೆಯನ್ನು ಮಾಡುವನೆವದಿಂದ ಸಮಯವನ್ನು ನಿರೀಕ್ಷಿಸುತ್ತಿದ್ದೆನು. ನೀನು ಕೈಕಾಲುಗಳನ್ನು ತೊಳೆಯದೆ ಸಂಧ್ಯಾಕಾಲದಲ್ಲಿ ಅಶುಚಿಯಾಗಿ ಮಲಗಿದ್ದುದನ್ನು ನೋಡಿದೆನು. ಇದೇ ತಕ್ಕ ಸಮಯವೆಂದು, ನಿನ್ನ ಹೊಟ್ಟೆಯಲ್ಲಿ ಪ್ರವೇಶಿಸಿ, ಅಲ್ಲಿ ಬೆಳೆಯುತ್ತಿದ್ದ ಗರ್ಭವನ್ನು ಕತ್ತರಿಸಿಬಿಟ್ಟೆನು. ನಾನು ಕೇವಲ ಸ್ವಾರ್ಥಪರನಾಗಿ, ಧರ್ಮದಲ್ಲಿ ದೃಷ್ಟಿಯಿಡದೆ, ನಿನ್ನ ಗರ್ಭವನ್ನು ಏಳುಭಾಗವಾಗಿ ಕತ್ತರಿಸಿದಮೇಲೆ ಆ ಸಪ್ತಖಂಡಗಳೂ ಏಳು ಪುರುಷಾಕೃತಿಯಿಂದ ಕಾಣಿಸಿಕೊಂಡು ಅಳುವುದಕ್ಕೆ ತೊಡಗಿದುವು. ತಿರುಗಿ ನಾನು ಆ ಏಳುಮಂದಿ ಕುಮಾರರನ್ನೂ ಏಳೇಳು ತುಂಡುಗಳಾಗಿ ಖಂಡಿಸಿದೆನು. ಇದರಿಂದ ಈ ನಾಲ್ವತ್ತೊಂಭತ್ತುಮಂದಿ ಕುಮಾರರು ಜನಿಸಿದರು. ನಾನು ಎಷ್ಟೆಷ್ಟು ಕತ್ತರಿಸಿದರೂ ಇವರು ಮೃತಿಹೊಂದದೆ ಜೀವಸಹಿತವಾಗಿಯೇ ಇದ್ದರು! ಅಮ್ಮಾ ಈ ಆಶ್ಚರ್ಯವನ್ನು ನೋಡಿದಮೇಲೆ ನನಗೆ "ನೀನು ಭಕ್ತಿಯಿಂದ ಪರಮಪುರುಷನನ್ನಾರಾಧಿಸಿದುದರ ಫಲವೇ ಇದೆಂಬ ನಿಶ್ಚಯವು ಹುಟ್ಟಿತು. ಇವರು ನನ್ನ ವಜ್ರಪ್ರಹಾರಕ್ಕೂ ಸಾಯದೆ ಬದುಕಿದುದು ನೀನುಮಾಡಿದ ಭಗವದಾರಾಧನದ ಫಲವಲ್ಲದೆ ಬೇರೆಯಲ್ಲ! ಲೋಕದಲ್ಲಿ ಯಾರು ಫಲಾಪೇಕ್ಷೆಯಿಲ್ಲದೆ ಭಗವಂತನನ್ನಾರಾಧಿಸುವರೋ, ಅವರಿಗೆ ತಾವಾಗಿ ಅಪೇಕ್ಷಿಸದಿದ್ದ ಕೋರಿಕೆಗಳೂ ಕೈಗೂಡಿಬರುವುವು. ಮೋಕ್ಷವನ್ನೂ ಬಯಸದೆ ನಿಷ್ಕಾಮರಾಗಿ ಭಗವಂತನನ್ನಾರಾಧಿಸುವರೋ ಅವರೇ ಪುರುಷಾರ್ಥವನ್ನು ಸಾಧಿಸುವುದರಲ್ಲಿ ನಿಪುಣರೆನಿಸಿಕೊಳ್ಳುವರು. ಆದುದರಿಂದ ನಿಷ್ಕಾಮರಾಗಿ ಭಗವಂತನನ್ನಾರಾಧಿಸುವುದೇ ಮೇಲಾದ ಉಪಾಯವು. ಆ ಶ್ರಿತರಿಗೆ ತನ್ನನ್ನೇ ಕೊಡತಕ್ಕ ಪರಮದಯಾಳುವಾದ ಭಗವಂತನನ್ನಾರಾಧಿಸಿ, ಅವನು ಪ್ರಸನ್ನನಾಗಿರುವಾಗ, ವಿವೇಕಿಯಾದ ಯಾವನು ತಾನೇ ಅತ್ಯಲ್ಪವಾದ ವಿಷಯಸುಖವನ್ನು ಕೋರುವನು? ನರಕದಲ್ಲಿ ಬಿದ್ದವರಿಗೂ ಈ ಶಬ್ದಾದಿವಿಷಯಸುಖಗಳುಂಟು! ಭಗವದಾರಾಧನಕ್ಕೆ ಮುಕ್ತಿಯೇ ಪ್ರಧಾನಫಲವು. ನೀನೂ ಈಗ ಸಂತಾನರೂಪವಾದ ಫಲಾಪೇಕ್ಷೆ

ಯಿಂದ ಭಗವಂತನನ್ನಾರಾಧಿಸಿದೆ! ಈ ನಡುವೆ ನಿನ್ನ ವ್ರತಭಂಗದಿಂದ ನಿನ್ನ ಕೋರಿಕೆಯು ಪೂರ್ಣವಾಗಿ ಕೈಗೂಡದಿದ್ದರೂ, ನಿನ್ನ ಮಕ್ಕಳು ಬದುಕಿದುದರಿಂದ ಆದರ ಫಲವನ್ನು ತೋರಿಸದೆ ಬಿಡಲಿಲ್ಲ. ನೀನು ನಿಷ್ಕಾಮಳಾಗಿ ಆ ಭಗವದಾರಾಧನ ವ್ರತವನ್ನು ನಡೆಸಿದ್ದರೆ ನಿನಗೆ ಇನ್ನೂ ಉತ್ತಮಫಲವು ಲಭಿಸುತಿತ್ತು. ಆದು ಹೋಗಲಿ! ಎಲೈ ಪೂಜ್ಯಳೇ! ಈಗ ನಾನು ನಿನ್ನಲ್ಲಿಮಾಡಿದ ದುಷ್ಕೃತ್ಯಕ್ಕಾಗಿ ಮನ್ನಣೆಯನ್ನು ಬೇಡುವೆನು. ಅಜ್ಞತೆಯಿಂದ ಮಾಡಿದ ನನ್ನ ಅಪರಾಧವನ್ನು ಕ್ಷಮಿಸಬೇಕು. ನಾನು ಕ್ರೂರಸ್ವಭಾವದಿಂದ ನಿನ್ನ ಗರ್ಭವನ್ನು ಖಂಡಿಸಿದರೂ, ಆದು ದೈವಕೃಪೆಯಿಂದ ಉಜ್ಜೀವಿತವಾಯಿತು." ಎಂದನು. ನಿಷ್ಕಪಟವಾಗಿ ಹೇಳಿದ ಇಂದ್ರನ ವಾಕ್ಯವನ್ನು ಕೇಳಿ ದಿತಿದೇವಿಯು ತಾಳ್ಮೆಯಿಂದ ಸುಮ್ಮನಿದ್ದಳು ಆ ಮೇಲೆ ಇಂದ್ರನು ದಿತಿಗೆ ನಮಸ್ಕರಿಸಿ,ಆ ಮರುತ್ತುಗಳೊಡಗೂಡಿ ತನ್ನ ಪಟ್ಟಣಕ್ಕೆ ಹಿಂತಿರುಗಿದನು. ರಾಜೇಂದ್ರಾ! ಇದೇ ಸಪ್ತಮರುತ್ತುಗಳ ಜನ್ಮವೃತ್ತಾಂತವು. ಇನ್ನೇನಾದರೂ ನೀನು ಕೇಳತಕ್ಕ ವಿಷಯಗಳಿದ್ದರೆ ಕೇಳು" ಎಂದನು. ಇಲ್ಲಿಗೆ ಹದಿನೆಂಟನೆಯ ಅಧ್ಯಾಯವು.

---

## ಸ್ತ್ರೀಯರು ತಮ್ಮ ಶ್ರೇಯಸ್ಸಿಗಾಗಿ ನಡೆಸತಕ್ಕ ಪುಂಸವನವೆಂಬ ವ್ರತವು.

ಪರೀಕ್ಷಿದ್ರಾಜನು ಶುಕಮುನಿಯನ್ನು ಕುರಿತು "ಓಮಹರ್ಷೀ! ದಿತಿದೇವಿಯು ಪುಂಸವನವೆಂಬ ವ್ರತವನ್ನು ನಡೆಸಿದುದಾಗಿ ಹೇಳಿದೆಯಲ್ಲವೇ? ವಿಷ್ಣು ಸ್ತ್ರೀತ್ಯರ್ಥವಾಗಿ ನಡೆಸತಕ್ಕ ಆ ವ್ರತದ ನಿಯಮಗಳನ್ನೆಲ್ಲಾ ನನಗೆ ವಿವರಿಸಿ ತಿಳಿಸಬೇಕು" ಎಂದನು. ಅದಕ್ಕಾ ಶುಕಮಹರ್ಷಿಯು "ರಾಜೇಂದ್ರಾ ಕೇಳು! ಈ ವ್ರತವು ಸ್ತ್ರೀಯರಿಗೆ ಸಿದ್ಧಿಸಲ್ಪಟ್ಟಿರುವುದು. ವರ್ಷಗ ಶೀರ್ಷಮಾಸದ ಶುಕ್ಲಪಕ್ಷದಲ್ಲಿ ಒಂದಾನೊಂದು ಶುಭತಿಥಿಯನ್ನು ನೋಡಿ, ಅದರಲ್ಲಿಸ್ತ್ರೀಯರು, ತಮ್ಮ ಪತಿಯು ಅನುಜ್ಞೆಯನುಪಡೆದು ಈ ವ್ರತವನ್ನಾರಂಭಿಸಬೇಕು. ಈ ವ್ರತವು ಸ್ತ್ರೀಯರಿಗೆ ಸಕಲವಿಧವಾದ ಶ್ರೇಯಸ್ಸನ್ನೂ ಕೈಗೂಡಿಸುವುದು. ಈ ವ್ರತವನ್ನಾರಂಭಿಸುವುದಕ್ಕೆಮೊದಲು, ಮರುತ್ತುಗಳ ಜನ್ಮವೃತ್ತಾಂತವನ್ನು ಭಕ್ತಿಯಿಂದ ಕೇಳಿ,

ಬ್ರಾಹ್ಮಣರಿಂದ ಅನುಜ್ಞೆಯನ್ನು ಪಡೆದು ಶುಭ್ರವಾಗಿ ಹಲ್ಲುಗಳನ್ನು ಜ್ಜಿ, ಸ್ನಾನ ಮಾಡಿ ಬಂದು ಧೌತವಸ್ತ್ರಗಳನ್ನುಟ್ಟು, ಪ್ರಾತಃಕಾಲದ ಭೋಜನಕ್ಕೆ ಮೊದಲು, ಮಹಾಲಕ್ಷ್ಮೀಸಮೇತನಾದ ಶ್ರೀಮನ್ನಾರಾಯಣನನ್ನು ಪೂಜಿಸಬೇಕು. ಪೂಜೆಗೆ ಮೊದಲು, ಈ ಕೆಳಗಿನ ಮಂತ್ರದಿಂದ ಸ್ತುತಿಸಿ ನಮಸ್ಕರಿಸಬೇಕು.

"ದೇವಾ! ಪರಮಪದೈಶ್ವರ್ಯವೆಂಬ ನಿತ್ಯವಿಭೂತಿಗೂ, ಇಹರಪ್ರಪಂಚವೆಂಬ ಲೀಲಾವಿಭೂತಿಗೂ ನೀನೇ ಪ್ರಭುವು. ನೀನು ಸಂಕಲ್ಪಮಾತ್ರದಿಂದಲೇ ಸಮಸ್ತ ಕಾರ್ಯಗಳನ್ನೂ ಸಾಧಿಸಬಲ್ಲವನು. ಆದುದರಿಂದ ಪೂರ್ಣಕಾಮನಾದ ನಿನಗೆ ಉಪೇಕ್ಷಿಸಬೇಕಾದ ವಸ್ತುವೊಂದು ಇರುವುದಿಲ್ಲ! ಇಂತಹನಿನಗೆ ನಮಸ್ಕಾರವು. ದೇವಾ! ನಿನ್ನಲ್ಲಿ ದಯೆ, ಐಶ್ವರ್ಯ, ತೇಜಸ್ಸು, ಮಹಿಮೆ, ಬಲ, ಸರ್ವಜ್ಞತೆ, ಸರ್ವಶಕ್ತತೆ, ಮೊದಲಾದ ಅದ್ಭುತಗುಣಗಳೆಲ್ಲವೂ ಒಂದಾಗಿ ಕಲೆತಿರುವುದರಿಂದಲೇ ನೀನು ಭಗವಂತನೆಂದೂ, ಲೋಕಪ್ರಭುವೆಂದೂ ಕೀರ್ತಿಸಲ್ಪಡುವೆ. ಓ ವಿಷ್ಣುಪತ್ನೀ! ನೀನು ಆಶ್ಚರ್ಯಶಕ್ತಿಯುಳ್ಳವಳು! ನಿನ್ನ ಸಂಬಂಧದಿಂದಲೇ ಭಗವಂತನಲ್ಲಿರುವ ಮಹಾಪುರುಷತ್ವವು ಮತ್ತಷ್ಟು ಪ್ರಕಾಶಗೊಂಡಿರುವುದು. ಪರಮಪುರುಷನ ಪ್ರಿಯಪತ್ನಿಯಾಗಿಯೂ ಸಮಸ್ತಭಾಗ್ಯಗಳಿಗೂ ಆಧಾರಭೂತೆಯಾಗಿಯೂ, ಇರುವ ಹೇ ಲೋಕಮಾತೇ! ನಿನಗೆ ನಮಸ್ಕಾರವು." ಎಂಬೀ ಮಂತ್ರವನ್ನು ಹೇಳುತ್ತ ನಮಸ್ಕರಿಸಿದಮೇಲೆ ಕೆಳಗಿನ ಮಂತ್ರದಿಂದ ಪೂಜೆಯನ್ನು ನಡೆಸಬೇಕು

"ಸಮ್ಪೂರ್ಣಪರಿಪೂರ್ಣನಾದ ಓ ಭಗವಂತಾ! ಓ ಮಹಾಪುರುಷಾ! ಓ ಮಹಾನುಭಾವಾ! ಓ ಲಕ್ಷ್ಮೀಕಾಂತಾ! ಇದೋ ನಿನಗೆ ನಮಸ್ಕಾರವು. ದೇವಾ! ಸಮಸ್ತಪಾರ್ಷದಗಣಗಳೊಡಗೂಡಿದ ನಿನಗೆ ಈಪೂಜೆಯನ್ನೊಪ್ಪಿಸುವೆನು" ಎಂಬೀ ಮಂತ್ರವನ್ನು ಹೇಳುತ್ತ, ಪ್ರತಿದಿನವೂ ಭಗವಂತನಿಗೆ ಆವಾಹನ, ಆಸನ, ಅರ್ಘ್ಯ, ಪಾದ್ಯ, ಆಚಮನೀಯ, ಸ್ನಾನ, ವಸ್ತ್ರ, ಉಪವೀತ, ಭೂಷಣಗಳು, ಗಂಧ, ಪುಷ್ಪ, ಧೂಪ, ನಿವೇದನ ಮೊದಲಾದ ಸೋಡಶೋಪಚಾರಗಳನ್ನೂ ಭಕ್ತಿಯಿಂದ ಸಮರ್ಪಿಸಬೇಕು. ಆಮೇಲೆ ಭಗವಂತನಿಗೆ ನಿವೇದನಮಾಡಿದ ಹವಿಸ್ಸನ್ನು, ಅಗ್ನಿಯಲ್ಲಿ ಕೆಳಗಿನ ಮಂತ್ರದಿಂದ ಹನ್ನೆರಡಾವರ್ತಿ ಹೋಮಮಾಡಬೇಕು. "ಓಂ ನಮೋಭಗವತೇ ಮಹಾಪುರುಷಾಯ ಮಹಾವಿಭೂತಿಯೇ ಸ್ವಾಹಾ" ಎಂಬುದೇ ಹೋಮಮಂತ್ರವು. ಒಂದೊಂದಾವೃತ್ತಿಯೂ ಅಗ್ನಿಯಲ್ಲಿ ಹವಿಸ್ಸನ್ನು ಬಿಡುವಾಗ ಈ ಮಂತ್ರವನ್ನು ಹೇಳುತ್ತಿರಬೇಕು.

ರಾಜೇಂದ್ರಾ! ಸಮಸ್ತಸಂಪತ್ತುಗಳನ್ನೂ ಪಡೆಯಬೇಕೆಂಬ ಅಪೇಕ್ಷೆಯುಳ್ಳವರು, ಈ ವಿಧವಾಗಿ, ಸರ್ವಾಭೀಷ್ಟಪ್ರದರಾದ ಲಕ್ಷ್ಮೀನಾರಾಯಣರಿಬ್ಬರಿಬ್ಬರನ್ನೂ ಶ್ರದ್ಧೆಯಿಂದ ನಿತ್ಯವೂ ಪೂಜಿಸಬೇಕು. ಪೂಜೆಯು ಮುಗಿದಮೇಲೆ ಭಕ್ತಿಯಿಂದ ದಂಡಪ್ರಣಾಮವನ್ನು ಮಾಡಿ, ತಲೆಬಗ್ಗಿನಿಂತು, ಹಿಂದೆ ಹೇಳಿದ ನಮಸ್ಕಾರಮಂತ್ರವನ್ನು ತಿರುಗಿ ಹತ್ತಾವರ್ತಿ ಜಪಿಸಿ, ಆ ಮೇಲೆ ಮುಂದೆ ಹೇಳುವಂತೆ ಸ್ತೋತ್ರಮಾಡಬೇಕು. ಹೇ ಮಹಾಲಕ್ಷ್ಮಿ! ಹೇ ನಾರಾಯಣಾ! ನೀವಿಬ್ಬರೂ ಪ್ರಪಂಚಕ್ಕೆಲ್ಲಾ ಪ್ರಭುಗಳು! ನೀವಿಬ್ಬರೇ ಈ ಜಗತ್ತಿಗೆ ಪ್ರಧಾನ ಕಾರಣರು! ಹೇಗೆಂದರೆ! ಈ ಲಕ್ಷ್ಮಿಯೇ ಪ್ರಕೃತಿಯು! ಈ ಪ್ರಕೃತಿಯೇ ಕಾರಣಾವಸ್ಥೆಯಲ್ಲಿ, ಅತ್ಯಂತಸೂಕ್ಷ್ಮಸ್ವರೂಪಿಣಿಯಾಗಿ, ಅಶ್ಚರ್ಯಶಕ್ತಿಯಿಂದ ನಿನ್ನ ಸೃಷ್ಟಿಕಾರ್ಯಕ್ಕೆ ಸಹಾಯಕಳಾಗಿರುವಳು ನಿನ್ನ ಭಕ್ತರಲ್ಲದವರನ್ನು ತನ್ನಲ್ಲಿ ನಿರ್ಬಂಧಿಸಿಡುವಳು. ಈ ಪ್ರಕೃತಿಯನ್ನು ನಿಯಮಿಸಬಲ್ಲ ಪ್ರಭುವು ನೀನೊಬ್ಬನೇ! ಆದುದರಿಂದಲೇ ನೀನು ಪುರುಷೋತ್ತಮನೆನಿಸಿಕೊಂಡಿರುವೆ! ಓ ನಾರಾಯಣಾ! ನೀನು ಯಜ್ಞಸ್ವರೂಪನು. ಈ ಲಕ್ಷ್ಮಿಯೇ ಯಜ್ಞಗಳಿಗೆ ಅಂಗಭೂತವಾದ ಇಷ್ಟಿ! ಈಕೆಯು ಯಾಗಕ್ರಿಯೇ! ಆ ಯಾಗಫಲವನ್ನು ಅನುಭವಿಸತಕ್ಕವನು ನೀನು! ಸಮಸ್ತವಸ್ತುಗಳಲ್ಲಿಯೂ ತೋರುವ ಗುಣವ್ಯಕ್ತಿಯೇ ಈ ಮಹಾಲಕ್ಷ್ಮಿಯು. ಆ ಗುಣಗಳನ್ನು ಪ್ರಕಾಶಗೊಳಿಸತಕ್ಕವನೂ ಅವುಗಳ ಫಲವನ್ನನುಭವಿಸತಕ್ಕವನೂ ನೀನೇ! ಈಕೆಯೇ ಭುಕ್ತಿ! ನೀನು ಭೋಕ್ತನು. ನೀನು ಸಮಸ್ತಜೀವಗಳನ್ನೂ ಶರೀರವಾಗಿ ಉಳ್ಳವನು. ಈಕೆಯು ಸರ್ವೇಂದ್ರಿಯಗಳಿಗೂ ಆಧಾರಭೂತೆಯು. ಈ ಲಕ್ಷ್ಮಿಯೇ ಸಮಸ್ತಪ್ರಪಂಚದ ನಾಮರೂಪಗಳು. ಅವುಗಳನ್ನು ನಿರ್ವಹಿಸತಕ್ಕವನು ನೀನು. ಆದುದರಿಂದ ತ್ರೈಲೋಕ್ಯವೂ ನಿಮ್ಮಿಬ್ಬರ ಅಧೀನವು. ನೀವಿಬ್ಬರೇ ಮೂರು ಲೋಕಗಳಿಗೂ ಅಭೀಷ್ಟಗಳನ್ನು ಕೊಡತಕ್ಕವರು. ನೀವಿಬ್ಬರೇ ಸಮಸ್ತಲೋಕಕ್ಕೂ ಮೇಲೆನಿಸಿದವರು. ನೀವಿಬ್ಬರೇ ಲೋಕನಿರ್ವಾಹಕರೆಂಬುದು ಸತ್ಯವಾಗಿರುವಂತೆ, ನನ್ನ ಪ್ರಾರ್ಥನೆಗಳೂ ನಿಮ್ಮಲ್ಲಿ ವಿಫಲವಾಗದಿರಲಿ" ಎಂಬೀ ವಾಕ್ಯಗಳಿಂದ ಲಕ್ಷ್ಮೀಸಮೇತನಾದ ನಾರಾಯಣನನ್ನು ಸ್ತುತಿಸಬೇಕು. ಆ ಮೇಲೆ ಅಲ್ಲಿದ್ದ ಪೂಜಾಸಾಮಗ್ರಿಗಳೆಲ್ಲವನ್ನೂ ಬೇರೆಕಡೆಗೆ ಸಾಗಿಸಿ, ಭಗವಂತನಿಗೆ ತಿರುಗಿ ಆಚಮನವನ್ನು ಸಮರ್ಪಿಸಿ ಹಿಂದಿನಂತೆಯೇ ತಿರುಗಿ ಸ್ತೋತ್ರಮಾಡಬೇಕು. ಭಕ್ತಿಯಿಂದ ಆ ಯಾಗಶೇಷವನ್ನಾಘ್ರಾಣಿಸಿ, ತಿರುಗಿ ಭಗವಂತನಿಗೆ ಉತ್ತರಪೂಜೆಯನ್ನು ಸಮರ್ಪಿಸಬೇಕು ಆಮೇಲೆ ಭಕ್ತಿಯಿಂದ ತನ್ನ ಪತಿಯ ಬಳಿಗೆಬಂದು. ಆತನನ್ನೇ ಪರಮಪುರುಷಸ್ವರೂಪದಿಂದ ಭಾವಿಸಿ, ಅವನಿಗೆ ಇಷ್ಟವಸ್ತುಗಳೆಲ್ಲವನ್ನೂ ಅರ್ಪಿಸಿ ಪೂಜಿಸಬೇಕು. ಪತಿಯಾದ

ವನ್ನೂಕೂಡ, ಪತ್ನಿಯು ಮಾಡತಕ್ಕ ಉಪಚಾರಗಳಿಗೆ ಸಂತೋಷಿಸಿ, ಆಕೆಯು ನಡೆಸತಕ್ಕ ಕಾರ್ಯಗಳು ಅಲ್ಪವಾಗಲೀ, ಮಹತ್ತಾಗಲೀ, ಆ ಎಲ್ಲಾ ಕಾರ್ಯಗಳಲ್ಲಿಯೂ ಅವಳಿಗೆ ಅನುಕೂಲನಾಗಿದ್ದು. ಪ್ರೇಮದಿಂದ ಅದನ್ನು ನಿರ್ವಹಿಸಬೇಕು. ಹೀಗೆ ದಂಪತಿಗಳು ಕಾರ್ಯನಿರ್ವಾಹದಲ್ಲಿ ಒಬ್ಬರಿಗೊಬ್ಬರು ಅನುಕೂಲರಾಗಿದ್ದ ಪಕ್ಷದಲ್ಲಿ, ಅವರಲ್ಲಿ ಒಬ್ಬರು ನಡೆಸತಕ್ಕ ಕಾರ್ಯಕ್ಕೆ ಇಬ್ಬರೂ ಫಲಭಾಗಿಗಳಾಗುವರು. ಈ ವ್ರತವನ್ನಾರಂಭಿಸಿದಮೇಲೆ ಸ್ತ್ರೀಯು, ಕೆಲವುದಿನಗಳವರೆಗೆನಡೆಸಿ, ನಡುವೆ ಅಕಸ್ಮಿಕವಾಗ ಅನಿವಾರ್ಯಗಳಿಂದ ಅಶಕ್ತಳಾದಪಕ್ಷದಲ್ಲಿ, ಪತಿಯು ಆ ಕಾರ್ಯಭಾರವನ್ನು ವಹಿಸಿ ಕೊನೆಗಾಣಿಸಬೇಕೇಹೊರತು ಮಧ್ಯಕಾಲದಲ್ಲಿ ಅದನ್ನು ಬಿಟ್ಟುಬಿಡಬಾರದು. ಈ ವ್ರತವನ್ನು ನಡೆಸುವಾಗ ಪ್ರತಿದಿನವೂ, ಬ್ರಾಹ್ಮಣರನ್ನೂ, ಪ್ರತ್ರವತಿಯರಾದ ಮುತ್ತೈದೆಯರನ್ನೂ, ಗಂಧಪುಷ್ಪತಾಂಬೂಲಗಳಿಂದಲೂ ಆಲಂಕಾರಗಳಿಂದಲೂ, ಕಾಣಿಕೆಗಳಿಂದಲೂ ಶ್ರದ್ಧೆಯಿಂದ ಪೂಜಿಸಿ ಸಂತೋಷಗೊಳಿಸಬೇಕು. ಪೂರ್ಣಾಕಾರ್ಯವು ಮುಗಿದಮೇಲೆ ಭಗವಂತನನ್ನು ಮೊದಲಿದ್ದ ಸ್ಥಾನದಲ್ಲಿಯಾಗಲೀ, ಹೃದಯದಲ್ಲಿಯಾಗಲೀ ಉದ್ವಾಸನಮಾಡಿ, ಭಗವಂತನಿಗೆ ನಿವೇದಿತವಾದ ಹವಿಸ್ಸನ್ನು, ಆತ್ಮಶುದ್ಧಿಗಾಗಿಯೂ, ತನ್ನ ಇಷ್ಟಪ್ರಾಪ್ತಿಗಾಗಿಯೂ ಭಕ್ತಿಯಿಂದ ಭುಜಿಸಬೇಕು. ಮೇಲೆ ಹೇಳಿದ ನಿಯಮದಿಂದ ಒಂದುವರ್ಷಕಾಲದವರೆಗೆ ನಡೆಸಿ, ಕಾರ್ತಿಕಮಾಸದ ಕೊನೆಯದಿನದಲ್ಲಿ ವ್ರತಸಮಾಪ್ತಿಕಾಲದಲ್ಲಿ ಮಾಡಬೇಕಾದ ಭಗವದುಪಚಾರಗಳನ್ನೆಲ್ಲಾ ಕ್ರಮವಾಗಿ ನಡೆಸಬೇಕು. ಮರುದಿನದಬೆಳಗ್ಗೆ ಎದ್ದಕೂಡಲೆ ಸ್ನಾನಮಾಡಿಬಂದು, ಹಿಂದಿನಂತೆ ಭಗವಂತನನ್ನು ಯಥಾವಿಧಿಯಾಗಿ ಪೂಜಿಸಿ; ಘೃತಮಿಶ್ರವಾದ ಪಾಯಸಾನ್ನವನ್ನು ಸಿದ್ಧಪಡಿಸಬೇಕು. ಅದನ್ನು ಪತಿಯ ಕೈಯಿಂದ ಹನ್ನೆರಡಾವರ್ತಿ ಅಗ್ನಿಯಲ್ಲಿ ಹೋಮಮಾಡಿಸಿ, ಅದಿನವೇ ಹನ್ನೆರಡುಮಂದಿ ಬ್ರಾಹ್ಮಣರನ್ನು ಕರೆಸಿ, ಅವರನ್ನು ಪರಮಾತ್ಮ ಸ್ವರೂಪದಿಂದ ಭಾವಿಸಿ, ಮೃಷ್ಟಾನ್ನ ಭೋಜನಗಳಿಂದ ಅವರನ್ನು ಸಂತೋಷಗೊಳಿಸಬೇಕು. ಆ ಬ್ರಾಹ್ಮಣರೆಲ್ಲರಿಗೂ, ಎಳ್ಳು, ಬೆಲ್ಲ, ಅರಳು, ಇವುಗಳೊಡನೆ ಜಲಕುಂಭಗಳನ್ನು ದಾನಮಾಡಿ, ಅವರಿಗೆ ನಮಸ್ಕರಿಸಿ ಅವರ ಆಶೀರ್ವಾದಗಳನ್ನು ಪಡೆಯಬೇಕು. ಆಮೇಲೆ ಪತಿಯ, ಅವರ ಅನುಮತಿಯನ್ನು ಪಡೆದುಬಂದು, ತನ್ನ ಬಂಧುವರ್ಗಗಳೊಡನೆ ಭೋಜನವನ್ನು ಮಾಡಬೇಕು. ಆಮೇಲೆ ಆಚಾರ್ಯನನ್ನು ಮುಂದಿಟ್ಟುಕೊಂಡು ಮೌನದಿಂದ ಬಂದು, ಸ್ತ್ರೀಯರಿಗೆ ಸಂತಾನವೆನ್ನೂ, ಸೌಭಾಗ್ಯವನ್ನೂ ಉಂಟುಮಾಡತಕ್ಕ ಚರುಶೇಷವನ್ನು, ಪತಿಯು ತನ್ನ ಪತ್ನಿಯಕೈಗೆಕೊಟ್ಟು ಭೋಜನಮಾಡಿಸಬೇಕು. ಈ ವ್ರತವನ್ನು ಮೇಲೆ

ಹೇಳಿದ ನಿಯಮದಿಂದ ವಿಧ್ಯುಕ್ತವಾಗಿ ನಡೆಸಿದಪಕ್ಷದಲ್ಲಿ. ಪುರುಷನಿಗೆ ಇಷ್ಟಾರ್ಥಗಳೆಲ್ಲವೂ ಕೈಗೂಡಿ ಬರುವುವು. ಸ್ತ್ರೀಯರು ಈವ್ರತದಿಂದ ಸಂತಾನವನ್ನೂ, ಸಂಪತ್ತುಗಳನ್ನೂ, ಪತಿಗೆ ಚಿರಾಯುಷ್ಯವನ್ನೂ ಯಶಸ್ಸನ್ನೂ, ಸಮಸ್ತ ಸದ್ಗುಣಗಳನ್ನೂ, ಬೇಕುಬೇಕಾದ ಇಷ್ಟವಸ್ತುಗಳನ್ನೂ ಪಡೆಯುವರು.

ಈ ವ್ರತವನ್ನು ಸಾಂಗವಾಗಿ ನಡೆಸುವುದರಿಂದ ವಿವಾಹವಿಲ್ಲದ ಕನ್ಯೆಯರು ಉತ್ತಮಪತಿಯನ್ನೂ, ಭಾಗ್ಯಹೀನರು ಭಾಗ್ಯವನ್ನೂ. ವಿಧವೆಯರು ಸದ್ಗತಿಯನ್ನೂ, ಆಗಾಗ ಮಕ್ಕಳನ್ನು ಕಳೆದುಕೊಂಡವರೇ ಚಿರಾಯುಷ್ಯವುಳ್ಳ ಪುತ್ರರನ್ನೂ, ಬಡವರು ಐಶ್ವರ್ಯವನ್ನೂ, ಕುರೂಪಿಗಳು ಮೇಲಾದ ಸೌಂದರ್ಯವನ್ನೂ, ವ್ಯಾಧಿಪೀಡಿತರು ಇಂದ್ರಿಯಬಲವನ್ನೂ ಹೊಂದುವರು. ರಾಜೇಂದ್ರಾ! ಒಂದು ಸಂವತ್ಸರಕಾಲದವರೆಗೆ ಶ್ರಮಪಟ್ಟು, ಈ ವ್ರತವನ್ನು ನಡೆಸುವುದು ಹಾಗಿರಲಿ! ಶ್ರೇಯಸ್ಸಾಧಕಗಳಾದ ಇತರ ಕರ್ಮಗಳನ್ನು ನಡೆಸುವಾಗಲೂಕೂಡ, ನಡುವೆ ಈ ವ್ರತಕಲ್ಪವನ್ನು ಯಾರುಪಠನಮಾಡುವರೋ, ಅವರಲ್ಲಿ ದೇವತೆಗಳೂ ಪಿತೃದೇವತೆಗಳೂ, ಪ್ರಸನ್ನರಾಗಿ, ಸರ್ವಾಭೀಷ್ಟಗಳನ್ನೂ, ಕೈಗೂಡಿಸುವರು. ಆಯಾ ಕರ್ಮಗಳಲ್ಲಿ ಪಿತೃಗಳಿಗೂ, ದೇವತೆಗಳಿಗೂ ತೃಪ್ತಿಕರವಾದ ಹೋಮವನ್ನು ನಡೆಸಿದ ಮೇಲೆ, ಶ್ರೀಹರಿಯೂ, ಅಗ್ನಿಹೋತ್ರನೂ ಪ್ರಸನ್ನರಾಗಿ, ಸಮಸ್ತವರಗಳನ್ನೂ ಕೊಡುವರು. ರಾಜೇಂದ್ರಾ! ಮರುತ್ತುಗಳ ಜನ್ಮವೃತ್ತಾಂತವನ್ನೂ, ದಿತಿದೇವಿಯು ನಡೆಸಿದ ಪುಂಸವನವೆಂಬ ವ್ರತವನ್ನೂ ನನಗೆ ತಿಳಿಸಿದುದಾಯಿತು" ಎಂದನು. ಇಲ್ಲಿಗೆ ಹತ್ತೊಂಭತ್ತನೆಯ ಅಧ್ಯಾಯವು.

ಆರನೆಯಸ್ಕಂಧವು ಸಮಾಪ್ತವು.

ಶ್ರೀಕೃಷ್ಣಾಯ ಪರಬ್ರಹ್ಮಣೇ ನಮಃ

ಶ್ರೀ ಕೃಷ್ಣಾರ್ಪಣಮಸ್ತು

ಶ್ರೀಃ

Ananda Press, Madras